
ಸಮಗ್ರ ದಾಸ ಸಾಹಿತ್ಯ

ಸಂಪುಟ : ೨೮



ಶ್ರೀ ವಿದ್ಯಾ ಪ್ರಸನ್ನತೀರ್ಥರು ಹಾಗೂ ಇತರ ಯತಿಗಳ ಕೀರ್ತನೆಗಳು

ಸಮಗ್ರ ದಾಸ ಸಾಹಿತ್ಯ

ಸಂಪುಟ : ೨೮

ಶ್ರೀ ವಿದ್ಯಾ ಪ್ರಸನ್ನತೀರ್ಥರು ಹಾಗೂ ಇತರ ಯತಿಗಳ ಕೀರ್ತನೆಗಳು

ಸಂಪಾದಕರು

ಡಾ. ಅನಂತಪದ್ಮನಾಭರಾವ್

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಬೆಂಗಳೂರು

SAMAGRA DASA SAHITYA VOLUME - 28 :
Sri Vidyaprasannateertharu Haagu Ithara Yatigala Keertanegalu, Edited by Dr. Ananthapadmanabharao and published by Sri. Y. K. Muddukrishna, Director, Directorate of Kannada and Culture, Kannada Bhavana, J.C. Road, Bangalore - 560 002.

ಪುಟಗಳು : 84 + ೪೭೭

ಪ್ರಥಮ ಮುದ್ರಣ : ೨೦೦೩
ಪ್ರತಿ : ೧೨೫೦

ಬಿಡಿ ಪ್ರತಿ ಬೆಲೆ : ರೂ. ೬೦=೦೦
ಸಮಗ್ರ ಸಂಪುಟಗಳ ಬೆಲೆ : ರೂ. ೨೪೦೦=೦೦

ಮುದ್ರಣ ನಿರ್ವಹಣೆ :

ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
೩೬, ಕನ್ನಿಂಗ್‌ಹ್ಯಾಮ್ ರಸ್ತೆ
ಬೆಂಗಳೂರು – ೫೬೦ ೦೫೨.

ಮುದ್ರಕರು :

ಮೆ. ಡಾಟ್ಸ್
೧೨೪, ಸುಲ್ತಾನ್‌ಪೇಟೆ
ಬೆಂಗಳೂರು – ೫೬೦ ೦೫೩.

ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆ

ಮುನ್ನುಡಿ

ಹರಿದಾಸ ಸಾಹಿತ್ಯ ಕನ್ನಡ ಸಂಸ್ಕೃತಿ ಪರಂಪರೆಯ ಮಹತ್ವಪೂರ್ಣ ಭಾಗವಾಗಿದೆ. ದೇಶೀಯತೆ ಹಾಗೂ ಗೇಯತೆಗಳೆರಡನ್ನೂ ಮೇಳವಿಸಿಕೊಂಡು, ಕನ್ನಡ ಸಾಹಿತ್ಯವಾಹಿನಿಗೆ ಇದು ಹೊಸತನವನ್ನು ನೀಡಿದೆ. ಮನುಜಮತ, ಸಾಹಿತ್ಯಪಥ ಹಾಗೂ ಭಕ್ತಿಸಿದ್ಧಾಂತದ ತ್ರಿವೇಣಿಯಾಗಿರುವ ಈ ಪ್ರಜಾಸಾಹಿತ್ಯವನ್ನು ಪ್ರಜೆಗಳಿಗೆ ಮುಟ್ಟಿಸುವುದು ಪ್ರಜಾಸತ್ತಾತ್ಮಕ ಸರಕಾರದ ಆದ್ಯ ಕರ್ತವ್ಯವಾಗಿದೆ.

ಕನ್ನಡ ಭಾಷಿಕಶಕ್ತಿಯ ವಿವಿಧ ಆಯಾಮಗಳನ್ನು ಸೆಳೆದು ತೋರಿರುವ, ಸಾಹಿತ್ಯ–ಸಂಗೀತಗಳ ಸಾಮರಸ್ಯವನ್ನು ಮೆರೆದಿರುವ ಈ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ಜಾಗತಿಕ ಮಹತ್ವವನ್ನು ತಂದುಕೊಟ್ಟಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಮಾನವಾನುಕಂಪ, ಸಮಾಜಸುಧಾರಣೆ, ಲೋಕದ ಡೊಂಕುಗಳನ್ನು ನಗೆ ವಿಡಂಬನೆಗಳ ಮೂಲಕ ತಿದ್ದುವ ಕೌಶಲ ದಾಸಸಾಹಿತ್ಯದ ಪ್ರಮುಖ ಲಕ್ಷಣವಾಗಿದೆ.

ಆಧ್ಯಾತ್ಮಿಕ ಸಾಧನೆ, ಅನುಭವ – ಅನುಭಾವಗಳು ದಾಸಸಾಹಿತ್ಯದ ಪ್ರಮುಖ ಅಂಶವಾದರೂ, ಸುತ್ತಮುತ್ತಲಿರುವ ಜೀವನದ ಕಡೆಗೆ, ಮಾನವ ಸ್ವಭಾವದ ಕಡೆಗೆ ಕಣ್ಣು ಹರಿಸಿದ ಹರಿದಾಸರು ಸಾತ್ತ್ವಿಕ ಜೀವನ ನಿರ್ವಹಣೆಗೆ, ಮಾನವನ ಮೇಲ್ಮೆಗೆ, ನೈತಿಕ ಆಚರಣೆಗೆ ಒತ್ತು ನೀಡಿದವರು.

ಹರಿದಾಸ ಸಾಹಿತ್ಯ ಅಪಾರವಾದುದು ಹಾಗೂ ವೈವಿಧ್ಯವಾದುದು. ಈ ವಿಪುಲ ಸಾಹಿತ್ಯರಾಶಿಯನ್ನು ಒಂದೆಡೆ ಕ್ರೋಡೀಕರಿಸಿ, ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಕನ್ನಡ ಜನತೆಗೆ ನೀಡುತ್ತಿದೆ.

ಈ ಯೋಜನೆಗೆ ದುಡಿದ ಸಂಪಾದಕ ಮಂಡಳಿಯ ಶ್ರದ್ಧೆ ಹಾಗೂ ಮಾರ್ಗದರ್ಶನವನ್ನು, ವಿವಿಧ ಸಂಪುಟಗಳ ಸಂಪಾದಕರಾಗಿ ನಾಡಿನ ಅನೇಕ ವಿದ್ವಾಂಸರು ತೋರಿರುವ ಆಸಕ್ತಿ ಹಾಗೂ ನೆರವನ್ನು ಮತ್ತು ಈ ಸಂಪುಟದ ಸಂಪಾದಕರ ಶ್ರಮವನ್ನು ಸ್ಮರಿಸುತ್ತ ಕನ್ನಡ ಜನತೆಯ ಕೈಗೆ ಈ ಮೌಲಿಕ ಪ್ರಕಟಣೆಗಳನ್ನು ಸಂತೋಷದಿಂದ ಅರ್ಪಿಸುತ್ತೇನೆ.

ಎಸ್. ಎಂ. ಕೃಷ್ಣ
ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಎರಡು ಮಾತು

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಕರ್ನಾಟಕದ ಸಾಹಿತ್ಯ, ಸಂಗೀತ, ಸಂಸ್ಕೃತಿಗಳನ್ನು ಪ್ರಭಾವಪೂರ್ಣವಾಗಿ ಸಮೃದ್ಧಿಗೊಳಿಸಿದವರು ಹರಿದಾಸರು. ಬದುಕಿನಲ್ಲಿ ನಿಷ್ಠೆ, ಸಾಹಿತ್ಯದಲ್ಲಿ ಬದುಕಿನ ತತ್ತ್ವಗಳನ್ನು ಅಡಗಿಸಿ ಜನಸಾಮಾನ್ಯರನ್ನು ಉನ್ನತ ಜೀವನದತ್ತ ಉದ್ದೀಪಿಸುವ ಮಹಾಕಾಯಕದಲ್ಲಿ ತೊಡಗಿದವರು ಹರಿದಾಸರು. ಕನ್ನಡ ಸಾಹಿತ್ಯಕ್ಕೆ ಅಪೂರ್ವ ಕೊಡುಗೆಯಾಗಿರುವ ಹರಿದಾಸ ಸಾಹಿತ್ಯ ಸಮಾಜದ ಮೌಢ್ಯವನ್ನು ಬಯಲಿಗೆಳೆದು, ಜಾತಿ, ಮತ, ಪಂಥಗಳನ್ನು ಮೀರಿ ನಿಂತ ಮಾನವೀಯ ಮೌಲ್ಯಗಳನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಿಸಿತು.

ಹರಿದಾಸ ಸಾಹಿತ್ಯಕ್ಕೆ ಪ್ರೇರಣೆ ಭಕ್ತಿಯಾದರೂ, ಕರ್ನಾಟಕ ಸಂಗೀತಕ್ಕೆ ಸಮೃದ್ಧಿಯನ್ನು ನೀಡಿದವರು ಹರಿದಾಸರು. ಗ್ರಾಮ್ಯ ಮತ್ತು ದೇಶ್ಯ ಶಬ್ದಗಳಿಗೆ ಸಾಹಿತ್ಯದ ಮುದ್ರೆಯನ್ನು ಒತ್ತಿ, ಭಾಷೆಗೊಂದು ಪರಿಪಕ್ವತೆಯನ್ನೂ ತಂದುಕೊಟ್ಟರು. ಇಂಥ ಸಾಹಿತ್ಯ ಸಂಪತ್ತನ್ನು ರಕ್ಷಿಸುವುದು ಮತ್ತು ಪ್ರಸಾರ ಮಾಡುವುದು ನಮ್ಮ ಕರ್ತವ್ಯ. ಈ ದೃಷ್ಟಿಯಿಂದ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆಗೆ ಸಮಿತಿಯೊಂದನ್ನು ರಚಿಸಿದ್ದು, ಇದರಲ್ಲಿ ನಾಡಿನ ಅನೇಕ ವಿದ್ವಾಂಸರು ಸಂಪುಟ ಸಂಪಾದಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಸಂಪುಟಗಳು ಹೊರಬರಲು ಕಾರಣರಾದ ಸಂಪಾದಕ ಮಂಡಳಿಯ ಸದಸ್ಯರಿಗೆ ಹಾಗೂ ಈ ಸಂಪುಟದ ಸಂಪಾದಕರಿಗೆ ನನ್ನ ಕೃತಜ್ಞತೆಗಳು.

ದಾಸರು ತಮ್ಮ ಸಾಹಿತ್ಯದಲ್ಲಿ ಸಾರ್ವಕಾಲಿಕ ಮೌಲ್ಯಗಳನ್ನು ಉಳಿಸಿ ಹೋಗಿದ್ದಾರೆ. ನಮ್ಮ ಸಾಮಾಜಿಕ ಜೀವನವನ್ನು ರೂಪಿಸುವಲ್ಲಿ ಈ ಕೀರ್ತನೆಗಳು ಮೌಲಿಕವಾದುವು. ಕನ್ನಡ ಜನತೆ ಈ ಕೃತಿಯ ಪ್ರಯೋಜನವನ್ನು ಪಡೆದರೆ ಪಟ್ಟ ಶ್ರಮ ಸಾರ್ಥಕವಾಗುತ್ತದೆ.

ರಾಣಿ ಸತೀಶ್

ಕನ್ನಡ ಮತ್ತು ಸಂಸ್ಕೃತಿ ಸಚಿವರು

ಯೋಜನೆಯನ್ನು ಕುರಿತು

ಕನ್ನಡ ಸಾಹಿತ್ಯ ಚರಿತ್ರೆಯ ಸಿರಿವಂತಿಕೆಯಲ್ಲಿ ಕೀರ್ತನ ಸಾಹಿತ್ಯದ ಕೊಡುಗೆ ವಿಪುಲವಾದುದು; ವೈಶಿಷ್ಟ್ಯಪೂರ್ಣವಾದುದು. ಈ ಸಮಗ್ರ ಸಾಹಿತ್ಯದ ಸಂಗ್ರಹ ಮತ್ತು ಪ್ರಕಾಶನದ ಕಾರ್ಯ ಪೂರ್ಣವಾಗಿ ಆಗಿರಲಿಲ್ಲ. ಇದನ್ನು ಮನಗಂಡ ಸರ್ಕಾರ ಸಮಗ್ರ ದಾಸ ಸಾಹಿತ್ಯ ಪ್ರಕಟಣೆಯ ಕಾರ್ಯವನ್ನು ಕೈಗೆತ್ತಿಕೊಂಡಿತು.

ಸುಮಾರು ಒಂದು ನೂರ ಮೂವತ್ತೊಂಬತ್ತು ಜನ ದಾಸರ ಸುಮಾರು ಹದಿನಾರು ಸಾವಿರ ಕೀರ್ತನೆಗಳ ಬೃಹತ್ ಸಾಹಿತ್ಯ ಸಾಮಗ್ರಿ ದೊರಕಿತು. ಹೀಗೆ ಸಾಂಪ್ರದಾಯಿಕ ರೀತಿಯಲ್ಲಿ ಸಂಗ್ರಹಿಸಿ, ಸಂಪಾದಿಸಿದ ಕೀರ್ತನ ಸಾಹಿತ್ಯವನ್ನು ಸಂಪುಟಗಳಲ್ಲಿ ಮುದ್ರಿಸುವುದು ಕಷ್ಟವೇನಾಗಿರಲಿಲ್ಲ. ಆದರೆ, ಅದನ್ನು ಮಾಹಿತಿ ತಂತ್ರಜ್ಞಾನದ ಇವತ್ತಿನ ಸಂದರ್ಭದಲ್ಲಿ ಬಹು ಉಪಯೋಗಿ ನೆಲೆಯಲ್ಲಿ ಬಹುಮಾಧ್ಯಮದಲ್ಲಿ ಹೊರತರಬೇಕೆಂಬ ಕನಸು ರೋಮಾಂಚಕಾರಿ ಅನುಭವವೇ ಸರಿ. ಇದನ್ನು ಕೃತಿ ರೂಪಕ್ಕಿಳಿಸುವ ಹಾದಿಯಲ್ಲಿ ಎದುರಾದ ತಾಂತ್ರಿಕ ಸವಾಲು ಬಹು ಕ್ಲಿಷ್ಟಕರವಾಗಿಯೇ ಕಂಡಿತು.

ದಿಟ, ಈ ಸಮಗ್ರ ಸಾಹಿತ್ಯವನ್ನು ಕೇವಲ ಮುದ್ರಣದಲ್ಲಷ್ಟೇ ಅಲ್ಲ, ಆಯ್ದ ಕೀರ್ತನೆಗಳನ್ನು ಗಾಯನಕ್ಕೆ ಅಳವಡಿಸಿ, ಸಿ.ಡಿ. ಮತ್ತು ಅಂತರ್ಜಾಲದಲ್ಲಿ ಹೊರತರ ಬೇಕೆಂದಾಗ ಬಳಕೆದಾರರ ಆವಶ್ಯಕತೆಯನ್ನು ಆಧರಿಸಿ ತಯಾರಿಸುವ ಅಗತ್ಯ ಇತ್ತು. ಆದರೆ ಇವುಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಸರ್ಚ್ ಎಂಜಿನ್ (ಹುಡುಕುವಿಕೆ) ಇಲ್ಲದಿರುವುದು ಒಂದು ತಾಂತ್ರಿಕ ಸಮಸ್ಯೆಯೇ ಆಯಿತು.

ಈ ರೀತಿಯ ಪ್ರಯತ್ನ ಕನ್ನಡ ಭಾಷೆಯಲ್ಲಿ ಹಿಂದೆಂದೂ ಆಗದಿದ್ದುದರಿಂದ ತಂತ್ರಾಂಶವನ್ನು ಹೊಸದಾಗಿಯೇ ಅಭಿವೃದ್ಧಿ ಪಡಿಸಬೇಕಾದ ಸವಾಲನ್ನು ಕೈಗೆತ್ತಿ ಕೊಳ್ಳಲಾಯಿತು. ಇದಕ್ಕಾಗಿ ಕನ್ನಡ ಗಣಕ ಪರಿಷತ್ತು, ರಾಷ್ಟ್ರೀಯ ಮಾಹಿತಿ ಕೇಂದ್ರ (ಎನ್‌ಐಸಿ), ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ, ಮಹಾಭಾರತ ಸಂಶೋಧನಾ ಪ್ರತಿಷ್ಠಾನ ಮುಂತಾದ ಹಲವಾರು ತಂತ್ರಾಂಶ ಸಂಸ್ಥೆಗಳೊಂದಿಗೆ ನಿರಂತರ ಸಮಾಲೋಚನೆ, ಚಿಂತನೆಗಳನ್ನು ನಡೆಸಲಾಯಿತು.

ಹೀಗೆ ಸಾಹಿತ್ಯ ಸಂಗ್ರಹ, ಸಂಪಾದನೆ, ಸಂಗೀತ ಸಂಯೋಜನೆ, ಧ್ವನಿಮುದ್ರಣ, ಬಹುಮಾಧ್ಯಮಕ್ಕೆ ಅಳವಡಿಸುವ ತಾಂತ್ರಿಕ ಕುಶಲತೆಯ ನಿರಂತರ ಕಾರ್ಯಾನುಷ್ಠಾನಕ್ಕೆ ಸಂಪಾದಕ ಮಂಡಳಿ ಸದಸ್ಯರು, ಸಂಪುಟ ಸಂಪಾದಕರು, ಇಲಾಖಾ ಅಧಿಕಾರಿಗಳು, ತಂತ್ರಜ್ಞರು, ಕೋರ್ ಸಮಿತಿ ಸದಸ್ಯರು, ಸಂಗೀತ ನಿರ್ದೇಶಕರು, ಗಾಯಕರು – ಈ ಎಲ್ಲರ ಪರಿಶ್ರಮ ಅಗಾಧವಾಗಿ ದೊರಕಿದೆ. ಈ ಶ್ರಮದ ಫಲವಾಗಿ ಬಹುಮಾಧ್ಯಮದಲ್ಲಿ ಸಮಗ್ರ ದಾಸ ಸಾಹಿತ್ಯ ಯೋಜನೆಯ ಬೃಹತ್ ಕಾರ್ಯ ಸಾಕಾರಗೊಂಡಿದೆ.

ಈ ವಿಪುಲ ಸಾಹಿತ್ಯವನ್ನು ಕನ್ನಡ ಅಕ್ಷರಜ್ಞಾನಿಗಳು ಪುಸ್ತಕ ರೂಪದಲ್ಲಿಯೂ ಬಹುಗಾತ್ರದ ಸಾಹಿತ್ಯವನ್ನು ಕೈ ಅಳತೆಯ ಸಿ.ಡಿ. ರೂಪದಲ್ಲಿಯೂ ಈಗ ಪಡೆಯಬಹುದಾಗಿದೆ. ಅಲ್ಲದೆ, ಅಂತರ್ಜಾಲದ ಮೂಲಕ ವಿಶ್ವದ ಯಾವುದೇ ಮೂಲೆಯಲ್ಲಿರುವ ಆಸಕ್ತ ಜನತೆ ಕುಳಿತಲ್ಲಿಯೇ ಆರಾಮವಾಗಿ ವೀಕ್ಷಿಸುವ, ಕೇಳುವ ಹಾಗೂ ಕನ್ನಡ ಅಕ್ಷರ ಜ್ಞಾನವಿರದ ಭಾಷಿಕರು ಸಹಿತ ಸಂಗೀತವನ್ನು ಕೇಳಿ ಆಸ್ವಾದಿಸುವ ಅವಕಾಶವನ್ನು ಏಕಕಾಲದಲ್ಲಿ ಕಲ್ಪಿಸಲಾಗಿದೆ. ಪ್ರಕಾಶನದ ಇತಿಹಾಸದಲ್ಲಿಯೇ ದಾಖಲನೀಯವಾದ ಈ ಕಾರ್ಯ ಮುಂದೆ ಸರ್ಕಾರಿ ಸಂಸ್ಥೆಗಳಿಗಾಗಲಿ, ಖಾಸಗಿ ಸಂಸ್ಥೆಗಳಿಗಾಗಲಿ ಮಾದರಿಯಾಗಬಹುದೆಂದು ನಂಬಲಾಗಿದೆ.

ನಮ್ಮ ಸಂಸ್ಕೃತಿಯನ್ನು ಬಿತ್ತರಿಸಲು ನಾಲ್ಕು ಗೋಡೆಗಳೊಳಗಿನ ರಂಗ ಮಂದಿರಗಳು, ವೇದಿಕೆಗಳು ಅಗತ್ಯವಿದೆ ದಿಟ. ಆದರೆ ಭವಿತವ್ಯದಲ್ಲಿ ವಿಶ್ವದ ಜನರನ್ನು ತಲಪಲು ಮತ್ತು ಮುಖ್ಯವಾಗಿ ಯುವಜನಾಂಗಕ್ಕೆ ನಮ್ಮ ಸಾಂಸ್ಕೃತಿಕ ಕ್ಷಿತಿಜದ ವಿಸ್ತಾರವನ್ನು ಪರಿಚಯಿಸಲು ಸೂಕ್ಷ್ಮ ಸಂವೇದನಾಶೀಲವಾದ ಸಾಹಿತ್ಯವನ್ನು ಬಹುಮಾಧ್ಯಮದಲ್ಲಿ ಅಳವಡಿಸುವುದು ಅತ್ಯಾವಶ್ಯಕ. ಈ ನಿಟ್ಟಿನಲ್ಲಿ ಇದೊಂದು ವಿನೂತನ ಪ್ರಯೋಗ; ಈ ಪ್ರಯೋಗದ ಫಲ ಎಲ್ಲರಿಗೂ ಲಭ್ಯವಾಗಲೆಂಬುದು ನಮ್ಮ ಆಶಯ.

ಸಿ. ಎಸ್. ಕೇದಾರ್

ಸರ್ಕಾರದ ಕಾರ್ಯದರ್ಶಿ

ಪ್ರಕಾಶಕರ ಮಾತು

ಕರ್ನಾಟಕದ ಧಾರ್ಮಿಕ, ಸಾಂಸ್ಕೃತಿಕ ಇತಿಹಾಸದಲ್ಲಿ ಹರಿದಾಸರ ಸ್ಥಾನ ವಿಶಿಷ್ಟವಾದದ್ದು. ಸಾವಿರಾರು ವರ್ಷಗಳಿಂದ ಭಾರತದಲ್ಲಿ ಅವಿರತವಾಗಿ ಹರಿದುಬಂದ ಜೀವನಮೌಲ್ಯಗಳನ್ನು ಜನಸಾಮಾನ್ಯರ ಆಡುಭಾಷೆಯಲ್ಲಿ ಮುಟ್ಟಿಸಿ, ಲೌಕಿಕ ವಿಡಂಬನೆಯ ಮೂಲಕ ಅವರ ಮಾನಸಿಕ ವಿಕಾಸವನ್ನು ಯಶಸ್ವಿಯಾಗಿ ಸಾಧಿಸಿದವರು ಹರಿದಾಸರು. ಪಾಂಡಿತ್ಯ, ಲೋಕಾನುಭವಗಳ ಹಿನ್ನೆಲೆಯಿಂದಾಗಿ, ಆಡುಭಾಷೆಯ ಸೊಗಡಿನಿಂದಾಗಿ ಇವರು ಹಾಡಿದ್ದೆಲ್ಲ ಸಾಹಿತ್ಯವಾಯಿತು, ಕಾವ್ಯವಾಯಿತು, ಕೇಳುಗರನ್ನು ಸೆರೆಹಿಡಿಯಿತು. ಗೇಯಗುಣವುಳ್ಳ, ನೃತ್ಯಕ್ಕೆ ಅಳವಡುವ, ಛಂದೋಬದ್ಧವಾದ, ಜನತೆಯ ಮಧ್ಯದಲ್ಲಿಯೇ ಸಂದರ್ಭಾನುಸಾರ ಹುಟ್ಟಿದ ಹರಿದಾಸ ಸಾಹಿತ್ಯ ವೈಶಿಷ್ಟ್ಯಪೂರ್ಣವೆನಿಸಿತು. ಕನ್ನಡ ವಾಙ್ಮಯದಲ್ಲಿ ದಾಸಸಾಹಿತ್ಯ ಒಂದು ವಿಶೇಷ ಸ್ಥಾನ ಪಡೆಯಿತು. ಹೀಗೆ ಸಾಹಿತ್ಯ, ಸಂಗೀತ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ದಾಸಸಾಹಿತ್ಯದ ಕೊಡುಗೆ ಗಣನೀಯವಾದುದು.

ಸುಮಾರು ನೂರಮೂವತ್ತೊಂಬತ್ತು ಜನ ದಾಸರು ಆಗಿಹೋಗಿದ್ದು, ಅವರ ಕೀರ್ತನೆಗಳ ಸಂಖ್ಯೆ ಸುಮಾರು ಹದಿನಾರು ಸಾವಿರಕ್ಕೂ ಅಧಿಕ. ಈವರೆಗೆ ಕೆಲವು ದಾಸರ ಕೀರ್ತನೆಗಳು ಬಿಡಿ ಬಿಡಿಯಾಗಿ ಪ್ರಕಟವಾಗಿವೆಯಾದರೂ, ಇನ್ನೂ ಅನೇಕ ದಾಸವರೇಣ್ಯರ ಕೀರ್ತನೆಗಳು ಹಸ್ತಪ್ರತಿ ರೂಪದಲ್ಲಿಯೇ ಉಳಿದುಕೊಂಡಿವೆ. ಅವುಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸಿ, ಸಮಗ್ರ ದಾಸಸಾಹಿತ್ಯವು ಕನ್ನಡಿಗರಿಗೆ ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಸಮಗ್ರ ದಾಸಸಾಹಿತ್ಯ ಪ್ರಕಟಣೆಯ ಬೃಹತ್ ಯೋಜನೆಯನ್ನು ಹಾಕಿಕೊಂಡಿದೆ. ಈ ಉದ್ದೇಶಕ್ಕಾಗಿ ಕಾರ್ಯನಿರ್ವಾಹಕ ಸಂಪಾದಕರಾದ ಡಾ. ಶ್ರೀನಿವಾಸ ಹಾವನೂರ, ಡಾ. ಟಿ. ಎನ್. ನಾಗರತ್ನ, ಪ್ರೊ. ವಸಂತ ಕುಷ್ಟಗಿ, ಸದಸ್ಯರಾದ ಡಾ. ಎಂ. ಎಂ. ಕಲಬುರ್ಗಿ, ಡಾ. ಬಸವರಾಜ ಸಬರದ, ಪ್ರೊ. ಸುಧಾಕರ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ಡಾ. ಮಂದಾಕಿನಿ (ಈಗ ದಿವಂಗತರು) ಹಾಗೂ ಪ್ರೊ. ಎಂ. ರಾಜಗೋಪಾಲಾಚಾರ್ಯ (ಈಗ ದಿವಂಗತರು) ಅವರನ್ನೊಳಗೊಂಡಂತೆ ಸಂಪಾದಕ ಸಮಿತಿಯನ್ನು ರಚಿಸಲಾಯಿತು. ಇಲಾಖಾ ನಿರ್ದೇಶಕರು ಸಮಿತಿಯ ಸದಸ್ಯ–ಕಾರ್ಯದರ್ಶಿಗಳಾಗಿರುತ್ತಾರೆ. ಇದರಲ್ಲಿ ನಾಡಿನ ಅನೇಕ ವಿದ್ವಾಂಸರ ನೆರವನ್ನು ಬಳಸಿಕೊಳ್ಳಲಾಗುತ್ತಿದೆ.

ಈ ಯೋಜನೆಯನ್ವಯ 'ಸಮಗ್ರ'ವಾಗಿ ದಾಸರ ಕೀರ್ತನೆಗಳನ್ನು ಸಂಗ್ರಹಿಸಿ ಪ್ರಕಟಿಸುವುದಿದ್ದರೂ ಕೆಲವು ಹರಿದಾಸರ ರಚನೆಗಳು ಬಿಟ್ಟು ಹೋಗಿರುವ ಸಾಧ್ಯತೆ ಇರುತ್ತದೆ. ಅಂಥ ಹರಿದಾಸರ ಕೀರ್ತನೆಗಳು ದೊರೆತಲ್ಲಿ ಮುಂದೆ ಪರಿಷ್ಕರಣ ಸಂದರ್ಭದಲ್ಲಿ ಪ್ರಕಟಿಸಲು ಕ್ರಮಕೈಗೊಳ್ಳಲಾಗುವುದು.

ಸಮಗ್ರ ದಾಸಸಾಹಿತ್ಯ ಯೋಜನೆಯಡಿ ಪ್ರಕಟವಾಗುತ್ತಿರುವ ಆಯಾ ಸಂಪುಟಗಳ ಸಂಪಾದಕರಿಗೆ ಹಾಗೂ ಈ ಕಾರ್ಯದಲ್ಲಿ ನಮ್ಮೊಡನೆ ಸಹಕರಿಸಿದ ಸಂಪಾದಕ ಮಂಡಳಿಯವರಿಗೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ, ಶ್ರೀ ಸಿ. ಸೋಮಶೇಖರ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ ಅವರಿಗೆ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ. ಎಸ್. ವಿಜಯಲಕ್ಷ್ಮಿ ಹಾಗೂ ಡಾ. ಮಂಜುಳ ಅವರಿಗೆ ಕೃತಜ್ಞತೆಗಳು.

ಹರಿದಾಸರ ಕೀರ್ತನೆಗಳನ್ನು ಆಯ್ದು ಸಂಗೀತಕ್ಕೆ ಆಯ್ಕೆ ಮಾಡಲು ನೆರವಾದ ಶ್ರೀ ವಿನಾಯಕ ತೊರವಿ, ಶ್ರೀ ಮೈಸೂರು ವಿ. ಸುಬ್ರಹ್ಮಣ್ಯ, ಶ್ರೀ ಆರ್. ಕೆ. ಪದ್ಮನಾಭ, ಶ್ರೀ ಬಾನಂದೂರು ಕೆಂಪಯ್ಯ ಹಾಗು ಶ್ರೀಮತಿ ಮಾಲತಿ ಶರ್ಮರವರಿಗೆ, ಮತ್ತು ಈ ಯೋಜನೆಯಲ್ಲಿ ಪಾಲ್ಗೊಂಡ ಎಲ್ಲ ಸಂಗೀತ ನಿರ್ದೇಶಕರಿಗೆ ಹಾಗೂ ಗಾಯಕರಿಗೆ ಕೃತಜ್ಞತೆಗಳು.

ಸಂಪುಟಗಳನ್ನು ಮುದ್ರಣಕ್ಕೆ ಅನುಗೊಳಿಸುವ ಕಾರ್ಯ ನಿರ್ವಹಿಸಿದ ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಅನಂತ ಪದ್ಮನಾಭರಾವ್ ಮತ್ತು ಪ್ರೊ. ನಾ. ಗೀತಾಚಾರ್ಯ ಇವರಿಗೂ ಸಹ ಕೃತಜ್ಞತೆಗಳು.

ಈ ಸಮಗ್ರ ದಾಸಸಾಹಿತ್ಯ ಸಂಪುಟಗಳ ಮುದ್ರಣ ಕಾರ್ಯವನ್ನು ನಿರ್ವಹಿಸಿದ ಎಂ.ಎಸ್.ಐ.ಎಲ್. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಅಶೋಕ್ ವಿ. ಡೇವಿಡ್ ಹಾಗೂ ವಿಶೇಷಾಧಿಕಾರಿಗಳಾದ ಶ್ರೀ ಎಂ. ರವಿಶಂಕರ್ ಅವರಿಗೆ ನನ್ನ ಕೃತಜ್ಞತೆಗಳು. ಸಮಗ್ರ ದಾಸಸಾಹಿತ್ಯವನ್ನು ಪ್ರಕಟಿಸುವುದು ಹರಿದಾಸರಿಗೂ ಕನ್ನಡ ಜನತೆಗೂ ನಾವು ಸಲ್ಲಿಸಬೇಕಾದ ಸೇವೆಯೆಂದು ಭಾವಿಸಿದ್ದೇನೆ. ಪಂಡಿತ–ಪಾಮರರನ್ನು ಏಕಕಾಲಕ್ಕೆ ಆಕರ್ಷಿಸಬಲ್ಲ ವಿಶಿಷ್ಟ ಸಾಮರ್ಥ್ಯ ದಾಸಸಾಹಿತ್ಯದ್ದು ಎಂದರೆ ತಪ್ಪಾಗಲಾರದು. ಕನ್ನಡ ಜನತೆಯು ಈ ಪ್ರಕಟಣೆಯ ಸದುಪಯೋಗ ಪಡೆದುಕೊಂಡೀತು ಎಂದು ಆಶಿಸಿದ್ದೇನೆ.

ವೈ. ಕೆ. ಮುದ್ದುಕೃಷ್ಣ

ನಿರ್ದೇಶಕರು

ಸಂಪಾದಕ ಮಂಡಳಿಯ ನುಡಿ

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಕನ್ನಡಜನಕ್ಕೆ ಪಂಪನಂತಹ ಪ್ರೌಢಕವಿಗಳು ಗೊತ್ತಿರಲಿ ಬಿಡಲಿ, ದಾಸರ ಹಾಡುಗಳು ಗೊತ್ತಿಲ್ಲದವರು ಮಾತ್ರ ಅಪರೂಪ. ಜನರ ಮೇಲೆ ನಿರಂತರ ಪ್ರಭಾವವನ್ನು ಬೀರುವ ಜನಸಮ್ಮುಖತೆ ದಾಸಸಾಹಿತ್ಯದ ಪ್ರಮುಖ ಲಕ್ಷಣಗಳಲ್ಲಿ ಒಂದು. ಇಂತಹ ದಾಸರ ಹಾಡುಗಳು ಜ್ಞಾನಸಂಪದ ಹಾಗೂ ಭಕ್ತಿಸಂಪದಗಳ ಸಾರ್ವತ್ರಿಕ ಹಬ್ಬುಗೆಗೆ ಸಾಧನವಾಗಿ ಪರಿಣಮಿಸಿವೆ.

ಕನ್ನಡ ನಾಡಿನಾದ್ಯಂತ ಎಲ್ಲ ಸ್ತರಗಳಲ್ಲಿ ವರ್ಗ-ವರ್ಣಗಳ ಭೇದವಿಲ್ಲದೆ, ಜನರ ಬಾಯಲ್ಲಿ ಉಳಿದುಕೊಂಡು ಬಂದ ಈ ಸಾಹಿತ್ಯವನ್ನು ಮೊಟ್ಟಮೊದಲಿಗೆ ಪ್ರಕಟಿಸಿದ ಶ್ರೇಯಸ್ಸು ಬಾಸೆಲ್ ಮಿಶನ್ನಿನ ರೆ. ಹರ್ಮನ್ ಮೊಗ್ಲಿಂಗ್‌ರಿಗೆ ಸೇರುತ್ತದೆ. ಇವರು ತಮ್ಮ ಇಲ್ಲಿಯ ವಾಸ್ತವ್ಯದಲ್ಲಿ (೧೮೩೬ರಿಂದ) ನಾಲ್ಕುನೂರಕ್ಕೂ ಮೀರಿದ ದಾಸರಪದಗಳನ್ನು ಸಂಗ್ರಹಿಸಿದ್ದರು. ಅವುಗಳಲ್ಲಿಯ ಒಂದು ನೂರು ಪದಗಳ ಸಂಗ್ರಹವನ್ನು 'ದಾಸರ ಪದಗಳು' ಎಂಬ ಹೆಸರಿನಿಂದ ಕ್ರಿ. ಶ. ೧೮೫೦ರಲ್ಲಿ, ಮತ್ತೆ ಕ್ರಿ.ಶ. ೧೮೫೨ರಲ್ಲಿ ೧೭೪ ಪದಗಳುಳ್ಳ ಸಂಕಲನವನ್ನು ಮಂಗಳೂರಿನಲ್ಲಿ ಕಲ್ಲಚ್ಚಿನಲ್ಲಿ ಛಾಪಿಸಿ ಪ್ರಕಟಿಸಿದರು. ಈ ವಿಷಯವನ್ನು ೧೮೭೩ರಲ್ಲಿ ಪ್ರಕಟವಾದ ಇಂಡಿಯನ್ ಎಂಟಿಕ್ವೆರಿಯ 'On the Karnataka Vaishnava Dasas' - ಎಂಬ ತಮ್ಮ ಲೇಖನದಲ್ಲಿ ರೆ. ಕಿಟೆಲ್ಲರು ಕಾಣಿಸಿದ್ದಾರೆ. ಇದರಿಂದ ಕಿಟೆಲ್‌ರಂಥವರು ಕೂಡ ದಾಸರ ಪದಗಳ ಮಹತ್ವವನ್ನು ಮತ್ತು ಜನಪ್ರಿಯತೆಯನ್ನು ಗುರುತಿಸಿದ್ದರು ಎಂಬುದು ಗೊತ್ತಾಗುತ್ತದೆ. ಪ್ರಾಸಂಗಿಕವಾಗಿ ಇದುವೇ ದಾಸಸಾಹಿತ್ಯದ ಕುರಿತಾದ ಮೊದಲ ಲೇಖನವೂ ಆಗಿದೆ.

ಆ ನಂತರದ ದಿನಗಳಲ್ಲಿ ಈ ಕ್ಷೇತ್ರದಲ್ಲಿ ಹಲವಾರು ಜನರು ಕೆಲಸವನ್ನು ಮುಂದುವರಿಸಿದರು. ರೆ. ಮೊಗ್ಲಿಂಗರ 'ದಾಸರ ಪದಗಳು' ಇದರ ದ್ವಿತೀಯ ಆವೃತ್ತಿಯನ್ನು ೧೮೭೧ರಲ್ಲಿ ಜಾನ್ ಗ್ಯಾರೆಟರ ಸೂಚನೆಯ ಮೇರೆಗೆ ಹೊಳಕಲ್ಲು ನರಸಿಂಹಯ್ಯನವರು ಬೆಂಗಳೂರಿನಿಂದ ಪ್ರಕಟಿಸಿದರು. ೧೮೭೩ರಲ್ಲಿ ಹಿಂದೂ ಭಾಷಾ ಸಂಜೀವಿನೀ ಮುದ್ರಣ ಶಾಲೆಯಲ್ಲಿ 'ಹರಿಭಜನೆ, ಕೀರ್ತನೆ' ಎಂಬ ಸಂಗ್ರಹ ಪ್ರಕಟವಾಯಿತು. ೧೮೯೦ನೆಯ ದಶಕದಲ್ಲಿ ಬೆಳಗಾವಿಯ ಆಬಾಜಿ ರಾಮಚಂದ್ರ ಸಾವಂತ ಇವರು ದೇವನಾಗರಿ ಲಿಪಿಯಲ್ಲಿ "ದಾಸರ ಪದಗಳ ಸಂಗ್ರಹವು" ಎಂಬುದಾಗಿ ಎರಡು ಭಾಗಗಳಲ್ಲಿ ಪ್ರಕಟಿಸಿದರು. ಆ ದಶಕದಲ್ಲಿಯೇ ಮಡಕಶಿರಾದ ಬಾಲಕೃಷ್ಣರಾಯರು ೧೮೯೪ರಲ್ಲಿ 'ಪುರಂದರ ದಾಸರು ಮೊದಲಾದ ಅಪರೋಕ್ಷ ಜ್ಞಾನಿಗಳ ಪದಗಳು' ಎಂಬ ಪುಸ್ತಕವನ್ನು ತೆಲುಗು ಲಿಪಿಯಲ್ಲಿ ಮುದ್ರಿಸಿದ್ದು ಗಮನಾರ್ಹವಾಗಿದೆ. ಮತ್ತೆ ೧೯೦೮ರಲ್ಲಿ ಅವರೇ ಇನ್ನೊಂದು ಸಂಕಲನವನ್ನೂ ಪ್ರಕಟಿಸಿದ್ದಾರೆ.

ಹೀಗೆ ೧೮೫೦ರಷ್ಟು ಹಿಂದೆಯೇ ಪ್ರಾರಂಭವಾದ ದಾಸರ ಪದಗಳ ಸಂಗ್ರಹ ಹಾಗೂ ಪ್ರಕಟಣೆಯ ಕಾರ್ಯಕ್ಕೆ ಒಂದು ವ್ಯವಸ್ಥಿತ ರೂಪವನ್ನು ಕೊಟ್ಟು, ನಾಡಿನಾದ್ಯಂತ ಹರಿದು ಹಂಚಿಹೋದ, ಜನರ ಬಾಯಲ್ಲಿ ಉಳಿದುಕೊಂಡು ಬಂದ ವಿವಿಧ ದಾಸರ ಪದಗಳನ್ನು ಸಂಗ್ರಹಿಸಿ ಪ್ರಕಟಿಸಲು ಪ್ರಾರಂಭಿಸಿದವರು ಉಡುಪಿಯ ಪಾವಂಜೆ ಗುರುರಾಯರು. ಅವರು ೧೯೧೪ರಲ್ಲಿ ಪ್ರಕಟಿಸಿದ ಮೊದಲ ಸಂಕಲನದ ಹೆಸರು 'ಉದಯರಾಗವು' ಎಂಬುದು. ಅನಂತರದ ದಿನಗಳಲ್ಲಿ ಪುರಂದರದಾಸರ ಕೀರ್ತನೆಗಳನ್ನು ಐದು ಸಂಪುಟಗಳಲ್ಲಿ ಮತ್ತು ಉಳಿದ ದಾಸರ ಕೃತಿಗಳನ್ನು ಬಿಡಿಬಿಡಿಯಾಗಿ ಪ್ರಕಟಿಸಿದರು. ಹೀಗೆ ನಾಡಿನ ದಕ್ಷಿಣದ ಅಂಚಿನ ಉಡುಪಿಯಲ್ಲಿ ಪ್ರಾರಂಭವಾದ ಕೆಲಸವನ್ನು ಉತ್ತರದ ಅಂಚಿನ ಲಿಂಗಸುಗೂರಿನಲ್ಲಿ ಗೊರಾಬಾಳ ಹಣಮಂತರಾಯರು 'ವರದೇಂದ್ರ ಸಾಹಿತ್ಯ ಮಾಲೆ'ಯನ್ನು ಪ್ರಾರಂಭಿಸಿ ತಮ್ಮ ಇಡೀ ಜೀವನವನ್ನೇ ಹರಿದಾಸ ಸಾಹಿತ್ಯದ ಸಂಗ್ರಹ ಮತ್ತು ಪ್ರಕಟಣೆಗೆ ಮೀಸಲಾಗಿರಿಸಿದರು. ಇತ್ತ ಮೈಸೂರು ಭಾಗದಲ್ಲಿ ಸುಪ್ರಸಿದ್ಧ ದಾಸರ ಹಾಡುಗಳನ್ನು ತಕ್ಕಮಟ್ಟಿಗೆ ಶಾಸ್ತ್ರಶುದ್ಧವಾಗಿ ಪ್ರಕಟಿಸಲು

ಸುಬೋಧ ರಾಮರಾಯರು ಮುಂದಾದರು. ಇದೇ ಬಗೆಯ ಕೆಲಸವನ್ನು ಧಾರವಾಡ ಪ್ರದೇಶದಲ್ಲಿ ನಾರಾಯಣರಾವ ಕಲಮದಾನಿ, ಹುಚ್ಚರಾವ ಬೆಂಗೇರಿ ಹಾಗೂ ಬೆಟಗೇರಿ ಕೃಷ್ಣಶರ್ಮರು ಮಾಡಿದರು. ಇದರೊಂದಿಗೆ, ಭಜನೆಯ ದೃಷ್ಟಿಯಿಂದ ಅನುಕೂಲವಾಗುವಂತೆ ನಾಡಿನ ವಿವಿಧ ಭಾಗಗಳಲ್ಲಿ ದಾಸಸಾಹಿತ್ಯಾಸಕ್ತರು ತಮತಮಗೆ ಬೇಕಾದ ಪದಗಳ ಸಂಗ್ರಹವನ್ನು ಪ್ರಕಟಿಸತೊಡಗಿದರು. ಇದರಿಂದಾಗಿ ನಾಡಿನ ಬಹುತೇಕ ಭಾಗಗಳಲ್ಲಿ ಬೇರೆ ಬೇರೆ ದಾಸರು ಇದ್ದುದು ಮತ್ತು ಅವರು ಹಾಡುಗಳನ್ನು ಬರೆದಿದ್ದಾರೆ ಎಂಬುದು ಗಮನಕ್ಕೆ ಬಂದಿತು. ಅದು 'ದಾಸ–ಪೀಳಿಗೆ'ಯನ್ನು ಗುರುತಿಸಲು ಸಹಾಯವಾಯಿತು.

ಶ್ರೀಪಾದರಾಜರಿಂದ ಪ್ರಾರಂಭವಾದ ಕೀರ್ತನೆಗಳ ರಚನೆಯ ಸಂಪ್ರದಾಯದಲ್ಲಿ ಈ ಐದುನೂರು ವರ್ಷಗಳಲ್ಲಿ ಸುಮಾರು ಮುನ್ನೂರು ಜನ ಹರಿದಾಸರು ಹುಟ್ಟಿ ಮೂವತ್ತು ಸಾವಿರಕ್ಕೂ ಮಿಕ್ಕ ಕೀರ್ತನೆಗಳನ್ನು ರಚಿಸಿದ್ದಾರೆಂದರೆ ಅವುಗಳ ಮಹತ್ವ ಗೊತ್ತಾಗದೇ ಇರದು.

ಇಡಿಯಾಗಿ–ಬಿಡಿಬಿಡಿಯಾಗಿ ವ್ಯಕ್ತಿಗಳಿಂದ, ಸಂಘ ಸಂಸ್ಥೆಗಳಿಂದ ದಾಸರ ಪದಗಳು ಪ್ರಕಟವಾಗುತ್ತ ಬರುತ್ತಿರುವಾಗಲೇ ಪುರಂದರ ಕನಕದಾಸರ ಚತುಃಶತಮಾನೋತ್ಸವ ಸಂದರ್ಭಗಳಲ್ಲಿ ಅವರ ಸಮಗ್ರ ಕೃತಿಗಳು ಸರ್ಕಾರದಿಂದ ಹಾಗೂ ವಿವಿಧ ಸಂಘ ಸಂಸ್ಥೆಗಳಿಂದ ಪ್ರಕಟವಾದವು. ಆದರೆ ಸಮಗ್ರ ದಾಸಸಾಹಿತ್ಯದ ಪ್ರಕಟಣೆ ಈವರೆಗೆ ಆಗಲೇ ಇಲ್ಲವೆಂದು ಹೇಳಬಹುದು. ಇಂಥದೊಂದು ಪ್ರಯತ್ನವನ್ನು ಮೂರು ದಶಕಗಳ ಹಿಂದೆ ಮೈಸೂರು ವಿಶ್ವವಿದ್ಯಾನಿಲಯವು ಕೈಗೊಂಡಿತು. ವೈಜ್ಞಾನಿಕ ರೀತಿಯಲ್ಲಿ ಶಾಸ್ತ್ರಶುದ್ಧವಾಗಿ ದಾಸಸಾಹಿತ್ಯವನ್ನು ಪ್ರಕಟಿಸುವುದರ ಅಡಿಗಲ್ಲನ್ನು ಹಾಕಿದ ಶ್ರೇಯಸ್ಸು ಆ ಮಾಲೆಯ ಸಂಪಾದಕರಾಗಿದ್ದ ಡಾ. ಜಿ. ವರದರಾಜರಾವ್ ಅವರಿಗೆ ಸಲ್ಲಬೇಕು. ಇದುವರೆಗೆ ಕೆಲವು ಸಂಪುಟಗಳು ಮಾತ್ರ ಬಂದಿವೆ. ಆದರೆ ಹಸ್ತಪ್ರತಿಗಳಲ್ಲಿ ವಿಪುಲ ದಾಸಸಾಹಿತ್ಯವನ್ನು ಸಂಗ್ರಹಿಸಲಾಗಿದೆ. ಅದೇ ರೀತಿಯಲ್ಲಿ ಲಿಂಗಸುಗೂರಿನಲ್ಲಿ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹಾಗೂ ತಿರುಪತಿಯ ದಾಸಸಾಹಿತ್ಯ ಪ್ರೊಜೆಕ್ಟದಲ್ಲಿ ಕೂಡ ವಿಪುಲ ಹಸ್ತಪ್ರತಿಗಳ ಸಂಗ್ರಹವಿದೆ. ಇವರೆಲ್ಲರ ಸಹಕಾರದಿಂದ ಈಗ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸಿ ಪ್ರಕಟಿಸುವ ಸಾಹಸದ ಕಾರ್ಯವನ್ನು ಮಾಡುತ್ತಿದೆ.

ಸಂಪುಟ ಯೋಜನೆ

ದಾಸಸಾಹಿತ್ಯದ ಪರಿಷ್ಕರಣ ಕಾರ್ಯ ತುಂಬ ಜಟಿಲವಾದುದೆಂಬುದು ಸಂಪಾದಕ ಮಂಡಳಿಯ ಪ್ರಥಮ ಸಭೆಯಲ್ಲಿಯೇ ಅನುಭವಕ್ಕೆ ಬಂದಿತು. ಕಳೆದ ಐದು ಶತಮಾನಗಳಿಂದ ನಿರಂತರ ಹರಿದುಬಂದ ದಾಸಸಾಹಿತ್ಯ ರಚನೆಯಲ್ಲಿಯ ದಾಸರ ಹಾಗೂ ದಾಸರ ಪದಗಳ ಸಂಖ್ಯಾಬಾಹುಳ್ಯವನ್ನು ಗಮನಿಸಿ ಅದಕ್ಕೊಂದು ಕಾಲಮಿತಿಯನ್ನು ಹಾಕಿಕೊಳ್ಳುವುದು ಅನಿವಾರ್ಯ ವಾಯಿತು. ಹಾಗೆ ದಾಸಸಾಹಿತ್ಯದ ಪ್ರಾರಂಭ ಕಾಲದಿಂದ ೧೯ನೆಯ ಶತಮಾನದ ಅಂತ್ಯದವರೆಗೆ ರಚಿತಗೊಂಡ ವೈದಿಕ ಪರಂಪರೆಯ ದಾಸರ ಪದಗಳನ್ನು ಸಂಗ್ರಹಿಸುವುದೆಂದೂ, ಅದರಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಪರಂಪರೆಯ ಲಭ್ಯವಿದ್ದ ಹಾಡುಗಳನ್ನು ಸೇರಿಸಿಕೊಂಡು ೩೫ ಸಂಪುಟಗಳಲ್ಲಿ ಪ್ರಕಟಿಸುವುದೆಂದೂ ನಿರ್ಧರಿಸಲಾಯಿತು.

ಈ ೩೫ ಸಂಪುಟಗಳನ್ನು* ಸಂಪಾದಕ ಮಂಡಳಿಯ ಸದಸ್ಯರಲ್ಲದೆ ನಾಡಿನ ಹಲವಾರು ವಿದ್ವಾಂಸರನ್ನು ಸಂಪಾದಿಸಿಕೊಡಲು ಕೇಳಿಕೊಳ್ಳಲಾಯಿತು.

ಇಂಥದೊಂದು ಬೃಹತ್ ಕಾರ್ಯವನ್ನು ಕೈಗೊಂಡಾಗ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸುವುದು ಅನಿವಾರ್ಯವಾಗುತ್ತದೆ. ಅನ್ಯ ಮತ–ಪಂಥಗಳ ಟೀಕೆಗಳು ಬಂದಿದ್ದರೆ ಅಂಥ ಹಾಡುಗಳನ್ನು ಕೈಬಿಡಬೇಕು. ಒಂದೇ ಹಾಡು ಇಬ್ಬರು ದಾಸರ ಅಂಕಿತದಲ್ಲಿ ಪ್ರಚಲಿತದಲ್ಲಿದ್ದರೆ, ಎರಡೂ ಕಡೆಗೆ ಅವುಗಳನ್ನು ಕೊಟ್ಟು, ಕೆಳಗೆ 'ಈ ಕೀರ್ತನೆ . . . . ದಾಸರ ಅಂಕಿತದಲ್ಲೂ ಇದೆ' ಎಂದೂ ಸೂಚಿಸಬೇಕು. ದ್ವೈತ ಸಂಪ್ರದಾಯದ ಕೀರ್ತನೆಗಳನ್ನು ಪ್ರಕಟಿಸುವಾಗ ದೇವ–ಗುರು ತಾರತಮ್ಯವನ್ನು ಪಾಲಿಸಬೇಕು ; ಉಳಿದೆಡೆ ಗಣೇಶ ಪ್ರಾರ್ಥನೆ, ಭಗವಂತನ ನಾಮಸಂಕೀರ್ತನೆ, ಆತ್ಮನಿವೇದನೆ, ಲೋಕನೀತಿ, ತಾತ್ವಿಕ, ಕಥನಾತ್ಮಕ, ಸಂಪ್ರದಾಯ ಹಾಗೂ ವಿಶೇಷ ಹಾಡುಗಳೆಂದು ಮುಂತಾಗಿ ವಿಂಗಡಿಸಿಕೊಡಬೇಕು– ಎಂಬುದಾಗಿ ನಿರ್ಧರಿಸಲಾಯಿತು.

---

*ಇವುಗಳಲ್ಲಿ ಕೆಲವುಗಳಿಗೆ ಎರಡು ಮೂರು ಭಾಗಗಳಿವೆ.

ಪ್ರತಿಯೊಂದು ಸಂಪುಟದ ಪ್ರಾರಂಭದಲ್ಲಿ ಹಾಡುಗಳ ಪರಿವಿಡಿಯನ್ನು ಕೊಟ್ಟು ಪ್ರಸ್ತಾವನೆಯಲ್ಲಿ ಆಯಾ ದಾಸರ ಸಂಕ್ಷಿಪ್ತ ಜೀವನ ಚರಿತ್ರೆ, ಕೃತಿಗಳ ಸಮೀಕ್ಷೆ, ಶೈಲಿ ಇತ್ಯಾದಿಗಳನ್ನು ವಿವರಿಸಿ, ಗ್ರಂಥಸಂಪಾದನೆಯ ಆಕರಗಳನ್ನೂ ಕೊಡಲು ಪ್ರಯತ್ನಿಸಲಾಗಿದೆ. ಕೊನೆಯಲ್ಲಿ ಬರುವ ಅನುಬಂಧಗಳಲ್ಲಿ ಕಠಿಣ ಶಬ್ದಗಳ ಅರ್ಥ, ಟಿಪ್ಪಣಿ ಮತ್ತು ವಿಶಿಷ್ಟ ಅಂಕಿತನಾಮಗಳ ಸೂಚಿ ಹಾಗೂ ಹಾಡುಗಳ ಅಕಾರಾದಿಯನ್ನು ಕೊಡಲಾಗಿದೆ.

ಈ ಸಂಪುಟಗಳು ಜನಪ್ರಿಯ ಆವೃತ್ತಿಗಳಾಗಿರುವುದರಿಂದ ಲಭ್ಯವಿರುವ ಪಾಠಾಂತರಗಳಲ್ಲಿ ಯೋಗ್ಯವಾದುದನ್ನು ಸ್ವೀಕರಿಸಿದೆ. ಅನ್ಯ ಪಾಠಗಳನ್ನು ಅಡಿಯಲ್ಲಿ ನಮೂದಿಸಿಲ್ಲ. ಆದರೂ ಇವು ವಿದ್ವಜ್ಜನಪ್ರಿಯ ಆವೃತ್ತಿಗಳೂ ಆಗಬೇಕೆಂಬ ರೀತಿಯಲ್ಲಿ ಈ ಸಂಪುಟಗಳನ್ನು ರೂಪಿಸಲು ಪ್ರಯತ್ನಿಸಿದ್ದೇವೆ.

ಕೃತಜ್ಞತೆಗಳು

ಕಳೆದ ನೂರೈವತ್ತು ವರ್ಷಗಳಿಂದ ಪಾಶ್ಚಾತ್ಯ ಮಿಶನರಿಗಳಿಂದ ಹಿಡಿದು ಈ ಮೊದಲು ಉಲ್ಲೇಖಿಸಿದ ನಾಡಿನ ಅನೇಕ ವಿದ್ವಜ್ಜನರು, ಸಂಘ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ದಾಸಸಾಹಿತ್ಯ ಕುರಿತು ನಿರಂತರ ದುಡಿದು ವಿಪುಲ ಸಾಮಗ್ರಿಯನ್ನು ಪ್ರಕಟಿಸಿದ್ದಾರೆ. ಈ ಎಲ್ಲ ವ್ಯಕ್ತಿಗಳಿಗೂ, ಸಂಘ ಸಂಸ್ಥೆಗಳಿಗೂ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಯೋಜನೆ ಅಸ್ತಿತ್ವಕ್ಕೆ ಬಂದುದೂ ಒಂದು ವಿಶಿಷ್ಟ ಸಂದರ್ಭದಲ್ಲಿ ಎಂಬುದನ್ನು ಇಲ್ಲಿ ನಮೂದಿಸಬೇಕು. ಕರ್ನಾಟಕ ಸರ್ಕಾರವು ನಾಡಿನ ಖ್ಯಾತ ಸಂಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ಸಮಗ್ರ ವಚನಸಾಹಿತ್ಯವನ್ನು ಪ್ರಕಟಿಸಿತಷ್ಟೇ. ಅವರೇ 'ದಾಸಸಾಹಿತ್ಯ' ಯೋಜನೆಯನ್ನು ರೂಪಿಸಿ ಶ್ರೀ ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶತೀರ್ಥರ ಮೂಲಕ ಈ ಯೋಜನೆಯತ್ತ ಸರ್ಕಾರದ ಗಮನ ಸೆಳೆದರು. ಇದನ್ನು ಅರಿತ ಅಂದಿನ ಮುಖ್ಯಮಂತ್ರಿಗಳೂ, ಅನಂತರ ಭಾರತದ ಪ್ರಧಾನಮಂತ್ರಿಗಳೂ ಆಗಿದ್ದ ಸನ್ಮಾನ್ಯ ಶ್ರೀ ಹೆಚ್. ಡಿ. ದೇವೇಗೌಡರು ಮುಧೋಳದಲ್ಲಿ (೧೯೯೫) ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ, "ಸರ್ಕಾರವು ಸಮಗ್ರ

ದಾಸಸಾಹಿತ್ಯವನ್ನು ಪ್ರಕಟಿಸಲು ಒಪ್ಪಿಕೊಂಡಿದೆ" ಎಂದು ಘೋಷಿಸಿದರು. ಅದರಂತೆ, ಸರ್ಕಾರವು ಒಂಬತ್ತು ಜನರ ಸಂಪಾದಕ ಮಂಡಳಿಯನ್ನು ರಚಿಸಿತು. ಅದರಲ್ಲಿ ಡಾ. ಶ್ರೀನಿವಾಸ ಹಾವನೂರ, ಡಾ. ಟಿ.ಎನ್. ನಾಗರತ್ನ ಮತ್ತು ಪ್ರೊ. ವಸಂತ ಕುಷ್ಟಗಿ ಅವರನ್ನು ಸಮಿತಿಯ ಕಾರ್ಯನಿರ್ವಾಹಕ ಸಂಪಾದಕರೆಂದು ನಿಯಮಿಸಿತು. ಜೊತೆಗೆ ಈ ಮೊದಲು ಇಂಥ ಕಾರ್ಯವನ್ನು ಯಶಸ್ವಿಯಾಗಿ ಮಾಡಿದ ಅನುಭವಿ ಡಾ. ಎಂ. ಎಂ. ಕಲಬುರ್ಗಿ, ದಾಸಸಾಹಿತ್ಯದಲ್ಲಿ ನುರಿತ ವಿದ್ವಾಂಸರುಗಳಾದ ಪ್ರೊ. ಎಂ. ರಾಜಗೋಪಾಲಾಚಾರ್ಯ, ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಡಾ. ಮಂದಾಕಿನಿ, ಪ್ರೊ. ಸುಧಾಕರ ಮತ್ತು ಡಾ. ಬಸವರಾಜ ಸಬರದ ಅವರನ್ನು ಸಂಪಾದಕ ಮಂಡಳಿಯ ಸದಸ್ಯರನ್ನಾಗಿ ನಿಯಮಿಸಿತು. ಅವರುಗಳ ನಿರಂತರ ಪರಿಶ್ರಮದ ಫಲವೇ ಈ ಸಮಗ್ರ ದಾಸಸಾಹಿತ್ಯದ ಪ್ರಕಟಣಾ ಕಾರ್ಯ. ಈ ಪ್ರಕಟಣಾ ಕಾರ್ಯದಲ್ಲಿ ಅವರುಗಳೊಂದಿಗೆ ೩೫ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಸರ್ವಶ್ರೀ ಡಾ. ಅರಳುಮಲ್ಲಿಗೆ ಪಾರ್ಥಸಾರಥಿ, ಡಾ. ಡಿ. ಆರ್. ಪಾಂಡುರಂಗ, ಡಾ. ಅನಂತಪದ್ಮನಾಭರಾವ್, ಪ್ರೊ. ಬಿ. ಆರ್. ಕುಲಕರ್ಣಿ, ಡಾ. ಕೆ. ಜಿ. ವೆಂಕಟೇಶ್, ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಕೆ. ಗೋಕುಲನಾಥ, ಡಾ. ಕೆ. ಎಂ. ಕೃಷ್ಣರಾವ್, ಶ್ರೀ ಹಣಮಂತ ತಾಸಗಾಂವಕರ್, ಪ್ರೊ. ನಾ. ಗೀತಾಚಾರ್ಯ, ಡಾ. ಸ್ವಾಮಿರಾವ್ ಕುಲಕರ್ಣಿ, ಶ್ರೀ ಹನುಮನಗೌಡ, ಶ್ರೀ ಎ. ಎನ್. ಅನಂತಸ್ವಾಮಿರಾವ್, ಡಾ. ನಾರಾಯಣಾಚಾರ್ಯ ಧೂಳಖೇಡ, ಶ್ರೀ ಶಾಶ್ವತಸ್ವಾಮಿ ಮುಕ್ಕುಂದಿಮಠ, ಶ್ರೀ ಕೆ. ಎಸ್. ವೆಂಕಟೇಶ್ ಮತ್ತು ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ ಅವರುಗಳು ಹಾಗೂ ಶ್ರೀಮತಿಯರಾದ ನಳಿನಿ ವೆಂಕಟೇಶ್, ಮೀನಾರಾವ್, ಲೀಲಾವತಿ ಎಸ್. ರಾವ್, ಡಾ. ಜಯಲಕ್ಷ್ಮಿ ಮಂಗಳಮೂರ್ತಿ, ಡಾ. ಅಕ್ಕಮಹಾದೇವಿ, ಶೀಲಾ ದಾಸ್, ಡಾ. ರಮಾ ಕಲ್ಲೂರಕರ, ಡಾ. ಸೀತಾ ಗುಡೂರ ಕುಲಕರ್ಣಿ, ಹೆಚ್. ಎಸ್. ಪದ್ಮಾ ಮೂರ್ತಿ, ಮತ್ತು ರುಕ್ಮಿಣಿ ಗಿರಿಮಾಜಿ ಅವರುಗಳು ತುಂಬ ಶ್ರಮವಹಿಸಿ ಸಂಪುಟಗಳನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಅವರುಗಳಿಗೆ ಸಂಪಾದಕ ಮಂಡಳಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಈ ಮಧ್ಯೆ ಸಂಪಾದಕ ಸಮಿತಿಯ ಸದಸ್ಯರಲ್ಲೊಬ್ಬರಾದ ಪ್ರೊ. ಎಂ. ರಾಜಗೋಪಾಲಾಚಾರ್ಯರು ಮತ್ತು ಡಾ. ಮಂದಾಕಿನಿ ಹಾಗೂ ಸಂಪುಟ ಸಂಪಾದಕರಲ್ಲಿ ಒಬ್ಬರಾದ ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ, ಡಾ. ಕೆ.ಎಂ. ಕೃಷ್ಣರಾವ್, ಶ್ರೀಮತಿ ಪದ್ಮಾ ಮೂರ್ತಿ ಹಾಗೂ ಶ್ರೀ ಹನುಮನಗೌಡ ಮಾನ್ವಿ ಅವರು ನಮ್ಮನ್ನು ಅಗಲಿದ್ದು ದುಃಖದ ವಿಷಯವಾಗಿದೆ.

ಆಯಾ ಕಾಲದಲ್ಲಿ ಈ ಯೋಜನೆಗೆ ಸಹಕರಿಸಿದ ಹಾಗೂ ಈ ಯೋಜನೆಯ ಪರಿಕಲ್ಪನೆ ಯಶಸ್ವಿಯಾಗಿ ಕಾರ್ಯಾನುಷ್ಠಾನಕ್ಕೆ ಬರುವ ದಿಸೆಯಲ್ಲಿ ಸಹಕರಿಸಿದ ಈ ಹಿಂದಿನ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ವಿಶೇಷವಾಗಿ ಇಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಶ್ರೀಮತಿ ರಾಣಿ ಸತೀಶ್ ಅವರಿಗೆ, ಇಲಾಖೆಯ ಹಿಂದಿನ ಕಾರ್ಯದರ್ಶಿಗಳಾದ ಶ್ರೀ ಚಂದ್ರಹಾಸ ಗುಪ್ತ ಮತ್ತು ಈಗಿನ ಕಾರ್ಯದರ್ಶಿಗಳಾದ ಶ್ರೀ ಸಿ. ಎಸ್. ಕೇದಾರ್ ಅವರಿಗೆ ನಮ್ಮ ನಮನಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ಈ ಯೋಜನೆಗೆ ನೆರವಾದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರುಗಳು ಹಾಗೂ ಈಗಿನ ನಿರ್ದೇಶಕರಾದ ಶ್ರೀ ವೈ. ಕೆ. ಮುದ್ದುಕೃಷ್ಣ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ.ಎಸ್. ವಿಜಯಲಕ್ಷ್ಮಿ ಮತ್ತು ಡಾ. ಮಂಜುಳಾ ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ನೆರವಾದ ಎಂ. ಎಸ್. ಐ. ಎಲ್. ಸಂಸ್ಥೆಯ ಅಧಿಕಾರಿ ಹಾಗೂ ಸಿಬ್ಬಂದಿವರ್ಗಕ್ಕೆ, ವಿಶೇಷವಾಗಿ ಶ್ರೀ ಎಂ. ರವಿಶಂಕರ್, ವಿಶೇಷಾಧಿಕಾರಿ, ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ.

ಇದು ಒಂದು ದೊಡ್ಡ ಯೋಜನೆ. ಇದರ ಸಂಪಾದನೆಯ ಸಮಸ್ಯೆಗಳು ದೊಡ್ಡವು. ಪಾಠಾಂತರ, ರೂಪಾಂತರ, ಪ್ರಕ್ಷಿಪ್ತತೆ ಇತ್ಯಾದಿಗಳ ಗೊಂದಲಕ್ಕೆ ಗುರಿಯಾಗುತ್ತ ಬಂದ ವ್ಯಾಪಕ ಪ್ರಮಾಣದ ಈ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸುವುದು, ಪುನರುಕ್ತಿಗಳನ್ನು ಗುರುತಿಸುವುದು, ಅಂಕಿತ ಪಲ್ಲಟಗಳನ್ನು ಸರಿಪಡಿಸುವುದು, ಪ್ರಕ್ಷಿಪ್ತಗಳನ್ನು ದೂರೀಕರಿಸುವುದು, ಕೊನೆಯದಾಗಿ ಕೀರ್ತನೆಗಳನ್ನು ಶುದ್ಧೀಕರಿಸುವುದು ಎಂಥವರನ್ನೂ ಧೈರ್ಯಗೆಡಿಸುವ ಕೆಲಸ. ಹೀಗಿದ್ದೂ ದಾಸಸಾಹಿತ್ಯದ ಮೇಲಿನ ಗೌರವ ಪ್ರೀತಿಗಳು ನಮ್ಮಿಂದ ಈ ಕೆಲಸ ಮಾಡಿಸಿವೆ. ನಮ್ಮ ಶಕ್ತಿಗೆ ಮೀರಿ ಉಳಿದಿರಬಹುದಾದ ದೋಷಗಳನ್ನು ಮನ್ನಿಸಬೇಕೆಂದು ಕೋರುತ್ತೇವೆ. ಈ ಮೂವತ್ತೈದು ಸಂಪುಟಗಳನ್ನು ಸಹೃದಯ ಲೋಕಕ್ಕೆ ಅರ್ಪಿಸುತ್ತಿದ್ದೇವೆ. ಸಮಗ್ರ ದಾಸಸಾಹಿತ್ಯವು ಸುಲಭ ಬೆಲೆಯಲ್ಲಿ ಕನ್ನಡಿಗರ ಮನೆ–ಮನಗಳಲ್ಲಿ ಬೆಳಗಲೆಂದು ಹಾರೈಸುತ್ತೇವೆ.

ಸಂಪಾದಕ ಮಂಡಳಿ

ಪರಿವಿಡಿ

ಪ್ರಸ್ತಾವನೆ

ಹರಿದಾಸ ಸಾಹಿತ್ಯದ ಆದ್ಯ ಪ್ರವರ್ತಕರಾದ ಶ್ರೀಪಾದರಾಜರ ಮಾರ್ಗವನ್ನೇ ಅನುಸರಿಸಿ ಕನ್ನಡದಲ್ಲಿ ಹಲವಾರು ಮಂದಿ ಮಾಧ್ವ ಯತಿಗಳು ಕೀರ್ತನೆಗಳನ್ನು ರಚಿಸಿದ್ದಾರೆ. ದ್ವೈತ ವೇದಾಂತ, ಸಿದ್ಧಾಂತ ಮತ್ತು ಶಾಸ್ತ್ರ ವಿಷಯಗಳಲ್ಲಿ ಪರಿಣತರಾದ ಈ ಯತಿಗಳು ಸಂಸ್ಕೃತದಲ್ಲಿ ಪ್ರೌಢ ಗ್ರಂಥಗಳನ್ನು, ಕನ್ನಡದಲ್ಲಿ ಕೀರ್ತನೆಗಳನ್ನು ರಚಿಸಿ ಹರಿದಾಸ ಸಾಹಿತ್ಯವನ್ನು ಪೋಷಿಸಿದ್ದಾರೆ. ಶ್ರೀಪಾದರಾಜರಂತೆಯೇ ವ್ಯಾಸರಾಜರು, ವಾದಿರಾಜರು, ವಿಜಯೀಂದ್ರರು, ರಾಘವೇಂದ್ರ ಯತಿಗಳು, ವ್ಯಾಸತತ್ವಜ್ಞತೀರ್ಥರು, ವಿದ್ಯಾಕಾಂತತೀರ್ಥರು, ವಿದ್ಯಾರತ್ನಾಕರತೀರ್ಥರು. ವಿದ್ಯಾಪ್ರಸನ್ನತೀರ್ಥರು ಕನ್ನಡದಲ್ಲೂ ಕೀರ್ತನೆಗಳನ್ನು ರಚಿಸಿದ್ದಾರೆ. ಇವರಲ್ಲಿ ಶ್ರೀಪಾದರಾಜರು, ವ್ಯಾಸರಾಜರು ಮತ್ತು ವಾದಿರಾಜರನ್ನು ಬಿಟ್ಟು ಉಳಿದ ಮಾಧ್ವ ಯತಿಗಳ ಕನ್ನಡ ಹಾಡುಗಳನ್ನು ಈ ಸಂಪುಟದಲ್ಲಿ ಅಳವಡಿಸಲಾಗಿದೆ.

ಶ್ರೀ ವಿಜಯೀಂದ್ರತೀರ್ಥರು (೧೫೧೭-೧೬೧೪)

ರಾಘವೇಂದ್ರ ಯತಿಗಳ ಪರಮ ಗುರುಗಳಾದ ವಿಜಯೀಂದ್ರತೀರ್ಥರು ವ್ಯಾಸತೀರ್ಥರ ಶಿಷ್ಯರು. ಇವರ ಪೂರ್ವಾಶ್ರಮದ ಹೆಸರು ವಿಠಲಾಚಾರ್ಯ. ಇವರ ತಂದೆ, ವ್ಯಾಸತೀರ್ಥರ ಪೂರ್ವಾಶ್ರಮದ ಅಣ್ಣನಾದ ಮಧ್ವಪತಿ. ವ್ಯಾಸರಾಯರು ವಿಠಲಾಚಾರ್ಯರಿಗೆ ಬಾಲ್ಯದಲ್ಲಿಯೇ ಸನ್ಯಾಸದೀಕ್ಷೆಯನ್ನು ನೀಡಿ ವಿಷ್ಣುತೀರ್ಥ ಎಂಬ ಹೆಸರಿನಿಂದ ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿದ್ದರು (೧೫೨೬). ಪ್ರತಿಭಾ ಸಂಪನ್ನರಾದ ಈ ಬಾಲಯತಿ ತಮ್ಮ ಸಹಪಾಠಿಗಳಾದ

ವಾದಿರಾಜರ ಗೌರವಕ್ಕೂ ವ್ಯಾಸರಾಜರ ಹಿರಿಯ ಶಿಷ್ಯರಾದ ಪುರಂದರದಾಸ, ಕನಕದಾಸ, ವೈಕುಂಠದಾಸ ಮೊದಲಾದವರ ಪ್ರೀತಿ ಅಭಿಮಾನಗಳಿಗೂ ಪಾತ್ರರಾಗಿದ್ದವರು. ಇವರ ವಿಲಕ್ಷಣವಾದ ಬುದ್ಧಿತೀಕ್ಷ್ಣತೆ, ವಾಕ್ಪಟುತ್ವ, ಸ್ಮರಣಶಕ್ತಿ, ಅಕರ್ಷಕವಾದ ವ್ಯಕ್ತಿತ್ವ ಇವುಗಳಿಂದ ಪ್ರಭಾವಿತರಾದ ಸುರೇಂದ್ರತೀರ್ಥರೆಂಬ ಯತಿಗಳು ಈ ಬಾಲಯತಿಯನ್ನು ತಮ್ಮ ಶಿಷ್ಯನನ್ನಾಗಿ ಮಾಡಿಕೊಳ್ಳಲು ಅಪೇಕ್ಷಿಸಿದರು. ಸುರೇಂದ್ರತೀರ್ಥರ ಮನವಿಯಂತೆ ವ್ಯಾಸರಾಯರು ವಿಷ್ಣುತೀರ್ಥರನ್ನು ಅವರಿಗೆ ಅರ್ಪಿಸಿದರು. ವಿಷ್ಣುತೀರ್ಥರಿಗೆ ವಿಜಯೀಂದ್ರ ತೀರ್ಥರೆಂದು ಪುನರ್‌ನಾಮಕರಣ ಮಾಡಿದ ಸುರೇಂದ್ರ ಯತಿಗಳು ತಮ್ಮ ಪೀಠದ ಉತ್ತರಾಧಿಕಾರಿಗಳನ್ನಾಗಿ ನೇಮಿಸಿದರು (೧೫೩೦).

ವಿಜಯೀಂದ್ರತೀರ್ಥರು ಪೀಠಾಧಿಪತಿಗಳಾಗಿದ್ದು ೧೫೭೫ ರಲ್ಲಿ. ಅನಂತರ ಬಹಳ ವರ್ಷಗಳ ಕಾಲ ಕುಂಭಕೋಣಂನಲ್ಲಿ ನೆಲೆಸಿದ್ದರು. ಅನೇಕ ವಾದಿಗಳನ್ನು ಜಯಿಸಿದರು. ಅರವತ್ನಾಲ್ಕು ಕಲೆಗಳಲ್ಲೂ ಪರಿಣತರಾಗಿದ್ದ ವಿಜಯೀಂದ್ರರು ಶಾಸ್ತ್ರ ವಿಷಯಗಳಲ್ಲಷ್ಟೇ ಅಲ್ಲದೆ ಉಳಿದ ಕಲೆಗಳಲ್ಲೂ ಎದುರಾಳಿಗಳೊಂದಿಗೆ ಸ್ಪರ್ಧಿಸಿ ಅಜೇಯ ವಿಜಯೀಂದ್ರರು ಎಂದು ಪ್ರಖ್ಯಾತರಾಗಿದ್ದರು. ಆ ಕಾಲದ ವಿಖ್ಯಾತ ಪಂಡಿತರಾಗಿದ್ದ ಅಪ್ಪಯ್ಯ ದೀಕ್ಷಿತರನ್ನು ವಾದದಲ್ಲಿ ಸೋಲಿಸಿ ಅವರ ಅಭಿಮಾನಕ್ಕೆ ಪಾತ್ರರಾಗಿದ್ದರು. ವಿಜಯೀಂದ್ರರು ಸಂಸ್ಕೃತದಲ್ಲಿ ೧೦೪ ಶಾಸ್ತ್ರೀಯ ಕೃತಿಗಳನ್ನು ರಚಿಸಿದ್ದು ಅವುಗಳಲ್ಲಿ ೬೦ ಕೃತಿಗಳು ದೊರೆತಿವೆ. ಇಷ್ಟು ದೊಡ್ಡ ಸಂಖ್ಯೆಯ ಪ್ರೌಢ ಸಂಸ್ಕೃತ ಗ್ರಂಥಗಳನ್ನು ಬೇರೆ ಯಾವ ಮಾಧ್ವ ಯತಿಯೂ ರಚಿಸಿಲ್ಲ. ವಿಜಯನಗರದ ಅರಸನಾದ ಅಳಿಯರಾಮರಾಯನಿಂದಲೂ ತಂಜಾವೂರಿನ ಚನ್ನಪ್ಪನಾಯಕ, ಮಧುರೆಯ ವಿಶ್ವನಾಥನಾಯಕ, ಪಾಂಡ್ಯ ದೇಶದ ನರಸಿಂಹ ವೀರರಾಮ, ಉಡುಪಿಯ ವಾದಿರಾಜರಿಂದಲೂ ಸನ್ಮಾನಿತರಾಗಿದ್ದ ವಿಜಯೀಂದ್ರಯತಿಗಳು ಕುಂಭಕೋಣದ ಅರಸರಿಗೆ ರಾಜಗುರುಗಳಾಗಿದ್ದರು.

ಪುರಂದರದಾಸರ ಸಮಕಾಲೀನರಾದ ವಿಜಯೀಂದ್ರರ ಪಾಂಡಿತ್ಯವನ್ನು ಮತ್ತು ವ್ಯಕ್ತಿತ್ವವನ್ನು ಕುರಿತಂತೆ ಗುರು ಮಧ್ವಪತಿವಿಠಲದಾಸರು, ಪ್ರಸನ್ನ ವೆಂಕಟದಾಸರು ಮೊದಲಾದವರು ತುಂಬ ಗೌರವದಿಂದ ಸ್ತುತಿಸಿದ್ದಾರೆ.

ವಿಜಯೀಂದ್ರ ಮುನೀಂದ್ರರೆಂಬಾಶ್ಚರ್ಯದ ಗಜೇಂದ್ರನಾಗಮನವನ್ನು ಗುರು ಮಧ್ವಪತಿವಿಠಲದಾಸರು ಅಲಂಕಾರಿಕವಾಗಿ ನಿರೂಪಿಸುತ್ತಾರೆ. "ಕಲುಷನೆಂಬ ಕೆಸರನ್ನು ಚೆಲ್ಲಾಡಿ, ಹರಿಪಾದತೀರ್ಥದ ಜಲಪಾನ ಮಾಡಿ, ಹರಿಧ್ಯಾನದ ಮದವೇರಿ, ಕುಮತಿಗಳೆಂಬ ಕದಳಿಯನ್ನು ಕಿತ್ತು, ಹರಿಪಾದರಜವ ಶಿರದಲಿ ಧರಿಸಿ, ಮಧ್ವಮತಾಂಬುಧಿಯಲ್ಲಿ ಮುಳುಗಿ, ನಲಿದಾಡುವ ಗಜೇಂದ್ರ ಇದು. ಗುರು ಸುರೇಂದ್ರತೀರ್ಥರೆಂಬ ಮಾವಟಿಗನಾಜ್ಞೆಯಂತೆ ನವವಿಧಭಕ್ತಿಯೆಂಬ ಸರಪಳಿಯಲ್ಲಿ ನಲಿದಾಡುವ ಆನೆ ಎನ್ನುತ್ತಾರೆ." "ಸೂರ್ಯಸುಗುಣಾರ್ಯ ವಿಜಯೀಂದ್ರಾರ್ಯ" ಎಂದು ಸ್ತುತಿಸುವ ಪ್ರಸನ್ನವೆಂಕಟದಾಸರು ವಿಜಯೀಂದ್ರರನ್ನು ೬೪ ಕಲೆಗಳಲ್ಲಿ ಪರಿಣಿತರೆಂದು ಹೇಳುತ್ತಾರೆ. ಕುಂಭಕೋಣದ ಸುರೇಂದ್ರತೀರ್ಥರ ಮಠದ ಉತ್ತರಾಧಿಕಾರಿಗಳಾದ ಮೇಲೆ ವಿಜಯೀಂದ್ರರು ವ್ಯಾಸರಾಜರು ಸ್ಥಾಪಿಸಿದ ಕುಂಭಕೋಣದ ಸರ್ವಜ್ಞ ವಿದ್ಯಾಪೀಠಕ್ಕೆ ಕುಲಪತಿಗಳಾಗಿ ಸಹಸ್ರಾರು ಶಿಷ್ಯರಿಗೆ ವಿದ್ಯಾದಾನ ಮಾಡಿದರು. ಗ್ರಂಥರಚನೆ, ವಿದ್ಯಾಪ್ರಸಾರ, ಪಂಡಿತ ಪುರಸ್ಕಾರ, ಸಾಹಿತ್ಯ ಕಲೆಗಳಿಗೆ ಸೇವೆ, ವಾದಿನಿಗ್ರಹ, ಇವುಗಳಲ್ಲಿ ನಿರತರಾದ ವಿಜಯೀಂದ್ರರು ತಮ್ಮ ೯೭ನೆಯ ವಯಸ್ಸಿನಲ್ಲಿ ಕುಂಭಕೋಣದ ಕಾವೇರಿ ತೀರದಲ್ಲಿ ಬೃಂದಾವನಸ್ಥರಾದರು.

ವಿಜಯೀಂದ್ರತೀರ್ಥರು ತಮ್ಮ ವಿದ್ಯಾಗುರುಗಳಾದ ವ್ಯಾಸತೀರ್ಥರಂತೆಯೇ ಆ ಕಾಲದ ಪ್ರತಿಭಾನ್ವಿತ ವಿದ್ವಾಂಸರು. ಕನ್ನಡ, ಸಂಸ್ಕೃತ ಎರಡೂ ಭಾಷೆಗಳಲ್ಲಿ ಪರಿಣಿತರು. "ವಿಜಯೀಂದ್ರರಾಮ" ಎಂಬ ಅಂಕಿತದಲ್ಲಿ ಇವರು ಕನ್ನಡ ಕೀರ್ತನೆಗಳನ್ನು ರಚಿಸಿ ಹರಿದಾಸ ಸಾಹಿತ್ಯವನ್ನು ಬೆಳೆಸಿದರೆಂದು ವಿದ್ವಾಂಸರು ಭಾವಿಸುತ್ತಾರೆ. ವಿಜಯೀಂದ್ರತೀರ್ಥರದ್ದೆನ್ನಲಾದ ಎರಡು ಕೀರ್ತನೆ, ಎರಡು ಸುಳಾದಿ ಒಂದು ಉಗಾಭೋಗ ಮಾತ್ರ ದೊರೆತಿದೆ. ತಮ್ಮ ವಿದ್ಯಾಗುರುಗಳಾದ ವ್ಯಾಸತೀರ್ಥರನ್ನು ಒಂದು ವಿಚಿತ್ರ ಮೇಘಕ್ಕೆ ಹೋಲಿಸಿರುವ ಕೀರ್ತನೆ ವಿಜಯೀಂದ್ರರ ಚಿತ್ರಕ ಶಕ್ತಿಯನ್ನು ಪರಿಚಯಿಸುತ್ತದೆ. (ಕೀ. ೪). ವ್ಯಾಸರಾಜರೆಂಬ ವಿಚಿತ್ರ ಮೇಘದ ಆಗಮನದಿಂದ ಲೋಕಕ್ಕೆ ಆದ ಉಪಕಾರವನ್ನಿಲ್ಲಿ ಸ್ಮರಿಸಿದ್ದಾರೆ. ಸೀತೆಯ ಮುಖದ ಚೆಲ್ವಿಕೆಯನ್ನು ಕಂಡು ನಾಚಿದ ಚಂದ್ರ ರಾತ್ರಿಯ ಹೊತ್ತು

ಸಂಚರಿಸುವ "ನಿಶಾಚರ"ನಾದ ಎಂದು ಮತ್ತೊಂದು ಕೀರ್ತನೆ ವಿವರಿಸುತ್ತದೆ. ಏಳು ನುಡಿಗಳ ರಾಮದೇವರ ಸುಳಾದಿ ರಾಮಾವತಾರಕ್ಕೆ ಸಂಬಂಧಿಸಿದ್ದು (ಕೀ.೩).

ಹರಿದಾಸ ಪಂಥವನ್ನು ಪೋಷಿಸಿದ ಮಠಾಧಿಪತಿಗಳಲ್ಲಿ ವಿಜಯೀಂದ್ರರೂ ಒಬ್ಬರು. ಅವರಿಂದ ರಚಿತವಾಗಿರಬಹುದಾದ ಕನ್ನಡ ಕೃತಿಗಳ ಶೋಧನೆಯಾದರೆ ಹರಿದಾಸ ಸಾಹಿತ್ಯಕ್ಕೆ ಇವರು ನೀಡಿದ ಕೊಡುಗೆಯನ್ನು ವಿಶ್ಲೇಷಿಸಬಹುದು.

ಶ್ರೀ ರಾಘವೇಂದ್ರತೀರ್ಥರು (೧೫೯೬–೧೬೭೧)

ಮಂತ್ರಾಲಯದ ಗುರುಸಾರ್ವಭೌಮರೆಂದು ಅಗಮ್ಯ ಮಹಿಮರೆಂದು ಖ್ಯಾತರಾದವರು ಶ್ರೀ ರಾಘವೇಂದ್ರಯತಿಗಳು. ಇವರ ಪೂರ್ವಾಶ್ರಮದ ಹೆಸರು ವೆಂಕಣ್ಣಭಟ್ಟ. ವೆಂಕಣ್ಣಭಟ್ಟರ ಜನ್ಮಸ್ಥಳ ಕಂಚಿ ಬಳಿಯ ಭುವನಗಿರಿ. ಇವರ ತಂದೆ ತಿಮ್ಮಣ್ಣಭಟ್ಟ. ತಾಯಿ ಗೋಪಮ್ಮ. ಇವರು ಗೌತಮ ಗೋತ್ರದ ಅರವತ್ತೊಕ್ಕಲಿನ ಮಾಧ್ವ ಬ್ರಾಹ್ಮಣರು.

ವಿಜಯನಗರದ ಪತನಾನಂತರ ರಾಜಾಶ್ರಯ ಪಡೆದಿದ್ದ ಅನೇಕ ಪಂಡಿತರು ದಿಕ್ಕೆಟ್ಟು ಬೇರೆ ಬೇರೆ ಕಡೆ ವಲಸೆ ಹೋದರು. ಹೀಗೆ ವಲಸೆ ಹೋಗಿ ಕುಂಭಕೋಣದ ವಿಜಯೀಂದ್ರತೀರ್ಥರಲ್ಲಿ ಆಶ್ರಯ ಪಡೆದ ವಿದ್ವಾಂಸರಲ್ಲಿ ಕನಕಾಚಲಭಟ್ಟರು ಎನ್ನುವವರೊಬ್ಬರು. ಕನಕಾಚಲಭಟ್ಟರ ಮಗ ತಿಮ್ಮಣ್ಣಭಟ್ಟ ವಿಜಯೀಂದ್ರರ ಶಿಷ್ಯನಾಗಿ ಶಾಸ್ತ್ರ ಸಂಗೀತಗಳೆರಡರಲ್ಲೂ ದೊಡ್ಡ ಪಂಡಿತನಾಗಿದ್ದ. ವೀಣಾವಾದನದಲ್ಲಿ ನಿಪುಣನಾಗಿದ್ದ. ಕುಂಭಕೋಣದ ಮಾಂಡಲಿಕರಿಂದಲೂ, ತಂಜಾವೂರಿನ ಅರಸರಿಂದಲೂ ರಾಜಮನ್ನಣೆಯನ್ನು ಪಡೆದಿದ್ದ. ಕಂಚಿ ಬಳಿಯ ಭುವನಗಿರಿಯಲ್ಲಿ ನೆಲೆಸಿ ಪಾಠಪ್ರವಚನಗಳಲ್ಲಿ ನಿರತನಾಗಿ ವೀಣಾ ತಿಮ್ಮಣ್ಣಭಟ್ಟರೆಂದು ಖ್ಯಾತನಾಗಿದ್ದ. ತಿಮ್ಮಣ್ಣಭಟ್ಟರ ಪತ್ನಿ ಗೋಪಮ್ಮ. ಇವರಿಗೆ ವೆಂಕಮ್ಮ, ಗುರುರಾಜ ಮತ್ತು ವೆಂಕಣ್ಣಭಟ್ಟ ಮೂರು ಮಂದಿ ಮಕ್ಕಳು. ವೆಂಕಣ್ಣಭಟ್ಟನು ತನ್ನ ತಂದೆಯಂತೆಯೇ ಶಾಸ್ತ್ರ, ಸಂಗೀತ, ವೀಣಾವಿದ್ಯೆಗಳಲ್ಲಿ

ಪಾರಂಗತನಾಗಿದ್ದ. ಮದುರೆಯ ಲಕ್ಷ್ಮೀನರಸಿಂಹಾಚಾರ್ಯರಲ್ಲಿ ವ್ಯಾಸಂಗ ಮಾಡಿ ತರ್ಕ, ವೇದಾಂತ, ವ್ಯಾಕರಣ, ಶಾಸ್ತ್ರಗಳಲ್ಲಿ ಮಹಾಪಂಡಿತನೆನಿಸಿಕೊಂಡ. ಮುಂದೆ ಕುಂಭಕೋಣದ ಸುಧೀಂದ್ರತೀರ್ಥ ಸ್ವಾಮಿಗಳಲ್ಲಿ ವಿದ್ಯಾಭ್ಯಾಸ ಮಾಡುವಾಗ ಗುರುಗಳು ಪಾಠ ಹೇಳಿದ ಶಾಸ್ತ್ರ ಗ್ರಂಥಗಳ ಪ್ರಮೇಯಗಳನ್ನು ಸಮರ್ಥಿಸಿ "ಪರಿಮಳ" ಎಂಬ ಗ್ರಂಥ ರಚಿಸಿದ. ಸುಧೀಂದ್ರತೀರ್ಥರು ಪರಿಮಳ ಗ್ರಂಥದ ಮಹತ್ವವನ್ನು ಪ್ರಶಂಸೆ ಮಾಡಿ ವೆಂಕಣ್ಣಭಟ್ಟರಿಗೆ "ಪರಿಮಳಾಚಾರ್ಯ" ಎಂಬ ಬಿರುದನ್ನು ನೀಡಿದರು. ವೆಂಕಣ್ಣಭಟ್ಟರ ಪಾಂಡಿತ್ಯ, ವ್ಯಾಕರಣ, ವಿದ್ವತ್ತು, ಇವುಗಳಿಂದ ಸುಪ್ರೀತರಾಗಿ "ಮಹಾಭಾಷ್ಯಾಚಾರ್ಯ" ಎಂಬ ಬಿರುದನ್ನು ದಯಪಾಲಿಸಿದರು. ವಿದ್ಯಾಭ್ಯಾಸವನ್ನು ಮುಗಿಸಿ ವೆಂಕಣ್ಣಭಟ್ಟರು ಭುವನಗಿರಿಗೆ ಹಿಂದಿರುಗಿದರು. ಆ ವೇಳೆಗೆ ಅವರಿಗೆ ಸರಸ್ವತಿ ಎಂಬ ಕನ್ಯೆಯೊಡನೆ ವಿವಾಹವೂ ಆಗಿತ್ತು.

ವೇದ, ಶಾಸ್ತ್ರ, ಸಂಗೀತ, ಕಾವ್ಯ, ವೀಣಾವಾದನ, ಇವೆಲ್ಲದರಲ್ಲಿ ನಿಪುಣರಾಗಿದ್ದರೂ ದಾರಿದ್ರ್ಯ ಮಾತ್ರ ವೆಂಕಣ್ಣಭಟ್ಟರಿಂದ ದೂರವಾಗಿರಲಿಲ್ಲ. ಜೀವನ ನಿರ್ವಹಣೆಗೂ ಕಷ್ಟವಾಗಿ ಮತ್ತೆ ಕುಂಭಕೋಣಕ್ಕೆ ಬಂದು ಗುರುಗಳನ್ನು ಆಶ್ರಯಿಸಿದರು. ಮಠದಲ್ಲಿ ಪಾಠ ಪ್ರವಚನಗಳನ್ನು ಮಾಡಿಕೊಂಡು ಸಂಸಾರ ನಿರ್ವಹಿಸಿದರು. ೧೬೨೩ರ ರುಧಿರೋದ್ಗಾರಿ ಸಂವತ್ಸರದಲ್ಲಿ ಸುಧೀಂದ್ರತೀರ್ಥರಿಂದ ಸನ್ಯಾಸ ಸ್ವೀಕರಿಸಿ ರಾಘವೇಂದ್ರತೀರ್ಥ ಎಂಬ ಹೆಸರಿನಿಂದ ಅಭಿಷಿಕ್ತರಾದರು.

ಆದವಾನಿಯ ನವಾಬನ ದಿವಾನನಾಗಿದ್ದ ವೆಂಕಣ್ಣನೆಂಬ ಭಕ್ತನ ಮೂಲಕ ಈಗಿನ ಮಂತ್ರಾಲಯ ಪ್ರದೇಶವನ್ನು ಬಳುವಳಿಯಾಗಿ ಪಡೆದ ರಾಘವೇಂದ್ರರು ತಮ್ಮ ಕಾರ್ಯಕ್ಷೇತ್ರವನ್ನು ಕುಂಭಕೋಣದಿಂದ ಮಂತ್ರಾಲಯಕ್ಕೆ ಸ್ಥಳಾಂತರಿಸಿದರು. ಸಂಸ್ಕೃತದಲ್ಲಿ ಹಲವಾರು ಸ್ವತಂತ್ರ ಗ್ರಂಥಗಳನ್ನು, ಕಾವ್ಯಗಳನ್ನು ರಚಿಸಿದರು. ಬ್ರಹ್ಮಸೂತ್ರ, ಭಗವದ್ಗೀತೆ, ಮತ್ತು ಉಪನಿಷತ್ತುಗಳನ್ನು ಕುರಿತ ಮಧ್ವಾಚಾರ್ಯರ ಭಾಷ್ಯಗಳಿಗೂ, ಜಯತೀರ್ಥರ ಟೀಕೆಗಳಿಗೂ ಟಿಪ್ಪಣಿಗಳನ್ನು ರಚಿಸಿ ಟಿಪ್ಪಣಿಕಾರರು ಎನಿಸಿಕೊಂಡರು. ೧೬೭೧ರ ವಿರೋಧಿ ಕೃತ್ ಸಂವತ್ಸರ ಶ್ರಾವಣ ಬಹುಳ

ಬಿದಿಗೆ ಮಂತ್ರಾಲಯದಲ್ಲೇ ಸಶರೀರ ಬೃಂದಾವನಸ್ಥರಾಗಿ "ರಾಯ" ರೆಂದೇ ಪ್ರಸಿದ್ಧರಾದವರು ರಾಘವೇಂದ್ರರು. ರಾಘವೇಂದ್ರರನ್ನು ಕುರಿತಂತೆ ಕನ್ನಡದಲ್ಲಿ ಸುಮಾರು ೩೦೦ ಕ್ಕೂ ಹೆಚ್ಚು ಗುರುಸ್ತುತಿಗಳು ದೊರೆಯುತ್ತವೆ. ರಾಘವೇಂದ್ರರ ಪ್ರೇರಣೆಯಿಂದಲೇ ಹರಿದಾಸ ಸಾಹಿತ್ಯ ತುಂಗಾತೀರದಲ್ಲಿ ಪುನರುಜ್ಜೀವನವನ್ನು ಪಡೆಯಿತು.

ರಾಘವೇಂದ್ರರು ಕನ್ನಡದಲ್ಲಿ ಕೃತಿಗಳನ್ನು ರಚಿಸಿರಬಹುದಾದರೂ ದೊರೆತಿರುವುದು ಅವರದ್ದೆನ್ನಲಾದ ಒಂದೇ ಒಂದು ಕೀರ್ತನೆ. "ಇಂದು ಎನಗೆ ಗೋವಿಂದ" ಎಂಬ ಆತ್ಮಶೋಧನೆಯ ಕೃತಿ "ಧೀರ ವೇಣುಗೋಪಾಲ" ಎಂಬ ಅಂಕಿತದಲ್ಲಿದೆ. ಆದವಾನಿಯ ಪಂಗನಾಮದ ತಿಮ್ಮಣ್ಣದಾಸರ ಅಂಕಿತ "ವೇಣುಗೋಪಾಲವಿಠಲ" "ಇಂದು ಎನಗೆ ಗೋವಿಂದ" ಕೀರ್ತನೆಯನ್ನು ವೇಣುಗೋಪಾಲವಿಠಲಾಂಕಿತದ ಪಂಗನಾಮದ ತಿಮ್ಮಣ್ಣದಾಸರೇ ಬರೆದಿರಬೇಕೆಂಬ ಊಹೆಗಳೂ ಇವೆ. ಒಂದೇ ಸ್ಥಳ, ಒಂದೇ ಕಾಲ, ಹೆಚ್ಚು ಕಡಿಮೆ ಒಂದೇ ಅಂಕಿತ ಇರುವುದರಿಂದ ಈ ಸಂದೇಹ ಮೂಡುತ್ತದೆ. "ವೇಣುಗೋಪಾಲ ವಿಠಲ" "ಧೀರ ವೇಣುಗೋಪಾಲ" ಈ ಅಂಕಿತಗಳಲ್ಲಿ ಸಾಮ್ಯವಿದ್ದರೂ ಇವು ಬೇರೆ ಬೇರೆ ಎಂದು ಪರಿಭಾವಿಸಿ ಈ ಕೀರ್ತನೆಯನ್ನು ರಾಘವೇಂದ್ರತೀರ್ಥರ ರಚನೆಯೆಂದೇ ಸ್ವೀಕರಿಸಬಹುದು.

ಶ್ರೀ ವ್ಯಾಸತತ್ವಜ್ಞತೀರ್ಥರು (೧೭೦೪–೧೮೦೦)

"ವಾಸುದೇವವಿಠಲ" ಎಂಬ ಅಂಕಿತದಿಂದ ಕನ್ನಡದಲ್ಲಿ ಕೀರ್ತನೆಗಳನ್ನು ರಚಿಸಿರುವ ವ್ಯಾಸತತ್ವಜ್ಞತೀರ್ಥರ ಪೂರ್ವಾಶ್ರಮದ ಹೆಸರು 'ವೆಂಕಟರಾಮಾಚಾರ್ಯ'. ಇವರ ಜನ್ಮಸ್ಥಳ ಗದ್ವಾಲ ಸಂಸ್ಥಾನಕ್ಕೆ ಸೇರಿದ "ಐಜಿ" ಎಂಬ ಗ್ರಾಮ. ಇವರ ಪೂರ್ವಿಕರು ಮೂಲತಃ ರಾಯಚೂರು ಜಿಲ್ಲೆಯ ದಿನ್ನೆ ಎಂಬ ಗ್ರಾಮದವರು. ದಿನ್ನೆ ಗ್ರಾಮದ ಪಂಡಿತ ಜನಾರ್ಧನಾಚಾರ್ಯ ಎಂಬುವರು ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡಿ ಬಂದು ಗದ್ವಾಲದ ರಾಜರ

ವಿದ್ವತ್ ಸಭೆಯಲ್ಲಿ ರಾಜಮನ್ನಣೆಗೆ ಪಾತ್ರರಾಗಿದ್ದವರು. ಐಜಿ ಗ್ರಾಮದ ಜನರ ಪ್ರಾರ್ಥನೆಯಂತೆ ಜನಾರ್ಧನಾಚಾರ್ಯರು ಐಜಿ ಗ್ರಾಮದಲ್ಲಿ ನೆಲೆಸಿದರು. ಉತ್ತಮ ಪಂಡಿತರು, ಘನ ವಿದ್ವಾಂಸರು ಎನಿಸಿಕೊಂಡು ಅನೇಕ ಶಿಷ್ಯರಿಗೆ ಪಾಠ ಹೇಳುತ್ತಿದ್ದರು. ಈ ಜನಾರ್ಧನಾಚಾರ್ಯರ ಮಕ್ಕಳು ವೆಂಕಟನರಸಿಂಹಾಚಾರ್ಯರು. ತಮ್ಮ ತಂದೆಯವರ ಬಳಿಯೇ ವಿದ್ಯಾಭ್ಯಾಸ ಮಾಡಿ ಶಾಸ್ತ್ರ ಪಾಂಡಿತ್ಯವನ್ನು ಸಂಪಾದಿಸಿ ಶ್ರೇಷ್ಠ ದರ್ಜೆಯ ವಿದ್ವಾಂಸರಾಗಿದ್ದರು. ಗದ್ವಾಲ ಸಂಸ್ಥಾನದಿಂದ ರಾಜಮನ್ನಣೆ ಪಡೆದಿದ್ದರು. ಆಪಸ್ಥಂಭ ಶಾಖೆಯ ಕೌಶಿಕ ಗೋತ್ರಜರಾದ ವೆಂಕಟನರಸಿಂಹಾಚಾರ್ಯರ ಏಕೈಕ ಪುತ್ರ ವೆಂಕಟರಾಮಾಚಾರ್ಯರು.

ವೆಂಕಟರಾಮಾಚಾರ್ಯರು ಜನಿಸಿದ್ದು ೧೭೭೪ ರಲ್ಲಿ. ಎಳೆಯ ವಯಸ್ಸಿನಲ್ಲಿ ತುಂಬಾ ಮುಗ್ಧನಂತೆ ವರ್ತಿಸುತ್ತಾ, ಯಾವ ವಿಷಯದಲ್ಲೂ ಆಸಕ್ತಿಯಿಲ್ಲದೆ ಜಡಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದ ಮಗನ ನಡವಳಿಕೆ ತಂದೆತಾಯಿಗಳಿಗೆ ಆತಂಕವನ್ನುಂಟುಮಾಡಿತ್ತು. ಮದುವೆಯಾದ ಮೇಲಾದರೂ ಮಗನ ಸ್ವಭಾವ ಬದಲಾಗಬಹುದೆಂದು ತಂದೆತಾಯಿಗಳು ಭಾವಿಸಿದರು. ಹದಿನೆಂಟನೆಯ ವಯಸ್ಸಿಗೆ ಮದುವೆ ಮಾಡಿದರು. ಒಂದು ಹೆಣ್ಣು ಮಗುವಿನ ತಂದೆಯಾದ ಮೇಲೂ ತಮ್ಮ ಮಗನ ಮುಗ್ಧಭಾವ ಬದಲಾಗಲಿಲ್ಲ. ತಂದೆ ತಾಯಿಗಳು ಹೆಚ್ಚಿನ ಚಿಂತೆಗೆ ಒಳಗಾದರು. ಐಜಿ ಗ್ರಾಮಕ್ಕೆ ಸಮೀಪದಲ್ಲೇ ಇದ್ದ ಉತ್ತನೂರು ಗ್ರಾಮದಲ್ಲಿ ಗೋಪಾಲದಾಸರು ವಾಸವಾಗಿದ್ದರು. ಗೋಪಾಲದಾಸರು ಜೋತಿಷ್ಯ, ಭವಿಷ್ಯಗಳನ್ನು ಹೇಳುವುದರಲ್ಲಿ ಆ ಕಾಲದಲ್ಲಿ ಪ್ರಸಿದ್ಧರಾಗಿದ್ದರು. ವೆಂಕಟ ನರಸಿಂಹಾಚಾರ್ಯರು ತಮ್ಮ ಪತ್ನಿಯ ಸೂಚನೆಯಂತೆ ಮಗನನ್ನು ಕರೆದುಕೊಂಡು ಉತ್ತನೂರಿಗೆ ಬಂದರು. ತಮ್ಮ ಮಗನ ವರ್ತನೆಯನ್ನು ವಿವರಿಸಿ ಅವನ ಭವಿಷ್ಯದ ಬಗ್ಗೆ ಪ್ರಶ್ನಿಸಿದರು. ಮಗನ ಬಗ್ಗೆ ಚಿಂತಿಸುವ ಅಗತ್ಯವಿಲ್ಲವೆಂದು ಗೋಪಾಲದಾಸರು ಭರವಸೆ ನೀಡಿದರು. "ಪ್ರತಿನಿತ್ಯವೂ ಮಗನನ್ನು ಜೊತೆಯಲ್ಲಿಯೇ ಕೂಡಿಸಿಕೊಂಡು ಎಲ್ಲಾ ಶಾಸ್ತ್ರಗ್ರಂಥಗಳನ್ನು ಪಾರಾಯಣ ಮಾಡುತ್ತಾ ಬನ್ನಿ. ಸ್ವಯಂ ಪ್ರತಿಭೆಯಿಂದ ಅವನು ವಿದ್ಯಾ-ಪಾರಂಗತನಾಗುತ್ತಾನೆ" ಎಂದು ತಿಳಿಸಿದರು. ಅವರ ಸಲಹೆ ಸೂಚನೆಗಳನ್ನು

ಅನುಸರಿಸಿ ಆಚಾರ್ಯರು ಪ್ರತಿನಿತ್ಯವೂ ಮಗನ ಎದುರಿನಲ್ಲಿ ಶಾಸ್ತ್ರಗ್ರಂಥಗಳನ್ನು ಪಠಣ ಮಾಡತೊಡಗಿದರು. ಅನತಿ ಕಾಲದಲ್ಲಿಯೇ ವೆಂಕಟರಾಮಾಚಾರ್ಯರ ಜಡತೆ ಮಾಯವಾಯಿತು. ಜ್ಞಾನಜ್ಯೋತಿ ಬೆಳಗತೊಡಗಿತು. ಪ್ರತಿಭಾ ಸಂಪನ್ನರಾಗಿ ವೇದ, ವೇದಾಂಗ ಶಾಸ್ತ್ರ ಪಂಡಿತರೆನಿಸಿಕೊಂಡರು. ದ್ವೈತ ಸಿದ್ಧಾಂತಲ್ಲಿ ವಿಚಾರಶೀಲ ಬುದ್ಧಿಯನ್ನು ಬೆಳೆಸಿಕೊಂಡು ಅನೇಕ ಶಿಷ್ಯರನ್ನು ಸಂಪಾದಿಸಿ-ಕೊಂಡರು. ಇವರ ಪಾಂಡಿತ್ಯ ಮತ್ತು ಪಾಠ ಪ್ರವಚನಗಳ ಶ್ರೇಷ್ಠತೆಯನ್ನು ಅರಿತು ದೂರದ ಊರುಗಳಿಂದಲೂ ಹಲವಾರು ಮಂದಿ ಶಿಷ್ಯವೃತ್ತಿಯನ್ನು ಅರಸಿ ಬಂದರು. ತಮ್ಮ ಪಾಠ ಪ್ರವಚನಗಳಿಗೆ ಸೂಕ್ತವಾದ ಪ್ರಶಾಂತ ಸ್ಥಳವನ್ನು ಅಪೇಕ್ಷಿಸಿ ವೆಂಕಟರಾಮಾಚಾರ್ಯರು ಐಜಿಯನ್ನು ಬಿಟ್ಟು ಬೀಚಪಲ್ಲಿ ಎಂಬ ಗ್ರಾಮಕ್ಕೆ ಬಂದು ನೆಲೆಸಿದರು. ಐಜಿ ಗ್ರಾಮದಿಂದ ಬಂದವರಾದ ಕಾರಣ ಜನ ಇವರನ್ನು ಐಜಿ ಆಚಾರ್ಯರೆಂದೇ ಕರೆಯುತ್ತಿದ್ದರು. "ಬೀಚಪಲ್ಲಿ" ಗದ್ವಾಲಕ್ಕೆ ಸಮೀಪದಲ್ಲಿ ಕೃಷ್ಣಾನದಿ ತೀರದಲ್ಲಿದೆ. ವ್ಯಾಸರಾಜ ಯತಿಗಳು ಪ್ರತಿಷ್ಠಾಪಿಸಿದ ಪ್ರಾಣದೇವರ ದೇವಾಲಯವಿದೆ. ಈ ಪ್ರಾಣದೇವರ ಸನ್ನಿಧಿಯಲ್ಲಿ ತಮ್ಮ ದಿನನಿತ್ಯದ ಜಪಾನುಷ್ಠಾನ, ಪಾಠ ಪ್ರವಚನ ಇವುಗಳಲ್ಲಿ ನಿರತರಾಗಿ ವೆಂಕಟರಾಮಾಚಾರ್ಯರು ಸಂಸ್ಕೃತದಲ್ಲಿ ಅನೇಕ ಶಾಸ್ತ್ರಗ್ರಂಥಗಳನ್ನು ರಚಿಸಿದರು. ನೂರಾರು ಮಂದಿ ಶಿಷ್ಯರನ್ನು ಸಂಪಾದಿಸಿದರು. ಇದೇ ಅವಧಿಯಲ್ಲಿ "ವಾಸುದೇವವಿಠಲ" ಎಂಬ ಅಂಕಿತದಿಂದ ಕನ್ನಡದಲ್ಲಿ ಪದ ಸುಳಾದಿಗಳನ್ನು ರಚಿಸಿದರು. ಹನ್ನೆರಡು ವರ್ಷಗಳ ಕಾಲ ಬೀಚಪಲ್ಲಿಯಲ್ಲಿ ನೆಲೆಸಿ ಅನಂತರ ತುಂಗಭದ್ರಾ ತೀರದ ವೇಣೀಸೋಮಪುರಕ್ಕೆ ಆಗಮಿಸಿದರು. ಗದ್ವಾಲದ ರಾಜನಾದ ಸೋಮಭೂಪಾಲ ಆಚಾರ್ಯರಿಗೆ ಅಗತ್ಯವಾದ ವಸತಿ ಸೌಕರ್ಯವನ್ನು ಕಲ್ಪಿಸಿಕೊಟ್ಟ. ಗ್ರಂಥರಚನೆ, ಶಾಸ್ತ್ರಗ್ರಂಥಗಳ ಪಾಠಪ್ರವಚನ, ದೇವತಾರ್ಚನೆ ಇವುಗಳಲ್ಲಿ ನಿರತರಾದ ವೆಂಕಟರಾಮಾಚಾರ್ಯರು ವೇಣೀಸೋಮಪುರವನ್ನು ಪಂಡಿತರ ಅಗ್ರಹಾರವನ್ನಾಗಿ ಮಾಡಿದರು. ಈ ನಡುವೆ ಇವರಿಗೆ ಪತ್ನೀ ವಿಯೋಗವಾಗಿ ಎರಡನೆಯ ಲಗ್ನವನ್ನು ಮಾಡಿಕೊಂಡರು.

ಐಜಿ ಆಚಾರ್ಯರಲ್ಲಿ ಶಾಸ್ತ್ರಾಭ್ಯಾಸ ಮಾಡಲು ಗೋಪಾಲದಾಸರ ತಮ್ಮಂದಿರಾದ ಸೀನಪ್ಪದಾಸರು (ಗುರುಗೋಪಾಲವಿಠಲ) ದಾಸಪ್ಪದಾಸರು (ವರದ ಗೋಪಾಲವಿಠಲ) ಮತ್ತು ರಂಗಪ್ಪದಾಸರು (ತಂದೆಗೋಪಾಲವಿಠಲ) ವೇಣೀಸೋಮಪುರಕ್ಕೆ ಬಂದು ನೆಲೆಸಿದರು. ಅರಣ್ಯಕಾಚಾರ್ಯ ಅಥವ ಅಡವಿ ಆಚಾರ್ಯರೆಂದು ಪ್ರಸಿದ್ಧರಾದ ವಿಷ್ಣುತೀರ್ಥರು ಕೂಡ ಐಜಿ ಆಚಾರ್ಯರ ಶಿಷ್ಯರಾದರು. ಆಚಾರ್ಯರ ಬಳಿ ಆಗ ಮುನ್ನೂರು ಮಂದಿ ಶಿಷ್ಯರು ಅಭ್ಯಾಸ ಮಾಡುತ್ತಿದ್ದರಂತೆ. ಐಜಿ ಆಚಾರ್ಯರ ಕೀರ್ತಿ ಎಲ್ಲಾ ಕಡೆಗಳಲ್ಲಿ ವ್ಯಾಪಿಸಿತ್ತು. ಅವರ ಶಿಷ್ಯ ಪ್ರಶಿಷ್ಯರ ಶಾಖೋಪಶಾಖೆಗಳು ಬೆಳೆಯುತ್ತಿದ್ದವು. ಶಿಷ್ಯರ ಪಾಲಿಗೆ ಅವರು ಕಲ್ಪವೃಕ್ಷದಂತೆ ವಿರಾಜಮಾನರಾಗಿದ್ದರೆಂದು ವಿಷ್ಣುತೀರ್ಥರು ಸ್ತುತಿಸುತ್ತಾರೆ.

ದಿಕ್ ಪ್ರಾಂತಾ ತತ ಪುಣ್ಯಕೀರ್ತಿ ಸುಲತಾ
ಸಂಶೋಭಿತಸ್ಸಂತತಂ
ನಾನಾಶಿಷ್ಯ ತದೀಯ ಶಿಷ್ಯವಿಲಸ
ಚ್ಛಾಖೋಪ ಶಾಖಾನ್ವಿತಃ ॥
ಐಜೀ ವೆಂಕಟನಾರಸಿಂಹದಯಿತಾ
ದಿವ್ಯಾಲವಾಲೋದ್ಭವಃ॥
ಸಂಭೂಯಾತ್ಸಕಲೇಷ್ಟದೋಮಮಸದಾ
ರಾಮಾರ್ಯ ಕಲ್ಪದ್ರುಮಃ॥

ವೇಣೀಸೋಮಪುರದ ಸಮೀಪ "ವಲ್ಲೂರು" ಎಂಬ ಗ್ರಾಮಕ್ಕೆ ಆಚಾರ್ಯರು ಆಗಾಗ ಪ್ರವಚನಕ್ಕೆ ಹೋಗುತ್ತಿದ್ದರು. ಸ್ವಪ್ನ ಸೂಚನೆಯಂತೆ ವಲ್ಲೂರು ಕೆರೆಯ ತೂಬಿನ ಕೆಳಗೆ ದೊರೆತ ಎರಡು ಗೋಪಾಲಕೃಷ್ಣ ವಿಗ್ರಹಗಳಲ್ಲಿ ಒಂದನ್ನು ವಲ್ಲೂರಿನಲ್ಲಿ ಮತ್ತೊಂದನ್ನು ವೇಣೀಸೋಮಪುರದಲ್ಲಿ ಸ್ಥಾಪಿಸಿದರು. ಗದ್ವಾಲ ರಾಜರ ಸಹಕಾರದಿಂದ ದೇವಸ್ಥಾನವನ್ನು ನಿರ್ಮಿಸಿದರು. ಆಚಾರ್ಯರ ಶಿಷ್ಯ ಮಂಡಲಿಗೆ, ವಿದ್ವಜ್ಜನರಿಗೆ, ಹರಿದಾಸರಿಗೆ ಆಶ್ರಯಸ್ಥಾನವಾದ ವೇಣುಗೋಪಾಲನ ದೇವಾಲಯ ಒಂದು ಹರಿದಾಸರ ಕೇಂದ್ರವೇ ಆಯಿತು. "ನಂದವ್ರಜ ದ್ವಾರಕಾಪುರಿ

ಬಿಟ್ಟು ಬಂದದ್ದೇ ಬಹು ಲಾಭವು " ಎಂಬ ಕೀರ್ತನೆಯಲ್ಲಿ ಗುರುಗೋಪಾಲ ದಾಸರು ವೇಣೀಸೋಮಪುರಕ್ಕೆ ಬಂದು ನೆಲಸಿದ ಪರಮಾತ್ಮನ ಬಾಲಲೀಲೆಗಳನ್ನು ಚಿತ್ರಿಸಿದ್ದಾರೆ. ವೇಣೀಸೋಮಪುರ ಪರಮಾತ್ಮನ ವಾಸಸ್ಥಾನಕ್ಕೆ ಯೋಗ್ಯವಾದ ಅತ್ಯಂತ ರಮ್ಯ ಸ್ಥಳವೆಂದು ತಿಳಿಸಿ ಸತಿಸುತ ಪರಿವಾರ ಜನರೊಂದಿಗೆ ಸ್ಥಿರವಾಗಿ ನೆಲಸಬೇಕೆಂದು, ಗುರುವರ್ಯ ವೆಂಕಟರಾಮಾಚಾರ್ಯರಿಂದ ಪರಿಪರಿಯ ಪೂಜೆಯನ್ನು ಸ್ವೀಕರಿಸಬೇಕೆಂದು ಪ್ರಾರ್ಥಿಸಿದ್ದಾರೆ. "ಐಜಿ ಆಚಾರ್ಯರು ಗುಣವಂತರು, ಅವರು ಮಣೆಗಾರರಂತೆ ದೇವರನ್ನು ಅದು ಇದು ಕೊಡು ಎಂದು ಬೇಡುವವರಲ್ಲ, ಆದರೆ ಋಣತ್ರಯಗಳಲ್ಲಿ ಪಿತೃಋಣ ಮಾತ್ರ ಹಾಗೇ ಉಳಿದಿದೆ. ಆದ್ದರಿಂದ ಅವರಿಗೆ ಪುತ್ರಸಂತಾನವನ್ನು ನೀಡಿ ಪಿತೃಋಣವನ್ನು ಪರಿಹರಿಸು" ಎಂದು ಗುರುಗೋಪಾಲದಾಸರು ವೇಣುಗೋಪಾಲನಲ್ಲಿ ವಿಜ್ಞಾಪಿಸಿಕೊಂಡಿದ್ದಾರೆ. ಆಚಾರ್ಯರಿಗೆ ನಡುವಯಸ್ಸು ಮೀರುತ್ತಾ ಬಂದಿತ್ತು. ಎರಡನೆಯ ಪತ್ನಿಯಲ್ಲೂ ಪುತ್ರರು ಜನಿಸಲಿಲ್ಲ. ಪುತ್ರ ಸಂತಾನದ ಅಪೇಕ್ಷೆ ಪ್ರಬಲವಾಗತೊಡಗಿತು (ಕೀ. ೯೩)

ವೆಂಕಟರಾಮಾಚಾರ್ಯರ ಮೊದಲ ಪತ್ನಿಗೆ ಲಕ್ಷಮ್ಮ ಎಂಬ ಹೆಣ್ಣು ಮಗಳಿದ್ದಳು. ಆಕೆಗೆ ಯುಕ್ತ ವಯಸ್ಸಿನಲ್ಲಿ ಲಗ್ನವಾಗಿ ಇಬ್ಬರು ಮಕ್ಕಳು ಜನಿಸಿದ್ದರು. ಅವರಲ್ಲಿ ಗೋಪಾಲಕೃಷ್ಣಾಚಾರ್ಯ ಎಂಬ ಮಗನನ್ನು ಆಚಾರ್ಯರು ದತ್ತು ಸ್ವೀಕರಿಸಿದರು. ಗೋಪಾಲಕೃಷ್ಣಾಚಾರ್ಯರೂ ಕೂಡ ತಮ್ಮ ದತ್ತು ತಂದೆಯಂತೆಯೇ ಭಗವದ್ಭಕ್ತರು, ಪಂಡಿತೋತ್ತಮರು ಆಗಿದ್ದರು. ಅನೇಕ ಶಿಷ್ಯರಿಗೆ ಶಾಸ್ತ್ರಪಾಠವನ್ನು ಹೇಳುತ್ತಿದ್ದರು. "ತಂದೆ ವಾಸುದೇವವಿಠಲ" ಎಂಬ ಅಂಕಿತದಲ್ಲಿ ಕೀರ್ತನೆಗಳನ್ನು ರಚಿಸಿದ್ದಾರೆ.

ತಮ್ಮ ಎಪ್ಪತ್ತಾರನೆಯ ವಯಸ್ಸಿನಲ್ಲಿ ಐಜಿ ಆಚಾರ್ಯರು ವಾನಪ್ರಸ್ಥಾಶ್ರಮ ವನ್ನು ಸ್ವೀಕರಿಸಿದರು. ತುಂಗಭದ್ರಾನದಿಯ ದಂಡೆಯಲ್ಲಿ ಕುಟೀರವನ್ನು ನಿರ್ಮಿಸಿ ಗೆಡ್ಡೆಗೆಣಸುಗಳನ್ನು ಸೇವಿಸುತ್ತಾ ಜೀವಿಸಿದರು. ಪಾಠ ಪ್ರವಚನಗಳ ಜೊತೆಗೆ

ದೇವತಾ ಕಾರ್ಯಗಳನ್ನು ಮುಂದುವರಿಸಿದರು. ಅದೇ ಕಾಲದಲ್ಲಿ ರಾಘವೇಂದ್ರ ಮಠದ ಪೀಠಾಧಿಪತಿಗಳಾಗಿದ್ದ ಭುವನೇಂದ್ರತೀರ್ಥರು ವೇಣೀಸೋಮಪುರಕ್ಕೆ ಬಂದರು. ಆಚಾರ್ಯರು ಶ್ರೀಪಾದಂಗಳನ್ನು ಭೇಟಿಯಾಗಿ ತಮಗೆ ಯತ್ಯಾಶ್ರಮವನ್ನು ನೀಡಲು ಪ್ರಾರ್ಥಿಸಿದರು. ಶ್ರೀಪಾದಂಗಳ ಸೂಚನೆಯಂತೆ ಭಾಗವತ ಸಪ್ತಮ ಸ್ಕಂದಕ್ಕೆ "ಮಂದನಂದಿನಿ" ಎಂಬ ಟೀಕೆಯನ್ನು ರಚಿಸಿ ಗುರುಗಳಿಗೆ ಸಮರ್ಪಿಸಿದರು. ಭುವನೇಂದ್ರತೀರ್ಥರು ತತ್ವಜ್ಞರಾದ ಆಚಾರ್ಯರಿಗೆ "ವ್ಯಾಸತತ್ವಜ್ಞತೀರ್ಥ" ಎಂಬ ಅನ್ವರ್ಥ ನಾಮಕರಣ ಮಾಡಿ ಯತ್ಯಾಶ್ರಮ ನೀಡಿದರು.

> "ಕವಿ ಭಿರೀಡಿತ ಮಹಾಮುನಿ ವ್ಯಾಸಕೃತ ಸುಭಾ-
> ಗವತಾದಿ ಗ್ರಂಥ ವ್ಯಾಖ್ಯಾನ ನೋಡಿ ।
> ಭುವನೇಂದ್ರರಾಯ ತಾ ಕರುಣದಲಿ ತುರಿಯಾಶ್ರ
> ಮವನಿತ್ತು ವ್ಯಾಸ ತತ್ವಜ್ಞರಹುದೆಂದ ॥ "

ಎಂದು ಜಗನ್ನಾಥದಾಸರು ಸ್ತುತಿಸಿದ್ದಾರೆ. ಸನ್ಯಾಸವನ್ನು ಸ್ವೀಕರಿಸಿದ ಮೇಲೆ ಪೀಠಾಧಿಪತ್ಯವನ್ನು ವಹಿಸಿಕೊಳ್ಳಲು ಅಪೇಕ್ಷೆಪಡದ ವ್ಯಾಸತತ್ವಜ್ಞರು ಕೆಲವು ಕಾಲ ತಮ್ಮ ಗುರುಗಳ ಸನ್ನಿಧಿಯಲ್ಲಿ ಮಂತ್ರಾಲಯದಲ್ಲಿ ವಾಸ ಮಾಡಿದರು. ಅನಂತರ ವೇಣೀಸೋಮಪುರಕ್ಕೆ ಹಿಂತಿರುಗಿದರು. ಪೀಠಾಧಿಪತ್ಯದ ಪದವಿ ಪ್ರತಿಷ್ಠೆಗಳಿಗೆ ಹಂಬಲಿಸದೆ, ವೇಣೀಸೋಮಪುರದ ಪ್ರಶಾಂತ ಪರಿಸರದಲ್ಲಿ ಹರಿದಾಸರ ಸಂಗದಲ್ಲಿ ಜಪತಪ ಪೂಜಾದಿಗಳಲ್ಲಿ ನಿರತರಾದರು. ಸನ್ಯಾಸಾಶ್ರಮವನ್ನು ಸ್ವೀಕರಿಸಿದಾಗ ವ್ಯಾಸತತ್ವಜ್ಞರಿಗೆ ಸುಮಾರು ಎಪ್ಪತ್ತೆಂಟು ವರ್ಷ ವಯಸ್ಸಾಗಿತ್ತು. "ಏಳು ಮನೆಗಳನ್ನು ಬೇಡುವ ಯತಿಧರ್ಮ" ವನ್ನು ಕೂಡ ಮಾಡಲು ಸಾಧ್ಯವಾಗದ ವೃದ್ಧಾಪ್ಯ ಆವರಿಸಿತ್ತು. "ಏಳಲಾರೆನು ವೃದ್ಧ ಕೇಳಲಾರೆ" ಎಂಬ ಪರಿಸ್ಥಿತಿ ಒದಗಿತ್ತು. ವೈರಾಗ್ಯದ ತುತ್ತತುದಿಗೇರಿದ ಅವರು ಬಯಸಿದ್ದು "ವಾಸುದೇವವಿಠಲನ ಒಲುಮೆ"ಯೊಂದನ್ನು ಮಾತ್ರ.

ವ್ಯಾಸತತ್ವಜ್ಞರು "ಪವಾಡಪುರುಷ"ರೆಂದೇ ಆ ಕಾಲದ ಜನ ನಂಬಿದ್ದರು. ಅವರ ಪೂರ್ವಾಶ್ರಮ ಮತ್ತು ಯತ್ಯಾಶ್ರಮಗಳೆರಡರಲ್ಲೂ ಹಲವಾರು ಪವಾಡಗಳು ಅವರ ಜೀವನ ಚರಿತ್ರೆಯ ಅವಿಭಾಜ್ಯ ಭಾಗಗಳಂತೆ ಹೆಣೆದುಕೊಂಡಿವೆ. ಕನಸಿನಲ್ಲಿ ಕಾಣಿಸಿಕೊಂಡ ವೇಣುಗೋಪಾಲನನ್ನು ವೇಣಿಸೋಮಪುರದಲ್ಲಿ ಪ್ರತಿಷ್ಠಾಪಿಸಿದ್ದು, ಮಗನಿಗೆ ಬಂದ ಅಪಮೃತ್ಯುವನ್ನು ಪರಿಹರಿಸಿದ್ದು, ಅಡವಿ ಆಚಾರ್ಯರಿಗೆ ತೋರಿದ ಅನುಗ್ರಹ, ನೀರಿನ ನರಸಪ್ಪನಿಂದ ವಾಕ್ಯಾರ್ಥ ಮಾಡಿಸಿದ್ದು, ಮುಡಮಾಲಿ ಗ್ರಾಮದ ದೇಸಾಯಿಯ ರೋಗವನ್ನು ನಿವಾರಿಸಿದ್ದು, ತುಂಗಭದ್ರಾ ನದಿಯನ್ನು ಮನೆಯವರೆಗೂ ಬರಮಾಡಿಕೊಂಡದ್ದು, ಗೋಪಾಲಕೃಷ್ಣನ ಸಂದರ್ಶನ ಮಾಡಿ ಹಾಡಿದ್ದು, ಹಂಪೆಯ ವಿರೂಪಾಕ್ಷ ರಥವನ್ನು ರಕ್ಷಿಸಿದ್ದು, ಗದ್ವಾಲ ರಾಜನ ಆಪತ್ತು ಪರಿಹರಿಸಿದ್ದು, ಹೀಗೆ ಹಲವಾರು ಪವಾಡಗಳನ್ನು ವ್ಯಾಸತತ್ವಜ್ಞರ ಜೀವನ ಚರಿತ್ರೆಗೆ ಹೊಂದಿಸಲಾಗಿದೆ. ಅವರು ತೋರಿದರೆನ್ನಲಾದ ಅಸಂಖ್ಯಾತ ಮಹಿಮೆಗಳು ಹೊರನೋಟಕ್ಕೆ ಪವಾಡಗಳಂತೆ ಕಂಡರೂ ಅವರು ಪ್ರತಿಷ್ಠೆಗಾಗಿ ಪ್ರಚಾರ ಮಾಡಿದ್ದವು ಅಲ್ಲ. ತೀರ ಸಹಜವೆಂಬಂತೆ ಅವರು ತೋರಿದ ಕರುಣೆಯು ಪವಾಡಗಳೆನಿಸಿಕೊಂಡವು. ತೊಂಭತ್ತಾರು ವರ್ಷಗಳ ತುಂಬು ಬಾಳು ನಡೆಸಿದ ವ್ಯಾಸತತ್ವಜ್ಞತೀರ್ಥರು ರೌದ್ರಿ ಸಂವತ್ಸರದ ಶ್ರಾವಣ ಬಹುಳ ಅಷ್ಟಮಿ (೧೮೦೦) ಸ್ವರ್ಗಸ್ಥರಾದರೆಂದು ಜಗನ್ನಾಥದಾಸರು ತಿಳಿಸುತ್ತಾರೆ.

ವ್ಯಾಸತತ್ವಜ್ಞರು ತಮ್ಮ ಸಮಕಾಲೀನ ಸಮಾಜದಲ್ಲಿ ಉಚ್ಚಶ್ರೇಣಿಯ ಪಂಡಿತರಾಗಿಯೂ, ದೈವಭಕ್ತರಾಗಿಯೂ, ಯತಿಶ್ರೇಷ್ಠರಾಗಿಯೂ ಮಾನ್ಯತೆ ಪಡೆದಿದ್ದರು.

"ಭೂಮಂಡಲದೊಳಗುಳ್ಳ ಸಕಲ ತೀರ್ಥಸ್ನಾನ
ಹೇಮಾದ್ರಿ ಮೊದಲಾದ ಕ್ಷೇತ್ರಯಾತ್ರೆ
ನೇಮ ಜಪತಪ ವ್ರತಾದಿಗಳ ಮಾಡಿದ ಪುಣ್ಯ
ಈ ಮಹಾತ್ಮರ ಕಂಡ ಮಾತ್ರದಿ ಸಮನಿಸಿತು "

ಎಂದು ಜಗನ್ನಾಥದಾಸರು ಹೇಳಿದ್ದಾರೆ.

"ಚಿಂತಿಸುಪ್ಪರ ಚಿಂತಾರ್ಥಗಳೆಲ್ಲ
ಚಿಂತಾಮಣಿಯಂತೆ ಸಂತೈಸುತಲಿರುವ
ವರದಗೋಪಾವಿಠಲ ಇವರಲಿ ನಿಂತು
ವರವ ಕೊಡುವೆನೆಂದು ಕರೆಯುತಲಿರುವ"

ಎಂದು ವರದ ಗೋಪಾಲವಿಠಲರು ತಿಳಿಸುತ್ತಾರೆ.

ವ್ಯಾಸತತ್ವಜ್ಞರು "ವಾಸುದೇವವಿಠಲ" ಎಂಬ ಅಂಕಿತವನ್ನು ತಮ್ಮ ಪೂರ್ವಾಶ್ರಮದಲ್ಲೇ ಸ್ವೀಕರಿಸಿದ್ದರು. ಸನ್ಯಾಸ ಸ್ವೀಕರಿಸಿದ ಮೇಲೂ ಅದೇ ಅಂಕಿತದಲ್ಲಿ ಕೀರ್ತನೆಗಳ ರಚನೆಯನ್ನು ಮುಂದುವರೆಸಿದರು. ವಾಸುದೇವ–ವಿಠಲ ಅಂಕಿತದಲ್ಲಿ ದೊರೆತಿರುವ ಪದ, ಸುಳಾದಿ, ಮತ್ತು ಉಗಾಭೋಗಗಳು ಸುಮಾರು ತೊಂಭತ್ತು. ಹರಿದಾಸರ ಸಾಂಪ್ರದಾಯಿಕ ರಚನೆಗಳಂತೆಯೇ ವಾಸುದೇವವಿಠಲರ ಕೃತಿಗಳಲ್ಲೂ ಆತ್ಮಶೋಧನೆಯ ನಿರೂಪಣೆ ಇದೆ.

೧. ಅನಂತಾನಂತ ಪಾಪ ಮಾಡುವೆ ನಾನು (ಕೀ. ೬೫)
೨. ಅಪರಾಧ ಎನ್ನದಯ್ಯ ಅಪರಿಮಿತವೆ ಸರಿ (ಕೀ. ೬೬)
೩. ಎನ್ನ ಅಪರಾಧಂಗಳೆಣಿಸೆನೆಂದರೆ ಅದರ
ಕೊನೆಯಿಲ್ಲ ಮೊದಲಿಲ್ಲ ಹುರುಳಿಲ್ಲವೋ (ಕೀ. ೮೭)

ಹೀಗೆ ಲೌಕಿಕ ಜೀವಿತದಲ್ಲಿ ಅರಿತೊ ಅರಿಯದೆಯೊ ಹಲವಾರು ತಪ್ಪುಗಳನ್ನು ಮಾಡಿದ್ದಾಗಿ ಒಪ್ಪಿಕೊಂಡೇ ಜೀವನವನ್ನು ಪರಿಶುದ್ಧಗೊಳಿಸಿಕೊಳ್ಳಲು ಬಯಸುತ್ತಾರೆ. ಅಜ್ಞಾನದಲ್ಲಿ ಮಾಡುವ ತಪ್ಪುಗಳನ್ನು ಕ್ಷಮಿಸುವ ಔದಾರ್ಯವಿರುವುದರಿಂದಲೇ ಶ್ರೀಹರಿಯನ್ನು "ಕೃಪಣವತ್ಸಲ"ನೆನ್ನುತ್ತಾರೆ. ಹುಡುಗರು ಮಾಡುವ ತಪ್ಪನ್ನು ಜನನಿ ಮನ್ನಿಸುವಂತೆ, ನಡೆಯುವ ಕುದುರೆ

ಮಲಗಿದರೆ ಅದನ್ನು ಉಪಚರಿಸುವಂತೆ ಕೃಪೆ ತೋರಬೇಕೆಂದು ಬೇಡುತ್ತಾರೆ. ಜೀವನದಲ್ಲಿ ಬೆಳಕೇ ಕಾಣದೆ ಸುತ್ತಲೂ ಕತ್ತಲೆ ಆವರಿಸಿ ಮಾರ್ಗದರ್ಶಕರೇ ದೊರೆಯದೆ ಹೋದಾಗ ಮುಂದೇನು ಗತಿಯೆಂದು ಜೀವ ತಳಮಳಿಸುತ್ತದೆ. ಇದೇ ಪರಿಸ್ಥಿತಿಯಲ್ಲಿದ್ದ ಹಲವರನ್ನು ರಕ್ಷಿಸಿದ್ದ ದೇವರು ಈಗೇಕೆ ಬರವಲ್ಲ ? ತನ್ನ ಮೊರೆಗೆ ಏಕೆ ಕಿವಿಗೊಡುತ್ತಿಲ್ಲ ? ತನ್ನನ್ನು ಕರುಣಾದೃಷ್ಟಿಯಿಂದ ಏಕೆ ನೋಡುತ್ತಿಲ್ಲ ಎಂಬ ಪ್ರಶ್ನೆಗಳು ಮೂಡುತ್ತವೆ. ತನ್ನ ಮೊರೆಯನ್ನು ದೇವರೇ ಕೇಳದೇ ಹೋದಾಗ

"ಆರಿಗೆ ಉಸುರಲಿ ಆರಿಗೆ ಮೊರೆಯಿಡಲಿ
ಆರೆನ್ನ ಮನದಳಲು ನಿವಾರಿಸುವವರ ಕಾಣೆ" (ಕೀ. ೯೭)

ಎಂದು ಭಕ್ತ ಹತಾಶ ಸ್ಥಿತಿಯನ್ನು ತಲಪುತ್ತಾನೆ. ದೇಹ, ಮನಸ್ಸು ಮಾತುಗಳು ನಿಯಂತ್ರಣ ಕಳೆದುಕೊಳ್ಳುತ್ತವೆ. ದುರ್ವಿಷಯಗಳ ಕಡೆ ಆಕರ್ಷಿತವಾಗುವ ಮನದ ನಡತೆಯನ್ನು ತಿದ್ದಬೇಕೆಂದು ದಾಸರು ಪ್ರಾರ್ಥಿಸುತ್ತಾರೆ.

೧. ತನುವಿನ ಮನಸಿನ ಒಡೆಯ ನೀನೆಂದು
ಮನಸಿಗೆ ಬಂದಂತೆ ವಚನಗಳಾಡುವೆ
ಮುನಿಸು ಮಾಡದೆ ನೀ ಕ್ಷಮೆ ಮಾಡಲಿಬೇಕು (ಕೀ. ೭೦)

೨. ದುರ್ವಿಷಯ ಬಿಡಿಸಿನ್ನು ವಾಸುದೇವ ವಿಠಲ
ಸರ್ವಬಗೆಯಲಿ ಪೊರೆಯೊ ನಿನ್ನವನು ನಾನು (ಕೀ. ೭೦)

ಎಂದು ದೇವರಿಗೆ ಶರಣಾಗುತ್ತಾರೆ.

ಮನುಷ್ಯನ ಸ್ವಭಾವವೇ ತುಂಬಾ ಚಂಚಲವಾದದ್ದು, ದೇಹ ಕರಣಗಳು ಸ್ಥಿರವಾಗಿ ಇದ್ದಾಗ ದೇವರನ್ನು ಮರೆಯುವುದು, ಇವು ಸಡಿಲಗೊಂಡರೆ ದೇವರಲ್ಲಿ ಭಕ್ತಿ ತೋರುವುದು, ಸುಖ ಬಂದಾಗ ಮೈಮರೆತು, ಸುಖವಿಲ್ಲದಿದ್ದಾಗ ದೇವರು ಕೊಡಲಿಲ್ಲವೆಂದು ಹಂಬಲಿಸುವುದು ಮನುಷ್ಯನ ಸ್ವಭಾವ. ದೇವರು

ಅಜ್ಞಾನ ನೀಡಿದರೆ, ಅಜ್ಞಾನದಿಂದಲೇ ಪಾಪ ಕೃತ್ಯಗಳನ್ನು ಮಾಡುತ್ತೇವೆ. ಜ್ಞಾನ ಪಾಂಡಿತ್ಯಗಳನ್ನು ನೀಡಿದರೆ ಭಕ್ತರನ್ನು ನಿಂದಿಸಿ ಪಾಪ ಮಾಡುತ್ತೇವೆ. ಹೀಗೆ ಪಾಪ ಕೃತ್ಯಗಳಿಗೂ ಮನುಷ್ಯ ಜನ್ಮಕ್ಕೂ ಅವಿನಾಭಾವ ಸಂಬಂಧ. ಧನ ಹೀನವಾದ ಮನುಷ್ಯ ಜಗತ್ತಿನ ಧನವೆಲ್ಲಾ ತನಗೆ ಬರಲಿ ಎಂದು ಅಪೇಕ್ಷಿಸುತ್ತಾನೆ. ಧನವಂತನಾದಾಗ ಧನಮದದಿಂದ ಸಜ್ಜನರಿಗೆ ಒಂದು ಕಾಸನ್ನೂ ಕೊಡದೆ ಕೃಪಣನಾಗುತ್ತಾನೆ. ಹೀಗೆ ಮನುಷ್ಯ ತನ್ನ "ನಿಜವಾಸನೆ"ಗಳನ್ನು ಮೀರಿ ಬೆಳೆಯಲಾರ.

ಹರಿದಾಸನಾದಮೇಲೂ ಸಾಧನ ಮಾರ್ಗವನ್ನು ಹಿಡಿಯುದೆ "ಮನುಜಪಶು"ವಂತೆ ನಡೆದುಕೊಂಡು ಆಯುಷ್ಯವನ್ನು ವ್ಯಯ ಮಾಡುತ್ತಿರುವ ಬಗ್ಗೆ ದಾಸರಿಗೆ ಬೇಸರವಿದೆ.

೧. ಮಾತುಗಳು ನಾಲ್ಕಾಡಿ । ಸಭೆಯೊಳಗೆ
ಪ್ರೀತಿಪಡಿಸುವೆ ನರರ
ರೀತಿಯಲಿ ಶ್ರುತಿ ಸ್ಮೃತಿಗಳ । ಪಠಿಸಿ ಶ್ರೀ
ನಾಥ ನಿನ್ನ ತೋಷಿಸಿದೆನೇ (ಕೀ– ೮೨)

೨. ಜಪಮಣಿಗಳನ್ನು ತಿರುಗಿಸಿ । ಲೋಕರನು
ಕಪಟಗೊಳಿಸುವೆನಲ್ಲದೆ
ತಪ ಮಾಡಿದೆನೆ ಮನದಲಿ । ನಿನ್ನಯ
ಕೃಪೆಯು ಉದಿಸುವ ತೆರದಲಿ (ಕೀ–೮೨)

೩. ಉಣಿಸುವೆನೋ ಪರರನ್ನ ದಣಿವೆನೋ ಅದಕ್ಕೆ
ಕುಣಿವೆನೋ ಅವರಂತೆ ಗುಣವೇನೋ ಅವರಿಗೆ (ಕೀ. – ೮೫)

೪. ಪಾಮರ ಜನರೊಳು ಸಿಕ್ಕದೆ ನಿನ್ನಯ
ನಾಮವ ಪೇಳುವ ಜನರನು ಕಾಣೆನು

ಸ್ವಾಮಿ ಏನು ಗತಿ ಎನ್ನ ಹೃದಯವೆಂಬ
ಧಾಮದಿ ಪೊಳೆಯೊ ವಾಸುದೇವವಿಠಲ (ಕೀ - ೮೯)

ಹೀಗೆ ಎಲ್ಲ ಅಪರಾಧಗಳಿಗೂ ಶರಣಾಗತಿಯೊಂದೇ ಸೂಕ್ತ ಮಾರ್ಗವೆಂದು ಭಾವಿಸಿ, ಸ್ವಾಹಂಕಾರವನ್ನು ಬಿಟ್ಟು, ಶುದ್ಧ ಮನಸ್ಸಿನಿಂದ ದೇವರಿಗೆ ಮೊರೆಯಿಡುತ್ತಾರೆ. ಪಂಚೇಂದ್ರಿಯಗಳ ಗುಣಕರ್ಮಗಳನ್ನು ಭಗವದರ್ಪಣ ಮಾಡಿ ಮನಸ್ಸನ್ನು ಹಗುರ ಮಾಡಿಕೊಳ್ಳುತ್ತಾರೆ. ಸುತ್ತಮುತ್ತಲ ಸಮಾಜದಲ್ಲಿ ಮಾಗದರ್ಶನ ಮಾಡಬಲ್ಲ ಜನರ ಸಂಖ್ಯೆ ಬಹಳ ವಿರಳ. ಸಂಶಯಗಳನ್ನು ಪರಿಹರಿಸಿ ಮನಸ್ಸನ್ನು ಕಳಂಕರಹಿತವನ್ನಾಗಿ ಮಾಡುವ ಗುರುಗಳು, ಮನಸ್ಥಿತಿಯನ್ನು ಅರ್ಥಮಾಡಿಕೊಳ್ಳುವ ಬಂಧುಗಳು, ಪರತತ್ವವನ್ನು ಉಪದೇಶಿಸಬಲ್ಲ ಸಂತರು ಕಡಿಮೆಯಾಗಿದ್ದು, ಮುಖಸ್ತುತಿ ಮಾಡುವ ಜನರೇ ಹೆಚ್ಚು. ಆದ್ದರಿಂದ ನಮ್ಮನ್ನು ಸಲಹುವ ಗುರು, ದೈವ, ಯಜಮಾನ ಎಲ್ಲವೂ ಶ್ರೀಹರಿಯೆ ಎಂದು ಭಾವಿಸುತ್ತಾರೆ.

೧. ಹಲವು ಪರಿಯಲೆನ್ನ ಸಲಹುವ ಗುರುದೈವ
ಕುಲಪ ವಾಸುದೇವವಿಠಲ ನೀ ಕರುಣಿಸು (ಕೀ–೧೨)

೨. ಮನುಜ ಪಶು ಎಂದು ಎನ್ನಲ್ಲಿ ದಯಮಾಡು
ಅನಿಮಿತ್ತ ಬಂಧು ವಾಸುದೇವವಿಠಲ (ಕೀ–೮೩)

೩. ಶ್ರೋತ್ರಕ್ಕೆ ನಿನ್ನ ಕಥೆ ವಾಸಕ್ಕೆ ನಿನ್ನ ಗಂಧ
ನೇತ್ರಕ್ಕೆ ನಿನ್ನ ರೂಪ ರಸನಿಗೆ ನಾಮಾಮೃತ
ಗಾತ್ರಕ್ಕೆ ನಿನ್ನ ಪಾದ ಸ್ಪರುಷ ಮನೋಬುದ್ಧಿ
ಮಾತ್ರಕ್ಕೆ ಗುಣಕರ್ಮಕೊಡು ವಾಸುದೇವವಿಠಲ (ಕೀ–೭೭)

೪. ನಿನ್ನ ಮರಹೆ ಮೃತ್ಯು ನೆನಹೆ ಜೀವ
ಧನ್ಯರಿಗೆ ಇದೆ ತತ್ವ ವಾಸುದೇವವಿಠಲ (ಕೀ–೮೯)

ಇದು ವ್ಯಾಸತತ್ವಜ್ಞರ ಆಧ್ಯಾತ್ಮಿಕ ನಿಲುವು.

ವಿಜಯದಾಸರು, ಗೋಪಾಲದಾಸರು, ಮತ್ತು ಜಗನ್ನಾಥದಾಸರ ಕೃತಿಗಳಲ್ಲಿ ಅಪರೂಪಕ್ಕೂ ಸಿಗದ ಮಧುರ ಭಕ್ತಿಯ ಕೃತಿಗಳು ವಾಸುದೇವವಿಠಲರ ಕೃತಿಗಳಲ್ಲಿ ದೊರೆಯುವುದು ಒಂದು ವೈಶಿಷ್ಟ್ಯ. ಶ್ರೀಪಾದರಾಜರ ಭ್ರಮರಗೀತ, ವೇಣುಗೀತಗಳಂತೆ ಭಾಗವತದ ಗೋಪಿಕಾ ಸ್ತ್ರೀಯರ ಮಧುರ ಭಾವನೆಗಳನ್ನು ವಾಸುದೇವವಿಠಲರು ಕನ್ನಡದಲ್ಲಿ ನಿರೂಪಿಸಿದ್ದಾರೆ. ವೇಣುಗೋಪಾಲನ ಲೀಲಾ ವಿನೋದಗಳನ್ನು ವರ್ಣಿಸುವಾಗ ತಮ್ಮನ್ನೇ ಒಬ್ಬ ಗೋಪಿಕಾ ಸ್ತ್ರೀಯಂತೆ ಭಾವಿಸಿಕೊಂಡು ಕೃಷ್ಣನಿಗಾಗಿ ಹಂಬಲಿಸುವ ಗೋಪಿಕಾ ಸ್ತ್ರೀಯರ ವಿರಹವನ್ನು ಚಿತ್ರಿಸಿದ್ದಾರೆ. ಕೃಷ್ಣನನ್ನು ಕಾಣದೆ ಅಂತರಂಗದ ಬಾಧೆಯಲ್ಲಿ ಚಿಂತೆಪಡುವ ನಾರಿಯರಿಗೆ ಕೃಷ್ಣನ ಗುಣವಿಶೇಷಗಳನ್ನು ಎಷ್ಟು ಹೊಗಳಿದರೂ ತೃಪ್ತಿಯಿಲ್ಲ. ಅವರ ಪಾಲಿಗೆ ಅವನು ಧೀರ, ಗಂಭೀರ, ಗೋರಸಚೋರ, ಗೋಪಿಜಾರ, ವೀರಾಧಿವೀರ, ರಂಗ, ಗರುಡತುರಂಗ, ವಿಧೃತರಥಾಂಗ, ಸಜ್ಜನಸಂಗ, ದೇವ, ಭಕುತರಕಾವ, ವರಗಳನೀವ, ರಿಪುವನದಾವ, ಶ್ರೀಶ, ಸುಂದರಹಾಸ, ಮುನಿಮನವಾಸ, ಶತರವಿಭಾಸ (ಕೀ.-೩೬) ಇಂತಹ ಗೋಪಾಲನನ್ನು ಕಾಣದೆ ನಾರಿಯರು ಮನೋವಿಕಲರಾಗುತ್ತಾರೆ. ಚಂದ್ರೋದಯ, ಮಾವಿನ ಚಿಗುರು, ಮೋಡಗಳ ಆಡಂಬರ, ಅರಳಿದ ತಾವರೆಗಳು ಇವುಗಳಿಂದ ಅವರ ಮನಸ್ಸು ಉಲ್ಲಾಸಗೊಳ್ಳುವ ಬದಲು ವಿಹ್ವಲಗೊಳ್ಳುತ್ತದೆ. ಚಂದ್ರನನ್ನು ಕಂಡಾಗ ಇಂದ್ರನ ಅನುಜನಾದ ಶ್ರೀಹರಿಯನ್ನು ಕಂಡಂತೆ, ಪಲ್ಲವಿಸಿದ ಚೂತ ತರುಗಳನ್ನು ಕಂಡಾಗ ಕೃಷ್ಣನ ಪಾದ ಪಲ್ಲವಗಳನ್ನು ಕಂಡಂತೆ, ಮೇಘಗಳ ಆಡಂಬರವನ್ನು ಕಂಡಾಗ ಮೇಘಶ್ಯಾಮನಾದ ಕೃಷ್ಣನನ್ನು ಕಂಡಂತೆ, ಕುಂದಕುಸುಮಗಳನ್ನು ಕಂಡಾಗ ಕುಂದರದವನಾದ ಕೃಷ್ಣನನ್ನು ಕಂಡಂತೆ ಭಾಸವಾಗಿ ಅವರು ಮನದಲ್ಲಿ ಕಂದಿಕುಂದುತ್ತಾರೆ. (ಕೀ-೧೦) ಕೃಷ್ಣನ ಗೆಳೆಯನಾದ ಉದ್ಧವ ಮದುರೆಯಿಂದ ಹಿಂತಿರುಗಿ ಬಂದಾಗ ಅವನನ್ನು ಕಂಡ ನಾರಿಯೊಬ್ಬಳಿಗೆ ಕೃಷ್ಣನನ್ನೇ ಕಂಡಂತೆ ಆಯಿತು.

ಎನ್ನಯ ನಾಯಕಿಯ ಸ್ವಾಮಿಯ ಕಂಡಂತೆ
ನಿನ್ನ ನೋಡಲಾಯಿತೋ ಪ್ರಾಣಪ್ರಿಯದೂತನೆ (ಕೀ- ೧೫)

ಎನ್ನುತ್ತಾಳೆ. ಕೃಷ್ಣನ ಅಗಲಿಕೆಯ ವಿರಹದಿಂದ ಅವಳು ಎಲ್ಲಾ ಲೌಕಿಕ ಆಸಕ್ತಿಗಳನ್ನು ಕಳೆದುಕೊಂಡಿದ್ದಾಳೆ. ಸುಗಂಧದ್ರವ್ಯಗಳು ಸಂಕೋಲೆಗಳಂತೆ ಬಿಗಿಯುತ್ತವೆ. ಉಟ್ಟ ವಸ್ತ್ರಗಳು ಶಸ್ತ್ರಗಳಂತೆ ದೇಹವನ್ನು ಕತ್ತರಿಸುತ್ತವೆ. ಮನೆಯೆಂಬುದು ಅವಳ ಪಾಲಿಗೆ ಕಾಡಾಗಿದೆ. ಮಾವಿನ ಚಿಗುರಿನ ಸ್ಪರ್ಶ ತುಂಬೆ ಸೊಪ್ಪಿನ ಸ್ಪರ್ಶದಂತೆ ಅಸಹನೆಯಾಗಿದೆ. ಹೀಗೆ ತಾನು ಅನುಭವಿಸುತ್ತಿರುವ ವಿವಿಧ ತಾಪಗಳು ಶ್ರೀಕೃಷ್ಣನ ಪಾದನಖಗಳೆಂಬ ಚಂದ್ರಕಿರಣಗಳ ದರ್ಶನದಿಂದ ಮಾತ್ರ ಉಪಶಮನವಾಗಬಹುದು ಎಂದು ಉದ್ಧವನಿಗೆ ಹೇಳುತ್ತಾಳೆ (ಕೀ–೧೫). ಮತ್ತೊಬ್ಬ ಭಕ್ತಳ ಅಭಿಪ್ರಾಯ ಹೀಗಿದೆ :

ಗುಣವೇಕೆ ರೂಪವೇಕೆ ದೋಷಗಳಿರಲೇಕೆ
ಮನಮೆಚ್ಚುಕೆಯೊಂದೆ ಆತಂಗೆ ಮುಖ್ಯ
ಅನುಮಾನಿಸಬೇಡ ಆತನ ಮೊರೆ ಹೋಗು
ಮನದಾಸೆ ನೀಡುವ ವಾಸುದೇವವಿಠಲ (ಕೀ. ೬)

ಈ ಮಾತುಗಳು ಹೆಣ್ಣೊಬ್ಬಳು ಮತ್ತೊಬ್ಬ ಹೆಣ್ಣಿಗೆ ಹೇಳುವ ಹಿತೋಕ್ತಿಗಳಂತೆ ಕಂಡರೂ ಅಪರೋಕ್ಷ ಜ್ಞಾನಕ್ಕಾಗಿ ಹಂಬಲಿಸುವ ಜೀವಾತ್ಮನಿಗೆ ಹೇಳಿದ ಉಪದೇಶಾತ್ಮಕ ಹಿತೋಕ್ತಿಗಳಾಗಿವೆ.

ಸಂಸಾರ ವಾರಿಧಿಯ ಸೆಳತಕ್ಕೆ ಸಿಕ್ಕಿ ಮುಳುಗಿ ಹೋಗಬೇಕಿದ್ದ ಜೀವಿಯನ್ನು ಉದ್ಧರಿಸಿ ದಡಕ್ಕೆ ಸೇರಿಸುವಂತೆ ತಮಗೆ ಯತಿಯಾಗುವ ಅವಕಾಶ ನೀಡಿದ ಶ್ರೀಹರಿಗೆ ವ್ಯಾಸತತ್ವಜ್ಞರು ಕೃತಜ್ಞತೆ ಅರ್ಪಿಸುತ್ತಾರೆ. ದೇಹ, ಜಗತ್ತು ಅಸ್ಥಿರ ಮತ್ತು ನಿಷ್ಫಲವೆಂಬ ಜ್ಞಾನ ವೈರಾಗ್ಯಗಳನ್ನು ಕೊಟ್ಟು ಸನ್ಯಾಸಾಶ್ರಮ ಸ್ವೀಕರಿಸುವಂತೆ ಮಾಡಿದ್ದೇನೋ ನಿಜ, "ಯತಿ"ಯಾದ ಮಾತ್ರಕ್ಕೆ "ರತಿ" ಬಿಡಲು ಸಾಧ್ಯವೇ? ಆದ್ದರಿಂದಲೇ

ಯತಿ ಮಾಡಿ ಕೂಡಿಸಿದೆ ನಿನ್ನ ಪಾದಾಂಬುಜದಲಿ
ರತಿ ಕೊಟ್ಟು ಉದ್ಧರಿಸೊ ವಾಸುದೇವವಿಠಲ (ಕೀ–೮೬)

ಎಂದು ಪ್ರಾರ್ಥಿಸುತ್ತಾರೆ. ಜೀವಿಯ ಸ್ವಾಹಂಕಾರವು ದೂರವಾಗುವುದು ದೇವರ ಸರ್ವೋತ್ತಮತ್ವವನ್ನು ಒಪ್ಪಿಕೊಂಡಾಗ ಮಾತ್ರ. ದೇವರಿಗೂ ಮಾನವರಿಗೂ ಯಾವುದೇ ರೀತಿಯಲ್ಲೂ ಸಮಾನತೆ ಸಾಧ್ಯವಿಲ್ಲ. "ಅವನು ಗುಣಪೂರ್ಣ, ನಾನು ದೋಷಕರ, ಅವನು ಲಕ್ಷ್ಮೀರಮಣ ನಾನು ಕೃಪಣ", ಈ ಕಾರಣಗಳಿಂದ ನಾನೇ ಅವನಿಗೆ ಮರುಳಾದೆ ಅನ್ನುತ್ತಾರೆ. ಲೋಕದಲ್ಲಿ ನಾನಾ ಬಗೆಯ ಜೀವರು ಇರುವುದರಿಂದ ಅವರವರ ಯೋಗ್ಯತಾನುಸಾರ ಮಾಡುವ ಸಾಧನೆಗಳಿಗೆ ತಕ್ಕ ಫಲವನ್ನು ಕೊಡುವವನು ಶ್ರೀಹರಿಯೇ, ಆದ್ದರಿಂದ ಜೀವಿಗಳು ಅಸ್ವತಂತ್ರರು. ನಮ್ಮದೆಂದು ಹೇಳಿಕೊಳ್ಳುವ ಸಾಧನೆಗಳು ಯಾವುದೂ ನಮ್ಮದಲ್ಲ. ಸಾಧನೆಗೆ ಪ್ರೇರಕನೂ, ಸಾಧನೆಗೆ ಒಲಿದವನೂ ಆದ ಕಾರಣದಿಂದಲೇ ಶ್ರೀಹರಿಯನ್ನು "ಸಾಧ್ಯ" ಎನ್ನುತ್ತಾರೆ.

ಬಲುವಿಧ ಸಾಧನ ಜಗದೊಳು ನೀ ಬಲ್ಲಿ
ಫಲವೇತಕೋ ಬಡವಗೆ ಇದರಲ್ಲಿ
ತಿಳಿದ ಸಾಧನವಿತ್ತು ವಾಸುದೇವವಿಠಲ
ಫಲವಾಗುವಂತೆ ಭಕುತಿಯ ನೀಡೋ (ಕೀ.–೭೫)

ಹೀಗೆ ಸ್ವಾಹಂಕಾರ ಮತ್ತು ಮಮಕಾರಗಳನ್ನು ದೂರೀಕರಿಸಿ ವಾಸುದೇವವಿಠಲರು ಶ್ರೀಹರಿಯಲ್ಲಿ ನಿರ್ವ್ಯಾಜ ಭಕುತಿಯನ್ನು ಮಾತ್ರ ಬೇಡುತ್ತಾರೆ. ಹೀಗೆ ತನ್ನ ಮಿತಿಯನ್ನು ಅರಿತ ಜೀವಿಗೆ ಶ್ರೀ ಹರಿಯ ಅನಂತ ಗುಣಗಳನ್ನು ಕೊಂಡಾಡುವುದು, ಅವನ ಮಹಿಮಾತಿಶಯವನ್ನು ಸ್ತುತಿಸುವುದು, ತನ್ನನ್ನು ತಾನೇ ನಿಂದಿಸಿಕೊಂಡು ತಪ್ಪುಗಳನ್ನು ಒಪ್ಪಿಸುವುದು, ತನ್ನ ಹೃದಯದ ಕರೆ–ಮೊರೆ, ಕಾತುರ–ಆತುರ, ತುಮುಲ–ತಳಮಳ ಮೊದಲಾದವುಗಳನ್ನು ನಿವೇದಿಸಿ ಹರಿ ಕರುಣೆಗಾಗಿ ಹಂಬಲಿಸುವುದು ನಿತ್ಯಜೀವನದ ಭಾಗವಾಗಿ ಬಿಡುತ್ತದೆ. ಈ ಭಾವನೆಗಳ ಅಭಿವ್ಯಕ್ತಿಯನ್ನು ವಾಸುದೇವವಿಠಲರ ಕೃತಿಗಳಲ್ಲಿ ಕಾಣಬಹುದು.

ವಾಸುದೇವವಿಠಲರ ಕೃತಿಗಳನ್ನು ಪರಿಶೀಲಿಸಿದಾಗ ಭಕ್ತಿ, ನೀತಿ ಮತ್ತು ವೈರಾಗ್ಯಗಳು ಸಂಸಾರ ವಿಮುಖವಾದದ್ದಲ್ಲ, ಜೀವನವನ್ನು ಇವರು ಅತ್ಯಂತ ಗೌರವದಿಂದ ನೋಡಿದ್ದಾರೆ. ಅದನ್ನು ಹೇಯವೆಂದು, ವಿಷಯ ಕೂಪವೆಂದು, ಕರ್ಮಕಾಂಡವೆಂದು ತಿರಸ್ಕರಿಸಿಲ್ಲ. ಮಾನವ ಜೀವನದ ಶ್ರೇಷ್ಠತೆಯನ್ನು ಒಪ್ಪಿಕೊಂಡು ಜ್ಞಾನ, ಭಕ್ತಿ, ವೈರಾಗ್ಯಗಳ ಮೂಲಕ ಜೀವನವನ್ನು ಶುದ್ಧಗೊಳಿಸುವ ಹಂಬಲ ಇವರದು. ಇದನ್ನು ತಮ್ಮ ಹಲವಾರು ಕೀರ್ತನೆಗಳಲ್ಲಿ "ಸಾಧನೆ" ಎನ್ನುತ್ತಾರೆ. ಸಾಧನೆಯ ವಿವಿಧ ಮುಖಗಳನ್ನು ಪರಿಚಯಿಸಿದ್ದಾರೆ.

ವೇಳೆ ಬಂದಾಗ ಬಿಡದೆ ಸಾಧಿಸದವನ
ಬಾಳುವೆ ಬೋಳೆ ಅದು ಗೋಳಲ್ಲವೆ
ಗಾಳಿ ಬಂದ ಕೈಯಲೆ ತೂರಿಕೊಳ್ಳಿರಿ ನೀವೆ
ಮೇಲೆ ತನ್ನ ವಶವೇನೋ ದೇಶಕಾಲಂಗಳು (ಕೀ –೮೮)

ಇದು ವಾಸುದೇವವಿಠಲರ ಜೀವನ ದೃಷ್ಟಿ

ಕಲಿಯುಗ ಒದಗಿತಲ್ಲ । ವಿಷಯದಿ
ಚಲಿಸಿತು ಮನವೆಲ್ಲ
ಇಳೆಯೊಳು ಹಿರಿಯರಿಲ್ಲ । ನೆರೆ ಜನ
ಖಳರು ಸಜ್ಜನರಲ್ಲ (ಕೀ–೫೯)

ಇದು ಪ್ರತಿಯೊಬ್ಬರೂ ಕಾಣುತ್ತಿರುವ ವಾಸ್ತವ ಸ್ಥಿತಿ. ಹೀಗೆಂದು ವಿಷಾದದಿಂದ ಹತಾಶರಾಗಬೇಕಿಲ್ಲ.

ಮೋಸ ಹೋಗದ ಹಾಗೆ । ಹರಿಪದ
ದಾಸ್ಯವ ಬಿಡದ ಹಾಗೆ
ವಾಸುದೇವವಿಠಲನ ಕರುಣದಿ (ಕೀ–೫೯)

ಜೀವನ ನಡೆಸಬೇಕೆಂಬುದು ಇವರ ಉಪದೇಶ.

ಹೀಗೆ ವಾಸುದೇವವಿಠಲರು ತಮ್ಮ ಪದ, ಸುಳಾದಿ, ಮತ್ತು ಉಗಾಭೋಗಗಳಲ್ಲಿ ಆತ್ಮಶೋಧನೆ, ಭಕ್ತಿ, ನೀತಿ ನಿರೂಪಣೆ, ಇವುಗಳನ್ನು ಪರಂಪರಾಗತ ಹರಿದಾಸರ ಮಾರ್ಗದಲ್ಲೇ ನಡೆಸಿದ್ದಾರೆ. ಆದರೆ ವಿಷಯ ನಿರೂಪಣೆ, ಗಾಂಭೀರ್ಯ ಮತ್ತು ಪ್ರೌಢಿಮೆಯಲ್ಲಿ ಇವು ಇತರರ ಕೃತಿಗಳಿಗಿಂತ ಭಿನ್ನವಾಗಿವೆ. ಎಲ್ಲವೂ ದೈವಾಧೀನ, ಹರಿಚಿತ್ತ ಎಂದು ಭಾವಿಸಿ ಪುರುಷ ಪ್ರಯತ್ನಕ್ಕೆ ಗೌರವ ಕೊಡದಿರುವ ಅಭಾವ ವೈರಾಗ್ಯವನ್ನು ಹೇಳದೆ ಸಾಧನೆಯ ಜೀವನ ವಿಧಾನಕ್ಕೆ ಒತ್ತು ಕೊಟ್ಟಿರುವುದು ವಾಸುದೇವವಿಠಲರ ವೈಶಿಷ್ಟ್ಯ.

ಶ್ರೀ ವಿದ್ಯಾರತ್ನಾಕರತೀರ್ಥರು (೧೮೩೭-೧೯೧೫)

ಶ್ರೀ ವ್ಯಾಸರಾಜರ ಪರಂಪರೆಯನ್ನೇ ಅನುಸರಿಸಿ ಕನ್ನಡ ಮತ್ತು ಸಂಸ್ಕೃತ ಎರಡೂ ಭಾಷೆಗಳಲ್ಲಿ ಕೃತಿ ರಚನೆ ಮಾಡಿದ ಯತಿಗಳು ವಿದ್ಯಾರತ್ನಾಕರತೀರ್ಥರು. ಚತುಃಶಾಸ್ತ್ರ ಪಂಡಿತರಾಗಿ ಪ್ರಾಚೀನ ಸಂಪ್ರದಾಯಗಳ ಪೋಷಕರಾಗಿ, ಶಾಸ್ತ್ರ ಪ್ರವಚನ ಚತುರರೆಂದು ಪ್ರಖ್ಯಾತರಾಗಿದ್ದರೂ, ಕನ್ನಡದಲ್ಲಿ ಕೀರ್ತನೆಗಳನ್ನು ರಚಿಸಿ ವ್ಯಾಸರಾಜ, ವಾದಿರಾಜರ ಮಾರ್ಗದಲ್ಲೇ ನಡೆದವರು ವಿದ್ಯಾರತ್ನಾಕರತೀರ್ಥರು. ಇವರ ಪೂರ್ವಾಶ್ರಮದ ಹೆಸರು ತೆಕ್ಕಲೂರು ಅಹೋಬಲ ಆಚಾರ್ಯರು. ವಿದ್ಯಾಕಾಂತತೀರ್ಥರು ವ್ಯಾಸರಾಜ ಮಠದ ಸ್ವಾಮಿಗಳಾಗಿದ್ದ ಕಾಲದಲ್ಲಿ, ತೆಕ್ಕಲೂರಿನ ಲಕ್ಷ್ಮೀನರಸಿಂಹಾಚಾರ್ಯರೆಂಬ ವಿದ್ವಾಂಸರನ್ನು ಸೋಸಲೆ ಗ್ರಾಮಕ್ಕೆ ಕರೆತಂದರು. ಸೋಸಲೆಯಲ್ಲೇ ಅವರ ವಿವಾಹವನ್ನು ನಡೆಸಿದರು. ಲಕ್ಷ್ಮೀನರಸಿಂಹಾಚಾರ್ಯರ ಮೂರನೆಯ ಮಗ ಅಹೋಬಲಾಚಾರ್ಯರು. ಅಹೋಬಲಾಚಾರ್ಯರು ಬಾಲ್ಯದಿಂದಲೂ ಸಾಹಿತ್ಯ, ಕಾವ್ಯ, ನಾಟಕಗಳಲ್ಲಿ ಆಸಕ್ತರಾಗಿದ್ದವರು. ಇದನ್ನು ಗಮನಿಸಿದ್ದ ವಿದ್ಯಾಕಾಂತತೀರ್ಥರು ಆಗಿನ ಪ್ರಸಿದ್ಧ ವಿದ್ವಾಂಸರಾಗಿದ್ದ ಸೋಸಲೆ ಗರಳಪುರಿಶಾಸ್ತ್ರಿಗಳಿಂದಲೂ ಪಂಡಿತ ಭೀಮಾಚಾರ್ಯರಿಂದಲೂ ಶಿಕ್ಷಣ ಕೊಡಿಸಿದರು. ಅಹೋಬಲಾಚಾರ್ಯರು ಗುರುಗಳ ಮಾರ್ಗದರ್ಶನ ಮತ್ತು ಸ್ವಪ್ರಯತ್ನದಿಂದ ಶಾಸ್ತ್ರ, ಸಾಹಿತ್ಯ, ವ್ಯಾಕರಣ, ಛಂದಸ್ಸು ಇವುಗಳ ಅಧ್ಯಯನ ನಡೆಸಿದರು. ಕನ್ನಡ ಸಂಸ್ಕೃತಗಳಲ್ಲಿ ಕೀರ್ತನೆಗಳನ್ನು ರಚಿಸುವ ಕಾವ್ಯಶಕ್ತಿಯನ್ನು ರೂಢಿಸಿಕೊಂಡರು.

ಅಹೋಬಲಾಚಾರ್ಯರ ಕೌಟುಂಬಿಕ ಜೀವನ ಅಷ್ಟೇನೂ ಸುಖಕರ ವಾಗಿರಲಿಲ್ಲ. ಆರ್ಥಿಕ ಮುಗ್ಗಟ್ಟಿನ ಜೊತೆಗೆ ಹುಟ್ಟಿದ ಮಕ್ಕಳೂ ಬಾಲ್ಯದಲ್ಲೇ ವಿಧಿವಶರಾದರು. ಧರ್ಮಪತ್ನಿಯೂ ಮೃತ್ಯುವನ್ನಪ್ಪಿದಳು. ಆಚಾರ್ಯರು ಎರಡನೆಯ ಮದುವೆಯಾದರು. ಎರಡನೇ ಪತ್ನಿಗೆ ಜನಿಸಿದ ಮಕ್ಕಳೂ ಬಾಲ್ಯದಲ್ಲೇ ಕಣ್ಣುಮುಚ್ಚಿದವು. ಅಧ್ಯಯನ, ಅಧ್ಯಾಪನ – ಇವುಗಳಲ್ಲಿ ಆಸಕ್ತಿಯೂ ಕುಂಠಿತವಾಯಿತು. ಇದೇ ಸಂದರ್ಭದಲ್ಲಿ ಸ್ಥಳ ಬದಲಾವಣೆಯಾದರೆ ಉತ್ತಮವಾಗಬಹುದೆಂದು ಭಾವಿಸಿದ ಶ್ರೀರಂಗದ ಪಂಡಿತರೊಬ್ಬರು ಆಚಾರ್ಯರನ್ನು ಶ್ರೀರಂಗಕ್ಕೆ ಕರೆದುಕೊಂಡುಹೋದರು. ಶ್ರೀರಂಗಂ, ಈರೋಡ್, ಸೇಲಂ ಮೊದಲಾದ ಕಡೆ ಆಚಾರ್ಯರ ಪ್ರವಚನಗಳಿಗೆ ವ್ಯವಸ್ಥೆ ಮಾಡಿದರು. ಇದೇ ಸಂದಭದಲ್ಲಿ ಆಚಾರ್ಯ ದಂಪತಿಗಳು ನಾಮಕ್ಕಲ್ ನಾಮಗಿರಿಯಮ್ಮನಿಗೆ ಸೇವೆ ಸಲ್ಲಿಸಿದರು. ಪ್ರತಿನಿತ್ಯ ದ್ರವರೂಪದ ಆಹಾರವನ್ನು ಮಾತ್ರ ಸ್ವೀಕರಿಸಿ, ೨೫ ದಿವಸಗಳ ಪರ್ಯಂತರ ನಾಮಗಿರಿಯಮ್ಮನ ದೇವಸ್ಥಾನದ ಸುತ್ತ ಉರುಳುಸೇವೆ ಮಾಡಿದರು. ತಮ್ಮ ಪ್ರವಚನ ಕಾರ್ಯವನ್ನು ಮುಂದುವರೆಸಿದರು. ಈ ಅವಧಿಯಲ್ಲಿ ಅವರಿಗೆ ಮೂವರು ಹೆಣ್ಣುಮಕ್ಕಳು ಮತ್ತು ಒಬ್ಬ ಮಗ ಜನಿಸಿದರು.

ಆಚಾರ್ಯರ ಪಾಂಡಿತ್ಯ, ಅವರ ಪ್ರವಚನ ವೈಖರಿ, ಇವುಗಳನ್ನು ಅರಿತ ಮೈಸೂರು ಅರಸರು ಆಚಾರ್ಯರನ್ನು ಅರಮನೆಯ ಧರ್ಮಾಧಿಕಾರಿಯಾಗಿ ಆಹ್ವಾನಿಸಿದರು. ಆದರೆ ಈ ವೇಳೆಗೆ ಐಹಿಕ ಆಕಾಂಕ್ಷೆಗಳಲ್ಲಿ ಆಸಕ್ತಿ ಕಳೆದುಕೊಂಡಿದ್ದ ಆಚಾರ್ಯರು ಅರಮನೆಯ ಆಹ್ವಾನವನ್ನು ಗೌರವದಿಂದ ನಿರಾಕರಿಸಿದರು. "ಆಶಾಪಾಶಬದ್ಧನಾಗಿ ದೇಶದೇಶವನ್ನು ತಿರುಗಿ" ಕಷ್ಟವನ್ನು ಅನುಭವಿಸಿದ್ದ ಆಚಾರ್ಯರಿಗೆ ಸಹಜವಾಗಿ ವೈರಾಗ್ಯ ಬಂದಿತ್ತು. "ಲೇಶ ಕರುಣವಿಲ್ಲದ ವಸುಮತೀಶರೊಳ್ ಬೇಡಿಸದಂತೆ ಬೇಡಿಕೊಂಬೆನೊ" ಎಂದು ಶ್ರೀಹರಿಯಲ್ಲಿ ಪ್ರಾರ್ಥನೆ ಸಲ್ಲಿಸಿದರು.

ಆಗ ವ್ಯಾಸರಾಜ ಮಠದ ಯತಿಗಳಾಗಿದ್ದ ವಿದ್ಯಾಸಮುದ್ರತೀರ್ಥರಿಗೆ ತೀವ್ರ ಅಸ್ವಸ್ಥತೆಯುಂಟಾಗಿ ಮಠಕ್ಕೆ ಉತ್ತರಾಧಿಕಾರಿಗಳನ್ನು ಆಯ್ಕೆ ಮಾಡುವ ಪ್ರಸಂಗ ಒದಗಿ ಬಂತು. ಮೈಸೂರು ರಾಜ್ಯದ ದಿವಾನರಾಗಿದ್ದ ಸರ್. ಪಿ. ಎನ್. ಕೃಷ್ಣಮೂರ್ತಿ ಅವರು ಮತ್ತು ಅನೇಕ ಶಿಷ್ಯರುಗಳು ಈ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಅಹೋಬಲಾಚಾರ್ಯರೇ ಸಮರ್ಥರೆಂದು ನಿರ್ಧರಿಸಿದರು. ಲೌಕಿಕ ವ್ಯವಹಾರಗಳಲ್ಲಿ ಪೂರ್ಣ ಅನಾಸಕ್ತರಾಗಿದ್ದ ಆಚಾರ್ಯರು ಇದನ್ನೂ ನಿರಾಕರಿಸಿದರು. ಮಠದ ಹಣಕಾಸಿನ ವ್ಯವಹಾರ, ಆಡಳಿತ ಮತ್ತಿತರ ಲೌಕಿಕ ವ್ಯವಹಾರಗಳು ಆಧ್ಯಾತ್ಮಿಕ ಸಾಧನೆಗೆ ಅಡ್ಡಿಯನ್ನುಂಟು ಮಾಡುತ್ತವೆ ಎಂಬುದು ಅವರ ನಿಲುವಾಗಿತ್ತು. ಆಡಳಿತ ಮತ್ತಿತರ ವ್ಯವಹಾರಗಳನ್ನು ಅರಮನೆಯವರೇ ನಿರ್ವಹಿಸುವರೆಂದೂ, ಆಚಾರ್ಯರು ತಮ್ಮ ವೇಳೆಯನ್ನು ಸಂಪೂರ್ಣವಾಗಿ ಆಧ್ಯಾತ್ಮಿಕ ಕೆಲಸಗಳಿಗೆ ಮೀಸಲಿಡಬಹುದೆಂದು ದಿವಾನರು ಭರವಸೆ ನೀಡಿದ ಮೇಲೆ ಆಚಾರ್ಯರು ಒಪ್ಪಿಗೆ ನೀಡಿದರು.

"ವಿದ್ಯಾರತ್ನಾಕರತೀರ್ಥ"ರೆಂಬ ಅಭಿದಾನದಿಂದ ಯತ್ಯಾಶ್ರಮ ಸ್ವೀಕರಿಸಿದರು. ಇವರ ಕಾಲದಲ್ಲಿ ವ್ಯಾಸರಾಜ ಮಠದಲ್ಲಿ ಉತ್ತಮವಾದ ಸಾರಸ್ವತ ವಾತಾವರಣ ಉಂಟಾಯಿತು. ದೇಶ ವಿದೇಶಗಳ ವಿದ್ವಾಂಸರು ಮಠಕ್ಕೆ ಆಗಮಿಸಿ, ಜ್ಞಾನ ಕಾರ್ಯದಲ್ಲಿ ಭಾಗವಹಿಸುತ್ತಿದ್ದರು.

ವಿದ್ಯಾರತ್ನಾಕರತೀರ್ಥರು ಸಂಸ್ಕೃತದಲ್ಲಿ ಅನೇಕ ಸ್ತುತಿಗಳನ್ನು ರಚಿಸಿದ್ದಾರೆ. ಮಧ್ವಾಚಾರ್ಯರ, ವ್ಯಾಸರಾಯರ, ಶೇಷಚಂದ್ರಿಕಾಚಾರ್ಯರ ಸ್ತವನಗಳು, ದಶಾವತಾರ ಸ್ತುತಿ, ಹರಿಗುರು ಮಂಗಳಾಷ್ಟಕ, ಇವುಗಳನ್ನು ರಚಿಸಿದ್ದಾರೆ. ಭಗವಂತನ ಶ್ರೇಷ್ಠತೆ, ಮುಕ್ತಿಯ ಸ್ವರೂಪ, ವೈರಾಗ್ಯ ಸ್ವರೂಪ, ಹರಿಗುರುಭಕ್ತಿ ಪ್ರತಿಪಾದನೆ, ಭಗವರ್ಪಣ ಬುದ್ಧಿಯಿಂದ ಮಾಡಬೇಕಾದ ವರ್ಣಾಶ್ರಮ ಕರ್ಮಗಳು, ಇವುಗಳನ್ನು ಸಂಸ್ಕೃತ ಕೃತಿಗಳಲ್ಲಿ ಪ್ರತಿಪಾದಿಸಿದ್ದಾರೆ. ತಮ್ಮ ಕವಿತಾ ಕೌಶಲವನ್ನು ಇವರು ಸಂಸ್ಕೃತಕ್ಕೆ ಮಾತ್ರ ಸೀಮಿತಗೊಳಿಸಿದೆ, ತಾವು ನಂಬಿದ್ದ ಮತತತ್ವಗಳ ಪ್ರಮೇಯಗಳನ್ನು ಕನ್ನಡ ಹಾಡುಗಳಲ್ಲೂ ನಿರೂಪಿಸಿದರು. ಒಂಭತ್ತು ವರ್ಷಗಳ

ಕಾಲ ಪೀಠಾಧಿಪತಿಗಳಾಗಿದ್ದು ೧೯೧೫ ರ ವೈಶಾಖ ಬಹುಳ ನವಮಿಯಂದು ಇಹಲೋಕವನ್ನು ತ್ಯಜಿಸಿದರು.

ವಿದ್ಯಾರತ್ನಾಕರತೀರ್ಥರ ಅಂಕಿತ "ನಾಮಗಿರೀಶ". ತಮ್ಮ ಹಿರಿಯರ ಸ್ಥಳವಾದ ತೆಕ್ಕಲೂರು ಮತ್ತು ತಾವು ಹುಟ್ಟಿಬೆಳೆದು ವಿದ್ಯಾಭ್ಯಾಸ ಮಾಡಿದ ಸೋಸಲೆ ಇವುಗಳಿಗಿಂತ ನಾಮಗಿರಿಯ ಬಗ್ಗೆ ಇವರಿಗೆ ಹೆಚ್ಚು ಅಭಿಮಾನ. ಹರಿಗುರುಗಳ ಕೃಪಾಬಲ ತಮಗೆ ಬಂದದ್ದೇ ನಾಮಗಿರಿಯಮ್ಮನ ಕರುಣೆಯಿಂದ ಎಂದು ಇವರು ಭಾವಿಸುತ್ತಾರೆ. "ಕಷ್ಟಗಳೆಲ್ಲ ನಷ್ಟವಾಗುವ ಪರಿ ದೃಷ್ಟಿಯಿಟ್ಟು" ಸಲಹಿದ ನಾಮಗಿರಿಯಮ್ಮನಿಗೆ ತಾವು ಕಿಂಕರನೆಂದು ಭಾವಿಸುತ್ತಾರೆ. ಈ ಕಾರಣದಿಂದಲೇ ನಾಮಗಿರೀಶನಾದ ನರಹರಿಯ ಅಂಕಿತವನ್ನು ತಮ್ಮ ಕೀರ್ತನೆಗಳಿಗೆ ಅಳವಡಿಸಿದರು.

ನಾಮಗಿರೀಶ ಅಂಕಿತದಲ್ಲಿ ದೊರೆಯುವ ಕನ್ನಡ ಕೀರ್ತನೆಗಳು ಸುಮಾರು ೨೫, ಭಗವಂತನ ಸಂಕೀರ್ತನೆ, ಗುರುಸ್ತುತಿ, ತತ್ವಚಿಂತನೆ, ಇವು ಈ ಕೃತಿಗಳ ಪ್ರಮುಖ ವಸ್ತು. ಶ್ರೀ ಹರಿಯ ಹಿರಿಮೆ, ಅವನ ದಶಾವತಾರ ಲೀಲೆ, ಭಕ್ತ ಜನರಲ್ಲಿ ತೋರುವ ಕರುಣೆ, ಬಾಲಗೋಪಾಲನಾಗಿ, ಪಾಂಡವರ ಧರ್ಮ ಪರಿಪಾಲಕನಾಗಿ ಅವನು ಮಾಡಿದ ಸಾಧನೆಗಳು, ಇವುಗಳನ್ನು ಭಾವುಕವಾಗಿ ಚಿತ್ರಿಸುತ್ತಾರೆ.

ವ್ಯಾಸರಾಜಮಠದ ಯತಿ ಪರಂಪರೆಯಲ್ಲಿ ವ್ಯಾಸರಾಜರನ್ನು ಬಿಟ್ಟರೆ, ಕನ್ನಡದಲ್ಲಿ ಕೃತಿ ರಚಿಸಿದ ಯತಿಗಳು ೧೯ನೆಯ ಶತಮಾನದವರೆಗೂ ಯಾರೂ ಇಲ್ಲವೆಂದೇ ಹೇಳಬೇಕು. ವಿದ್ಯಾಕಾಂತತೀರ್ಥರು, ಮತ್ತು ವಿದ್ಯಾರತ್ನಾಕರತೀರ್ಥರು ಕನ್ನಡ ಕೀರ್ತನೆಗಳ ರಚನೆಯನ್ನು ಪುನರಾರಂಭಿಸಿದರು. ಹರಿದಾಸ ಸಾಹಿತ್ಯವನ್ನು ಉಳಿಸಿ ಬೆಳೆಸುವ ಕಾರ್ಯದಲ್ಲಿ ವಿದ್ಯಾರತ್ನಾಕರರ ಪಾತ್ರ ಉಲ್ಲೇಖನೀಯವಾಗಿದೆ.

ಶ್ರೀ ವಿದ್ಯಾಪ್ರಸನ್ನತೀರ್ಥರು (೧೮೯೫-೧೯೬೯)

ಹರಿದಾಸ ಸಾಹಿತ್ಯವನ್ನು ಸಮೃದ್ಧಗೊಳಿಸಿದ ಯತಿಗಳಲ್ಲಿ ವಾದಿರಾಜರನ್ನು ಬಿಟ್ಟರೆ ಸಂಖ್ಯಾದೃಷ್ಟಿಯಿಂದ ಹೆಚ್ಚು ಕೀರ್ತನೆಗಳನ್ನು ಬರೆದವರು ಶ್ರೀ ವಿದ್ಯಾಪ್ರಸನ್ನ-ತೀರ್ಥರು. ವ್ಯಾಸರಾಜ ಯತಿಗಳು ತೋರಿದ ಕನ್ನಡಪ್ರೇಮ ಆ ಮಠದ ಯತಿಗಳಲ್ಲಿ ಕ್ರಮೇಣ ಕಡಿಮೆಯಾಗುತ್ತ ಬಂದು ಶಾಸ್ತ್ರಾಧ್ಯಯನ ಮತ್ತು ಸಂಸ್ಕೃತ ಪಾಂಡಿತ್ಯಕ್ಕೆ ಮಾತ್ರ ಸೀಮಿತಗೊಂಡಿದ್ದವು. ವಿದ್ಯಾಕಾಂತತೀರ್ಥರು ಮತ್ತು ವಿದ್ಯಾರತ್ನಾಕರ-ತೀರ್ಥರು ಪುನರಾರಂಭಿಸಿದ ಕನ್ನಡ ಕೀರ್ತನೆಗಳ ರಚನೆ, ವಿದ್ಯಾಪ್ರಸನ್ನ-ತೀರ್ಥರಿಂದ ವಿಶಾಲ ಹರಹನ್ನು ಪಡೆದುಕೊಂಡಿತು.

ವಿದ್ಯಾಪ್ರಸನ್ನತೀರ್ಥರ ಜನ್ಮಸ್ಥಳ ಸೋಸಲೆ. ಇವರ ಪೂರ್ವಾಶ್ರಮದ ಹೆಸರು ತೆಕ್ಕಲೂರು ವೆಂಕಟನರಸಿಂಹಾಚಾರ್ಯ. ಆ ಕಾಲದ ಪ್ರಖ್ಯಾತ ಸಂಸ್ಕೃತ ಪಂಡಿತರಾದ ತೆಕ್ಕಲೂರು ಅಹೋಬಲಾಚಾರ್ಯರು ಇವರ ತಂದೆ. ಸತ್ಯಭಾಮಮ್ಮ ಇವರ ತಾಯಿ. ಸತ್ಯಭಾಮಮ್ಮ ಶ್ರೀ ವಿದ್ಯಾಸಿಂಧುತೀರ್ಥರ ಪೂರ್ವಾಶ್ರಮದ ಪುತ್ರಿ. ಅಹೋಬಲಾಚಾರ್ಯರಿಗೆ ವೃದಾಪ್ಯದಲ್ಲಿ ಜನಿಸಿದ ಏಕಮಾತ್ರ ಪುತ್ರ ವೆಂಕಟನರಸಿಂಹ. ತಮ್ಮ ಮಗನನ್ನು ದೊಡ್ಡ ಪಂಡಿತನನ್ನಾಗಿ ಮಾಡಬೇಕೆಂಬ ಹಂಬಲದಿಂದ, ಅವನ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ತಾವೇ ವಹಿಸಿಕೊಂಡು ಸಂಸ್ಕೃತ ಅಧ್ಯಾಪನವನ್ನು ಪ್ರಾರಂಭಿಸಿದರು. ೧೯೦೮ರಲ್ಲಿ ಅಹೋಬಲಾಚಾರ್ಯರು ವಿದ್ಯಾರತ್ನಾಕರತೀರ್ಥರಾಗಿ ವ್ಯಾಸರಾಜಮಠದ ಸ್ವಾಮಿಗಳಾಗುವ ಸಂದರ್ಭ ಒದಗಿಬಂತು. ಹೀಗಾಗಿ ತಂದೆಯೇ ಮಗನಿಗೆ ನೇರವಾಗಿ ಬೋಧನೆ ಮಾಡುತ್ತಿದ್ದ ಅವಕಾಶ ತಪ್ಪಿಹೋಯಿತು.

ಅಹೋಬಲಾಚಾರ್ಯರು ಸನ್ಯಾಸವನ್ನು ಸ್ವೀಕರಿಸಿದಾಗ ವೆಂಕಟನರಸಿಂಹನಿಗೆ ಕೇವಲ ೯ ವರ್ಷ ವಯಸ್ಸು. ಮಗನ ಭವಿಷ್ಯದ ಜವಾಬ್ದಾರಿ ಸತ್ಯಭಾಮಮ್ಮನವರ ಮೇಲೆ ಬಿತ್ತು. ಪಾಶ್ಚಾತ್ಯ ವಿದ್ಯಾಭ್ಯಾಸದ ಪ್ರಭಾವಕ್ಕೆ ಒಳಗಾಗಿ, ಪರಿವರ್ತನೆಯ ಗಾಳಿ ಬೀಸುತ್ತಿದ್ದ ಕಾಲ ಅದು. ಲೌಕಿಕ ದೃಷ್ಟಿಯಿಂದ ಲಾಭದಾಯಕವಲ್ಲದ

ಸಂಸ್ಕೃತ, ಶಾಸ್ತ್ರ ಮತ್ತು ಅಧ್ಯಯನದಲ್ಲಿ ಆಸಕ್ತಿ ಕಡಿಮೆಯಾಗುತ್ತಿತ್ತು. ಅದರಂತೆಯೇ ವೆಂಕಟನರಸಿಂಹನಿಗೆ ಪಾಶ್ಚಾತ್ಯ ವಿದ್ಯಾಭ್ಯಾಸ ಕೊಡಿಸಿ, ದೊಡ್ಡ ಹುದ್ದೆಯನ್ನು, ಹಣವನ್ನು ಗಳಿಸುವಂತೆ ಮಾಡಬೇಕೆಂದು ತಾಯಿಯ ಆಸೆಯಾಗಿತ್ತು. ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ. ಕೃಷ್ಣರಾಯರೆಂಬುವರ ನೆರವಿನಿಂದ ಮಗನನ್ನು ಲೋಯರ್ ಸೆಕೆಂಡರಿ ಪರೀಕ್ಷೆಗೆ ಕಟ್ಟಿಸಿದರು. ಬಾಲಕ ಪರೀಕ್ಷೆಯಲ್ಲಿ ಉತ್ತೀರ್ಣನೂ ಆದ.

ಮಗನ ವಿದ್ಯಾಭ್ಯಾಸದ ದೃಷ್ಟಿಯಿಂದ ಸತ್ಯಭಾಮಮ್ಮ ಮೈಸೂರಿನಲ್ಲಿ ನೆಲೆಸಿದರು. ಮಹಾರಾಜ ಪ್ರೌಢಶಾಲೆಯಲ್ಲಿ ಮೆಟ್ರಿಕ್ಯುಲೇಷನ್ ಮತ್ತು ಎಂಟ್ರೆನ್ಸ್ ಪರೀಕ್ಷೆಗಳನ್ನು ಮುಗಿಸಿದ. ವಿಜ್ಞಾನವನ್ನು ಆಯ್ಕೆ ಮಾಡಿಕೊಂಡು ಬೆಂಗಳೂರು ಸೆಂಟ್ರಲ್ ಕಾಲೇಜಿಗೆ ಸೇರುವ ಹೊತ್ತಿಗೆ ಇವರ ಹೆಸರು ಟಿ. ವಿ. ನರಸಿಂಹಾಚಾರ್ ಎಂದು ಬದಲಾಗಿತ್ತು. ೧೫ನೆಯ ವಯಸ್ಸಿನಲ್ಲಿಯೇ ಅಕ್ಕನ ಮಗಳ ಜೊತೆ ವಿವಾಹವೂ ಆಯಿತು. ಸೆಂಟ್ರಲ್ ಕಾಲೇಜಿನಿಂದ ಬಿ.ಎ. ಪದವಿಯನ್ನು ಪಡೆದು, ಎರಡು ವರ್ಷ ಬಿ.ಎಲ್. ಪದವಿಗೆ ಅಧ್ಯಯನ ಮಾಡಿ ಮೈಸೂರಿಗೆ ಹಿಂತಿರುಗಿದರು. ೧೯೨೫ರಿಂದ ಸ್ವತಂತ್ರವಾಗಿ ವಕೀಲ ವೃತ್ತಿಯನ್ನು ಆರಂಭಿಸಿದರು. ಸ್ವಲ್ಪ ಅವಧಿಯಲ್ಲಿಯೇ ತರುಣ ವಕೀಲರ ಪಂಕ್ತಿಯಲ್ಲಿ ಅಗ್ರಸ್ಥಾನ ಪಡೆದರು. ಪ್ರತಿಭಾವಂತ ನ್ಯಾಯವಾದಿಯಾಗಿ ಉಜ್ವಲ ಭವಿಷ್ಯದ ಭರವಸೆ ಮೂಡಿಸಿದರು. ಅರಮನೆಯ ಜ್ಯೋತಿಷಿ ಒಬ್ಬರು ಇವರಿಗೆ ೩೬ ನೇ ವಯಸ್ಸಿಗೆ ದಂಡಾಧಿಕಾರ ಪ್ರಾಪ್ತಿಯಾಗುವುದೆಂದು ಹೇಳಿದರು. ತಾವು ಮುನ್ಸೀಫರೋ, ಮ್ಯಾಜಿಸ್ಟ್ರೇಟರೋ ಆಗಬಹುದೆಂದು ನರಸಿಂಹಾಚಾರ್ಯರು ಭಾವಿಸಿದ್ದರು. ಆ ಜ್ಯೋತಿಷಿಯ ಮಾತು ಅನಿರೀಕ್ಷಿತವಾಗಿ ಬೇರೊಂದು ರೀತಿಯಲ್ಲಿ ನಿಜವಾಯಿತು. ನ್ಯಾಯಾಂಗ ದಂಡಾಧಿಕಾರಿಯಾಗುವ ಬದಲು, ಧರ್ಮ ದಂಡಾಧಿಕಾರಿಯಾಗುವ ಯೋಗ ಒದಗಿ ಬಂತು.

ವಿದ್ಯಾರತ್ನಾಕರತೀರ್ಥರು ಬೃಂದಾವನಸ್ಥರಾದ ಮೇಲೆ ವಿದ್ಯಾವಾರಿಧಿತೀರ್ಥರು ವ್ಯಾಸರಾಜಮಠದ ಉತ್ತರಾಧಿಕಾರಿಯಾದರು. ವ್ಯಾಸರಾಜ ಮಠದ ಕಾನೂನು

ವ್ಯವಹಾರಗಳನ್ನು ನರಸಿಂಹಾಚಾರ್ಯರೇ ನೋಡಿಕೊಳ್ಳುತ್ತಿದ್ದರು. ತಮ್ಮ ಬಿಡುವಿನ ವೇಳೆಯಲ್ಲಿ ವಿದ್ವಾಂಸರಾದ ನೆರೂರು ಕೃಷ್ಣಾಚಾರ್ಯರಿಂದ ಶಾಸ್ತ್ರವ್ಯಾಸಂಗವನ್ನೂ ಮಾಡುತ್ತಿದ್ದರು. ೧೯೩೫ರಲ್ಲಿ ವಿದ್ಯಾವಾರಿಧಿತೀರ್ಥರ ದೇಹಸ್ಥಿತಿ ವಿಷಮಗೊಂಡಿತು. ತಮ್ಮ ಗುರುಪುತ್ರರಾದ ನರಸಿಂಹಾಚಾರ್ಯರೇ ತಮ್ಮ ಉತ್ತರಾಧಿಕಾರಿಯೆಂದು ತೀರ್ಮಾನಿಸಿ ಅವರನ್ನು ಒಪ್ಪಿಸುವ ಹೊಣೆಯನ್ನು ಮಠದ ಅಧಿಕಾರಿಗಳಿಗೂ, ಶಿಷ್ಯರಿಗೂ ವಹಿಸಿದರು. ಶಿಷ್ಯರು ಆಚಾರ್ಯರ ಮನ ಒಲಿಸುವಲ್ಲಿ ಯಶಸ್ವಿಯಾದರು.

ತಮ್ಮ ಜೀವನದಲ್ಲಿ ಅತ್ಯಂತ ಮಹತ್ವಪೂರ್ಣವಾದ ಕ್ರಾಂತಿಕಾರಿ ನಿರ್ಧಾರವನ್ನು ತೆಗೆದುಕೊಳ್ಳುವ ಮುನ್ನ ಆಚಾರ್ಯರು ಸಾಕಷ್ಟು ಒಳತೋಟಿಯನ್ನು ಅನುಭವಿಸಿದರು. ಲೌಕಿಕವಾದ ಅಧಿಕಾರ, ಹಣ, ಆಕರ್ಷಣೆ, ಇವುಗಳನ್ನು ಪೂರ್ಣವಾಗಿ ಅನುಭವಿಸುತ್ತಿದ್ದವರಿಗೆ ಚಿಕ್ಕ ವಯಸ್ಸಿನಲ್ಲೇ ಇವನ್ನೆಲ್ಲಾ ತ್ಯಾಗಮಾಡುವ ಸಂದರ್ಭ ಬರಬಹುದೆಂದು ನಿರೀಕ್ಷಿಸಿರಲಿಲ್ಲ. ಲೌಕಿಕ ಆಕರ್ಷಣೆಗಳನ್ನು ಹಠಾತ್ತಾಗಿ ಬದಿಗೊತ್ತಿ ಸನ್ಯಾಸಾಶ್ರಮಕ್ಕೆ ಒಪ್ಪಿಗೆ ನೀಡಿದರು. ವಿದ್ಯಾಪ್ರಸನ್ನತೀರ್ಥರೆಂಬ ಅಭಿದಾನದಿಂದ ಯತ್ಯಾಶ್ರಮಕ್ಕೆ ಪ್ರವೇಶಿಸಿದರು. ತಮ್ಮ ಗುರುಗಳ ಆರೋಗ್ಯ ಸುಧಾರಿಸಿದ ಮೇಲೆ ಪ್ರಸನ್ನತೀರ್ಥರು ಮತ್ತೆ ಅಧ್ಯಯನ ನಿರತರಾದರು. ಮಠದ ಪಂಡಿತರ ನೆರವಿನಿಂದ ಶಾಸ್ತ್ರ, ಸಾಹಿತ್ಯ ಮತ್ತು ಸಿದ್ಧಾಂತಗಳ ಅಧ್ಯಯನವನ್ನು ಗಂಭೀರವಾಗಿ ನಡೆಸಿದರು. ಇದೇ ಕಾಲದಲ್ಲಿ ಸುಪ್ತವಾಗಿದ್ದ ಅವರ ಸಾಹಿತ್ಯ ಪ್ರತಿಭೆ ಹಾಡುಗಳಾಗಿ ಮೂಡಿಬಂದವು.

ಯಾವುದೋ ಕುಗ್ರಾಮದಲ್ಲಿ ಜನಿಸಿ, ಯಾರೂ ಅರಿಯದಂತಿದ್ದು, ಸರಿಯಾದ ಊಟವೂ ಇಲ್ಲದೆ, "ಒಡಕು ತೊಗರಿ ಹುಳಿಯನ್ನ" ವನ್ನು ತಿಂದು ಜೀವಿಸುತ್ತಿದ್ದವರಿಗೆ ತಾವು ಯತಿಗಳಾಗಬಹುದೆಂಬ ಯಾವ ನಿರೀಕ್ಷೆಯೂ ಇರಲಿಲ್ಲ. ವಿದ್ಯಾವಂತರಾಗಿ ಲೌಕಿಕ ವ್ಯವಹಾರಗಳಲ್ಲಿ ಚತುರರಾಗಿದ್ದ ಅವರ ದೃಷ್ಟಿಯೆಲ್ಲ ತಮ್ಮ ಬಡತನ ನಿವಾರಣೆ ಕಡೆಗೇ ಕೇಂದ್ರಿಕೃತವಾಗಿತ್ತು. ಆದರೆ ಮನುಷ್ಯ

ಬಯಸಿದಂತೆ ಅಧಿಕಾರಗಳು ದೊರೆಯುವುದಿಲ್ಲ. ಹರಿಚಿತ್ತದಂತೆಯೇ ನಡೆಯುತ್ತದೆ. "ಅಧಿಕಾರಿಯಾಗಬೇಕು ಅದಕ್ಕಾಗಿ ದುಡಿಯಬೇಕು. ಈ ಅಧಿಕಾರ ಶಾಶ್ವತವಿರಬೇಕು ಅದನೀಶ್ವರ ಕೊಡಬೇಕು" ಎನ್ನುತ್ತಾರೆ. (ಕೀ.೨೮೫) ವಿದ್ಯಾಪ್ರಸನ್ನತೀರ್ಥರು ಬಯಸಿದ್ದು ವಿದ್ಯಾಧಿಕಾರವನ್ನು ಆದರೆ ಅವರಿಗೆ ಸಿಕ್ಕಿದ್ದು ಪರವಿದ್ಯಾಧಿಕಾರ. ಕಾನೂನು ಪದವಿಯನ್ನು ಪಡೆದು ನ್ಯಾಯವಾದಿಗಳಾಗಿದ್ದ ಅವರು ಶಾಸನ ಸಭೆಯ ಅಧಿಕಾರದ ಕನಸನ್ನೂ ಹೊಂದಿದ್ದರು. ಆದರೆ ಅವರಿಗೆ ದೊರೆತದ್ದು " ಹರಿಶಾಸನ ಸಭೆಯ ಅಧಿಕಾರ". ಯತ್ಯಾಶ್ರಮ ಸ್ವೀಕರಿಸಿದ ಮೇಲೆ ಅವರೇ ಹೇಳುವಂತೆ ಹೊಸ ಚೈತನ್ಯ ವಿಕಸಿತವಾಯಿತು ಆತಂಕಗಳು ದೂರಾದವು. ಹರಿ ಇಚ್ಛೆಯಂತೆ ನಡೆಯುವುದೇ ಶ್ರೇಷ್ಠ ಮಾರ್ಗವೆಂದು ತೋರಿತು. (ಕೀ. ೧೮೬) ಖ್ಯಾತಿಯನ್ನೂ, ಧನಪ್ರೀತಿಯನ್ನೂ ಬಯಸದೇ ಸಭ್ಯನೀತಿಗೆ ಬೆಲೆ ನೀಡಿದರು. (ಕೀ. ೨೬೬) ಲೌಕಿಕದಲ್ಲಿ ಸೋತ ಮೇಲೆ, ಭಗವಂತನ ಪ್ರೀತಿ ಗಳಿಸುವುದೇ ನೀತಿಯೆಂದು ಭಾವಿಸಿದರು. (ಕೀ. ೨೯೭) ಸಿರಿಯನ್ನೂ, ವೈಭವದ ಪರಿಯನ್ನೂ ತಿರಸ್ಕರಿಸಿ ಹರಿಯ ಚರಣ ಸೇವೆಯಲ್ಲಿ ಪರತರ ಸುಖವನ್ನು ಅರಿಯ ಬಯಸಿದರು. ಹರಿಕೀರ್ತನೆಗಳ ರಚನೆ ಅವರ ಪಾಲಿಗೆ ವ್ಯಾಧಿ ಜನನಾದಿಗಳ ಬಾಧೆಯನ್ನು ಕಳೆಯುವ ಔಷಧವಾಗಿತ್ತು. ಹರಿಯ ಗುಣಗಾನ ಮಾಡಿ ಹಿಗ್ಗುವ ಭಾಗ್ಯ, ವೇದಶಾಸ್ತ್ರಾಧ್ಯಯನ, ಪರಮಾರ್ಥವಾದಿಗಳ ಸಹವಾಸ, ಹರಿದಾಸರ ಸ್ನೇಹ ಇವುಗಳಿಂದ ತಮ್ಮ ಬದುಕಿನಲ್ಲಿ ಉಂಟಾದ ಬದಲಾವಣೆಗಳನ್ನು ಹೀಗೆ ನಿರೂಪಿಸಿದ್ದಾರೆ:

೧. ನಿಟ್ಟುಸಿರು ಬಿಡಿಸಿದೆಯೋ ಹೊಟ್ಟೆಯನು ಸುಡಿಸಿದೆಯೊ
ಕಟ್ಟಕಡೆಯಲಿ ಕರವಿತ್ತು ಮೇಲೆತ್ತಿದೆಯೋ (ಕೀ. ೧೨೮)

೨. ಕೆಸರಿನಲಿ ಕಂಬದಂತಿದ್ದ ಎನ್ನಯ ಸ್ಥಿತಿಯು
ಹುಸಿಯಲಿಲ್ಲವೋ ದೇವ ಶಶಿಕುಲ ಪ್ರಸನ್ನ (ಕೀ. ೧೨೮)

೩. ನೋಡಿದೆನೋ ಈ ಭವದ ಭೋಗವು
ಬೇಡದಾಯಿತು ನಿನ್ನ ದಯದಿ
ಈಡನರಿಯೆನೋ ನಿನ್ನ ಗುಣಗಳ
ಪಾಡಿ ಹಿಗ್ಗುತ ಕುಣಿವುದಕೆ (ಕೀ ೨೨೪)

೪. ಸಿಕ್ಕಿತು ಕಾಂತಿ ಹೊಕ್ಕಿತು ಶಾಂತಿ
ಭಕ್ತ ಪ್ರಸನ್ನನು ಬಿಡಿಸಿದ ಭ್ರಾಂತಿ (ಕೀ. ೧೨೫)

ವಿದ್ಯಾಪ್ರಸನ್ನತೀರ್ಥರು ಸುಮಾರು ೩೦೦ ಹಾಡುಗಳನ್ನು ರಚಿಸಿದ್ದಾರೆ. ತಾವು ಬರೆದ ಹಾಡುಗಳನ್ನು ತಾವೇ ಹಾಡಿ, ಇತರರಿಗೂ ಹಾಡುವುದನ್ನು ಕಲಿಸಿದ್ದರು. ಅವರ ಕೆಲವು ಹಾಡುಗಳು, ಅವರ ಕಾಲದಲ್ಲೇ ಅತ್ಯಂತ ಜನಪ್ರಿಯವಾಗಿದ್ದವು. ಇವರ ಕೀರ್ತನೆಗಳ ಬಹುಭಾಗ ಕೃಷ್ಣನ ಬಾಲಲೀಲೆಗಳಿಗೆ ಸಂಬಂಧಿಸಿದ್ದು. ಸಖ್ಯ, ವಾತ್ಸಲ್ಯ ಮತ್ತು ಮಧುರ ಭಾವವನ್ನು ನಿರೂಪಿಸುವ ನೂರಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಭಾಗವತದ ಅಧ್ಯಯನ ಮತ್ತು ಪ್ರವಚನದಿಂದ ಸ್ವಾಭಾವಿಕವಾಗಿ ಮನಸ್ಸಿನಲ್ಲಿ ನೆಲೆಸಿದ್ದ ಕೃಷ್ಣಕಥೆ ಬಿಡಿಬಿಡಿಯಾದ ಹಾಡುಗಳಾಗಿದೆ. ಆತ್ಮಶೋಧನೆಯ ಮತ್ತು ನೀತಿ ಪರವಾದ ದೀರ್ಘ ಕೃತಿಗಳನ್ನೂ, ಮುಕ್ತಕಗಳನ್ನೂ ರಚಿಸಿದ್ದಾರೆ. ಅಪಾರವಾದ ಜೀವನ ಸತ್ಯಗಳ ಅನುಭವವನ್ನು ಪ್ರೌಢವಾದ ಚಿಂತನೆಗಳನ್ನು ಒಳಗೊಂಡ ಕೃತಿಗಳು ಇವು.

ಬೇರೆಯವರ ದೋಷಗಳನ್ನು ಅತ್ಯಂತ ಉತ್ಸಾಹದಿಂದ ಎತ್ತಿ ಹೇಳುವುದು ಮನುಷ್ಯನ ಸ್ವಭಾವ. ಆದರೆ ತನ್ನ ದೋಷಗಳನ್ನು ತಾನೇ ವಿಮರ್ಶಿಸಿಕೊಳ್ಳುವ ಆತ್ಮಶೋಧನೆಯಲ್ಲಿ ತೊಡಗಿದಾಗ ಉಂಟಾಗುವ ದುಃಖ ಸಹನಾತೀತವಾದುದು. ತನ್ನ ಪ್ರತಿಬಿಂಬವನ್ನು ಎಂದೂ ಕನ್ನಡಿಯಲ್ಲಿ ನೋಡಿಕೊಳ್ಳದ ವ್ಯಕ್ತಿ ತಾನು ಸುಂದರ ಪುರುಷನೆಂದೇ ಭಾವಿಸಿರುತ್ತಾನೆ. ಕನ್ನಡಿಯಲ್ಲಿ ಮುಖ ನೋಡಿಕೊಂಡು ತನ್ನ ಕುರೂಪದ ಅರಿವಾದಾಗ, ರೂಪಮದ ತಾನಾಗಿಯೇ ಇಳಿದು ಹೋಗುತ್ತದೆ. ಹೀಗೆಯೇ ನಾವು ಸುಂದರವೆಂದು ಭಾವಿಸಿರುವ ಸಮಕಾಲೀನ ಸಮಾಜವನ್ನು

ತೆರೆದ ಕಣ್ಣಿಂದ ನೋಡಿದಾಗ ಇದರ ಲೋಪದೋಷಗಳು ಅರಿವಾಗುತ್ತವೆ. ಈ ಲೋಪದೋಷಗಳ ಅರಿವಿನೊಂದಿಗೆ ಲೋಕಾನುಭವವೂ ಸೇರಿದಾಗ ಮೂಡಿದ ಭಾವನೆಗಳನ್ನು ವಿದ್ಯಾಪ್ರಸನ್ನತೀರ್ಥರು ೨೫ ಮುಕ್ತಕಗಳಲ್ಲಿ ನಿರೂಪಿಸಿದ್ದಾರೆ. (ಕೀ.೨೮೬) ಕಾಲ ಸ್ಥಿತಿಯಿಂದ ಬದಲಾಗುತ್ತಿರುವ ಮನುಷ್ಯನ ಸ್ವಭಾವ, ಸಡಿಲವಾಗುತ್ತಿರುವ ನಂಬಿಕೆಗಳು, ಸಾಮಾಜಿಕ ಬದಲಾವಣೆಗಳು, ಸಮಾಜ ನಮ್ಮನ್ನು ನೋಡುವ ರೀತಿ ಇತ್ಯಾದಿ ವಿಷಯಗಳು ಈ ಚೌಪದಿಗಳಲ್ಲಿ ಅಡಕವಾಗಿವೆ. ಯತಿಗಳಾದರೂ ಸಮಕಾಲೀನ ಸಮಾಜದ ಆಗುಹೋಗುಗಳಿಗೆ ಸ್ಪಂದಿಸಿ, ಸರಳವಾಗಿ ಪ್ರತಿಕ್ರಿಯೆ ತೋರುವುದು ಈ ರಚನೆಗಳ ವೈಶಿಷ್ಟ್ಯ.

ನಮ್ಮ ಸುತ್ತಲಿನ ಜನ ಸಮೂಹದಲ್ಲಿ ಆಪ್ತರು ಯಾರು, ಜ್ಞಾನಿಗಳು ಯಾರು, ಹಿತಶತ್ರುಗಳು ಯಾರು ಎಂಬುದನ್ನು ಗುರುತಿಸುವುದೇ ಕಷ್ಟ. ತಮ್ಮ ಕೋಳಿ ಕೂಗದೇ ಬೆಳಕು ಬಾರದು ಎಂದು ತಿಳಿದ ಸಿರಿವಂತರು, ಧಾನ್ಯದ ಮೆದೆಗೆ ಬೆಂಕಿಯಿಟ್ಟು ಅರಳು ಆರಿಸುವ ಸ್ವಾರ್ಥಿಗಳು, ಕೂತ ಕೊಂಬೆಯ ಬುಡ ಕಡಿಯುವ ಮೇಧಾವಿಗಳು, ಇಂತಹ ಆಪ್ತರನ್ನು ಆಶ್ರಯಿಸಿದರೆ ತೃಪ್ತ ಜೀವನದ ಬದಲು "ತಪ್ತ ಜೀವನ"ವನ್ನು ಅನುಭವಿಸಬೇಕಾಗುತ್ತದೆ. (ಕೀ. ೨೮೮) ಇವರ ಸ್ವಭಾವಗಳನ್ನು ತಿದ್ದಲು ಸಾಧ್ಯವಿಲ್ಲ. ಆದ್ದರಿಂದ ಇದೆಲ್ಲ ಕಾಲಮಹಿಮೆ ಎಂದು, ಮೂಲಪುರುಷನ ದಿವ್ಯಲೀಲೆಯೆಂದು ಜೀವನವನ್ನು ಸ್ವಾಭಾವಿಕವಾಗಿ ಸ್ವೀಕರಿಸಬೇಕು. (ಕೀ. ೩೦೨) ಮಾನವ ಜನ್ಮದ ಶ್ರೇಷ್ಠತೆಯನ್ನು ಅರಿತು, ತನುಭೋಗಗಳಲ್ಲಿ ಕಾಲ ಕಳೆಯದೆ ವಿವೇಕದಿಂದ ವರ್ತಿಸಬೇಕು.

೧. ಸುಲಭವಲ್ಲವೂ ನಿನಗೆ ಮನುಜ ಜನ್ಮದ ಲಾಭ
ತನುಭೋಗವಲ್ಲವೊ ಅದರ ಫಲವು (ಕೀ. ೩೦೪)

೨. ಬೊಗಳುವರಿರುವರು ಹೊಗಳುವರಿರುವರು
ಹಗರಣವೇತಕೆ ಮಾನಸದಿ
ಒಗೆಯಿರಿ ಹಗೆತನ ನಗುತ ನಗುತಲಿರಿ
ಜಗವೇ ಹೊಸಮೊಗ ತೋರುವುದು (ಕೀ. ೩೦೫)

೩.   ಯೋಗಿವಲ್ಲಭನ ಅನುರಾಗವನು ಪಡೆದವಗೆ
ಲಾಗವೆಲ್ಲವು ದೊಡ್ಡ ಯೋಗವಾಗುವುದು   (ಕೀ. ೩೧೨)

ಹೀಗೆ ಧಾರ್ಮಿಕ ತಳಹದಿಯ ಮೇಲೆ ರೂಪುಗೊಂಡ ಸಾಮಾಜಿಕ ಚಿಂತನೆಗಳು ಸರಳ ಜೀವನ ಸೂತ್ರಗಳನ್ನು ರೂಪಿಸುತ್ತವೆ.

ಮನುಷ್ಯನ ಸಾಧನೆಗಳೆಲ್ಲಾ ಮಿತಿಗೆ ಒಳಪಟ್ಟಿದ್ದೇ ಆಗಿವೆ. ಕೆರೆಯನ್ನು ದಾಟಲು ಕೂಡಾ ಅರ್ಹತೆಯಿಲ್ಲದವರು, ಶರಧಿಯನ್ನು ದಾಟಲು ಪ್ರಯತ್ನಿಸಿದಂತೆ, ಜೀವನ ಸಾಗರವನ್ನು ದಾಟುವುದು ಕಷ್ಟ. (ಕೀ. ೨೯೪) ಜನ್ಮಾಂತರವೆಂಬ ಪಾಪಗಳ ಅಲೆಯಲ್ಲಿ ಸಿಕ್ಕಿ, ಉಪ್ಪುನೀರು ಕುಡಿದು, ಅರಿಷಡ್ವರ್ಗಗಳೆಂಬ ಜಲಚರಗಳ ಉಪಟಳದಿಂದ ಸಂಸಾರನೌಕೆ ಚೂರು ಚೂರಾಗಬಹುದು. ಹರಿ ಪ್ರಸನ್ನತೆಯೊಂದರಿಂದ ಮಾತ್ರ ದಡ ತಲುಪಬಹುದು - ಎಂಬುದು ವಿದ್ಯಾಪ್ರಸನ್ನತೀರ್ಥರ ನಂಬಿಕೆ. ಈ ಪ್ರಸನ್ನತೆಯನ್ನು ಸಂಪಾದಿಸಲು ಸುಲಭವಾದ ಮಾರ್ಗ ದೃಢಭಕ್ತಿ . ತಾಳ ಮೇಳಗಳ ಗಾಯನವಾಗಲಿ, ಬಾಳೆ ಮಾವುಗಳ ವೈಭವವಾಗಲಿ ದೇವರಿಗೆ ಬೇಕಿಲ್ಲ. ನವರತ್ನ ಮಂಟಪ, ಹವಳದ ಸರ, ಧವಳ ಮುತ್ತಿನ ಹಾರ, ಈ ವೈಭವಗಳನ್ನು ಅವನೆಂದೂ ಬಯಸುವುದಿಲ್ಲ. ಭಕ್ತಿಯಿಂದ ಒಂದು ತುಲಸಿ ದಳವನ್ನು ಅರ್ಪಿಸಿದರೂ ಸಾಕು, ಅವನು ಪ್ರಸನ್ನನಾಗುತ್ತಾನೆ. ಭಕ್ತಿ ಆಡಂಬರ ರಹಿತವಾದ ಸರಳ ಆಚರಣೆಯಾಗಬೇಕು ಎಂಬುದು ವಿದ್ಯಾಪ್ರಸನ್ನತೀರ್ಥರ ಆಶಯ. (ಕೀ.೨೯೫)

ಭಕ್ತಿ ಸಂಸಾರ ವಿಮುಖವಾಗಬೇಕಿಲ್ಲ. ವರ್ಣಾಶ್ರಮಧರ್ಮಗಳ ಅರಿವನ್ನು ಹೊಂದಿ ಸತ್ಕರ್ಮಗಳನ್ನು ಆಚರಿಸುವ ಭಕ್ತರು ಸಂಸಾರಿಗಳಾಗಿದ್ದರೂ ಪೂರ್ಣ ಸುಖ ಜ್ಞಾನಗಳನ್ನು ಪಡೆಯಲು ಅರ್ಹರು (ಕೀ. ೨೯೭) ಎಂದು ತಿಳಿಸಿರುತ್ತಾರೆ. ಮನೆ ಮನೆಯೂ ಹರಿಯ ಆಲಯವಾಗಬೇಕು ಎಂಬುದು ವಿದ್ಯಾಪ್ರಸನ್ನತೀರ್ಥರ ಆಸೆ. ಇಂದಿನ ಪರಿಸ್ಥಿತಿಯಲ್ಲಿ ಮನುಷ್ಯನ ಸದಾಚಾರವನ್ನು ದೂರವಾಗಿಸುವ. ಯಾವುದೇ ಹೊಸ ನೀತಿಗಳ ಕಲ್ಪನೆಯಿಂದ ಲೋಕಹಿತ ಸಾಧನೆಯಾಗಲಾರದು (ಕೀ. ೩೦೯) ಎಂಬುದು ಇವರ ಸ್ಪಷ್ಟ ನಿಲುವು.

ಉದಯದಲ್ಲಿ ನದಿಯ ಸ್ನಾನ, ಹರಿಯ ಪಾದೋದಕ ಪಾನ, ಧ್ಯಾನ, ಜಪ, ತಪ, ಪ್ರವಚನ ಇವುಗಳನ್ನು ಮಾಡುತ್ತ ಸಜ್ಜನ ಸಂಪರ್ಕದಲ್ಲಿ ಕಾಲಕಳೆಯುವುದೇ ಯತಿಧರ್ಮ (ಕೀ. ೩೨೮) ಎಂದು ದೃಢವಾಗಿ ನಂಬಿದ್ದ ವಿದ್ಯಾಪ್ರಸನ್ನತೀರ್ಥರು ಲೌಕಿಕ ವಿಷಯಗಳಿಗೆ ಆಧ್ಯಾತ್ಮಿಕ ಅರ್ಥ ನೀಡಿ ಕೃತಿಗಳನ್ನು ರಚಿಸಿದರು. ಆಟವಾಡಬೇಕು (ಕೀ. ೩೨೨), ನಾಟಕವಿದು ಹಳೆ ನಾಟಕ (ಕೀ. ೩೩೦), ಬೇಸಾಯ ಮಾಡಬೇಕು (ಕೀ. ೩೩೩), ಸ್ವಾಂತವ ತೊಳೆಯುತಲಿರಬೇಕು (ಕೀ. ೩೩೯), ಭೋಗ ಬೇರಿಹುದಣ್ಣ (ಕೀ. ೩೬೬), ಭಿಕ್ಷಾಂದೇಹಿ (ಕೀ. ೩೩೫) ಈ ಕೃತಿಗಳನ್ನು ಉದಾಹರಿಸಬಹುದು. ವಿದ್ಯಾಪ್ರಸನ್ನತೀರ್ಥರ "ನೀತಿಸಾರ" ೨೦೦ ಪಾದಗಳ ದೀರ್ಘಕೃತಿ. ಲೋಕಾನುಭವದ ಹಿನ್ನೆಲೆಯಲ್ಲಿ ನಿರೂಪಿಸಿರುವ ನೀತಿಮಾತುಗಳು ಇಲ್ಲಿವೆ. ತಮ್ಮ ಹಾಡುಗಳಲ್ಲಿ ನೀತಿ ನಿರೂಪಿಸುವಾಗ ಮಾತು ಮಾತಿಗೆ ಗಾದೆಗಳನ್ನು ಬಳಸಿ ತಮ್ಮ ಅಭಿಪ್ರಾಯವನ್ನೂ ಸಮರ್ಥಿಸುತ್ತಾರೆ. ಉದಾಹರಣೆಗೆ:

೧. ಎಲ್ಲರ ಮನೆಯ ದೋಸೆಯು ತೂತು (ಕೀ. ೨೯೧)
೨. ಗಾಜಿನ ಮನೆಯಲಿ ವಾಸಿಸುವವ ಪರ ಗೇಹಕೆ
ಕಲ್ಲುಗಳೆಸೆಯಬಹುದೆ (ಕೀ. ೨೯೧)
೩. ಗೂಳಿಯು ಹಳ್ಳಕೆ ಬಿದ್ದ ಕಾಲದಲಿ ಆಳಿಗೊಂದು
ಕಲ್ಲೆಸೆಯುವರು (ಕೀ. ೨೯೧)
೪. ದೊಂಬ ನಾಟಕವಾಡಿ ಚೊಂಬು ಪಿಡಿದಂತೆ (ಕೀ. ೨೮೯)
೫. ಕೋಳಿ ಕೂಗದೆ ಬೆಳಕು ಬಾರದು (ಕೀ. ೨೮೮)
೬. ಬರಿಯ ಪಾತ್ರೆಗಳು ಬಹಳ ಸದ್ದಂತೆ (ಕೀ. ೨೮೭)
೭. ಕುದುರೆ ಜೂಜಿನಲಿ ಪಣ ಕಟ್ಟಿದಂತೆ (ಕೀ. ೨೯೨)
೮. ಕಮಲ ಪತ್ರದಲಿಹ ಜಲದ ಕಣದಂತೆ (ಕೀ. ೨೯೬)
೯. ಕುಳಿತ ಕೊಂಬೆಗೆ ಕೊಡಲಿ ಹಾಕೋರು (ಕೀ. ೨೯೯)
೧೦. ಸಂತೆಗೆ ಸೇರುವ ಗಂಟು ಕಳ್ಳರು (ಕೀ. ೩೧೧)

೧೧. ಗಳಿಸಿದವನ ದನ ಬಳಸಿದವನಿಗೆ (ಕೀ. ೩೦೩)
೧೨. ಹಾವು ಕೊಂದು ಹದ್ದಿಗೆ ಹಾಕು (ಕೀ. ೩೧೬)
೧೩. ಬೀಸಿದ ಗುಂಡಗೆ ಬುಕ್ಕಿದ್ದೇ ಲಾಭ (ಕೀ. ೩೩೨)
೧೪. ಮಣಿಯನಿತ್ತು ಮರಿಯ ಕೊಂಬಂತೆ (ಕೀ. ೧೫೮)

ಹೀಗೆ ನೂರಕ್ಕೂ ಹೆಚ್ಚು ಗಾದೆಗಳನ್ನು ಇವರ ಕೃತಿಗಳಲ್ಲಿ ಕಾಣಬಹುದು.

ಹರಿಕೀರ್ತನೆ, ಆತ್ಮಶೋಧನೆ, ಲೋಕನೀತಿ., ಸಂಪ್ರದಾಯದ ಹಾಡುಗಳು ಇವುಗಳ ಜೊತೆಗೆ "ಕೂಡಿಟ್ಟ ಕೈ" ಮತ್ತು "ಜಿಹ್ವಾಚಾಪಲ್ಯ" ಎಂಬ ನಾಟಕಗಳನ್ನು ವಿದ್ಯಾಪ್ರಸನ್ನತೀರ್ಥರು ಬರೆದಿದ್ದಾರೆ. ಹರಿದಾಸ ಸಾಹಿತ್ಯದಲ್ಲಿ ಸ್ವತಂತ್ರ ರಚನೆಗಳು ಕಡಿಮೆಯಾಗುತ್ತಾ, ಧಾರ್ಮಿಕ ಚಿಂತನೆಗಳೂ ಮತ್ತು ಆಚರಣೆಗಳು ಸಡಿಲವಾಗುತ್ತಿದ್ದ ಕಾಲದಲ್ಲಿ ಶ್ರೀ ಪಾದರಾಜರ, ವ್ಯಾಸರಾಜರ ಸಂಪ್ರದಾಯವನ್ನು ಉಳಿಸಲು ಪ್ರಯತ್ನಿಸಿದವರು ವಿದ್ಯಾಪ್ರಸನ್ನತೀರ್ಥರು. ಸಂಪ್ರದಾಯ, ಭಕ್ತಿ ಮತ್ತು ಸಮಕಾಲೀನತೆಗಳನ್ನು ಮೇಳವಿಸಿ ೨೦ ನೆಯ ಶತಮಾನದಲ್ಲೂ ಹರಿದಾಸ ಸಾಹಿತ್ಯವನ್ನು ಚೈತನ್ಯಪೂರ್ಣವಾಗಿ ಬೆಳೆಸಿದರು. ಈ ದೃಷ್ಟಿಯಿಂದ ವಿದ್ಯಾಪ್ರಸನ್ನತೀರ್ಥರು ಹರಿದಾಸ ಸಾಹಿತ್ಯಚರಿತ್ರೆಯಲ್ಲಿ ಉಲ್ಲೇಖನೀಯರಾಗಿದ್ದಾರೆ.

ಶ್ರೀ ಪ್ರದ್ಯುಮ್ನತೀರ್ಥರು (೧೮೯೦-೧೯೭೫)

ಸಾಗರ ಕಟ್ಟೆ ಮಠದ ಪ್ರದುಮ್ನತೀರ್ಥರು "ನರಹರಿ" ಅಂಕಿತದಲ್ಲಿ ದೇವರನಾಮಗಳನ್ನು ಬರೆದಿರುವ ಯತಿಗಳು. ಸಂಸ್ಕೃತ ಪಾಂಡಿತ್ಯ ಮತ್ತು ತತ್ವಜ್ಞಾನಗಳಲ್ಲಿ ಶ್ರೇಷ್ಠ ಸಾಧನೆ ಮಾಡಿದ್ದ ಪ್ರದ್ಯುಮ್ನತೀರ್ಥರು ಕನ್ನಡದಲ್ಲೂ ಕೆಲವು ಕೃತಿಗಳನ್ನು ರಚಿಸಿ, ದಾಸಪರಂಪರೆಯನ್ನು ಬೆಳೆಸಿದರು. ಪ್ರದ್ಯುಮ್ನತೀರ್ಥರ ಪೂರ್ವಾಶ್ರಮದ ಹೆಸರು ವ್ಯಾಸರಾಯಾಚಾರ್ಯ. ಧಾರವಾಡ ಜಿಲ್ಲೆಯ ಬಂಕಾಪುರ ಇವರ ಜನ್ಮಸ್ಥಳ. ಇವರ ತಂದೆ ವೆಂಕಟರಮಣಾಚಾರ್ಯರು ವಿದ್ವಾಂಸರೂ, ಪ್ರಸಿದ್ಧ ಪುರಾಣಿಕರೂ ಆಗಿದ್ದರು. ಕೊನೆಗೆ ಸನ್ಯಾಸಾಶ್ರಮವನ್ನೂ ಕೈಗೊಂಡಿದ್ದರು.

ವ್ಯಾಸರಾಯಾಚಾರ್ಯರು ಮುಳುಬಾಗಿಲು ಮಠದ ಮೇಧಾನಿಧಿತೀರ್ಥರ ಬಳಿ ವ್ಯಾಸಂಗ ಮಾಡಿದರು. ಮೊದಲಿನಿಂದಲೂ ವೈರಾಗ್ಯಶಾಲಿಗಳಾಗಿದ್ದ ಅವರು ಸಂಸಾರ ತ್ಯಾಗವಾಡಿ ಮಂತ್ರಾಲಯದಲ್ಲಿ ಸೇವೆಸಲ್ಲಿಸಿದರು. ಅನಂತರ ಕುಂದಾಪುರ ವ್ಯಾಸರಾಜ ಮಠಾಧೀಶರಾದ ಲಕ್ಷ್ಮೀಪ್ರಿಯತೀರ್ಥರಿಂದ ಸನ್ಯಾಸ ಸ್ವೀಕರಿಸಿದರು. ಅನಂತರ ಮೈಸೂರು ಸಮೀಪದ ಸಾಗರಕಟ್ಟೆಯಲ್ಲಿ ಬಹಳ ಕಾಲ ನೆಲಸಿ ಮಠವನ್ನು ಸ್ಥಾಪಿಸಿದರು.

ಪ್ರದ್ಯುಮ್ನತೀರ್ಥರು ರಚಿಸಿದ ೪೪ ಕೀರ್ತನೆಗಳನ್ನು ಕರ್ನಾಟಕ ಹರಿದಾಸ ಸೈಂಟಿಫಿಕ್ ರಿಸರ್ಚ್ ಸೆಂಟರ್ ಅವರು ಈಚೆಗೆ ಪ್ರಕಟಿಸಿದ್ದಾರೆ. ಇವುಗಳಲ್ಲಿ ಬಹುಪಾಲು ಗುರುಸ್ತುತಿಗಳೇ ಆಗಿವೆ. ಆತ್ಮಶೋಧನೆಯ ಕೃತಿಗಳು ಕೂಡಾ ಕೇವಲ ಸಾಂಪ್ರದಾಯಕವಾಗಿವೆ. ವಿಷಯಾಸಕ್ತಿ, ಡಂಭತನ, ಆತ್ಮಪ್ರಶಂಸೆ, ಮೊದಲಾದ ಕೇಡುಬುದ್ಧಿಗಳಲ್ಲಿ ಘನತೆಯನ್ನು ಕಳೆದುಕೊಂಡು ಬದುಕಿದ ರೀತಿಯನ್ನು ನಿರೂಪಿಸಿದ್ದಾರೆ. "ಕಾಯಬಾಂಧವರ ಮಾಯಪಾಶ" ದಿಂದ ದೂರವಾಗಿ "ದೇಹಗೇಹದಲ್ಲಿನ ಸ್ನೇಹ" ಕಳೆದುಕೊಂಡು, ವೈರಾಗ್ಯನೀಡಬೇಕೆಂದು ದೇವರನ್ನು ಪ್ರಾರ್ಥಿಸುತ್ತಾರೆ. ಯತಿಸ್ತುತಿಗಳಲ್ಲೂ ಇದೇ ರೀತಿಯ ಪ್ರಾರ್ಥನೆ ಇದೆ.

೧. ರತಿಪತಿ ಆಟವನು ಖಂಡಿಸಿ ಬೇಗದಲಿ
ಮತಿತಪ್ಪಲೆನಗೆ ದುರ್ವಿಷಯದೊಳಗೆ (ಕೀ. ೩೪೩)

೨. ಮುಕ್ತಿದಾಯಕ ನಮ್ಮ ವಿಠ್ಠಲನ ಚರಣದಲಿ
ಭಕ್ತಿ ದೃಢವಾಗಿ ಎನಗಿತ್ತು ರಕ್ಷಿಸಲಿ (ಕೀ. ೩೦೩)

೩. ಹೀನಬುದ್ಧಿಯ ಕಳಿ ಜ್ಞಾನಮಾರ್ಗವ ತೋರೆ (ಕೀ. ೩೮೦)

೪. ಅಂಗಜಜನಕ ಶ್ರೀ ನರಹರಿಯ ಧ್ಯಾನಿಸದೆ
ಭಂಗಕೆ ಗುರಿ ಮಾಳ್ಪ ಮಣ್ಣು ಚಿಂತಿಪೆನೊ (ಕೀ. ೩೯೭)

೫. ಎಷ್ಟು ಪೇಳಲಿ ಎನ್ನ ದುಷ್ಟ ಕರ್ಮಗಳನ್ನು
ಜ್ಯೇಷ್ಠದೂತನೆ ಎನ್ನ ಕಷ್ಟ ಬಿಡಿಸೋ (ಕೀ. ೪೦೧)

ಹೀಗೆ ಆತ್ಮಶೋಧನೆಯಿಂದ ಪರಿಶುದ್ಧಗೊಂಡು ಹರಿಸೇವೆಯನ್ನು ಬಯಸುವ ಸಾಧಕ ಜೀವಿಯ ಮನಸ್ಥಿತಿಯನ್ನು ಇಲ್ಲಿ ಅರಿಯಬಹುದು. ಪ್ರದ್ಯುಮ್ನತೀರ್ಥರ ಕೃತಿಗಳಲ್ಲಿ ಅತಿಯಾದ ಶಾಸ್ತ್ರ ಪಾಂಡಿತ್ಯವಿಲ್ಲ. ಹಾಗೆಯೇ ಲೋಕಾನುಭವದ ಅಭಿವ್ಯಕ್ತಿಯೂ ಇಲ್ಲ. ನೀತಿ ಪ್ರತಿಪಾದನೆಗೂ ಇಲ್ಲಿ ಅವಕಾಶ ಕಡಿಮೆ. ತಾವು ನಂಬಿದ್ದ ತತ್ವಜ್ಞಾನ ಮತ್ತು ಸಿದ್ಧಾಂತ ಮಿತಿಯಲ್ಲಿಯೇ ಕೀರ್ತನೆಗಳನ್ನು ರಚಿಸಿದ್ದಾರೆ. ವಾದ, ತರ್ಕ, ಖಂಡನೆ ಮಂಡನೆಗಳಿಂದ ಹೊರತಾದ ಭಕ್ತಿಯನ್ನು ಮಾತ್ರ ನಾವಿಲ್ಲಿ ಗುರುತಿಸಬಹುದು. ಅದರಲ್ಲೂ ದಾಸ್ಯಭಕ್ತಿ ಮತ್ತು ಶರಣಾಗತಿಯೇ ಇವರ ಕೀರ್ತನೆಗಳ ಮುಖ್ಯಭಾವ.

ಈ ಸಂಪುಟದಲ್ಲಿ ಏಳು ಮಂದಿ ಯತಿಗಳ ೪೦೭ ಕೃತಿಗಳಿವೆ. ಶ್ರೀಪಾದರಾಜ, ವ್ಯಾಸರಾಜ, ವಾದಿರಾಜರಂತೆ ಪೀಠಾಧಿಪತಿಗಳಾಗಿದ್ದು, ಅವರ ಪರಂಪರೆಯನ್ನು ಮುಂದುವರಿಸಿದ ಯತಿಗಳು ಇವರು. ಅಗಾಧವಾದ ಸಂಸ್ಕೃತ ಪಾಂಡಿತ್ಯ ಮತ್ತು ದ್ವೈತ ಸಿದ್ಧಾಂತದ ತಲಸ್ಪರ್ಶಿಯಾದ ಶಾಸ್ತ್ರಜ್ಞಾನ ಇವರಿಗಿತ್ತು. ತಮ್ಮ ಜ್ಞಾನ ಪಾಂಡಿತ್ಯಗಳನ್ನು ಸಂಸ್ಕೃತ ಕೃತಿಗಳಲ್ಲಿ ನಿರೂಪಿಸಿ, ಕನ್ನಡದಲ್ಲಿ ಹಾಡುಗಳನ್ನು ರಚಿಸಿರುವುದು ಈ ಯತಿಗಳ ವೈಶಿಷ್ಟ್ಯ. ಭಕ್ತಿ ಮತ್ತು ನೀತಿಗಳು ಜನಸಾಮಾನ್ಯರನ್ನು ತಲುಪಬೇಕೆಂಬ ಉದಾತ್ತ ಧ್ಯೇಯವನ್ನು ಇಲ್ಲಿ ಕಾಣಬಹುದು. ಸಂಖ್ಯಾದೃಷ್ಟಿಯಿಂದಲೂ, ವೈಚಾರಿಕ ದೃಷ್ಟಿಯಿಂದಲೂ ಹೆಚ್ಚಿನ ಸಂಖ್ಯೆಯ ಕೀರ್ತನೆಗಳನ್ನು ಬರೆದಿರುವ ಶ್ರೀ ವಿದ್ಯಾ ಪ್ರಸನ್ನತೀರ್ಥರ ಹೆಸರನ್ನು ಈ ಸಂಪುಟಕ್ಕೆ ಕೊಡಲಾಗಿದೆ.

ಈ ಸಂಪುಟದ ಸಿದ್ಧತೆಯಲ್ಲಿ ಹಲವು ಆಕರಗಳನ್ನು ಬಳಸಿಕೊಳ್ಳಲಾಗಿದೆ.

೧. ಶ್ರೀ ರಾಜಾ ಎಸ್. ಗುರುರಾಜಾಚಾರ್ಯರ
"ಅಜಯ್ಯ ವಿಜಯೀಂದ್ರರು" ಗ್ರಂಥದಲ್ಲಿನ
"ವಿಜಯೀಂದ್ರತೀರ್ಥರ ಕೃತಿಗಳು"

೨. ಶ್ರೀ ಗೋರಬಾಳ ಹನುಮಂತರಾಯರು ಪ್ರಕಟಿಸಿರುವ
ವಾಸುದೇವವಿಠ್ಠಲರ ಕೃತಿಗಳು (೧೯೫೬)

೩. ಶ್ರೀ ಐ.ಜಿ. ಶ್ರೀನಿವಾಸಾಚಾರ್ಯರು ಸಂಪಾದಿಸಿರುವ
ಶ್ರೀ ವಾಸುದೇವವಿಠಲರ ಕೃತಿಗಳು (೧೯೯೩)

೪. ವ್ಯಾಸರಾಜಮಠದ ಪ್ರಕಟನೆಗಳಾದ
(ಅ) "ವಿದ್ಯಾರತ್ನಾಕರತೀರ್ಥರ ಸ್ತೋತ್ರಗಳು ಮತ್ತು ಗೀತೆಗಳು" (೧೯೮೯)
(ಆ) "ವಿದ್ಯಾಪ್ರಸನ್ನತೀರ್ಥರ ಕೃತಿಗಳು" (೧೯೮೪)
(ಇ) "ವಿದ್ಯಾಪ್ರಸನ್ನತೀರ್ಥ ಶ್ರೀಪಾದಂಗಳವರ ಕೃತಿಗಳು" (೧೯೯೯)

೫. ಪ್ರಸನ್ನ ಸಾಹಿತ್ಯ ಸೌರಭ(೨೦೦೨) ಸಂಪಾದಕರು :
ಶ್ರೀ ಟಿ.ಎನ್. ಜಯತೀರ್ಥಾಚಾರ್.

೬. ಕರ್ನಾಟಕ ಹರಿದಾಸ ಸೈಂಟಿಫಿಕ್ ರಿಸರ್ಚ್‌ಸೆಂಟರ್ – ಇವರು
ಪ್ರಕಟಿಸಿರುವ ಶ್ರೀ ಪ್ರದ್ಯುಮ್ನತೀರ್ಥ ಶ್ರೀಪಾದಗಳವರಿಂದ ವಿರಚಿತ
"ದೇವರ ನಾಮಗಳು".

ಈ ಎಲ್ಲ ಗ್ರಂಥಸಂಪಾದಕರಿಗೂ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಈ ಸಂಪುಟವನ್ನು ಸಿದ್ಧಪಡಿಸುವಲ್ಲಿ ವಿಷಯವಾರು ಕೀರ್ತನೆಗಳ ವಿಂಗಡನೆ, ಟಿಪ್ಪಣಿ ಮತ್ತಿತರ ಅನುಬಂಧಗಳ ಸಿದ್ಧತೆ, ಆಕರ ಗ್ರಂಥಗಳ ನೆರವು– ಹೀಗೆ ಹಲವು ರೀತಿಯ ಮಾರ್ಗದರ್ಶನ ನೀಡಿದವರು ಡಾ॥ ಶ್ರೀನಿವಾಸ ಹಾವನೂರ ಅವರು.

ಈ ಸಂಪುಟದ ಶುದ್ಧಪ್ರತಿಯನ್ನು ಸಿದ್ಧಪಡಿಸುವಲ್ಲಿ ಕನ್ನಡ ಉಪನ್ಯಾಸಕರಾದ ಶ್ರೀ ಎಸ್. ಬಿಳಿಗಿರಿವಾಸನ್ ಮತ್ತು ಶ್ರೀ ಚಂದ್ರಶೇಖರ್ ಅವರು ಸಹಾಯ ಮಾಡಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳು, ಪದವಿಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರು ಮತ್ತು ಬಿ. ಎಚ್. ಎಸ್. ಆಡಳಿತ ಮಂಡಲಿಯವರು ನೀಡಿದ ಸಹಾಯ ಮತ್ತು ಸಹಕಾರಗಳಿಂದ ಈ ಸಂಪುಟ ಸಿದ್ಧವಾಗಿದೆ. ಈ ಎಲ್ಲರಿಗೂ ನಾನು ಅತ್ಯಂತ ಕೃತಜ್ಞನಾಗಿದ್ದೇನೆ.

ಭಕ್ತಿ ಸಾಹಿತ್ಯವನ್ನು ಜನ ಸಾಮಾನ್ಯರಿಗೆ ತಲುಪಿಸುವ ಕಾರ್ಯದಲ್ಲಿ ಹರಿದಾಸರಂತೆಯೇ ಕೆಲವು ಮಠಾಧೀಶರು ತಮ್ಮದೇ ಆದ ಕಾಣಿಕೆಯನ್ನು ಸಲ್ಲಿಸಿದ್ದಾರೆ. ಪೂರ್ವಾಗ್ರಹಗಳಿಲ್ಲದೆ ಕನ್ನಡಾಭಿಮಾನವನ್ನು ತೋರಿದ್ದಾರೆ ಎಂಬುದು ಈ ಸಂಪುಟದಲ್ಲಿ ವ್ಯಕ್ತವಾದರೆ ನನ್ನ ಶ್ರಮ ಸಾರ್ಥಕವಾದಂತೆ.

ಡಾ. ಅನಂತಪದ್ಮನಾಭರಾವ್.

ಕೀರ್ತನೆಗಳ ಕ್ರಮಸೂಚಿ

ಕೀರ್ತನೆ ಸಂಖ್ಯೆ	ಕೀರ್ತನೆಯ ಮೊದಲ ಸಾಲು	ಪುಟ ಸಂಖ್ಯೆ

ಶ್ರೀ ವ್ಯಾಸತತ್ವಜ್ಞರ ಕೃತಿಗಳು

ಭಗವಂತನ ಸಂಕೀರ್ತನೆ

ಕೀರ್ತನೆ ಸಂಖ್ಯೆ	ಕೀರ್ತನೆಯ ಮೊದಲ ಸಾಲು	ಪುಟ ಸಂಖ್ಯೆ

ಗುರುಸ್ತುತಿ

ಆತ್ಮ ನಿವೇದನೆ

ವಿದ್ಯಾ ಪ್ರಸನ್ನತೀರ್ಥರ ಕೃತಿಗಳು

ಭಗವಂತನ ಸಂಕೀರ್ತನೆ

ಕೀರ್ತನೆ ಸಂಖ್ಯೆ	ಕೀರ್ತನೆಯ ಮೊದಲ ಸಾಲು	ಪುಟ ಸಂಖ್ಯೆ

ಲೋಕನೀತಿ

ವಿಶೇಷ ಸಂದರ್ಭ

ಪ್ರದ್ಯುಮ್ನತೀರ್ಥರ ಕೃತಿಗಳು

ಗಣೇಶ ಸ್ತುತಿ

ಭಗವಂತನ ಸಂಕೀರ್ತನೆ

ಶ್ರೀ ವಿಜಯೀಂದ್ರತೀರ್ಥರ ಕೀರ್ತನೆಗಳು

೧

ಉಗಾಭೋಗ

ತಪ್ಪುಗಳನರಸ ತನ್ನ ನಂಬಿದವರ ಶ್ರೀಪತಿ
ತಪ್ಪುಮಾಡಿದ ಅಜಮಿಳ ಉಮಾಪತಿ ಮುಖರ
ತಪ್ಪು ನೋಡಿದನೆ ಎ
ನ್ನಪ್ಪ ಶ್ರೀವಿಜಯೀಂದ್ರರಾಮ ದಯಾನಿಧಿ

೨

ಸುಳಾದಿ

ಅಟ್ಟತಾಳ

ಪರಬೊಮ್ಮ ಹರಿಯು ತಾ ನರರೂಪವ ತಾಳಿದ
ನರನಾದ ದಶರಥನ ವರದೇಹದಲವತರಿಸಿ
ಸಿರಿರಾಮನೆಂಬ ಪುಣ್ಯನಾಮದಿಂದ ಮೆರೆವುತ್ತಿರೆ
ಹರುಷದಿಂದ ಲೀಲೆಗೈದು ಕರೆಯ ಬಂದ ಕೌಶಿಕನ
ಉರು ಯಜ್ಞ ವಿಘ್ನವನು ಪರಿಹರಿಸುವುದಕ್ಕಾಗಿ ಪರಬೊಮ್ಮ
ಪರಿತಂದು ವಿಘ್ನವನು ಪರಿಹರಿಸಿದ ಮುನಿವರನ
ಹರುಷದಿಂದ ಪರಮಾನಂದ ಶರಧಿಯಲೋಲಾಡಿಸಿದ
ಸಿರಿ ವಿಜಯೀಂದ್ರ ನಾಮ ಹೊರೆಯಲೆಮ್ಮ ಯಾವಾಗಲೂ ೧

ಮಠ್ಯ

ಈತನೆಂತು ಯಜ್ಞದ ವಿಘ್ನವ ಪರಿಹರಿಸುವ
ಪೋತ ಮಹಾದ್ಭುತರಂತಿಹ ರಕ್ಕಸರ
ವೀತ ಭಯನಾಗಿ ಕೊಲ್ಲುವುದೆಂತೊ
ಭೂತಳಕಚ್ಚರಿ ವಿಜಯೀಂದ್ರ ರಾಮನ ಚರಿತ ೨

ರೂಪಕ

ಜನಕನೆಂಬ ಜನಪತಿಯ ಮನೆಗೆ ಹೋಗಿ
ಜಾನಕಿಯ ಮನಕೆ ಹರುಷವಪ್ಪಂತೆ
ಜನಪದ ಕೈವಾರಿಸುತ್ತಿರೆ ಮನಕೆ
ಅಣಕವಾಡಿ ಶಿವನಧನುವ ಮುರಿದ ವಿಜಯೀಂದ್ರರಾಮ
ಮನಕೆ ಹರುಷವಪ್ಪಂತೆ ೩

ಝಂಪೆ

ಇವನರ್ಭಕನೆ ಇವನ ಮುನಿಗಳಾದವರೆಲ್ಲ ಮನದಿ
ಭಾವಿಸಿ ಕಾಣದೆಂಬುದರಿಯಾ ಎಲೆ ರಮಣಿ
ಭುವನ ಪಾವನ ನಾಮ ಸಿರಿ ವಿಜಯೀಂದ್ರರಾಮ
ಭಾವಿಸೆ ಮನದಿ ೪

ತ್ರಿಪುಟ

ರಾಮ ಜಾನಕಿಯ ಮದುವೆಯಾಗಿ ಬರುವಾಗ ಪರಶು–
ರಾಮನಿದಿರಸಿ ಅವನ ಬಿಲ್ಲನೇರಿಸಿ ಮೆರೆದ
ರಾಮನಿದಿರಸಿ ಶ್ಯಾಮಲಾಂಗ ವಿಜಯೀಂದ್ರ
ರಾಮ ಬಾಲಕನೆ ಹೇಳಾ ೫

ಅಟ್ಟ

ನೊಸಲಲಿ ಕಣ್ಣು ಪಡೆದವನ ಗೆಲಿದೆ
ಅಸುಳೆಯೆಂದು ಬೆಂಕೊಂಡು ಕಂದನ ಕಾಯ್ದೆ
ಕುಸುರಿಜವಕೊಂದೆ ಬಾಣದಿಂದ ನಿಮಿಷದಿ
ಅಸಮ ವಿಕ್ರಮ ವಿಜಯೀಂದ್ರರಾಮ ಜಗದೊಳು ೬

ಏಕ

ಉರವಣಿಸಿ ಬಹ ತಾಟಕಿಯ ಮಹಾ
ಕರಗಳ ನಿಮಿಷದಿ ಕತ್ತರಿಸುಯೆಂದು
ಹಿರಿಯರು ಪೇಳಲಿದಿರು ಪೇಳದೆ ಅಸುರೆಯ
ಕರಗಳ ಕಡಿದ ವಿಜಯೀಂದ್ರರಾಮ
ಸರಸಿಜಾಸನ ವಿನುತ ಸಿರಿ ಮೂಲರಾಮ ೭

ಜತೆ

ಲೋಕಾಭಿರಾಮ ಸದ್ಗುಣಧಾಮ
ಲೋಕೈಕಭೌಮ ವಿಜಯೀಂದ್ರರಾಮ ೮

೩

ಚಂದಿರರಾಮನ ರಾಣಿ ಸೀತೆಯ ಮುಖ
ದಂದಕೆ ಸೋತು ಲಜ್ಜೆಯಿಂದ ರಾತ್ರಿಚರನಾದ ಪ

ಭಾರತಿ ಮೊದಲಾದ ಸತಿಯರಕ್ಷಿ ಕುಮುದ
ಕೋರಿಕೆ ಬಿರಿಯೆ ರಾಜಿತ ಚಕೋರ

ಪಾರವಾರವೆಂಬ ಸುರನಿಕರ ನಲಿಯೆ
ವಾರಿಜಮುಖಿಯ ಆನಂದ ಶರಧಿಯುಕ್ಕೆ ೧

ನೊಸಲಲೊಪ್ಪುವ ಕಸ್ತೂರಿತಿಲಕ ಕಲಂಕ
ಹೊಸ ಮುತ್ತಿನೋಲೆ ವರಹಾರದ
ಕುಸುಮ ತಾರೆಗಳಾಗೆ ಆ ಕಿರಣ ಲೋಕಂಗಳು
ನಸುನಗು ಬೆಳದಿಂಗಳಾಗೆ ನಗೆಗೀಡಾಯಿತೆಂದು ೨

ನಂದ ಮೂರುತಿ ವಿಜಯೀಂದ್ರಸ್ವಾಮಿ ರಾಮ
ಚಂದ್ರ ಸೀತೆಯ ಮುಖದೊಳು ಮುಖವ
ಸಂದಿಸೆ ಉಪರಾಗದಿ ಪೋಲ್ವ ಈಶ್ವರ ಹಾರ
ಮಂದಾಕಿನಿ ಯಮುನ ಎಂದಾಗ ಅವರು ಮೀಯೆ ೩

೩(ಅ)

ಸುಳಾದಿ

ಧ್ರುವ ತಾಳ

ಯಾಕೆಲ ಮನವೇ ನೀ ಎನ್ನ ಕೀಕಟ ದೇಶಕ್ಕೆ ಶಳದು ಇಂದು
ಲೋಕೈಕನಾಥ ಹರಿಯ ಪಾದಕೆನ್ನನು ದೂರನ ಮಾಡಿ ಇಂದು ಮಾ-
ಯಕ್ಕೆಲ ಜಿಹ್ವೆ ಲೋಕ ವಾರ್ತೆಗಳ ಸೇವಿಪದು
ಶ್ರೀಕಾಂತನ ವಾರುತಿ ನುಡಿಸದಂತೆ ಮಾಡಿದೆಯಾ
ಯಾಕೆಲ ಕಿವಿಯೆ ಪೋಕರ ಆಲಾಪಗಳ ಕೇಳಿ ಕೆಡದೀ
ಸಾಕು ಸಾಕು ನಿಮ್ಮ ಸಂಗತಿ ಎಂಬಂತೆ ನೀ ಮಾಡಿದಿ
ಯಾಕೆಲ ಕಣ್ಣೆ ಪರವಧುಗಳ ಆಲೋಕಿಸಿ ಎನ್ನನು ಬಯಸಿದಿ
ಕಾಕು ಮಾಡದೆನ್ನ ಸಿರಿ ವಿಜಯೀಂದ್ರರಾಮನ್ನ ಆಗಲಿಸಿದಿ ೧

ಮಟ್ಟತಾಳ

ಹರಿಚಿಂತನ ನಾಮ ಮೂರುತಿ ಕೀರುತಿಗಳ
ವಿರಚಿಸಿ ಸವಿಯದ ನೋಡದ ಕೇಳದ
ಕರಣಗಳಿದ್ದಡೆ ಇಲ್ಲದಿದ್ದಡೇನೊ
ಹರಿಗೆ ಸಮ್ಮುಖವಾಗದ ಕಾರಣ
ಕರಣಂಗಳ ಶಿರವಳಿವದೊಳಿತೊ
ಸಿರಿ ವಿಜಯೀಂದ್ರರಾಮನಲ್ಲದನ್ಯ ವಿಷಯ-
ಕ್ಕೆರಗುವ ಕರಣಂಗಳ ಶಿವರಿವದ್ದೊಳಿತೊ ೨

ರೂಪಕತಾಳ

ಮನುಮಥನಯ್ಯನಕಿಂತ ಕಡು ಚಲ್ವನಾವನೊ।
ವನಜ ಭವನ ತಂದೆಕಿಂತ ದೇವರೊಳದಾವನೊ।
ಮುನಿ ಮನಕೆ ಗೋಚರನಾಗಿ ತೋರಿ ತೋರನದಾವನೊ।
ಘನ ವಿಜಯೀಂದ್ರರಾಮ ಪೊರೆಯಲೆಮ್ಮನುದಿನ ೩

ಝಂಪತಾಳ

ನಿನ್ನ ಕೀರುತಿ ಕಿವಿಗೆ ನಾಮ ಎನ್ನ ನಾಲಿಗೆ ।
ಎನ್ನ ಕಣ್ಣಿಗೆ ನಿನ್ನ ಮೂರ್ತಿ ದೊರೆಯಲೊ।
ಎನ್ನ ಮನಕೆ ನೆನೆವ ಸಿರಿ ವಿಜಯೀಂದ್ರರಾಮ
ಎನ್ನ ಕಣ್ಣಿಗೆ ನಿನ್ನ ಮೂರ್ತಿ ದೊರೆಯಲೊ। ೪

ತ್ರಿವಿಡಿತಾಳ

ಮೂರೇಳು ಕರಣಂಗಳಿರೇ ನೀವು।
ಸಿರಿ ಪತಿಗೆ ದೂರರಾಗಿ ನರಕಯಾತನೆ ಗೈದದೆ
ಹರಷಗುಂದಲಿ ಲೇಸಾದೆ
ಸುರೇಶ ಮೊದಲಾಗಿ ಅರ್ಚಿಪ ಪರಮ ಪಾವನಾ ಚರಣ

ಶ್ರೀ ಗರುಡ ದೇವರ ದೇವನ
ಸಿರಿ ವಿಜಯೀಂದ್ರರಾಮ ಪೊರೆಯಲೆಮ್ಮನುದಿನ ೫

ಆದಿತಾಳ

ನಾರಾಯಣನೆಂದು ಮಗನ ಕರಿಯಲಾಗ
ಆರತನಾಗಿ ಆವಾತ ಕರದನೆಂದು ಆ
ದರದಿಂದಲಿ ಕೇಳಿ ಅಜಾಮಿಳನ
ಭೂರಿ ಭೀತಿಗಳು ಕ್ಷಣದಿ ಬಿಡಿಸೆನೆ
ಸಾರಹೃದಯನೆಂದರಿದರೆ ಬಿಡುವನೆ
ಮಾರಮಣ ಸಿರಿ ವಿಜಯಿಂದ್ರರಾಮ ೬

ಜತೆ

ಸಾಧುಗಳನು ಸಂತತ ಸಲಹುವ ಸು
ಬೋಧ ಮೂರುತಿ ಸಿರಿ ವಿಜಯೀಂದ್ರರಾಮ ೭

೪

ಯೋಗಿ ವ್ಯಾಸರಾಯರೆಂಬ ವಿಚಿತ್ರ ಮೇಘ
ಬೇಗ ವಿಷ್ಣುಪದವ ತೋರುಸುತ್ತ ಬಂತಿದೆಕೊ ಪ

ಮಾಯಿಮತವೆಂಬ ತಾರಾಮಂಡಲವ ಮುಸುಕುತ್ತ
ವಾಯುಗತಿಯಂತೆ ಗಮಿಸುತಲಿ
ಹೇಯ ಕಾಮಾದಿಗಳೆಂಬ ರಜವನಡಗಿಸುತ
ನಾಯಕನುಪೇಂದ್ರನಾಜ್ಞೆಯ ಪಡೆದು ೧

ಅಂಗಜನಯ್ಯನೆ ಪರನೆಂದು ಘುಡಿಘುಡಿಸುತ್ತ
ಕಂಗಳೆಂಬ ಮಿಂಚನೆ ನೆರಹಿ ಲೋಕದಿ
ಹಿಂಗದೆ ಪರಿವ ಅಜ್ಞಾನವೆಂಬ ಕತ್ತಲೆಯ
ಭಂಗಿಸಿ ಸುರಪಥವ ತೋರಿಸುತ್ತ ೨

ಸಿರಿಯರಸನ ಸಮ್ಯಕ್‌ಜ್ಞಾನವೆಂಬ ಪೈರಿಗೆ
ಬೇರುಬಿಡಿಸಿ ಹರಿಕಥೆಯೆಂಬ ಮಳೆಗರೆದು
ನೆರೆ ಶಿಷ್ಯಮನವೆಂಬ ಕೆರೆತುಂಬಿಸಿ ಕರಗಳೆಂಬ
ಭರಕೋಡಿ ಹರಿಸುತ ವಿಜಯೀಂದ್ರನ ಗುರು ೩

ರಾಘವೇಂದ್ರತೀರ್ಥರ ಕೃತಿ

೫

ಇಂದು ಎನಗೆ ಗೋವಿಂದ ನಿನ್ನ ಪಾದಾರ
ವಿಂದವ ತೋರೊ ಮುಕುಂದ ಪ

ಸುಂದರ ವದನನೆ ನಂದಗೋಪನ ಕಂದ
ಮಂದರೋದ್ಧರ ಆನಂದ ಇಂದಿರಾ ರಮಣ ಅ.ಪ

ನೊಂದೆನಯ್ಯ ಭವಬಂಧನದೊಳು ಸಿಲುಕಿ
ಮುಂದೆ ದಾರಿ ಕಾಣದೆ ಕುಂದಿದೆ ಜಗದೊಳು
ಕಂದನು ಎಂದೆನ್ನ ಕುಂದುಗಳೆಣಿಸದೆ
ತಂದೆ ಕಾಯೊ ಕೃಷ್ಣ ಕಂದರ್ಪ ಜನಕನೆ ೧

ಮೂಢತನದಿ ಬಹು ಹೇಡಿ ಜೀವ ನಾನಾಗಿ
ದೃಢಭಕುತಿಯನು ಮಾಡಲಿಲ್ಲವೊ ಹರಿಯೆ
ನೋಡಲಿಲ್ಲವೊ ನಿನ್ನ ಪಾಡಲಿಲ್ಲವೊ ಮಹಿಮೆ
ಗಾಡಿಕಾರ ಕೃಷ್ಣ ಬೇಡಿಕೊಂಬೆನೊ ನಿನ್ನ ೨

ಧಾರುಣಿಯೊಳು ಭೂಭಾರ ಜೀವ ನಾನಾಗಿ
ದಾರಿತಪ್ಪಿ ನಡೆದೆ ಸೇರಿದೆ ಕುಜನರ
ಆರೂ ಕಾಯುವರಿಲ್ಲ ಸೇರಿದೆ ನಿನಗಯ್ಯ
ಧೀರ ವೇಣುಗೋಪಾಲ ಪಾರಗಾಣಿಸೊ ಹರಿಯೆ ೩

ಶ್ರೀ ವ್ಯಾಸತತ್ವಜ್ಞರ ಕೀರ್ತನೆಗಳು

ಭಗವಂತನ ಸಂಕೀರ್ತನೆ

೬

ಸುಳಾದಿ

ರಾಗ – ನೀಲಾಂಬರಿ ಧ್ರುವ ತಾಳ

ಅಕ್ಕಾ ಎನ್ನಯ ಸ್ಥಿತಿ ಕೇಳೆ ಆರಿಗೆ ಪೇಳ–
ತಕ್ಕದ್ದಲ್ಲವೆ ಇದು ನಗುಪಾಟಲೆ
ಚೊಕ್ಕ ಸತಿಯರಲ್ಲಿ ಒಲಿದಿತ್ತಾ ಬಲುಸುಖ
ಚಕ್ರಧರನು ಎಂದು ಕೇಳುತಲಿ
ಚಿಕ್ಕವಳೆ ನಾನು ಏನು ಅರಿಯೆ ತಾಯಿ
ಫಕ್ಕನೆ ಒಳಗಂಟು ಸಡಿಲಿತವ್ವ
ಮಕ್ಕಳು ನಗುವುದು ಎಚ್ಚರಿಲ್ಲವೆ ದೇಹ
ಮಿಕ್ಕಾದ ಪರವಿಲ್ಲ ಮರುಳಾದೆನೆ
ಅಕ್ಕಟಕ್ಕಟ ವಾಸುದೇವವಿಠಲರೇಯ ಹ್ಯಾಗೆ
ಅಕ್ಕರವನೆ ಮಾಡಿ ಎನ್ನ ಸಂತೈಸುವ ೧

ಮಟ್ಟತಾಳ

ತರಳೆ ತಂಗಿಯೆ ಕೇಳು ಎದಿ ಹಾರಲಿ ಬೇಡ
ಮರಳು ಪರಿಯುವುದೊಂದೇ ತರುಣೇರಿಗೆಲ್ಲ
ಮರಿಯದೆ ರಹಸ್ಯ ಸರಣಿಯು ಪೊಂದಿರೆ
ಪರತರ ವಾಸುದೇವವಿಠಲ ದೊರಕುವ ೨

ತ್ರಿವಿಡಿ ತಾಳ

ಆನು ಹುಡುಗಿ ಇನ್ನು ಹೃದಯ ವಿಸ್ತ್ರತವಿಲ್ಲ
ಜ್ಞಾನವು ರತಿಯಲ್ಲಿ ಮೊದಲಿಗಿಲ್ಲ
ಹೀನಳು ಗುಣದಲ್ಲಿ ರೂಪದಲಿ ಚಲುವಿಕೆ
ಏನಾದರೂ ಇಲ್ಲ ಹ್ಯಾಗೆ ತಾಯಿ
ಭಾನುಕೋಟಿ ಸನ್ನಿಭ ವಾಸುದೇವವಿಠಲ
ತಾನು ಮೆಚ್ಚುವ ಎನ್ನ ಸುಗುಣೋತ್ತಮ ೩

ಅಟ್ಟತಾಳ

ಗುಣವ್ಯಾಕೆ ರೂಪ್ಯಾಕೆ ದೋಷಗಳಿರಲ್ಯಾಕೆ
ಮನ ಮೆಚ್ಚಿಕೆವೊಂದೆ ಆತಂಗೆ ಮುಖ್ಯ
ಅನುಮಾನಿಸಬೇಡ ಆತನ್ನ ಮೊರೆಹೋಗು
ಮನದಾಶೆ ನೀಡುವ ವಾಸುದೇವವಿಟ್ಠಲ ೪

ಆದಿತಾಳ

ಧ್ವನಿ ಕೇಳಿಸುತಿದೆ ಕೇಳೆ ಕೊಳಲಿನ ಹರಿಯ
ಮನಿ ಸೇರುತಲಿವೆ ಗೋವುಗಳು ನಿಶ್ಚಿತ
ಮನ ನಿಶ್ಚಿತ ಮಾಡಿ ಎದುರಿಗೆ ತೆರಳುವೆ
ಮನ ಮೆಚ್ಚಲಿಹನೆ ಹರಿಯನು ನೀನು
ಬಿನುಗು ವಿಷಯ ಬಿಡು ಮನಸು ಏಕವ ಮಾಡು
ವನಜಾಕ್ಷ ವಾಸುದೇವವಿಠಲ ಬಂದ ೫

ಜತೆ

ಆನು ಧನ್ಯಳಾದಿನೆ ಆನು ಕೃತಾರ್ಥಳು
ತಾ ನಿಂದ ವಾಸುದೇವವಿಠಲರೇಯ ೬

೭

ಸುಳಾದಿ

ರಾಗ–ವರಾಳಿ ಧ್ರುವ ತಾಳ

ಅನೇಕ ಶಕುತಿಯುಳ್ಳವನೆಂದು
ಅನೇಕ ಯುಕುತಿಯುಳ್ಳವನೆಂದು
ಅನೇಕ ಆಗಮ ಕೇಳಿ ಬಲ್ಲೆನಯ್ಯ
ಅನೇಕ ಕಾರ್ಯದಿ ಅನುಮೇಯಿಸುವೆ
ಅನೇಕ ಬೇಡುವೆ ನೀಡೊ ಹಯವದನ
ಅನುಭವ ವೆನಗಿನ್ನು ಎನಿತು ಬಾಹುದೈಯ್ಯ
ಅನುಭವ ಮಾತುರ ಎನಗೆ ಪಾಲಿಸು ದೇವ
ನೀನೇಕನಾಗಿ ಮನಸು ಶಳವಿಲಿ
ಅನೇಕ ತಾವಾಗಿ ವಿಷಯಂಗಳು
ಅನವರತದಿ ಶಳಿಯೆ ಮಿಗಿಲಿನ್ನು
ಅನುಭವ ಎನಗಿನ್ನು ಎನಿತು ಬಾಹುದಯ್ಯ
ಅನುಭವ ಮಾತುರ ಎನಗೆ ಪಾಲಿಸೊ ದೇವ
ನೀನೆ ವಾಸುದೇವವಿಠ್ಠಲೆನ್ನ ಶಣಿಸದಂತಲೆ ಮಾಡು ೧

ಮಟ್ಟತಾಳ

ಮೊದಲಿನ ಭಕುತರು ನಿನಗೆ ಕೊಡುವದೇನು
ಹೃದಯದ ಸಾಕ್ಷಿಯೆ ಅನುಬಿಡುವದೇನೊ
ಮದನ ಜನಕನೆ ಅವರಿಂದ ನಿನಗೇನೊ
ಸದಯ ವಾಸುದೇವವಿಠಲ ಪೂರ್ಣಕಾಮ ೨

ತ್ರಿವಿಡಿ ತಾಳ

ನಿನ್ನ ಪ್ರೇರಣೆ ಹೊರತು ಆರನ್ನ ತಾವೇ ಸಾ–
ಧನ್ನ ಮಾಡುವರುಂಟೆ ನೀ ಪಿಡಿ ಕೈಯ್ಯ
ಎನ್ನ ಪ್ರೇರಿಸಲು ಸಾಧನ ಮಾಡಲಾರೆನೆ
ಘನ್ನ ವಾಸುದೇವವಿಠಲ ಕರುಣಿಯೆ ೩

ಅನ್ಯ ಸಾಧನೆಗಳು ಕೊಡುಕೊಡದಲೆ ಬಿಡು
ಉಣಿಸೆನ್ನಯ ಕರ್ಮ ಪಣ್ಣಾದರೆ
ಘನ್ನ ವಾಸುದೇವವಿಠಲರೇಯ
ನಿನ್ನ ಚರಣಸ್ಮೃತಿ ಅನವರತವೀಯೊ ೪

ಆದಿತಾಳ

ಬೊಮ್ಮನಂತೆಲೇನು ಜಗವ ಸೃಜಿಸುವೆನೆ
ಉಮ್ಮೆಯರಸನಂತೆ ಜಗವ ಸೀಳುವೆನೆ
ಸುಮ್ಮನಸರ ಓಲ್ ಜಗವನಾಳುವೆನೆ
ಸನ್ಮುನಿಗಳ ಪಾದಸೇವೆಯ ಬೇಡುವೆ
ನಮ್ಮ ವಾಸುದೇವವಿಠಲರೇಯಾ
ಎಮ್ಮಾತುರಕೆ ನೀ ತಡ ಮಾಡುವರೆ ೫

ಜತೆ

ಆನೇನರಿಯೆ ವಾಸುದೇವವಿಠಲರೇಯ
ನೀನೇವೆ ಒಲಿದೆನ್ನ ದಯದಿಂದ ಸಲಹೊ ೬

೮

ಅಳಬ್ಯಾಡೆಲವೊ ರಂಗಮ್ಮ ನಿನ್ನ
ಇಳಿಯಾರ ನೋಡುತಿದೆ ಗುಮ್ಮ ಪ

ಒದರಿದರೆ ಕೇಳೆಲವೊ ತಮ್ಮಾ । ಅದು
ಅದರುತಿದೆ ಬೊಮ್ಮಾಂಡ ತಮ್ಮ
ಬೆದರಿ ದಿವಿಜರು ತಮತಮ್ಮ । ನಿಜ
ಸದನ ಬಿಡುತಿಹರು ನೋಡಮ್ಮ ೧

ಬೆರಳುಗುರು ಗಾಯಗಳಿಂದ । ಆ
ದುರುಳರನ್ನ ಜಠರ ತಳದಿಂದ
ಕರುಳು ಮಾಲಿಕೆ ಕಿತ್ತಿ ತಂದ । ತನ್ನ
ಕೊರಳಲಿ ಹಾಕಿಹ ಚಂದ ೨

ಏಸು ದೈತ್ಯರಾಸಿಗಳನು । ತಾನು
ಮೋಸಗೊಳಿಸಿ ಕೊಲ್ಲುವನು
ದಾಸನೆಂದರೆ ಕಾಮಧೇನು ಸುಮ್ಮಗಿ । ರುವ
ವಾಸುದೇವವಿಟ್ಠಲ ನೀನು ೩

೯

ಆರಿಗ್ಯಾತಕೆ ಮೊರೆಯಿಡಲಿ
ಸಾರಿದವರನ ಪೊರೆವ ಶ್ರೀರಮಣ ನೀನಿರಲು ಪ

ಬೆಳಸಿಗೊಬ್ಬನ ಕೇಳೆ ಮಳೆಗೆ ಮತ್ತೊಬ್ಬನೆ
ಅಳತಿಗೆ ಇನ್ನೊಬ್ಬನೆ ಹಾಗೆವೆ
ವಳತಿಗೊಬ್ಬರು ದೊರೆಗಳೆ ಮ್ಯಾಲೆನ್ನ

ಪ್ರಳಯಕೆ ಮತ್ತೊಬ್ಬನೆ ಪರಿಪರಿ
ಖಳರ ಮಾತುಗಳೇ ಸ್ವಾಮಿ ೧

ಆಕಾಲ ನೀನೆವೆ ಈ ಕಾಲದಲಿ ನೀನೆ
ಸಾಕುವನು ಇನ್ನೊಬ್ಬನೆ ಸ್ಥಿರವಾಗಿ
ತಾಕು ತಗಲಿಲ್ಲದಲೆ ಬೊಮ್ಮಾದಿ
ಲೋಕಪತಿಗಳ ಒಡಿಯನೇ ಈ ವ್ಯಾಳ್ಯ
ಲೋಕರನ ಕಾಯಬೇಕೊ ಸ್ವಾಮಿ ೨

ಕಾಸು ಒಬ್ಬರಿಗಿಲ್ಲ ಲೇಸು ತೋರದಲೇವೆ
ದೇಶಕೊಬ್ಬರು ಪೋದರೋ ಪೊಟ್ಟೆಗೆ
ಕೂಸುಗಳ ಮಾರುಂಡರೋ ಈ ಜನರ
ಕ್ಲೇಶಬಡಸದಲೆ ಪೊರಿಯೊ ಕರುಣದಲಿ
ವಾಸುದೇವವಿಠಲ ಸ್ವಾಮಿ ೩

೧೦

ಇವುಗಳ ಹಾವಳಿಗಂಜುವಳಲ್ಲ ಅ
ಲ್ಲವುಗಳ ಸ್ಮೃತಿಗೆ ನಾನಂಜುವೆನೆ ಪ

ಚಂದ್ರ ಚಂದ್ರಿಕೆಯು ಉದಯಿಸಲ್ಯಾತಕೆ
ನಿಂದ್ರಿಸುವೆನೆ ನಾನದರನ್ನು
ಇಂದ್ರನನುಜನಾ ಶ್ರುತಿಗೆ ಸ್ಮೃತಿಗೆ ಬರಲು
ನಿಂದ್ರಿಸಲಾರೆನೆ ನಿಮಿಷ ಮನ ೧

ಪಲ್ಲವಿಸವ್ಯಾತಕೆ ಚೂತ ತರುಗಳಿಗಿನ್ನು
ನಿಲ್ಲಿಸುವೆನೆ ಅದರುಲ್ಬಣವ
ಪಲ್ಲವ ಪಾದವ ಮನಸಿಗೆ ಬಂದರೆ
ತಲ್ಲಣಿಸುವೆನೆ ತಾವರೆ ನಯನೆ ೨

ಅಂಬುದಗಳೆಲ್ಲ ಅಂಬರವೇರಲಾ
ಡಂಬರಕ್ಕೆ ನಾನು ಇಂಬು ಕೊಡೆ
ಅಂಬುದ ಶ್ಯಾಮನು ಮನದಲಿ ನಿಲಲು
ಥಂಬಿಸಲಾರೆನೆ ಕಂಬು ಕಂಠಿ ೩

ಕುಂದ ಕುಸುಮಗಳು ವಿಕಸಿತವಾದರು
ಅಂದಗೆಡುವುದಿಲ್ಲ ಮನಸಿನಲಿ
ಕುಂದರದನ ಎನ್ನ ಮನಸಿಗೆ ತೋರಲು
ಕಂದಿ ಕುಂದುವೆ ಮನ ಮಂದಿರದಿ ೪

ಏವಮಾದಿಗಳೆಲ್ಲ ಏನು ಮಾಡವೋ ವಾಸು–
ದೇವವಿಟ್ಠಲ ಸ್ಮೃತಿ ಬಾರದಿರೆ
ಶ್ರೀವರ ಚಿತ್ತಕ್ಕೆ ಬಂದರೆ ನಿಂದರೆ
ತಾವರೆನಯನೆ ನೀ ತಂದು ತೋರೆ ೫

೧೧

ಉಸರಬಹುದೆನಗೆ ಕೃಷ್ಣ ಬಾಗಿಲಲಿ
ನಸು ನಗುತ ನಿಂತ ಬಗೆಯು ಪ

ತಿಳಿದು ಪೂಜೆಯು ಮಾಡುವ ಭಕುತರನು
ಬಳಿಗೆ ಕರೆವುದು ತೀವ್ರವೊ
ಖಳಕುಲದ ಜನರು ಬರಲು ಹೋಗೆಂದು
ಕಳುಹುವ ಬಗೆಯ ಏನೊ ಕೃಷ್ಣ ೧

ಸುಳಿದ ಜನಗಳ ಕೂಡ ಸುಂಕವನು
ಸೆಳೆಕೊಂಬ ಬಗೆಯು ಏನೊ
ಕೆಳದಿಯರ ಬಂದವರನಾ ಮೋಹಿಸಿ
ಕೊಳಲನೂದುತಲಿ ನಿಂದಿಯೊ ಕೃಷ್ಣ ೨

ಬಲಿಯ ಕಾಯಿದ ಬಗೆಯಲಿ ದಾಸರನ
ಚಲಿಸದಲೆ ಕಾವ ಬಗಿಯೊ
ನೆಲೆ ವಾಸುದೇವವಿಠಲ ಭಕುತನ್ನ
ಸಲಿಗೆ ಬಿನ್ನಪ ಸಲಿಪುದೊ ೩

೧೨

ಎಂತು ರಕ್ಷಿಪೆ ಎನಗೆಂತು ಶಿಕ್ಷಕರಿಲ್ಲ ಪ

ಸಕಳ ಸಂಶಯಗಳ ವಿಕಳವ ಮಾಡಿಸಿ
ಅಕಳಂಕ ಮತಿ ಸೋಮ ಸುಕಳ ಮಾಡುವರಿಲ್ಲ ೧

ಸಂತತ ನಿನಗೇನು ಅಂತರ ಸ್ಥಿತಿಯೆಂದು
ಚಿಂತಿಪ ಬಂಧು ಆದ ಸಂತ ಜನರ ಕಾಣೆ ೨

ಪರಿಪರಿ ಬಗೆಯಿಂದ ಪರತತ್ವಗಳನು
ಅರಿದು ತಿಳಿಪದ್ಯುಚ್ಚರಿಪರು ಎನಗಿಲ್ಲ ೩

ತುತಿ ಮಾಡಿ ಕೆಲರು ಸನ್ಮತಿಯಾಗೊಡಿಸುವರು
ಕ್ಷಿತಿಯೊಳಗೆನಗುಪಕೃತಿಯ ಮಾಡುವರಿಲ್ಲ ೪

ಹಲವು ಪರಿಯಲೆನ್ನ ಸಲಹುವ ಗುರುದೈವ
ಕುಲಪ ವಾಸುದೇವವಿಠಲ ನೀ ಕರುಣಿಸೊ ೫

೧೩

ಎಂದಿಗೆ ನಿನ್ನ ಪಾದ ಕಾಂಬೆ ಸ್ವಾಮಿ
ಎಂದಿಗೆ ನಿನ್ನ ಪಾದ ಕಾಂಬೆ ಪ

ಎಂದಿಗೆ ನಿನ್ನ ಪಾದ ಕಂಡೆ ಭಕುತಿಯಿಂದ
ಅಂದಿಗೆ ಭವಪಾಶ ತುಂಡೆ ಸ್ವಾಮಿ ಅ.ಪ

ಇಂದಿರದೇವಿ ನಿನ್ನ ಹೊಂದಿದ ಕಾರಣ
ದಂದೂಗವನು ಕಾಣಲಿಲ್ಲ ಸ್ವಾಮಿ ೧

ಬೊಮ್ಮನು ನಿನ್ನ ಪಾದ ನಮ್ಮಿ ತುತಿಸುವ ನಿನ್ನ
ಮೊಮ್ಮಗ ಕುಣಿ ಕುಣಿದಾಡುವ ೨

ನಿನ್ನಾಣೆ ವಾಸುದೇವವಿಠಲ ಎನ್ನ
ಮನ್ನಾದಿ ಭಜಿಸುವ ಬಲ್ಲೆಲಾ ಸ್ವಾಮಿ ೩

೧೪

ಎನ್ನ ಬಿನ್ನಪ ಸಖಿ ಚನ್ನಾಗಿ ತಿಳಿಸೆ
ಚನ್ನಿಗರರಸ ಪೋರನ್ನ ಕೃಷ್ಣನ ಮುಂದೆ ಪ

ಜನನಿ ಜನಕ ಚಿಕ್ಕತನದಿಂದ ತನಗತಿ
ಮನಮುಟ್ಟಿ ವಿನಯದಿ ವಿನಿಯೋಗಿಸಿ
ಜನರೊಳು ಘನ ಧರ್ಮ ಧನ ಗಳಿಸಿದರಂತೆ
ಅನುಸ್ಮೃತಿ ಎನಗಿನ್ನು ಇನಿತಿಲ್ಲವು ಪೇಳೆ ೧

ಅಂದಿಂದಾತನ ಮೊಗ ಚಂದಾಗಿ ನೋಡಿಲ್ಲವೆ
ಒಂದು ಬಾರೆನ್ನ ತಾನು ಬಂದು ತೋರನೆ
ಮಂದಿ ಪೇಳುವದು ಕೇಳ್ಯಾನಂದಿಸುವೆನಲ್ಲದೆ
ಮುಂದೇನು ಗತಿಯೆಂದು ಇಂದುಮುಖಿಯೆ ಪೇಳೆ ೨

ದಿನಗಳೊದಗಿದವೆ ಜನರೆಲ್ಲ ಕಂಡಂತೆ
ಬಿನಗು ಮಾತುಗಳನು ಎನಗಂಬರೆ
ಎನಗೇನು ಇದರಿಂದ ತನಗೆ ಆ ಕೀರುತಿ
ಮನಮುಟ್ಟಿ ನೀ ಪೇಳೆ ವನಜಾಕ್ಷಗೆ ಸಖಿ ೩

ಪಿರಿಯ ಸತಿಯರಂತೆ ಪರಿ ಪರಿ ಭೂಷಣ
ಸರಿ ಬಂದರೆ ಉಪಚರಿಸುವಂತೆ
ದೊರಿಯರ ಸತಿಯರ ನರರ ದೃಷ್ಟಿಯ ಬಾಧೆ
ಪರಿಚಾರಕರಿಟ್ಟು ಪರಿಹರಿಸ ಪೇಳೆ ೪

ಆ ಸುದತಿಯರನ್ನ ಲೇಸಾಗಿ ಭೋಗಿಸೆ ನಾ
ನಸೂಯ ಅದರಿಂದ ಲೇಶ ಮಾಡೆ
ವಾಸುದೇವವಿಠಲ ಈ ಸಮಯದಲಿ ಎನ್ನ
ತಾ ಸುಮುಖದಿಂದ ನೋಡೆ ನಾ ಸುಖಿ ಸಖಿಯೆ ೫

೧೫

ಸುಳಾದಿ

ರಾಗ–ನಾಟಿ ಧ್ರುವತಾಳ

ಎನ್ನಯ ನಾಯಕಿಯ ಸ್ವಾಮಿಯ ಕಂಡಂತೆ
ನಿನ್ನ ನೋಡಲಾಯಿತೊ ಪ್ರಾಣಪ್ರಿಯ ದೂತನೆ
ಚನ್ನಾಗಿ ನೋಡೊ ಇವಳ ಪರಿಯನ್ನು
ಬಿನ್ನಪ ಮಾಡುವೆ ಅಪರಾಧಗಳ

ನಿನ್ನಂತ ಘಟಕರ ಇನ್ನೊಬ್ಬರ ಕಾಣೆ
ಮನವಿಟ್ಟು ನೀವೆನೆ ವಾಸುದೇವವಿಠಲಂಗೆ
ಬಿನ್ನೈಸಿ ಕೊಡಿಸೊ ಘನ್ನ ದಯಾನಿಧೆ ೧

ಮಟ್ಟತಾಳ

ಪತಿಯ ಬಳಿಯಲಿದ್ದು ಪತಿಯ ಮನವರಿಯಳೊ
ಅತಿಶಯ ಸುಖವಿತ್ತು ವಿಭವ ತೋರಿಸಲಾಗ
ಮತಿಯಲಿ ಸುಖ ರತಿಯಲಿ ಮನ ಉಬ್ಬಿ
ಸ್ಮೃತಿಯನು ಕಳಕೊಂಡ-
ಡತುಳಜ್ಞವ ಮೀರಿ ಹಿತ ಗೆಳತಿಯ ಮುಂದೆ
ರತಿಯ ಸುಖವ ಪೇಳಿ ಪತಿ ವಾಸುದೇವವಿಠಲ
ಪತಿತಳು ಇವಳೆಂದು ಅತಿ ವ್ಯವಹಿತನಾದ ೨

ತ್ರಿವಿಡಿತಾಳ

ಸತಿಯರೊಳಗಿವಳು ಅತಿಮುಗ್ಧ ವಧುವಳು
ಗತ ಅಗತೆವೊಂದೂ ಮತಿಯಲ್ಲಿ ಅರಿಯಳೊ
ಖತಿಯನ್ನು ತನಗೆ ತಾ ಕೃತಿಸಿ ಕಂಡವರಲಿ
ಅತಿ ಬಾಯಿ ಬಿಡುವಳೊ ಗತಿಯೇನು ಇದಕಿನ್ನು
ರತಿಪತಿಪಿತ ವಾಸುದೇವವಿಠಲರೇಯ
ಹಿತವಾಗುವಂತೆ ಉಪಕೃತಿ ಮಾಡೊ ಹಿತನೆ ೩

ಅಟ್ಟತಾಳ

ಧವಬಿಟ್ಟ ವಿರಹದ ಭವಣೆಯಿಂದ ಅವಳಿಗೆ
ನವಗಂಧಗಳೆ ಬಂಧ ಸುವಸ್ತ್ರವೇ ಶಸ್ತ್ರ
ಭವನವೆಂಬೊಂದೆ ಬಲು ಕುವನವಾಗಿವಳಿಗೆ

ನವಚೂತ ಪಲ್ಲವ ಸವಿಧಾವಿ ಪಲ್ಲವ
ವಿವಿಧ ತಾಪಗಳನುಭವಿಸುವ ಇವಳನ್ನು
ಭುವನೇಶ ಶ್ರೀ ವಾಸುದೇವವಿಠಲ ಪಾದ
ಸುವಿಮಲತರ ನಖಶಿಶಿ ಛವಿಯಿಂದ ಪಾಲಿಸೊ
ಪ್ರವಣ ನಾ ಮರಿಯೆನೊ ಭುವನದೊಳಗೆ ನಿನ್ನ

ಆದಿತಾಳ

ಅನಲಿ ಬಹುದುವೊಂದು ಅನಲಿಕ್ಕೆ ಬಾರದು
ಇನಿತಪರಾಧದಿ ದಣಿವುದೆ ಸಾಕು ಕನಿಸಿಲಿ ಬೇಡೆಂದು
ಮುನಿಸಿನಲಿ ಹೇಳೆಂಬನು ಬ್ಯಾರಿದ್ದಾನೆ
ಅನುದಿನ ನೀಬಲ್ಲಿ ವನಜಾಕ್ಷಿಯ ತನು
ಮನ ಅಸು ಉಳಿಸೆಂದು ವಿನಯದಿ
ವಾಸುದೇವ ವಿಟ್ಠಲಗೆ ಪೇಳೊ ೫

ಜತೆ

ಒಲಿದು ವಾಸುದೇವವಿಠಲನು ಬಾಲಿಗೆ
ಸುಳಿದು ಪೊರೆ ಎಂದು ತಿಳಿಸೋ ಏ ಪ್ರಿಯಾ ೬

೧೬

ಏತಕೆ ಬಾರದೊ ಹರಿಯೆ
ನೀತವೆ ಇದು ಸರಿಯೆ ಪ

ಖ್ಯಾತ ನಿಗಮ ಸಂಗೀತನಾಮ ಜಲ
ಜಾತನಯನ ಬಹುಪ್ರೀತಿ ಮಾಡಿದರು ಅ.ಪ

ಕುಂದರದನ ಕುರುವಿಂದಾಧರ ಪೂ
ರ್ಣೇಂದು ವದನ ಮುನಿವಂದ್ಯ
ಎಂದಿಗೆ ಈ ಭವಬಂಧ ಬಿಡಿಸಿ ದಯ
ದಿಂದ ತೋರುವಿಯಾನಂದ
ಕುಂದುಗಳೆಣಿಸದೆ ಚಂದದಿ ಸಲಹಲು
ಎಂದೆಂದಿಗು ನೀ ಗತಿಯೆಂತೆಂದರು ೧

ಮಾರಜನಕ ಗಂಭೀರ ಹೃದಯ ಸಂ
ಚಾರ ಭಜಕ ಮಂದಾರ
ತೋರು ನಿನ್ನ ಪದ ಸಾರಸವನು ಮುನಿ
ನಾರದಾದಿ ಪರಿವಾರ
ಘೋರ ಶರಧಿಯೊಳು ಸೇರಿದವರಿಗಿ
ನ್ನಾರು ಬಂದು ಉದ್ಧಾರ ಮಾಡುವರು ೨

ಶ್ರೀಶ ಯದುಕುಲಾಧೀಶ ಮೇಘ ಸಂ
ಕಾಶ ರೂಪ ಸರ್ವೇಶ
ಘಾಸಿಪಡಿಪ ವಿಷಯಾಸೆಗಳೆಲ್ಲವ
ನಾಶಗೈಸೊ ಶ್ರೀನಿವಾಸ
ದಾಸ ಜನರಿಗುಲ್ಲಾಸವ ಕೊಡುತಿಹ
ವಾಸುದೇವವಿಠಲಯ್ಯನೆ ಎನ್ನೊಳು ೩

೧೭

ಉಗಾಭೋಗ

ಕೌತುಕ ನೋಡಬೇಕೆಂಬುವುದೆ ನಿನಗಿತ್ತ
ಭೂತಳವನು ಬರಿದೆ ತಿರುಗಲ್ಯಾಕೆ
ಅತಿಚಿತ್ರ ನಿನಗೊಂದು ಪೇಳುವೆ ಇದರಿಂದ
ಗತಿ ಮುಕುತಿ ಸಕಲ ಸಂಪದವೀವುದು

ಹುತವಹ ಮಂಡಲ ಅದರಲ್ಲಿ ನೆಲಸಿಹ
ಶಶಿರಶ್ಮಿ ಮಂಡಲ ಅದರಲಿ ಉದಿಸುವ
ದ್ಯುತಿ ಭಾನುಮಂಡಲದ್ವಯ ತೋರುತಲಿದೆ
ಅತಿಭದ್ರಿಕೆಯಿದ್ದ ಹೊಳೆವದು ಅದು ನೋಡಿ
ಸತತ ಶ್ರೀ ವಾಸುದೇವವಿಟ್ಠಲ ಇದರಿಂದ
ಅತಿ ಸುಲಭ ಅತಿ ಸುಲಭ ಅತಿ ಸುಲಭ ಕಾಣೊ

೧೮

ಕೆಳದಿ ಕೇಳುವ ಬಾರೆ ನಳಿನಾಕ್ಷ ವನದಲ್ಲಿ
ಕೊಳಲನೂದುವ ಬಗೆಯ
ನಳಿನಜಾಂಡವು ತಾನೆ ತಲೆದೂಗುತಲಿದೆ
ಕುಳಿತಿರೆ ವಶವಲ್ಲವೆ ಪ

ಸರಸಿಜ ನಯನಾಳೆ ಧರೆಯ ಭಾಗ್ಯವ ನೋಡೆ
ತರುಗುಲ್ಮಾಲತೆ ನೆವದಿ ಭರದಿ ಪುಲಕಿತಳಾಗೆ
ಪರಿಪರಿ ಸುಮದಿಂದ ನೆರೆ ನಸುನಗುತಿಪ್ಪ
ಮರುಳೆ ಕಣ್ಣಿಲಿ ನೋಡೆ ವರ ವಿಮಾನಗಳು ಸಂ–
ಚರಿಸಿ ಮೆರೆವ ವೈಭವ ಧರೆಯೆಲ್ಲಾ ತಿಳಿಯದು
ಸುರನಿಕರಾಲಯ ಪರನಲ್ಲಿ ಎವೆ ಇಡುತ–
ಲೋಲ್ಯಾಡದೆ ಬಿಡರು ೧

ವಾಮಾಲೋಚನೆ ಸುರರ ಧಾಮಾವೆಂಬಿಯಾ ಇದು
ಕಾಮತನಯ ಕಾಮದೇವ ಸೋಮಶೇಖರ ತಾನು
ತಾಮರಸಾಸನ ಪ್ರೇಮಾದಿ ನಲಿಯುವ

ಆ ಮಹರಾದಿ ಲೋಕವೆ ಸಾಮಜಗಮನೆ ಕೇಳೆ
ನೀ ಮರುಳಾಗ ಬ್ಯಾಡಾ ಆ ಮುಕುತಿ ಸ್ಥಾನವೆ
ಶ್ರೀ ಮುಖ ವನಿತೆಯರು ಈ ಮುಕುಂದನ
ಸೇವೆ ಮಾಡುವರು ೨

ದೂರ ಜನರಿಗೆ ಸಾಲೋಕ್ಯ ಊರಲಿಪ್ಪರಿಗೆ ಸಾಮೀಪ್ಯ
ಗೋರಕ್ಷಕರಿಗೆ ಸಾರೂಪ್ಯ ಸೇರಿದ ಯುವತಿಗೆ
ಭರದಿ ಸಾಯುಜ್ಯವೆ ಮೀರಿದೆ ಮುಕುತಿಗಿದು
ಭಾರಿ ಭಾರಿಗೆ ಸಾಮಾ ಪೂರೈಸಿ ಮುಕುತರು
ತೋರುವರಿಲ್ಲಿ ಆನಂದ
ಈ ರಭಸದಿ ವೇಣು ಪೂರೈಸಿ ಸುಖವೀವ
ಧೀರ ವಾಸುದೇವವಿಠಲ ೩

೧೯

ಗೋಪಸತಿಯರೆಲ್ಲ ಕೇಳೆರೆನ್ನಯ ಮಾತ
ಈ ಪರಿ ಕೂಸಿನ ಕಂಡೀರ್ಯಾ ಪ

ತೊಟ್ಟಿಲೊಳಗಿಟ್ಟು ವತ್ತಿ ಮಾತಾಡದೆ
ಮುಟ್ಟದೆ ಉಣಲಿಕ್ಕೆ ಕುಳಿತಿರಲು
ಚಿಟ್ಟಕ್ಕಿ ಚೀರೆದ್ದು ಭೇಟಿ ತಾನಳುತಿಹ
ಹೊಟ್ಟೆ ತುಂಬಾ ಉಣಲೀಸ ಎಷ್ಟೆಂದೇಳಲೆ ನಾನು ೧

ಬಣ್ಣಿಸಿ ಬಣ್ಣಿಸಿ ಪದವ ಪಾಡಿ ತೂಗಿ
ಥಣ್ಣಾಗೆ ಬೀಸಿ ಬೀಸಣಿಕೆಯಲಿ
ಕಣ್ಣ ಮುಚ್ಚಿಸಿದೆವೆಂದರಿತು ಸುಪ್ಪಾಣಿಸೆ
ಅಣ್ಣ ತಾನೇಳುವ ನಿದ್ರೆಗೈಯ್ಯಲೀಸ ೨

ಅನಿಮಿಷರಾದೆವೆ ಅನಶನರಾದೆವೆ
ಮನಸು ಕೂಸಿನಲ್ಲೆ ನಟ್ಟಿಹುದೆಮಗೆ
ಮನೆಕೆಲಸಗಳಲ್ಲ ಎಲ್ಲಿವೆ ನಮಗಿನ್ನು
ತನಯ ಪುಟ್ಟಿದ ಪುಣ್ಯದಿಂದಲ್ಲಿನ್ನೇನೆಂಬೆ ೩

ಚಿಕ್ಕವರೊಳು ಪೋಗಿ ಮಕ್ಕಳಾಟಿಕೆ ಆಡಿ
ಲೆಖ್ಖವಿಲ್ಲದ ದೂರು ಫಕ್ಕನೆ ತರುವ
ರಕ್ಕಸರೆನಲು ತಾ ಲೆಕ್ಕಿಸದವರ
ಸೊಕ್ಕು ಮುರಿವನಿವನಕ್ಕೊಜಾಕ್ಕೇನೆಂಬೆ ೪

ದೇವತೆಗಳ ಮೀಸಲಾವಾಗ ಮೆಲುವನು
ಸೇವಕರಂತಲ್ಲೆ ತಾವಾ ಹೊರೆ
ದಾವಾದಿ ಭಯದಿಂದ ಕಾವಾನೀತನೆ ವಾಸು –
ದೇವಾವಿಟ್ಠಲನೆಂದು ಭಾವಿಸಿ ತಿಳಿವೆನು ೫

೨೦

ಸುಳಾದಿ

ರಾಗ–ನಾಟಿ ಧ್ರುವತಾಳ

ಖಳಕುಲ ಮರ್ದನ ದೇವನೆ
ಇಳಿಯ ಭಾರವ ಇಳಿಸುವ ಸ್ವಾಮಿಯೆ
ತಿಳಿಸಿ ಸದ್ಧರ್ಮಗಳ ಸಾಧು ಜನರಲ್ಲಿ
ಉಳಿಸಿ ಸಲಹುವ ದೊರೆಯು ನೀನಾಗಿರೆ
ತಿಳಿಸುವೆ ಈ ಕಾಲಸ್ಥಿತಿಯ ಮನಕೆ ತಂದು
ಉಳಿಸೊ ವಾಸುದೇವವಿಟ್ಠಲ ಧರ್ಮಗಳ ೧

ಮಟ್ಟತಾಳ

ದುರಳರು ಮೊದಲೀಗ
ಧರಣಿಯನೊಬ್ಬ ತೆರಳಿ ದೇಶವು ತಿರುಗಿ
ಪುರಗಳಳಿಸುವ ಉರಳಿಸುತ ಲೋಕ
ಶಿರಗಳ ಬಾಹನ್ನ ಮರಳಿ ಶ್ರೀ ವಾಸುದೇವವಿಟ್ಠಲ ವೀರನೆ ೨

ತ್ರಿವಿಡಿತಾಳ

ಒಂದಿಷ್ಟು ದಯವಿಲ್ಲ ಹೆಣ್ಣುಮಕ್ಕಳ ತನ್ನ
ಮಂದಿಗೆ ಕೊಟ್ಟಿನ್ನು ಜಾತಿಯ ಕೆಡಿಸುವ
ವಂದಿತ ಜನರನ್ನು ನಿಂದಿತರನು ಮಾಡಿ
ಕುಂದಿಸುವವನ ಕೂಡಿ ಇಂದೆಮ್ಮ ಪೊರೆಯ್ಯೆಯ್ಯ
ತಂದೆ ವಾಸುದೇವವಿಟ್ಠಲರೇಯನೆ
ಎಂದೆಂದಿಗೆ ನಮ್ಮ ಪೊರೆವ ದೊರಿಯೆ ನೀನು ೩

ಅಟ್ಟತಾಳ

ಶಿಶುವಿನ್ನ ಸ್ಥವಿರನ್ನ ಎನ್ನ ದ್ವಿಜರನ್ನ
ಪಶುವಿನ್ನ ಮೊದಲು ನೀ ಪೊರೆದೆ ಒಬ್ಬಿಬ್ಬರ
ವಸುಮತಿ ತುತಿ ಇಷ್ಟು ಮೊರೆ ಇಡುತಿದೆ ಈಗೆ
ವಶರಾಗರೆ ದೇವ ಕಿವಿಯು ಕೇಳುವದಿಲ್ಲೆ
ಪುಸಿಯಾದರೆ ನಿನ್ನ ಬರಿದು ಯಾದವರನ್ನ
ಬಿಸಿಜ ನಯನ ವಾಸುದೇವವಿಟ್ಠಲ ಕಾಯೊ ೪

ಆದಿತಾಳ

ಕಾಲ ಕಾಮ ಕರ್ಮಗಳ ಬಿಡವೊ
ಪಾಲಿನ ನಿನಗೆ ಸಾಧಾರಣವೊ

ಪಾಲಿಪ ಜನರನ್ನ ಕಾಣದೆ ಜನರು
ಆಲಿವರಿವರು ಕರುಣಿಸೆ ನಿನ್ನ
ಪಾಲಿಗೆ ಕೀರುತಿ ವಾಸುದೇವವಿಠಲ ೫

ಜತೆ

ಕಲಿಕಾಲವು ಒತ್ತಿಸೆಲೊ ಭಕ್ತರ ನೋಡಿ
ಒಲಿದು ಪಾಲಿಸು ವಾಸುದೇವವಿಟ್ಠಲ ದೇವ ೬

೨೧

ಉಗಾಭೋಗ

ಘನ್ನ ಕರುಣಿ ಗೋಪಾಲ ಬಾಲ
ಚಿನ್ನ ವತ್ಸನು ನಾನು ನೋಡ
ಎನ್ನ ಬಿನ್ನಪವ ಲಾಲಿಸಿ ಕೇಳಿ ನೀ
ಮನ್ನಕೆ ತರಲಿ ಬಹುದೆಲವೊ ರಂಗ
ಉನ್ನತ ಘೂಳಿಗಳು ಕೇಳುವವರೆ ಇಲ್ಲ
ಇನ್ನು ವೃಷಭಗಳ ಕೊರಳುಳು ಸಡಲೈಯ್ಯ
ಚನ್ನಾಗಿ ಮೇವುವವು ಬಣವಿಗಳನೆ ಅವು
ಅನ್ಯಾಯ ನೋಡಯ್ಯಾ ತೃಣವು ಮೆಲುವ
ಎನಗೆ ಬಂದಿದ್ದೇನೋ ಮಮತೆಯೆಂಬಾ ಹೆಬ್ಬಾ
ಕಣ್ಣಿಯ ಭಾರವ ಕೊರಳೊಳಗೆ
ಇನ್ನಿದು ಮುಪ್ಪುರಿ ಉರಲು ಬೀಳುವದಾಗ
ನಿನ್ನ ಕಿವಿ ಕೇಳಿಪದೆ ಅದರ ಧ್ವನಿಯು
ಉಣ್ಣಿಸೊ ಉಡಿಸೊ ಇಲ್ಲವೆ ಆಡಿಸೊ
ಕಣ್ಣಿ ತಪ್ಪಿಸು ವಾಸುದೇವವಿಠಲರೇಯ

೨೨

ಉಗಾಭೋಗ

ಜ್ಞಾನಾನಂದ ಬಲದಿ ಎನಗಿಂತ ಕೃಷ್ಣಯ್ಯ
ನಿನಗೇನು ಮಿಗಿಲಿದೆ ಎನಗೆ ಪೇಳೊ
ನೀನಿದ್ದ ಮಾತ್ರವನು ಬಲ್ಲೆಯೋ ನೀನಿತ್ಯ
ನಾನಿದ್ದದಿಲ್ಲವನ್ನು ಕೂಡಬಲ್ಲೆ
ನಿನಗಧಿಕ ಶಕುತಿ ಬಲವುಂಟೊ ವೈಕುಂಠ
ಎನಗಧಿಕ ಭಕುತಿ ಬಲವೊ ಬಲವೊ
ನೀನಧಿಕಸ್ವಾಮ್ಯ ಸೌಖ್ಯವ ಬಲ್ಲೆಯೊ
ನಾನಧಿಕ ದಾಸ್ಯಸೌಖ್ಯ ಬಲ್ಲೆ
ಎನ್ನಯ ಗರ್ವವರಿದೆನೆಂಬದಿತ್ತೆ
ಎನ್ನಲಿದ್ದ ವಿಪರ್ಯವ ಸರಿಯೆ
ನಾನಿಷ್ಟರಿಂದಲೇ ನಮ್ರನಾಗುವೆನು
ನೀನಿತ್ತ ಬಲ ಸೌಖ್ಯ ಅಧಿಕವಾಗಿರಲಿ
ನೀನೆ ಬಲ್ಲೆಯೊ ಭಾವ ವಾಸುದೇವವಿಠಲ
ಆನೇನಂದರು ದಯೆ ಪಾಶದ ವಶನೊ

೨೩

ಚರಣವೆಂಬ ದುರ್ಗಮ ದುರ್ಗ ಸೇರಿದೆ
ಪರವೇನು ಎನಗಿನ್ನು ಅರಿಸೈನ್ಯಗಳಿಂದ ಪ

ನಿಜಭಕ್ತ ಜನರಿಗೆ ಆಭಯವ ಕೊಡುವಂಥ
ಧ್ವಜವುಳ್ಳ ಪುರವಿದು ಪರರಿಗಸಾಧ್ಯ ೧

ತನ್ನ ನಂಬಿದ ಇಂದ್ರ ಗಣಪತಿ ಇಹರೆಂದು
ಚನ್ನ ವಜ್ರಾಂಕುಶ ಧರಿಸಿದೆ ನಿಧಿ ಪೂರ್ಣ ೨

ರಜವಿಲ್ಲ ತಮವಿಲ್ಲ ನಿತ್ಯ ನಿರ್ಮಲವಿದು
ಅಜ ಮೊದಲಾದವರು ಇಲ್ಲೆ ಸೇರುವರಯ್ಯ ೩

ಕೆಳಗ ರವಿಯ ಕಾಂತಿ ಮ್ಯಾಲರ್ಧಾ ಶಶಿ ಛವಿ
ಸ್ಥಳವಿದೆ ಭಾಗ್ಯಾಭಿಮಾನಿ ದೇವತೆಗೆ ೪

ಸವಿಯಾದ ನದಿ ಇಲ್ಲಿ ಜನಿಸಿದೆ ಫಲ ಪದ್ಮ
ಯವ ಮೊದಲಾದವಿವೆ ವಾಸುದೇವವಿಠಲನ್ನ ಚರಣವೆ ೫

೨೪

ಉಗಾಭೋಗ

ತಂಗಿ ನೋಡುವ ಬಾರೆ ಎನ್ನ ಮನೆಯೊಳ
ಅಂಗಣದೊಳಗೊಬ್ಬ ಶಾಮಲ ಪುರುಷ
ತಿಂಗಳ ಮೊಗದವ ಐದಾನೆ ತನ್ನ ಪಾ
ದಂಗಳಲ್ಲೆ ಎನ್ನ ಪ್ರಾಣ ಮುಖ್ಯ
ಅಂಗಸೋಕಲು ತಾನಿತರ ವಿಷಯಂಗಳ
ಸಂಗವ ಬಿಡಿಸುವ ಎನ್ನ ಪುಣ್ಯಾ ಆ
ತಂಗೆ ಸಮರ್ಪಿಸಿ ಸುಖಿಸುವ ನಮ್ಮನು
ಹ್ಯಾಂಗಾದರು ಮಾಡಲಿ ವಾಸುದೇವವಿಠಲ

೨೫

ತಮ್ಮ ಕೇಳಿದ್ಯಾ ಪರಬೊಮ್ಮ ನೀನಂತೊ
ಸುಮ್ಮನೆ ಪುಸಿ ಸುದ್ಧ್ಯಾರಮ್ಮ ಪೇಳಿದರೆ ಪ

ನಿತ್ಯ ತೃಪಿತನು ನೀನಂತಲ್ಲೊ ಕೃಷ್ಣಯ್ಯ
ಸುತ್ತಿ ಬಂದೆನೆ ನಾಲಿಗಾರಿದೆ ಅಮ್ಮ
ಹತ್ತು ಸಾವಿರ ಭಾನುಪ್ರಭೆಯುಳ್ಳವನಂತೊ
ಕತ್ತಲೆಮನೆ ಪೋಗಲೊಬ್ಬನಂಜುವೆನೆ ೧

ಪುರಾಣಪುರುಷ ನೀನಂತಲ್ಲೊ ಕೃಷ್ಣಯ್ಯ
ಆರು ತಿಂಗಳು ಪೋದಾವಂದೆಲ್ಲ ಎನಗೆ
ನಿರತಿಶಯ ಮಹಾ ಮಹಿಮೆ ಉಳ್ಳವನಂತೊ
ಪೂರತಿ ಮನೆಯೊಳು ನಡೆಯಲಾರೆ ೨

ಅಣ್ಣಾ ನೀ ಸರ್ವಜ್ಞನೆಂಬೋರೊ ಜಗವೆಲ್ಲ
ಬೆಣ್ಣೆಯು ಸಿಗದಲ್ಲೆ ಪುಡುಕಿದರೆ
ಸಣ್ಣವ ನೀನಲ್ಲವೆಂಬರೊ ಪಿರಿಯಾರು
ಮಣ್ಣು ನಾ ಮೆದ್ದಾರೆ ಟೊಣದೆಲ್ಲವಮ್ಮ ೩

ಜಗದುದರನು ನೀನಂತಲ್ಲೊ ಕೃಷ್ಣಯ್ಯ
ನಗುಚಾಟಲು ಸಣ್ಣ ಪೊಟ್ಟೆ ನೋಡೆ
ನಿಗಮಗಳು ನಿನ್ನ ತುತಿಯಂತೊ ಗೋವಿಂದ
ನಗುವರಲ್ಲವೆ ಗೋಪ ನಾರಿಯರು ೪

ಮೂಢ ದೈತ್ಯರಿಗೆಲ್ಲದಲ್ಲಣ ನೀನಂತೊ
ಜಾಡ ಮೈಯನ ನೋಡಿ ಅಂಜುವೆನೆ
ಬೇಡಿದ ಪುರುಷಾರ್ಥ ಕೊಡುವನು ನೀನಂತೊ
ಬೇಡಿದೆ ನಮ್ಮಮ್ಮ ಅಮ್ಮೆ ಕೊಡೆಂದು ೫

ಬೆಟ್ಟವ ನೀನೆತ್ತಿದಂತಲ್ಲೊ ಕೃಷ್ಣಯ್ಯ
ಬಟ್ಟು ನಿನ್ನದು ನೋಡೆ ಎತ್ತಲಾರೆ
ಘಟ್ಯಾಗಿ ವಿಪ್ರರು ಪೇಳೋದು ಪುಸಿ ಏನೊ
ಹೊಟ್ಟೆಗೋಸುಗ ಸುಳ್ಳು ಪೇಳುವರೆ ೬

ಏಸು ಲಕ್ಷ್ಮಣವಿವೆ ನೋಡಬೇಕೆಂದರೆ
ಪುಸಿದ್ಯಾಕುಸರಾನು ನೋಡೆಂದನು
ವಾಸುದೇವವಿಠಲಾ ಈ ಪರಿ ಗೋಪಿಯ
ಮೋಸಗೊಳಿಪ ಕೃಷ್ಣ ನಮ್ಮ ಸಲಹಲಿ ೭

೨೬

ತೋರೆಲೆ ಪ್ರಾಣಕಾಂತನ ಮಾರ ಎನ್ನ ಸಂ
ಹಾರ ಮಾಡಲು ದಂಡು ತಂದನೆ ಪ

ಮಂದ ಮಾರುತಗಳು ಚಂದ್ರಕಿರಣಗಳು
ಮುಂದಾಗಿ ಬಂದೊದಗಿದವು ೧

ಅಂತರಂಗದಿ ಮನೋಭ್ರಾಂತಿ ಬಿಡಿಸುವವ
ಸಂತನೀಗಲೆ ಬಂದಿರುವನೆ ೨

ಭೃಂಗಗಳೇ ರಣರಂಗದಿ ಕೂಗುವ
ಸಂಗತಿಗೆ ಬೆದರಿದೆನೆ ೩

ಶುಕವೇರಿ ಧನುವಿನೋಳ್ ವಿಕಸಿತ ಸಮಬಾಣ
ಮುಖದೊಳು ಗುರಿಯನ್ನೆ ನೋಡುವ ೪

ಆವಾಗಲೂ ವಾಸುದೇವವಿಠಲನ ಪಾ
ದವೆ ಗತಿಯೆಂದಿರುವೆನೆ ೫

೨೭

ಸುಳಾದಿ

ರಾಗ – ನೀಲಾಂಬರಿ ಧ್ರುವ ತಾಳ

ನಂಬಿದವಳೀಪರಿ ಮಾಡಿದರೆ ಮುಂದೆ
ನಂಬುವರೆಂತೊ ನಿನ್ನಂಬುವರ್‍ಯ್ಯಾ
ಅಂಬುಜನಾಭನೆ ಯೋಗ್ಯತೆ ಮೀರಿ ನಾನು
ಹಂಬಲಿಸಿದವಳ ಒಮ್ಮಿಗನ್ನ
ಅಂಬುಜವ ಸೋಲಿಪ ಪದಯುಗಳನ್ನು
ಕಾಂಬುವ ಬಯಕೆ ಒಂದೆ ಎನ್ನೊಳಗೆ
ಉಂಬುಡುವುದಕ್ಕೆ ಲೇಶ ಕೊರತೆಗಳಿಲ್ಲ
ಕಂಬು ಕಂಠ ನಿನ್ನ ಪಾದವೆ ಸಾಕ್ಷಿ
ಸಂಭ್ರಮಗಳಾದರು ಕರಸದೆ ಪೋದೆ ಮೇಲೆ
ಸಂಬಂಧವೇನುಂಟು ಪೇಳಿಕೊಳಲು
ನೀ ಬಂಧುಗಳ ನೋಡಿ ವಿನಯದ ನುಡಿಗ
ಳೆಂಬಂತೆ ಮಾಡಿಸಲಿಲ್ಲ ದೊರಿಯೆ
ಬೆಂಬಿದ್ದಲ್ಲಿ ಒಳ್ಳೇದು ಕರೆಸಿಕೊ ಮುಂದೆನ್ನ
ಅಂಬುಜಾಕ್ಷ ವಾಸುದೇವವಿಟ್ಠಲರೇಯ ೧

ಮಟ್ಟತಾಳ

ನಂದಿದರೋ ಕುಂದಿದರೋ ತಾ ಬಂಧಿಸಲೊ
ನಿಂದಿಸಲೊ ತಮ್ಮಂದಿ ಆವ ಪರಿಯಲಿದ್ದರು
ಒಂದೇ ಪರಿ ನೀನಿಲ್ಲಿರುವೆ
ನಂದಿಸುವೆ ನಗುತಲೀವೆ ನೀ
ಒಂದು ಚಿತ್ತದಿಲ್ಲದಿಲ್ಲವೊ

ಎಂದು ವಾಸುದೇವವಿಟ್ಠಲ ನಿನ್ನ
ನಿಂದೆ ನಾನು ತಾಳಲರಿಯೆನೊ ೨

ತ್ರಿವಿಡಿತಾಳ

ವೇಳೆಗೆ ನೀ ಕೇಳಿ ಮನಕೆ ತೋರದಿರ್ದಡೆ
ಕಾಲ ನಿಲ್ಲುವುದಿಲ್ಲ ಸಾಗುತಿವೆ
ಶ್ರೀ ಲೋಲ ವಿರಹದಿ ಬಹಳ ಬಡವಾದ
ಕಾಲದಿ ಗುರುತಿನ್ನು ಸಿಗಬಲ್ಲದೆ
ಕಾಲಿಗೆ ಎರಗುವೆ ಒಳಗೆ ವಿಚಾರಿಸಿ
ಪಾಲಿಗೆ ಕರಸಯ್ಯಾ ವಾಸುದೇವವಿಟ್ಠಲ ೩

ಅಟ್ಟತಾಳ

ನಡತೆ ನುಡತೆಗಳು ಬಹುಕಾಲ ಬಿಟ್ಟರೆ
ಕೊಡುತಿವೆ ಪಾಮರ ಜನ ಸಂಗದಿ
ಒಡೆಯ ತಿರುಗಿ ತಿದ್ದಿಕೊಂಬುವುದಾಯಾಸಾ
ಹಿಡತೆ ಹಿಡಿಯಬೇಕೊ ಬಿಟ್ಟುದಂತಲೆ
ಒಡತಿ ಆಡುವ ಮಾತು ಒಂದಲ್ಲದೆ ಇದರೊಳು
ಒಡಯಗೆ ಇರಬೇಕೊ ಮನಸಿನಲ್ಲಿ
ಕಡಿಗು ಬಿಟ್ಟವಳಲ್ಲ ಇನ್ನಾದರೂ ಮುಂದೆ
ತಡಿಯದೆ ಕರೆಸಿಕೊ ವಾಸುದೇವವಿಟ್ಠಲ ೪

ಆದಿತಾಳ

ಪುರದಲ್ಲಿದ್ದವಳ ಬಳಿಗೆ ಬಂದೊಮ್ಮೆ
ಆರು ವಿಚಾರಿಸುವವರನ ಕಾಣೆ
ಕಾರುಣಿಕ ಜನ ಇಲ್ಲದಾಯಿತು

ಕಾರಣವಿಲ್ಲದೆ ಮುನಿವರೆ
ಧಾರುಣಿಯೊಳು ನಿನ್ನ ಕೋಪವು ಕೊಡಲು
ತೋರುವ ಕೆಲವು ಗೋಪ್ಯಗಳು
ಶ್ರೀ ಮಾರಮಣ ವಾಸುದೇವವಿಟ್ಠಲ ನಿನ್ನ
ಚಾರು ಚರಣಯುಗಳವ ತೋರಯ್ಯ ೫

ಜತೆ

ಎಷ್ಟು ಬಿನ್ನಪವೆಂದು ಸಿಟ್ಟು ಮಾಡಲಾಗದು
ಶ್ರಿಷ್ಟೇಶ ಗತಿ ಏನು ವಾಸುದೇವವಿಟ್ಠಲ ೬

೨೮

ನಂಬೋದ ಖರಿಯಾ ಶ್ರೀಹರಿಯಾ ಪಾದ ನಾ
ನಂಬೋದೆ ಖರಿಯಾ ಅಂಬುಜಾಂಬಕ ತನ್ನ
ನಂಬಿದ ಭಕುತರ
ಇಂಬಾಗಿ ಪೊರೆದೆನೆಂತೆಂಬ ವಾರುತಿ ಕೇಳಿ ಪ

ದೂರವಾದರೆ ತಾನು ನಾರಿಯ ಮೊರೆ ಕೇಳಿ
ಚೀರಿ ಕರೆದಳೆಂದು ಶೀರಿಗಳನೆ ಇತ್ತು
ಮೀರಿ ಪೊರೆದನೆಂಬೊ ವಾರುತಿ ಜಗದೊಳು
ಬೀರಿದನರಿಯಾ
ಬಿಂಕವ ಬಿಟ್ಟು ಸೇರಿಕೊ ಹರಿಯ
ದಾರಿ ಕಾಣದೆ ವನ ಸೇರಿದ ಕುವರನ್ನ
ಸಾರೆಗರೆದು ಸೌಖ್ಯ ಪೂರೈಸಿದನೆಂದು ೧

ಕಾಡಾನೆ ವ್ರಜದೊಳು ಕೂಡಿದ್ದ ಗಜರಾಜ
ಗಾಡಾಹ ತಾಪದಿಂದ ಬಾಡಿ ನೀರಡಿಸಲು

ಗೂಢ ಸರೋವರ ನೋಡಿ ನೀರನೆ ಪೊಕ್ಕು
ಆಡಾಲು ಮದದಿ ನಕ್ರನು ಬಂದು ಪೀಡಿಸೆ ಭರದಿ
ಮೂಢ ನಾನೆಲೊ ಕೃಷ್ಣ ಮಾಡೊ ರಕ್ಷಣೆಯನ್ನು
ಓಡಿಬಂದಭಯವ ನೀಡಿದ ಪರಿ ನೋಡಿ ೨

ಭೂಸುರ ವರನೊಬ್ಬನು ದೇಶ ದೇಶವ ತಿರುಗಿ
ಕಾಸು ಬಾಳದ ಸ್ತ್ರೀಯಳಿಗೆ ಆತನೆ ವಶವಾಗಿ
ಹೇಸಿಕಿಲ್ಲದೆ ಅಲ್ಲಿ ತಾ ಸೂನುಗಳ ಪಡಿಯೆ ಸಹ
ವಾಸರ ಕಳಿಯೆ ಕಾಲನು ಘೋರ ಪಾಶದಿ ಶಳಿಯೆ
ಆ ಸಮಯದಿ ಕೊನೆ ಕೂಸನ್ನೆ ಕೂಗಲು
ವಾಸುದೇವವಿಠಲ ತಾ ಸಲಹಿದನೆಂದು ೩

೨೯

ನರಸಿಂಹ ನರಸಿಂಹ ನಮಿಸುವೆನೊ ಘೋರ
ದುರಿತ ಬೆನ್ನ ಬಿದ್ದಿದೆ ಪರಿಹರಿಸೋ ಶ್ರೀ ನರಸಿಂಹ ಪ

ಪರಮೇಷ್ಠಿ ಹರ ಸುರಪತಿ ಮುಖರಾ
ಸುರನಿಕರ ಪೊರೆವ ಪ್ರಭೊ ಪ್ರವರ
ದುರಿತವು ಅವರನ್ನ ಬಾಧಿಸದಂತೆ
ಪೊರೆದ ಪರಿಯಿಂದ ಎನ್ನ ಪೊರೆಯೊ ೧

ಕಾಯ್ದು ತನ್ನಯ ತನ್ನ ತಂದೆಯ ಬಾಧೆ
ಭಯದಿಂದ ಮನದಲ್ಲಿ ನಿನ್ನ ನೆನಿಯೆ
ದಯದಿಂದ ನೀ ಕಂಭದಲಿ ಬಂದು ಪೊರೆದಂತೆ ಎನ್ನ
ಭಯ ಪರಿಯೆ ಪೊರೆ ಶ್ರೀ ನರಸಿಂಪ ೨

ನಿನ್ನ ಪೆಸರೆಂದರೆ ದುರಿತಂಗಳು
ತನ್ನಿಂದ ತಾನೆ ಜರಿಯುವವು
ಚನ್ನಾಗಿ ಶರಣರ ಪೊರೆದದಕೆ
ನಿನ್ನವರೆಂದು ಕೇಳಿ ಬಲ್ಲೆ ಶ್ರೀ ನರಸಿಂಹ ೩

ನಖ ಮುಖ ಶಿಖಿ ತನ್ನ ನೆನೆಯೆ
ಸುಖಿತರವಾಹೋದು ಶರಣರಿಗೆ
ಮಖಭುಜ ರವಿ ಸಾಕ್ಷಿ ಇದಕಾಗಿರೆ
ವಿಖನಸಾರ್ಚಿತ ಪಾದ
ಸುಖಮಯನೆ ಶ್ರೀ ನರಸಿಂಹ ಕಾಯೊ ೪

ಅರಿದರೀಧರ ವರ ಕರಯುಗನೆ
ಕರಯುಗ ಜಾನು ಶಿರದಲ್ಲಿಪ್ಪನೆ
ಶಿರದಿಂದೊಪ್ಪುವ ಕರತಳನೆ
ವರ ವಾಸುದೇವವಿಠಲ ಪೊರೆಯೊ ಶ್ರೀ ನರಸಿಂಹ ಕಾಯೊ ೫

೩೦

ನಿನಗಿಂತ ಮಿಗಿಲಾಗಿ ಕರುಣ ನಿನ್ನದಿರೆ
ನಿನಗೇನು ಶರಣೆಂಬೆ ಕರುಣಕ್ಕೆ ಹರಿಯೆ ಪ

ನಿತ್ಯ ಮುಕ್ತ ಪೂರ್ಣ ಕಾಮ ಒಂದಕು ಸಿಲುಕದ
ಮತ್ತೆ ಇದ್ದ ನಿನ್ನ ತನು ದೀನರ ತೋರಿ
ಹತ್ತು ಜನುಮವ ಕೊಟ್ಟು ಭಕ್ತ ಜನರ ಬಲು
ಕೃತ್ಯ ನಿಮಿತ್ಯ ಕೊಡಿಸ್ಯಾಡಿಸಿದನರಿಯ ೧

ಒಂದಕೂ ಸಿಲುಕದಾ ನಿನ್ನ ವತ್ಸದ ದಾವು
ಬಂಧದಿ ಬಿಗಿಸಿತೀ ಗೋಪಿಯ ಕೈಯ
ವೃಂದಾರಕರ ಸ್ತುತಿಗೊಶವಲ್ಲದವನ ಗೋಪ
ಮಂದಿಯ ದೂರಿನ ಪಾತ್ರನ್ನ ಮಾಡಿತು ೨

ಪೇಳಿಕೊಂಬಿಯೊ ಲೋಕದೊಡೆಯನು ನಾನೆಂದು
ಊಳಿಗತನ ನಿನ್ನ ಕೈಯ ಮಾಡಿಸಿತಯ್ಯ
ಕೇಳೊ ಭಕುತರಿನ್ನು ಏನಾಡಿದರನ್ನ
ತಾಳಬೇಕಾಯಿತೋ ವಾಸುದೇವವಿಠಲ ೩

೩೧

ನಿನ್ನ ಮನ ಬಂದಂತೆ ವಿಹರಿಸೊ ಸಿರಿಕೃಷ್ಣ
ಎನ್ನ ಸ್ವಾಮಿ ನೀ ಎಂದು ಮರುಳಾದೆನಲ್ಲದೆ ಪ

ಬೊಮ್ಮ ಮೊದಲು ಸುರೋತ್ತಮದ ಪಾದ
ಧುಮ್ಮಿನೊಳು ಮುಳುಗಿಹೆ ಎಮ್ಮಯ್ಯ ಕೇಳು ೧

ಸರ್ವಜ್ಞನೆಂಬಿಯಾ ಉರ್ವಿಯ ಪತಿಗಳು
ಸರ್ವ ಜನಗಳಾ ಪೊರ್ವರೆ ಕಂಡೀಗ ೨
ಅಕ್ಷೀಣ ಶಕುತೆಂಬ ದಾಕ್ಷಿಣ್ಯವಿಲ್ಲದೆ
ಸುಕ್ಷೀಣ ಜನರನ್ನು ರಕ್ಷಿಪರಯ್ಯ ೩

ಭಕುತ ವತ್ಸಲನೆಂಬೊ ಭಕುತಿಯು ಎನ್ನಲ್ಲೆ
ಯುಕುತವಾಗಿಹವು ವ್ಯಕತ ನಿನಗಲ್ಲವೆ ೪

ಶರಣರ ದೊರೆಯೆಂದು ಕರುಣ ಮಾಡುವೆನೆಂಬ
ಸಿರಿ ವಾಸುದೇವವಿಠಲ ಕರುಣಿಸಾಲಸ್ಯವ್ಯಾಕೊ ೫

೩೨

ಉಗಾಭೋಗ

ಪರಮ ಪಾವನಮೂರ್ತಿ ಹರಿಯೆ ನೀನಯ್ಯ
ಪರಮ ಪಾತಕಿಯೊ ನಾ ಧರೆಯೊಳೆಲ್ಲ
ಪರಮಕೆ ಪರಮಕೆ ಸರಿಹೋದ ಮೇಲಿನ್ನು
ಮರೆವರೇನಯ್ಯ ಪೂತನ ಮಾಡದೆ
ಪರಮ ಪಾವನ ಪರನೊಬ್ಬಿದ್ದರೆಯಿನ್ನು
ತೋರಬಹುದು ಚರಾಚರದೊಳಗೆ
ಪರಮ ಪಾತಕಿಯು ನಾನಾಗದಿದ್ದಡೆ ನಿನ್ನ
ಶರಣರಿಂದೆನ್ನ ಪೂತನ್ನ ಮಾಡಿಸೊ
ಪರಮ ರತುನ ನೀ ಪೊರೆಯದಿದ್ದರೆ ನಿನ್ನ
ಬಿರುದುಪೊಂದೆನ್ನ ಸೆಳೆದು ವೈವೆನೊ
ಕರದು ವಾಸುದೇವವಿಠಲಾರೇಯ
ಮರೆಯು ಸಲ್ಲದಿನ್ನು ಅರಿದ ಮೇಲೆ

೩೩

ಬಂದ ಕೃಷ್ಣ ಛಂದದಿಂದ ಬಂದ ನೋಡೆ ಗೋಪ
ವೃಂದದಿಂದ ನಂದಸುತ ಬಂದ ನೋಡೆ ಪ

ಗೋವ ಮೇವನೀವ ದೇವ ಬಂದ ನೋಡೆ
ದೇವತಾ ವಾದ್ಯಗಳಿಂದ ಬಂದ ನೋಡೆ ೧

ಪಾಪ ಪೋಪ ಗೋಪ ರೂಪ ಬಂದ ನೋಡೆ
ತಾಪ ಲೋಪ ಲೇಪ ಲೋಪ ಬಂದ ನೋಡೆ ೨

ಭಾಸುರ ಸುಖ ಸೂಸುತ ಬಂದ ನೋಡೆ
ವಾಸುದೇವವಿಟ್ಠಲ ತಾ ಬಂದ ನೋಡೆ ೩

೩೪

ಬಡವನ ಮನೋರಥ ಪೂರೈಸು ಸಿರಿಕೃಷ್ಣ
ಒಡೆಯ ನೀನಲ್ಲದೆ ಪೂರೈಸುವರಿಲ್ಲ ಪ

ಕಿವಿಯು ನೀಡಿದುದಕೆ ಎನಗೊಮ್ಮ್ಯಾದರು ಮನೋ
ಕುವರಿಯ ಭೃತ್ಯತನ ಕೊಡು ಕಂಡ್ಯ
ಸುವಿಮಲತರ ಮತಿಯಾದ ವಿಷ್ಣುರಾತೋ
ದ್ಭವನ ಬಳಿಯಲೊಮ್ಮೆ ನಿಲಿಸಯ್ಯಾ ಹರಿಯೆ ೧

ನಯನವು ಕೊಟ್ಟದಕೆ ಎನ್ನೊಮ್ಮೆ ರಣದಿ ವಿ
ಜಯನ ಬಳಿಯಲೊಮ್ಮೆ ನಿಲಿಸಯ್ಯಾ
ಭಯದಿ ಸೂತರ ಸುಮ್ಮನಿಹ ಭೀಷ್ಮಕ ಕುರುಪ
ತಿಯರ ಸಭೆಯಲೊಮ್ಮೆ ನಿಲಿಸಯ್ಯ ಹರಿಯೆ ೨

ರಸನವು ಎನಗಿನ್ನು ಕೃಪೆಮಾಡಿದುದಕೆ ಗೋ
ರಸವ ಕದ್ದು ಮೆಲುವ ಕಾಲದಲ್ಲಿ
ಇಸಕೊಂಬ ಗೋವಳರ ಒಳಗೆ ಎನ್ನನು ಒಬ್ಬ
ಶಿಶುವಿನ ಮಾಡಿ ಪುಟ್ಟಿಸು ಕಂಡ್ಯ ಹರಿಯೆ ೩

ಎನಗೆ ತ್ವಗೇಂದ್ರಿಯವ ದಯಮಾಡಿದದಕಿನ್ನು
ಜನಕ ಭೀಷ್ಮಕ ಸುತೆಯ ಕರ ಕಂಜರದಿ
ಅನುವಾದಿಷ್ಟಕ ಭಾವ ಸರಯು ಯಮುನಾ ತೀರ
ಜನಿತವಾಳುಕ ಭಾವವನು ಕೊಡು ಹರಿಯೆ ೪

ನಾಶಿಕವು ಇತ್ತದಕೆ ಗೋಪಿಯ ವಿಹಾರದಿ
ವಾಸುದೇವವಿಠಲ ನಿನ್ನ ಕೊರಳೊಳಿದ್ದ
ಸೂಸಿ ಬಿದ್ದ ಮಾಲಿಕೆಯ ಕುಸುಮಂಗಳ ಬಲು
ವಾಸನ ಲೋಲುಪ ಮಧುಕರ ಭಾವ ನೀಡೊ ೫

೩೫

ಬಾರೋ ಬಾರೋ ಪ್ರಾಣಕಾಂತ
ತೋರೊ ಮುಖವ ನೋಡುವೆ
ತೋರಿ ತೋರಿ ನಿನ್ನ ಪದವಾರಿಜವ ನಂಬಿದೆ ಪ

ಭಾರಿ ಭಾರಿಗು ಮಾರ ಎನ್ನ ಘೋರಿಸುತಿರುವನು
ಗಾರು ಮಾಡಬೇಡ ಎನ್ನ ಸೇರಿ ಆನಂದ ನೀಡೊ ೧

ಪಂಥ ಮಾಡಬೇಡ ಎನ್ನ ಕಂತು ಜನಕ ಲಾಲಿಸೊ
ಅಂತರಂಗದ ಬಾಧಿಗೆ ನಾ ಚಿಂತೆ ಪಡುತಿರುವೆ ೨

ವಾಸುದೇವವಿಠಲ ನಿನ್ನ ದಾಸಿಯಲ್ಲವೆ ನಾನು
ಆಶೆಯಿಂದ ಬಂದೆ ಪರಿಹಾಸ ಮಾಡಬೇಡ ೩

೩೬

ಬಾರೋ ಬಾರೋ ಬಾರೋ ಹರಿ
ತೋರೋ ತೋರೋ ಮುಖವ ದೊರಿ ಪ

ಧೀರನೆ ಬಹುಗಂಭೀರನೆ ಗೋರಸ
ಚೋರನೆ ಗೋಪಿ ಜಾರನೆ ಬ್ಯಾಗನೆ
ವೀರಾಧಿವೀರನೆ ಎನ್ನ ವಾರೆ ನೋಟ ನೋಡುವರೆ
ಗಾರು ಮಾಡದಲೆ ಮನ ಸೇರಿ ಸುಖಬಡಿಸಲು ಅ.ಪ.

ಭೃಂಗಗಳ್ಯಾತಕೆ ಕೂಗಿದವೊ ಅಂಗಜ ಶರಗಳು ಸೇರಿದವೊ
ರಂಗನೆ ಗರುಡ ತುರಂಗನೆ ವಿಧೃತ ರಥಾಂಗನೆ ಸಜ್ಜನ ಸಂಗನೆ ಬ್ಯಾಗನೆ
ಮಂಗಳರೂಪನೆ ಬೆಳುದಿಂಗಳೊಳು ನೀನು
ಪಿಳಂಗೊಳವಿನೂದಲು ಆ ರಂಗ ಎನ್ನ ಬಿಡಿಸಿದ ೧

ಕಾವರೆ ನಿನ್ನೊರತಿನಾರೊ
ಭಾವಜಪಿತ ಮಂದಿರ ಸೇರೊ
ದೇವನೆ ಭಕುತರ ಕಾವನೆ ವರಗಳ
ನೀವನೆ ರಿಪುವನದಾವನೆ ಬ್ಯಾಗನೆ
ದೇವಾದಿ ದೇವನೆ ಎನ್ನ
ಕಾವನು ನೀನಲ್ಲದೆ ಇ
ನ್ಯಾವನು ಈ ಭೂಮಿಯೊಳ
ಗೀವನು ಕಾಣೆನೊ ನಾನೊಬ್ಬ ೨

ಈ ಸಮಯದಿ ಪರಿಪಾಲಿಪರ‍್ಯಾರೋ
ವಾಸುದೇವವಿಟ್ಠಲ ನೀ ತೋರೋ
ಶ್ರೀಶನೆ ಸುಂದರಹಾಸನೆ ಮುನಿ ಮನ
ವಾಸನೆ ಶತರವಿ ಭಾಸನೆ ಬ್ಯಾಗನೆ
ಹಾಸುಮಂಚದೊಳು ಹುವ್ವಿನ
ಹಾಸಿಕಿಯೊಳು ಮಲಗಿ
ಬ್ಯಾಸರಗೊಂಡೆನು ಪರಿ
ಹಾಸವ ಮಾಡದೆ ಬ್ಯಾಗ ೩

೩೭

ಬಾರೋ ಬಾರೋ ಸುಂದರನೆ
ಬರ ಹೇಳಿದಳೊ ನಿನ್ನ ರಮಣಿ ಪ

ಶುಕಪಿಕರವದಿಂದ ವಿಕಳಿತಳಾಗಿ ಧೈರ್ಯ
ಕಕವಿಕಳಾಗಿಹಳಿವಳು ನೀ ಬೇಗನೆ ೧

ಸಾರ ಸುಗುಣೆ ನಿನ್ನ ದಾರಿಯ ನೋಡಿ ನೋಡಿ
ಸರಸಿಜಮುಖಿ ನೀ ಪೋಗಿ ಬಾರೆಂದಳು ೨

ಶ್ರೀ ವಾಸುದೇವವಿಠಲ ನಿನ್ನಯ ಸಖಿ
ಭಾವಜನ ರೂಪವ ತೋರು ತೋರಿಸೆಂದಳು ೩

೩೮

ಬಿಡಬಾರದೋ ಶ್ರೀನಾಥನ ನಾಥನ ಪ್ರಖ್ಯಾತನ ಪ

ಕಡು ದುಃಖದಿ ಮೊರೆಯಿಡಲು ಗಜೇಂದ್ರನು
ತಡಮಾಡದೆ ಬಂದಾತನ ಆತನ ಪೊರೆದಾತನ ೧

ಮೊರೆಯನು ಲಾಲಿಸಿ ತರುಣಿ ದ್ರೌಪದಿಗೆ
ವರ ವಸವನನಿತ್ತಾತನ ಆತನ ಪೊರೆದಾತನ ೨

ಶೇಷಶಯನ ನಮ್ಮ ವಾಸುದೇವವಿಠಲ
ದೋಷರಹಿತನೆಂಬಾತನ ಆತನ ಪರಮಾತ್ಮನ ೩

೩೯

ಸುಳಾದಿ

ರಾಗ : ಸಾರಂಗ ಧ್ರುವತಾಳ

ಬಿನ್ನಪವ ಮಾಡುವೆ ಯಜ್ಞ ಶ್ರೀನಿವಾಸ
ನಿನ್ನ ಶರಣಗೆ ಹಲವು ಹಂಬಲ ಸಲ್ಲ
ಇನ್ನು ತಾನೊಮೊಮ್ಮೆ ಬಯಸಿದೇ ಭಕುತಿಗೆ
ಅನ್ಯಥಾವಾಗದಂತೆ ಬಯಸಿಕೊಳಲಿ ಮನ
ಚಿನ್ನರ್ಗೆ ಫಲವಿತ್ತೆ ಓದು ಪೇಳುವ ತೆರ
ಚನ್ನಾಗಿ ನೀನೆವೇ ಫಲವನ್ನು ಒಲಿದಿತ್ತ
ಮನ್ನೆ ವಾಕು ಆದರಿಸೊ ವಾಸುದೇವವಿಠಲ ೧

ಮಟ್ಟತಾಳ

ತೋಂಡರ ಮಾತುಗಳ ಪುಸಿಗೊಳಿಸಲಿ ಬೇಡ
ದಿಂಡೇರ ಕೈಯಿಂದ ನೋಯಗೊಳಿಸದಿರೊ
ಅಂಡಜವಾಹನ ಬಿರುದು ನಿನ್ನದು ನೋಡು
ಕೊಂಡಾಡುವೆ ವಾಸುದೇವವಿಠಲರೇಯ
ತೋಂಡರ ಮಾತುಗಳ ಪುಸಿಗೊಳಿಸಲಿ ಬೇಡ ೨

ತ್ರಿವಿಡಿ ತಾಳ

ಆವಾವ ಆಶ್ರಮವನ್ನು ಒಲಿದಿತ್ತು ನೀನೇವೆ
ಆವಾವ ಬಗೆಯಲ್ಲಿ ಸಾಧನ ಮಾಡಿಸೊ
ಆವಾವ ಬಗೆಯಲ್ಲಿ ಬಲ್ಲ ಸರ್ವಜ್ಞನೆ

ಆವಾವ ವಿಧದಿಂದ ಬಿನ್ನೈಪುದೇನೆಲೊ
ಕಾವ ಕರುಣಿ ವಾಸುದೇವವಿಠಲರೇಯಾ
ಆವಾವ ಬಗೆಗಳ ಬಿನ್ನೈಪುದೇನಯ್ಯಾ ೩

ಅಟ್ಟತಾಳ

ಕೊಡಗೈಯ್ಯ ದೊರೆ ಎಂದು ನಂಬಿಲ್ಲಿಗೆ ಬಂದ
ಬಡನಡವಳ ನೀನು ಕಡೆಗೆ ನೋಡುವರೇನೊ
ತೊಡರುಗಳಿದ್ದರು ಬಿಡಿಸುವ ಬಗೆ ಬಲ್ಲ್ಯೋ
ತಡೆಕೊಡುವ ದೋಷ ಒಡೆಯ ನಿನ್ನೆದುರಿಗೆ
ಅಡರಿ ನಿಲ್ಲುವದುಂಟೆ ಆವಾವ ಕಾಲಕ್ಕೆ
ಪೊಡವಿಯ ತಳದಲ್ಲಿ ಪುಟ್ಟಿ ಸಾಧನಗಳು
ಪಡಿಯಲಿಬೇಕೆಂಬ ಭಕುತ ಜನರುಗಳು
ಕಡಿಮೇನೊ ಅವರೊಶ ಮಾಡಿಸೊ ಭಕ್ತರ
ಬಿಡಿಯ ಬಿರುದಿನ ವಾಸುದೇವವಿಟ್ಠಲ ೪

ಆದಿತಾಳ

ಒಂದೊಂದು ಕೊಡಲು ಮತ್ತೊಂದು ಕೊಡಲಿ ಎಂದು
ಸಂದಣಿಸುತಲಿವೆ ವಿಷಯಗಳೊಂದು
ತಂದೆ ತಡಮಾಡಬೇಡವೊ ಅದರಿಂದ
ಒಂದೆ ಸಾಧನ ಬಹಳಾಗುವದೊ
ಇಂದಿರೇಶ ಬಯಸಿದೆ ನಿನ್ನಲ್ಲಿ
ಬಂದು ಒದಗಿಸೊ ವಾಸುದೇವವಿಠಲ ೫

ಜತೆ

ಕರುಣಾಳು ಸ್ವಾತಂತ್ರ ವಾಸುದೇವವಿಠಲ
ಸರ್ವಜ್ಞ ನಿನಗೆ ಮೊರೆ ಇಡೊದಿದೆ ಚಿತ್ರ ೬

೪೦

ಉಗಾಭೋಗ

ಮನ ಮನೋಭವನ ಪಿತನ ನೆನೆದನುಸಾರಿಯಾಗಿರೆ
ತನು ಮನೋ ಅನುಕೂಲವಾಗಿ ಅನುಸರಿಸುತಲಿರುತಿರೆ
ತನುಜ ಸತಿ ತನುಸಂಬಂಧಿಗಳನುಸಾರಿಯಾಗಿರುತಿರೆ
ಅನುಚರರ ವಿರೋಧದಿಂದ ತಾ ಉಪಚರಿಸುತಲಿರುತಿರೆ
ಅನುಪಮ ದೇಶಕಾಲದಲ್ಲಿ ವಿಹತಿಗಳು ಮಾಡುತಲಿರೆ
ಅನಿಮಿಷರೊಡೆಯ ವಾಸುದೇವವಿಠಲರೇಯನು
ದನುಜಮರ್ಧನ ಅವನ ಪಾಣಿವನಜಕೆ ಬಂದು ಸಿಲುಕುವ

೪೧

ಮನಸಿಗೆ ಬಂದ ಧನ್ವಂತ್ರಿ ವೈದ್ಯನೇ
ಮನಸಿನ ರೋಗವ ಪರಿಹರಿಸೊ ಪ

ಧನ ಲೇಶ ಕೇಳಾ ಬಡವರ ಪೊರೆಯೊ ನೀ
ಮನೆಗೆ ಬಂದರೆ ತನು ರೋಗಗಳೋಡೋವು
ನೆನಹ ಮಾರ್ಗಕೆ ಬೇಗ ತಡಿಯದೆ ಈ ಮನ
ಕುನರ ಸೂಲಿವುಳ್ಳ ವಾತವ ಹರಿಸೊ ೧

ನಾಮವ ನುಡಿವಲ್ಲಿ ಅರುಚಿ ಇದಕಿದೆ
ಭಾಮೆಯ ಕಂಡರೆ ತಲ್ಲಣವಾಹದೊ
ಶ್ರೀ ಮನೋಹರನ ಸ್ಮರಣೆ ಹಾರುತಿದೆ
ಈ ಮಹಾದೋಷವುಳ್ಳ ಪಿತ್ತವ ಬಿಡಿಸೊ ೨

ಪಿರಿಯರು ನೋಡಲು ಗುರುಗುರುಯೆನುತಿದೆ
ಪರಿಪರಿ ವಿಷಯದ ನಂಜಿಲಿಂದ
ಪರಿಹರಿಸೊ ಶ್ಲೇಷ್ಮ ಮೊರೆಹೊಕ್ಕೆನು ನಾನು
ಪರಿಹರಿಸೊ ವಾಸುದೇವವಿಠಲರೇಯ ೩

೪೨

ಮರೆಯ ಮಾಡುವರೆ ರಂಗಯ್ಯ ತೆರೆಯ ಹಾಕುವರೆ
ವರದನು ಜಗಕೆಂದು ಎನಿಸಿದ ಬಳಿಕ ಪ

ಕುರುಹ ನಾನರಿಯೆ ನಿನ್ನಯ ರಂಗಯ್ಯ ಸುರತವ ಬಲ್ಲೆ
ಗುರುತು ಬಲ್ಲವಗೆ ಈ ಪರಿ ಮಾಡಿ ತೋರಿದೆ ೧

ಗುರುತುಯೆಂದರಿಯಾ ಸರ್ವದಾ ಎನ್ನ ದೊರೆಯು ನೀನಲ್ಲೆ
ತೆರೆಯು ನಿನ್ನದು ಲೋಕ ಪರಿಪಂಥಿಯಾಹುದೆ ೨

ದುರಿತವು ಮೊದಲೆ ಪೋದವು ವಾಸುದೇವವಿಠಲನೆ
ಪೊರೆಯೊ ದಯವು ನಿನ್ನ ಸಹಜ ಪೋಗುವುದೇ ೩

೪೩

ಶರಣಾಗ್ರಣಿ ರಾಮ ಚರಣಾಂಬುಜ ಬಿಡೆ
ತರುಳ ನಳಿನ ಷಟ್ ಚರಣ ಬಿಡ ಬಲ್ಲದೆ ಪ

ಹನುಮನ ಭಜನೆಂಬ ಘನವಾರಿ ಪೂರಿತ
ಮನ ಸರೋವರ ಅಯನವಾಗಿಪ್ಪಾ
ಜನಕಸುತೆ ಹಂಸಿ ಮನಸಾಪ ಹಾರಿ
ದಿನಕರನ್ವಯದಿಂದ ವಿನುತವಾಗಿಪ್ಪ ೧

ಅಮರರೋತ್ತಮರೆಂಬ ಭ್ರಮರರಾ ರವಗಳ
ಸಮಯೋಚಿತ ಸಾಮಭಿ ಸೇವಿತ
ವಿಮಲಾತಮದಿಂದ ಸಾಂದ್ರ ಶಮಲಾತಿ ದೂರ
ಕಮಲಾಸನ ಪ್ರಿಯ ಕಮಲೋತ್ತುಮ ಪಾದ ೨

ಶಿಲೆಯ ಬಾಲೆಯ ಮಾಡಿ ಮಲವಳಿದು ಮುನಿ
ಕುಲವಗೆಡಿಸಿ ಸತ್ಕುಲನೆನಿಸಿದೆ
ಜಲಧಿಯೊಳಗೆ ಸೇತು ನಿಲಿಸಿ ಸಜ್ಜನರಿಗೆ
ನೆಲೆ ವಾಸುದೇವವಿಠಲದೇವ ಪಾದಪದುಮ ೩

೪೪

ಸಣ್ಣವನ ಬಿನ್ನಪವ ಸಲಿಸಬಹುದಯ್ಯ
ಬಣ್ಣಿಸಲೊಶವಲ್ಲ ದಯವುಳ್ಳ ದೊರೆಯೆ ಪ

ನಿನ್ನ ಗುಣ ಸುರ ತರುವು ವನದಿ ಶುಕಾದಿಗ
ಳುನ್ನತವಾಗಿಹವು ಉಚಿತವೇ ಸರಿಯು

ಎನ್ನ ಮನ ಕೋಡಗವು ಅಡವಿಯನು ಬಿದ್ದದೆ ಇ
ದನ್ನ ಅದರೊಳಗೆ ಇಡಬಹುದಯ್ಯ ಹರಿಯೆ ೧

ಕಮಲಭವ ವಾಣಿ ಮುಖ ನಯನಗಳು ಎಂಬ ಮಹ
ಕಮಲೋತ್ಪಲಗಳಿಂದ ಶೋಭಿಸುತಿಹ
ವಿಮಲ ಲಾವಣ್ಯ ಸುಧಾಂಬುಧಿಯೊಳಿಡಿಸಯ್ಯ
ಮಮ ನೇತ್ರ ಮೀನಗಳ ವಿಷಯ ಪಂಕದಿ ತೆಗಿಸು ೨

ನಿಮ್ಮ ನಾಮಾಮೃತದ ಸೂರೆಯನು ಬಿಟ್ಟು ಶ್ರೀ
ಬೊಮ್ಮ ಭವ ಮುಖರ ಕೆರೆ ಕೋಡೇರಿಸುವಿ
ಇಮ್ಮನುಜ ತುತಿ ಚೂರ್ಣ ತೆಗೆದು ತೊಳೆದು ಪಂಬೊ
ನಮ್ಮ ವದನ ಕರಡಗೆಯ ವಾಸುದೇವವಿಠಲ ೩

೪೫

ಉಗಾಭೋಗ

ಸಿರಿಬೊಮ್ಮಾದಿಗಳೊಡೆಯ ನೀನು ಎನ್ನ
ಹರಣದೊಡೆಯನೆಂದು ತುತಿಪೆನಯ್ಯ
ವೇದ ಮೊದಲಾದಾಗಮಕಾಗೋಚರನೆ
ತೊದಲು ನುಡಿಗಳಿಂದ ತುತಿಪೆನಯ್ಯ ವಿ-
ವಿಧ ರಸಂಗಳಸುರರಿಗೆ ಸೇವಿಪಂಗೆ ಹವಿ
ರುದಕವನಿಟ್ಟು ಸಲಿಸೆಂಬೊನೊ ಬೊಮ್ಮ
ಮೊದಲಾದ ಭಕುತ ಮುಕುಟವಿರೆ
ಸುಮ್ಮನೆ ನಾನೊಬ್ಬ ಭಕುತನೆಂದೋಡುವೆ
ಈಸಪರಾಧವು ಸಹಿಸದೆ ಪೋದರೆ
ವಾಸುದೇವವಿಟ್ಠಲ ಎನಗಾವ ಗತಿಯೋ

೪೬

ಸುಳಾದಿ

ರಾಗ ಭೈರವಿ ಧ್ರುವ ತಾಳ

ಸಿರಿಯ ಪತಿಯೆ ನೀನು ಅಜನ ಪಿತನೊ ನೀನು
ಸುರರೊಡೆಯನು ನೀನು ದೊರೆಗಳ ದೊರೆ ನೀನು
ನರ ಭಕುತರೊಳು ಮರುಳ ಭಕುತ ನಾನು
ಪರಿಪಾಲಿಪದೆಂತೊ ಎನ್ನಾಳುತನವನು
ಸುರರಾಳಿದ ಎನ್ನ ತಪ್ಪುಗಳೆಣಿಸಲು
ಕುರುಬನ ಮಡ್ಡತನ ಚತುರರೆಣಿಸಿದಂತೆ
ಮರುಳರಾದರು ಎಮ್ಮ ಡಿಂಗರಿಗರೆಂದು
ಪರಿಪಾಲಿಸಬೇಕೊ ವಾಸುದೇವವಿಠಲ ೧

ಮಟ್ಟತಾಳ

ಒಡೆಯ ಕ್ಷಮಿಸಿ ನೀ ಕೇಳಿದರಾಯಿತೆ
ನುಡಿಯ ಭಕುತನ್ನ ಅಪರಾಧಗಳು
ಒಡೆಯನು ಪಿಡಿದರೆ ನಡೆನುಡಿಗಳು ತಪ್ಪೆ
ಕಡೆ ಹಾಯುವದೆಂತೊ ಬಡ ಭಕುತರುಗಳು
ಜಡಮತಿ ಜನರನ್ನ ಕಡು ದಯದಿಂದಲ್ಲಿ
ಪಡಿಯಬೇಕು ವಾಸುದೇವವಿಠಲ ೨

ತ್ರಿವಿಡಿ ತಾಳ

ನಿನ್ನ ಭಕುತರ್ಗೆ ಬನ್ನ ಬರಲು ಉದಾ–
ಸಿನ್ನ ಮಾಡಿದರೆಂಬಿ ಎನ್ನ ನಿರ್ದಯನೆಂದು
ಮುನ್ನಿದಾರೋ ಎಂಬಿ ನಿನ್ನಾರೊ ಬಾ ಎಂದರು
ಎನ್ನ ಗೊಡಿವಿ ಏನೆ ಎನ್ನ ಎನ್ನವನೆಂದೆ

ನಿನ್ನವರವರಲ್ಲಿ ಭಿಡೆಯು ಎನಗೆ
ಮುನ್ನೆ ಬೇಕಾದರೆ ಜನರ ವಿಷಯದಲ್ಲಿ
ಸನ್ನೆ ಮಾಡಿದರೆ ಅಂದಕೆ ನಾ ಪಿಡಿವೆನೊ
ನಿನ್ನ ಶರಣರಲ್ಲೆ ಬಿನ್ನಪ ಬಿಡಲೊಲ್ಲೆ
ಘನ್ನ ವಾಸುದೇವವಿಠಲ ತಿಳಿದುಕೊ ೩

ಅಟ್ಟತಾಳ

ಚಲಿಸಲು ತೃಣ ಸಹ ಶಕುತಿ ಎನಗಿಲ್ಲ
ಕಲಿಸಲು ಬಲ್ಲನೆ ವೇದಶಾಸ್ತ್ರಗಳನು
ಒಲಿಸಿ ನಿಲಿಪೆನೆ ವಾದಿಗಳ ಸಭೆಗಳಲ್ಲಿ
ಒಲಿಯಲಾರಿಯೆ ನಿನ್ನ ಗುಣಗಳ ನಿಲಯನೆ
ನಿಲಿಸಿ ನಿನ್ನಯ ರೂಪ ನೀನೇವೆ ಮಾಡಿಪಿ
ಒಲಿಯೆ ಮಾತ್ರವನ್ನು ನೀನೇವೆ ವಿಧಿ ನಿಷೇಧಂಗಳ
ತಲಿಗೆ ಕಟ್ಟುವೆ ಎನ್ನ ನಿನಗಿದು ಉಚಿತವೆ
ಬಲಿಯ ಪಾಶದಿಂದ ಬಿಡಿಸಿದ ತ್ವರ ಎನ್ನ
ಕಲಿ ಬಾಧೆ ಪರಿಯಯ್ಯಾ ವಾಸುದೇವವಿಠಲ ೪

ಆದಿತಾಳ

ಸೂಚಿಸಿದೆ ನೀ ಮೊದಲೆನಗೆ
ಯೋಚಿಸಿ ನಿನ್ನಯ ವಿಸ್ಮೃತಿ ಮೊದಲಾದ
ನೀಚ ಗುಣಂಗಳ ಗಣಗಳು ಅದರೊಳು
ಚಾಚಲು ಕಾಮ್ಯಕೆ ಹಾನಿಯು ಇನಿತಿಲ್ಲ
ನೀ ಚಿತ್ತದಲ್ಲಿಡು ವಾಸುದೇವವಿಠಲ ೫

ಜತೆ

ನಿನ್ನ ಮರಹೆ ಮೃತ್ಯು ನಿನ್ನ ನೆನಹೆ ಜೀವ
ಧನ್ಯರಿಗೆ ತತ್ವ ವಾಸುದೇವವಿಠಲ ೬

೪೭

ಉಗಾಭೋಗ

ಸುರರನುಳಿಸಬಲ್ಲಿ ದುರುಳರಳಿಸಬಲ್ಲಿ
ಸಿರಿ ವಶ ಮಾಡಬಲ್ಲಿ ವೈದ್ಯರಾಜ
ದೊರೆಯೆ ಧನ್ವಂತ್ರಿಯೆ ತರಳ ನಾನೆಂದು ಬೇಡುವೆ ಬಲ್ಲಿಯಾ
ಮರುಳು ಮಾಡುವ ಔಷಧವ
ಹರಿ ನಿನ್ನ ಮೂರುತಿ ಕಾಮಧೇನು ತೋರಿ
ಸರಿವುತಿದೆ ಹೃದಯ ಗೋಷ್ಟದಿಂದ
ಕರುವು ಆದ ಮನ ಚಿಗದಾಡುತಲಿದೆ
ಕರದುಕೊಂಬೆನೊ ನಾ ಇನ್ಹ್ಯಾಂಗೆ ಸುಧಿಯ
ಸ್ಥಿರ ದಯಪಾಶವ ಕೊರಳಲ್ಲಿ ಕೊಟ್ಟಿಟ್ಟಿ
ಪರಮ ಭಕುತಿಪಾಶ ಚರಣಕ್ಕೆ ತಳೆಹಾಕಿ
ಗುರುದಯ ರಸ ಬೆರೆತ ಪುಣ್ಯ ಮುರವನಿಕ್ಕಿ
ವರ ಲವಲವಿಕೆಯೆಂಬದಾವಿನಿಂದ
ಕರು ಕರವಶಮಾಡಿ ಚಿತ್ತ ಪಾತ್ರಿಯಲ್ಲಿ
ಭರದಿ ಸುಧೆಯ ಕರೆದುಕೊಂಬಂತೆ ಮಾಡಯ್ಯ
ಮರುಳ ಮೆಚ್ಚುದಿ ಕರುವಿಗೆ ತುರುವಿಗೆ
ಸುರರಲ್ಲಿ ಈ ಪರಿ ಮಾಡಿದದನು ಬಲ್ಲೆ

ಕರೆದುದಷ್ಟು ಮೀಸಲು ಹಾಕುವೆ ನಿನಗೆ
ಸಿರಿ ವಾಸುದೇವವಿಠಲರೇಯ
ಮರೆಯಾದೆ ಮಾಡಯ್ಯ ಪರಮಪೂತನನೆ

೪೮

ಸೃಷ್ಟಿ ಕಾರಣ ದಯಾ ದೃಷ್ಟಿಯಲಿ ನೋಡೆನ್ನ
ಘಟ್ಟಿಗನೆನಬೇಕೊ ಇಷ್ಟಿಲ್ಲ ಅಪರಾಧ ಪ

ಇಷ್ಟವರನ ಬಂಧದೋಳೆನ್ನ ಸಿಲುಕಿಸಿ
ದುಷ್ಟರೂ ಒಂದಾಗಿ ತಾವೆಲ್ಲ ಎನ್ನನೂ
ಕಷ್ಟಬಡಿಸೇವಂತ ದ್ವೇಷದಿ ಹವಣಿಸ
ಲಿಷ್ಟರೊಳು ನೀ ಕೇಳುವಂತೆ ಕೂಗಿದೆನಲ್ಲ ೧
ನಿನ್ನ ಮಾತುಗಳಾಡಧ್ಹಾಂಗೆನ್ನ ಮಾಡಿಸಿ
ಅನ್ಯವಾರುತಿಗಳು ಚನ್ನಾಗಿ ನುಡಿಸಲು
ಅನ್ಯಾಯ ಬಂತೆಂದು ಅವರಂತೆ ನುಡಿದು ನಾ
ಮನ್ನದೊಳಗೆ ಮೊರೆ ಇಟ್ಟದನರಿಯಾ ೨

ಒಳಗೆ ಹೊರಗೆ ತುಂಬಿಕೊಂಡಿಹರು ಬಹಳ
ಖಳರು ಅವರು ದೇಶ ಕಾಲವಯ್ಯ
ಬಳಿಯಲಿ ನಿನ್ನವರು ಗೂಢ ವೇಷದಿ ತಾವು
ಸುಳಿಯಲು ಅವರನ್ನು ಗುರುತು ಮಾಡಿದೆನಯ್ಯ ೩

ಈಗಲೂ ನಿನ್ನ ಬಲಪವನನಾಗಮದಿಂದ
ಬ್ಯಾಗನೆ ಖಳರನ್ನ ವರದು ಸವರಿಸೊ
ಜಾಗರೂಕನಾಗಿ ಅದೇ ಪದ್ಧತಿ ಪಿಡಿದು
ಸಾಗಿ ಬಂದೆನು ಕೇಳು ಎನ್ನಿಂದೇನಪರಾಧ ೪

ಲೇಸಾಗಿ ಬಲವಿತ್ತು ಎನ್ನನು ಕಳಿಸಲು
ಆಸು ಅಸುರರನ್ನು ತರದೊಟ್ಟುವೆಯಾ
ವಾಸುದೇವವಿಠಲ ನೀ ಕೈಯ್ಯ ಪಿಡಿದರೆ
ಆ ಸುಕಾರ್ಯಕೆ ಬಾಹೆ ನೋಡೆನ್ನ ಶಕುತಿ ೫

೪೯

ವರಹದೇವರ ಸುಳಾದಿ

ರಾಗ ಭೈರವಿ ಧ್ರುವ ತಾಳ

ಹರಿಯ ಆಜ್ಞದಿಂದ ಈರೇಳು ಲೋಕವ
ಸೃಜಿಸಿ ತಾ ಮನದಿಂದ ಕೆಲವು ಜನರುಗಳ
ಥರವಲ್ಲ ಇದರಿಂದ ತನುವಿಂದ ಸೃಜಿಸುವ ಜ
ನರು ಬಹಳವಾಗಿ ಅಹರೆಂದು
ಹಿರಣ್ಯಗರ್ಭನು ಮನು ಮೊದಲಾದವರ ಸೃಜಿಸಿ
ವರ ಬಹು ಸಂತತಿಂದ ಜಗವ ಪೂರೈಸೆನ್ನ
ಧರಿಯು ನೀರೊಳು ಮುಣಗಿ ಪೋಯಿತೊ ನಾ ಹ್ಯಾಗೆ
ಸೃಜಿಸು ಬಗೆ ಎನ್ನೆ ಬ್ರಹ್ಮನು ಚಿಂತಿಸೆ
ವರಹ ರೂಪದಿ ನಾಸಾಪುಟದಿಂದ ಪುಟ್ಟಿದಂಥ
ಪರ ವಾಸುದೇವವಿಠಲ ಪರಗತಿ ಎನಗೆ ೧

ಮಟ್ಟತಾಳ

ಸುರರು ನೋಡಲು ನೋಡೆ ವರಗಿರಿ ಎಂತಾಗೆ
ತರಲು ಧರೆಯ ಪೋದ ನೀರೊಳು ಪಾತಾಳ
ಧರಿಯಲ್ಲಿ ಇದ್ದಂಥ ಧರೆಯನು ತರುತಿರಲು
ದುರುಳ ಹಿರಣ್ಯಾಕ್ಷ ಕರೆಕರೆ ಮಡಿದ್ದು
ಸರಕು ಮಾಡದೆ ದೇವ ಧರೆಯ ತಡೆಯುತಲಿದ್ದ

ತಿರುಗಿ ಎದುರಾಗಿ ದುರುಳನ ಶಿರವನ್ನು
ವರಿಸಿದ ಕೋರ್ದಾಡೆ ಕ್ಷುರದಿ ದಿತಿಜವೈರಿ
ವರ ವಾಸುದೇವ ವಿಠಲಪರನೆಂದು ಸಾರಿಕೊ ೨

ತ್ರಿವಿಡಿ ತಾಳ

ನೀಟಾದ ಮೊನೆಯುಳ್ಳ ಸೆಟೆಯದಟಿತಗ್ರೀವ
ಹಾಟಕ ನಯನನ ರಕುತಯುಕುತ
ಮಾಟಾದ ದಾಡೇಲಿ ನೀರೊಳು ವಿಹರಿಸಿ
ಊಟಿ ನೀರನು ಮಾಡೆ ಮ್ಯಾಲುಗಳೆ ತೊಯಿದು
ಈಟಿ ಮೊನಿಗಳೆಮ್ಮ ತಗಲವೊ ಎಂತೆಂದು
ಕೂಟ ಕಟ್ಟಿದರ್ಜನ ಜನೋ ಲೋಕದಿ ಜನರು
ಆಟದಿ ಪುಚ್ಛವನು ನೆಗಹಿ ನೀರನು ಬಡದು
ಓಟ ಓಡುವ ರಭಸ ತಾಳದೆ ಜಲಧಿಯು
ಚಾಟೆಂದು ಲಯದ ಕೃಪೀಠಯೋನಿಯು ಬಂತು
ಮೂಟಿ ಕಟ್ಟಿಕೊಂಡು ಮೊರೆಯೊಕ್ಕ ಕಿಟಗೆ
ನೀಟಿಸಿ ಸಮಯವ ಕುಸುಮ ವೃಷ್ಟಿಗಳಿನ್ನು
ಪಾಟಿಸಿದರು ಸುರರು ವಾಸುದೇವವಿಟ್ಠಲಂಗೆ ೩

ಅಟ್ಟತಾಳ

ಕಿರಿ ಕಿರಿ ಕಿರಿ ಎಂದು ಧರೆಯ ಮೊಗವ ನೋಡಿ
ಅರಿದರ ಧರನಾಗಿ ಸುರರಿಗೆ ಅಭಯವ
ವರವ ಕೊಡುವೆನೆಂದು ಸ್ಥಿರವಾಗಿ ನಿಂತನ್ನ
ಚರಣ ಸಮೀಪಕೆ ಸುರರು ಸುಖದಿ ಬಂದು
ಪರಿಪರಿ ಕೊಂಡಾಡೆ ವರ ವಾಸುದೇವವಿಟ್ಠಲವೊಲಿವನಾಗೆ ೪

ಆದಿತಾಳ

ಹಿರಣ್ಯಕ ನಯನನ ಮಶ್ರುಣ ಪೂಸಿದ ದಾಡೆ
ವರಿಸಿತೊ ಅಂಜುವೆ ಮುದ್ದಾಡಲಿ ಬೇಡ
ಪರಮ ಕೃಪೆಯಿಂದ ನೋಡಿದರೆ ಸಾಕೊ
ವರವೀವೊ ಅವರೆಲ್ಲ ಸತಿಯ ಕೇಳುವರೇನೊ
ಧರೆಯು ನಗುತಾಳೆ ಕರದು ಬಿಡಸಲ್ಲ
ವರವೀಯೊ ವಾಸುದೇವವಿಠಲ ಕೋಲ ೫

ಜತೆ

ಮರಿಯದ್ದಾಗೆ ಮಾಡೊ ವಾಸುದೇವವಿಠಲ
ಮೊರೆ ಇಡುವೆ ಇದೆ ಒಡೆಯ ಕೋಲ ೬

೫೦

ಹೇಳುತಿ ಕೇಳುತಿ ಏನಿಲ್ಲವೊ
ಆಳಿದಾ ಊಳಿಗನ ಬಾಳಿವಿನ್ನೇನೊ ಪ

ನೀರೊಳಗೆ ತಿರುಗಿ ನೀ ಭಾರ ಬೆನ್ನಲಿ ಪೊತ್ತು
ದೂರದೊಳು ಮುಳುಗಿ ಭೂಭಾರ ನೆಗಹಿ
ಧೀರ ಕರ್ಣವು ಮಂದವೊ ಹ್ಯಾಗೊ ತಿಳಿಯದು
ಘೋರ ದೈತ್ಯನ ಕೊಲ್ಲೊ ಚೀರಾಟವೊ ೧

ಮೇದಿನಿ ಪತಿಯ ತುತಿಸುವ ಭರದಿ
ನೀ ಧನುರ್ವೇದಗಳನೋದಿಸುವ ನಿರ್ಭರವೊ
ಕಾದುವ ರಾಕ್ಷಸರ ಕುಲದ ಕೂಗ್ಯಾಟವೊ
ಮೋದದಿ ಗೋಪಿಯರ ಕೋಲಾಟವೊ ೨

ಬತ್ತಲೆ ನಿಂತು ನುಡಿಯಲಿ ಬಾರದೊಯೆಂತೊ
ಹತ್ತಿದ ವಾಜಿಯು ನಿಲ್ಲದೇನೊ
ಇತ್ತ ಬಾರೊ ವಾಸುದೇವವಿಟ್ಠಲರೇಯ
ಮತ್ತೆ ಹೇಳೊ ನಿಲ್ಲೊ ಬಾಯೆಂತಲೆನ್ನ ೩

ಲಕ್ಷ್ಮೀದೇವಿ

೫೧

ಅಂಜಿಸುವುದ್ಯಾಕಮ್ಮ ಕಂಜೋದ್ಭವ ನಮ್ಮ ನೀ
ಅಂಜಿಸಿದರೆ ಲೋಕ ಅಂಜದಿರುವುದೆ ಪ

ಕುಂಜರಗಮನೆ ನಾವಂಜನದೇವಿ
ಸಂಜಾತನಾದ ಪ್ರಭಂಜನನಣುಗರು
ಕಂಜನಾಭನ ಪಾದ ಕಂಜಕ್ಕೆ ವಿಮುಖ
ಸಂಜಿಲಿ ಚಲಿಸುವ ಪುಂಜರು ಕಡಿಮೆ ೧

ನಿನ್ನನೆ ನಂಬಿ ನಾವಿನ್ನು ಸಂಸೃತಿಯ
ಬನ್ನವೆ ಕಳಕೊಂಡು ಚನ್ನಾಗಿ ಜಗದಿ
ಧನ್ಯರಾದೇವೆಂದು ಮನ್ನಾದಿ ಬಯಸೆ
ಅನ್ಯಾರಂದದಲಿ ನೀ ನಮ್ಮನ್ನ ನೋಡುವರೆ ೨

ಸಿರಿ ನಾರಸಿಂಹನ್ನ ವರ ಭಕ್ತಿಯಲಿ ನೀನು
ಕರವಶ ಮಾಡಿಪ್ಪೆ ಪರವೇನೆ ನಿನಗೆ
ಪರಮೇಷ್ಠಿ ಮೊದಲಾದಮರರ ನೀ ಪೊರೆವೆ
ಸಿರಿ ವಾಸುದೇವವಿಠಲನ್ನ ತೋರಮ್ಮ ೩

೫೨

ಪರಿಪೂರ್ಣಕಾಮೆ ಶ್ರೀ ರಮೆ ಪ

ಕಮಲದಳ ಸಮ ವಿಮಲ ಚರಣಯುಗೆ
ಅಮಲ ಜಂಘಾನ್ವಿತೆ ಶುಭಗೆ ೧

ಇಭ ಕರ ಸದ್ಯೋರು ಇಭರಿಪು ಸಮಕಟೆ
ಶುಭತಮ ಶುಭತಮ ನಾಭಿ ಸುತ್ರಿವಳೆ ೨

ಗುರು ವಾಸುದೇವವಿಠಲ
ಪರಮಪ್ರಿಯೆ ಭವ-
ಶರಧಿ ತಾರಕೆ ಚಂದ್ರಫಲಕೆ ೩

೫೩

ಸಿರಿದೇವಿ ಹರಿಯ ದಯವು । ಆವಾವ
ಪರಿಯೆ ಆ ಪರಿ ಪಾಲಿಸೆ ಪ

ಆಲದೆಲೆಯಲಿ ಅಂದು । ನಿನ್ನಯ
ಮ್ಯಾಲೆ ಮಲಗಿಪ್ಪ ಹರಿಯ
ತೋಳು ಬಿಗಿದಾಲಂಗಿಸಿ । ಸೃಷ್ಟಿಯ
ಲೀಲೆಯನು ಮಾಡಿಸಿದ ತಾಯೆ ೧

ವಕ್ಷವಾಲಯವ ಮಾಡಿದೆ । ಆವಾಗ
ದಕ್ಷಣಾದೇವ್ಯೆನಿಸಿದೆ
ಲಕ್ಷ್ಯವಿಲ್ಲದೆ ಭಾಗ್ಯವ । ಭಕ್ತರಿಗೆ
ವೀಕ್ಷೆಯಿಂದಲ್ಲಿ ಈವೆ ೨

ದೇವತಾಜನ ಸ್ತುತಿಸೆ । ನೀ ಎನ್ನ
ಭಾವ ಹರಿಯಲಿ ನಿಲ್ಲಿಸೆ
ಕಾವ ಭಾರವು ನಿನ್ನದೆ । ಶ್ರೀ ವಾಸು
ದೇವವಿಠಲನ್ನ ರಾಣಿ ೩

ವಾಯುದೇವರು

೫೪

ಆನಂದತೀರ್ಥರ ಮತ ಪರಮ
ಆನಂದ ಸಾಧನ ತಿಳಿ ಕಂಡ್ಯಾ ಮನವೆ ಪ

ಶಕುತಿಯು ಇದ್ದಷ್ಟು ತಿಳಿದು ಮತವು ಬಲು
ಯುಕುತಿಯಿಂದಲಿ ನೀ ಒಲಿಸು ಕಂಡ್ಯ
ಭಕುತಿಯು ಗುರುಗಳ ಪದದಲಿ ಮಾಡಲು
ಮುಕುತಿಯು ಕರವಶವಾಗುವದೊ ಸಿದ್ಧ ೧

ತಿಳಿಯದಿದ್ದರೆ ನೀನು ತಿಳಿದವರ ಬಳಿಯಲ್ಲಿ
ಮಿಳಿತನಾಗಿ ಪೋಗಿ ತಿಳಿದುಕೊಳ್ಳೊ
ಖಳಜನ ಸಹವಾಸ ಕುಮತಗಳಭ್ಯಾಸ
ಒಳಿತಲ್ಲವೊ ನಿನಗೆಂದಿಗನ್ನ ೨

ಪ್ರವಚನ ಮಾಡುವ ಬುಧಜನ ಪೇಳುವ
ಸುವಚನ ಕೇಳಿ ನೀ ಬದುಕು ಕಂಡ್ಯಾ
ಕವಚವು ನಿನಗಿದು ಭವ ಛಳಿ ಬಾಧಿಗೆ
ಪ್ರವಚನ ಬಾಹೋದೆಂದಿಗನ್ನ ೩

ಇದ್ದವರಿಗೆ ಕೊಟ್ಟು ಅವರ ಹಿಂದೆ ಇಷ್ಟು
ಮೆದ್ದರೆ ಕೋಟಿ ಭೋಜನದ ಪುಣ್ಯ
ಗೆದ್ದರು ಇವರನ್ನ ನಂಬಿದ ಜನರು
ಬಿದ್ದರು ದೂಷಕ ಜನ ತಮದಿ ೪

ಕಾಸುವೀಸಕೆ ನೀನು ಮೋಸಗೊಳಲು ಬ್ಯಾಡ
ತಾಸು ಘಳಿಗೆ ನೆಚ್ಚಲು ಬೇಡ
ಏಸೇಸು ಸುಕೃತದಿ ದೊರಕಿತು ಈ ಮತ
ವಾಸುದೇವವಿಠಲನ್ನ ಪಾಡೊ ೫

೫೫

ತಾವಲ್ಲಿ ನೆನೆಯಲು ದಶಮತಿ ಗುರುಗಳು
ನಾವಿಲ್ಲಿ ಸುಖಿಗಳು ಸುಲಭದಿಂದ ಪ

ತುರು ಮಾಮರ ಮಣಿಯ ನೆನೆಯೆ ಕೂಸುಗಳಿನ್ನು
ಪೂರತಿ ಮನದೊಳಗಾಗುವಂತೆ
ತಾರಾ ರಮಣನು ತಾ ಮ್ಯಾಲೆ ಉದಿಸಲು
ವಾರಿಧಿ ಹರುಷದಿ ಉಕ್ಕುವಂತೆ ೧

ತರಣಿ ಕಿರಣ ಪಸರಿಸೆ ಸರೋವರದಲ್ಲಿ
ಸರಸಿಜ ವಿಕಸಿತವಾಗುವಂತೆ
ವಾರಿದ ಮ್ಯಾಲಿರೆ ತಾ ನೋಡಿ ಮಯೂರ
ಮೀರಿ ಹರುಷದಿ ಕುಣಿ ಕುಣಿದಾಡುವಂತೆ ೨

ವ್ಯಾಸ ದೇವರ ಕೂಡ ಮಾತುಗಳಾಡುವಾಗ
ಲೇಸು ಶಿಷ್ಯರಿಗಿಂಥ ಶುಭ ನಮಗೆ
ವಾಸುದೇವವಿಠಲ ಪಾಶದಿಂದಾಡುವಾಗ
ವಾಸ ಅಕ್ಷಯವೆನ್ನಿ ಕೃಷ್ಣೆಯಂತೆ ೩

೫೬

ಪ್ರಾಣನಾಥನೆ ನಿನ್ನ ತುತಿಯ ಮಾಡಲು ಇನ್ನು
ತ್ರಾಣ ಎನಗುಂಟೆ ಗುರುವೆ ಪ

ದಾನಿ ಸಿರಪತಿಯ ಭಕುತರ ಶಿಖಾಮಣಿಯೆ ಗುಣಶ್ರೇಣಿ
ಎಣೆಗಾಣೆ ಶ್ರುತಿಧಿ ಸ್ಮೃತಿಧಿ ಅ.ಪ

ನಿಖಿಳ ಜೀವರಿಗೆ ಮಾನಿ ಪುರುಷ ನೀ
ಸಕಲ ಮಹದಾಭಿಮಾನೀ
ಸುಖರೂಪ ಪುರುಷನಿಗೆ ವಾಯು ಅಗ್ನಿ ಆದಿತ್ಯ
ತ್ವಕುರೂಪ ಪುತ್ರನಾದೀ ಮೋದಿ ೧

ಕಮಠರೂಪದಿ ಲೋಕಕಾಧಾರ
ಸಮನೋ ಆಖಣಾಶ್ಮನೆ
ಸಮಯ ಬಿಡದಾಗೆ ಹೃದಯದಲಿ ಎಚ್ಚತ್ತಿರುವೆ
ಸುಮನಸರನ್ನ ಪೊರೆವೆ ಬೆರೆವೆ ೨

ವಾಸುದೇವವಿಠಲನ್ನ ಸಂತತವು
ಶ್ವಾಸಮಂತ್ರದಿ ಸೇವನ
ಲೇಸಾಗಿ ಮಾಡುವ ಜೀವರೊಳು ನೀನೇವೆ
ದಾಸನ್ನ ಪೊರೆಯೊ ಧೀರ ವೀರ ೩

೫೭

ಮನವೆ ಮಾನ್ಯನ ಮನ್ನಿಸು ಶ್ರೀವ್ಯಾಸ
ಮುನಿಗೆ ಒಲಿದಿಹ ವಾಯು ನಾ ಪ

ಪ್ರತಿ ಸಂಚರ ಕಾಲದಿ ಅವಿಲೀನ
ಮತಿಯುಳ್ಳ ದೇವನಿವನು
ಸುತ ಜಯಾದೇವಿಗೀತ ತನ್ನ ಸರಿ
ಚತುರಾಸ್ಯ ದೇಹದೊಳಿಹ ೧

ಚತುರವಿಂಶತಿ ತತ್ವಕೆ ಅಭಿಮಾನಿ
ಶ್ರುತಿಗಳರಿಯದ ಗುಣಗಳ
ಮತಿಯುಳ್ಳ ಸೂತ್ರನಾಮ ಹರಿರೂಪ
ಮಿತಿ ಇಲ್ಲದಲೆ ಕಾಂಬನೊ ೨

ಯತಿಯಾಗಿ ಬಂದು ಹರಿಯ ಕಾರ್ಯಗಳ
ಕೃತಿಸಿ ತಾ ನಿಂದು ವ್ಯಾಸ
ವ್ರತಿಯಿಂದ ಮಾಡಿಸಿದ ಈತಗೆ
ಪತಿ ವಾಸುದೇವವಿಠಲ ೩

ರುದ್ರದೇವರು

೫೮

ದೇವತೆಗಳ ದೇವ ಮಹದೇವ ದೇವ
ಆವ ನಿಮಗೆ ಸರಿಯು ಕಾವುದೆಮ್ಮನು ಸರ್ವ ಪ

ಮೂರನೆ ತತ್ವದ ಒಡೆಯನು ನೀನಯ್ಯ
ಕಾರುಣಿಕ ಜನರಿಗಾರ್ಹ ಭಾವಕೆ
ಮಾರಮಣನಾ ನೆನೆದು ಮೈಮರೆದು ನೀ
ತಾರಕಾ ಉಪದೇಶಿ ಕಾಸಿ ವಾಸಿ ೧

ಗಂಗೆಯ ಧರಿಸಿ ನೀ
ಭಂಗಬಡುವ ಜನರ ಪೊತನ ಮಾಡಿದ್ಯೊ
ಅಂಗಜನಯ್ಯನ ಭಕುತ ಶಿಖಾಮಣಿಯೆ ನಿ
ಸ್ಸಂಗ ಜನರ ಪ್ರಿಯ ಸನಕಾದಿ ವಂದ್ಯ ೨

ಮೋಸಗೊಳಿಸುವಿಯೊ ದುರ್ಜನರ ನಾನೀಶನೆಂದು
ವಾಸುದೇವವಿಠಲಗಲ್ಲದವರ
ಲೇಸು ಬೋಧಿಸುವಿಯೊ ಯೋಗ್ಯರನು ನೋಡಿ
ಎನ್ನಲಿ ವಾಸ ಮಾಡೊ ಎನ್ನ ಮನದೊಡೆಯ ೩

ಗುರುಸ್ತುತಿ

೫೯

ಗುರುಗಳ ಕರುಣವಿದು
ಇರುಳು ಹಗಲು ಹರಿಸ್ಮರಣೆಯೊಳಿರುವದು ಪ

ಕಲಿಯುಗ ಒದಗಿತಲ್ಲ । ವಿಷಯದಿ
ಚಲಿಸಿತು ಮನವೆಲ್ಲ
ಇಳೆಯೊಳು ಹಿರಿಯರಿಲ್ಲ
ನೆರೆಜನ ಖಳರು ಸಜ್ಜನರಲ್ಲ ೧

ವೇದ ಓದುಗಳಿಲ್ಲ ಸುಮ್ಮನೆ
ಕಾದಿ ಕಳೆವರು ಕಂಡ್ಹಾಗೆ
ಮೋದತೀರ್ಥರ ಮತ ಇದರೊಳು
ಓದಿ ಪೇಳುವರಿಲ್ಲ ೨

ಮೋಸ ಪೋಗದ ಹಾಗೆ ಹರಿಪದ
ದಾಸ್ಯವ ಬಿಡದಾಗೆ
ವಾಸುದೇವವಿಠಲನ್ನ ಕರುಣದಿ
ವಾಸರ ಕಳೆಯುವನೋ । ನಮ್ಮ ೩

೬೦

ನಾನ್ಯಾಕೆ ಚಿಂತಿಸಲಿ ನಾನ್ಯಾಕೆ ಧೇನಿಸಲಿ
ತಾನಾಗಿ ಶ್ರೀರಾಘವೇಂದ್ರಯತಿ ಒಲಿದ ಪ

ಪೋರತನದವನು ಎರೆಡು ತೆರೆಗಳಲ್ಲಿ
ದೂರಾಗಿ ಮೊರೆಯು ಅಲ್ಲವೆಂದು
ಕಾರುಣ್ಯದಿಂದ ತಮ್ಮಯ ಗುರುತುಗಳ ತೋರಿ
ಧೀರ ತಾ ಕರವನು ಪಿಡಿದ ಬಳಿಕ ೧

ಜಗದೊಳಗೆ ಪದಾರ್ಥಗಳು ಗುಣದಿ ಭುಂಜಿಸುವಂಗೆ
ಅಗದಂಕರನು ತಾನು ಬಳಿಗೆ ಬಂದು
ಬಗೆಬಗೆಯಿಂದಲಿ ಸುರಸ ಪದಾರ್ಥಗಳು
ಸೊಗಸಾಗಿ ಉಣಿಸಲು ಚಿಂತೆಯುಂಟೆ ೨

ಪೂರ್ಣಜಲ ಹರಿವ ವಾಹಿನಿ ಕಂಡು ಬೆದರುವಗೆ
ಕರ್ಣಧಾರನು ತಾನೆ ಬಂದು ನಿಂದು
ತೂರ್ಣದಲಿ ಕರಪಿಡಿದು ಹರಿಗೋಲ ಒಳಗಿಟ್ಟು
ಘೂರ್ಣಿಸಲು ಅವನಿಗೆ ಚಿಂತೆಯುಂಟೆ ೩

ತನ್ನಯ ಹಿತವು ತಾ ವಿಚಾರಿಸಲವಂಗೆ
ಚನ್ನಾಗಿ ಪರಮ ಗುರು ತಾನೆ ಬಂದು
ಸನ್ಮಾರ್ಗವನು ತಾನೆ ಪೇಳುವೆನೆನಲು
ಇನ್ನು ಆಯಾಸವುಂಟೆ ಅವನಿಗೆ ೪

ಏಸು ಜನ್ಮದಲಿ ಅರ್ಚಿಸಿದೆನೊ ನಾ ಇನ್ನು
ವಾಸುದೇವವಿಠಲ ಪಾದ ಪದುಮ
ಲೇಸಾಗಿ ಈ ಸುಕೃತದಿಂದೆನ್ನ ಹರಿದಾಸ
ಈ ಸುಗುಣ ಗುರುರಾಯ ಎನಗೆ ಒಲಿದ ೫

೬೧

ಮರೆವಾರೆ ಎನ್ನ ರಾಘವೇಂದ್ರ ಗುರುವೆ ಸಂಪನ್ನ
ಕರೆದು ಕಾಮಿತಗಳ ಕರವೆ ನಾ ನಿನಗೆಂದು ಪ

ದಾರಿಯ ತಪ್ಪಿ ಪೋಗುವ ಧೀರ ಘೋರನ್ನ
ದಾರಿಯ ಪಿಡಿಸಿನ್ನು ಪುರವನ್ನೆ ತೋರಿಸೆ
ಊರಿನವೊಳಗೆ ಅವನ ಆಗಾ
ದೂರ ನೋಡುವರೆ ದೋಷಗಳ ವಿಚಾರಮಾಡುವರೆ
ಧೀರರು ಆವ ಪರಿಯಲವನ ಪಾರಗಾಣಿಪರಲ್ಲದೆ ೧

ಹಸಿದು ಪರರ ಕೇಳದ ದ್ವಿಜವರಿಯನ್ನ
ಶಿಶುವಿನ ನೋಡಿ ದಯದಿಂದ ಕರದಿನ್ನು
ಹಸಿದ್ಯಾಕೊ ಎಂದು ಪಾಕವ ಮಾಡಿ
ಹಸನಾಗಿ ತಂದು ಬಡಿಸುವ ಅವಸರದಿ ನಿಂದು,ಅವನ ದೋಷ
ಪಸರಿಸಿ ಉಣಿಸಿದ ಜನರುಂಟೆ ಧರೆಯೊಳು ೨

ಜಲಪಾನಾತುರನಾಗಿ ಜಲವ ಕೇಳಿದ ವಿಪ್ರ-
ಕುಲ ತರಳನನು ನೋಡಿ ಕೃಪೆಯಿಂದ ಸುರನದಿ
ಜಲವನೀವೆನೆಂದು ಬ್ಯಾಗನೆ ದಿವ್ಯ
ಕಲಶವ ತಂದು ಬಾರೆಲೊ
ಬಲು ಆಲಸ್ಯವ್ಯಾಕೆಂದು ನಿನ್ನಯ ಪಂಕ
ತೊಳಿಯ ಕೊಡುವೆನೆಂದು ತಡವ ಮಾಡುವರೆ ೩

ಸುಶರೀರ ತನುವನು ಮನದಲಿ ಬಯಸಿ ತಾ
ಉಸರದ ಮುನಿತನಯನ ಕಂಡು ತಾವಾಗಿ
ಕುಶಲವ ಕೇಳಿ, ದೇವತ ವೈದ್ಯ
ಅಸಮರೆಂದೇಳಿ, ರಸ ಮಾಡೆಂದೇಳಿ, ಅವಗೆ ದಿವ್ಯ
ರಸವನು ಪೇಳಿ, ಪಸಿ ನಿನ್ನಲಿದ್ದಾ
ಕಿಸರು ಪೋದರೆ ಕೊಡುವೆವೆಂದು ನಿಲುವರೆ ೪

ಅರ್ತಿಯ ಭಕುತನ್ನ ನೋಡೀಗ ನಿನ ದಿವ್ಯ
ಕೀರ್ತಿಯ ನೋಡಿಕೊ, ವಾಸುದೇವವಿಠಲನ
ಮೂರ್ತಿಯ ಭಜಕ ಭಕ್ತರಾಭೀಷ್ಟ

ಪೂರ್ತಿಗೆ ಜನಕ ನಿನ್ನಯ ಗುಣ
ಸ್ಫೂರ್ತಿಗೆ ಜನಕ, ನಿನ್ನಯ ಗುಣ
ಸ್ಫೂರ್ತಿ ಉಳ್ಳನಕ ಪಾಪದ ಲೇಶ
ವಾರ್ತಿ ಎನಗೆ ಇಲ್ಲವೆಂದು ನಿಶ್ಚೈಸಿದೆ ೫

೬೨

ಜಯ ಮುನಿಯ ಭಜಿಸಿ । ಸಿರಿ ಪತಿಯ
ದಯವ ಬಯಸುವ ಧೀರರು ಪ

ಒಂದೊಂದು ವಚನಗಳು ಗುರುತರಾ
ನಂದತೀರ್ಥರ ಭಾವಕೆ
ಹೊಂದಿಸುವ ಯುಕತಿ ಬಾಣ । ತೆಗೆಯಲವು
ಕುಂದಿಲ್ಲ ಧೀಷುಧಿಗಳು ೧
ವಂದಿಸುವ ಜನ ಬೇಡಿದ ಫಲಗಳಿಗೆ
ಮಂದಾರು ತರು ಸನ್ನಿಭ । ತಾವು
ವಂದಿಸುವ ಶಿಷ್ಯರಿಗೆ । ಹೃದಯದಲ್ಲಿ
ಕುಂದ ಕುಸುಮದ ಮಾಲಿಕೆ । ತಾವು ೨

ಗೆಲಿದು ಪ್ರತಿವಾದಿ ಹೃದಯ । ಗಿರಿಗಳಿಗೆ
ಕುಲಿಶಗಳಂತಿಹವೆ ಅವರ ವಚನ
ಫಲಿಸುವ ಶ್ರೀ ವಾಸುದೇವ । ವಿಠಲನ
ಸಲೆ ಕೃಪೆಯೆಂದು ತಿಳಿಯೊ । ಪ್ರಾಣಿ ೩

೬೩

ನೋಡು ನೋಡು ಟೀಕಾಚಾರ್ಯರ
ಮಾಡು ವಂದನೆಗಳ ಬೇಡು ವರಗಳನ್ನು ಪ

ದುರ್ವಾಯಿ ಮತಗಳ ಮರ್ಮ ಭೇದಿಸಿ ಸುಧಾ
ನಿರ್ಮಾಣ ಮಾಡಿದ ಆರ್ಯರ ೧

ಲಲಿತೋರ್ಧ್ವ ಪುಂಡ್ರ ಶ್ರೀ ತುಲಸೀಭೂಷಿತ ಕರ್ನ
ವಿಲಸಿತ ಕಾಷಾಯಧಾರ್ಯರ ೨

ಯಾವಾಗಲೂ ವಾಸುದೇವವಿಠಲನ್ನ
ಸೇವಿಸುವರ ಭಜಿಸುವರ ೩

೬೪

ಸರಿಯಾರ್‍ೈ ಜಯಮುನಿ ಸಮರಾರ್‍ೈ
ಗುರುಮಧ್ವಕೃತಿ ವಿವೃತಿ ರಚಿಸುವಲ್ಲಿ ಪ
ವರ್ಣವಂದಾರು ಬಿಡದಲೆ ಬಹುಫಲ
ವರ್ಣಿಪೆ ಲೋಭದಿ ಶರಣ ಜನರಿಗೆ
ಕರ್ಣಸುಧಾರಸ ಬೆರೆದು ನೀ ಬಲುಗೂಢ
ಪೂರ್ಣಮತಿ ಭಾವವ ತೆಗೆವತಿ ಶೂರ ೧

ಒಂದೊಂದು ವಚನವ ಹಿಂದಾಗಿ ಮುಂದಾಗಿ
ಛಂದಾಗಿ ತಿರಿಗಿಸಿ ತಿರೆಯ ಸಿಂಧುರದಂತೆ
ಬಂದಿಸಿ ಮುಂದಾಗಿ ಬಂದು ದುರ್ವಾದಿಯ
ಸಂದುಗಳನೆ ಸೀಳಿ ಮೆರೆದತಿ ಶೂರ ೨

ಕತ್ತಿಯ ಒಂದೇ ಹಿಡದೆ ಬಿಡದಲೆವೆ
ಹತ್ತು ದಿಕ್ಕಿಗೆ ತಿರಿಗಿಪ್ಪ ವೀರನ ತೆರೆ
ಅತ್ಯರ್ಥ ಮೂಲದ ಹಿಡಿದು ಅದನ್ನು
ಸುತ್ತಿಸಿ ವಿಮತರ ತತ್ತರಿಸುವ ಧೀರ ೩

ಮೂಲ ವಚನಗಳ ಕಲ್ಪಲತೆಯ ಮಾಡಿ
ಮೇಲಾದ ತತ್ವಗಳೆಂಬೊ ಫಲಗಳು
ಶೀಲಮತಿಗಳುಳ್ಳ ಶಿಷ್ಯ ಶಿಶುವಿಗಳಿ
ಗಾಲಿಸಿ ಮೇಳಿಸುತ ಒಲಿಸುವ ಧೀರ ೪

ಅಕ್ಷೋಭ್ಯ ಮುನಿಗಳ ಪುಣ್ಯಫಲಗಳೆಂತೊ
ಋಕ್ಷುಗಣರ ಕರ್ಮ ಕಷ್ಟವೆ ಒದಗಿತು
ಈ ಕ್ಷೋಣಿತಳದಲ್ಲಿ ವಾಸುದೇವವಿಠಲನ
ಕಕ್ಷವ ವೊಹಿಸಿ ಪುಟ್ಟಿದ್ಯೊ ಜಯರಾಯ ೫

ಆತ್ಮಶೋಧನೆ

೬೫

ಅನಂತಾನಂತ ಪಾಪ ಮಾಡುವೆ ನಾನು ಪ

ಅನಂತದಯಾನಿಧೆ ನೀನೊ ಹಯವದನ ಅ.ಪ

ಮೇರು ಮಂದರಾದಿಗಳು ದಾರು ಎನ್ನ ಪಾತಕಕ್ಕೆ
ಸರಿಗಾಣಿಸೆನೆಂದರೆ ಪಾಪ ಕ್ಷೋಣಿ ಪರಿಮಾಣುಗಳಿಗೆ ೧

ಪೇಳು ಪಾಪವೆಂದಲೆನಲು ಪೇಳಲಿಕ್ಕೆ ಬಲುಲಜ್ಜೆ
ಗಳು ಅಂಡಲಿವುತಿದೆ ತಿಳಿದಾತ ನೀನಲ್ಲವೆ ೨

ಎನಗೊಂದು ಉಪಾಯವ ಅನಾಯಾಸ ಮಾಡುವಂಥ
ನಿನ್ನ ನಾಮಸುಧೆಯನ್ನು ಎನಗೀಯೊ ಮುದದಿಂದ ೩

ಏಸು ಕಾಲ ಸ್ವಾಮಿ ನೀನು ದಾಸನು ಆಸು ಕಾಲದವನು
ವಾಸುದೇವವಿಠಲನೆ ನೀ ಸಡಲ ಬಿಡುವರೇನೊ ೪

೬೬

ಅಪರಾಧ ಎನ್ನದಯ್ಯ ಅಪರಿಮಿತವೆ ಸರಿ ಪ

ಕೃಪಣ ವತ್ಸಲ ಕೃಷ್ಣ ಕೃಪೆಯ ಮಾಡುವದಿಲ್ಲವೆ ಅ.ಪ

ಹುಡುಗರು ಮಾಡುವ ತಪ್ಪಿಗೆ ಜನನಿ ತಾ
ಬಿಡುವಳೇ ಅದರಿಂದ ದಯವ ಮಾಡದಲೆ
ನಡೆವ ಕುದರಿ ತಾನು ಮಲಗಿದಡೆ ಇನ್ನು
ಕಡೆಗೆ ಕಟ್ಟುವರೇನೊ ತಿರಗಿ ನೋಡದಲೆ ೧

ಮಾಡುಯೆಂದದರನು ಬಿಟ್ಟರೆ ಅಪರಾಧ
ಬ್ಯಾಡವೆಂದರಾನು ಮಾಡುವುದಪರಾಧ
ಈಡಿಲ್ಲ ನಿನ್ನ ದಯೆಯೆತೆಂದು ನಾ ನಿಂದು
ಮಾಡುವೆ ಬಿನ್ನಪ ನಾಚಿಕಿಲ್ಲದೆಲೆ ೨

ಬೇಡಿಕೊಂಬೆನೊ ವಾಸುದೇವವಿಠಲ ನೀನು
ನೋಡದಿದ್ದರೆ ಭಕ್ತ ಜನರು ತಮ್ಮಾ
ಬೀಡು ಸೇರಲೀಸರೊ ಕೇಡೇನೊ ಇದಕಿಂತ
ನೋಡು ನೀ ಇದರಿಂದ ಕೃಪಣ ವತ್ಸಲ ಕೃಷ್ಣ ೩

೬೭

ಸುಳಾದಿ

ರಾಗ ಭೈರವಿ ಧ್ರುವ ತಾಳ

ಆರಿಗೆ ಉಸರಲಿ ಆರಿಗೆ ಮೊರೆ ಇಡಲಿ
ಆರೆನ್ನ ಮನದಳಲು ನಿವಾರಿಸುವರ ಕಾಣೆ
ಮೇರೆ ಇಲ್ಲದೆ ಪೋದ ವಿಷಯ ಶಳವುತಿದೆ
ಭಾರೊಮ್ಮೆ ಮುಂದಣಾಶಾ ತೋರಿ ಎಳವುತಿದೆ
ತೋರಿ ನೀ ತೋರಿಸು ತೋರದೆ ಪೋದರೆ ಎನ್ನ ಎದೆ ಮನ
ಹಾರಿ ಬೀಳುತಲಿದೆ ಗತಿ ಏನೊ ಎಲೊ ಕೃಷ್ಣ
ಸಾರಿ ಸಾರಿಗೆ ಇದನೆ ಬೇಡುವೆನೇ ಅನ್ಯನ್ನ
ದಾರಿ ತಪ್ಪಿಸಿ ನಿನ್ನ ದಾರಿಯ ಪಿಡಿಸೆನ್ನ
ಕಾರುಣಿಕ ರಂಗ ಮೊರೆಯೊಕ್ಕ ಭಕತನ್ನ
ಮಾರಿಗೆ ಒಪ್ಪಿಸದೆ ಸಾರೆ ಗರಿಯೊ ದೇವ
ವಾರಿಜಾಕ್ಷ ವಾಸುದೇವವಿಠಲರೇಯ
ದೂರ ನೋಡದೆ ದಯವಾರಿಧೆ ಪೊರೆಯೆನ್ನ ಪೊರೆಯೊ ೧

ಮಟ್ಟತಾಳ

ಧನದಲ್ಲಿ ಬಡತನ ಸಹಿಸಲಿ ಬಹುದ್ಧೈಯ್ಯಾ
ಜನಪತಿ ಕೋಪವ ತಡೆಯಲಿ ಬಹುದ್ಧೈಯ್ಯಾ
ವನಿತೆಯರ ಕಟಾಕ್ಷವ ಕ್ಷಮಿಸಲಿ ಬಹುದಯ್ಯಾ
ಮನೆಯೊಳು ಕಲಹವ ತಾವರಿಸ ಬಹುದಯ್ಯಾ
ಜನಗಳ ದೂರನ್ನ ಸೈರಿಸ ಬಹುದಯ್ಯಾ
ವನಜ ನಯನ ವಾಸುದೇವವಿಠಲ ನಿನ್ನ
ಮನದಲಿ ಯೋಚಿಸಿನ್ನು ಸಹಿಸಲಿ ವಶವಲ್ಲ ೨

ತ್ರಿವಿಡಿ ತಾಳ

ಏನು ಬಿಟ್ಟರಿ ಬಿಡೊ ಏನು ಕೊಟ್ಟರೆ ಕೊಡೊ
ಆನೇ ನಂಬುವುದಿಲ್ಲ ಮನದೊಳು ಇನಿತನ್ನ
ನೀನೇವೆ ಕೇಳ್ ಕಾಂತಾ ಮನಸಿನ ಬಯಕಿದೆ
ಮಾನದೊಡೆಯ ವಾಸುದೇವವಿಠಲರೇಯ
ದೀನ ವತ್ಸಲದೇವ ಮುನಿಸಿನ್ನು ಬಿಡೊ ಕೃಷ್ಣ ೩

ಅಟ್ಟತಾಳ

ಒಲಿಸಿ ವನಿತೆ ಎನ್ನ ತಿಳಿಸಿ ಸೌಖ್ಯಗಳೆಲ್ಲ
ಛಲಿಸಿ ಅವಳ ಕೂಡ ಒಳಿತಲ್ಲ ಮುನಿಸೀಗ
ಬಲುದೋಷ ಇದರಿಂದ ತಿಳಿದಾತ ನೀನಲ್ಲೆ
ಸುಳಿಯೊ ವಾಸುದೇವವಿಟ್ಠಲ ದಯಾನಿಧೆ ೪

ಆದಿತಾಳ

ಮುನಿಗಳು ಬಹು ವ್ಯಾಪ್ತಿ ನಿನಗೆ ಪೇಳುವದೆಲ್ಲ
ಎನಗೊಂದಾದರು ಅದು ಮನಕೆ ಬಾಹುದಲ್ಲೊ
ಘನ್ನ ವ್ಯಾಪ್ತಿಯು ನಿನಗಿದೆ ಅಣುವಾದ ಎನ್ನ
ಮನವನು ಪೋಗದೆಲಿಪ್ಪದಿನೆ ಲೇಶ ನಿನಗಿದೆ
ಬಿನುಗು ವಿಷಯಗಳು ದಣಿಸೊವೆ ಅದರನ್ನ
ಘನ ಮಹಿಮನೆ ವಾಸುದೇವವಿಠಲರೇಯಾ
ಅನುಭವ ಕೊಡು ಕಂಡ್ಯಾ ದನುಜಮರ್ದನ ಕೃಷ್ಣ ೫

ಜತೆ

ಭಕತರ ದೂರಿಗಂಜ್ವ ವಾಸುದೇವವಿಟ್ಠಲ
ಶಕತಾಳೆ ಮಿಗಿಲಾಗಿ ಬಿನ್ನೈಸುವದಕೆ ೬

೬೮

ಇದನೆ ಬೇಡುವೆನಯ್ಯ ಒದಗಿ ಪಾಲಿಸೊ ಜೀಯ
ಬದಲು ನಾನೊಲ್ಲೆನೊ ವಿದಿತ ವೇದ್ಯ ಪ

ಕ್ಷಣ ನಿನ್ನ ಬಿಡಲಾರೆ ನಿನ್ನವರನು ಬಿಡೆ
ಕುಣಿ ಕುಣಿವೆನು ನಿನ್ನ ಜನರೆಂದರೆ
ಗುಣತ್ರಯ ವಾರಣ ನಿನ್ನ ವಾರುತಿಯಿರೆ
ಒಣ ಹರಟೆಗಳ ನಾ ಕೇಳಲೊಲ್ಲೆ ೧

ನೀಚ ಜನರಂಗಳ ಸಂಗವ ಕೊಡದಿರು
ವಾಚದಿಗನ್ಯರಿಗಾಲ್ಪರಿಸಬೇಡ
ಸೂಚಿಸು ನಿನ್ನಯ ಗುಣಗಣಂಗಳೆನೆ ನಾ
ಯಾಚಿಪೆ ಇದನೆ ಇದನೆ ಮುರಾರೆ ೨

ಶ್ರೀಶ ನಿನ್ನಯ ಕಥೆ ಕೇಳದೆ ಬಹಳಾಯು
ಕಾಸು ಬಾಳದು ಕೇಳು ಕರುಣಾಬ್ಧಿಯೆ
ತಾಸು ಒಂದಾದರು ಅವನೆ ಸುಜೀವಿಯೊ
ವಾಸುದೇವವಿಠಲ ನಿನ್ನವರವನೊ ೩

೬೯

ಉಗಾಭೋಗ

ಎಂದಿಗೆ ಕಾಂಬೆ ನಾ ಬೆಳಗು ಮುಂದಿನ್ನು
ಸಂದಿಸಿದೆ ಕಾಳುಗತ್ತಲೆ ಸುತ್ತಲು

ಮಂದಿ ಸಂಗತಿಯು ಈ ಮಾರ್ಗದಲಿ ದೊರಿಲಿಲ್ಲ
ಒಂದು ಗ್ರಾಮಕೆವೈದು ಸೇರಿಸದೊ
ದಂದಶೂಕಾದಿ ಭೀಷಣ ಜಂತುಗಳ ಭಯದಿಂದಲೂ ದಣಿದೆ
ಮುಂದೇನು ಗತಿಯೊ ಹಿಂದೆ ಕಾಯಿದ ಕೃಷ್ಣ
ಇಂದಿಗೂ ಒದಗಲ್ಯಾಕೆ ಬಂದೆನ್ನನೊಂದು ಓ ಎನ್ನಲಿ ವಲ್ಲಿ
ಮುಂದಿನ ಕೇಳಕೆ ದೇವ ಓಡ್ಯಾಕೆ ಬರವಲ್ಲಿ
ಪೊಂದಲ್ಲಿ ಕಾವ ನರಸಿಂಗನೆಲ್ಯೊ
ನಿಂದು ದಿಟ್ಟಿಸಿ ನೋಡೆ ಇಲ್ಲವೆ
ಅಂದವೇನಯ್ಯಾ ಇದು ನಿನ್ನ ಮನಕೆ
ತಂದೆ ವಾಸುದೇವವಿಠಲ ಕೈಪಿಡಿದು
ಮುಂದೆ ಸನ್ಮಾರ್ಗದಿ ನಡಿಸಿ ಕಾಯೊ

೭೦

ಸುಳಾದಿ

ರಾಗ ಭೈರವಿ ಧ್ರುವ ತಾಳ

ಎಂದಿಗೆ ದುರ್ವಿಷಯ ಹೇಯತಿ ಮತಿಯಿನ್ನು
ಇಂದಿರೇಶ ಎನಗೆ ಪುಟ್ಟುವದೊ
ಇಂದಿಗೂ ಪುಟ್ಟಲಿಲ್ಲ ಮುಂದೆನ್ನ ಗತಿಯೇನೊ ಮುಕುಂದನೆ
ಮಂದಿಗೆ ಮಾತುರ ಉಪದೇಶ ಮಾಡುವೆ
ಒಂದು ಬಾರಿ ನಿನ್ನ ಧ್ಯಾನ ಮಾಡೆ
ಸುಂದರಿಯರ ಕಂಡು ಕುಂದಿದೆ ಮನದಲ್ಲಿ
ಸಂದು ಸಿಕ್ಕಲು ಸಾಂಕೇತವನು ಮಾಡದೆ ಬಿಡೆ ಬಿಡೆ
ಮುಂದೆನ್ನ ಚರಿಯವನ್ನು ವೃಂದಾರಕರು ಕಂಡು
ಛಂದದಿ ಕೈ ಹೊಡದು ನಗುತಿಹರೊ
ಮಂದರಧರ ಗೋವಿಂದ ಎನ್ನಯ ಬುದ್ಧಿ
ಅಂದದಿಂದಲಿ ತಿದ್ದೊ ವಂದಿಸುವೆ

ಕಂದರ್ಪನಯ್ಯನೆ ನೀನು ನಗಲಿ ಬೇಡ
ಎಂದಿಗಾದರು ಗತಿಯಾಗದಿನ್ನು
ಮುಂದಕೆ ಬರಲಿ ಬಡವ ಇವನೆಂತೆಂದು
ತಂದೆ ಶ್ರೀ ವಾಸುದೇವವಿಟ್ಠಲ ದಯ ಮಾಡೊ ೧

ಮಟ್ಟತಾಳ

ತನ್ನ ಶಿಶುವಿನ್ನು ತಪ್ಪು ಹೆಜ್ಜೆಗಳಿಡೆ
ಜನರು ನಗುವರೊ ಕೈಗಳ ಹೊಡೆದು
ಜನನಿಯು ತಾ ಕಂಡು ಚಿನ್ನರು ಹೋ ಎಂದು
ಬಣ್ಣಿಸಿ ತನಯನ ಉಣ್ಣಿಸಿ ನಡಿಸುವಳೋ
ಘನ್ನ ವಾಸುದೇವವಿಟ್ಠಲರೇಯ
ಎನ್ನ ಮನದ ನಡತಿಯನು ನೀನೆ ತಿದ್ದಲಿ ಬೇಕು ೨

ತ್ರಿವಿಡಿತಾಳ

ಧಾನ್ಯಂಗಳು ಸಂಗ್ರಹಿಸುವ ಜನರೆಲ್ಲ
ಚನ್ನಾಗಿ ಬಿಡುವರೊ ಜೊಳ್ಳು ಮಾತ್ರ
ಸಣ್ಣವು ಇವುಯೆಂದು ಧಾನ್ಯವು ಬಿಡುವುದೆ
ಚಿನ್ನಿವಾರನು ತನ್ನ ಬಳಿಗೆ ಬಂದ
ಹೊನ್ನುಗಳೊಳಗೆ ಹಿತ್ತಾಳೆ ಬಿಡುವನು
ಬಣ್ಣದ ಕಡಿಮೆ ಹೊನ್ನುಗಳ ತಾ ಬಿಡುವನೆ
ಇನ್ನಿದು ನೀ ತಿಳಿದು ಶ್ರೀದೇವಾ ನೀ
ಎನ್ನನು ಪ್ರಲ್ಹಾದಾದಿಕ ಭಕ್ತ ಜೀವರೊಳಗೆ
ಎನ್ನ ಗಣನೆ ಮಾಡಿ ತಕ್ಕದಾದರು ಸಾ
ಧನ ಮಾಡಿಸಬೇಕು ಬಿಡಸಲ್ಲದೊ
ಸನ್ನ್ಯಾಯ ಮೂರುತಿ ವಾಸುದೇವವಿಠಲ
ನಿನ್ನವನಿವನೆಂದು ಎನ್ನ ಸಲಹೊ ೩

ಅಟ್ಟತಾಳ

ತರಳನ್ನ ಬಿನ್ನಪ ಮನಕೆ ತರಲಿ ಬೇಕು
ಶರಣೆಂದ ಜನರನ್ನ ಪೊರೆವಿಯೊ ನಿಶ್ಚಯ
ಪರಿಚಾರಕ ಜನರವರಿಗೆ ಬೇಕು
ಸುರರೊಡಿಯನೆ ದೇವ ನೀನು ಎನಗೆ ಈ ಪರಿ ಇನ್ನು
ಥರವಲ್ಲದಿದ್ದರೆ ಅವರವರ ಪಾದ
ಚರಣ ಸೇವಕ ಪಾದದಲ್ಲ್ಯಾದರು ಎನ್ನ
ಸ್ಥಿರ ಮಾಡೊ ಶ್ರೀ ವಾಸುದೇವವಿಠಲರೇಯ ೪

ಆದಿತಾಳ

ತನುವಿನ ಮನಸಿನ ಒಡೆಯನು ನೀನೆಂದು
ಮನಸಿಗೆ ಬಂದಂತೆ ವಚನಗಳಾಡುವೆ
ಮುನಿಸು ಮಾಡದೆ ನೀ ಕ್ಷಮೆ ಮಾಡಲಿ ಬೇಕು
ಕನಸಿನಲಿ ಮನಸಿನಲಿ ತನುವಿನಲಿ ನಾ ಅನ್ಯ –
ಜನರ ಸಂಗತಿ ಒಲ್ಲೆ ವಾಸುದೇವವಿಟ್ಠಲ ೫

ಜತೆ

ದುರ್ವಿಷಯ ಬಿಡಿಸಿನ್ನು ವಾಸುದೇವವಿಟ್ಠಲ
ಸರ್ವಬಗೆಯಲಿ ಪೊರೆಯೊ ನಿನ್ನವನು ನಾನು ೬

೭೧

ಎನ್ನನುದ್ಧರಿಸಲು ಘನ್ನ ಬಿರುದುಗಳು ಪ

ಇನ್ನು ಉನ್ನತವಾಹವು ಕೇಳೊ ಹರಿಯೆ ಅ.ಪ

ಅನವರತದಿ ದುರ್ವಿಷಯ ಲಂಪಟದೊಳು
ಚನ್ನಾಗಿ ಪತಿತ ಎನ್ನಂತಜಾಮಿಳನೆ
ಇನ್ನಿದು ತಿಳಿದು ನೀ ಎನ್ನ ಪೂತನ ಮಾಡೆ
ನಿನ್ನನಿಮಿತ್ತ ಬಂಧುತನವೆ ವೆಗ್ಗಳವೊ ೧

ಮನ್ನಿಸಿದವನಲ್ಲ ಪೂಜಿಸಲಿಲ್ಲ
ತನ್ನ ಸಂಬಂಧಿಯು ಮೊದಲಿಗನಲ್ಲ
ಎನ್ನಂತೆ ಗಜೇಂದ್ರನೆ ಎನ್ನನುದ್ಧರಿಸಲು
ನಿನ್ನ ಪತಿತಪಾವನತೆ ಘನ್ನವೊ ೨

ಏಸಪರಾಧ ಮಾಡಿದ ಚೈದ್ಯಾದಿಗಳು
ಈಸಪರಾಧ ರಾಶಿಗಳ ಮಾಡಿದರೆ
ವಾಸುದೇವವಿಠಲ ಎನ್ನ ರಕ್ಷಿಸಲು
ಸೂಸುವುದೋ ನಿನ್ನ ಭಕುತ ವಾತ್ಸಲ್ಯತನವೊ ೩

೭೨

ಎನ್ನಾಗಮವ ಹೀಗಾಯಿತೊ ದೇವ
ಇನ್ನು ನೀ ಎನ್ನನು ಸಲಹುವ ಬಗೆಯಂತೊ ಪ

ಸಕ್ಕರಿ ತಾಯೆಂದು ಸಂತಿಗೆ ಕಳುಹಲು
ತಕ್ಕಡಿ ಲಶುನವ ತಂದ ತರಳನಂತೆ ೧

ಪರಮ ನಿರ್ಮಲವಾದ ತುಲಸಿ ತಾಯೆನೆ ದುಷ್ಟ
ತುರುಚಿಯನೆ ತಂದ ತರಳನಂತೆ ೨

ಮಸಿಯು ಒರೆಸಿಕೊಂಡು ಬಾಯೆನ್ನೆ ಶಿಶು ತಾನೆ
ಕೆಸರು ಪೂಸಿಕೊಂಡು ಬಂದ ತರಳನಂತೆ ೩

ಕಳುಹಿದಾ ಪಿರಿಯರು ಹಳಿಯಲಿ ಚಿಂತಿಲ್ಲ
ಗೆಳೆಯಾರು ನಗುವ ಚಿಂತೆಯೆ ಘನವೆಲೊ ದೇವ ೪

ಆಪುತ ಪ್ರಿಯ ಬಂಧು ವ್ಯಾಪಕ ನೀನೆಂದು
ಜ್ಞಾಪಕಗೊಳಿಸಿದೆ ವಾಸುದೇವವಿಠಲ ೫

೭೩

ಏನು ಗತಿ ಎನಗಿನ್ನು ಏನು ಗತಿಯೋ ನೀನು
ಅನುಕೂಲವಾಹದನಕ ಸಿರಿ ಕೃಷ್ಣ ಪ

ಕರಣಗಳು ಕಾಯ ಮೊದಲಾದ ಬದುಕುಗಳೆಲ್ಲ
ಸ್ಥಿರತರಗಳಲ್ಲೆಂದು ತೋರಿಸಲು
ಪರಮ ಭಕುತಿಯು ಪುಟ್ಟ ಮೊದಲೆ ನಾ ನಿನ್ನ ಪದ
ಮರೆದು ಬಿಡುವೆನು ತಡಿಯದೇ ಕರುಣಿ ೧

ಹೀಗೆ ತೋರದೆ ಪೋದರೆ ಎನಗೆ ಹಂಬಲವು
ಆಗುವುದು ಸತ್ಯಲೋಕಗಳ ತನಕ
ಭೋಗಗಳು ಕೊಟ್ಟರೆ ಮರೆವೆ ಅದರಿಂದ ನಾ
ಕೂಗುವೆನು ಕೊಡದಿದ್ದರೆ ೨

ಪಾಮರನ ಮಾಡಲೆನ್ನನು ತಿಳಿಯದಲೇವೆ
ಸೀಮೆ ಇಲ್ಲದ ಪಾಪ ಮಾಡುವೆನೊ
ಪ್ರೇಮದಲಿ ಪಾಂಡಿತ್ಯ ನೀಡಿದರೆ ಭಕುತ ಜನ
ಸ್ತೋಮ ನಿಂದಿಸುವೆನಯ್ಯಾ ೩

ಧನದಿಂದ ಹೀನನ್ನ ಮಾಡೆ ಲೋಕದಲಿನ್ನು
ಜನರು ಕೊಡುವುದು ಎಲ್ಲ ಎನಗೆ ಕೊಡಲೆಂಬೆ
ಧನವು ನೀ ಕೊಡಲು ಬಲು ಮದದಿಂದ ಕೆಟ್ಟು ಸ-
ಜ್ಜನಕೆ ಕಾಸೊಂದು ಕೊಡಿನೊ ೪

ಏಸು ಪರಿಯಲಿ ಪೇಳಿದರು ಕೇಳೆನ್ನ ನಿಜ
ವಾಸನಿಯು ತನಗೆ ತಾನಿಟ್ಟಾಹದ್ಯೆ
ವಾಸುದೇವವಿಠಲ ನೀ ಎನ್ನಯ ಮನದಲ್ಲಿ
ವಾಸವನು ಮಾಡಿ ಬೋದ್ಯೆಸದನಕೆ ೫

೭೪

ಏನು ದಾಸ ನಾನು ಹರಿಯೆ ನೀನು ಮೆಚ್ಚುವೆಯೇನೊ ಪ

ಏನು ಮಾಡಿದರೇನು ನಿನ್ನಯ
ಋಣವರಿದೆನೇನೊ ಹರಿಯೆ ಅ.ಪ

ಲೋಕ ವಾರ್ತೆ ಎಲ್ಲ ಜರಿದು ಏಕ ಚಿತ್ತವಿಲ್ಲ
ಕಾಕು ಪೋಕರ ನೀಕರಿ ನಿನ್ನ ಸ್ವೀಕರಿಸಲಿಲ್ಲ ಬರಿದೆ ೧

ನಿನ್ನ ಮಹಿಮೆಯನ್ನು ಕೇಳಿ ನಿನ್ನ ರೂಪವಿನ್ನು ಮನದಣಿಯೆ ನೋ
ಡೆನ್ನ ಮರೆಯದೆನ್ನ ದಾಸ್ಯವಿನ್ನು ಬರಿದೆ ೨

ಭಾವ ತಿಳಿಯಲಿಲ್ಲ ಗುರುಗಳ ಸೇವೆ ಮಾಡಲಿಲ್ಲ
ಧಾವತಿಗೊಂಡೆ ಕೇವಲ ವಾಸುದೇವವಿಠಲ ಬರಿದೆ ೩

೭೫

ಸುಳಾದಿ

ರಾಗ ಭೈರವಿ ಧ್ರುವ ತಾಳ

ಒಲ್ಲೆ ವಿಷಯಗಳೆಂದವರಿಗೆ ಬಂ–
ದಲ್ಲದೆ ದ್ವಿಗುಣಿತ ವಿಷಯವೆಂಬ
ಫಲ್ಲಿಸುತಿಪ್ಪ ಅದರಲ್ಲಿ ನೀನೆವೆ
ಬಲ್ಲಿದನೆಂಬನುಭವಸಿದ್ಧ
ಒಳ್ಳಿತು ನಾವೊಂದು ಮಾಡುವೆ ಬಿನ್ನಪ

ಸಲ್ಲಿಸಬೇಕಲ್ಲದಿದ್ದರುಪೇಕ್ಷ
ಸಲ್ಲದೊ ಕೃಷ್ಣಯ್ಯಾ ವಿಷಯದೊಳಿದ್ದದ್ದು
ಸಿಲುಕದ ಜನರು ಇಪ್ಪರಂತೆ
ವಲ್ಲಭ ನೀನಿದು ತೋರಿಸೊ ಎನ್ನಲಿ
ಇಲ್ಲದಿದ್ದರೆ ಮಹಾ ಶಕುತಿ ಏನೊ
ಮಿಳ್ಳಿತಯೇ ನೀನಾಗಿ ವಾಸುದೇವವಿಟ್ಠಲ
ಒಲ್ಲಿಯೊ ವಿಷಯದ ಸಾರಭೋಕ್ತ ೧

ಮಟ್ಟತಾಳ

ಬಡತನ ಹಿಂಗದಿರೆ ದೊರೆಗಳು ತಾವಾಗಿ
ಪಿಡಿದು ಅವಗೆ ಮೇಟಿ ಪೊಲಗಳು ಕಟ್ಟೀಗ
ತಡಿಯದೆ ಬೇಕಾದ ಸಕಲ ಸಾಧನ ನೀಡಿ
ನಡಸುತ ಬರುವಂಥ ದೊರೆಗಳ ಅಭಿಮಾನ
ಪೊಡವಿಗೆ ಪತಿ ವಾಸುದೇವವಿಟ್ಠಲ ನೀನೆ
ಒಡೆಯ ಎನ್ನ ಭಾರ ನಿನಗಲ್ಲದೆನಗೇನೊ ೨

ತ್ರಿವಿಡಿತಾಳ

ನೀನೆ ಗುಣಾಕರನೊ ನಿಖಿಳ ಲೋಕದಲ್ಲಿ
ಆನೆ ಅನೇಕಾನೇಕ ದೋಷಾಕರನೊ
ನೀನೆ ಪರಮ ಶಕುತಿ ಉಳ್ಳಮರನಿಕರದೊಳು
ಆನೇವೆ ದುರ್ಬಲರೊಳು ಮೊದಲೀಗ
ನೀನೆ ಸ್ವಾತಂತ್ರ ತ್ರಿವಿಧ ಸತ್ವಗಳಲ್ಲಿ
ಆನೆ ಪರಾಧೀನ ಅಖಿಳರೊಳಗೆ
ನೀನೆವೆ ಭಾಗ್ಯದೇವತೆಯ ವಲ್ಲಭನೊ

ಆನೇವೆ ಕೃಪಣರೊಳು ಕೃಪಣನಯ್ಯ
ಏನೆಂಬೆ ಹೀಗಿರಲು ಎನ್ನಯ ಬಿನ್ನಪ
ನೀನೇಕ ಚಿತ್ತದಿ ಕೇಳುವುದು
ಆನೆವೇ ನಿನಗೆ ಮರುಳಾದನೇನಯ್ಯ
ಶ್ರೀನಾಥ ನಿನ್ನ ಪ್ರೇರಣೆಯಲ್ಲದೆ
ಅನಾಥ ಬಂಧು ವಾಸುದೇವವಿಟ್ಠಲರೇಯಾ
ನೀನಾದರದಿ ಕೇಳೊ ದುರಿತ ಕೀಳೊ ೩

ಅಟ್ಟತಾಳ

ಕರ್ದಮ ಸೌಭರಿ ಕಶ್ಯಪ ಮೊದಲಾದ
ದುರ್ದಮ ಮುನಿಗಳು ನಿನಗೆ ಮಾಡಿದುದೇನೊ
ನಿರ್ದಯ ಎನ್ನಲ್ಲಿ ಮಾಡುವರೆ ದೋಷ
ಮರ್ದನ ಶ್ರೀ ವಾಸುದೇವವಿಟ್ಠಲರೇಯ ೪

ಆದಿತಾಳ

ಬಲು ವಿಧ ಸಾಧನ ಜಗದೊಳು ನೀ ಬಲ್ಲಿ
ಫಲವ್ಯಾತಕೊ ಬಡವಗೆ ಇದರಲ್ಲಿ
ತಿಳಿದ ಸಾಧನವಿತ್ತು ವಾಸುದೇವವಿಟ್ಠಲ
ಫಲವಾಗುವಂತೆ ನಿನ್ನ ಭಕುತಿಯ ನೀಡೊ ೫

ಜತೆ

ಸಾಧನದೊಳಗಿದ್ದು ವಾಸುದೇವವಿಟ್ಠಲಾ–
ರಾಧನೆ ಮಾಡಿಸೊ ಸಾಧ್ಯ ನೀನಾಗಿ ೬

೭೬

ಕಾಯೊ ಕಾಯೊ ಕಾಮಿತ ಫಲದ ಕಾಯೊ ಕಾಯೊ ಪ

ಕಾಯೊ ಕಾಯೊ ಎನ್ನ ಕಾಯಜನಯ್ಯನೆ
ಕಾಯದಿದ್ದರೆನ್ನ ಕಾವವರಾರೊ ಅ.ಪ

ಎಂದೆಂದಿನ ಕರ್ಮಗಳನೆಣಿಸುತಲಿ
ಕಂದಿಸಿ ಕುಂದಿಸಿ ಬಂಧಿಪರೇನೋ ೧

ತಾಳಲಾರೆ ಈ ಕಾಲನ ಬಾಧೆಯು
ಬೇಳುವೆ ನಿನ್ನಯ ಕಾಲಿಗೆ ಸ್ವಾಮಿ ೨

ಆಲಸ ಮಾಡದೆ ಆರ್ತಿಗಳೋಡಿಸಿ
ಪಾಲಿಪುದೆನ್ನನು ಪಾವನ ಮೂರ್ತೆ ೩
ಮಾಡಿದ ಪಾಪಗಳೋಡಿಸಿ ಸುಖದಿಂ
ದಾಡಿಸು ಕಣ್ಣಿಗೆ ಕಾಣಿಸಿಕೊಂಡು ೪

ವಾಸುದೇವವಿಟ್ಠಲ ನೀ ಎನಗಿನ್ನು
ವಾಸಿ ಮಾಡಿಸಿ ಕೀರ್ತಿಯ ಪಡೆಯೊ ೫

೭೭

ದೇವ ನೀನುಪಕಾರ ಅಪಾರ ಮಾಡಿದೆ
ಕಾವ ಕರುಣಾ ಸ್ವಭಾವ ಕೇಳು ಪೇಳುವೆ ಪ

ನವಯುವತಿ ಶಿಲೆ ಕೊರಳಿಗೆ ಕಟ್ಟಿಕೊಂಡು
ಭವ ಸಾಗರದೊಳು ಮುಳುಗಿ ಪೋಗುವ ನಾ
ಅವಸರಕೊದಗಿ ಪಿಡಿದು ದಡ ಸೇರಿಸಿ
ದವನಾಗಿ ಎಚ್ಚರಿಕೆ ತಂದಿತ್ತೆ ದಯಾಳೊ ೧

ಭಾರ ತಾಳದು ಎಂದು ಸೂತ್ರವೂ ಶಿಖಿಯೊ ನಿ
ವಾರಿಸಿ ತನುವಿಗೆ ಲಘುವು ಮಾಡಿದೇಯೆ
ಭಾರಮಯತಾ ರಜ್ಜು ಮನಕೆ ಸುತ್ತಿದೆ ಆಶಾಂ–
ಕುರ ಕೇಶಗಳು ಬೆಳದಿವೆ ಪರಿಹರಿಸು ೨

ಲಕ್ಷ್ಯವಿಲ್ಲದೆ ಅನ್ನ ಮೊದಲಾಗಿ ಕೊಡುವಂಗೆ
ಶಿಕ್ಷಿಸಿ ಗರ್ವವು ಕಳೆದು ಈಗ
ಭಿಕ್ಷುಕನ ಮಾಡಿದೆ ನಿನ್ನದೆ ಬೇಡುವೆ
ಲಕ್ಷ್ಮೀಪತಿಯೆ ಅಂತರಂಗದ ಗೃಹಸ್ಥ ೩

ಏಳು ಮನೆಗಳನ್ನು ಕೇಳೋದು ಯತಿಧರ್ಮ
ಏಳಲಾರಿನೊ ವೃದ್ಧ ಕೇಳಲಾರೆ
ಕೇಳುವೆ ನಿನ್ನನೇ ಏಳು ಭಿಕ್ಷವ ನೀಡು
ಬಾಳುವೆ ಬಹುಕಾಲ ನಿನ್ನ ಕೊಂಡಾಡುತ ೪

ಶ್ರೋತ್ರಕ್ಕೆ ನಿನ್ನ ಕಥೆ ನಾಸಕೆ ನಿನ್ನ ಗಂಧ
ನೇತ್ರಕ್ಕೆ ನಿನ್ನ ರೂಪ ರಸನಿಗೆ ನಾಮಾಮೃತ
ಗಾತ್ರಕ್ಕೆ ನಿನ್ನ ಪಾದಸ್ಪರುಷ ಮನೋಬುದ್ಧಿ
ಮಾತ್ರಕ್ಕೆ ಗುಣಕರ್ಮ ಕೊಡು ವಾಸುದೇವವಿಠಲ ೫

೭೮

ನ್ಯಾಯವೇನೈ ಇದು ಮೂಢ
ಜಯ ಬೇಡುವೆ ಗಾಢ ಪ

ಜನರನೆರಹಿಕೊಂಡು ಕಪಟ
ವಿನಯಗಳನೆ ತೋರುತಲಿ
ವನಜನಾಭನ ಗುಣಗಳ ಹೇಳಿ
ಧನವ ತರುವುದಿದು ಮೂಢ ೧

ಪರಮಪದನರುಹಿದ
ಗುರು ಸಮೀರ ಶಾಸ್ತ್ರವನು
ಪರಧನ ಬಯಸಿ ಅವರಿ
ಗರುಹಿಸುವುದಿದು ಮೂಢ ೨
ಈಶನುತನಾದ ನಮ್ಮ
ವಾಸುದೇವವಿಠ್ಠಲನ
ದಾಸರ ದಾಸ್ಯವ ಬಿಟ್ಟು ನರರ
ದಾಸನೆನಿಸೋದಿದು ಮೂಢ ೩

೭೯

ಪಕ್ಷಿವಾಹನ ದಯಸಿಂದು ನೀ ಎನ್ನ
ಚಿಕ್ಕ ಮನತುರಗವನ್ನು ನೀನೆ ತಿದ್ದೊ ಪ

ಕತ್ತಲೆಯೊಳು ಬಲು ಕಾಲಕಳದೆಯಾಗಿ
ಮತ್ತೆ ಬೆಳಕು ಕಂಡು ಬೆದರುತಿದೆ
ಕತ್ತಲಂಜಿಕೆ ತೋರಿ ಬೆಳಕಿನ ರುಚಿಯನು
ಇತ್ತು ಕುಶಲಗತಿ ಕಲಿಸಯ್ಯ ೧

ಹಿಂದಕ್ಕೆ ತಿರಗದೆ ತಾನಾಗಿ ಬ್ಯಾಗನೆ
ಮುಂದಕೆ ನಡೆದು ಪರರ ಬೆಳಸುಗಳ
ಒಂದನ್ನ ಬಯಸದೆ ಪದ್ಧತಿ ಬಿಡದಂತೆ
ಒಂದಾಗಿ ಗಮ್ಯಸ್ಥಾನವ ಸೇರಿಸಯ್ಯ ೨

ವಿಧಿನಿಷೇಧಗಳೆಂಬ ಗಿಲಕಿಯ ದನಿಗೈಸಿ
ಹೆದರಿಸೊ ಸನ್ಯಾಯ ಕಶದಿಂದಲೀ
ಮುದದಿ ಭಕುತಿ ಗುಣವ ಕೊರಳು ಕಟ್ಟಿ ಬಿಗಿದು
ಪದುಮಾಕ್ಷ ನಿನ್ನ ಪಾದವ ಸ್ತುತಿಸಯ್ಯ ೩

ಉತ್ತಮ ಗುಣವುಳ್ಳ ವಾಜಿಯಿದನೆ ಮಾಡಿ
ವಸ್ತು ಎನ್ನದು ಮಾತ್ರವೆಂದೆನಿಸಿ
ಚಿತ್ತಕೆ ಬಂದಂತೆ ಇದಿರಾರು ನೀ ನಿತ್ಯ
ಹತ್ತಿ ಹರಿಸುವನು ಸನ್ಮತವೆನಗೆ ೪

ಲೇಸಾದಾ ಹಯಗಳೊಳು ನೀನೆವೆ ಜಗದೊಳು
ಲೇಸು ಮಾಡಿದೆಯೆಂಬ ವಾರ್ತೆ ಕೇಳಿ
ವಾಸುದೇವವಿಠಲ ನಿನಗೆ ಬಿನ್ನೈಸಿದೆ
ದಾಸನ ಮಾತು ಲಾಲಿಸೆ ಕಾಯೋ ಸರ್ವೇಶ ೫

೮೦

ಸುಳಾದಿ

ರಾಗ : ಸಾರಂಗ

ಧ್ರುವತಾಳ

ಬಾರದ ಮೊದಲಿನ್ನು ವಿಷಯ ಬಾರದ ಚಿಂತೆ
ಭರದಿಂದ ಮರೆದೆನೊ ಹರಿಯೆ ನಿನ್ನ
ಬೆರೆದೆ ವಿಷಯದ ಕಾಲದಲ್ಲಿ ಸಂಭೋಗ ಪರನಾಗಿ
ಮರದೆನೊ ಹರಿಯೆ ನಾ ನಿನ್ನ ಜರಿಯು ಆದ ಬಳಿಕ
ನಿರುತ ಅದರ ಶೋಕಾತುರನಾಗಿ ಮರೆದೆನೊ ಹರಿಯೆ ನಿನ್ನ
ಮೂರು ಸಮಯದಲ್ಲಿ ಹೀಗೆನ್ನ ಮರಿಸಲು
ಆರು ತೋರಿಸಬೇಕು ಖರೆ ಸ್ಮೃತಿ ಸಮಯ
ತರಳನ್ನ ಆಲಾಪ ಮನಕೆ ತಂದೀಗಲು
ಕರುಣಿಸೊ ವಾಸುದೇವ ವಿಠ್ಠಲಸ್ವಾಮಿ ೧

ಮಟ್ಟತಾಳ

ಸ್ಮೃತಿಯಿಲ್ಲ ಸ್ಮೃತಿಯಿಲ್ಲ ಇನಿತೆಂಬ
ಸ್ಮೃತಿಮಾತ್ರ ಮತಿಯಲ್ಲಿ ನಟ್ಟಿದೆ ಇದಲ್ಲದಿನ್ನೊಂದು
ಗತಿಯಿಲ್ಲದೆನಗಿನ್ನು ಇದನೆ ಸಾಧನ ಮಾಡಿ
ಪತಿ ವಸುದೇವವಿಟ್ಠಲ ಸ್ಮೃತಿ ಕೊಡು ಎನಗೀಗ ೨

ತ್ರಿವಿಡಿತಾಳ

ಹನಿ ಲಾಭಗಳಿಗೆ ಚಪಲ ಚಿತ್ತನಾಗಿ
ಆನು ಮತ್ತವುಗಳ ಕಾರಣ ತಿಳಿವೆ

ನೀ ನಿದಾನ ನಿಖಿಳಕೆ ಎಂದು ಮರದಿನೊ
ಏನೊ ಮೋಹನ ಶಕುತಿ ನಿನಗೆ ಎನ್ನಲ್ಲಿ
ಆನು ಬೇಡಿಕೊಂಬೆ ಎಂದಿಗಾದರು ಇಂಥ
ಹೀನ ವಿಸ್ಮೃತಿ ಒಲ್ಲೆ ವಾಸುದೇವವಿಟ್ಠಲ ೩

ಅಟ್ಟತಾಳ

ಮರಹುವ ವೈರಾಗ್ಯ ಮರಹುವ ಸೌಭಾಗ್ಯ
ಮರಹುವ ಭೋಗ ಮರಹುವ ತ್ಯಾಗ
ಪರಿಪರಿ ಇತ್ತರು ಹರಿಯೆ ನಾನೊಲ್ಲೆ ನಿನ್ನ
ಚರಣದ ಸ್ಮೃತಿಯಿಂದ ಚಿರದ ಸಾಧನ ಕೊಡು
ಪರವಿಲ್ಲ ಎನಗಿನ್ನು ವಾಸುದೇವವಿಠಲ ೪

ಆದಿತಾಳ

ನೀ ಕೊಟ್ಟದ್ದದೆ ಲಾಭ ನೀನಿತ್ತದ್ದದೆ ಸೌಖ್ಯ
ನೀ ಮಾಡಿದದೆ ಶಿಕ್ಷ ನೀ ಕೂಡಿದದೆ ರಕ್ಷ
ನೀನೆ ಪರಗತಿ ನೀನೆ ಪರಮಾತ್ಮ
ನಿನಗಿಂದಾರಿಂದಾರೊ ವಾಸುದೇವವಿಠಲ ೫

ಜತೆ

ಆನೊಂದನರಿಯೆನು ದೀನರ ಪಾಲಕ
ನೀನೆಂದು ಮೊರೆಹೊಕ್ಕೆ ವಾಸುದೇವವಿಠಲ ೬

೮೧

ಬೋಧಕರಾರೊ ಲೋಕದೀ ದಾಸಗೆ
ಬಾಧಿಪ ದುರಿತಗಳ ದೂರ ಮಾಡಿ
ಮಾಧವ ನೀನೆ ದಯವು ಮಾಡಲಿ ಬೇಕೊ
ಸಾಧಕ ಸಾಧ್ಯನೊ ನೀನು ಸ್ವಾಮಿ ಪ

ಓದಲು ಮೊದಲಿಲ್ಲ ಕೇಳಿ ಶಾಸ್ತ್ರಗಳಿಲ್ಲ
ಮೋದಿಸುವ ಮಾತ್ರ ಭಕ್ತರ ಕಡು
ಮೋದತೀರ್ಥರ ಮತ ಇವನಿಗೆ ತಿಳುವಂತೆ
ನೀ ದಯವನು ಮಾಡಿ ಕರವ ಪಿಡಿಯೊ ೧

ಆಲಸಬಟ್ಟನು ಇವ ನಿನ್ನ ಪೂಜೆಗೆ ತಕ್ಕ
ಕೆಲಸವ ಮಾಡಲು ಮೊದಲರಿಯ
ಒಲಿಸಬೇಕೆಂದು ಮನದಿ ಹಂಬಲಿಸು
ಚಲಿಸದ ಮನ ಮಾತ್ರಕೆ ಕೊಡಲಿಬೇಕು ೨

ದಾಸರ ಸಾಧನದ ಭಾರ ನಿನ್ನದು ಸ್ವಾಮಿ
ಆಸರಾಗಲಿ ಬೇಕು ಒಬ್ಬರಿಗೆ
ದಾಸ ಮತ್ತೊಬ್ಬ ಎಂದು ನಿನ್ನಯ ಕ್ಲಪ್ತ
ವಾಸುದೇವವಿಠಲ ನೀನರಿಯದೇನೊ ೩

೮೨

ಯಾತವರ ನಾನಲ್ಲವೊ ಹರಿ ಬರಿದೆ
ಖ್ಯಾತಿಯನು ತಂದಿತ್ತಿಯ ಪ

ಮಾತುಗಳು ನಾಲುಕಾಡಿ ಸಭೆಯೊಳಗೆ
ಪ್ರೀತಿ ಬಡಿಸುವೆನೊ ನರರ
ರೀತಿಯಲಿ ಶ್ರುತಿ ಸ್ಮೃತಿಗಳ ಪಠಿಸಿ ಶ್ರೀ–
ನಾಥ ನಿನ್ನ ತೋಷಿಸಿದೆನೆ ೧

ಜಪಮಣಿಗಳನು ತಿರುಹಿಸಿ । ಲೋಕರನ
ಕಪಟಗೊಳಿಸುವೆನಲ್ಲದೆ
ತಪ ಮಾಡಿದೆನೆ ಮನದಲಿ । ನಿನ್ನಯ
ಕೃಪೆಯು ಉದಿಸುವ ತೆರದಲಿ ೨

ದಾಸ ವೇಷವ ಧರಿಸಿದೆ ಕನಕದಾ–
ವಾಸನೆಯಿಂದಲ್ಲದೆ
ವಾಸುದೇವವಿಠಲ ಶರಣ ತಾ
ಲೇಶವರಿಯೆನು ಕರುಣಿಸೊ ೩

೮೩

ಸುಳಾದಿ

ರಾಗ–ನಾಟಿ ಧ್ರುವ ತಾಳ

ಶ್ರೀ ನಾರಸಿಂಹ ದೇವ ನೀನೆ ಸಾರ ಹೃದಯ
ಕಾರಣ ಕಾರಣಕನಿಮಿತ್ಯ ಬಂಧೊ
ತೋರದೊ ಮುಂದಿನ ಮಾರಿ ಎನಗೆ ಇನ್ನು
ತೋರಿಸೊ ಪರಿಹಾರದುಪಾಯವ
ತೋರಿಪ ದೇವ ನೀ ಇನ್ನೊಂದು ಎನಗಿಲ್ಲ
ಕಾರುಣಿಕ ದೇವತೆ ನೀನೆ ಸ್ವಾಮಿ

ಮಾರಿಗೆ ಮಾರಿಗೂ ನಿನ್ನ ಹೊರತಿನ್ನಿಲ್ಲ
ಸಾರಿದೆ ನಿನ್ನಂಘ್ರಿ ದುರ್ಗಾ ದುರ್ಗಾ
ಶ್ರೀ ರಮಣನೆ ನಿನ್ನ ಚರಣಕ್ಕೆ ಎನ್ನಯ
ಕೊರಳ ಕಟ್ಟಿದೆನೊ ಬಿಡಸಲ್ಲದೊ
ತೋರಿದ ಮೇಲಿನ್ನು ವಾಸುದೇವವಿಠಲ
ಭಾರ ಕರ್ತೃವೆ ಎನ್ನ ಕೈಪಿಡಿಯೊ ೧

ಮಟ್ಟತಾಳ

ನಿನಗಾರೆದರಿಲ್ಲ ಎನಗನ್ಯ ಗತಿಯಿಲ್ಲ
ಮನವಂಜಿಸುತಿದೆ ಹರಕು ದುರಿತವೊ
ಮನದಲ್ಲಿ ತನುವಿಲಿ ನೀನೇವೆ ಚೆನ್ನಾಗಿ
ಘನ್ನ ಧೈರ್ಯವನೀಯೋ ವಾಸುದೇವವಿಠಲ ೨

ರೂಪಕತಾಳ

ಎನ್ನಪರಾಧಗಳಿಣಿಸೆನೆಂದರೆ ಅದರ
ಕೊನೆಯಿಲ್ಲ ಮೊದಲಿಲ್ಲ ಹುರುಳಿಲ್ಲವೊ
ಕ್ಷಣ ಕ್ಷಣಕ್ಕೊ_ಸ ಪರಿ ಮಾಡುವೆನಲ್ಲಿದೆ
ಅನುತಾಪ ಇನಿತಿನ್ನ ಬಡಬಲ್ಲಿನೆ
ನಾನು ನಿನ್ನಯ ಪಾದ ನೆನಿಯದೆ ಪೋದೆನೊ
ಮನುಜ ಪಶು ಎಂದು ಎನ್ನಲ್ಲಿ ದಯ ಮಾಡೊ
ಅನಿಮಿತ್ಯ ಬಂಧು ವಾಸುದೇವವಿಠಲರೇಯಾ ೩

ಝಂಪಿ ತಾಳ

ಎನ್ನಯ ಸಾಧನ ಕಾಲ ನಾ ಬಲ್ಲೆನೆ
ಉನ್ನತ ಫಲವು ತಿಳಿಯಲೀ ಬಲ್ಲೆನೆ
ಮುನ್ನೆ ಬಾಹುವ ಮಾರಿ ಹಾರ್‍ದೊಡಿಯ ಬಲ್ಲೆನೆ

ಪೂರ್ಣಮತ್ತ್ಯಾಗಮವ ಮತ್ತೊಮ್ಮೆ ಮತ್ತೊಮ್ಮೆ
ಚನ್ನಾಗಿ ಪೇಳುವೆನೆಂಬೊದೊಂದೂ
ಮನದಾಸೆಯು ವಾಸುದೇವವಿಠಲರೇಯ
ಬಿನ್ನಪವ ಲಾಲಿಸೊ ಕರುಣ ಸಿಂಧು ೨

ತ್ರಿವಿಡಿತಾಳ

ಎನ್ನಯ ಆಯುಷ್ಯ ಬೆಳಸಲಿ ಬಲ್ಲಿನೆ
ಉನ್ನತ ಸಾಧನ ಮಾಡುವೆನೆ
ಘನ್ನ ದಯಾನಿಧೆ ನೀನೆವೆ ಎನ್ನಲ್ಲಿ
ಸನ್ನದ್ಧನಾಗೆನ್ನ ಸಲಹಬೇಕೊ
ಚಿನ್ನರ ಛಲವನ್ನು ಗೆಲಿಪರೊ ಪಿರಿಯರು
ಚಿನ್ನರೊಳಗೆ ಮೊದಲಿಗನೊ ನಾನು
ನಿನ್ನ ಮನಕ ತಂದು ಛಲವ ಗೆಲಿಸಬೇಕು
ಅನ್ಯನೆ ನಾ ವಾಸುದೇವವಿಟ್ಠಲರೇಯ ೫

ಅಟ್ಟತಾಳ

ಮೊದಲು ಮೃಕಂಡು ಸುತ ತನ್ನಾಯುವಿಗೆ ನಿನ್ನ
ಪದಕ್ಕೆ ಬೀಳಲು ಆತನ್ನ ಬಹುಕಾಲ
ಬದುಕಿಸಲಿಲ್ಲವೆ ಗುರುಸುತ ಯಮಪುರಕೆ
ಪೋದನ್ನ ತರಲಿಲ್ಲೆ ಕಸಿಪುಸುತ ನಿಮಿತ್ತ
ಕ್ಕೊದಗಿ ಬರಲಿಲ್ಲೆ ವಿಧಿ ಅಸ್ತ್ರವನು ನೀ
ಒದೆದು ಪೊರಿಯಲಿಲ್ಲೆ ಪರಿಕ್ಷಿತುವಿನ ಸ್ವಾಮಿ
ಎದಿರಾರೊ ನಿನಗಿನ್ನು ಎನಗೆ ನುಡಿದ ಮಾತು
ಬದಲಾಡದಿರೊ ವಾಸುದೇವವಿಠಲರೇಯಾ ೬

ಆದಿತಾಳ

ಕಾಲ ಕಲಿಯುಗ ಕೇಳುವರೆ ಇಲ್ಲ
ಕೀಳು ಜನರುಗಳು ತಾಳರೊ ಧರ್ಮವ
ಬಾಳುವೆನೆನಿತೊ ನೀ ಕೇಳದಿದ್ದರೆ ಕೃಷ್ಣ
ವೇಳ್ಯೆ ವೇಳ್ಯೆಗೆ ದಯಾಳೆ ನಂಬಿದೆ ನಿನ್ನ
ಧಾಳಿಯ ಮಾರಿಯನು ಸೀಳಿ ಮೊರೆಯನ್ನು
ಕೇಳಿ ನಿನ್ನಯ ಪದ ಧೂಳಿ ಆ ಎನ್ನಯ ಮನ ಭೂ
ಷಣ ಮಾಡಿ ಬಾಳಿಸು ಬಹುಕಾಲ ವಾಸುದೇವವಿಠಲ ೭

ಜತೆ

ನೀನೆ ದಯಾಸಿಂಧೊ ಆನೇನು ಬೇಡೋದು
ದಾನಿಗಳರಸ ವಾಸುದೇವವಿಠಲರೇಯಾ ೮

೮೪

ಉಗಾಭೋಗ

ಸಂಸೃತಿ ತೆರೆಯಲ್ಲಿ ಬಿದ್ದು ಮುಳುಗುವೆ ಕೈ
ಸೋತಿತೊ ರಂಗ ಇತ್ತ ನೋಡೊ
ಲೇಸಾಗಿ ಮೊದಲಿಗೆ ದಾಟಿದ ಜನರಂತು
ಈಸರಿತು ಮುಟ್ಟಲಂಜುವರೊ
ಈ ಸಮಯದಲ್ಲಿ ಈಸು ಜನರು ತಮ್ಮ
ಈಸೊ ಭರದಿ ತಿರುಗಿ ನೋಡರಿತ್ತ
ದಾಶರಾಯನ ಮಗಳಿಗೆ ಮಗನಾಗಿ ನೀ
ಕಾಸು ಬೇಡದಲೆ ದಾಟಿಸುವದಕೆ
ನೀ ಸುಕೃತದ ಗುತ್ತಿಗನಂಬಿನಾಗೆ

ವ್ಯಾಸ ನಿನಗಿನ್ನು ಇದು ತಪ್ಪದೊ
ದಾಸರ ಶಿಶುವಿನ ಉಸಿರು ಮನಕೆ ತಂದು
ವಾಸುದೇವವಿಠಲ ಒಡೆಯೊ ಕೈ ಪಿಡಿಯೊ

೮೫

ಸಿಲುಕಿದೆನು ಭವ ಪಾಶದಲಿ ನಾನು ಹರಿಯೆ
ಕಿಲಿಕಿಲಿ ನಗುವರೆ ಸಲಹುವದು ದೊರೆಯೆ ಪ

ಕೆಲರ ಮಾತಿಗೆ ಪೋಗಿ ಬಲವಾಗಿ ಅವರ
ಕೆಲಸ ಮಾಡುವೆ ನಿಜ ಕೆಲಸವ ಮರೆದೆ ನಾ ೧

ಧರಣಿಯ ಪತಿಯೇವೆ ಶರಣೆಂದು ತಿಳಿದು
ಮರೆದೆನೊ ನಿನ್ನ ಪಾದ ಸಿರಿಯ ರಮಣನೆ ೨

ಉದರಗೋಸುವಾಗಿ ಮರೆದವರ ವಶದಿ
ಹದನವ ಕಳಕೊಂಡು ಮದಡ ನಾನಾದೆನೊ ೩

ಉಣವೆನೊ ಪರರನ್ನ ದಣಿವೆನೊ ಅದಕ್ಕೆ
ಕುಣಿವೆನೊ ಅವರಂತೆ ಗುಣವೇನು ಎನಗೆ ೪

ಈಸು ಪರಿಯಲೆನ್ನ ಶ್ರೀಶ ದಾಸರ ವಶದಿ
ವಾಸವಿತ್ತು ಬದುಕಿಸೊ ವಾಸುದೇವವಿಠಲ ೫

೮೬

ಸುಳಾದಿ

ರಾಗ–ನೀಲಾಂಬರಿ ಧ್ರುವತಾಳ

ಸ್ಮೃತಿ ವಾರಾಧಿಯೊಳಗೆ ಶಳವಿಗೆ ಪೋವಂಗೆ
ಗತಿಯಾಗಿ ದಡಕೆ ಸೇರಿಸಿದ್ಯೋ ಸ್ವಾಮಿ
ಯತಿ ಮಾಡಿ ಕೂಡಿಸಿದಿ ನಿನ್ನ ಪಾದಾಂಬುಜದಲ್ಲಿ
ರತಿ ಕೊಟ್ಟು ಉದ್ಧರಿಸೊ ವಾಸುದೇವವಿಠಲ ೧

ಮಟ್ಟತಾಳ

ಮುದುಕಿಯ ಕೈಯಲ್ಲಿ ಪುಲಿವಶವಾದಂತೆ
ಮದಡನ ಕೈಯಲ್ಲಿ ಸಿಕ್ಕಿದ್ಯೊ ನರಹರಿಯೆ
ಒದಗಿ ಸೇವೆಯ ಮಾಡಲಾರೆ ಜರೆಯು ಬಂತು
ಮುದದಿ ತುತಿಯ ಮಾಡಲಾಪನೆ ಸಹಸ್ರ
ವದನಗೆ ವಶವಲ್ಲ ವಾಸುದೇವವಿಠ್ಠಲ ೨

ತ್ರಿವಿಡಿತಾಳ

ದಾನವಿಲ್ಲದಾಶ್ರಮ ಯಜನವು ಮೊದಲಿಲ್ಲ
ಸ್ನಾನ ಮಾತ್ರವು ಮಾಡಿ ನಿನ್ನ ಮೂರುತಿಗಳನು
ಧ್ಯಾನವ ಮಾಡಿಸೊ ಅನುದಿನ ತಪ್ಪದೆ
ಹೀನರ ಕೃತಿಯನ್ನೆ ಖಂಡನೆ ಮಾಡಿಸೊ
ಜ್ಞಾನ ಪುಟ್ಟುವಂತೆ ಪ್ರವಚನ ಮಾಡಿಸೊ
ದೀನ ವತ್ಸಲ ವಾಸುದೇವವಿಠಲರೇಯ ೩

ಅಟ್ಟತಾಳ

ಪಾಮರ ಜನರೊಳು ಸಿಕ್ಕಿದೆ ನಿನ್ನಯ
ನಾಮವ ಪೇಳೂವ ಜನರನ್ನ ಕಾಣೆನೊ
ಸ್ವಾಮಿ ಏನುಗತಿ ಎನ್ನ ಹೃದಯವೆಂಬ
ಧಾಮದಿ ಪೊಳಿಯೊ ವಾಸುದೇವವಿಟ್ಠಲ್ಲ ೪

ಏಕತಾಳ

ಕಾಕ ಕುಲದೊಳು ಕೋಕಿಲ ದಣಿವಂತೆ
ಕೂಕ ಜನರೊಳು ಸಿಕ್ಕಿದೆ ನರಹರೆ
ಲೋಕ ಹರಟೆಗಳಲ್ಲದೆ ಉತ್ತಮ
ಶ್ಲೋಕನ ವಾರ್ತೆ ನುಡಿವವರಿಲ್ಲವೊ
ಪಾಕಶಾಸನನುಜ ಪೊರಿಯೊ ಕೇಳೆನ್ನ
ವಾಕು ಹೇ ವಾಸುದೇವವಿಟ್ಠಲ ೫

ಜತೆ

ಯಾತಕ್ಕೆ ನರಸಿಂಹ ನೀನೆವೇ ಎನ್ನ ಬೆ–
ನ್ನಾತು ರಕ್ಷಿಸೊ ವಾಸುದೇವವಿಠಲರೇಯ ೬

ಲೋಕನೀತಿ

೮೭

ಆರಗೊಡವೆ ನಿನಗ್ಯಾಕೆಲವೊ
ವೀರ ಶ್ರೀ ನರಹರಿಯು ದೊರೆಯಾಗಿರೆ ಪ

ಹಾದಿ ಹೋಗುವ ಸುದ್ದಿಗಳು ಕೇಳಿ ಕೇಳಿನ್ನು
ಮೋದಿಸುವಿ ಖೇದಿಸುವಿ ಚಿಂತಿಸುವಿ
ಕಾದ್ಯಾಡುವವನಲ್ಲ ಕಟ್ಟುವವ ನೀನಲ್ಲ
ಆದಾಯ ಇನಿತಿಲ್ಲ ಅವನಿಯು ಇಲ್ಲ ೧

ಪಾಮರ ಜನರು ನಿನ ಪಾಲಿಗೆ ಬಿದ್ದಿನ್ನು
ಕಾಮಿತವ ಬೇಡೆ ನೀ ಪಚ್ಚಿಕೊಳದೆ
ಸ್ವಾಮಿಗೆ ಒಪ್ಪಿಸಲೊ ಆತನೆ ಅದನು ಬಲ್ಲ
ನೀ ಮನುಜ ಮಾತ್ರ ನೀನೇನು ಬಲ್ಲ್ಯೊ ೨

ಭಾಸುರಾನಂದ ತೀರಥ ಕೃತಿ ಪೇಳುವ
ಭೂಸುರ ಜನರು ಸುಖದಿಂದಿರಲೆನ್ನು
ವಾಸುದೇವವಿಠಲ ....
.... ೩

೮೮

ಆಲವವೆ ನಮಗೆ ಸಫಲವು ಕಾಣಿರೊ
ಶ್ರೀಲಕುಮಿಯ ಪತಿಯ ನೆನೆವೆಯಾಗಿ ಪ

ಕೀಳು ಜನರಿಂದ ಆಡುವಾ ನುಡಿಗಳು
ಹಾಳು ಹರಟೆಗಳು ಬಹು ಜಾಳು ಮಾತುಗಳು
ಕಾಲ ಪರಿವುದು ಕೇಳಿ ಜನರುಗಳೆ
ನಾಳೆ ನೋಡಿದಂಥ ದಾಸರು ದೊರೆಯರು ೧

ವ್ಯಾಳೆ ಬಂದಾಗ ಸಾಧಿಸದವನಾ
ಬಾಳಿವೆ ಬೋಳೆ ಅದು ಗೋಳಲ್ಲವೆ
ಗಾಳಿ ಬಂದಾ ಕೈಲೆ ತೂರಿಕೊಳ್ಳಿರೊ
ಮ್ಯಾಲೆ ತನ್ನೊಶವೇನೊ ದೇಶಕಾಲಗಳು ೨

ಸೋಲಿಸಿ ದುರ್ಮತರ ಕೀಳು ಮಳಿಗೆಗಳ ಪರಿ
ಸೀಲಿಸೊ ಪ್ರತಿ ದಿವಸದಲಿ
ಅಲವ ಬೋಧರ ಮತವ ಲೀಲೆಯಿಂ ತಿಳಿಕೊಂಬ್ಯ
ಪಾಲಿಸುವ ದಯದಿಂದ ವಾಸುದೇವವಿಠಲ ೩

೮೯

ನಾಲಿಗೆ ತುದಿಯಲ್ಲಿ ರಾಮ ಎಂಬೊ ನಾಮ
ವ್ಯಾಳಿಗೆ ಒದಗಿಸೋ ಹರಿಯೆ ಮರಿಯೆ ಪ

ಕಾಲನ ದೂತರು ಕಠಿಣರೆ ಸರಿ
ವ್ಯಾಳಿಯು ಹೇಳಿ ಕೇಳಿ ಬರುವದಲ್ಲ
ಆಲಯದವರ ಶಕುತಿಯಲ್ಲೇನೋ
ಲಾಲಿಸಬೇಕೇನೊ ಎನ್ನ ಬಿನ್ನಪ ೧

ಕಾಲನ ಸ್ಥಿತಿಯೆಂತು ಮೇಷದ ಗುಂಪಿಗೆ
ತೋಳದ ಪರಿಯೆಂದು ನಾ ಕೇಳಿ ಬಲ್ಲೆ
ಕಾಳು ಕಪಟೆ ತಿಂಬ ಮೂಷಕಗಳಿನ್ನು
ಕಾಲ ಭುಜಂಗದಂತೆ ಕಂಡು ಬಲ್ಲೆನೊ ೨

ಹೇಸಿ ವಿಷಯವೆಂಬಾ ಮಡಿವಿನೊಳಗೆ ವೈದು
ಮೋಸಗೊಳಿಸುವ ಸ್ಥಿತಿಯು ಮನಸಿನ
ವಾಸುದೇವವಿಠಲ ಈ ಪರಿ ತಿಳಿದಿನ್ನು
ಈ ಸಮಯಕ್ಕೆ ನಾಮ ಒದಗಿಸಯ್ಯ ೩

ತತ್ವಚಿಂತನೆ

೯೦

ಪೇಳಬಹುದೊಬ್ಬರಿಗೆ ವ್ಯಾಸನೆ
ಪೇಳಲು ನಿಮಗೆ ಮಾಡಲಶಕ್ಯವಲ್ಲ ಪ

ಶ್ರವಣ ಕ್ಷಣಬಿಡದೆ ಮಾಡು ನೀಯೆಂಬಿ
ಶ್ರವಣ ಬವಣೆಯು ಬಲ್ಲರೇ ಬಲ್ಲರೊ
ಶ್ರವಣ ಮತಿಯೆಂದು ವಾಕ್ಯದಿಂದಲಿ ನಿಮಗಿ
ಲ್ಲವರ ಗುರುವಾದಿ ವಾಯು ವಿರಂಚಿಗೆ ೧

ಮನನ ಮಾಡೆಂದು ಮಂದಿಗೆ ನೀ ಬೋಧಿಸುವೆ
ಮನನ ನಿಮಗೆ ಎಂದಿಗೆ ಇಲ್ಲವೊ
ಮನನ ಶಾಸ್ತ್ರಗಳ ಮಾಡಿ ಹ್ಯಾಗ ತಿಳಿಯದೊ
ಮನವೆ ಬಲ್ಲುದು ನಿನ್ನ ಮಹಿಮೆ ಎಲ್ಲ ೨

ಧ್ಯಾನ ಮಾಡೆಂಬಿ ತಾ ಒಂದೆರೆಡು ವಿಷಯಗಳ
ಜ್ಞಾನ ಬಿಡಲಾರೆನೊ ಬಹಳ ಬಿಡುವೆ
ನೀನು ಒಂದನ್ನ ಒಮ್ಮೆನ್ನ ಬಿಡಲಾರಿಯೊ
ಏನೊ ನೀ ಮಾಡುವುದು ಮಾತ್ರ ೩

ನಿನ್ನ ಖಳಗುಣಗಳ ಪರೋಕ್ಷ ನಿಗಮನುದಿನ
ಅನ್ಯ ಸಾಧನಗಳಿಂದಲ್ಲದಾಗಿ
ಚನ್ನಾಯಿತೋ ನಿಮ್ಮ ನಿತ್ಯ ಮುಕುತಿ ಪೂರ್ಣ ತಾ
ಅನ್ಯ ಜನರಿಗೆ ಬಂದ ದಣುವು ತಿಳಿಯೊ ೪

ಏಸು ತಾನಂದರು ಖರಿಯ ಪುಸಿವೊಂದಿಲ್ಲ
ಲೇಸು ಕೊಡುವವನೊಬ್ಬನಿಲ್ಲ
ವಾಸುದೇವವಿಟ್ಠಲ ಒಲಿದು ಸಜ್ಜನರಿಂದ
ಈಸು ಸಾಧನೆಗಳಿಂದ ನೀ ಮಾಡಿಸೊ ೫

೯೧

ಹುಚ್ಚುಗೊಳಿಸುವರೆ ಮರುಳೆ ತರುಳಾರ
ಅಚ್ಚುತ ಪರಮ ಗಂಭೀರ ಪುರುಷನೆ ಪ

ಎಲ್ಲವು ಬಯಸುವ ಹಟದಿ ಶಿಸುವಿಗೆ
ಬೆಲ್ಲವ ತೋರಿಸಿ ನಿಲುದಿಪ್ಪೋದು ೧

ಮಿನುಗುವ ಮಣಿತೋರೆ ತನು ಬೆವರೆ ಪೋಗೆ
ಕನಡಿಭಾನಿಂದುದಕ ಕೆಳಗೊಳಿಸುವರೆ ೨

ಕಪ್ಪು ವಸ್ತ್ರವ ಕಂಡು ನಡುಗುವಂಗೆ
ಕಪ್ಪ ಕಲ್ಪಿಸೆ ಅಪ್ಪಾ ಎನ್ನೆ ಅಪ್ಪಿ ನಗಿಸುವರೆ ೩

ನಗುವ ಕೂಸಿನ ಅಳಿಸಿ ಮುದ್ದಾಡಿ
ನಗುಸುವೀ ನೀನು ಬಗೆ ಬಗೆಯಿಂದ ೪

ಜೀವರ ಈ ಪರಿ ಮಾಡದಿದ್ದರೆ ವಾಸು
ದೇವವಿಠಲ ನೀ ಕಾಲ ಕಳೆವದೆಂತೊ ೫

ವಿಶೇಷಸಂದರ್ಭಗಳ ಹಾಡುಗಳು

೯೨

ತಿಳುಪಿದೆನು ಪರಮ ದಯದಿಂದ
ತಿಳುಪಿದೆನು ಪರಮ ದಯದಿಂದ ಮುಂದಣ ಕಾರ್ಯ
ಒಳಿತು ಬಿನ್ನಪವ ಲಾಲಿಸಲಿಬಹುದಯ್ಯ ಪ

ಸಕಲ ದೇಶ ಕಾಲದಲ್ಲಿಪ್ಪ ಸಜ್ಜನರ
ಸಕಲ ಪರಿಯಲಿಂದ ಪೊರೆವ ದಾತ
ಅಕಳಂಕ ನರಸಿಂಹ ಹೊರತಿಲ್ಲೆಂದು
ಸಕಲರೂ ಪೇಳಲು ಕೇಳ ಬಲ್ಲೆ ೧

ಇನ್ನಾರು ತರುವಾಯ ದಶಮತಿಯ ರಾಗಮವ
ಚನ್ನಾಗಿ ಪೇಳುವೆನೆಂಬುದೊಂದು
ನಿನ್ನ ವಚನಂಗಳು ಪುಸಿಯಾಗಬಾರದು
ಮನ್ನದಲ್ಲಿ ನೋಡಿಕೋ ಕರುಣ ಸಿಂಧೋ ೨

ಬಡವಗೆ ಮಾತುಗಳು ಕೊಟ್ಟಿನ್ನು ತಾವಾಗಿ
ಒಡೆಯರೇ ತಪ್ಪಿದರೆ ಏನೆಂಬರೊ
ಮಡಿಯ ಹೊರಳುವೆ ನಿನ್ನ ಅಡಿಗೆ ಬೀಳುವೆ ಸ್ವಾಮಿ
ಕಡೆ ಹಾಯಿಸೊ ರಂಗ ಎನ್ನಂತರಂಗ ೩

ಜನನಿ ಕಾಣಳು ಕಣ್ಣು ಕಿವಿಯು ಕೇಳದು ಅಣ್ಣ
ತನಯರು ಇಂದಿಗೂ ಜನಿಸಲಿಲ್ಲ
ಮನದಲ್ಲಿ ಹಲವು ಹಂಬಲಗಳೋಲ್ಯಾಡುತಿವೆ
ಜನಕ ಜನನೀ ತನಯ ನೀ ಎನಗೆ ೪

ಆಸು ಲೋಕಗಳೆಲ್ಲ ನಿನ್ನವೆ ಸರಿ ಸ್ವಾಮಿ
ವಾಸುದೇವವಿಠಲ ಬಹುಕಾಲದಿ
ಭೂಸುರನ ಮಾಡಿ ಪುಟ್ಟಿಸಿದರೆ ಚಿರಕಾಲ
ಈ ಸುಧಾಪಾನ ನೀ ಮಾಡಿಸೆನಗೆ ೫

(ಪುತ್ರಸಂತಾನ ಬೇಡಿ ಮಾಡಿದ ಪ್ರಾರ್ಥನೆ)

೯೩

ವಿನಯದಲಿ ವಿಜ್ಞಾಪನವ ಮಾಡುವೆ ಈ
ತನಯನ್ನ ಪರಿಪಾಲಿಸುವುದೆಂದು ನಾನು ಪ

ನಿನ್ನವನು ಮೊದಲಿಗೂ ಇವನೆಂದು ಬಲ್ಲೆಲ್ಲ
ಜನ್ನಿಸಿ ಇಹನು ಎನ್ನಲ್ಲಿ ಮತ್ತೂ
ಧನ್ಯನಾಗುವ ಮಧ್ವ ತಂತ್ರಗಳನೋದಿನ್ನು
ಅನ್ಯನಲ್ಲವೊ ಇವನು ನಿನಗೆ ಎಂದೆಂದು ೧

ಕೇಳಿದಾಗಿವ ತನ್ನ ಶಿಷ್ಯರಿಗೆ ಶಾಸ್ತ್ರಗಳ
ಪೇಳಿ ಪೆಸರೆತ್ತಿಹ ಲೋಕದೊಳಗೆ
ಆಳಿದಾ ನೀನೆಂದು ನಾಮಗಳು ರಚಿಸುವ
ಬಾಳಲಿ ಬಹುಕಾಲ ಗೋಪಾಲದಾಸ ೨

ಏಸು ಜನರಿಗೆ ಎನ್ನಿಂದ ನೀ ಪೇಳಿಸಿದೆ
ಲೇಸು ಲೇಸೆಂದು ಲೋಕದಿ ಮೆರೆಸಿದ್ಯೊ
ಈಸು ತನಯ ಎನ್ನತೆರ ನಿನ್ನವನೆಂದರಿತು
ವಾಸುದೇವವಿಠಲ ಕಾಪಾಡೊ ಕರುಣಿ ೩

(ತಮ್ಮ ಮಗ ಗೋಪಾಲಕೃಷ್ಣಾಚಾರ್ಯನ ಅಪಮೃತ್ಯು
ಪರಿಹರಿಸುವಂತೆ ಮಾಡಿದ ಪ್ರಾರ್ಥನೆ)

ವಿದ್ಯಾಕಾಂತಯತಿಗಳ ಕೀರ್ತನೆ

೯೪

ಕಾಪಾಡಬೇಕೆಂದು ಗೋಪಾಲ ಕೃಷ್ಣಗೆ
ನೀ ಪೇಳಬಾರದೆ ರುಕುಮಿಣಿ ನೀ ಪೇಳಬಾರದೆ ಸತ್ಯಭಾಮ ಪ

ಪಾಪ ಮಾಡುವನೆಂದು ಕೋಪ ಮಾಡಿದಿರೆಂದು
ನಾ ಪಾದಪದುಮಕ್ಕೆ ಶರಣೆಂಬೆ ತಾಯೆ ೧

ನಿಮ್ಮ ನುಡಿಗಳಿಂದ ಸಮ್ಮತಿಸುವ ದೇವ
ಸುಮ್ಮನೆ ತಿಳಿಸೆನ್ನ ಹಡದಮ್ಮ ತಾಯೆ ೨

ಏನೊ ಪೇಳಿದನೆಂದು ನೀನೂಪೇಕ್ಷಿಸದಲೆ
ಜಾನಕಿದೇವಿ ಪೇಳೆ ರಘೂಪತಿಗೆ ತಾಯೆ ೩

ಪಾದ ನಂಬಿದವರಿಗೆ ಮೋದವ ಕೊಡುವಂಥ
ವೇದವ್ಯಾಸಗೆ ರಮೆ ತಿಳಿ ಹೇಳೆ ತಾಯೆ ೪

ವಿದ್ಯಾಕಾಂತನ ಮನವಿದ್ದಂತೆ ಒಲಿಯುವ
ಸದ್ದಯಾನಿಧಿ ನಮ್ಮ ನರಸಿಂಹ ತಾಯೆ ೫

(ವಿದ್ಯಾಕಾಂತತೀರ್ಥರು (೧೮೨೪)
ವ್ಯಾಸರಾಜ ಮಠದ ೧೬ ನೇ ಯತಿಗಳು)

ಶ್ರೀ ವಿದ್ಯಾರತ್ನಾಕರತೀರ್ಥರ ಕೃತಿಗಳು

ಭಗವಂತನ ಸಂಕೀರ್ತನೆ

೯೫

ಇಂದಿರಾರಮಣ ಆನಂದಮೂರುತಿ ನಿನ್ನ
ವಂದಿಸಿ ಕರಗಳ ಬಂಧಿಸಿ ಬೇಡುವೆ ಪ

ಎಂದಿಗೂ ಎನ್ನ ಹೃದಯಮಂದಿರ ಬಿಡದಿರೊ
ನಂದಮುನ್ನೀಶ್ವರ ವಂದಿತ ಚರಣನೆ ಅ.ಪ

ಕೃತಿರಮಣನೇ ಮುನಿಸತಿಯು ಶಾಪದಿ ಶಿಲಾ
ಕೃತಿಯಾಗಿರಲು ಶ್ರೀಪತಿಯೇ ನೀ ಬಂದು
ರತಿಪತಿಪಿತನೆ ಯುವತಿಯನ್ನೆ ಮಾಡಿದ
ಪತಿತಪಾವನ ನೀನಲ್ಲವೇನೊ ಹರಿಯೆ ೧

ನಾಕರಾಜನ ಸುತನು ಕಾಕರೂಪದಿ ಬಂದು
ಏಕಾಂತದೊಳು ಅವಿವೇಕವ ಮಾಡಲು
ಶ್ರೀಕಾಂತ ತೃಣದಿಂದ ಭೀಕರಿಸಿ ಮೂರು
ಲೋಕ ಸುತ್ತಿಸಿ ಅವನ ನೀ ಕಾಡಿದೆ ಹರಿಯೆ ೨

ಮತ್ತು ಗಜೇಂದ್ರನಾಪತ್ತು ಪರಿಹರಿಸಿ
ಉತ್ತಮ ಪದವವಗಿತ್ತು ರಕ್ಷಿಸಿದೆ
ಭಕ್ತವತ್ಸಲ ಎನ್ನ ಕುತ್ತುಗಳನು ನೀ
ಚಿತ್ತಕೆ ತರದೇ ಸದ್ವೃತ್ತನೆಂದೆನಿಸೈ ೩

ನೇತ್ರವೆಂಬುದು ನಾರಿಗಾತ್ರದೊಳಿರುವುದು
ಶ್ರೋತ್ರವು ಗೀತವ್ರಾತದೊಳಿಹುದು
ಚಿತ್ತ ವಿಷಯ ಭೋಗಾಸಕ್ತವು ಗೋಪಿಕಾ
ಮಿತ್ರನೇ ಅಂಜಲಿಮಾತ್ರ ನೀನೊಪ್ಪಿಕೋ ೪

ವರನಾಮಗಿರಿಲಕ್ಷ್ಮೀನರಸಿಂಹ ಮೂರುತೆ
ಚರಣಕಮಲಯುಗ ಸ್ಮರಣೆಯ ಎನಗೆ
ಸ್ಥಿರವಾಗಿರುವಂತೆ ವರವಿತ್ತು ಸಲಹೆಲೊ
ಪರಮಪುರುಷ ದಿನಕರಕುಲತಿಲಕನೆ ೫

೯೬

ಇಂದಿರೇಶನೆ ಸುಂದರಾಂಗನೆ
ಮಂದಹಾಸದಿಂದ ಬೇಗ ಬಂದು ರಕ್ಷಿಸೈ ೧

ಮರೆಯಬೇಡವೊ ಸಿರಿಯ ಅರಸನೆ
ಪೊರೆಯದಂತೆ ಮರೆಯಬಹುದೆ ಸಿರಿಯನಾಥನೆ ೨

ರಂಗ ರಮಣನೆ ಭುಜಂಗಶಯನನೆ
ಮಂಗಳಾಂಗ ನಿನ್ನ ಕರುಣಾಪಾಂಗ ಬೇಡುವೆ ೩

ಮಾರಜನಕನೆ ಉದಾರಚರಿತನೆ
ಭಾರವೇನೊ ದೀನಜನರುದ್ಧಾರ ಮಾಡುವುದು ೪

ನಾಮಗಿರೀಶನೆ ನಿಸ್ಸೀಮ ಮಹಿಮನೆ
ಪ್ರೇಮವಿಟ್ಟು ಪಾಲಿಸೆನ್ನ ಸ್ವಾಮಿ ನರಹರೆ ೫

೯೭

ಇನಕುಲಪತಿ ಕರುಣಿಸೊ
ಸಲಹುವರನ್ಯರನರಿಯೆ ಪ

ತಾಪಸರಮಣಿಯ ಶಾಪವ ತಪ್ಪಿಸಿ
ಶ್ರೀಪತೆ ಕಾಯಲಿಲ್ಲವೆ ರಾಘವ ೧

ಧೀರ ಮಹಿತಪದ ನೀರಜ ಕರುಣೆಯ
ತೋರಿಸು ಗುಣಧಾಮನೆ ರಾಮನೆ ೨

ನಾಮಗಿರಿ ಶ್ರೀ ಸ್ವಾಮಿನ್ನೃಸಿಂಹನೆ
ನೇಮಿಸು ನಿನ್ನ ಸೇವನೆ ದೇವನೆ ೩

೯೮

ಏನು ಪೇಳಲಿ ನಿನ್ನ ತನಯನ ಚರ್ಯವ
ಮಾನಿನಿಮಣಿಯೆ ಯಶೋದೆಯ ಕೇಳೆ ೧

ವಾರಿಧಿಯೊಳು ಪೊಕ್ಕು ವಿಹರಿಸುವನೆ ಮತ್ತು
ಭಾರಿಯಾದ ಕ್ಷಿತಿಧರೆಯನೆ ಹೊರುವನೆ ೨

ಕುಂಭಿಣಿಯನೆ ಅತಿ ಸಂಭ್ರಮದಲ್ಲಿ ತಂದು
ಸ್ತಂಭವ ಭೇದಿಸಿ ಸಂಭವಿಸಿದನಲ್ಲಿ ೩

ಮೂರು ಹೆಜ್ಜೆಯ ಭೂಮಿ ಬೇಡಿದನೇ ಏಳು
ಮೂರು ಬಾರಿ ನೃಪತಿಗಳ ಭೇದಿಸಿದನು ೪

ವಾನರರನು ಸೇರಿ ಜಾನಕಿಯನೆ ತಂದೆ
ಮಾನವ ಕುಲಕೆ ಸನ್ಮಾನವ ತಂದನೆ ೫

ಘೋರ ಪೂತನಿ ಪ್ರಾಣ ಹಾರ ಮಾಡಿದ ಜಾರ
ಚೋರತನದಿ ಶೂರನಾದನೆ ನೋಡೆ ೬

ಬತ್ತಲೆ ನಿಂತನೆ ಸಸ್ತಿಯನೇರಿದ
ಮತ್ತು ನಾಮಗಿರಿ ನರಹರಿ ಇವನೆ ೭

೯೯

ಕೃಪೆಯಿಟ್ಟು ಸಲಹೆನ್ನ ಹರಿಯೆ ನರಹರಿಯೆ
ದ್ವಿಪವರವರದನೇ ಬಾರಯ್ಯ ದೊರೆಯೆ ಪ

ದುರಿತಹರ ವರ ಚರಣಕಮಲನೆ
ಧರಣಿಧರವನು ಕರಸರೋಜದಿ
ಧರಿಸಿ ಸುಜನರ ಪೊರೆದ ಮುರಳೀ-
ಧರನೇ ಮೋದವಪಡಿಸಿದಂತೆ ಅ.ಪ

ನಂದನಂದನ ನಿನ್ನ ಚರಣ ಒಂದೇ ಶರಣ
ಎನಗೆಂದು ನಂಬಿರುವುದೇ ಒಳ್ಳೇ ಆಭರಣ
ಇಂದಿರೇಶನೆ ಮಾಡೋ ಕರುಣ ಸಿಂಧುಶಯನ
ಸುಂದರೀಮಣಿ ಸಹಿತದಲಿ ನೀ
ಬಂದು ಎನ್ನಯ ಮಂದಿರದಲಿ
ನಿಂದು ಎನ್ನವನೆಂದು ಭಾವಿಸಿ
ನಂದಪಡಿಸೈ ನಂದಬಾಲನೆ ೧

ದೀನಪಾಲನೆ ಭೂಮಿಭಾರ ಹಾನಿಕಾರ ಪಂಚ
ಸೂನಶರನಪಿತ ವಿಗತವಿಕಾರ
ಶ್ರೀನಾಥ ಸುಜನಮಂದಾರ ಮೀನಾಕಾರ

ನಾನು ನಿನ್ನವನಯ್ಯ ಎನ್ನಯ
ಮಾನ ಮತ್ತಪಮಾನ ನಿನ್ನದು
ಹೀನಮತಿ ಇವನೆಂದು ತಿಳಿದುದಾ-
ಸೀನಮಾಡದೆ ಸಾನುರಾಗದಿ ೨

ಸೋಮ ಕುಲಾಂಬುಧಿಸೋಮರಾರಾಮ
ಬಲರಾಮ ಸಹಜನೇ ಸುರರಿಪು ಭೀಮ
ವಾಮಲೋಚನೇರಿಗೆ ಕಾಮ ಪ್ರೇಮಧಾಮ
ಕಾಮಜನಕನೆ ಸಾಮಗಪ್ರಿಯ
ನಾಮಗಿರಿ ಶ್ರೀ ರಾಮ ನರಹರೆ
ಕಾಮಿತಾರ್ಥವನೀವ ಸುರತರು
ಕಾಮಧೇನು ಚಿಂತಾಮಣಿಯೆ ನೀ ೩

೧೦೦

ಕೃಷ್ಣಮೂರುತಿ ಎನ್ನ ರಕ್ಷಿಸೈ ಕಾರುಣ್ಯನಿಧೆ ಸಿರಿ
ಕೃಷ್ಣಮೂರುತಿ ಎನ್ನ ರಕ್ಷಿಸೈ ಪ

ನಾಗೇಂದ್ರಶಯನನೆ ನಾಗೇಂದ್ರ ಮರ್ದನನೆ
ನಾಗೇಂದ್ರಗೊಲಿದವನ್ನಾಗೆ ನಾನಲ್ಲವೇನೊ ೧

ತಾಪಸಸತಿ ಶಿಲಾರೂಪವ ಪೊಂದಿರಲು
ಶಾಪ ಬಿಡಿಸಿ ಅವಳ ಕಾಪಾಡಲಿಲ್ಲವೇನೊ ೨

ಆ ನೀಚನಿಂದ ಯಜ್ಞಸೇನೆಗೆ ಬಂದ ಮಾನ
ಹಾನಿ ತಪ್ಪಿಸಿ ಅಭಿಮಾನಿಸಿ ರಕ್ಷಿಸಿದ ೩

ಇಂದಿರೆಯರಸನೆ ವಂದಿಸಿ ಬೇಡುವೆನೊ
ಎಂದಿಗು ಎನ್ನ ಹೃದಯಮಂದಿರ ಬಿಡದಿರೊ ೪

ವರನಾಮಗಿರಿ ಸಿರಿನರಹರಿಮೂರುತಿಯ
ಚರಣಸೇವಕನೆಂದು ಕರುಣ ಎನ್ನೊಳಗಿಟ್ಟು ೫

೧೦೧

ಗೋಪಬಾಲನೆ ಶ್ರೀಪತಿ ನೀನಾಗು ಪ

ಆರು ನಾಲ್ಕು ಮತ್ತಾರು ಸಾವಿರ
ನೂರು ನಾರೇರಿಗೆ ಅರಸು ನೀನಾಗು ಅ.ಪ

ವೃಷ್ಣಿವರ್ಣ ಶ್ರೀ ಕೃಷ್ಣ ಮೂರುತೆ
ಶಿಷ್ಟ ಜನರಿಗೆ ಇಷ್ಟದಾತನಾಗೊ ೧

ಕಂದ ನೀನು ಆನಂದಪೂರ್ಣನಾಗು
ಬಂಧು ಜನರನು ತಂದೆಯಂತೆ ಕಾಯೊ ೨

ಕಾಮಜನಕ ಶ್ರೀ ನಾಮಗಿರಿ ಶ್ರೀ ಲಕ್ಷ್ಮೀ
ಸ್ವಾಮಿ ನೃಹರಿಗೆ ಪ್ರೇಮಪಾತ್ರನಾಗೊ ೩

೧೦೨

ಗೋಪಾಲ ಪಾಲಿಸೊ
ನಿನ್ನ ಪಾದಸೇವಕನಿವನೆಂದು ನೀ ಭಾವಿಸಿ
ಗೋಪಾಲ ಪಾಲಿಸೊ ಪ

ನಾರಿಜನರುಟ್ಟ ಸೀರೆ ಸೆಳೆದು ತಾ
ಭಾರಿ ಮರವನ್ನೇರಿ ವಿನೋದವ
ತೋರಿದ ಸುರರಿಪು ವೈರಿಯೇ ಎನ್ನಯ
ಕೋರಿಕೆ ನಡಸಲಿನ್ಯಾರಿಗೆ ಬೇಡಲೊ ೧

ತುಂಗಫಣಿಫಣ ಶೃಂಗದೊಳು ಚರ
ಣಂಗಳ ಕುಣಿಸು ಭುಜಂಗಮವರನಿಗೆ
ಭಂಗಪಡಿಸಿ ಕೃಪಾಪಾಂಗದಿ ಸಲಹಿದ
ಮಂಗಳಮಹಿಮ ರಥಾಂಗಧರ ಬಾಲ ೨

ಬಂಧು ಬಳಗ ನೀನೆಂದು ತಿಳಿದು ಮ
ತ್ತೊಂದನೆಣಿಸದೆ ಇಂದಿರಾರಮಣನೆ
ಎಂದೆಂದಿಗೂ ಸಲಹೆಂದು ನಾ ಬೇಡುವೆ
ಮಂದರಧರ ಮುಚುಕುಂದವರದ ಸಿರಿ ೩

ಖಿನ್ನ ನಿಜ ಜನರನ್ನು ಸಲಹುವ
ಪನ್ನಗಶಯನ ಪ್ರಸನ್ನ ಹೃದಯನಾಗಿ
ಎನ್ನ ಮನೋರಥವ ಪೂರೈಸುವ
ರನ್ಯರು ಯಾರಯ್ಯ ಚಿನ್ಮಯ ಮೂರುತಿ ೪

ಕಾಮಜನಕನೆ ನಾಮಗಿರಿ ಸಿರಿ
ಸ್ವಾಮಿ ನೃಸಿಂಹನೆ ಕಾಮಿತ ಕೊಡುವಂಥ
ಕಾಮಧೇನು ಚಿಂತಾಮಣಿ ಎನ್ನಯೋಗ
ಕ್ಷೇಮವು ನಿನ್ನದಯ್ಯ ಸೋಮಕುಲಾಧಿಪ ೫

೧೦೩

ಜಾನಕೀರಮಣನೆ ಮಾನದಿ ಸಲಹೆನ್ನ ಪ

ಮಾನಾಪಮಾನ ನಿಂದೋ ದೀನರ ಬಂಧೋ ಅ.ಪ

ದಾಸದಾಸರ ದಾಸ ದಾಸನಾಗುವೆನೆಂದು
ಬೇಡುವೆ ದಯಸಿಂಧೋ ನೀಡು ವರವ ಬಂಧೊ ೧

ನಂದತೀರ್ಥರ ಮತ ಎಂದೊ ಎನಗೆ ಹಿತ
ಪೊಂದಿಸಬೇಕೊ ಸೀತಾಪತಿಯೆ ಕೇಳೆಲೊದಾತ ೨

ನಾಮಗಿರಿ ಲಕ್ಷ್ಮೀಸ್ವಾಮಿ ಶ್ರೀ ನರಹರೆ
ಚರಣ ಕಮಲಯುಗ ಸ್ಮರಣೆ ಸ್ಥಿರಪಡಿಸೊ ೩

೧೦೪

ನಾರೇರೆಲ್ಲ ಮುತ್ತಿನಾರತಿ ಬೆಳಗಿರೆ
ಶ್ರೀ ಕೃಷ್ಣಮೂರುತಿಗೆ ಪ

ನಾರೀಮಣಿ ಶ್ರೀ ರುಕ್ಮಿಣೀದೇವಿಗೆ
ಮತ್ತು ಭೂಮಾಮಣಿಗೆ ಅ.ಪ

ಪನ್ನಗಪತಿ ಫಣಿಯನ್ನು ತುಳಿಯುತಲಿ
ಚನ್ನಾಗಿ ಕುಣಿದವಗೆ
ಸನ್ನುತ ನಿಜ ಜನರನ್ನು ಸಲಹುವ
ಮನ್ಮಥ ಜನಕನಿಗೆ ೧

ಪಾರ್ಥಗೆ ಸಖನಾಗಿ ಧಾರ್ತರಾಷ್ಟ್ರನ ಹಠ
ವ್ಯರ್ಥ ಮಾಡಿದವಗೆ
ಆರತಿ ಎತ್ತಿರೆ ಶುಭಕೀರ್ತನೆ ಮಾಡುತ
ಪಾರ್ಥಸಖನ ಸತಿಗೆ ೨

ಚಂಡಮುನಿಯು ಬೇಡಿಕೊಂಡ ವರವನಿತ್ತ
ಪಾಂಡವರ ಕಾಯ್ದವಗೆ
ಪುಂಡರೀಕದಳಲೋಚನಗೆ
ಜಗದಂಡಪತಿಯ ಸತಿಗೆ ೩

ವಾಮಲೋಚನರೆಲ್ಲಾ ನಾಮಗಿರೀಶ ಶ್ರೀ
ನರಸಿಂಹ ಮೂರುತಿಗೆ
ಪ್ರೇಮ ಮಾಡುವನೆಂದು ಕಾಮಿನಿಯರೇ ಸತ್ಯ
ಭಾಮಾಸಹಿತನಿಗೆ ೪

೧೦೫

ನೀರಜಾಕ್ಷೇರೆಲ್ಲ ಬಂದು ಮಾರಜನಕಗೆ
ಆರತಿ ಎತ್ತಿರೇ ನಾರಿಮಣಿ ಶ್ರೀ ರುಕ್ಮಿಣಿಮಣಿಗೆ ಪ

ವೇದವನು ಕದ್ದ ಖಳನ ಬೇಧಿಸಿದವಗೆ
ಆದರದಿಂದ ಮಂದರವೆಂಬೋ ಭೂಧರ ತಂದವಗೆ ೧

ಕುಂಭಿಣಿಯನ್ನು ಬಿಡದೆ ತಂದ ಕುಂಭಿಣಿರಮಣಗೆ
ಕಂಭದಿ ಬಂದು ದನುಜ ಡಿಂಭನ ಕಾಯ್ದ ನೃಹರಿಗೆ ೨

ಭೂಮಿ ಬೇಡಿದವನಿಗೆ ದುಷ್ಟ ಭೂಮಿಪ ಹರನಿಗೆ
ಕಾಮಿನಿಚೋರನ ಶಿರವ ತರಿದ ಸ್ವಾಮಿ ರಾಮಗೆ ೩

ಪಾಂಡುಸುತರ ಸಲಹಿ ಖಳರ ದಂಡಿಸಿದವಗೆ
ಚಂಡತ್ರಿಪುರರ ಹೆಂಡರ ವ್ರತವ ಖಂಡನೆ ಮಾಳ್ಪಗೆ ೪

ತುರಗವೇರಿ ದುರುಳ ನೃಪರ ತರಿದ ಕಲ್ಕಿಗೆ
ವರದ ನಾಮಗಿರಿ ಶ್ರೀಹರಿಯ ಚರಣಕಮಲಕೆ ೫

೧೦೬

ಬಾರೋ ಕ್ಷೀರೋದಧಿಶಯನ ಹರೆ ನಿನ್ನ
ಕರುಣವ ಎನ್ನೊಳು ತೋರೊ ಪ

ನಂದನಂದನ ಹೃನ್ಮಂದಿರಕೆ ನೀ ಬೇಗ ಬಾರೊ ಅ.ಪ

ಶೌರೇ ನಿಂಗೆ ಸೇರಿದಾವನಾಗಿ
ಇನ್ನ್ಯಾರಿಗೆ ಬೇಡಲೊ ಮುರಾರೆ ಕರುಣಿಸಿ ಬಾರೊ ೧

ಕೃಷ್ಣಾಮೂರ್ತೆ ಸೃಷ್ಟಿಪಾಲನಾಗಿ
ಪರಮೇಷ್ಠಿ ಜನಕ ನಿಂಗಿಷ್ಟೂಪೇಕ್ಷೆ ಯಾಕೋ ೨

ಇಂದಿರೇಶ ಚಂದಿರವದನ
ಮುಚುಕುಂದವರದ ಗೋವಿಂದ ಕರುಣಿಸಿ ಬಾರೊ ೩

ಮಂಗಳಾಂಗ ಅಂಗಜ ಜನಕ
ಯದುಪುಂಗವ ಕೈಬಿಡದಾಂಗೆ ಪಾಲಿಸು ೪

ನಾಮಗಿರಿಸ್ವಾಮಿ ನಾರಸಿಂಹ
ಬಲರಾಮ ಸೋದರ ಪ್ರಣಾಮ ಮಾಡುವೆ ಬಾರೊ ೫

೧೦೭

ಬಾರೊ ನಂದನಂದನ ಅರವಿಂದಲೋಚನ ಪ

ಅರವಿಂದಲೋಚನ ಭವಬಂಧ ಮೋಚನ ಅ.ಪ

ದುರುಳ ದುರ್ಯೋಧನನ ಅನುಜ
ಖಳ ದುಶ್ಯಾಸನ
ಕರದಿ ಎನ್ನ ಸೀರೆ ಪಿಡಿದು
ಭರದಿ ಎಳೆಯುವ ೧

ಅರಿಯದಂತೆ ಇರುವರೆಲ್ಲ
ಕಿರಿಯ ಜನಗಳು
ಹರಿಯೆ ಕರುಣಾನಿಧಿಯೇ ಎನ್ನ
ಮೊರೆಯ ಕೇಳಲೊ ೨

ಕಾಮ ಜನಕ ನಾಮಗಿರಿ ಶ್ರೀ
ಸ್ವಾಮಿ ನರಹರೆ
ಹೇಮಕಶಿಪು ತನುಜನಂತೆ
ಪ್ರೇಮದಿ ಸಲಹೆಲೊ ೩

೧೦೮

ಬೇಡಿಕೊಂಬೆನೊ ಗೋಪಾಲ ನಿನ್ನ
ಬೇಡಿಕೊಂಬೆ ಕರಗಳೆರೆಡ ಪ

ಜೋಡಿಸಿ ನಿನ್ನೊಳು ಸುದೃಢ ಭಕುತಿ
ಮಾಡಿ ಸತತ ಭಜಿಸುವಂಥ
ರೂಢಿ ಎನಗೆ ಕೊಡು ನೀನೆಂದು ಅ.ಪ

ಕ್ಲೇಶಪಡಿಸದೆ ಸಲಹೆನ್ನ ಜಗಗಧೀಶ ಮರೆಯದೆ
ಬಾರದ್ಯಾಕೊ ಕರುಣ ಲೇಶಗುಣನಿಧೆ
ಆಶಾಪಾಶ ಬದ್ಧನಾಗಿ ದೇಶ ದೇಶ ತಿರುಗಿ ಕರುಣ
ಲೇಶವಿಲ್ಲದ ದುರುಳ ವಸುಮತೀಶರೊಳ್ ಬೇಡಿಸದಂತೆ ೧

ಇಂದುವದನನೆ ಮುನಿವರ್ಯಹೃದರ
ವಿಂದಸದನೆ ವರಗೋಪಯುವತಿ ಬೃಂದಮದನನೆ
ಇಂದಿರೇಶ ನಿನ್ನ ಪಾದಾರವೃಂದಗಳನು ಹೃದಯವೆಂಬೊ
ಮಂದಿರದೊಳಗೆ ನಿಲ್ಲಿಸಿ ಚಿದಾ-
ನಂದಮೂರ್ತಿಯ ಪೂಜಿಪೆನೆಂದು ೨

ಧೀರ ಚರಣನೆ ಮುರಾರಿ ಧರಣಿ ಭಾರಹರಣನೆ
ಭುಜಗೇಶಫಣಿ ವಿದಾರಿ ಚರಣನೆ
ಮಾರಜನಕ ನೀರಜಾಕ್ಷ ನಾರಸಿಹ್ಮ ನಾಮಗಿರೀಶ
ಧೀರವರ ಶ್ರೀ ಮಧ್ವಮತದ ಸಾರ ಎನಗೆ ತಿಳಿಬೇಕೆಂದು ೩

೧೧೯

ಶಾರದೇಂದುಮುಖಿ ನೀರಜನಯನಳೆ
ಬಾರೆಲೆ ಬಾಗಿಲ ತೆಗಿಯಲೆ ಭಾಮೆ ಪ

ಯಾರಯ್ಯ ಬಾಗಿಲ ಹೊರಗೆ ನಿಂತಿರುವನು
ಜಾರ ಪುರುಷನಂತೆ ತೋರುವೆ ನೀನು ಅ.ಪ

ಜಾರನಾದರೆ ನಿಂಗೆ ಜಾರನಲ್ಲವೆ ಮೀನಾ
ಕಾರ ಧರಿಸಿರುವ ಹರಿಯಲೆ ಭಾಮೆ
ಮೀನನಾದರೇ ಬಲು ಮೌನದಲಿರದಂತೆ
ಮಾನವರಂತೆ ಮಾತು ಯಾವುದೋ ನಿನಗೆ ೧

ಮಂದರಗಿರಿಯ ಬೆನ್ನಿಂದ ಧರಿಸಿರುವ
ಅಂದ ಕೂರ್ಮನಲ್ಲವೇನೆ ಭಾಮೆ
ಕೂರ್ಮ ನೀನಾದರೆ ಕೂಪದೊಳಿರುವುದೆ
ಧರ್ಮವೆಂಬುವುದನು ಮರೆತೆಯಾ ನೀನು ೨

ನೀಲವೇಣಿಯೆ ಕೇಳೆ ಕೋಲರೂಪದಿ ಬಂದು
ಲೀಲೆಯಿಂದಲಿ ಕ್ಷಿತಿ ತಂದೆನೆ ಭಾಮೆ
ಪೋತರೂಪನೇ ನಿಜ ಧಾತ್ರಿಯ ಭೇದಿಸಿ
ಗಾತ್ರ ರಕ್ಷಣೆ ಮಾಡು ಹೋಗೆಲೊ ೩

ಸ್ತಂಭ ಭೇದಿಸಿ ರಿಪು ಡಿಂಭನ ಕಾಯಲು
ಜಂಭದಿ ಖಳನನು ಕೊಂದನೇ ಭಾಮೆ
ಸ್ಥಂಭ ಭೇದಿಸಿದ ನಾ ನಂಬುವುದಿಲ್ಲವೊ
ಡಂಭದಿ ಬಾಗಿಲು ಭೇದಿಸಿ ಬಾರೊ ೪

ವಾಮನನೆಂದು ವಟುರೂಪದಿ ಬಂದು ಸಾರ್ವ
ಭೌಮನಲ್ಲಿ ಭೂಮಿ ಬೇಡಿದೆ, ಭಾಮೆ
ವಟುರೂಪನಾದರೆ ಕುಟಿಲಾಕ್ಷಿಯರಲಿಂಥ
ಚಾಟುವಚನಗಳು ಯಾಕೆಲೊ ೫

ದುರುಳನೃಪರ ಪರಿಹರಿಸಿದ ಭೃಗುಮುನಿ
ವರಕುಲಜಾತ ಶ್ರೀ ರಾಮನೇ ಭಾಮೆ
ಮುನಿವರಸುತನಾಗಿ ಸ್ವನಿಯಮಗಳ ಬಿಟ್ಟು
ವನಿತೆಯರಲ್ಲಿಂಥಾ ಸರಸವೆ ನಿನಗೆ ೬

ದಶರಥ ನೃಪತಿಯ ಮನೆಯೊಳವತರಿಸಿ
ದಶಶಿರರನು ಕೊಂದ ರಾಮನೆ ಭಾಮೆ
ರಾಮನಾದರೆ ಪರ ಕಾಮಿನಿಯರೊಳಿಂಥಾ
ಪ್ರೇಮ ಮಾಡುವುದುಂಟೆ ಯೋಚಿಸೊ ನೀನು ೭

ನೀರಜಾಕ್ಷಿ ಕೇಳೆ ಜಾರಚೋರತೆಯಲ್ಲಿ
ಶೂರನಾದ ಸಿರಿ ಕೃಷ್ಣನೇ ಭಾಮೆ
ಚೋರನಾದ ಮೇಲೆ ಸೇರಿಸುವುದು ಹೇಗೆ
ಭಾರಿ ಆಭರಣಗಳಿರುವುವೊ ೮

ಮುಗ್ಧೆ ಕೇಳೆ ಇದಬದ್ಧವಲ್ಲದೆ ಅತಿ
ಶುದ್ಧನಾದ ಬುದ್ಧರೂಪನೆ
ಬುದ್ಧರೂಪನೆ ನಿನ್ನ ನಡತೆಯ ಕೇಳಲು
ಶುದ್ಧಿಯು ಲೋಕಪ್ರಸಿದ್ಧವು ೯

ಸರಸಿಜಮುಖಿ ವರತುರಗವನೇರಿದ
ದುರುಳ ನೃಪರ ಗೆಲ್ವ ಕಲ್ಕಿಯೇ ಭಾಮೆ
ದುರುಳ ಜನರು ಇಲ್ಲಿ ಸೇರುವುದಿಲ್ಲವೊ
ತರಳೆಯರಲಿ ದುಷ್ಟ ಕಾರ್ಯವೇ ಪೋಗೊ ೧೦

ಈ ಪರಿ ಸರಸವನಾಡುವ ನಾಮಗಿರಿ
ನರಹರಿ ರೂಪ ರಮಾ ರಮೇಶರು
ವಿಹರಿಪ ಬಗೆಯನು ಸ್ಮರಿಸುವ ಸುಜನರ
ಪರಮಪುರುಷ ಹರಿ ಪೊರೆವುದು ನಿಜ ೧೧

ಲಕ್ಷ್ಮೀ ದೇವಿ

೧೧೦

ಇಂದಿರೆ ನಾ ನಿನ್ನ ವಂದಿಸಿ ಬೇಡುವೆ
ಬಂದು ನೀ ಪಾಲಿಸೇ ಚಂದಿರವದನೆ ಪ

ಸಿಂಧು ಕುಮಾರಿಯೆ ಎಂದಿಗೂ ನಿನ್ನ ಪದ
ದ್ವಂದ್ವವ ಸೇವಿಪೆನೆಂದು ನಾ ಬೇಡುವೆ ಅ.ಪ

ದೇವಿ ನಿನ್ನಂಘ್ರಿಯ ಸೇವಿಸಿ ಪದ್ಮಭವ
ಭಾವಿ ಫಣೇಶ ಸುರಾಧಿಪರೆಲ್ಲರು
ಈ ವಿಧವಾದನುಭಾವವ ಪೊಂದಿರಲು
ಈ ವಿಷಯಕೆ ಶ್ರುತಿ ಸಾವಿರವಿರುವುದೆ ೧

ಪನ್ನಗವೇಣಿಯೆ ನಿನ್ನನೆ ನಂಬಿರಲು
ಸಣ್ಣ ಮನುಜರ ವರ್ಣಿಪುದೇಕೆಲೆ
ಎನ್ನಪರಾಧವ ಮನ್ನಿಸಿ ಕೃಪೆಯನು
ಎನ್ನೊಳು ತೋರಲು ಧನ್ಯ ನಾನಾಗುವೆ ೨

ತಾಮರಸಾಕ್ಷಿಯೆ ನಾಮಗಿರೀಶ ಶ್ರೀ
ಸ್ವಾಮಿ ನೃಸಿಂಹನ ಕಾಮಿನೀಮಣಿಯೇ
ಕೋಮಲಗಾತ್ರಯೆ ಶ್ರೀ ಮಹಾಲಕ್ಷ್ಮಿ ಎನ್ನ
ಧಾಮವ ಬಿಡದಿರೆ ಸೋಮ ಸಹೋದರಿ ೩

೧೧೧

ನೋಡಮ್ಮ ವಾರ್ಧಿಕನ್ಯೆ ಕಮಲಾಸನಾದಿಮಾನ್ಯೆ
ಸರಸಿರುಹಾಕ್ಷಿ ನಿನ್ನೆ ನಂಬಿರುವೆ ಸುಪ್ರಸನ್ನೆ ಪ

ಕಮಲಾಕ್ಷಿ ಪೇಳೆ ನಾರೀರೊಳು ನಿನಗೆ ಸರಿಕರ್‍ಯಾರೆ
ದಯವಿಟ್ಟು ಮನೆಗೆ ಬಾರೆ ಮಾಡಮ್ಮ ಕನಕಧಾರೆ ೧

ಕೃಪೆಯಿಟ್ಟು ಎನ್ನ ನೋಡೆ ನಿಜನೆಂಬೊ ಭಾವ ಮಾಡೆ
ಬೇಡಿದ ವರವ ನೀಡೆ ಸಿರಿ ಎನ್ನ ನೀ ಕಾಪಾಡೆ ೨

ಶ್ರೀಮನ್ನೃಸಿಂಹಜಾಯೆ ವರ ಹೇಮಶೋಭಿಕಾಯೆ
ನಾಮಗಿರಿ ನೀ ಬಂದು ಕಾಯೆ ಬೇಡಿಕೊಂಬೆ ತಾಯೆ ೩

೧೧೨

ಪಾಲಿಸೆ ಎನ್ನ ನಾಮಗಿರಿಯಮ್ಮ
ಹರಿಗುರುಗಳ ಕೃಪಾಬಲ ಎನ್ನಲ್ಲಿರುವಂತೆ ಪ

ಕರುಣದಿ ನೋಡೆ ನಾಮಗಿರಿಯಮ್ಮ
ವರಗಳ ನೀಡೆ ಇಂದಿರೆ ಎನ್ನ
ಸುಖಿಯನ್ನೆ ಮಾಡೆ ವಾರಿಜಮುಖಿ
ನರಪಾಲಾಧಮರ ದುರ್ಮುಖವ ನೋಡಿಸದಂತೆ ೧

ಸುಖಚಿದಾಕಾರೆ ಎನ್ನ ಮನೆಗೆ
ದಯವಿಟ್ಟು ಬಾರೆ ನಾರೆಯರಲ್ಲಿ
ಸರಿ ನಿನಗಾರೆ ಪಂಕಜನೇತ್ರೆ
ಕಿಂಕರನೆಂದು ಆತಂಕ ಬಿಡಿಸೆ ತಾಯೆ ೨

ಚರಣಾರವಿಂದ ಸೇವಕನಲಿ
ಕೃಪೆಯಿಟ್ಟು ಮಂದಹಾಸದೆ ಬಂದು
ಸುಖಬುದ್ಧಿಯಿಂದ ಇಂದಿರಾದೇವಿ
ಚಂದ್ರವದನೆ ಎನ್ನ ಮಂದಿರದೊಳಗಿದ್ದು ೩

ಶ್ರಿತ ಸುರಧೇನು ದೇವಿ ನೀನೆಂದು
ಬಂದೆನು ನಾನು ಇಂದಿರೆ ಇಷ್ಟುಪೇಕ್ಷೆ ನಿಂಗೇನು
ಕಷ್ಟಗಳೆಲ್ಲ ನಷ್ಟವಾಗುವ ಪರಿ
ದೃಷ್ಟಿ ಎನ್ನೊಳಗಿಟ್ಟು ೪

ನರಹರಿ ಜಾಯೆ ನಾಮಗಿರಿಯಮ್ಮ
ಬಂದು ನೀ ಕಾಯೇ ಪೇಳುವುದೇನು
ಸರ್ವಜ್ಞ ತಾಯೇ ವಾರಿಜಮುಖಿ
ನಿಜ ವರ್ಣಾಶ್ರಮಧರ್ಮ ಚ್ಯುತಿ ಎಂದೂ ಬರದಂತೆ ೫

ಗುರುಸ್ತುತಿ

೧೧೩

ರಾಘವೇಂದ್ರ ಸಲಹೊ ಗುಣಸಾಂದ್ರ ಪ

ಭಗವದ್ಗೀತಾ ವಿವರಣ ತಂತ್ರದೀಪ
ನಿಗಮತತಿಗೆ ಖಂಡಾರ್ಥವ ರಚಿಸಿ
ಖಗರ್ಥಗಳನು ಅತಿ ಸ್ಫುಟವಾಗಿ ವಿವರಿಸಿ
ಖಗವಾಹನ ತೋರಪಡಿಸಿದ ಧೀರ ೧

ಧರಣಿ ವಿಜರರಿಗೆ ವರಗಳ ಕೊಡುವಂಥ
ಸುರತರುವೆ ನಿಂಗೆ ಕರಗಳ ಮುಗಿದು
ಪರಮಪುರುಷ ಹರಿಚರಣ ಕಮಲದಲಿ
ಸ್ಥಿರವಾದ ಭಕುತಿಯ ಬೇಡುವೆ ಧೀರ ೨

ಚಂಡ ಕುಮತಗಳ ಖಂಡಿಸಿ ಬುಧಜನ
ಮಂಡಲದೊಳಗೆ ಪ್ರಚಂಡನೆಂದೆನಿಸಿ
ಕುಂಡಲಿಶಯನ ಪಾದಮಂಡಿತ ಹೃದಯ ಭೂ
ಮಂಡಲದೊಳಗೆ ಅಖಂಡಲನಾದ ೩

ಶ್ರದ್ಧೆಯಿಂದಲಿ ವರ ಮಧ್ವಾಚಾರ್ಯರ ಮತ
ಪದ್ಧತಿ ಬಿಡದಂತ ಬುದ್ಧಿಯನಿತ್ತು
ಉದ್ಧರಿಸಯ್ಯ ಕೃಪಾಬ್ಧಿಯೇ ಬುಧಜನಾ
ರಾಧ್ಯಚರಣ ಪರಿಶುದ್ಧ ಚರಿತ್ರ ೪

ಕಾಮಜನಕನಾದ ನಾಮಗಿರೀಶ್ವರಿ
ಸ್ವಾಮಿ ನೃಹರಿಪಾದ ತಾಮರಸಂಗಳ
ಪ್ರೇಮದಿ ಪೂಜಿಪೆನೆಂಬೊ ಕಾಮಿತವರ ನೀಡೊ
ಶ್ರೀ ಮತ್ಸುಧೀಂದ್ರಕರ ತಾಮರಸಭವನೆ ೫

೧೧೪

ನಂದತೀರ್ಥರಾನಂದದಿ ಭಜಿಸಿರೊ
ಬಂದು ಸಲಹಬೇಕೆಂದು ಬೇಡುತ ಪ

ಶ್ರದ್ಧೇ ರಮಣನು ಮಧ್ಯಗೇಹರ
ಶುದ್ಧಕುಲದೊಳು ಉದ್ಭವಿಸಿದ ೧

ಗೋಪ್ರದಾಯಕ ವಿಪ್ರವರ್ಯಗೆ
ಕ್ಷಿಪ್ರದಲ್ಲಿ ಸುಪ್ರಜ್ಞೆಯಿತ್ತ ೨

ದೂಷ್ಯವಾದ ದುರ್ಭಾಷ್ಯ ಖಂಡಿಸಿ
ಶಿಷ್ಯರಿಗೆ ಸದ್ಭಾಷ್ಯ ಪೇಳಿದ ೩

ಯವನ ನೃಪತಿಯ ಭವನಕೆ ಪೋಗಿ
ಅವನ ಅರ್ಧರಾಜ್ಯವನೆ ತಂದ ೪

ದೇವಗಂಗೆಯು ಪಾವನಾಂಶನ
ಸೇವೆಮಾಡಿ ತಾ ಪಾವನಳಾದ ೫

ನಾಮಗಿರಿ ಸಿರಿ ಸ್ವಾಮಿ ನೃಹರಿಯ
ಪ್ರೇಮಬಲದಿ ನಿಸ್ಸೀಮರಾದ ೬

೧೧೫

ಮುನಿರಾಯರ ಸ್ಮರಣೆ ಮಾಡಿರೊ ಮಧ್ವ
ಮುನಿರಾಯರ ಸ್ಮರಣೆ ಪ

ಚರಣಕಮಲವ ಭರದಿ ಭಜಿಸುವ
ಧರಣಿ ಸುರರಾದರದಿ ಪೊರೆಯುವ
ತರಣಿ ಮಂಡಲಗಣವ ಗೆಲಿಯುವ
ಹರಿಣವಾಹನನಂಶನಾದ ಅ.ಪ

ಕಪಿರೂಪವ ಧರಿಸಿ
ರಾಮನ ಆಜ್ಞೆಯನು ಶಿರದಲಿ ವಹಿಸಿ
ವಾರಿಧಿಯನು ನಿಮಿಷ ಮಾತ್ರದಿ ಲಂಘಿಸಿ
ದಶವದನನ ಅಶೋಕವನದಲಿ
ಶಶಿಮುಖಿಯ ತಾ ಕಂಡು ವಂದಿಸಿ
ದಶರಥ ಸುತನ ವಾರ್ತೆ ಪೇಳಿ
ನಿಶಿಚರೇಶನ ಪುರವ ವಹಿಸಿದ ೧

ಕುರುಕುಲದೊಳಗೆ ಪುಟ್ಟಿ
ಮತ್ಸಾಧಿಪನ
ನಗರದೊಳಗೆ ತಾ ಜಟ್ಟಿ

ಕಾಳಗದಲ್ಲಿ ಮಲ್ಲರ ತಲೆಯ ಮೆಟ್ಟಿ
ದುರುಳ ದುರ್ಯೋಧನನ ಸೇನೆಯು
ಬರಲು ಪಶುಗಳ ಕದಿಬೇಕೆಂದು
ತರಳ ಪಾರ್ಥನ ಕಳುಹಿ ತಕ್ಷಣ
ತಿರುಗಿ ಓಡಿಸುವಂತೆ ಮಾಡಿದ ೨

ಪರಬ್ರಹ್ಮ ಅಗುಣನೆಂದು
ಜೀವೇಶರಿಗೆ ಬೇಧವೇ ಇಲ್ಲವೆಂದು
ಪ್ರಪಂಚಕ್ಕೆ ಸತ್ಯತ್ವ ಯಾವುದೆಂದು
ಜಗನ್ಮಿಥ್ಯಾವಾದಿ ಜನಗಳ
ನಿಗಮ ಯುಕುತಿಗಳಿಂದ ಖಂಡಿಸಿ
ಖಗವಾಹನ ನಾಮಗಿರಿ ಸಿರಿ
ನೃಹರಿ ಮೂರುತಿಗರ್ಪಿಸಿದ ೩

ತತ್ವ ಚಿಂತನೆ

೧೧೬

ಮಧ್ಯಮತವೇ ದೊಡ್ಡದೆಂದು ತಿಳಿದು ಮನ
ಶುದ್ಧಿಯಿಂದ ಮತವನನುಸರಿಸೋ ಪ

ಶ್ರೀ ಮಧ್ವಮತದಲ್ಲಿ ಹರಿಯೇ ಸರ್ವೋತ್ತಮ
ಭೇದಪಂಚ ಜಗತೆರಡು ಸತ್ಯ
ಶ್ರೀ ಬ್ರಹ್ಮಾದಿಗಳೆಲ್ಲ ಹರಿಪರಿವಾರರು
ತಾರತಮ್ಯವೇ ಸದಾ ಇವರಲ್ಲಿ ೧

ಮುಕ್ತಿ ಎಂಬುದು ನಿಜಾನಂದದ ಅನುಭವ
ಭಕ್ತಿಯೆಂಬುದೇ ದೊಡ್ಡ ಸಾಧನವು
ಅಕ್ಷಾನುಮಾಗಮ ಮೂರು ಪ್ರಮಾಣ ಶ್ರೀ
ಲಕ್ಷ್ಮೀಶನೇ ಸರ್ವಶ್ರುತಿವೇದ್ಯನು ೨

ಸ್ವತಂತ್ರ ಪರತಂತ್ರ ಎರಡು ತತ್ವಗಳು
ಸ್ವತಂತ್ರ ತತ್ವವು ಹರಿಯೊಬ್ಬನೇ ಪ
ರತಂತ್ರ ಮಿಕ್ಕಿದ್ದಲ್ಲಾ ಇದಕೆ ಪ್ರಮಾಣವು
'ಏಷ ಸರ್ವೇಶ್ವರ ' ವೆನ್ನುತ ಶ್ರುತಿಯು ೩

ಹರಿಯೇ ಸರ್ವೋತ್ತಮ ತದನು ರಮಾದೇವಿ
ತದನು ವಿಧಿ ಪ್ರಾಣರಿವರಿಬ್ಬರು
ತದನು ಸರಸ್ವತಿ ಭಾರತೇರಿಬ್ಬರು
ಶಿವ ಶೇಷ ಗರುಡ ಶ್ರೀ ಹರಿನಾರೇರು ೪

ವಾರುಣಿ ಸೌಪರ್ಣಿ ಪಾರ್ವತಿಯರು ಸಮ
ಶಕ್ರ ಕಾಮರು ಸಮ ಸ್ಮರರಮಣಿ
ಗುರು ಶಚಿ ಮನು ದಕ್ಷ ಸಮರು ಆ ಮಾನವಿ
ಪ್ರವಹ ಯಮೇಂದ್ವರ್ಕ ಸಮರೈವರು ೫

ನಿಖಿಲ ದಿವಿಜರಲ್ಲಿ ಈ ವಿಧ ತಾರತಮ್ಯ
ನಿಖಿಲ ಸುರೋತ್ತಮ ಹರಿಯೊಬ್ಬನೇ
ಮಿಕ್ಕವರಲವೆಂದು ಇಂದ್ರಿಯೇಭ್ಯಃ ಪರಃ
ದ್ವಾವಿಮಾ ಇತ್ಯಾದಿ ಶ್ರುತಿವಚನ ೬

ಈಶ್ವರ ಜಡ ಭೇದ ಜೀವ ಜಡಕೆ ಭೇದ
ಜೀವ ಜೀವಕೆ ಭೇದ ಜಡ ಜಡಕೆ
ಜೀವೇಶರಿಗೆ ಭೇದ ಈಶ ಲಕ್ಷ್ಮೀ ಭೇದ
ಪರತಂತ್ರ ಚಿತ್ಪರ ಜೀವ ಶಬ್ದ ೭

ಬ್ರಹ್ಮವಿಚಾರ ತತ್‌ಜ್ಞಾನಕೆ ಸಾಧನ
ಜ್ಞಾನಪ್ರಸಾದಕೆ ಇದು ಮುಕ್ತಿಗೆ
ಆದ ಕಾರಣದಿಂದ ಶಮದಮಯುತನಿಗೆ
ಬ್ರಹ್ಮ ಜಿಜ್ಞಾಸವು ಕರ್ತವ್ಯವು ೮

ಜಿಜ್ಞಾಸ್ಯಬ್ರಹ್ಮನು ಜೀವನಲ್ಲವೊ ಜಗ
ತ್ಕಾರಣತ್ವವು ಜೀವಗೆಲ್ಲಿಹುದೊ
ರುದ್ರಾದಿಗಳು ಜಗತ್ಕಾರಣರಲ್ಲವೊ
ಶಾಸ್ತ್ರವೇದ್ಯನೆ ಜಗತ್ಕಾರಣನು ೯

ಉಪಕ್ರಮಾದಿಗಳ ವಿಚಾರ ಮಾಡಲು ಸರ್ವ
ಶಾಸ್ತ್ರ ತಾತ್ಪರ್ಯಗೋಚರ ಹರಿಯೆ
ಅಕ್ಷಾದ್ಯವೇದ್ಯನ ಜ್ಞೇಯನಾಗುವ ಹರ್ಯ
ವಾಚ್ಯನೆಂಬುವುದದು ಸರಿಯಲ್ಲವೊ ೧೦

ಆನಂದಮಯ ಮೊದಲಾದ ವಾಚ್ಯನು ಮತ್ತೆ
ಸರ್ವಗತತ್ವಾದಿ ಲಿಂಗಯುತ
ದ್ಯುಭ್ವಾದಿಗಳಿಗಾಧಾರನು ಅವ್ಯಕ್ತ
ಜ್ಯೋತಿರಾದಿ ಶಬ್ದ ಮುಖ್ಯಾರ್ಥನು ೧೧

ದೋಷವರ್ಜಿತ ಹರಿ ವಿಷಯವಿರಕ್ತಿ ಭಕ್ತ್ಯು
ಪಾಸನದಿಂದಲೆ ಅಪರೋಕ್ಷನೊ
ಇಂತು ಪ್ರಸನ್ನನು ಮುಕ್ತಿಯನೀವನು
ಎಂಬುವುದೆ ಸರ್ವ ಶಾಸ್ತ್ರಾರ್ಥವೊ ೧೨

ವರನಾಮಗಿರಿ ನರಹರಿಯ ಪಾದಾಂಬುಜ
ನಿರತ ಹೃದಯನಾಗಿ ಅನುದಿನದಿ
ಧರಣಿ ಸುರನು ಇದ ಪೇಳಲು ನರಹರಿ
ಚರಣಕಮಲ ಭಕ್ತಿ ಪೊಂದುವನು ೧೩

೧೧೭

ಬೆಟ್ಟದ ಶೃಂಗವ ಹತ್ತಿ ಧುಮುಕುವೆ ನಾನು
ಕೃಷ್ಣನೇ ಸರ್ವೋತ್ತಮ ಮತ್ತಾರೊಬ್ಬರಿಲ್ಲವೆಂದು ಪ

ಪಂಕಜಾಸನಾಹಿಪ ಶಂಕರಾದಿಗಳು ಹರಿಗೆ
ಕಿಂಕರರು ಮತ್ತು ಇವಗೆ ಪುತ್ರ ಪೌತ್ರರು
'ಏಕೋ ನಾರಾಯಣ ಆಸೀನ್ನಬ್ರಹ್ಮೇ'ತಿ ಶ್ರುತಿಯೊಂದೇ
ಸಾಕೊ ಮತ್ತಿನ್ಯಾಕೆ ಸಂಶಯ ಹರಿ ನೀನೆ ಗತಿಯೆಂದು ೧

'ಯಂಕಾಮಯೇ' ಎಂಬ ಶ್ರುತಿ ಪಂಕಜಾಸನಾನಿಲ
ಶಂಕರರೆಲ್ಲರೂ ಹರಿಕಿಂಕರರು ಸಿರಿಗೆ
ಕಿಂಕರರೆಂಬುದ ನಿಶ್ಶಂಕವಾಗಿ ಪೇಳಲು
ಶಂಕೆ ಯಾಕೊ ಸಲಹೊ ಶ್ರೀ ಪಂಕಜಲೋಚನನೆಂದು ೨

ಜಾನಕಿ ವಿಯುಕ್ತನಾಗಿ ಕ್ಲೇಶಗಳಪಟ್ಟಿರುವ
ಮತ್ತು ಜರಾಸಂಧಗಂಜಿ ಬೆಟ್ಟವೇರಿದನು
ಇತ್ಯಾದಿ ಭ್ರಾಂತಿ ಯಾಕೊ ನಿರವದ್ಯ ನಿರನಿಷ್ಟ
ಎಂಬೊ ಶ್ರುತಿಯನ್ನೆ ನೋಡಿ ನಿರ್ದೋಷನಿದನೆಂದು ೩

ದೇವದತ್ತ ಯಜ್ಞದತ್ತ ಮೊದಲಾದ ಜನರಂತೆ
ಪುರುಷನಾದ ಮೇಲೆ ಇವನಲ್ಪಗುಣನು
ಎಂಬ ದುರ್ಮತಿಯ ಬಿಟ್ಟು ಗುಣಶ್ರುತ ಸವಿರುದ್ಧ
ಎಂಬೋ ಶ್ರುತ್ಯರ್ಥವ ತಿಳಿದು ಹರಿಗುಣಪೂರ್ಣನೆಂದು ೪

ಸೋಮಕುಲಶೇಖರನೆ ಭಾಮಾವಲ್ಲಭ ಬಲ
ರಾಮನಿಗೆ ಸಹೋದರ ಸಾಮಗಪ್ರಿಯ
ಶ್ರೀಮನ್ನಾಮಗಿರಿ ಶ್ರೀ ಸ್ವಾಮಿ ನೃಹರಿಯೆ ವಿದ್ಯಾ
ರತ್ನಾಕರ ಯೋಗಿಯನ್ನು ಹರಿ ನೀನೆ ರಕ್ಷಿಸೆಂದು ೫

ಶ್ರೀ ವಿದ್ಯಾ ಪ್ರಸನ್ನತೀರ್ಥರ
ಕೃತಿಗಳು

ಭಗವಂತನ ಸಂಕೀರ್ತನೆ

೧೧೮

ಅನುದಿನ ನೆನೆಯಲೊ ಹನುಮನಿಗತಿ ಪ್ರಿಯ
ಪರಮ ಪಾವನ ರಾಮನಾಮ ಪ

ಇನಕುಲ ಭೂಷಣ ಮುನಿಜನ ತೋಷಣ
ಜಾನಕಿರಮಣನ ನಾಮ ಅ.ಪ

ಗೌತಮ ಸತಿಯೆ ಪುನೀತಳ ಮಾಡಿ ಪ್ರ-
ಖ್ಯಾತಿ ಪೊಂದಿದ ದಿವ್ಯನಾಮ
ಶೀತಲ ಕಿರಣ ಭೂಷಣನ ಧನುವ ಮುರಿದು
ಸೀತೆಯ ಪೊಂದಿದ ನಾಮ ೧

ಜನಕನ ವಚನವನುಳಿಸುವ ನೆವದಲಿ
ವನವಾಸ ಮಾಡಿದನ ನಾಮ
ವನದಲಿ ಖರದೂಷಣ ಮುಖ ದನುಜರ
ಹನನ ಮಾಡಿದ ದಿವ್ಯನಾಮ ೨

ಶರಭಂಗಮುನಿಗೆ ಪರಮ ಪದವನಿತ್ತ
ಪರಮ ಪವಿತ್ರನ ನಾಮ
ವರಿಸಲು ಬಂದ ಶೂರ್ಪಣಿಖಿ ನಾಸಿಕ ಕರ್ಣ
ಮುರಿಸಿದವನ ಶುದ್ಧ ನಾಮ ೩

ಭೂಮಿಜೆಯನು ಮೋಸದಿಂದ ಅಗಲಿಸಿದ
ಮಾರೀಚನ ಕೊಂದ ನಾಮ
ಸ್ವಾಮಿಯ ಪ್ರೇಮಕ್ಕೆ ಮಡಿದ ಜಟಾಯುಗೆ
ಅಭಯ ಹಸ್ತವನಿತ್ತ ನಾಮ ೪

ಆ ಮಹಾ ಹನುಮನ ಕಾಮಿತದಂತೆ
ಮಹೇಂದ್ರ ಸುತನ ಕೊಂದ ನಾಮ
ಕೋಮಲ ಕಮಲ ಸುಹೃದತನಯನಿಗೆ
ಸಾಮ್ರಾಜ್ಯವನಿತ್ತ ನಾಮ ೫

ಪರಿಪರಿವಾರದಿಂ ಶರಧಿಯೊಳ್ ಸೇತು
ಬಂಧನವ ಮಾಡಿದ ರಾಮನಾಮ
ದುರುಳ ರಾವಣ ಮುಖ ರಕ್ಕಸರನೆ ಕೊಂದು
ಧರಣಿ ಸುತೆಯ ಕಂಡ ನಾಮ ೬

ಶರಣವ ಪೊಂದಿದ ಭಕುತ ವಿಭೀಷಣಗೆ
ಕರುಣವ ತೋರಿದ ನಾಮ
ತರುಣಿ ಸೀತೆ ಲಕ್ಷ್ಮಣರಿಂದ ಕೂಡಿ ಪು
ಷ್ಪಕವನೇರಿದ ಸಾಧು ನಾಮ ೭

ಉರುತರ ತಪದಲಿ ನಿರತನಾದ ತಮ್ಮ
ಭರತನ ಉಳಿಸಿದ ನಾಮ
ದೊರೆತನವೊಂದಿ ಸಕಲ ಸುಜನರುಗಳಿಗೆ
ಪರತರ ಸುಖವಿತ್ತ ನಾಮ ೮

ತನ್ನ ಭಕುತರೊಳು ಉನ್ನತನೆನಿಸಿದ
ಘನ್ನಮಾರುತಿಗೊಲಿದ ನಾಮ ಪ್ರ
ಸನ್ನನಾಗಿ ಸಂತತ ಇವನಿಗೆ ತನ್ನ
ಸಹ ಭೋಗ ಸುಖವಿತ್ತ ನಾಮ ೯

೧೧೯

ಆಟವನಾಡುವ ಬಾರೋ ಶ್ರೀ ಕೃಷ್ಣ ಪ

ನೋಟಕೆ ಜನಗಳ ಕೂಟವು ಕಾದಿದೆ ಅ.ಪ

ದೊರೆಯು ನೀನಂತೆ ದೊರೆಯು ವಾಸಿಸಲು
ಅರಮನೆ ಎಂದಿದನರಿಯಬೇಕಂತೆ
ಪರಿಪರಿಯಲಿ ನಿನ್ನ ಸೇವೆಯು ಮಾಡಲು
ಪರಿಚಾರಕ ನಾನಿರಬೇಕಂತೆ ೧

ತಂದೆಯು ನೀನಂತೆ ತಾಯಿ ರುಕ್ಮಿಣಿಯಂತೆ
ಮಂದಿಗಳೆಲ್ಲರು ಮಕ್ಕಳು ನಿನಗಂತೆ
ಮುಂದೆ ಎಮಗೆ ನಿನ್ನ ದಿವ್ಯ ರಾಜ್ಯದಲಿ
ಒಂದೊಂದು ಭಾಗವ ಬರೆದಿಡಬೇಕಂತೆ ೨

ಬಿಂಬವು ನೀನಂತೆ ಕನ್ನಡಿಯೊಳು ಪ್ರತಿ
ಬಿಂಬವು ನಾನಂತೆ ಯೋಗಿ ಪ್ರಸನ್ನ
ಬಿಂಬದ ವಿಧವಿಧ ಧ್ಯಾನದಿಂದ ಪ್ರತಿ
ಬಿಂಬದಿ ಬಿಂಬವ ನೋಡುವೆನಂತೆ ೩

೧೨೦

ಉಪಕಾರವ ನೋಡೋ ಮಾಡಿದ ಪ

ಕೃಪೆ ಬೇಡುವುದತಿಶಯವೇ ಪೇಳೊ ಅ.ಪ

ಪಾಲಕ ನೀ ಹದಿನಾಲ್ಕು ಜಗಗಳಿಗೆ
ಮೂಲೆಯ ಗ್ರಾಮದಲಡಗಿ ಬೇಸರದಿ
ಕಾಲಕಳೆಯುವುದ ನೋಡಿ ಮರುಕದಲಿ
ಬಾಲ ಮೂರುತಿಯ ಜಗಕೆ ತೋರಿಸಿದ ೧

ಅಡಕು ಮಣೆಗಳಲಿ ಪೂಜೆಯಗೊಳ್ಳುತ
ಒಡಕು ತೊಗರಿ ಹುಳಿಯನ್ನವ ಮೆಲ್ಲುತ
ಬಡತನದಲಿ ಜೀವನ ಕಳೆಯುತಿರೆ
ಪೊಡವೀಶನ ಭೋಗಗಳನು ಉಣಿಸಿದ ೨

ಸುಂದರ ನವ ಮಣಿ ಮಂದಿರ ವಿಧ ವಿಧ
ಅಂದದ ಮುತ್ತಿನ ಹಾರ ಪದಕಗಳು
ತಂದೆ ಪ್ರಸನ್ನನೇ ಸಾಸಿರ ಸಾಸಿರ
ಮಂದಿಗಳಿಗೆ ವೈಭವಗಳ ತೋರಿದ ೩

೧೨೧

ಎಂಥ ಚತುರ ನಿನ್ನ ಮಗನು ಪ

ಎಂಥ ವಂಚಕನೆ ಯಶೋದೆ ಅ.ಪ

ಸದಾನಂದಪೂರ್ಣ ಎಮ್ಮ
ಹೃದಯದಲ್ಲಿಹನೇ ಯಶೋದೆ ೧

ಕಾರ್ಯಾಕಾರ್ಯ ಗಮನವಿಡದೆ
ಧೈರ್ಯದಲಿ ನುಡಿದ ಸರಸವ ೨

ಮುಂದೆ ಗತಿಯ ಕೊಡುವೆ ನಿಮಗೆ
ಎಂದು ಪೇಳಿದೆನೆ ಯಶೋದೆ ೩

ಅಂದ ನುಡಿಗೆ ಮನವ ಜರಿದು
ಸಂಧಿ ಮಾಡಿದೆನೆ ಯಶೋದೆ ೪

ಕ್ಷಿಪ್ರದಲ್ಲಿ ತೋರೆ ಇವನ
ಸುಪ್ರಸನ್ನಮುಖಿ ಯಶೋದೆ ೫

೧೨೨

ಎಂಥಾ ಪುಣ್ಯ ಎಂಥಾ ಭಾಗ್ಯ ಪ

ಕಂತು ಜನಕ ಶ್ರೀಕಾಂತನ ದರುಶನ ಅ.ಪ

ಜಗಜಗಿಸುವ ದಿವ್ಯಾಭರಣಂಗಳ
ಸೊಗಸಿಲಿ ಧರಿಸುತ ನಗುವನ ದರುಶನ ೧

ಹೇರು ಫಲಗಳನು ಸೂರೆಯ ಮಾಡುವ
ಚಾರುವದನ ನಮ್ಮ ಶೌರಿಯ ದರುಶನ ೨

ದೇಶ ತಿರುಗಿ ಆಯಾಸವೇತಕೆ
ಶ್ರೀಶ ಪ್ರಸನ್ನ ಶ್ರೀ ಕೃಷ್ಣನ ದರುಶನ ೩

೧೨೩

ಎಲ್ಲಿರುವುದೋ ಸಿರಿವಲ್ಲಭನೆ ನಿನ
ಗಲ್ಲದ ಕಾರ್ಯಗಳು ಪ

ಕಲ್ಲಾಗಿದ್ದ ಅಹಲ್ಯೆಯ ನಿಮಿಷದಿ
ಚಲ್ವೆಯ ಮಾಡಿದ ನಲ್ಲ ತ್ರಿಭುವನದಿ ಅ.ಪ

ಶರಧಿಯೆ ವಾಸವು ಗರುಡನೆ ವಾಹನ
ಉರಗಪತಿಯೆ ನಿನ್ನ ಪರಿಯಂಕ
ಶರಧಿ ಕುಮಾರಿಯು ವರರಮಣಿಯು ಸುರ
ವೀರರು ನಿನಗೆ ಕಿಂಕರರಾಗಿರಲು ೧

ಕಂಬದಿ ಜನಿಸಿದೆ ಅಂಬಿಗರವಳನು
ಸಂಭ್ರಮದಲಿ ನಿನ್ನ ಜನನಿಯೆನಿಸಿದೆ
ಅಂಬುಜ ಮಿತ್ರನ ತನಯಗೆ ಮರುತನ
ಬೆಂಬಲವರಿಯುತ ಉಳಿಸಿದೆ ಗೆಲಿಸಿದೆ ೨

ಕ್ರಿಮಿಯಿಂದ ರಾಜ್ಯದ ಅಮಿತ ಕಾರ್ಯಗಳ
ಕ್ರಮದಲಿ ನಡಿಸಿದೆ ವಿಮಲ ತನೋ
ಸುಮನಸರೊಡೆಯನೆ ಕ್ಷಮಿಸಿ ಎನ್ನಯ ಮೋಹ
ತಿಮಿರವ ತೊಲಗಿಸೊ ಸುಮನ ಪ್ರಸನ್ನನೆ ೩

೧೨೪

ಏತಕೆ ಈ ಪರಿ ಮೋಸ ವಚನಗಳು
ನಾಚಿಕೆಯಿಲ್ಲವೇನೊ ಕೃಷ್ಣ ಪ

ಯೋಚಿಸುತಿರೆ ನಿನ್ನ ಸತತ ಮನದಲಿ
ಯಾಚಿಸುತಿರುವೆಯೋ ಪರರನ್ನು ಅ.ಪ

ಚಂಚಲತನದಲಿ ನಿನ್ನ ಸೇವಕಳನು
ವಂಚಿಸುತಿರುವುದು ಸರಿಯೇನೊ
ಪಂಚಬಾಣನು ತನ್ನ ಜನಕನಾಗಿಹ ನಿನ್ನ
ಮಿಂಚಿ ನುಡಿಯುವುದು ಅಚ್ಚರಿಯು ೧

ಸಾರಸಲೋಚನೆ ಬೇರೆ ಯೋಚಿಸದಿರು
ಮಾರನು ಎನ್ನಯ ಮೀರುವನೆ
ಜರನೆಂದರಿಯುವ ನಾರೇರಿಗೆನ್ನ ವಿ
ಚಾರವನರುಹಲು ಸೇರಿದೆನು ೨

ಅಂಬುಜಮುಖಿಯರ ಸಂಭ್ರಮದಲಿ ನೀ
ಹಿಂಬಾಲಿಸುತಿರೆ ನಂಬುವೆನೆ
ರಂಭೆಯರವರು ನೀ ಹಿಂಬಾಲಿಸುವೆ
ಡಂಭದ ವಚನವ ನಿಲ್ಲಿಸೆಲೊ ೩

ಪೋತ ನಾನಾಗಿರೆ ಪ್ರೀತಿಯ ನಟಿಸಿದ
ಪೂತನಿಯನುಭವವೆನಗಿಹುದೇ
ಘಾತಕರವರೊ ನೀತಿವಂತರೊ
ಮಾತಿನಂದರಿಯೆ ಹಿಂಬಾಲಿಸಿದೆ ೪

ಲಲನೆಮಣಿಯರ ಜಲವಿಹಾರದ
ಸ್ಥಳಕೆ ನೀನೇತಕೆ ತೆರಳಿದೆಯೊ
ತಿಳಿದು ಇದನು ನಿನ್ನ ಸುಳಿವನು ಅರಿಯಲು
ಸುಲಭವೇನೆಲೊ ಶ್ರೀ ಕೃಷ್ಣ ೫

ಹೊರಗಿನ ರೂಪದಿ ನರರನು ಸುಲಭದಿ
ಮರುಳು ಮಾಡುತಿಹ ತರಳೆಯರು
ಸರಳರೊ ಈ ಜನ ಮರುಳರೊ ಇವರ ಅಂ
ತರಗಳನರಿಯಲು ತೆರಳಿದೆನು ೬

ಅಂತರಂಗಗಳನರಿಯಲು ನಿನ್ನಯ
ತಂತ್ರಗಳೆಲ್ಲವು ನಟನೆಗಳು
ಚಿಂತೆಯ ಪಡದೆ ಸ್ವತಂತ್ರನಾಗಿರುವೆ
ಸಂತಸದಲಿ ಪ್ರಸನ್ನನಾಗೆಲೊ ೭

೧೨೫

ಏನು ವಿನೋದವಿದು ನಮ್ಮ
ಶ್ರೀ ನಿಲಯನ ಗುಣಗಾನ ಮಾಡುವುದು ಪ

ಮಾನಸ ಮಂದಿರದಲಿ ಶ್ರೀ ಕೃಷ್ಣನ
ಕಾಣಲು ಬಯಸುವ ಜನಕೆ ವಿಧಾನ ಅ.ಪ

ಶಾಸ್ತ್ರ ವಿಚಾರ ಶ್ರೋತೃ ವಿಹಾರ
ಶ್ರೋತೃ ಜನಕೆ ಇದು ಪರಮಾಧಾರ ೧

ಶ್ರೀಶನ ನೋಟ ಭೂಸುರ ಕೂಟ
ದಾಸ ಜನಕೆ ಇದು ಭೂವೈಕುಂಠ ೨

ವೇದ ಸುಘೋಷ ವಾದ್ಯದ ಹರ್ಷ
ಸಾಧುಜನಕೆ ಇದು ಬಲು ಸಂತೋಷ ೩

ಸಿಕ್ಕಿತು ಕಾಂತಿ ಹೊಕ್ಕಿತು ಶಾಂತಿ
ಭಕ್ತ ಪ್ರಸನ್ನನು ಬಿಡಿಸಿದ ಭ್ರಾಂತಿ ೪

೧೨೬

ಏನು ಸುಕೃತವೋ ಮಧುರಾ ನಗರಕೆ ಪ

ಗಾನಲೋಲ ಹರಿ ತಾ ನೆಲೆಸಿಹುದು ಅ.ಪ

ವರ ವಿಭವಗಳುಳ್ಳ ಪುರಗಳಂತಿರಲು
ಪರಮ ಪುರುಷ ಹರಿ ವಿರಾಜಿಸುತಿರಲು ೧

ಭೂಪ ನಗರಗಳಿಗೀ ಪರಿಯುಂಟೆ
ಗೋಪಾಲಕ ಹರಿ ಕಾಪಾಡುತಿಹುದು ೨

ಸುಮನಸಪುರವಾದ ಅಮರಾವತಿಗುಂಟೆ
ಕಮಲನಯನ ಹರಿ ಸಮಾಗಮವು ಸದಾ ೩

ದಿವಿಜರೊಡೆಯ ಹರಿ ಭುವಿಯಲಿ ಅರಿಸಿ
ಅವತರಿಸುತ ತನ್ನ ಪ್ರವಾಸಗೈದುದು ೪

ನಿರುಪಮ ಆನಂದಪೂರ್ಣ ಪ್ರಸನ್ನನು
ಪರಿಪರಿ ವಿಧದಲಿ ವಿರಾಜಿಸುತಿರಲು ೫

೧೨೭

ಏಳೊ ಬಾಲನೆ ವೇಳೆ ಮೀರುತಿಹುದು ಪ

ಕೇಳುತಿಹರು ಯದುಮೌಳಿಯೆಲ್ಲಿ ಎಂದು ಅ.ಪ

ಎದ್ದು ಬಾರೆಲೋ ಮುದ್ದು ಬಾಲಕೃಷ್ಣ
ಪದ್ಧತಿಯಲಿ ಕ್ಷೀರ ಸಿದ್ಧವಾಗಿಹುದು ೧

ಜಾಣ ನಿನ್ನಯ ವೇಣುನಾದ ಕೇಳೆ
ಏಣನಯನೆಯರು ಕಾಣ ಬಯಸುತಿಹರು ೨

ಯಮುನಾ ತೀರದಿ ಸುಮಲತೆಗಳಲ್ಲಿ
ಕಮಲನಯನ ನಿನ್ನ ರಮಿಸ ಬಯಸುತಿಹರು ೩

ಮೌನಿಜನರು ತಮ್ಮ ಸ್ನಾನ ಮುಗಿಸಿ ನಿನ್ನ
ಜ್ಞಾನ ಪೊಂದೆ ಗುಣಗಾನ ಮಾಡುತಿಹರು ೪

ನಿನ್ನ ಪ್ರಿಯ ಜನರನ್ನು ಕಾಯಿಸಲು
ಇನ್ನು ತರವೇನೋ ಪ್ರಸನ್ನವದನನಾಗಿ ೫

೧೨೮

ಒಂದು ಪ್ರಾರ್ಥಿಸಲು ನೂರೊಂದು ಕೊಟ್ಟಿಯೊ ದೇವ
ತಂದೆ ನಿನ್ನಯ ಕರುಣವೆಂದಿಗೂ ಇರಲಿ ಪ

ಇಂದು ನೀನಿತ್ತ ನೂರೊಂದು ನಿನ್ನಯ ಪಾದ
ದ್ವಂದ್ವಕರ್ಪಿಸುವೆ ನಿನ್ನಯ ಸೇವೆ ಎಂದೆನುತ ಅ.ಪ

ನಿನ್ನ ಮೂರ್ತಿಯ ನೋಡಿ ನಿನ್ನ ಸ್ತುತಿಯನೆ ಮಾಡಿ
ನಿನ್ನ ಕರದಲಿ ಪಿಡಿದು ಪುಣ್ಯಗಳಿಸಿದೆನೊ
ನಿನ್ನ ಸುಂದರ ರೂಪ ಸತತ ಹೃದಯದಿ ಪೊತ್ತು
ಧನ್ಯನಾಗಿರುವೆನಿನ್ನೇನು ಬೇಕಿಹುದೆನಗೆ ೧

ನಿಟ್ಟುಸಿರು ಬಿಡಿಸಿದೆಯೊ ಹೊಟ್ಟೆಯನು ಸುಡಿಸಿದೆಯೊ
ಕಟ್ಟಕಡೆಯಲಿ ಕರವನಿತ್ತು ಮೇಲೆತ್ತಿದೆಯೊ
ಕಟ್ಟುಬಣ್ಣವಿದಲ್ಲ ಸುಟ್ಟರಿದು ಪೋಗದೊ
ಘಟ್ಟಿಯಾಯಿತು ಎನ್ನ ಪ್ರೇಮ ನಿನ್ನೊಳಗೆ ೨

ಕೆಸರಿನಲಿ ಕಂಬದಂತಿದ್ದ ಎನ್ನಯ ಸ್ಥಿತಿಯು
ಕುಸಿಯಲಿಲ್ಲವೊ ದೇವ ಶಶಿಕುಲ ಪ್ರಸನ್ನ
ಹೊಸದಾದ ಚೈತನ್ಯವೆನಗೆ ವಿಕಸಿತವಾಯ್ತು
ಉಸಿರಿರುವ ತನಕ ನಾ ಮರೆವುದಿಲ್ಲವೊ ನಿನ್ನ ೩

೧೨೯

ಒದಗಿ ಬಂದಿತು ಯೋಗ ಒದಗಿ ಬಂದಿತು ಯೋಗ ಪ

ಪದುಮೆಯರಸನು ರಥದೊಳಿರುವ ದರುಶನ ಭಾಗ್ಯ ಅ.ಪ

ಭುಜಗಶಯನನು ದಿವ್ಯ ರಜತ ರಥದಲಿ ಬರಲು
ಸುಜನರೆಲ್ಲರು ಸೇರಿ ಭಜನೆ ಮಾಡುವ ಭಾಗ್ಯ ೧

ಅಂಗನಾಮಣಿಯರೆ ರಂಗವಲ್ಲಿಯೆ ಎತ್ತಿ
ಮಂಗಳಾಂಗನು ದೀರ್ಘ ಮಾಂಗಲ್ಯವನೆ ಕೊಡುವ ೨

ಬಾಲಕರ ಸಡಗರ ಬಾಲೆಯರ ವೈಯ್ಯಾರ
ಬಾಲ ವೃದ್ಧರು ಸ್ವಾಮಿಯೋಲಗದಿ ಸಹಕಾರ ೩

ಜಯಘೋಷಗಳ ಮಾಡೆ ಭಯಗಳನು ಬಿಡಿರಿ ಮನ
ಬಯಕೆಗಳ ಆನಂದಮಯನು ನೀಡುವ ನಗುತ ೪

ತನ್ನಿ ಫಲಕುಸುಮಗಳ ಧನ್ಯರಾಗಿರಿ
ಕಣ್ಣಾರ ನೋಡಿ ಪ್ರಸನ್ನ ಶ್ರೀ ನಿಲಯನನು ೫

೧೩೦

ಕಂದನ ತೂಗಿದಳು ಯಶೋದೆ ಕಂದನ ತೂಗಿದಳು ಪ

ಇಂದಿರಾರಮಣನ ಅಂದವದನದಲಿ
ಮಂದಹಾಸವ ನೋಡಿ ನಂದದಿ ಹಿಗ್ಗುತ ಅ.ಪ

ತಾಮರಸಾಕ್ಷನ ಕೋಮಲಾಂಗವ ನೋಡಿ
ಆ ಮಹಿಳೆಯು ಬಲು ಪ್ರೇಮಭರಿತಳಾಗಿ ೧

ಜಗಜಗಿಸುವ ನವಮಣಿಯ ತೊಟ್ಟಿಲಲಿ
ಜಗದೀಶನು ತನ್ನ ಮಗನೆಂದು ತಿಳಿಯುತ ೨

ಪದಮನಾಭನನು ಹೃದಯದಿ ನೆನೆಯುತ
ಮದದಿಂದಲಿ ದಿವ್ಯ ಪದಗಳ ಪಾಡುತ ೩

ಲಕ್ಷ್ಮೀಶನು ಇತ್ತ ಪುತ್ರಭಿಕ್ಷೆಯೆಂದು
ಅಕ್ಷಿಗಳಲಿ ಸುಖಬಾಷ್ಪವ ಸುರಿಸುತ ೪

ತನ್ನ ಸೌಭಾಗ್ಯವು ಅನ್ಯರಿಗಾವುದೆಂದು
ಹೆಮ್ಮೆಯಿಂದ ಪ್ರಸನ್ನ ನಂದನ ಸತಿ ೫

೧೩೧

ಕಂಡಿರ ಮಧುರ ನಾಥನ
ಕಂಡವರು ಪೇಳಿ ದಮ್ಮಯ್ಯ ಪ

ದುಂಡು ಮುಖದ ಮೋಹನಾಂಗನು
ಕೊಂಡು ಪೋದನೆಮ್ಮ ಮನವ ಅ.ಪ

ಮಲ್ಲಿಗೆ ತುಳಸಿ ಮಾಲತಿ
ಎಲ್ಲಿ ಪೋದನು ಪೇಳಿ ಕೃಷ್ಣನು
ವಲ್ಲಭನ ಚರಣಗಳಲಿ ನಿಮ್ಮನು
ಸಲ್ಲಿಸಿದ ಹಂಗೆಮ್ಮೊಳಿದ್ದರೆ ೧

ತೋರಿದೆರೆ ನಯನಾಭಿರಾಮನ
ಸೇರುವೆ ಅವನಂಘ್ರಿಯುಗಳಕೆ
ಭೂರಿ ತರದುಪಕಾರ ನಿಮಗೆ ಸ
ತ್ಕಾರ ಬರುವುದು ವಿಧಿಭವರಿಂದ ೨

ಪದ್ಮೆಯರಸನು ನಿಮ್ಮೊಳಿರುವ
ಸುದ್ದಿ ಬಲ್ಲೆವು ತೋರದಿದ್ದರೆ

ಪದ್ಮಸಂಭವ ಪಣೆಯ ಬರಹವ
ತಿದ್ದಿ ಪೇಳಿರಿ ಪದ್ಮಗಳಿರ ೩

ಪಾರಿಜಾತ ಸುಜಾತ ನಂದಕು
ಮಾರ ಮಣಿಯೊಂದನು ಕೊಡಲಾರೆಯ
ಹೇರು ವಿಧ ವಿಧ ರತ್ನ ಮಣಿಗಳ
ಸೂರೆಗೈವ ಅಭೀಷ್ಟಪ್ರದಾತ ೪

ಕೇಳಲೇನುಪಯೋಗವಿವರು
ಪೇಳಲಾರರು ಸುದ್ದಿ ಎಮಗೆ
ತಾಳಲೆಂತು ಪ್ರಸನ್ನ ಕೃಷ್ಣನೆ
ಕೇಳೆಲೆಮ್ಮಯ ಮೊರೆಯ ದಯದಿ ೫

೧೩೨

ಕರಗತನಾಗಿರಲು ಶ್ರೀಕೃಷ್ಣನು ಪ

ಪುರಜನಗಳಿಗಿನ್ನು ಕೊರತೆಗಳುಂಟೆ ಅ.ಪ

ಪರಮದಯದಿ ತನ್ನ ನೆರಳಿನೊಳೆಲ್ಲರ
ಪೊರೆಯುತಿರುವ ನಮ್ಮ ಸಿರಿವಲ್ಲಭನು ೧

ನಾಡಿನ ಭಕುತರ ಕೂಡಿಸಿ ಮುದದಲಿ
ಬೇಡಿದ ವರಗಳ ನೀಡುವ ದೊರೆಯು ೨

ಬಿಡಿಬಿಡಿ ನಿಮ್ಮಯ ಕಡು ಕ್ಲೇಶಗಳೆಂದು
ಗಡಗಡ ದುಂದುಭಿ ಹೊಡೆಸುವ ಧೀರನು ೩

ಪತಿತ ಪಾವನೆಂದು ಪ್ರಥೆಯನು ಪೊಂದಿಹ
ಕ್ಷಿತಿಸುರರೊಡೆಯನು ಅತಿಸುಲಭದಿಲಿರೆ ೪

ಎನ್ನನು ಸೇವಿಸಿ ಧನ್ಯರಾಗಿ ಎಂದು
ಸನ್ನೆಯನೀವ ಪ್ರಸನ್ನ ಶ್ರೀಮಾಧವ ೫

೧೩೩

ಕರದೊಳಿನ ಮಣಿಗೆ ಕನ್ನಡಿಯೇತಕೆ ಪ

ಸಿರಿ ರಮಣನಲತಿ ಸಂಶಯವೇತಕೆ ಅ.ಪ

ಶರಧಿಯ ಜಲವನ್ನು ಪರಿಪರಿ ದೇಶಕೆ
ಬಿರುಗಾಳಿಗಳಿಂದ ದೊರಕಿಸುವನು ಯಾರು
ಧರೆಯೊಳು ನವನಾಗರಿಕರೆಂದರಿಯುವ
ನರರಿಗೆ ಈ ಪರಿ ತರವೆ ಯೋಚಿಸೆಲೊ ೧

ಎಲ್ಲಾ ದೇಶಗಳ ವಿಚಾರ ನೋಟಗಳನ್ನು
ಇಲ್ಲೇ ತೋರಿಸುವಂಥ ನಲ್ಲರು ಇರುವರು
ಎಲ್ಲಿಂದ ಬಂದೆ ಎಲ್ಲಿಗೆ ಹೋಗುವೆ ಎಂದು
ಬಲ್ಲರೇ ಇವರು ತಲ್ಲಣಿಸುತಿಹರು ೨

ಮಾತೆಯ ಕೋಶದೊಳ್ ವಾಸಿಪ ಶಿಶುವನ್ನು
ಘಾಸಿಯ ಮಾಡದೆ ಪೋಷಿಸುವನು ಯಾರು
ಈಶನ ಕರುಣವು ಲೇಶ ತಪ್ಪಿದರೆ
ಆ ಶಿಶುವಿನ ಜೀವದಾಶೆ ಎಂತಿಹುದೊ ೩

ಎಲ್ಲಾ ನಾರಿಯರು ಗರ್ಭ ಧರಿಸುವರೆ
ಎಲ್ಲಾ ಬೀಜಗಳಿಂದ ತರುಗಳು ಬರುವುದೆ
ಬಲ್ಲವರುಂಟೆ ಇದಕೆ ಕಾರಣ ಲಕ್ಷ್ಮೀ
ವಲ್ಲಭನಲ್ಲದೆ ಸಲ್ಲದು ಈ ಪರಿ ೪

ಭಿನ್ನದೇಶಗಳಲ್ಲಿ ಭಿನ್ನ ರೂಪಗಳುಳ್ಳ
ಭಿನ್ನ ಗುಣಗಳುಳ್ಳ ಭಿನ್ನ ಜಂತುಗಳಿಗೆ
ಭಿನ್ನ ಕಾಲಗಳಲ್ಲಿ ಅನ್ನವನೀಯಲು
ಅನ್ಯರಿಗಳವೆ ಪ್ರಸನ್ನನಿಗಲ್ಲದೆ ೫

೧೩೪

ಕರೆದೆಡೆಗೆ ತಾ ಬರುವ ಕರೆದೆಡೆಗೆ ತಾ ಬರುವ ಪ

ಬರುವೆ ತರುವ ಸುಖವ ಮುರುಳೀಧರನು ಅ.ಪ

ತಿಳಿಯ ಭಕುತಿಯ ಪಡೆದ ಜನರಿಗೆ
ಗೆಳೆಯನಿವ ಬಲು ಸುಲಭನು
ಇಳೆಯಸುರರಾದರದಿ ಕರೆಯಲು
ಹರುಷದಲಿ ನಲಿನಲಿಯುತಲಿ ೧

ಸದನದಲಿ ಹದನಿಲ್ಲ ಈತನಿ
ಗೊದಗಿಸುವುದತಿ ಸಾಹಸ
ವಿಧಿಯ ಬರಹವು ಇಲ್ಲವೆನುತಲಿ
ಹೆದರದಿರಿ ಮಧುಸೂಧನನು ೨

ಇದು ನನದು ಇದು ನನದು ಎನುವ
ಮದದ ವಚನಕೆ ನಗುತಲಿ
ಇದು ನಿನದು ಎನ್ನಲು ಪ್ರಸನ್ನನು
ವಿದುರನಾಲಯ ಪೊಕ್ಕಿಹ ೩

೧೩೫

ಕರೆವರು ಬಾ ಮನೆಗೆ ಶ್ರೀ ಕೃಷ್ಣ
ಮೂರ್ಜಗಗಳಿಗೆ ರಾಜಾಧಿರಾಜ ಪ

ರಾಜಿಸುವ ಸೋಜಿಗದ ಬಲು
ಸೋಜಿಗದ ಮನೆಗೆ ಶ್ರೀ ಕೃಷ್ಣ ಅ.ಪ

ಸಾರಸಲೋಚನೆ ಭೀಷ್ಮಕ ಕುವರಿ
ನೂರು ವಿಧದ ಬಲು ಪರಿಮಳದ
ಚಾರು ಕುಸುಮಗಳ ಹಾರವ ಪಿಡಿದು
ಮಾರಜನಕ ನಿನ್ನ ಕೋರುವಳು ೧

ಚಿತ್ತಜನಯ್ಯನ ಚಿತ್ತದ ರಾಣಿ
ಯತ್ನದಿ ನಿನ್ನನು ಕರೆಸಿದಳು
ಚಿತ್ರವಿಚಿತ್ರದ ಮುತ್ತುರತ್ನಗಳ
ಉತ್ತಮ ಪೀಠಕೆ ದಯಮಾಡೊ ೨

ಯದುಕುಲ ನಂದನ ನೀ ಬಾರೋ
ಮಧುರಾನಾಥಾ ನೀ ಬಾರೋ
ಮದಗಜಗಮನದಿ ಬಾರೊ ಪ್ರಸನ್ನ
ವದನೆಯರಾರತಿ ಬೆಳಗುವರು ೩

೧೩೬

ಕವಿಗಳು ಪೊಗಳುವ ವಿವರವ ಪೇಳುವೆ ಪ

ಅವನಿಯೊಳ್ ಕೃಷ್ಣನು ಅವತರಿಸುವ ಕಥೆ ಅ.ಪ

ಸುರರೊಡೆಯನ ದಿವ್ಯ ತರುವನು ಬಲದಲಿ
ಸರಸಿಜನಾಭನು ಧರೆಗೆ ತರುವನೆಂದು
ಅರಿಯುತ ವರ ಸುಮನಸರೆಲ್ಲ
ಕರಗಳಿಂದಲಿ ಸುಮ ಸುರಿದರೆಂದೆನುತಲಿ ೧

ಅಂಬುಜನಾಭನು ಶಿಶುವಾಗಿರಲವನ
ಸಂಭ್ರಮದಲಿ ತನ್ನ ವಶಗೊಳುವುದಕೆ
ತುಂಬುರು ಗಂಧರ್ವರು ಪಾಡಿದರು
ರಂಭೆ ಊರ್ವಶಿಯರು ನೃತ್ಯ ಮಾಡಿದರೆಂದು ೨

ವಾಸುದೇವನು ತನ್ನ ಶಿಶುವೆಂದರಿಯುತ
ವಸುದೇವನ ಬಲು ಆಸೆಗೆ ನಗುತಲಿ
ವಸುಗಳು ದೇವರು ವಾಸುದೇವನು ತಮ್ಮ
ಕೂಸು ಏಕಲ್ಲವೆಂದು ಹರುಷ ಪೊಂದಿದರೆಂದು ೩

ಇಂದುವದನನ ಅಂದವ ನೋಡುತ
ಚಂದ್ರಕಲೆಯರ್ಧ ಕುಂದಿದನೆನ್ನುತ
ಸುಂದರಕೃಷ್ಣನು ಅಂದು ತನ್ನಯ ಕುಲ
ದಿಂದ ಬಂದಿರೆ ಬಲು ನಂದ ಪೊಂದಿದನೆಂದು ೪

ಪನ್ನಗಶಯನನು ಸಣ್ಣ ಕೂಸಾಗಿರೆ
ತನ್ನ ವಿಭುತನಕೆ ಇನ್ನು ಕುಂದಿಲ್ಲವೆಂದು
ಉನ್ನತ ಗಗನ ಪ್ರಸನ್ನನಾಗಿ ದಿವ್ಯ
ಸಣ್ಣ ತಾರೆಗಳಿಂದ ಬೆಡಗು ತೋರಿದ ಕಥೆ ೫

೧೩೭

ಕಾರಣನೇ ಇವನು ಎಲ್ಲಕ್ಕೂ
ಕಾರಣನೇ ಇವನು ಪ

ಕಾರಣನಿವನು ಸಾಧಾರಣನಲ್ಲನು
ಮಾರಮಣನು ಕರುಣಾರಸಮಯನು ಅ.ಪ

ಇಚ್ಛೆಯಿಂದಲಿ ತಾನು ಅಖಿಲ ಜಗ
ತ್ಸೃಷ್ಟಿಯ ಮಾಡುವನು
ಸ್ವಚ್ಛನಾದರು ತನ್ನ ಮೆಚ್ಚಿಗೆಯಿಂದಲಿ
ತುಚ್ಛನೆಂಬೊ ಶಬ್ದ ವಾಚ್ಯನಾಗಿರುವನು ೧

ಎಲ್ಲವ ಬಲ್ಲವನು ಈಶನು
ಇಲ್ಲದ ಸ್ಥಳವಿಲ್ಲ
ಚಿಲ್ಲರೆ ದೈವಗಳೆಲ್ಲರು ಈತನ
ಚೆಲ್ಲಾಟಗಳಿಗೆ ಉಲ್ಲಾಸಿಸುವರು ೨

ಭಿನ್ನರೂಪಗಳಿಂದ ಜಗದೊಳು
ತನ್ನ ಲೀಲೆಯ ತೋರ್ಪ
ಸನ್ನುತ ಭಕುತಗೆ ಮನ್ನಣೆಯಿಂದ ಪ್ರ
ಸನ್ನನಾಗಿ ಉನ್ನತ ಪದವೀಯಲು ೩

೧೩೮

ಕುಣಿ ಕುಣಿಯೆಲೋ ಹರಿಗಾನದಲಿ ಪ

ಅಣಕಿಸುವರೆಂದು ಮನ ಜರಿಯದೆಲೆ ಅ.ಪ

ಅನುಗಾಲವು ಮನಕೊರೆಯುವ
ಅನುತಾಪಗಳ ಕೊನೆಗಾಣಿಸಲು ೧

ಸ್ಥಿರವಲ್ಲವು ನರಜನ್ಮವು
ಸರಿಸಮಯವೆಂದು ಅರಿಯುತ್ತ ಮುದದಿ ೨

ಒಣ ಭೋಗವ ಉಣಲೋಸುಗ
ಹಣಗಳಿಸೆ ಬಲು ದಣಿವುದಕಿಂತ ೩

ಗಾನ ಲೋಲನ ನಾಮ ಮಧುರಸ
ಸಾನುರಾಗದಿಂದ ವಾಸಮಾಡುತಲಿ ೪

ಪನ್ನಗಾರಿವಾಹನ ಹರಿಯು ಪ್ರ
ಸನ್ನನಾಗಲೆಂದು ಸನ್ನುತಿಸುವ ಸದಾ ೫

೧೩೯

ಕುಣಿ ಕುಣಿಯಲೋ ಬಾಲಗೋಪಾಲ ಪ

ಗೋಪಾಲ ನೀರದ ನೀರ ಅ.ಪ

ಯಮುನಾ ತೀರದಿ ಹಿಮಕಿರಣನು ತಾ
ಮಮತೆಯ ತೋರಲು ಬೆಳಗುತಿಹ
ಘಮಘಮಿಸುವ ಈ ಸುಮಗಳು ಸೂಸಿರೆ
ಪ್ರಮದೆಯರೆಲ್ಲರ ಪ್ರೇಮಾಂಗಣದಲಿ ೧

ಗಂಧವ ಮಾರುತ ಬೀರುತಲಿರುವನು
ಇಂದಿರೆ ಕೊಳಲಿನ ರೂಪದಲಿ
ಚಂದದಿ ನಾದವ ತುಂಬಲು ಪರಮಾ
ನಂದವು ಮಾನಸ ಮಂದಿರದಲಿ ನೀ ೨

ಕಾಯವು ರೋಮಾಂಚಿತವಾಯ್ತೊ
ಮಾಯಾವಾದವೊ ಮೋಹಗಳು
ತಾಯಿ ಮಡಿಲು ಸೇರಿದ ಶಿಶುವಂದದಿ
ಹಾಯವೆನಿಸಿತೊ ಜೀವನ ಯಾತ್ರೆಯು ೩

ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ ಬಿಡಿಸೊ
ಸ್ವಾಮಿ ನಿನ್ನಯ ಪಾದಯುಗಳವೆ ಕ್ಷೇಮವೆನ್ನಿಸೊ
ಸಾರಾಸಾರ ವಿವೇಕದಿ ಮೋಕ್ಷದ ಕೋರಿಕೆ ಪುಟ್ಟಿಸೊ
ನಾರಾಯಣ ನಿನ್ನ ಕರುಣದಿ ಭವ ಪಾರ ಸೇರಿಸೋ ೪

ಸಾರದ ಕರುಣಕೆ ಕಾರಣ ಬಿಂಬದ ಮೂರುತಿ ದರುಶನವು
ಭಾರತಿ ರಮಣನ ಮಂಗಳಶಾಸ್ತ್ರ ವಿಚಾರವೆ ಕಾರಣವು
ಭಕುತ ಜನ ಪ್ರಸನ್ನ ಲಕುಮಿರಮಣ ಎನ್ನು
ತಕಿಟ ತಕಿಟ ಎಂದು ೫

೧೪೦

ಕೇಶವ ಕೇಶವನೆಂದು ನುಡಿಯಲು
ಈ ಸಂಸಾರವ ಕ್ಲೇಶ ತೊಲಗುವುದು
ಮಾಧವ ಮಾಧವನೆಂದು ನುಡಿಯಲು
ಮಾದರಿಯಲ್ಲಿದ ಮೋದವ ಪೊಂದುವಿ ೧

ಗೋವಿಂದ ಗೋವಿಂದನೆಂದು ನುಡಿಯಲು
ಎಂದಿಗೂ ತೋರದ ನಂದವ ಪೊಂದುವಿ

ವಾಮನ ವಾಮನನೆಂದು ಪೊಗಳಲು
ತಾಮಸವಿಲ್ಲದೆ ಕಾಮಿತ ಪೊಂದುವಿ ೨

ಶ್ರೀಧರ ಶ್ರೀಧರನೆಂದು ನುಡಿಯಲು
ಈ ಧರೆಯೊಳು ನಿನಗೆ ಖೇದವೆಲ್ಲಿಯದು
ಅಚ್ಯುತ ಅಚ್ಯುತನೆಂದು ಪೊಗಳಲು
ಉಚ್ಚ ಕುಲದಿ ನೀ ಮೆಚ್ಚಿಗೆ ಪೊಂದುವೆ ೩

ನರಹರಿ ನರಹರಿಯೆಂದು ನುಡಿಯಲು
ಪರತರ ಸುಖವನು ನಿರುತವು ಪೊಂದುವಿ
ಶ್ರೀ ಕೃಷ್ಣನೆಂದು ಪೊಗಳಲು
ಕಷ್ಟವಿಲ್ಲದೆ ನೀ ಇಷ್ಟವ ಪೊಂದುವಿ ೪

ರಾಘವ ರಾಘವನೆಂದು ಪೊಗಳಲು
ನೀಗುವೆ ಸುಲಭದಿ ಅಘಗಳೆಲ್ಲವನು
ಭಾರ್ಗವನೆನಲು ಪ್ರಸನ್ನನಾಗಿ ಹರಿ
ದುರ್ಗಮ ಮೋಕ್ಷಕೆ ಮಾರ್ಗವ ತೋರುವ ೫

೧೪೧

ಕೇಳೇ ಯಶೋದೆ ನಿನ್ನ ತನಯನ ಲೀಲೆಯ
ಪೇಳಲು ಅಳವಲ್ಲವೇ ಪ

ಬಾಳುವ ಸತಿಯರ ಧಾಳಿ ಮಾಡುವ ಯದು
ಮೌಳಿ ಶ್ರೀ ಕೃಷ್ಣಗೆ ಪೇಳೀ ವಿವೇಕವ ಅ.ಪ

ಇಂದುವದನ ಎಮ್ಮ ಮಂದಿರಗಳ ಪೊಕ್ಕು
ಪೊಂದುವ ಪಾಲ್ಬೆಣ್ಣೆಯ

ಇಂದು ಸಿಕ್ಕಿದನೆಂದು ಕರಗಳಿಂ ಪಿಡಿಯಲು
ಮಂದಹಾಸವ ಬೀರಿ ಮನವ ಸೋಲಿಸುವನು ೧

ನೀರಿಗೆ ಪೋಗಲು ಯಾರೂ ಇಲ್ಲದ ವೇಳೆ
ಸೇರುವ ಎಮ್ಮೊಡನೆ
ಮೀರಿ ಪೋಗಲು ಕಾಲು ಬಾರದ ಎಮ್ಮೊಳು
ಸಾರಸಾಕ್ಷ ಕೃಷ್ಣ ಸರಸವ ತೋರುವ ೨

ನಿನ್ನ ತನಯ ಪ್ರಸನ್ನ ಶ್ರೀಕೃಷ್ಣನು
ಅನ್ಯಾಯಕಾರನಮ್ಮ
ಚನ್ನಾಗಿ ಇವನಿಗೆ ಬುದ್ಧಿ ಕಲಿಸದಿರೆ
ಬೆನ್ನು ಹತ್ತುವೆವು ಕನ್ಯೆಯರೆಲ್ಲರು ೩

೧೪೨

ಕೋಪವೇನೋ ಕೃಷ್ಣ ಕೋಪವೇನೊ
ಪಾಪಿ ಜನಗಳಿಗೆ ನಿನ್ನ ರೂಪವ ತೋರಿದೆನೆಂದು ಪ

ಪೇಳು ಕೃಷ್ಣ ನಿನ್ನ ಕೇಳುವೆನೊ
ಗಾಳಿ ಚಳಿಮಳೆಗಳಲಿ ನಿನ್ನ ಧಾಳಿಯ ಮಾಡಿದೆನೆಂದು ೧

ಸುಳ್ಳಿದಲ್ಲ ಕೃಷ್ಣ ಒಲ್ಲೆನೆಲ್ಲ
ಹಳ್ಳ ಕೊಳ್ಳಗಳಲಿ ನುಗ್ಗಿ ಹಳ್ಳಿ ಹಳ್ಳಿಗೆ ತೋರಿದೆನೆಂದು ೨

ಗುಟ್ಟಿದಲ್ಲ ಕೃಷ್ಣ ಬಿಟ್ಟಿದ್ದಲ್ಲ
ಹೊಟ್ಟೆಪಾಡಿಗಾಗಿ ನಿನ್ನ ರಟ್ಟುಮಾಡಿ ದಣಿಸಿದೆನೆಂದು ೩

ನಿನ್ನ ತ್ಯಾಗ ಕೃಷ್ಣ ಎನ್ನ ಯೋಗ
ಮನ್ನಿಸಲಾರೆಯ ದಯದಿ ಚಿನ್ಮಯ ಪ್ರಸನ್ನ ಕೃಷ್ಣ ೪

೧೪೩

ಕೋಸಲಾಧಿಪ ಶುಭವನು ದಾಶರಥೇ ಪ

ದಾಸನಲ್ಲಿ ಕೃಪಾಲೇಶವ ಬೀರೆಲೊ ಅ.ಪ

ಹರನ ಚಾಪವ ಮುರಿದು ಸ್ವಯಂ
ವರದಿ ಜಾನಕಿ ಕರವ ಪಿಡಿದು
ಸುರನರರನು ಹರುಷಪಡಿಸಿದ
ಸರಸಿಜಲೋಚನ ಕಾಯೊ ಕರುಣದಲಿ ೧

ವನವ ಸೇರಿ ಮುನಿಗಳ ಶಂ
ಸನವ ಪೊಂದಿದ ಜಾನಕೀಪತಿ
ಮುನಿದು ದುರುಳರ ಹನನ ಮಾಡಿದ
ಹನುಮನಿಗೆ ದರುಶನವಿತ್ತ ೨

ವಾನರಬಲದಿಂದ ಕೂಡಿ
ವನದಿ ಬಂಧಿಸಿ ಲಂಕೆ ಸೇರಿದ
ಶಾನನ ಮುಖರನು ಕೊಂದು
ಜಾನಕಿಯಲಿ ಪ್ರಸನ್ನನಾದ ೩

೧೪೪

ಗಾನಕೆ ಸುಲಭವು ರಾಮನಾಮವು
ಗಾನಕೆ ಅತಿ ಸುಲಭ ಪ

ದೀನಜನಕೆ ಬಲು ಸಾನುರಾಗನಾದ
ಜಾನಕಿನಾಥನ ದಿವ್ಯನಾಮವು ಅ.ಪ

ತಾಳ ತಂಬೂರಿ ಮೃದಂಗಗಳಿಂದಲಿ
ಪೇಳುವವರಿಗೆ ರಘುಮೌಳಿಯ ನಾಮವು ೧

ಘೋರ ಕಲುಷಗಳ ಪಾರಗಾಣಿಸಿ ಮನ
ಕೋರಿಕೆಗಳನೀವ ತಾರಕ ನಾಮವು ೨

ತಾಪಸ ಸತಿಯಳ ಶಾಪವ ಬಿಡಿಸಿದ
ಭೂಪ ದಾಶರಥಿ ದಿವ್ಯನಾಮವು ೩

ಲಂಕೆಯ ಪೊಕ್ಕು ನಿಶಾಚರನ ಕೊಂದು
ಪಂಕಜಾಕ್ಷಿ ಆತಂಕ ಕಳೆದ ನಾಮ ೪

ಎನ್ನವರೆಲ್ಲರು ಬನ್ನಿರಿ ಎನ್ನುತ
ತನ್ನೊಡನೊಯ್ದು ಪ್ರಸನ್ನರಾಮನ ನಾಮ ೫

೧೪೫

ಗಾನ ವಿಲೋಲನ ನಾಮ ಸುಧಾರಸ
ಪಾನಮಾಡು ಸತತ ಪ

ಹೀನ ಮನವ ಬಿಟ್ಟು ಸಾನುರಾಗದಿಂದ
ಜಾನಕಿ ವಲ್ಲಭ ಆನಂದಮಯನೆಂದ ಅ.ಪ

ಉಡಿಗೆ ತೊಡುಗೆಗಳ ಸಡಗರವೆಲ್ಲವು
ಕಡು ದು:ಖ ದೇಹವು ನಡುಗುವತನಕ
ನಡುಗಲು ದೇಹವು ಮಡದಿ ಮಕ್ಕಳುಗಳು
ಒಡೆಯನಾದರು ನಿನ್ನ ಸಿಡುಗುಟ್ಟುವರು ೧

ಹಸಿವು ಬಾಯಾರಿಕೆ ಶಿಶು ಮೋಹಗಳಿಂದ
ಪಶುಪಕ್ಷಿಗಳೆಲ್ಲ ನಿನಗೆ ಸಮ
ವಸುಧೆಯೊಳಗೆ ನಿನಗೆ ಅಸಮ ವಿವೇಕವ
ಬಿಸಜಾಕ್ಷನೀಯಲು ಸುಸಮಯವೆಂದರಿತು ೨

ತನ್ನನು ನೆನೆಯಲು ಘನ್ನ ಮಹಿಮೆ ಪ್ರ
ಸನ್ನ ಮೂರುತಿಯು ಎನ್ನವನೆಂದು
ನಿನ್ನಪರಾಧವ ಮನ್ನಿಸಿ ಸಲಹುವ
ಚಿನ್ಮಯ ಮೂರುತಿ ಬಿನ್ನೈಸುವೆನೆಂದು ૩

೧೪೬

ಗಾನ ಹರಿನಾಮ ಕೀರ್ತನೆಯ ಗಾನ
ಪರಮಾದರವಿದ್ದರೆ ಗಾನ ಪ

ಗಾನದಿಂದ ಹರಿಯುವ ಬಾಷ್ಪಾಂಜಲಿ
ಭಾನುವಂಶ ಶೇಖರಿನಿಗುಪಾಯನ ಅ.ಪ

ಗಾನರಸದ ಮಜ್ಜನದಿಂದಲಿ ಮನ
ಕಾಣಲು ಶಮದಮ ಸುಖಗಳನು
ಮೀನ ಕೂರ್ಮ ಮೊದಲಾದ ರಮೇಶನ
ನಾನಾ ಲೀಲೆಗಳನ್ನು ಪೊಗಳುವುದೇ ೧

ನಾರಿಯ ಸೌಂದರ್ಯಕೆ ಮಾಂಗಲ್ಯವು
ಕಾರಣವಾಗುವ ತೆರದಲ್ಲಿ
ಹೇರಳ ಗಾಂಭೀರ್ಯವ ರಸಪುಂಜಕೆ
ಬೀರುವ ಶೌರಿಯ ಮಧುರನಾಮಗಳೆ ೨

ಆದಿವ್ಯಾಧಿ ಜನನಾದಿ ವಿರೋಧದ
ಬಾಧೆಯ ಕಳೆಯುವ ಔಷಧಿಯು
ಮಾಧವ ಮಧುಸೂಧನ ಶ್ರೀಧರಪರ
ಬೋಧ ಪ್ರಸನ್ನನ ಮಧುರ ನಾಮಗಳೇ ೩

೧೪೭

ಗೋವಿಂದ ಈ ವಿಧ ಸಂಭ್ರಮ ನೋಡುವುದಾನಂದ ಪ

ನೋಡಿ ಈ ವಿಧ ಚಂದ ನೋಡಬಾರದೊ ಬೇರೊಂದ ಅ.ಪ

ಉತ್ತಮ ಕಲ್ಪದ ಮುತ್ತುರತ್ನಗಳು
ಹತ್ತಾರೆಡೆಗಳಲಿ
ಉತ್ತಮ ತೀರ್ಥರ ಚಿತ್ತದ ಮೂರುತಿ
ಪುತ್ಥಲಿ ರೂಪದಿ ಮತ್ತೆಲ್ಲಿರುವುದೊ ೧

ಕಾಲ ನಿಯಾಮಕ ಕಾಲದ ಗತಿಯನು
ಪಾಲಿಸುವುದೇ ತರವು
ಮೂಲೆ ಮೂಲೆ ಕ್ಷೇತ್ರಗಳನೆ ಬಿಟ್ಟು ಈ
ಮೂಲ ಮಂದಿರಕೆ ಬಂದಿರುವಂತಿದೆ ೨

ಚಂದ್ರನ ಕುಲದಲಿ ಜನಿಸಿದ ದೇವಗೆ
ಚಂದ್ರಿಕೆಯಲ್ಲವೆ ಪ್ರಿಯತಮವು
ಚಂದ್ರಿಕಾ ಸೊಬಗಿಲಿ ಮೆರೆದು ನಲಿದ ಶ್ರೀ
ಚಂದ್ರಿಕಾಚಾರ್ಯ ಪ್ರಸನ್ನನ ವೈಭವ ೩

೧೪೮

ಗೋವಿಂದ ಗೋವಿಂದ ಗೋವಿಂದನೆನ್ನಲು ಪ

ಏನೆಂದು ಪೇಳಲಿ ಆನಂದವನು ನಾ ಅ.ಪ

ಹಸಿವು ತೋರದೆನಗೆ ತೃಷೆಯು ತೋರದೆನಗೆ
ಹೊಸ ಹೊಸ ಪರಿ ನಾಮರಸವ ಸೇವಿಸುತಿರೆ ೧

ದ್ವೇಷವು ತೋರದು ರೋಷವು ತೋರದು
ಶೇಷಶಯನ ನಿನ್ನ ಹರುಷದಿ ಪೊಗಳಲು ೨

ಭಯವು ತೊಲಗುವುದು ಜಯವು ತೋರವುದು
ನಯನಗಳಲಿ ಸುಖ ಜಲವು ಸುರಿಯುವುದು ೩

ಎಂದಿನ ಪುಣ್ಯವೊ ಇಂದರಿತೆನು ಗೋ–
ವಿಂದನಾಮ ಮಕರಂದದ ಸವಿಯನು ೪

ನಿನ್ನ ಸುಕರುಣದ ಚಿನ್ಹೆ ಕಾಣಿಸಿತು ಪ್ರ
ಸನ್ನನಾಗುವಿಯೆಂದು ಚೆನ್ನಾಗಿ ಅರಿತೆನು ೫

೧೪೯

ಚೇಷ್ಟೆಯನು ಮಾಡದಿರೊ ಕೃಷ್ಣ ನೀ ಪರಿ ಬಹಳ
ನಿಷ್ಠುರದ ವಚನಗಳನಾಡುವರು ಜನರು ಪ

ಎಷ್ಟು ತಪವನೆ ಮಾಡಿ ಪಡೆದೆನೊ ನಾನಿನ್ನ
ಕಷ್ಟವಾಯಿತು ನಿಂದೆ ನುಡಿಯ ಕೇಳುವುದು ಅ.ಪ

ಕೊಂಡು ಪೋಗಲಿ ಬೆಣ್ಣೆ ಪಾಲು ಧದಿ ಭಾಂಡಗಳ
ದುಂಡು ನಗುಮೊಗ ಚೆಲುವ ನಿನ್ನ ಮಗನು
ಕಂಡರೆಮ್ಮನು ಮೋರೆ ತಿರುಗಲೇಕೆ ಇಂಥಾ
ಪುಂಡು ಹುಡುಗನೆ ನಿನ್ನ ಮಗನೆಂದು ದೂರುವರು ೧

ಮುರಳಿ ನಾದವ ಕೇಳಿ ಮರೆತು ಮೇವನು ಎಮ್ಮ
ತುರುಕರುಗಳೆಲ್ಲ ಬಲು ಕೃಶವಾದವಮ್ಮ
ಹರಿವ ಯಮುನಾಜಲದೊಳ್ ಆದ ಅವಿವೇಕವನು
ಅರುಹಲೆಮ್ಮಯ ಮನವು ಜರಿವುದೆಂದಾಡುವರು ೨

ಸಂಸಾರ ಮೋಹವನು ತೊರೆದು ಎನ್ನಲಿ ಮನದ
ಸಂಶಯವ ಬಿಡಿ ಬಿಡಿ ಪ್ರಸನ್ನರಾಗಿರಿ ಎಂದ
ಧ್ವಂಸವಾಯಿತು ಎಮ್ಮ ಅಭಿಮಾನ ಇವ ಚಂದ್ರ
ವಂಶಕೆಂತಹ ಕೀರ್ತಿ ತಂದನೆಂದಾಡುವರು ೩

೧೫೦

ಜೋ ಜೋ ಸುಖಸಾರ ಪ

ಜೋ ಜೋ ಜೋಜೋ ದೋಷ ವಿದೂರ ಅ.ಪ

ಸುಮ್ಮನೆ ಸಾಗೆಲೊ ಮುಂದೆ
ನಮ್ಮ ಮಗುವು ತಾ ಮಲಗಿಹನಿಂದು
ನಿಮ್ಮ ಮಂದಿಗೆ ಈ ಶಿಶುವು
ಬೊಮ್ಮನು ಫಣಿಯಲಿ ಬರೆದಿಹನೇನೊ ೧

ನಿದ್ರೆಯ ಸುದ್ದಿಯ ಕಾಣದ ನಾನು
ನಿದ್ರೆಯ ಮಾಡುವ ಸಡಗರವೇನು

ಮುದ್ದು ಮಾತುಗಳಲಿ ಫಲವೇನು
ನಿದ್ರೆ ನಾ ಮಾಡಲು ಎದ್ದಿರುವರ್‍ಯಾರು ೨

ನಿದ್ರೆ ಮಾಡುವುದೆಂತು
ನಿದ್ರೆಯಿಂದೆನಗೆ ಫಲವೆಂತಮ್ಮ

ಬೇಕಾದ ಜೋಗುಳ ಪಾಡುವೇನೊ
ಏಕಮನದಿ ನೀ ಪ್ರಾಜ್ಞನ ಕೂಡೊ
ಸ್ವೀಕರಿಸಿದ ದಧಿ ಕ್ಷೀರಗಳು
ನಾಕು ನಿಮಿಷದಲಿ ಜೀರ್ಣವಾಗುವುವೊ ೩

ಕಣ್ಣನು ಮುಚ್ಚಿದೆ ಪ್ರಾಜ್ಞ ನಾನು
ಚನ್ನಾಗಿ ತಬ್ಬಿದೆ ನೋಡಮ್ಮ
ಎನ್ನಯ ಕುಕ್ಷಿಯು ಬರಿದಾಯ್ತು
ಇನ್ನು ಪ್ರಸನ್ನಳಾಗುಣಬಡಿಸಮ್ಮ ೪

೧೫೧

ಜ್ಞಾನಾನಂದ ಸ್ವರೂಪ ಭಾನುಕೋಟಿ ಪ್ರದೀಪ
ನಾನಾದೋಷ ನಿರ್ಲೇಪ ಮೀನ ರೂಪ ಪ

ಏನು ಅರಿಯದ ದೀನ ಭಕುತನಿಗೆ
ಸಾನುರಾಗದಿ ಜ್ಞಾನವನೀಯೋ ಅ.ಪ

ನಿಗಮಗಳೆಲ್ಲವು ಬಗೆ ಬಗೆಯಿಂದ ನಿನ್ನ
ಅಗಣಿತ ಗುಣಗಳ ಪೊಗಳುತಲಿದ್ದರು
ಸಿಗದ ನಿನ್ನ ನಾನು ಪೊಗಳಲಳವೆ ಪೇಳೊ
ಜಗದೊಳಖಿಲ ಭೋಗಗಳಾಸೆ ಮುಗಿದವು

ಸಿರಿಯರಸನೆ ನಿನ್ನ ಚರಣಕಮಲದಲಿ
ಪರತರ ಭಕುತಿಯ ದೊರಕಿಸೆಲೊ
ಸರಸಿಜ ಜನಕನೆ ಮರೆತಪರಾಧವ
ಕರುಣದಿಂದಲಿ ಎನ್ನ ಕರಗಳ ಪಿಡಿಯೋ ೧

ಒಂದು ದಿನವು ಸುಖ ಗಂಧವನರಿಯದೆ
ಮುಂದು ತೋರದೆ ಭವ ಸಿಂಧುವದನನೆ
ತೊಂದರೆ ಪಡುತಿಹೆ ಸುಂದರ ವದನನೆ
ತಂದೆ ಎನಗೆ ನೀನೆ ಬಂಧುವೆನಗೆ ನೀನೆ
ಮಂದ ಬುದ್ಧಿಯಲಿ ನಿಂದ್ಯನಾದೆನಗೆ
ಕುಂದು ಸಹಸ್ರವು ಸಂಧಿಸಿತು
ಇಂದು ಮನಕೆ ಆದ ತಂದುಕೊಳ್ಳದೆಲೆ
ಮಂದಹಾಸದಲಿ ಬಂದೆನ್ನ ಪೊರೆಯೋ ೨

ಹಿತವೆಂದು ಭವವನು ಅತಿ ಮೋಸಹೋದೆನು
ಮತಿಗೆಟ್ಟು ನಿನ್ನನು ಸ್ತುತಿಸಲಿಲ್ಲವೊ ನಾನು
ಮಿತಿಮೀರುತಿರಲೆನ್ನ ಸ್ಥಿತಿಯ ನೀನರಿಯುತ
ಮತಿ ಬೇರೆ ಮಾಡಿ ಮರೆತೆಯೇನೊ ಶ್ರೀಪತೆ
ಕ್ಷಿತಿಯೊಳೆನಗೆ ಗತಿ ಇತರರ ಕಾಣೆನೋ
ಪತಿ ನೀನಿರೆ ವಸುಮತಿಯೊಳಗೆ
ಪತಿತಪಾವನನೆ ಪ್ರಸನ್ನನಾಗಿ ದಿವ್ಯ
ಸತತ ಸುಖಕೆನಗೆ ಪಥವನು ತೋರೊ ೩

೧೫೨

ತುಂಗ ಭುಜಂಗನ ಫಣೆಯಲಿ ಕುಣಿದನು ಪ

ಮಂಗಳ ಮೂರುತಿ ರಂಗ ಶ್ರೀ ಕೃಷ್ಣನು ಅ.ಪ

ಕಿಣಿ ಕಿಣಿ ತಾಳ ಝೇಂಕರಿಸುವ ತಂಬೂರಿ
ಕಣ ಕಣವೆಂಬ ಸುನಾದ ಮೃದಂಗವ
ಝುಣಿ ಝುಣಿಸುವ ಕಂಜರಿ ನಾದಗಳನು
ಅನುಸರಿಸುತ ಧಿಕ್ಕಿಟತ ಧಿಕ್ಕಿಟ ಎಂದು ೧

ಗಗನವ ತುಂಬಿ ತುಂಬುರು ಗಂಧರ್ವರು
ಶಹನ ಅಠಾಣ ಶಂಕರಾಭರಣಗಳಿಂದ
ಸೊಗಸಿನಿಂದಲಿ ಗುಣಗಾನವ ಮಾಡಲು
ನಗಧರ ಕೃಷ್ಣನು ನಗು ಮೊಗದಿಂದಲಿ ೨

ಪನ್ನಗ ಸತಿಯರು ಚಿನ್ನರ ತವಕದಿ
ಸನ್ನುತಿಸುತ ಆರತಿಯ ಬೆಳಗುತಿರೆ
ಉನ್ನತ ಗಗನದಿ ಸುಮನಸರೆಲ್ಲ ಪ್ರ
ಸನ್ನ ಹರಿಗೆ ಸುಮಮಳೆಗರೆಯುತಲಿರೆ ೩

೧೫೩

ದರುಶನವನು ಕೊಡೆಲೊ ದೇವ ಪ

ಸರಸಿಜ ಮಿತ್ರನು ಮೂಡೆ ಪ್ರಾರ್ಥಿಸುವೆನು ಅ.ಪ

ತುಂಗಾ ಕೃಷ್ಣ ಕಾವೇರಿ
ಗಂಗೆ ಯಮುನೆ ಗೋದಾವರಿ ನರ್ಮದಾ
ಮಂಗಳ ನದಿಗಳು ಕಾದುಕೊಂಡಿರುವುವು
ರಂಗ ನಿನ್ನ ಚರಣಂಗಳ ಸೇವೆಗೆ ೧

ಜಗವನುದ್ಧರಿಸಿದ ಸುಂದರ ನಿನ್ನಯ
ಮೊಗವನು ನೋಡುತ ಸಂಭ್ರಮದಿ
ಬಗೆ ಬಗೆ ಹೈಮವಸ್ತ್ರಗಳನು ಧರಿಸುತ
ನಗವೃಂದವು ಕಾದಿರುವುದು ದೇವ ೨

ತರುಲತೆಗಳು ಕಾದಿರುವುದು ಪೂಮಳೆ
ಗರೆಯಲು ನಿನ್ನಯ ಶಿರದಲ್ಲಿ
ಪರಮಹಂಸರುಗಳು ಕರದಲಿ ಜಪಮಣಿ
ಧರಿಸಿ ಜಪಿಸುವರೊ ಕರುಣಾ ಪ್ರಸನ್ನನೆ ೩

೧೫೪

ದಾತ ನೀನಿರಲಾತರ ಬಡತನವೊ
ಶರಣಾಗತ ಸುಜನರ ದಾತ ನೀನಿರಲಾತರ ಬಡತನವೊ ಪ

ಸೋತು ಮನವನು ವಿಷಯಗಳಲಿ ಬಲು
ಕಾತರನಾಗದೆ ವಾತ ಕುಮಾರರ
ನೀತಿಗಳರಿಯುತ ಧಾತಪಿತನ ಗುಣ
ಜಾತಗಳಲಿ ಅತಿ ಪ್ರೀತಿ ಪಡೆಯುವರ ಅ.ಪ

ತಾನು ತನ್ನವರೆನ್ನುವ ಮೋಹದಲಿ
ಅನುದಿನದಲಿ ಮುಳುಗಿಹ
ಮಾನವರಿಗೆ ಧನಾರ್ಜನೆಯು ಕ್ಲೇಶ
ಜಾನಕೀಶನೆ ನೀನಲ್ಲದೆ ಎನ
ಗೇನು ರುಚಿಸದು ಎಂದರಿಯುತ ನಿನ್ನ
ಜ್ಞಾನ ಪಡೆಯಲು ಸತತ ಶ್ರವಣ
ಮನನಾದಿಗಳ ಸುಖವರಿತ ಸುಜನರಿಗೆ ೧

ಪಾಡುಪಡುತಲಿ ಧನವ ಬಹಳ ಗಳಿಸಿ
ನೋಡುತಲದ ಹಿಗ್ಗುತ
ಗೂಢತನದಲಿ ದಿನದಿನ ನೇವರಿಸಿ
ಕಾಡುವಾ ನರನಂತೆ ಜೀವನ

ಮಾಡುವುದು ಕಡು ಬಡತನವಲ್ಲವೆ
ತೋಡಿ ಗಿರಿಯನು ಇಲಿಮರಿಗಳ ಹಿಡಿ
ದಾಡುವಂತಹ ಮೂಢ ನಾನಲ್ಲವೊ ೨

ನಿನ್ನ ಗಾನವೆ ವಿವಿಧ ಸುರಸ ಪಾನ
ಅವಿಚಾಲಿತ ಮನದಲಿ
ನಿನ್ನ ಧ್ಯಾನವೆ ನವಮಣಿ ಸೋಪಾನ
ನಿನ್ನ ಪೂಜೆಯ ಮಂದಿರವೆ ಎನ
ಗುನ್ನತದ ಉಪ್ಪರಿಗೆಯ ವಾಸವು
ನಿನ್ನ ಸೇವೆಯ ಸುಖತಮ ಭೋಗಗ
ಳೆನ್ನುವರಿಗೆ ಪ್ರಸನ್ನನಾಗುವ ೩

೧೫೫

ದೂರದಿ ನಿಲ್ಲೆಲೆ ಬಾಲೆ ಎನ್ನ
ಜಾರನು ಎಂದು ತಿಳಿದೆಯಾ
ಜಾರೆ ಅಹಲ್ಯೆಯ ನಾರಿ ಮಾಡಿದ
ಬ್ರಹ್ಮಚಾರಿಯೆಂದರಿತೆನೊ ೧

ಅಂಗಸಂಗ ಯಾಚಿಸಲು ಎನ್ನ ಅ
ನಂಗನೆಂದು ಭ್ರಮಿಸಿದೆಯಾ
ಸಂಗದಿಂದ ಪಾಪಭಂಗ ಮಾಡುವ ಅ
ನಂಗಜನಕನೆಂದರಿತೆ ೨

ಪತಿಯನು ಬಿಟ್ಟು ನೀ ಬಂದು ಬಾಲೆ
ಪತಿತಳಾಗದಿರು ಇಂದು
ಪತಿತ ಪಾವನ ಜಗತ್ಪತಿಯು ಎನಗೆ ನೀನೆ
ಪತಿಯೆಂದು ತಿಳಿದು ಬಂದಿರುವೆ ೩

ನಿಂದಿಸರೇ ನಿನ್ನ ಜನರು ಬಾಲೆ
ಹಿಂದು ಮುಂದು ನುಡಿಗಳಲಿ
ಮುಕುಂದನ ಪ್ರಿಯಳನು ನಿಂದಿಪ ಜನರೆಲ್ಲ
ಮಂದಮತಿಗಳಲ್ಲವೇನೊ ೪

ನಿನ್ನ ನಡತೆ ತರವಲ್ಲ ಬಾಲೆ
ಚೆನ್ನಾಗಿ ಯೋಚಿಸು ಎಲ್ಲ
ಇನ್ನು ತಾಳಲಾರೆ ಕನ್ಯೆಯ ಮೇಲೆ ಪ್ರ
ಸನ್ನನಾಗೋ ಶ್ರೀಕೃಷ್ಣ ೫

೧೫೬

ದೃಷ್ಟಿ ದೋಷವು ತಗಲಿತೆನ್ನ ಕಂದನಿಗೆ ಪ

ದೃಷ್ಟಿಗೋಚರನಲ್ಲದಾ ದೇವ ರಕ್ಷಿಸಲು ಅ.ಪ

ಸೇರು ಬೆಣ್ಣೆಯ ತಿಂದು ದೂರು ಕೇಳಿದೆನಿಂದು
ಚಾರು ಮುಖಿಯರ ನೋಟ ಕ್ರೂರವೆಂದರಿ ಕಂದ
ಈರೇಳು ಭುವನಗಳ ತಿಂದು ತೇಗುವ ದೇವ
ಆರೋಗ್ಯಭಾಗ್ಯವನು ನಿನಗೆ ಕರುಣಿಸಲಿ ೧

ಎಂದು ಕಾಣೆವು ಇಂಥಾ ಸುಂದರನ ನಾವೆಂದು
ಮಂದಗಮನೆಯರ ನುಡಿ ಅಂದವಾಯಿತೆ ಕಂದ
ಸಂದೇಹವಿಲ್ಲವರ ಶೃಂಗಾರಕೀ ಫಲವು
ಸೌಂದರ್ಯ ಜಲಧಿ ಮನುಮಥನ ಮನುಮಥನೆ ಗತಿ ೨

ನೀರು ಮಂತ್ರಿಸಿದಾಯ್ತು ಬೂದಿ ಮಂತ್ರಿಸಿದಾಯ್ತು
ನಾರಸಿಂಹಾದಿ ವರಮಂತ್ರಗಳ ಜಪವಾಯ್ತು
ಭಾರಿ ಪುಸಿಯಾಯ್ತು ಜನನಿಯೊಲು ಹರಸಿದೀತನಲಿ
ಮೀರಿಹನು ಯಂತ್ರ ಮಂತ್ರಾರ್ಥವೆಲ್ಲಾ ಪ್ರಸನ್ನ ೩

೧೫೭

ದೇವ ಬೆಳಗಾಯಿತೋ ಎನ್ನಯ ಸೇವಾ ಪ

ಸ್ವೀಕರಿಸೋ ಮಹಾನುಭಾವ ದೇವ ಅ.ಪ

ಮಧುರ ಗಾನವೇ ಗಂಗಾಸ್ನಾನ
ಹೃದಯ ಶುದ್ಧಿಯೇ ಬದರಿಸ್ನಾನ
ಬದಿಯಲಿರುವ ಭಕುತರ ಸಹವಾಸವೇ
ನದಿನದಗಳವಗಾಹನ ಸ್ನಾನವೋ ೧

ಹಾಲಿಗೆ ಕರದಲಿ ಥಾಲಿಯ ಪಿಡಿದು
ಕೋಲಾಹಲ ಕಲಭಾಷಣ ಮಾಡುವ
ಬಾಲರ ನಗುಮೊಗ ನೋಡಲು ಕೃಷ್ಣನ
ಲೀಲೆಯ ಸಂದರ್ಶನಾನಂದವೋ ೨

ಮಲ್ಲಿಗೆ ಸಂಪಿಗೆ ಜಾಜಿ ಸೇವಂತಿಗೆ
ಕಲ್ಹಾರದ ನವ ಕುಸುಮ ರಾಶಿಯ
ಚೆಲ್ಲೆ ಪಲ್ಲೆಗಳ ಬಹುರೂಪದಿ ಶ್ರೀ
ನಲ್ಲ ನಿನಗೆ ಸಲ್ಲಿಸುವುದೇ ಭಾಗ್ಯವೋ ೩

ತಾತನೆಂದು ಮೊರೆಯಿಡುವರು ನೀ ಅನ್ನ
ದಾತನೆಂದು ಮೊರೆಯುತಿಹರೋ
ತಾತನ ಕಿವಿಗೀ ಮಾತನು ತಿಳಿಸಲು
ದೂತನು ನಾ ಕಾದಿಹೆನೊ ಪ್ರಸನ್ನನೇ ೪

೧೫೮

ಧಣಿ ನೀನಿರಲು ತಣಿಸಿ ಪರರ
ದಣಿವುದುಂಟೆ ಲೋಕದಿ ಪ

ಕ್ಷಣ ಕ್ಷಣದಲಿ ಪೊರೆವ ಚಿಂತಾ
ಮಣಿ ನೀನಿರೆ ತ್ರಿಭುವನಕೆ ಅ.ಪ

ಕರದಲಿರುವ ಮಣಿಯ ಬೆಲೆಯ
ನರಿಯದಂಥ ಮೂಢ ಜನರು
ಪರರಿಗಿತ್ತು ಹರುಷದಿಂದ
ಪುರಿಯ ಕೊಂಬ ತೆರದಲಿ ೧

ಘೋರ ದುರಿತ ದೂರ ಮಾಡಿ
ಸಾರ ಫಲಗಳನ್ನು ಕೊಡುವ
ನಾರಸಿಂಗ ಮಂತ್ರವಿರಲು
ಭೈರವನನು ಜಪಿಸುವಂತೆ ೨

ಪಡೆದ ಜನಕನಲ್ಲದೆನ್ನ
ನುಡಿಗೆ ಒಲಿವರುಂಟೆ ಜಗದಿ
ಕಡಲಶಯನ ಎನ್ನ ಕರವ
ಪಿಡಿಯುತ ಪ್ರಸನ್ನನಾಗೋ ೩

೧೫೯

ನಂದಬಾಲ ನಿನ್ನ ಲೀಲೆಯ
ಅಂದರೀತಿಯಲಿ ಪೊಗಳಲರಿಯೆನೊ ಪ

ಏನನರಿಯೆ ನಾನು ಸತ್ಸುಖ
ಜ್ಞಾನಪೂರ್ಣ ನೀನು ಸನ್ಮತಿ.

ದಾನಮಾಡಿ ನಿನ್ನ ಗುಣಗಳ
ಜ್ಞಾನವಿತ್ತು ಸಂತಸದಲಿ ಪೊರೆಯೊ ೧

ಆಶೆಗಾರನೆಂದೆನ್ನನು ಪರಿ
ಹಾಸ ಮಾಡದಿರೆಲೋ ಧನ
ಕೋಶ ಬೇಡವಗೆ ಕರುಣಾ
ಲೇಶ ಮಾತ್ರ ಯಾಚಿಸುವೆನು ನಿನ್ನನು ೨

ಸಂಖ್ಯೆ ಮೀರಿ ಇರುವ ಆ
ತಂಕಗಳನು ಬಿಡಿಸೊ
ಪಂಕಜಾಯತಾಕ್ಷ ವಿಧಿ
ಶಂಕರಾದಿ ಸಕಲ ಸುರ ಪ್ರಸನ್ನನೆ ೩

೧೬೦

ನಗುಮೊಗ ಚಂದಿರ ಸೊಗಸುಗಳಿಗೆ ಬಲು
ಮುಗಿ ಬೀಳುತಲಿಹರೊ ನೀ ಸಿಗದಿರೊ ಪ

ಹಗರಣದಲ್ಲಿ ಪನ್ನಗವೇಣಿಯರು
ಸಿಗಲು ಆಗಲೆ ಬಲು ರಗಳೆ ಮಾಡುವುದು ಅ.ಪ

ಬಲ ಪೂತನಿಯೊಮ್ಮೆ ಲಲನೆಯ ವೇಷದಿ
ಬಲು ಮೋಸದಿ ವಿಷ ಮೊಲೆಯನ್ನು ಉಣಿಸಿದ್ದು
ತಿಳಿದು ತಿಳಿದು ಮತ್ತೆ ಒಲಿಯಲು ಬಯಸುವ
ಲಲನೆಯರಿಗೆ ನಿನ್ನ ಸುಳುವನು ಕೊಡದಿರೊ ೧

ಪತಿಗಳ ತ್ಯಜಿಸುವ ಸತಿಜನರಿರುವರು
ಅತಿಮೋಸದಿ ನಿನ್ನ ಹಿತವ ಬಯಸುವರು

ಮತಿಗೊಟ್ಟರೆ ಇವರು ಅತಿ ಸುಲಭದಿ ನಿನ್ನ
ರತಿಯಲಿ ಸಂಸಾರ ಚ್ಯುತಿಯ ಪೊಂದುವರು ೨

ಬೆಣ್ಣೆಯ ಕೊಡುವೆವು ಚಿನ್ನಬಾಲನೆ ಬಾ
ರೆನ್ನುತ ಕರೆವರು ಕನ್ಯೆಯರುಗಳು
ಸಣ್ಣ ಲೋಭಕೆ ಇವರನು ಸೇರಿದರೆ ಪ್ರ
ಸನ್ನನಾಗದಿರೆ ನಿನ್ನನು ಬಿಡರೋ ೩

೧೬೧

ನಳಿನನಾಭ ಸುಂದರ ಸುಗುಣಾಕರ ಕಮಲೇಶ ಜಗದೀಶ ಪ

ಚಲಿಸಬಲ್ಲರೇ ನಿನ್ನ ಬಲವಿಲ್ಲದಿರಲು ಸಕಲ ಸುರನರರು ಅ.ಪ

ಬ್ರಹ್ಮಾದಿಗಳು ನಿನ್ನ ಸಮ್ಮತಿಯಲಿ ಈ
ಬ್ರಹ್ಮಾಂಡದಲಿ ತಮ್ಮ
ಕರ್ಮರಚಿಸಿ ನಿನ್ನ ಮರ್ಮವನರಿಯಲು
ತಮ್ಮ ಕಾಲವ ಕಳೆಯುವರು ೧

ಅಜ್ಞಾನದೂರನೆ ಸುಜ್ಞಾನ ಮೂರುತಿ
ಯಜ್ಞನಾಮಕ ಪರಮಾತ್ಮ ನಿನ್ನ
ಜಿಜ್ಞಾಸದಿಂ ಸುಪ್ರಜ್ಞೆಯ ಪೊಂದದ
ಅಜ್ಞಾನಿ ಇದನರಿಯುವನೇ ೨

ಸರ್ವತ್ರ ವ್ಯಾಪ್ತನೆ ಸರ್ವಾಗಮಾರ್ಥನೆ
ಸರ್ವ ಪ್ರೇರಕ ಸರ್ವೇಶ
ಗರ್ವ ತೊರೆದು ನೀನೊರ್ವ ಸ್ವತಂತ್ರನೆಂ
ದರಿವ ಜನಕೆ ಸುಪ್ರಸನ್ನ ೩

೧೬೨

ನಾಗಶಯನ ವರಯೋಗಿ ನಿಕರಪ್ರಿಯ
ಬಾಗಿದೆ ಶಿರ ಅನುರಾಗದಿ ನೋಡೆಲೊ ಪ

ಆಗ ನಿನ್ನ ಮರೆತೆನೆಂದು
ಈಗ ಎನ್ನ ಮರೆಯದಿರೆಲೋ ಅ.ಪ

ಶ್ರೀರಮಣ ನಿನ್ನ ಪ್ರೇರಣೆಯಿಲ್ಲದೆ
ಯಾರು ನಡೆಯುವರು ಈ ಧರೆಯೊಳಗೆ
ಕಾರಣ ಕಾರಣ ನಿನ್ನೊಳಗೆ ಮನ
ಸೇರಿಸಿ ಪೊರೆಯೋ ಸಮೀರಸಖ ೧

ಸುಂದರರೂಪ ಮುಕುಂದ ಪರಾತ್ಪರ
ಸಿಂಧುಶಯನ ನಿನ್ನ ಶುಭಗುಣಗಳಲಿ
ಸಂದೇಹ ಬಾರದೆ ಕರುಣಿಸೆಲೋ ಮುಚು
ಕುಂದ ವರದ ಗೋವಿಂದ ಹರೇ ೨

ನಿನ್ನ ಕರುಣದಿಂದ ಕಣ್ಣು ತೆರದಿಹೆನೊ
ಪೂರ್ಣವಿಮಲ ಸುಖ ಜ್ಞಾನ ಸುಕಾಯ
ಮಾನ್ಯ ಪ್ರಸನ್ನ ಸದಾ ಪೊರೆಯೋ ಸರ್ವ
ಭಿನ್ನ ಸಮೀಚೀನ ಸುಖವೀಯೊ ೩

೧೬೩

ನಾಟಕ ರಂಗದಲಿ ನಟಶಿರೋಮಣಿಯೊಬ್ಬ
ಪಟುತನದಿ ವಿಧವಿಧನ ನಟನೆಗಳ ತೋರುವನು ಪ

ಅಘಟನಾಘಟನ ಶಕ್ತನ ಕಪಟನಾಟಕವು
ಘಟಕರಲ್ಲದ ಜನಕೆ ಎಟುಕದಾನೋಟ ಅ.ಪ

ಮುಖ್ಯಪಾತ್ರವು ನಮ್ಮ ರುಕ್ಮಿಣಿ ರಮಣನದು
ಮುಖ್ಯತಾರೆಯು ಲೋಕ ಜನನಿ ಲಕುಮಿ
ಇಕ್ಕಿದನು ಗೋರೂಪ ಚತುರಾನನನು ಮುದದಿ
ಮುಖ್ಯಪ್ರಾಣನೆ ತುರಗ ಮುಕ್ಕಣ್ಣ ಕರುವಾದ ೧

ಸುಖಸಾರನನು ಪಡೆದು ಧನ್ಯಳಾದ ಯಶೋದೆ
ಬಕುಳೆಯೆ ತಾನಾದಳೀ ನಾಟಕದಲಿ
ಅಕಳಂಕ ಮಹಿಮನನು ಅಗಲದಿದ್ದ ಸತಿಯು
ಮುಖನೋಡಿ ಕೋಪದಲಿ ಕಲ್ಲುಗಳನೆಸೆದಳು ೨

ಸರ್ವತ್ರ ವ್ಯಾಪ್ತನಿಗೆ ಇರಲು ಜಗವು ಸಿಗದೆ
ಕಿರಿದ ತಾ ಹಲ್ಲುಗಳ ವರಹನಲ್ಲಿ
ಹರನ ತಾತನು ತಾನು ಸ್ಮರನ ಬಾಣದಿ ನೊಂದ
ಸುರಮೋಹಿನಿಯು ಇಂಥ ಕೊರವಂಜಿಯಾದಳು ೩

ಹುಟ್ಟಿಸುವ ಬೊಮ್ಮನನು ಪುಟ್ಟಶಿಶುವನೆ ಮಾಡಿ
ಹೊಟ್ಟೆಗಿಲ್ಲದೆ ಬಹಳ ಬಾಡಿ ಇರಲು
ಮೃಷ್ಟಾನ್ನವನು ಚಿನ್ನ ತಟ್ಟೆಯಲಿ ತಂದಿಡಲು
ಶ್ರೇಷ್ಠವಿದು ಜನನಿಗೆನ್ನುತ ತಿಂದು ತೇಗಿದಳು ೪

ಬಡುಕನೆದೆಗೊದೆಯಲವನಡಿಗಳಿಗೆ ಶರಣೆಂದ
ಕಡು ಕೋಪಿ ಗೋವಳನ ಕೊಡಲಿಗೊಡ್ಡಿದ ಶಿರವ
ಹಿಡಿ ಮಣ್ಣು ಪಿಂಡಗಳನಿತ್ತ ಚಂಡಾಲನಿಗೆ
ಸಡಗರದಿ ಲಕುಮಿಯನೇ ಕರದಲಿತ್ತ ಪ್ರಸನ್ನ ೫

೧೬೪

ನಿನ್ನ ಕ್ಲೇಶವ ಕೇಳೆ ಎನಗೆ ಮರುಕ ಪ

ಎನ್ನ ಕ್ಲೇಶವ ನಿನಗೆ ತಿಳಿಸಬಹುದೆ ದೇವ ಅ.ಪ

ಹದಿನಾಲ್ಕು ಲೋಕಗಳ ಹುಡುಗತನದಲಿ ಪಡೆದು
ಅದಕೆಲ್ಲ ಅನ್ನವೀಯುವ ಚಿಂತೆಯು
ಹದಿನಾಲ್ಕು ಲೋಕಗಳ ಸರ್ವಕರ್ಮಗಳಿಗೂ
ಹಗಲಿರುಳು ಪ್ರೇರಣೆಯ ಮಾಡುವಾತಂಕ ೧

ಹಿರಿಮಗನದೊಂದುಸಿರ ತರಿದರೆಂಬಾತಂಕ
ಕಿರಿಮಗನ ದೇಹ ಪೊಸಕಿದ ಚಿಂತೆಯು
ಹರನು ಮೊಮ್ಮಗ ಹಾಲಾಹಲವ ಕುಡಿಯುತ ಹಲ್ಲು
ಕಿರಿಯುವಾತಂಕಕ್ಕೆ ಹರವು ತೆರವಿಲ್ಲ ೨

ಚಂಚಲಳು ಸತಿಯೆಂದು ಹೊಂಚು ಕಾಯುವ ಚಿಂತೆ
ಮಂಚದಲಿ ಘಟಸರ್ಪ ವಿಷದ ಚಿಂತೆ
ಸಂಚಿತಾಗಮ ಪ್ರಾರಬ್ಧಗಳನಳಿಸುವಗೆ
ವಂಚಕರು ಏನು ಮಾಡುವರೆಂಬ ಚಿಂತೆ ೩

ಹಲವು ವಿಧ ವೇಷಗಳ ತಾಳಿ ಜಗಗಳಲಿ ನೀ
ತಲೆಯ ಮರಿಸಿಕೊಂಡರೇನು ಫಲವೊ
ಬಳಸಿ ಹುಡುಕಿ ಗೂಢಚಾರಿ ಯೋಗಿಯು ನಿನ್ನ
ತಿಳಿದು ಬೆಳಕಿಗೆ ತರುವ ಮರೆಮಾಚಲೇಕೊ ೪

ತಾಪತ್ರಯ ತಳೆಯೆ ಗೋಪನಲಿ ಪುಟ್ಟಿದರು
ಗೋಪಿಯರ ಸಾಸಿರದ ಗೋಳು ನಿನಗೆ

ಭೂಪ ದಶರಥನ ಮಗನಾಗಿ ಪುಟ್ಟಿದರಯ್ಯೊ
ಪಾಪ ಸತಿಯಳ ಕಳೆದುಕೊಂಡ ಬಲುಚಿಂತೆ ೫

ನಿನ್ನ ಬೇಡುವುದಿಲ್ಲ ನಿನ್ನ ಕಾಡುವುದಿಲ್ಲ
ನಿನ್ನ ನೋಡಲು ಎನಗೆ ಬೇಸರವು ಜಗಕೆ
ನಿನ್ನ ಚಿಂತೆಯು ಮನ ಪ್ರಸನ್ನತೆ ನೀಡುವುದು
ಇನ್ನೇನು ನಿನಗೆ ಚಿಂತೆಯೊ ತಿಳಿಸಿ ಪೊರೆಯೊ ೬

೧೬೫

ನಿರವಧಿ ಬಲ ಲಾವಣ್ಯ ಸಂಪನ್ನ ಪ

ಚರಣ ಸೇವಕನೆಂದೆನಿಸಲೋ ಎನ್ನ ಅ.ಪ

ನಿಖಿಲ ಜಗಂಗಳ ಜನನಾದಿಗಳಿಗೆ
ಅಖಿಲ ಕಾರಣನೇ ಸುಖಮಯನೇ
ಶುಕಭಾಷಣದಿಂ ಪೊಗಳುತಿಹನೋ ನಿನ್ನ
ಭಕುತಿಯ ಮಾರ್ಗವ ತೋರಿ ಪೊರೆಯೆಲೋ ೧

ಹೆಚ್ಚಿನ ಜ್ಞಾನದ ಕೆಚ್ಚೆನಗಿಲ್ಲವೊ
ಉಚ್ಚಪದವು ನಿನ್ನ ಇಚ್ಛೆಯಿಂದಲ್ಲವೇ
ಹುಚ್ಚನಾದೆನೊ ಜನಮೆಚ್ಚುಗೆ ಬಯಸುತ
ಅಚ್ಯುತ ಎನ್ನ ಉಪೇಕ್ಷಿಸದಿರೆಲೊ ೨

ನಿನ್ನನು ಪೂಜಿಸಿ ಧನ್ಯ ನಾನಾದೆನೊ
ಎನ್ನ ಸತ್ಕಾಲವು ಮಾನ್ಯವಾಯಿತೊ
ಇನ್ನು ನಿನ್ನಯ ಪ್ರಸನ್ನತೆಯಲ್ಲದೆ
ಅನ್ಯ ವಿಷಯಗಳ ಬಯಸುವುದಿಲ್ಲವೊ ೩

೧೬೬

ನಿಲ್ಲು ನಿಲ್ಲೆಲೋ ನಿನ್ನ ಚಲ್ವಮೋರೆಯ ನೋಡಿ
ಕಳ್ಳ ನಿನ್ನಯ ಬಿಡೆನೋ ಶ್ರೀ ಕೃಷ್ಣ ಪ

ಬೆಣ್ಣೆ ಪಾತ್ರೆಯೊಳೇಕೆ ನಿನ್ನ ಕರವನಿಟ್ಟೆ
ಸಣ್ಣತನವಿದಲ್ಲವೇ ನಂದಕುಮಾರ ಅ.ಪ

ಕೋಮಲಾಂಗಿಯೇ ಇಂಥ ಸಾಮಾನ್ಯ ವಿಷಯದ
ನೀ ಮರೆತುದು ತರವೇ ಯೋಚಿಸಿ ನೋಡು
ಈ ಮೃದುವಸ್ತುವು ಕಲ್ಲು ಎದೆಯ ನಿನ್ನ
ಧಾಮದಲ್ಲಿರಬಹುದೇ ಯೋಚಿಸಿ ನೋಡು ೧

ನಾ ಕರುಣಾಮಯ ಲೋಕ ಸುಂದರನೆಂದು
ಏಕೆ ಹೆಮ್ಮೆಯ ತೋರುವೆ ಗೋಕುಲನಾಥ
ಆ ಶಕಟನ ಪುಡಿ ಮಾಡಿ ಪಾದಗಳಿಂದ
ನೀ ಕೋಮಲನೆಂಬುದ ನಾ ಕಾಣೆನೇ ೨

ಕೇಳಿ ಕೋಪಿಸಬೇಡ ಬಾಲನೆನ್ನನು ಎತ್ತಿ
ಲಾಲನೆಯನು ಮಾಡಿದಿ ಪ್ರಸನ್ನಳು
ಬಾಲೆ ನಿನ್ನಯ ಇಷ್ಟು ಸ್ಥೂಲ ಕುಚವು ತಗಲಿ
ಕಾಲು ಕಠಿಣವಾಯಿತೇ ಪೇಳುವೆ ನಿಜ ೩

೧೬೭

ನೀನೆ ಅನಾಥನಾಗಿರಲು ಅನ್ಯರಿಗೆ
ಏನು ದಾನವ ನೀ ಮಾಡುವಿಯೊ ಪ

ಜ್ಞಾನಪೂರ್ಣ ನೀನೆಂದು ಅರಿತು ನಿನ್ನ
ಜ್ಞಾನಲೇಶವನು ಯಾಚಿಸುವೆ ಅ.ಪ

ಯಾರು ನಿನ್ನ ತಂದೆ ಯಾರು ನಿನ್ನ ತಾಯಿ
ತೋರೆಲೊ ಈರೇಳು ಭುವನದಲಿ
ಊರೊಳು ವಾಸಕೆ ಗೃಹವನು ಕಾಣದೆ
ವಾರಿಧಿಯೊಳು ನೀನಡಗಿದೆಯೊ ರಂಗ ೧

ಎಡಬಿಡದಿಹ ನಿನ್ನ ಮಡದಿಯ ಬಯಸದೆ
ಪಡೆದೆಯೊ ನಾಭಿಯೊಳ್ನಾಲ್ಮುಗನ
ಅಡಿಯಾಕಾಶವ ಕಾಣದ ಇಂತಹ
ದುಡುಕಿನ ಲೋಕೋತ್ತರ ಪುರುಷ ೨

ಪೆತ್ತುದನೆಲ್ಲವ ತುತ್ತು ಮಾಡುವುದು
ಎತ್ತರ ನಡತೆಯೊ ನಾ ಕಾಣೆ
ಪುತ್ಥಲಿ ಗೊಂಬೆಗಳಂದದಿ ಎಲ್ಲರ
ಸುತ್ತಿಸುತಿಹೆ ಪುರುಷೋತ್ತಮನೆ ೩

ಚಂಚಲಳಾದ ಮಡದಿಯು ನಿನ್ನನು
ವಂಚಿಪಳೆನ್ನುವ ಭಯದಿಂದ
ಹೊಂಚು ಕಾಯಲು ನಿನ್ನ ಹೃದಯದಲ್ಲಿ ಪೊತ್ತು
ಸಂಚರಿಸುವೆ ವಿಲಕ್ಷಣ ಪುರುಷ ೪

ಅಣುವಿನೊಳಗೆ ಅಣು ಮಹತಿನೊಳಗೆ ಮಹ
ತೆನಿಪ ವಿರೋಧ ಧರ್ಮಕೆ ಧರ್ಮಿ
ಎನ್ನಿಪ ನಿನ್ನಯ ಗುಣವರಿಯಲು ಸಂತತ
ಮಿಣುಕುತಿರುವ ಸುಜನ ಪ್ರಸನ್ನ ೫

೧೬೮

ನೀ ನೋಡಿದರೆ ಏನಾಗಲೊಲ್ಲದೊ ಪ

ಶ್ರೀ ನಿಕೇತನ ನಾನೇ ನಿದರ್ಶನ ಅ.ಪ

ಪೂಜೆಯ ಮಾಡಿದ ಪುಣ್ಯದ ರಾಶಿಯು
ರಾಜಿಸುತಿರುವುದೊ ಎನ್ನಯ ಶಿರದಲಿ ೧

ಸಾಕಲು ಹೆದರಿದ ಪರಿವಾರವನು
ವ್ಯಾಕುಲವಿಲ್ಲದ ಗೋಕುಲ ಮಾಡಿದಿ ೨

ಈ ಮಹಾಭಾಗ್ಯವು ನಿನ್ನದೋ ಶಿಷ್ಯರ
ಪ್ರೇಮದ ಕವಚವ ಧಾರಣೆ ಮಾಡಿದೆ ೩

ಪಾತ್ರನು ನಿನ್ನಯ ಕರುಣಕೆ ನಾನಿರೆ
ಶತ್ರುಗಳೆಲ್ಲರು ಮಿತ್ರರಾಗಿರುವರೋ ೪

ನಗುವೆನು ಕುಣಿವೆನು ನಗಿಸುವೆ ಕುಣಿಸುವೆ
ಸೊಗಸನು ನೋಡಿ ನೀ ನಗೆಲೋ ಪ್ರಸನ್ನನೆ ೫

೧೬೯

ನೀಲ ನೀರದ ಕಾಯ ಕಾಂತೇಯ
ಪಾಲ ಕರವ ಪಿಡಿಯೊ ಗೋಪಾಲ ಪ

ಜಾಳು ಜೀವನದ ಗೋಳಿಗೆ ಸಿಲುಕಿದೆ
ಕೇಳುವರುಂಟೆ ದಯಾಳು ನೀನಲ್ಲದೆ ಅ.ಪ

ತನುಬಲ ಧನಬಲ ಜನಬಲವೆಲ್ಲವು
ಅನುಸರಿಸುವುವೇ ಕೊನೆತನಕ
ಧನವು ತಪ್ಪಿದರೆ ಜನರು ತ್ಯಜಿಸುವರು
ಜನಕ ನೀನಲ್ಲದೆ ಪೊರೆವರ ಕಾಣೆನೊ ೧

ಸಟೆಯನಾಡುವುದು ದಿಟವ ತೊರೆಯುವುದು
ಕಟುತರ ವಚನಕೆ ನಗುತಿಹುದು

ಅಕಟಕಟ ಈ ಕಪಟ ಜೀವನವು
ತುಟಿಯ ಮೀರಿದ ದಂತಗಳಂತಿರುವುದು ೨

ನಿಮಿಷದ ಸೌಖ್ಯಕೆ ವರುಷದ ಕ್ಲೇಶವು
ಪುರುಷ ಜೀವನವಿದು ಧರೆಯೊಳಗೆ
ಪುರುಷೋತ್ತಮನೆ ಪ್ರಸನ್ನ ಹೃದಯನಾಗಿ
ಕಲುಷರಹಿತವಾದ ಹರುಷವ ನೀಡೆಲೋ ೩

೧೭೦

ನೋಡಿದೆನೋ ಕೊಂಡಾಡಿದೆನೋ ಪ

ಜೋಡಿಸಿ ಕರಗಳ ಬೇಡಿದೆ ಕೃಷ್ಣನ ಅ.ಪ

ಮೂಡಲು ಸೂರ್ಯನು ಹಿಮದ ಕಣಗಳಂತೆ
ಓಡಿದು ಮೋಹವು ಕೂಡಿತು ಧೈರ್ಯವು
ನೋಡಲು ಕೃಷ್ಣನ ಮಂಗಳ ಮೂರ್ತಿಯ
ಈಡೇರಿತು ಮನದಾಸೆಯು ಕೃಷ್ಣನ ೧

ಕಳೆಯಿತು ದುರಿತವು ಬೆಳೆಯಿತು ಸುಕೃತವು
ಸೆಳೆದನು ಮನವನು ತನ್ನಡಿಗಳಲಿ
ಬಳಿಯಲಿ ರುಕ್ಮಿಣೀ ಭಾಮೆಯರೊಡಗೂಡಿ
ಕೊಳಲೂದುವ ಮಂಗಳಕರ ದೃಶ್ಯವ ೨

ಉಕ್ಕಿತು ಹರುಷವು ಪರಮ ದರುಶನದಿ
ನಕ್ಕನು ನೋಡುತ ಕರುಣಾಪಾಂಗದಿ
ಭಕ್ತ ಪ್ರಸನ್ನನು ತಕ್ಕವನೆಂದೆನ್ನ
ಅಕ್ಕರೆಯಿಂದಲಿ ಕರೆಯುವಂತಿರುವುದ ೩

೧೭೧

ನೋಡಲು ಬಂದಿರುವ ನಿಮ್ಮನು ಪ

ಬೇಡಿದ ವರಗಳ ನೀಡುವ ದೇವನು ಅ.ಪ

ವಾಸುದೇವನ ಕೃಪಲೇಶವ ಪಡೆಯಲು
ಆಸೇತು ಹಿಮಗಿರಿ ದೇಶಗಳಿಲ್ಲಿಹ
ಸಾಸಿರ ಕ್ಷೇತ್ರ ಪ್ರವಾಸವ ಗೈವದು
ಲೇಸಲ್ಲವೆನುತ ದಾಸಜನಗಳನು ೧

ಬೆಡಗು ಬಿಂಕಗಳಿಲ್ಲ ಸಿಡುಕನು ಇವನಲ್ಲ
ಬಡವಬಲ್ಲಿದನೆಂಬೊ ಕಡುಭೇದವಿಲ್ಲವು
ಕಡಲಶಯನನಿವ ಪೊಡವಿಯಳಿಗೆ ತ
ನ್ನಡಿಯಾಳುಗಳ ಕರಪಿಡಿದೆತ್ತಲೋಸುಗ ೨

ಒಂದು ತುಳಸಿದಳ ಬಿಂದು ಗಂಗೋದಕ
ದಿಂದಲೇ ಪರಮಾನಂದವ ಪೊಂದುವ
ತಂದೆ ಪ್ರಸನ್ನನು ಬಂದ ಮಂದಿರದಲಿ
ಇಂದಿರೆ ತಾನಲ್ಲಿ ಎಂದೆಂದು ಇರುವಳು ೩

೧೭೨

ನೋಡುವ ಬನ್ನಿ ಮುರಳೀಧರನ್ನ ಪ

ಪಾಡುತ ಕುಣಿ ಕುಣಿದಾಡಿ ಕೊಂಡಾಡುತ ಅ.ಪ

ಮನೆಕೆಲಸಗಳಿಗೆ ಕೊನೆ ಮೊದಲಿಲ್ಲವು
ನೆನೆದರೆ ಬೇಸರ ಮನೆಗಳಂತಿರಲಿ ೧

ಪತಿಗಳ ಸೇವೆ ಶ್ರೀಪತಿಯನೆ ಒಲಿಸಲು
ಅತಿ ಸುಲಭದಲಿರೆ ಪತಿಗಳಂತರಲಿ ೨

ಬಾಲೆಯರಾದರೆ ಲಾಲಿಸುವನು ಬಲು
ಏಳಿರೇ ಎಮ್ಮಯ ಬಾಲರಂತಿರಲಿ ೩

ಪರಪುರುಷನ ಕೂಡಿ ದುರಿತಗಳೆಲ್ಲವ
ತೊರೆಯುತ ಮೈಗಳ ಮರೆಯುವ ಮುದದಿ ೪

ಬಂಧುಗಳೆಂದೆಮ್ಮ ಬಂಧನ ಸಾಕಮ್ಮ
ಚಂದದಿ ಪ್ರಸನ್ನ ನಂದಕುಮಾರನ ೫

೧೭೩

ಪಟ್ಟಿಯು ಬಂದಿಲ್ಲ ಕೃಷ್ಣ ಪಟ್ಟಿಯು ಬಂದಿಲ್ಲ
ಪಟ್ಟಿಯು ಬಾರದೆ ಕಟ್ಟಲು ಸಾಧ್ಯವೆ ಪ

ನಿಷ್ಠುರ ಮಾಡದೆ ಇಷ್ಟ ಬಂದುದ ಮಾಡೊ ಅ.ಪ

ಬುದ್ಧಿಯು ಸಾಲದೆ ಬಿದ್ದೆನೋ ಸಾಂಕೆ
ಬದ್ಧನಾಗಿರುವೆನೋ ತೀರಿಸಲು
ಇದ್ದು ಇಲ್ಲೆಂಬುವ ಸುದ್ದಿಯ ಪೇಳುವ
ಕ್ಷುದ್ರ ನಾನಲ್ಲವೋ ಉದ್ಧರಿಸಯ್ಯ ೧

ಕೊಟ್ಟ ಭಾಗ್ಯವನು ದೂಷ್ಯ ರೀತಿಯಲಿ
ಕುಟ್ಟಿ ಕೋಲಾಹಲ ಮಾಡಿದೆನೊ
ಇಷ್ಟು ದಿನವು ಬಡ್ಡಿ ಕಟ್ಟಲಿಲ್ಲವೆಂದು
ಸಿಟ್ಟು ಮಾಡಿದರೆ ಕೆಟ್ಟು ಹೋಗುವೆನೊ ೨

ಭೃತ್ಯರ ಸಲಹುವ ಸತ್ಯ ಸಂಕಲ್ಪನೆ
ಭೃತ್ಯನಾಗಿ ನಾ ಸೇವೆಯ ಮಾಡುವೆ
ಭಕ್ತರು ಈ ಜನ ಭಕ್ತ ಪ್ರಸನ್ನ ನಾ
ನಿತ್ತ ಸಾಲಗಳು ಉತ್ತಾರಾಯಿತೆಂಬೊ ೩

೧೭೪

ಪಾಹಿ ರಮಾ ಮನೋಹರ ಪಾಹಿ ಪ

ಪಾಹಿ ಸದಾಗಮವೇದ್ಯ ಸಕಲ ಕ
ಲ್ಯಾಣ ಗುಣಾರ್ಣವ ಲೀಲಾಮಾನುಷ ಅ.ಪ

ಆನೆಯೊಂದು ಕರೆಯಲು ಆ ಕ್ಷಣದಲಿ
ನೀನೇ ಬಂದುದೇಕೆ ದೇವ
ನೀನೇ ಪಡೆದ ಮಕ್ಕಳ ದೈನ್ಯದ ನುಡಿ
ನೀನಲ್ಲದೆ ಕೇಳುವರ್‍ಯಾರಿರುವರು ೧

ತುರುವಿನ ಕೆಚ್ಚಲ ಕರು ಗುದ್ದಿದರದು
ಕರೆಯದೇ ಕ್ಷೀರವನು ದೇವ
ಮರೆತು ಎನ್ನ ಅಪರಾಧಗಳೆಲ್ಲವ
ಮರೆಯದಿರೆಲೊ ಎನ್ನಯ ಬಾಂಧವ್ಯವ ೨

ಅತ್ತು ಕರೆದು ಔತಣ ನೀಡಿದ ಪರಿ
ನಿತ್ಯ ಸೇವೆಯಾಯ್ತೋ ಕೃಷ್ಣ
ನಿತ್ಯ ಪೂರ್ಣ ಕರುಣಾಮಯ ಕರುಣಿಸೊ
ಚಿತ್ತ ಪ್ರಸನ್ನತೆ ಸಾರ್ಥಕ ಜೀವನ ೩

೧೭೫

ಪುಣ್ಯ ಪೂರ್ವಾರ್ಜಿತವಿದು ಸುರ
ಮಾನ್ಯ ಶ್ರೀ ನಿಲಯನ ದರುಶನ ಪ

ಚೆನ್ನಿಗನೀತನು ಸುಜನರ ಪೊರೆಯಲು
ಪನ್ನಗಾಚಲದಿ ಬಂದಿರುವುದು ಬಲು ಅ.ಪ

ರಾಜ್ಯವಿವಗೆ ಹದಿನಾಲ್ಕು ಲೋಕಗಳು
ಭೋಜ್ಯ ಚರಾಚರಜಗವೆಲ್ಲ
ರಾಜೀವಾಲಯನಾಥನಿವನು ಬಲು
ಸೋಜಿಗದಲಿ ಬಂದಿಹ ನೋಡಿ
ಪೂಜ್ಯಚರಣ ಗುರುವ್ಯಾಸರಾಜ ಯತಿರಾಜ
ರಚಿತ ದ್ವಿಕ್ಷಡಬ್ಧದ ಪೂಜೆಯ ೧

ಸೌಂದರ್ಯದ ಗಣಿ ಇವನು ಎಲ್ಲರನು
ತಂದೆಯಂತೆ ಸಲಹುವ ಸತತ
ಒಂದೊಂದೆಡೆಯಲು ವ್ಯಾಪ್ತನಿವನು ತಾ
ನೊಂದೆಡೆಯಲು ಸುಲಭದಿ ಸಿಗನು
ನಂದತೀರ್ಥ ಪರಿವಾರ ಜನರು ಇವರೆಂದು ಹರುಷದಲಿ
ಮುಂದೆ ನಿಂತಿಹುದು ೨

ಪದ್ಮಾವತಿ ವಲ್ಲಭನಿವ ಮುನಿಜನ
ಹೃದ್ಗತ ಪ್ರಕಟಾಮಿತ ಚರಿತ
ಮುಗ್ಧಜನರು ಪರಮಾದರ ತೋರಲು
ಸ್ನಿಗ್ಧನಾಗುವನು ಹರುಷದಲಿ
ಛದ್ಮಕೆ ದೂರನು ಭಕ್ತ ಪ್ರಸನ್ನನು
ಉದ್ಧರಿಸಲು ಈ ಸದ್ಮಕೆ ಬಂದಿಹ ೩

೧೭೬

ಬಂದಾ ಬಂದಾ ಮುಕುಂದ
ಇಂದಿರೆಯೊಡನೆ ನಿಲಯಕೆ ಬಂದಾ ಪ

ಬೃಂದಾವನಾಂಚನನು ಶರ
ದಿಂದುವದನ ಮುನಿವೃಂದ ನುತಚರಿತ ಅ.ಪ

ಭೇರಿ ಗಜ ತುರಗ ಪತಾಕ ತು
ತ್ತೂರಿ ವರ ಛತ್ರಿ ಚಾಮರ
ತಾಳ ಮೇಳ ಬಿರುದಾವಳಿ ಸಹಿತದಿ
ಪೌರಬೀದಿಯಲಿ ಮೆರೆಯುತ ಶೌರಿಯು ೧

ಪಾರಿಜಾತ ಸುಜಾತ ಮಲ್ಲಿಕಾ
ಚಾರು ಮಾಲತೀಹಾರ ತುಳಸೀ
ಹಾರವನರ್ಪಿಸಿ ನೀರಜನಾಭನಿಗೆ
ನಾರಿಜನರು ಆರತಿಯನು ಬೆಳಗಿರೆ ೨

ವೇದಘೋಷ ಜಯಘೋಷ ಜನರ ಸಂ
ತೋಷ ಧ್ವನಿಯು ತುಂಬಿತು ಗಗನ
ಯಾದವ ವಂಶ ಪ್ರಸನ್ನನು ಎಮ್ಮವ
ನಾದನಿಂದು ಹಿರಿದಾಯಿತು ಜನುಮವು ೩

೧೭೭

ಬನ್ನಿರಿ ಬನ್ನಿರಿ ಪುರಜನರೆಲ್ಲರು
ಕೃಷ್ಣನ ದರುಶನಕೆ ಪೋಗುವ ಪ

ಕೃಷ್ಣನು ಜನಿಸಿದ ಈ ದಿನ
ಇಷ್ಟವ ಪ್ರಾರ್ಥಿಸಲು ಪೋಗುವ ಅ.ಪ

ದುಂದುಭಿ ನಾದವು ಕೇಳುತಿದೆ ಬಲು
ಮಂದಿಯ ತಂಡವು ಹೋಗುತಿದೆ
ಕಂದನ ರೂಪದಿ ಬಂದಿಹ ಆನಕ
ದುಂದುಭಿ ಕುವರನ ಸಂಭ್ರಮ ನೋಡಲು ೧

ಪೇಳಿರಿ ನಿಮ್ಮಯ ಕೊರತೆಗಳೆಲ್ಲವ
ಕೇಳಿರಿ ವರಗಳ ಧೈರ್ಯದಲಿ
ಬಾಲನು ಸುಲಭದಿ ಒಲಿಯುವ ಒಳ್ಳೆಯ
ಕಾಲವಿದೆಲ್ಲರಿಗೆ ಬೇಗನೆ ೨

ಜನುಮ ಜನುಮಗಳ ಪುಣ್ಯದ ರಾಶಿಯು
ಜನುಮಾಷ್ಟಮಿ ದಿನದಿ ಲೋಕಕೆ
ಜನುಮಾದ್ಯಷ್ಟಕದಾತನ ದರುಶನ
ಮನಕೆ ಪ್ರಸನ್ನತೆ ಕೊಡುವುದು ಪೋಗುವ ೩

೧೭೮

ಬಲ್ಲೆನೋ ಚಲ್ಲಾಟವ ಪ

ಸಲ್ಲದೋ ಎನ್ನಲಿದೆಲ್ಲವು ಅ.ಪ

ದುರುಳ ಕಂಸನಿಗಂಜಿ ಇರುಳು ಸಮಯದಲಿ
ತೆರಳಿದ ನಿನ್ನಯ ತಿರುಳುಗಳನು ೧

ಸಾಧು ಸುಧಾಮನ ಹಿಡಿಯವಲಕ್ಕಿಗೆ
ಮೋದವ ಪೊಂದಿದ ಮಾದರಿಯನು ೨

ಗಂಧದ ಲೋಭಕೆ ನಂದದಿ ಕುಬುಜೆಯ
ಸುಂದರಿ ಮಾಡಿದ ಅಂದಗಳನು ೩

ನಾರಿಜನರುಗಳ ಸೀರೆಯ ಕದಿಯುತ
ಕೋರಿಕೆ ಪೊಂದಿದ ಜಾರತನವ ೪

ಹಟದಲೆ ಪಾರ್ಥಗೆ ಅನುಜೆ ಸುಭದ್ರೆಯ
ಘಟಿಸಿದ ನಿನ್ನಯ ಕಪಟತನವ ೫

ನಿನ್ನ ಭಕುತರೊಳು ಎನ್ನನು ಸೇರಿಸಿ
ಮನ್ನನವರಿತು ಪ್ರಸನ್ನ ನೀನಾಗೆಲೋ ೬

೧೭೯

ಬಲ್ಲೆನೋ ನಿನ್ನ ಗುಣವ
ಸಲ್ಲಿಸೋ ಎನ್ನ ಋಣವ ಪ

ಎಲ್ಲ ತೊರೆದು ಭಜಿಸುತಿಹೆನೋ
ಒಲ್ಲೆನೊ ಸಣ್ಣ ಫಲವ ಅ.ಪ

ನಲ್ಲ ಬ್ರಹ್ಮಚಾರಿ ರೂಪದಿ ಚಿಲ್ಲರೆ ದಾನವನು ಮೋಸದಿ
ಸಲ್ಲಿಸೆಂದು ಬಲಿಯ ಶಿರದಲಿ ಪಾದವಿಟ್ಟು ತುಳಿದ ೧

ಉಂಡಮನೆಗೆ ಎರಡು ಬಗೆದು ಖಂಡಿಸಿರುವೆ ಪೂತನಿಯನು
ಕಂಡ ಜನರ ಮನೆಗಳಲ್ಲಿ ಚಂಡು ಬೆಣ್ಣೆ ಕದ್ದು ತಿಂದ ೨

ಸಣ್ಣ ನರ ನಾನಾದರೂ ಪ್ರಸನ್ನವದನ ವಾಸುದೇವ
ನಿನ್ನ ಗುಣವ ಪೇಳಿ ನಿನ್ನ ಚರಣ ಕಟ್ಟುವೆನೊ ೩

೧೮೦

ಬಾ ಬಾ ಯದುತಿಲಕ ಮದನ ಜನಕ
ಹೃದಯ ನಿಲಯಕೆ ಮುರಮಥನ ಪ

ಆದರದಲಿ ಉಪಚರಿಸುವೆನು ಕಲಿ
ಬಾಧೆಯ ಪರಿಹರಿಸೋ ಮಧುಸೂದನ ಅ.ಪ

ಪೂರ್ಣಸದಾಗಣಿತೇಡ್ಯಗುಣಾನುಭ
ವೈಕಶರೀರ ಕಲುಷದೂರ
ಜೀರ್ಣ ಪುಣ್ಯಚಯದಿಂದ ಕರೆಯಲು
ತ್ರಾಣವಿಹುದು ಮನ್ಮನದಲಿ ನೆಲಿಸೊ ೧

ಶಮದಮಗಳನುಗ್ರಹಿಸುತ ಸಜ್ಜನ
ಸಮಿತಿಯ ಸಹವಾಸವ ನೀಡೋ
ಅಮಿತಪ್ರಮತಿಗಳ ಶಾಸ್ತ್ರಪ್ರವಚನದಿ
ಮಮತೆಯ ಸ್ಥಿರಪಡಿಸೊ ಶೃತಿಪತೇ ೨

ಗುರುಕರಣವು ನಿನ್ನನರಿಯಲು ಕಾರಣ
ಶರಣಂಭವ ಸಂತತ
ಹಿರಿಯರು ಮಾಡಿದ ಸಾಧನಗಳಿಗಿದು
ಹಿರಿದಾಗುವುದೇ ಪ್ರಣತ ಪ್ರಸನ್ನ ೩

೧೮೧

ಬಾರೆ ಸಖಿ ಪೋಗಿ ರಾಸ ಕ್ರೀಡೆಯಾಡುವ ಪ

ಸಾರಸಾಕ್ಷ ಕೃಷ್ಣನು ತಾ ಕೊಳಲನೂದುವ ಅ.ಪ

ಜಾರನೆಂದು ಸಣ್ಣಮಾತನಾಡಿದ್ದಾಯಿತು
ಚೋರನೆಂದು ಬಹಳ ದೂರು ಮಾಡಿದ್ದಾಯಿತು
ಮೂರು ನಿಮಿಷ ಅವನ ಮರೆಯಲಾಗದಾಯಿತು
ಬೀರುತಿರುವ ಮೋಹಜಾಲ ಸಡಲದಾಯಿತು ೧

ಯಾವನೀತನೆಂದು ಚಿಂತೆ ಮಾಡಿದ್ದಾಯಿತು
ಗೋವಳನಿವನಲ್ಲವೆಂದು ನಿರ್ಧರಾಯಿತು
ಯಾವನಾದರೇನು ಇವನ ಕ್ಷಣವು ಕಾಣದೆ
ಜೀವನ ಕಳೆಯುವುದೆ ದೊಡ್ಡ ಭಾರವಾಯಿತು ೨

ಮಂದಹಾಸದಿಂದ ಸಕಲ ಜಗವ ಬೆಳಗುವ
ಚಂದ್ರನು ತಾನಿವನ ನೋಡಿ ಬಹಳ ನಾಚುವ
ಸಾಂದ್ರವಾಯಿತಂತರಿಕ್ಷ ಮಧುರ ನಾದದಿ
ಮಂದ ಮಲಯ ಮಾರುತ ತಾ ತಲೆಯನಾಡುವ ೩

ನಾದದ ಸುಧೆ ಸಾಗರದಲಿ ತೇಲುವಂತಿದೆ
ಮಾಧವ ತಾ ಸುಧೆಯ ರಸವನೆರಚುವಂತಿದೆ
ಬಾಧಿಸುತಿಹ ಭವದ ತಾಪವಡಗಿದಂತಿದೆ
ಮಾದರಿಫಲ ರಾಸಕ್ರೀಡೆ ತೋರುವಂತಿದೆ ೪

ಸಕಲ ಲೋಕನಾಥನೀತನೆಂದು ತಿಳಿಯಿತು
ಸಕಲವನರ್ಪಿಸುವುದೊಂದೆ ಮಾರ್ಗ ಉಳಿಯಿತು
ಲಕುಮಿ ಮುರುಳಿ ರೂಪದಲ್ಲಿ ಇಹುದು ಹೊಳೆಯಿತು
ಭಕುತಿ ಹರಿದು ಎನ್ನ ಮನ ಪ್ರಸನ್ನವಾಯಿತು ೫

೧೮೨

ಬಾರೋ ಯದುಕುಲ ತಿಲಕ ನಲಿಯುತ
ಬಾರೋ ಯದುಕುಲ ತಿಲಕ ಅ.ಪ

ನಂದಕುಮಾರ ಸುಂದರಾಕಾರ
ಬೃಂದಾವನಲೋಲ ನಲಿಯುತ ೧

ನಗುಮಲ್ಲಿಗೆ ಚಿಗುರಿನ ಮುಖದ
ಜಗಮೋಹನ ಬಾಲ ಸದನಕೆ ೨

ಅಧರಾಮೃತದ ಮಧುರಸ ಕುಡಿದ
ಹೃದಯಂಗಮ ಮುರಳೀ ನುಡಿಸುತ ೩

ರಂಗಿನ ತಿಲಕ ಮುಂಗುರುಳುಗಳು
ಶೃಂಗಾರದ ಸೊಬಗ ನೋಡುವೆ ೪

ಕುಣಿಯುತಲಿರುವ ಮನದ ಬಯಕೆಯ
ದಣಿಸೋ ವನಮಾಲಿ ಪ್ರಸನ್ನನೆ ೫

೧೮೩

ಬಾರೋ ಶೌರೇ ಚಾರು ನವರತುನ
ಮಣಿ ಮಂಟಪಕೆ ಪ

ನೀರಜಾಕ್ಷ ಆ ರುಕುಮಣಿ ಭಾ
ಮೆಯರೊಡಗೂಡಿ ಅ.ಪ

ಹೇಮದ ತಂಬಿಗೆ ಬಿಂದಿಗೆಗಳಲಿ
ನೇಮದಿ ಉದಕವ ತುಂಬಿಹರೊ
ಕೋಮಲ ತುಳಸೀ ಮಲ್ಲಿಗೆ ಸಂಪಿಗೆ
ಪೂಮಳೆಗರೆಯಲು ತಂದಿಹರೊ
ಸ್ವಾಮಿ ನಿನಗೆ ಪರಿಮಳ ದ್ರವ್ಯಗಳನು
ಪ್ರೇಮದಿಂದಲರ್ಪಿಸಲಿಹರೊ
ಚಾಮರ ಸೇವೆಯ ಅರ್ಪಿಸುವರು ಹರಿ
ನಾಮ ಹಾಡಿ ಸ್ವಾಗತ ಬಯಸುವರೊ ೧

ಮೇಳದ ಮಂಗಳವಾದನ ಒಂದೆಡೆ
ಕಹಳೆ ಶಂಖ ದುಂದುಬಿ ಧ್ವನಿಯು
ತಾಳ ತಂಬೂರಿ ಮೃದಂಗದ ಶೃತಿಗಳ
ಮೇಳನದಲಿ ದಾಸರ ಗಾನ
ಶೀಲರಿವರು ಸುಸ್ವರದಲಿ ವೇದವ
ಪೇಳಲು ಕಾಲಕೆ ಕಾದಿಹರೊ
ಬಾಲರು ಸಂಭ್ರಮದಲಿ ಝಾಂಗಟೆ ಕೈ
ತಾಳಗಳನು ಕರದಲಿ ಪಿಡಿದಿಹರೊ ೨

ಲಾಡು ಜಿಲೇಬಿಯ ರಾಶಿಗಳನು ಹೊಸ
ಗೂಡೆಗಳಲಿ ತುಂಬಿಟ್ಟಿಹರೊ
ನೋಡಲೆ ದಣಿಸುವ ತೆರದಲಿ ಚತುರರು
ಮಾಡಿದರೋ ಪಕ್ವಾನ್ನಗಳ
ಜೋಡಿಸಿ ಕರಗಳ ಕಾದಿರುವರೋ ಬಲು
ನಾಡುನಾಡುಗಳ ಮಂದಿಗಳು
ಈಡೇರಿಸುವದು ಭಕುತ ಮನೋರಥ
ರೂಢಿಯು ನಿನ್ನದು ಶರಣ ಪ್ರಸನ್ನನೆ ೩

೧೮೪

ಬಾಲಗೋಪಾಲನ ತೋರೆಲೆ ಲಲನೆ
ಲೀಲೆಗಳಲ್ಲಿ ಮುದದಿಂದ ಪ

ಕಾಲ ಕಳೆಯುತಿರೆ ಬಾಲೆಯರು ಕೇಳೆ
ಪೇಳದೆ ಅಗಲಿದನೆಮ್ಮ ಬಲು
ಲೋಲನಾಗಿಹನಿವನಮ್ಮ ಎಮ್ಮ
ಮೇಲೆ ಅತಿ ಕಠಿಣನಮ್ಮ ಮೋರೆ
ಕೀಳು ಮಾಡುವನಿವನಮ್ಮ ಕೋಪ
ಜ್ವಾಲೆಯಿಂದುರಿಯುವನಮ್ಮ ಬಲು
ಬಾಲನಾಗಿಹನಿವನಮ್ಮ ಗುಣ
ಶಾಲಿ ಮಾತೆಯ ಕೊಂದನಮ್ಮ ಕಪಿ
ಜಾಲದೊಳತಿ ಪ್ರಿಯನಮ್ಮ ಪರ
ಬಾಲೆಯೊಳತಿ ಮೋಹವಮ್ಮ ಮಾಯಾ
ಜಾಲವ ಬೀಸುವನಮ್ಮ ಬಲು
ಕೀಳನು ಮೇಲು ಮಾಡುವನು ಇಂಥಾ ೧

ಸಾರಸಾಕ್ಷನ ವಿರಹವನು
ಸೈರಿಸಲಾರೆವೆ ಕರುಣದಲಿ ತೋರೆ
ಕೋರುವೆವು ವಿನಯದಲಿ ಅವ
ನೀರೊಳಗಡಗಿದನೇನೆ ದೊಡ್ಡ
ಮೇರು ಬುಡದಲಿಹನೇನೆ ಅವ
ಚಾರು ಸೂಕರನಾಗಿಹನೇನೆ ಅವ
ಬಾರಿ ಕಂಭದಲಿಹನೇನೆ ವೇಷ
ಧಾರಿ ಬ್ರಹ್ಮಚಾರಿಯೇನೆ ಕ್ಷಿತಿ
ಪಾರಿಯೆನಿಸಿ ತಿರುಗುವನೆ ಅವ
ಸೇರಿಹನೆ ಹನುಮನನು ಅಯ್ಯೋ

ಜಾರ ಚೋರನಿವನಮ್ಮ ಮಾನ
ಮೀರಿ ಬತ್ತಲೆ ನಿಂತಿಹನೇ ವಾಜಿ
ಏರುತ ಓಡುತಲಿಹನೇ ಇಂಥಾ ೨

ವೇಣು ವಿನೋದದಿ ಕುಣಿಯುತಲಿ
ಕಾಣುವುದೆಂತು ಪ್ರಸನ್ನ ಮಾಧವನ
ಜಾಣೆ ಜಾಣೆಯರಲ್ಲದೆ ಎಮಗೆ ದಿವ್ಯ
ಮೀನ ರೂಪವ ತಾಳಿದನ ಬಲು
ಪೀನ ಶರೀರ ಕಂಠನ ಧರೆ
ಯಾನನದಲ್ಲಿ ಪೊತ್ತಿಹನ ದುಷ್ಟ
ದಾನವನನು ಸೀಳಿದವನ ಭೂಮಿ
ದಾನವ ಯಾಚಿಸಿದವನ ಭೃಗು
ಮುನಿಯೊಳವತರಿಸಿದನ ಕಡು
ಕಾನನದೊಳು ತಿರುಗಿದನ ಸವಿ
ವೇಣು ಗಾನವ ಮಾಡಿದನ ಬಹು
ಮಾನಿನಿ ವ್ರತಗಳನಳಿದವನ ಪ್ರಸ
ನ್ನಾನನ ತುರಗವಾಹನನ ೩

೧೮೫

ಬಾಲೆಯರು ನಿನ್ನ ಲಾಲಿಸುವರೋ
ಸೋಲದಿರು ಮನವ ಗೋಪಾಲ ಪ

ಲೋಲತನದಿ ಬಾಲ ನಿನಗೆ
ಜಾಲವೆಸೆದು ಕಾಲ ಕಳೆಯಲು ಅ.ಪ

ಪೊಂದಲೋಸುಗ ಸುಂದರಿಯರು
ಸಂದು ಮಾಡುವರೊ ಮುಕುಂದ

ಮಂದಹಾಸದಿಂದ ನಿನಗೆ
ಗಂಧ ಪೂಸುವರೊ ಗೋವಿಂದ ೧

ಓರೆಗಣ್ಣಿನ ನೋಟದಿಂದ
ಸೂರೆಗೊಳುವರೊ ನಾರೇರು
ಕೋರಿಕೆಯನು ಮೀರಿದರೆ ನೀ
ದೂರು ಮಾಡುವರೊ ಮುರಾರೆ ೨

ಮುರಳಿನಾದವ ಮಾಡೆ ನಿನ್ನ
ತೆರಳ ಬಿಡರಿವರು ಮನೆಗೆ
ಸರಳನೆಂದು ಅರಿತು ನಿನ್ನ
ಮರುಳು ಮಾಡುವರೊ ಶ್ರೀ ಕೃಷ್ಣ ೩

ಎನ್ನ ಮನವನು ತಿಳಿಯುವುದಕೆ
ಕನ್ಯೆಯರಿಗಳವೇ ಪೇಳಮ್ಮ
ಇನ್ನು ಪೋಗುವುದಿಲ್ಲವೆ ಪ್ರ
ಸನ್ನಳಾಗಮ್ಮ ಯಶೋದೆ ೪

೧೮೬

ಬಿಟ್ಟನೋ ಆತಂಕಗಳನು ನಾ ಕೃಷ್ಣ ನಿನ್ನ ಕರುಣಾ ನಂಬಿ ಪ

ಸೃಷ್ಟಿ ಸ್ಥಿತಿ ಲಯಾದಿ ಕರ್ತ ಅಷ್ಟವಿಭವಪೂರ್ಣ ನಿನ್ನ
ಇಷ್ಟದಂತೆ ನಡೆಯುವುದೇ ಶ್ರೇಷ್ಠವೆಂಬೊ ಬುದ್ಧಿ ಬಂದು ೧

ಬೆಟ್ಟದಂತೆ ಇದ್ದುದಲ್ಲಿ ಘಟ್ಟಿಮಂಜಿನಂತೆ ಕರಗಿ
ಕಷ್ಟರಾಶಿಯೆಲ್ಲಾ ಸ್ವಪ್ನ ದೃಷ್ಟದಂತೆ ಆದಮೇಲೆ ೨

ತಲೆಯಮೇಲೆ ಕೈಯ್ಯನಿಟ್ಟು ಇಳೆಯ ಮೋರೆ ಮಾಡಿ ನೊಂದು
ನೆಲವ ಕಚ್ಚಿ ಬಿದ್ದರೇನು ಫಲವೊ ಧೀರಜನ ಪ್ರಸನ್ನ ೩

೧೮೭

ಭಕುತಿ ಸುಲಭವಲ್ಲ ಶ್ರೀ ಹರಿ ಭಕುತಿ ಸುಲಭವಲ್ಲ ಪ

ಮುಕುತಿಗೆ ಯುಕುತಿ ಬೇರೆಯಿಲ್ಲ ಶ್ರೀ ಹರಿ ಅ.ಪ

ಉರುತರ ಕ್ಲೇಶಕೆ ಗುರಿಯಾಗುತಿರಲು
ಹರಿ ಹರಿಯೆನ್ನುತ ಕಿರುಚುತ ಸತತವು
ಮರೆಯಾಗಲು ಕ್ಲೇಶ ಹರಿಯನು ಸುಲಭದಿ
ಮರೆವುದು ಭಕುತಿಯ ತರವಾಗುವುದೇ ೧

ಭುವಿಯಲಿ ಬಹು ವಿಧ ಸುವಿನೋದಗಳ
ಸವಿಯನು ಪೊಂದಲು ವಿವಿಧ ಭಾಗ್ಯಗಳ
ಸುವಿನಯದಲಿ ಮಾಧವನನು ಬೇಡಲು
ಹವನ ಹೋಮಗಳು ಭಕುತಿಯಾಗುವುದೇ ೨

ಶ್ರವಣ ಮನನ ವಿಧಿಧ್ಯಾಸಗಳಿಂ ಸಿರಿಪತಿ
ಗುಣಗಣದಲಿ ದೃಢಮತಿಯನು ಮಾಡುತ
ತನುಮನಗಳನರ್ಪಣೆಯನು ಮಾಡುತ
ಮನಸಿಜ ಜನಕ ಪ್ರಸನ್ನನಾಗುವಂಥ ೩

೧೮೮

ಭಕ್ತವತ್ಸಲ ಹರಿ ಎಂಬ ಬಿರುದು ನಿನ
ಗಿತ್ತವರ್‍ಯಾರಯ್ಯಾ ಹೇ ಜೀಯಾ ಪ

ಎತ್ತ ನೋಡಲು ನಿನ್ನ ಭಕ್ತ ಜನರು ಬಲು
ತತ್ತರಿಸುತಲಿಹರು ಈ ಜಗದೊಳು ಅ.ಪ

ಪರಿಪರಿಯಲಿ ನಿನ್ನ ಮೊರೆಯ ಹೊಕ್ಕಿರುವ
ಪರಮ ಸುಜನರುಗಳು ಈ ಧರೆಯೊಳು
ಒರಳಿಗೊಡ್ಡಿರುವ ಶಿರಗಳುಳ್ಳವರಂತೆ
ದುರುಳರ ಭಯದಿಂದ ನರಳುತಿರೆ ೧

ವಾಸಕೆ ಗೃಹವಿಲ್ಲ ಲೇಶ ಸುಖಕೆ ಅವ
ಕಾಶ ಇವರಿಗಿಲ್ಲ ಈ ಭುವಿಯೊಳು
ಶ್ರೀಶನಾಗಿರೆ ನಿನ್ನ ದಾಸರೊಳಗೆ ಪರಿ
ಹಾಸ ಮಾಡುತಲಿಹೆಯೋ ಜಗದೀಶ ೨

ನಿನ್ನಯ ಈ ಪರಿ ಘನ್ನಬಿರುದುಗಳು
ಇನ್ನು ಉಳಿವುದೆಂತೋ ನಾ ಕಾಣೆ
ಸನ್ನುತಿಸುವವರಿಗೆ ಇನ್ನಾದರು ಸುಖ
ವನ್ನು ನೀ ದಯಮಾಡೋ ಪ್ರಸನ್ನ ೩

೧೮೯

ಮಂಗಳಂ ಶ್ರೀ ರಘುಪುಂಗವನಿಗೆ ಜಯ
ಮಂಗಳಂ ಜಾನಕಿವಲ್ಲಭನಿಗೆ ಶುಭ ೧

ಶಿಷ್ಟ ಜನಗಳಿಗೆ ಇಷ್ಟಾರ್ಥಗಳೀವ
ವೃಷ್ಣಿವರೇಣ್ಯ ಶ್ರೀ ಕೃಷ್ಣ ಮೂರುತಿಗೆ ೨

ಸಚ್ಚಿದಾನಂದ ಸ್ವರೂಪಗೆ ಮಂಗಳಂ
ಸತ್ಯವತಿ ಸುಕುಮಾರಗೆ ಮಂಗಳಂ ೩

ಹೇಮಕಶಿಪುವಿನ ತನಯನಿಗೊಲಿದ
ನಾಮಗಿರೀಶ ಶ್ರೀ ಸ್ವಾಮಿನೃಸಿಂಹಗೆ ೪

ತನ್ನ ಭಕುತರಿಗೆ ಹೊನ್ನು ಮಳೆಗರೆವ
ಪನ್ನಗಶಯನ ಪ್ರಸನ್ನವಿಠಲಗೆ ೫

೧೯೦

ಮದನ ಜನಕ ಸದಯ ಎನ್ನ ಹೃದಯ ಮಂದಿರದಲಿ
ವದನ ಕಮಲ ನಿಲ್ಲಿಸೊ ಸತತ ಯದುತಿಲಕ ಪ

ಮದ ಮತ್ಸರದಿಂದ ಬಹಳ ಚದುರುತಿರುವ ಎನ್ನ ಮನದ
ಹದವಗೈದು ನಿನ್ನ ದಿವ್ಯ ಪದಸೇವೆಯ ಮುದವೊದಗಿಸೊ ಅ.ಪ

ಮಲಿನವಾದ ಎನ್ನ ಮನವು ಹಲವು ವಿಧದ ಅನುಭವಗಳಿಂ
ಚಲಿಸದಂತೆ ಇರುವುದೆಂದು ತಿಳಿದು ಮುದವ
ಪೊಂದಿರುವೆನೊ ೧

ಕಲಿಪುರುಷನಿಗೆ ಸುಲಭದಲಿ ಸಿಲುಕದಂತೆ ಎನ್ನ ಮನಕೆ
ಬಲವನಿತ್ತು ಹರುಷದಿಂದ ಒಲಿಯುತ ಪ್ರಸನ್ನನಾಗೊ ೨

೧೯೧

ಮಧುರವು ಮಧುರನಾಥನ ನಾಮವು ಪ

ದಧಿ ಮಧು ದ್ರಾಕ್ಷಾ ಸುಧೆರಸಗಳಿಗಿಂತ ಅ.ಪ

ಸುಂದರವದನನ ಅರವಿಂದ ನಯನನ
ನಂದಕುಮಾರನ ಚಂದದ ನಾಮವು ೧

ಯದುಕುಲ ತಿಲಕನ ಸದಮಲ ಚರಿತನ
ಮದನ ಪಿತನ ನಾಮ ಮುದದಲಿ ಪಾಡಲು ೨

ಗಾನವಿಲೋಲನ ದಾನವ ಕಾಲನ
ಲೀಲೆಗಳನು ಸದಾ ಲಾಲಿಸಿ ಪೊಗಳಲು ೩

ಹೇಮವಸನನ ಕೋಮಲ ರೂಪನ
ಭಾಮಾಕಾಂತನ ಪ್ರೇಮದ ನಾಮವು ೪

ಪನ್ನಗಶಯನನ ಚಿನ್ಮಯ ರೂಪನ
ಸನ್ನುತಿಸಲಿಕೆ ಪ್ರಸನ್ನನ ನಾಮವು ೫

೧೯೨

ಮರೆವನೇ ಮುರವೈರಿಯು ಸಿರಿಪತಿ ಸತ್ಯಶಾಸನ ಪ

ಸುಖದು:ಖಗಳನು ಮನಕೆ ಸೇರಿಸದೆ ಸದಾ
ಅಖಿಲ ಕಾರಣ ಹರಿಭಕುತ ಜನರ ೧

ಅತಿಭಾಗ್ಯ ಬಂದಾಗಲೂ ಚ್ಯುತಿ ಬಂದರೂ ಸ್ಥಿರ
ಮತಿಯ ಪೊಂದುತ ಭಜಿಸುವ ಭಕುತನ ೨

ಸಿಂಧುಶಯನನನು ವಂದಿಪ ಸುಜನರ
ಬಂಧು ಬಳಗ ಜನವೆಂದರಿವನು ೩

ಸಂಕಟ ಬಂದಾಗಲು ಶಂಕೆಯ ಮಾಡದ
ಪಂಕಜನಾಭನ ಕಿಂಕರನನು ೪

ಎನ್ನ ಕರ್ಮಗಳೆಲ್ಲ ನಿನ್ನ ಅಧೀನವೆಂದು
ಸಂತತ ಭಜಿಸೆ ಪ್ರಸನ್ನನಾಗದೆ ೫

೧೯೩

ಮಲಗು ಮಲಗೆಲೊ ಸುಮ್ಮನೆ ಸುಕುಮಾರ
ಚೆಲುವ ಜೋಗುಳವ ಪಾಡುವೆ ಗೋಪಾಲ ಪ

ಲಲನಾಮಣಿಯರು ಸುಲಭದಿ ನಿನ್ನನು
ಕಲಭಾಷಣದಿಂದ ಸೆಳೆಯ ಬಯಸುತಿಹರೋ ಅ.ಪ

ಭೋಗಿಶಯನ ಹರಿ ಈ ಜಗದೊಳಗೆ
ಈಗ ಬಂದಿರುವ ಜಾಗವನರಿಯದೆ
ಯೋಗಿ ಜನರು ಅನುರಾಗದಿಂದ ನಿನ್ನ
ಸಾಗಿಸಲಿರುವರೊ ಕೂಗದೆ ಸುಖದಲಿ ೧

ದುರುಳ ಶಕಟನನು ಮುರಿದ ಕೋಮಲದ
ಚರಣ ಕಮಲಗಳು ಉರಿಯುತಲಿದ್ದರು
ಮರೆಯಲದನು ಸುವಿನೋದವೀಯುವ
ಸರಸಪದಗಳನು ಪರಿಪರಿಯರುಹುವೆನೊ ೨

ಎನ್ನಯ ಕರಗಳು ನೋಯುತಲಿರುವುವು
ಚಿನ್ಮಯ ರೂಪನೆ ನಿದ್ರೆಯ ಮಾಡೊ
ಚಿಣ್ಣ ನಿನಗೆ ಸವಿಯಾದ ದಧಿ ಪಯ
ಬೆಣ್ಣೆಯ ಕೊಡುವೆ ಪ್ರಸನ್ನ ಸುಹೃದಯದಲಿ ೩

೧೯೪

ಮಲಗೆಲೊ ಗೋಪಾಲ ಎನ್ನಯ
ಕರವು ನೋಯುತಿಹುದೊ ಶ್ರೀ ಕೃಷ್ಣ ಪ

ತಿರುಗಿ ತಿರುಗಿ ವನದಿ ನಿನ್ನಯ
ಪದವು ನೋಯುತಿಹುದೇ ಶ್ರೀ ಕೃಷ್ಣ ಅ.ಪ

ದುಷ್ಟ ಪೂತನಿ ವಿಷದಿ ನಿನ್ನಯ
ಹೊಟ್ಟೆ ನೋಯುತಿಹುದೇ ಶ್ರೀ ಕೃಷ್ಣ
ದಿಟ್ಟ ಆ ನಾರಿಯರ ಕ್ರೂರದ
ದೃಷ್ಟಿ ತಾಕಿತೇನೋ ಶ್ರೀ ಕೃಷ್ಣ ೧

ಮುರಳಿಯ ಬಾರಿಸಿದ ನಿನ್ನಯ
ಬೆರಳು ನೋಯುತಿಹುದೇ ಶ್ರೀ ಕೃಷ್ಣ
ಒರಳು ಬಲದಿ ಎಳೆದ ನಿನ್ನಯ
ಕರಳು ಹಿಡಿಯತೇನೋ ಶ್ರೀ ಕೃಷ್ಣ ೨

ನಿನ್ನ ಕೊರತೆಗಳನು ಬೇಗನೆ
ಎನ್ನ ಮನಕೆ ತಿಳಿಸೋ ಶ್ರೀ ಕೃಷ್ಣ
ಚಿನ್ನ ನಿದ್ರೆ ಬರಲು ಮನದಿ ಪ್ರ
ಸನ್ನ ಹರಿಯ ನೆನೆಯೋ ಶ್ರೀ ಕೃಷ್ಣ ೩

೧೯೫

ಮಾಧವ ಗೋವಿಂದ ದೇವ ಮಾಧವ ಗೋವಿಂದ ಪ

ಪಾದಭಕುತಿ ನೀಡೋ ದೇವ ಅ.ಪ

ಅನವರತವು ಮನದಿ ನಿನ್ನಯ
ಘನಮಹಿಮೆಗಳನ್ನು ಮೋದದಿ
ನೆನೆಯುವಂತೆ ಮಾಡೋ ದೇವ ೧

ಅಭಿಮಾನವ ಬಿಡಿಸೋ ವಿಷಯದ
ಅಭಿಮಾನವ ಬಿಡಿಸೋ ನಿನ್ನಯ
ಅಭಯಕರ ನೀಡೋ ದೇವ ೨

ಎಂದಿಗು ಹೃದಯದಲಿ ರಾಗದ
ಗಂಧವು ಬರದಂತೆ ದೇವ
ಸುಂದರ ಗೋಪಾಲ ಎನ್ನ ಹೃ
ನ್ಮಂದಿರದಲಿ ನಿಲ್ಲೋ ಪ್ರಸನ್ನ ೩

೧೯೬

ಮಾಧವ ಸಾಧುಜನ ಕಾದಿರುವರೊ ಪ

ಆದರದಿಂದ ನಿನ್ನ ನೋಡುವುದಕೆ ಅ.ಪ

ಶಾಸ್ತ್ರಗಳಿಂದಲು ಅರಿಯದ ನಿನ್ನ ಪ
ವಿತ್ರ ರೂಪವನು ನೋಡಲೋಸುಗ ೧

ಘೋರತಪಗಳಿಂದ ಸೇರದೆ ನಿನ್ನನು
ಚಾರಿಯೊಳ್ ಪೊಂದಲು ಕೋರುತಿಹರೊ ೨

ದಾನ ಧರ್ಮಗಳಿಗೂ ಸುಲಭದಿ ದೊರೆಯದ
ನೀನೆ ಬಂದಿರಲು ವಿನೋದಿಸುವರೊ ೩

ತೀರ್ಥಯಾತ್ರೆಯು ಮನ ಮಾತ್ರ ಶೋಧಿಪುದೆಂದು
ಮೂರ್ತಿ ನೋಡಲು ನಿನ್ನ ಪ್ರಾರ್ಥಿಸುವರೊ ೪

ಅನ್ನದಾನವ ಮಾಡೆ ಹೊನ್ನು ಇವರಿಗಿಲ್ಲ
ಮನ್ನಣೆ ಮಾಡಿ ಪ್ರಸನ್ನನಾಗೆಲೊ ೫

೧೯೭

ಮುರಳಿ ಬಾರಿಸೊ ಮಾಧವ ಪ

ಕುಣಿಯುವೆ ಮುರಳಿ ಬಾರಿಸೊ ಮಾಧವ ಅ.ಪ

ಭವದ ಸಂತಾಪವು ಕೊನೆಗಾಣಲಿ
ಭುವಿಯೊಳು ಜೀವನ ಸವಿಯಾಗಲಿ
ನವವಿಧ ಭಕುತಿಯು ಹರಿದಾಡಲಿ
ಕಿವಿ ತುಂಬ ಕೇಳಿ ನಾ ನಲಿಯುವೆ ಶ್ರೀಕರ ೧

ಅರಿಷಡ್ವರ್ಗಗಳೆಲ್ಲ ಮರೆಯಾಗಲಿ
ಹರುಷ ಮಾನಸದಲಿ ಸೆರೆಯಾಗಲಿ
ಮುರಳಿಯ ಧ್ವನಿಯು ತಾ ದೊರೆಯಾಗಲಿ
ಪರಮ ವೈರಾಗ್ಯವೆ ಸಿರಿಯಾಗಲಿ ದೇವ ೨

ಸಾಲೋಕ್ಯ ಸಾರೂಪ್ಯ ಸಾಯುಜ್ಯವು
ಈ ಲೋಕದಲ್ಲೀಗ ಈ ಲಾಭವು
ಶ್ರೀಲೋಲ ಗೋಪಾಲ ಬಾಲ ಪ್ರಸನ್ನನೆ
ಮೇಲಾಯ್ತು ನರಜನ್ಮವಿರಲಿ ಎಂದೆಂದಿಗೂ ೩

೧೯೮

ಮುರಳಿಯಧರ ಶ್ರೀ ಕೃಷ್ಣನ ನೋಡಲು
ಏನೋ ಸಂತೋಷ ಏನೋ ವಿನೋದ ಪ

ಹರಿವಳು ಯಮುನೆಯು ಮೆಲ್ಲನೆ ನೋಡಲು
ಗೋವಿಂದನನು ಪರಮಾನಂದದಿ ಅ.ಪ

ಕೊಳಲೂದಲು ಶ್ರೀಕೃಷ್ಣನು ನಾದದ
ಸುಳಿ ಬಾಡುವುದೆಂಬುವ ಭೀತಿಯಲಿ
ಜಲ ಮೂಲನು ಬೆಳದಿಂಗಳ ಕರಗಳ
ತಳಿರುಗಳಿಂದಲಿ ತಳ ಸೇರಿಸುವ ೧

ಶೃಂಗಾರ ಶರಧಿ ತರಂಗಗಳೆದ್ದವು
ರಂಗನ್ನ ವದನ ಶಕಾಂಕನ್ನ ನೋಡಿ
ಅಂಗನೆಯರು ತಮ್ಮಂಗಗಳಲಿ
ಭಂಗವ ಪಡೆದರನಂಗನ ಶರದಿ ೨

ಭುವನವ ತುಂಬಿತು ಗಗನವು ತುಂಬಿತು
ದಿವಿಜರ ಲೋಕಗಳೆಲ್ಲವು ತುಂಬಿತು
ಕವಿಗಳು ಬೆರಗಾದರು ವರ್ಣಿಸಲೀ
ಸವಿ ಮುರುಳಿಯು ನಾದದ ಪ್ರವಹನನು ೩

ತುರುಗಳ ಪಯಧರ ಸ್ರವಿಸಿತು ಕ್ಷೀರವ
ಕರೆದರು ಮೋದದ ಕಂಬನಿಯೆಲ್ಲರು
ಮರೆತರು ನರಲೋಕದ ಮಂದಿಗಳು
ಅರಿತು ಮೋಕ್ಷದ ಸುಖವೆಂತೆಂಬುದ ೪

ಈಶನು ಕೈಲಾಸದಲಿ ಕುಣಿದನು
ಶೇಷನು ಸಾಸಿರ ಫಣಿಗಳನಾಡಿದ
ದೋಷರಹಿತ ವಾಣೀಶನ ವದನ ವಿ
ಕಾಸವು ಬೆಳಗಿತು ನಾಕು ದಿಕ್ಕುಗಳ ೫

ಆ ಸಮಯವ ಇತಿಹಾಸಗಳಲಿ ಕವಿ
ವ್ಯಾಸರಿಗಲ್ಲದೆ ವರ್ಣಿಸಲಳವೆ
ಭಾಸುರ ಸುಂದರ ವದನ ಪ್ರಸನ್ನನು
ರಾಸಕ್ರೀಡೆಯ ರಸವನು ಹರಿಸುತ ೬

೧೮೯

ಮುರಳಿಯ ಧ್ವನಿಯು ಕರೆಯುತಲಿರುವುದು
ಪೋಗುವ ಬಾರೆ ಸಖಿ ಪ

ಪೋಗುವ ಬಾರೆ ಸಖಿ ಬೇಸರ ನೀಗುವ ಬಾರೆ ಸಖಿ
ವಿಧ ವಿಧ ಭೋಗವ ಪಡುವ ಸಖೀ ಅ.ಪ

ವರವಂಶದಿ ಜನಿಸಿದ ಭಾಗ್ಯವ ಈ
ಮುರಳಿಯು ತಂದಿತು ಕೇಳೆ ಸಖಿ
ಪರಮ ಪ್ರೇಯಸಿ ಇವಳಂತರಂಗವ
ಮರೆ ಮಾಚುವ ರಸಿಕಾಗ್ರಣಿ ಕೃಷ್ಣನ ೧

ಕ್ಷೀರಶರಧಿತನಯಳ ವೈಭವ ಈ
ನೀರಸಳಿಗೆ ಇದು ಅಚ್ಚರಿಯು
ಕೋರಿ ಚುಂಬಿಸುವ ಕೃಷ್ಣನಧರ ಸುಧೆ
ಧಾರೆಯೊ ಸೂರೆಯೊ ಶೌರಿಯ ೨

ಹುಲ್ಲೆ ಹುಲಿಯ ಭಯ ತೊರೆದು ಕೇಳುತಿದೆ
ಕಲ್ಲು ಕರಗಿ ಮೃದುವಾಗಿರುವಂತೆ
ನಲ್ಲೆ ಎನ್ನ ಹೃದಯವು ಕರಗಿತು ನಾ
ನಿಲ್ಲಿ ಎನ್ನ ಮನವಲ್ಲಿ ಪ್ರಸನ್ನನ ೩

೨೦೦

ಮುರಳಿಯ ನಾದವ ಕೇಳಿ ಬನ್ನಿರಿ ಪ

ಮುರಳಿಯ ನಾದವ ಕೇಳಿ ಅ.ಪ

ಮದುರಾನಾಥನು ಮುರಳಿಯನೂದಲು
ಸುರಿವುದಾನಂದಜಲ ನಯನದಲಿ ೧

ಕಂಗೊಳಿಸುವ ಬೆಳದಿಂಗಳ ಸೊಬಗಿನಲಿ
ತಂಗಾಳಿಯ ಸುಖದಿ ಶ್ರೀರಂಗನ ೨

ಶ್ಯಾಮಲಾಂಗನು ತನ್ನ ಕೋಮಲ ಕರದಲಿ
ಆ ಮುರಳಿಯ ಪಿಡಿಯೆ ಹೃದಯದಲಿ
ಪ್ರೇಮವು ತುಂಬುವುದು ೩

ಪಂಚಬಾಣನ ಪಿತ ಮುರಳಿಯ ಮಧುರಸ
ಹಂಚಲೆಮಗೆ ರೋಮಾಂಚವಾಗುವುದು ೪

ರಜನೀಕಾಂತನ ಕುಲದಲಿ ಜನಿಸಿ
ವ್ರಜಜನಗಳಿಗಧಿಕ ಪ್ರಸನ್ನನ ೫

೨೦೧

ಮೊಸರ್ಬೇಕ್ ಮೊಸರು ಧೇಂಡಿಯ ಮೊಸರು ಪ

ಕರಣೆಯೆಂದ್ಹೆಸರು ಕೇಳ್ಬೇಡಿ ಕೊಸರು ಅ.ಪ

ಗೋಕುಲದಲಿ ಶ್ರೀಕೃಷ್ಣನು ತಾನೆ
ಆಕಳಮಂದೆಯ ಹೊಂದಿರುತಾನೆ
ಆ ಕರುಣಾನಿಧಿ ಕಳಿಸಿರುತಾನೆ
ಬೇಕಾದರೆ ಬನ್ನಿ ನಾ ಇಕ್ಕುತ್ತೇನೆ ೧

ಎಳಗಂದಿಯಲ್ಲವು ತಿಳಿಗಟ್ಟುವುದಿಲ್ಲ
ಕೊಳೆಯಿಲ್ಲವು ಈ ಬಿಳಿಮೊಸರಿನಲಿ
ತಿಳಿಯ ವೈರಾಗ್ಯ ಭಕ್ತಿಗಳುಳ್ಳ ಜನಕೆ
ಗೆಳೆಯ ಶ್ರೀ ಕೃಷ್ಣನು ಕಳಸಿದನಮ್ಮ ೨

ಬಿಂದು ಮಾತ್ರದಿ ನಿಜಾನಂದವ ಕೊಡುವುದು
ಬಿಂದಿಗೆ ತಂಬಿಗೆ ತರಬೇಡಿರಮ್ಮ
ಮಂದ ಜನರು ತಾವರಿಯರು ಇದನು
ತಂದೆ ಪ್ರಸನ್ನನ ಪರಮ ಪ್ರಸಾದವ ೩

೨೦೨

ಯಾರಯ್ಯ ನೀನ್ಯಾರಯ್ಯ ಪ

ಸೋರುತಿರುವ ಸೌಂದರ್ಯದಿ ಮನವನು
ಸೂರೆಯಗೊಂಬ ನೀನ್ಯಾರಯ್ಯ ಅ.ಪ

ನಂದನ ಕಂದ ನೀನಾದರೆ ಗೋವ್ಗಳ
ಮಂದೆಯ ಬಿಟ್ಟು ಬಂದಿಹುದೇಕೆ
ಸಂದೇಹವು ತೋರುತಲಿವೆ ನಿನ್ನನು
ಎಂದಾದರು ನಾ ಬಯಸಿದೆನೆ ೧

ನೀರಿಗೆ ಬಂದೆನು ನಾನಿಲ್ಲಿ
ಯಾರು ಪೇಳಿದರು ಎನ್ನ ಸುದ್ದಿ
ಮಾರನ ತಾತ ನೀನಿರಬಹುದು
ಯಾರ ಮಾತ ಕೇಳುವಳಲ್ಲ ೨

ಬಿಂದಿಗೆ ಭಾರವು ಜಗಿಯುತಿದೆ
ಮಂದಸ್ಮಿತವೆನ್ನ ಬಿಗಿಯುತಿದೆ
ತಂದೆ ಪ್ರಸನ್ನ ಕೈಮುಗಿಯುವೆನು
ಮಂದಿರ ಮಾರ್ಗವು ಸಿಗಲೆನಗೆ ೩

೨೦೩

ಯಾರಿರಬಹುದೀತ ಗೆಳತೀ
ಯಾರಿರಬಹುದೀತ ಪ

ಯಾರೆಂದರಿಯದೆ ಪೋಗದೆ ಕೊರತೆ
ಯಾರಿರಬಹುದೀತ ಅ.ಪ

ಸಾವಿರ ಸಂಖ್ಯೆಯ ಗೋವಳರಿದ್ದರೂ
ಯಾವನಿಗೀ ವಿಧ ಠೀವಿಯಿರುವುದೇ
ಹಾವಭಾವಗಳ ನೋಡಲು ಈತನ
ಗೋವಳ ವೇಷವದಾವ ಕಾರಣವೋ ೧

ನಮಗೇತಕೆ ಈತನ ಗೋಜೆಂದರು
ಕಮನೀಯನ ನೋಡುತ ನೋಡುತ ಬಲು
ಮಮತೆಯು ಮನದಲಿ ಏರುತಲಿರುವುದು
ಕಮಲನಯನೆ ನಾ ನಮಿಸುವೆ ಪೇಳೆ ೨

ಸರಳನೋ ದುರುಳನೋ ಅರಿಯುವುದೆಂತೇ
ಕರೆಯದೆ ಹೋದರೆ ಜರಿಯಲುಬಹುದೇ
ಮುರಳಿಯ ನಾದದ ಕರೆ ಬಂದರೆ ನಾ
ಬರವೆನೆಂದರು ಹೇ ಸರಸ ಪ್ರಸನ್ನ ೩

೨೦೪

ರಮಿಸುವೆವೆಂದಿಗೆ ಮುರಳೀಧರನ ಪ

ಸುಮನಸವಂದಿತ ವಿಮಲ ಚರಿತನ ಅ.ಪ

ಮಂದಮಾರುತ ಸುಮಗಂಧ ಬೀರುತಲಿರೆ
ಸುಂದರವದನ ಗೋವಿಂದನ ನೊಸಲಲಿ ೧

ವನರುಹನೇತ್ರನ ಪರಮ ಪವಿತ್ರನ
ವನಜಾಕ್ಷಿಯರೆಲ್ಲ ವನವಿಹಾರದಲಿ ೨

ಹೇಮವಸನನ ಕೋಮಲ ರೂಪನ
ಕಾಮಿನಿಯರು ನಾವು ಪ್ರೇಮವ ಬೀರುತ ೩

ಕಲಭಾಷಣದಿಂದ ಸೆಳೆಯುತ ಮನವನು
ಜಲಜಾಕ್ಷಿಯರೆಲ್ಲ ಜಲ ವಿಹಾರದಲಿ ೪

ಭಾಸುರಾಂಗನ ಪರಿಹಾಸ ಮಾಡುತಲಿ
ಬೇಸರವಿಲ್ಲದೆ ರಾಸಕ್ರೀಡದಿ ೫

ಸಂಗೀತವ ಪಾಡಿ ರಂಗನ ಒಡಗೂಡಿ
ಅಂಗನೆಯರೆಲ್ಲ ಅನಂಗ ಕೇಳಿಯಲಿ ೬

ಬಿನ್ನನೆ ಬಾರೆಂದು ಕೆನ್ನೆಯ ಪಿಡಿಯುತ
ಸನ್ನೆಯ ಮಾಡಿ ಪ್ರಸನ್ನಮುಖಿಯರು ೭

೨೦೫

ರಕ್ಷಿಸೊ ಜಾನಕಿ ಕಾಂತ ಶಾಂತ ಪ

ತಕ್ಷಣದಲಿ ಉಪೇಕ್ಷೆಯ ಮಾಡದೆ ಅ.ಪ

ದಕ್ಷ ನಾನಲ್ಲವೊ ಪೊಗಳಲು ಶಾಸ್ತ್ರ ವಿ
ಚಕ್ಷಣೆಯರಿಯೆನೋ ಲಕ್ಷ್ಮೀನಾಥ ೧

ಸಂತತಪಡುತಿಹ ಚಿಂತೆಯ ಬಿಡುತಲಿ
ಶಾಂತಿಯ ಪೊಂದುವ ತಂತ್ರವ ತೋರುತ ೨

ಬೇಡುವ ವಿಧದಲಿ ರೂಢಿಯಿಲ್ಲದೆ ಬಲು
ಪಾಡುಪಡುತಿಹೆನೋ ನೀಡುತ ಕರವನು ೩

ಕ್ಷೀಣಿಸೆ ಉರುತರ ತಪಗಳಿಂ ತನುವನು
ತ್ರಾಣವಿಲ್ಲವೋ ರಮಾಪ್ರಾಣನಾಥನೆ ೪

ಕೆಟ್ಟಯೋಚನೆ ಎನ್ನ ಮುಟ್ಟದೆ ಮನವನು
ಘಟ್ಟಿಯ ಮಾಡುತ ಶಿಷ್ಟ ಪ್ರಸನ್ನನೇ ೫

೨೦೭

ರಾಮ ಭಜನೆ ಮಾಡೋ ಮನುಜ
ರಾಮ ಭಜನೆ ಮಾಡೋ ಪ

ರಾಮ ರಾಮ ಜಯ ರಾಘವ ಸೀತಾ
ರಾಮನೆಂದು ಸುಸ್ವರದಲಿ ಪಾಡುತ ಅ.ಪ

ತಾಳವನು ಬಿಡಬೇಡ ಮೇಳವನು ಮರೆಬೇಡ
ತಾಳಮೇಳಗಳ ಬಿಟ್ಟು ನುಡಿದರೆ
ತಾಳನು ನಮ್ಮ ಇಳಾಸುತೆಯರಸನು ೧

ಚಿತ್ತವನು ಚಲಿಸದಿರು ಭೃತ್ಯ ಮನೋಭಾವದಲಿ
ಸತ್ಯ ಜ್ಞಾನ ಅನಂತ ಬ್ರಹ್ಮನು
ಹೃದ್ಗತನೆಂದರಿಯುತ ಭಕುತಿಯಲಿ ೨

ಭಲರೆ ಭಲರೆಯೆಂದು ತಲೆದೂಗುವ ತೆರದಿ
ಕಲಿಯುಗದಿ ವರಕೀರ್ತನೆಯಿಂದಲಿ
ಸುಲಭದಿ ಹರಿಯ ಪ್ರಸನ್ನತೆ ಪಡೆಯಲು ೩

೨೦೮

ವಾಸುದೇವ ಸಾಮಾನ್ಯ ನೀನಲ್ಲವೊ ಪ

ಪೋತನಾದರು ನವನೀತ ಇಷ್ಟು ತಿನ್ನುವಿ
ಭೂತಗಳಿರುವುವೇನೊ ಉದರದೊಳು ೧

ಕುದಿಯುವ ಪಾಲನು ಮುದದಿಂದ ಕುಡಿಯುವೆ
ಉದಕದ ರಾಶಿ ಜಿಹ್ವೆಯೊಳಿಹುದೇನೊ ೨

ರಾತ್ರಿ ವೇಳೆಯಲಿ ನೀ ಸುತ್ತುವಿ ಮನೆ ಮನೆ
ನೇತ್ರದೊಳ್ ಸೂರ್ಯಚಂದ್ರರು ಇಹರೇನೊ ೩

ಶಿಕ್ಷೆಮಾಡಲು ಬೆನ್ನು ಪಾರ್ಶ್ವದಲ್ಲಿಹ ನಮ್ಮ
ಈಕ್ಷಿಸುವುದಕೆ ವಿಶ್ವತ ಚಕ್ಷುವೇನೊ ೪

ನಿನ್ನ ಚರಿತೆ ಎಮಗೆ ಚೆನ್ನಾಗಿ ತಿಳಿಸಿ ಪ್ರ
ಸನ್ನನಾಗದಿರೆ ಮನ್ನಿಸೆವೋ ನಿನ್ನ ೫

೨೦೮

ವೇಣು ಗೋಪಾಲನು ಬರುವನಂತೆ ಪ

ಜಾಣೆ ನಮ್ಮನೆಯಲಿ ಇರುವನಂತೆ ಅ.ಪ

ಪರಮ ಸುಂದರ ನವತರುಣನಿವ ಸಖಿ
ಅರಿತು ಭಜಿಪರಿಗೆ ಕರುಣಿ ಇವ ಸಖಿ
ತೊರೆಯಬೇಕಭಿಮಾನ ಕ್ಷಣದಲಿ
ಮರೆಯಬೇಕಿಹಲೋಕ ಬಂಧನ ೧

ಹೃದಯವ ಕದಿಯುವ ಚೋರನಿವ ಸಖಿ
ಮದನನ ಜಗಕಿತ್ತ ಜಾರನಿವ ಸಖೀ
ಕದನದಲಿ ಕಂಠೀರವನು ಶುಭ
ವದನೆಯರ ಶೃಂಗಾರ ಜಲನಿಧಿ ೨

ಘನತೆಯು ರುಚಿಸದು ಹುಡುಗನಿವ
ಧನವನು ಬಯಸನು ಸಿರಿರಮಣ
ತನುಮನಗಳರ್ಪಿಸಲು ಹರುಷದಿ
ಕುಣಿಯುವನು ಕುಣಿಸುವ ಪ್ರಸನ್ನನು ೩

೨೦೯

ವ್ರಜ ವಿಹಾರ ಜಯ ಮುರಾರೆ ಪ

ಭಜಿಪ ಯೋಗವೇನು ಸುಕೃತವೊ ಅ.ಪ

ಮುರಳಿನಾದ ಸುಧೆಯ ಧಾರೆ
ಹರಿದುದೆನ್ನ ಶ್ರವಣದಲ್ಲಿ
ಬೆರೆತೆ ನಿನ್ನ ಮರೆತೆ ಮೈಯ್ಯ
ಹಿರಿಯದಾಯ್ತು ಜನುಮವಿಂದು ೧

ಮೃದುಲಹಾಸ ಮಧುರಭಾಷ
ವದನ ಸೊಬಗ ನೋಡಿದೆನೋ ಶ್ರೀಶ
ಸದನದಲಿ ಮನೋಹರ ವಿಲಾಸ
ಹೃದಯ ಕಮಲಕಾದುದು ವಿಕಾಸ ೨

ಸಕಲಸಾರ ಭೋಕ್ತ ನಿನಗೆ
ಭಕುತಿ ಕುಸುಮವೆನ್ನ ಸೇವೆ
ಸುಖವನೀಪರಿ ನಿತ್ಯಗೊಳಿಸೊ
ಮುಕುತಿಯಿರಲಿ ಶ್ರೀ ಪ್ರಸನ್ನ ೩

೨೧೦

ಶರಣಾಗತಿಯೊಂದೆ ಸಾಧನ
ಶರಣಾಗತನಾದೆ ಮಾಧವ ಪ

ಶರಣಾಗತಿಯಿಂದ ಹರಿಯ ಪ್ರಸಾದವು
ಹರಿಯ ಪ್ರಸಾದವು ಪುರುಷಾರ್ಥಕೆ ಸಾಧನ ಅ.ಪ

ಹರಿಯಲಿ ಚಿತ್ತವು ಹರಿಯಲಿ ಭಕುತಿಯು
ಹರಿಯುದ್ದೇಶದಿ ಯಜನಾದಿಗಳು
ಹರಿಯ ಚರಣದಲಿ ನಮ ನವು ಇದನೇ
ಶರಣಾಗಿಯೆಂದರುಹಿದ ನುಡಿ ಕೇಳಿದೆ ೧

ಸರ್ವೋತ್ತಮ ನೀನೊಬ್ಬನೆ ಎನ್ನುವ
ದಿವ್ಯಜ್ಞಾನವ ಪೊಂದುತ ಮನದಲಿ
ಸರ್ವಾಧಿಕ ನಿಶ್ಚಲ ಪ್ರೇಮ ಸಹಿತ
ಸರ್ವಕರ್ಮ ನಿನ್ನೊಳಗರ್ಪಣೆ ಮಾಡುವೆ ೨

ಹರಿಯ ತ್ರಿವಿಧ ಪೂಜೆಗಳಲಿ ರತಿಯು
ಹರಿಯ ಪ್ರಸನ್ನತೆಯಲಿ ನಂಬುಕೆಯು
ಹರಿದಾಸನು ನಾನೆಂಬುವ ನಂಬಿಕೆ
ಶರಣಾಗತಿಯಿದು ಮೋಕ್ಷಫಲಕೆ ಸಾಧನ ೩

೨೧೧

ಶಾಮ ಸುಂದರ ಪ್ರೇಮವ ತೋರೆಲೊ ಪ

ತಾಮಸವಿಲ್ಲದೆ ಕಾಮಿತಗಳ ನೀಡೊ ಅ.ಪ

ಹಿಂದೆ ಅಜಮಿಳ ಒಂದನರಿಯದೆ
ಕಂದನನ್ನು ನಾರಾ ಎಂದು ಕರೆಯಲು
ಬಂಧುವೆಂದರಿತು ಮಂದಹಾಸದಿಂದ
ಬಂದು ರಕ್ಷಿಸಿದೆ ಎಂದು ಕೇಳಿರುವೆ ೧

ಕ್ರೂರ ಶಾಸನ ನಾರಿ ದ್ರೌಪದಿಯ
ಸೀರೆ ಸೆಳೆದು ಮಾನ ಸೂರೆಗೊಳುತಿರೆ
ಸಾರಿ ಕೂಗಲು ಭೂರಿದಯವನು
ತೋರಿರುವೆ ಎಂದು ಕೋರಿರುವೆ ನಿನ್ನ ೨

ಮುನ್ನ ಮಾಡಿದ ಎನ್ನ ಪಾಪಗಳಿಗೆ
ಖಿನ್ನನಾಗಿರುವೆ ಎನ್ನ ಮನದಲಿ
ಮನ್ನಿಸುತ್ತ ಸುಪ್ರಸನ್ನನಾಗಿ ಸದಾ
ಎನ್ನ ಹೃದಯ ಶುದ್ಧಿಯನ್ನೆ ಮಾಡಿ ಪೊರೆಯೊ ೩

೨೧೨

ಶಿಷ್ಟ ಜನರುಗಳಿಗೆ ಸತತ ಇಷ್ಟಾರ್ಥಗಳನೆ ಕೊಡುವ
ಬೈಷ್ಮೀಸತ್ಯಾಸಮೇತ ಕೃಷ್ಣ ನಿನಗೆ ಮಂಗಳಂ ಪ

ಸರ್ವಶಾಸ್ತ್ರಾರ್ಥಗಳನರಿತು ದುರ್ವಾದಿ ಮತವನಳಿದ
ಸರ್ವಜ್ಞಾಚಾರ್ಯ ಪೂಜಿತ ಕೃಷ್ಣ ನಿನಗೆ ಮಂಗಳಂ ೧

ಲೇಸಾಗಿ ಮಧ್ವಶಾಸ್ತ್ರವ ಭೂಸುರರಲಿ ಅರುಹಿದ
ವ್ಯಾಸಾರ್ಯವರಕರಾರ್ಚಿತ ಕೃಷ್ಣ ನಿನಗೆ ಮಂಗಳಂ ೨

ಘನ್ನ ಶ್ರೀ ವ್ಯಾಸಯತಿಗಳ ಉನ್ನತ ಪೀಠಪತಿಗಳಿಂ
ಚೆನ್ನಾಗಿ ಪೂಜಿಗೊಂಬ ಪ್ರಸನ್ನ ಕೃಷ್ಣಗೆ ಮಂಗಳಂ ೩

೨೧೩

ಶೂರತನವೇನೊ ಬಲು
ನಾರಿ ಜನರು ನೀರೊಳಿರಲು ಪ

ಸೀರೆಗಳ ಅಪಹರಿಸುತ ಬಲು
ಭಾರಿ ಮರವನೇರುತಿಹುದು ಶೌರಿ ಅ.ಪ

ಸಾರಸವದನನೆ ಕಾರಣವಿಲ್ಲದೆ
ನಾರಿಯರೆಮ್ಮನು ಸೇರಿ ಬಹಳ ಸರಸಗಳನ್ನು
ತೋರಿ ಮಾನಸೂರೆಗೆಯ್ಯುವುದು
ಭಾರಿ ನಡತೆ ಎಂದರಿತಿರುವಿಯೇನೊ ೧

ಮುರಹರನೆ ಈ ಪರಿಯಲಿರುವ ಎಮ್ಮ
ಕರಗಳ ಮುಗಿವುದು ತರವೇ ಬಹಳ ಮನ ಜರಿಯುವುದು
ಸರಿಯೇ ಇಂತು ಕೋರುತಲಿರುವುದು
ಮುರಳೀಧರನೆ ವಸನಗಳನು ಕೊಡೆಲೊ ೨

ಬಿಸಜನಯನ ಇದು ಹೊಸ ಪರಿಯಲ್ಲವೆ
ರಸಿಕ ಜನರು ಪರಿಹಾಸ ಮಾಡಿ ಮುಸಿ ಮುಸಿ ನಗುವರು
ಶ್ರೀಶ ನಿನಗೆ ಪಸುಳೆ ಜನರ ಸಹ
ವಾಸವೇ ಪ್ರಸನ್ನವದನ ಕೃಷ್ಣ ೩

೨೧೪

ಸಕಲ ಕಲ್ಯಾಣ ಗುಣಾಢ್ಯಗೆ ಮಂಗಳಂ
ನಿಖಿಲ ದೋಷದೂರಗೆ ಮಂಗಳಂ
ಭಕುತರ ಸಂತತ ಪೊರೆಯುತಿರುವ ನಮ್ಮ
ರುಕುಮಿಣಿ ಭಾಮಾರಮಣಗೆ ಮಂಗಳಂ ೧

ಯಾದವ ಕುಲಭೂಷಣನಿಗೆ ಮಂಗಳಂ
ಸಾಧು ಸುಧಾಮ ಸಖಗೆ ಮಂಗಳಂ
ಪಾದ ಸೇವಕರಿಗೆ ಮೋದವ ನೀಡುವ
ಮಾಧವನಿಗೆ ಸಂತತ ಶುಭಮಂಗಳಂ ೨

ವಿವಿಧ ಸೌಭಾಗ್ಯ ಸಂಪನ್ನಗೆ ಮಂಗಳಂ
ರವಿಶತ ಸಮತೇಜಗೆ ಮಂಗಳಂ
ಸುವಿನಯದಲಿ ಬೇಡುವರಿಗೆ ಶುಭಗಳ
ಜವದಲಿ ಕೊಡುವ ಪ್ರಸನ್ನಗೆ ಮಂಗಳಂ ೩

೨೧೫

ಸರಿಯೆ ಮರೆವುದು ಮುರಹರ ಪ

ಚರಣ ಸೇವಕರ ದಾಸನ ಮುರಹರ ಅ.ಪ

ಶರಣಾಗತಜನ ಭರಣನೆಂದರಿತು ನಾ
ಚರಣ ಕಮಲಗಳಿಗೆರಗಿದೆನೊ
ಕರುಣಾಮಯ ಕಾರಣ ಕಾರಣ
ಮಾರಮಣನೆ ಭಯ ಹರಣ ಮಾಡದೆ ೧

ಗಜವರನನು ಕಾಯ್ದ ನಿಜಚರಿತೆಯ ಸದಾ
ಭಜಿಸುತಿರುವೆನೊ ಅಜಜನಕ
ಸುಜನೋದ್ಧಾರ ತ್ಯಜಿಸದಿರೆಲೊ ಎನ್ನ
ಭುಜಪುಂಗರಿಪು ಧ್ವಜ ಹರಿ ಎನ್ನನು ೨

ಅನ್ಯರ ಮರೆತು ನಾ ನಿನ್ನನು ನಂಬಿದೆ
ಎನ್ನಲಿ ದಯದಿ ಪ್ರಸನ್ನನಾಗೊ
ಉನ್ನತಚರಿತ ಚಿನ್ಮಯ ಮೂರುತಿ
ನಿನ್ನ ಸೇವಕನನು ಧನ್ಯನ ಮಾಡದೆ ೩

೨೧೬

ಸರಿ ಸರಿ ಬಿಡು ಬಿಡು ನಿನ್ನಯ ಲೀಲೆಗ
ಳರಿಯಲು ಸಾಧ್ಯವೆ ಮುರಹರನೇ ಪ

ಸರಸ ನಿನಗೆ ಇದನರಿಯದ ಜನಗಳು
ಮರೆತನು ಹರಿ ಭಕುತರನೆಂದು
ಸುರಿವರು ಕಂಬನಿ ತರತರಿಸುವರು
ದುರಾತ್ಮರಿಗೆ ಪರಾಜಯವೆ ಕಾಣದೆ ೧

ಸಿಡಿಲಿನ ಬಡಿತಕೆ ಗುರಿಯಾದವು ಜಗ
ದೊಡೆಯನು ತೋರಿದ ಧರ್ಮಗಳು
ನುಡಿದ ವಚನಗಳ ನಡೆಸುವುದಾದರೆ
ತಡೆ ತಡೆ ಕಡುಘಾತಕರುಗಳನು ೨

ಕಲಿಪುರುಷನು ಬಲು ಸುಲಭದಿ ಜನರನು
ಸೆಳೆಯುತಿಹನು ತನ್ನ ಬಲೆಗೆ
ಗೆಳೆಯ ಪ್ರಸನ್ನನೇ ಕುಳಿತೆಡೆಯಲಿ ಜಗ
ವಳಿಯುತಿರಲು ಕಿಲಿ ಕಿಲಿ ನಗುತಿಹೆಯ ೩

೨೧೭

ಸುಂದರ ಕೃಷ್ಣನು ಕರೆಯುವ ಬನ್ನಿರೆ
ಇಂದುಮುಖಿಯರೆಲ್ಲ ಪ

ಚಂದದಿ ವಿಹರಿಸುವ ಬನ್ನಿರಿ
ಇಂದುಮುಖಿಯರೆಲ್ಲ ಅ.ಪ

ಭಾಸುರಾಂಗನ ಕೂಡಿ ನಾವು
ರಾಸಕ್ರೀಡೆಯಲಿ

ಈ ಸಂಸಾರದ ಕ್ಲೇಶಗಳನು ಪರಿ
ಹಾಸ ಮಾಡುವ ಬನ್ನಿ ೧

ಪರಿಮಳ ಕುಸುಮಗಳ ಸೊಗಸಿನ
ತರುಲತೆ ಬುಡದಲ್ಲಿ
ಮುರಹರ ಕೃಷ್ಣನ ಮುರಳಿಯನೂದುವ
ತರಳೆಯ ಅಂಬನ್ನಿ ೨

ನಂದಕುಮಾರನಿಗೆ ನಾವು
ಮಂದಹಾಸದಲ್ಲಿ
ಗಂಧ ತಾಂಬೂಲಗಳಂದದಿ ನೀಡುತಾ
ನಂದಪಡುವ ಬನ್ನಿ ೩

ಯಮುನಾ ತೀರದಲಿ ನಾವು
ಕಮನೀಯನ ಕೂಡಿ
ಸುಮಬಾಣನ ಸೊಲ್ಲನು ಮುರಿಯುವ ಬನ್ನಿ
ಕಮಲಾಕ್ಷಿಯರೆಲ್ಲಾ ೪

ಪನ್ನಗವೇಣಿಯರೇ ಈಗ ಪ್ರ
ಸನ್ನವದನ ಕೃಷ್ಣ
ತನ್ನ ಇಂಗಿತವನರುಹಲು ಎಮ್ಮನು
ಸನ್ನೆಯ ಮಾಡುತಿಹ ೫

೨೧೮

ಸಿರಿಯ ರಮಣ ನರಹರಿಯ ಚರಣಗಳ
ನಿರತ ಭಜಿಪರಿಗೆ ಸ್ಥಿರ ಸುಖವಿಹುದು ಪ

ದುರಳ ವಿಷಯಗಳ ತೊರೆದು ಮುದದಿ ಮೈ
ಮರೆಯುವ ತೆರದಲಿ ಉರುತರ ಭಕುತಿಯಲಿ ಅ.ಪ

ತನಯ ಪ್ರಹ್ಲಾದನು ಜನಕನ ವಚನವ
ನನುಸರಿಸದೆ ತನ್ನ ಮನದಲಿ ಸಂತತ
ನೆನೆದು ಶ್ರೀಹರಿಯನು ದಿನದಿನ ನಾರಾಯಣನ
ಸುಮಂಗಳ ಗುಣಗಳ ಪೊಗಳುತ
ಕುಣಿ ಕುಣಿಯುತ ತನ್ನ ಜನಕನ ಕೋಪಕೆ
ಹೊಣೆಯಾಗುತಲಿರೆ ಕ್ಷಣದಲಿ ಪೊರೆದ ೧

ಖೂಳನು ತನ್ನಯ ಬಾಲನ ನಡತೆಯ
ತಾಳಲಾರದೆ ಕೋಪ ಜ್ವಾಲೆಯಿಂದುರಿಯುತ
ಪೇಳೊ ಇಲ್ಲಿಹನೇನೊ ತಾಳೊ ನೋಡುವೆನೆಂದು
ಪೇಳಿ ಕಂಬವ ತನ್ನ ಕಾಲಲಿ ಒದೆಯಲು
ಸೀಳಿ ಛಟ ಛಟನೆ ತಾಳಿ ಘೋರತನು
ಖೂಳ ರಕ್ಕಸನಲಿ ಧಾಳಿಯ ಗೈದ ೨

ದುರುಳ ಹಿರಣ್ಯಕನ ಕರಳ ಬಗೆದು ತನ್ನ
ಕೊರಳಲ್ಲಿ ಮಾಲೆಯ ಧರಿಸಿ ಸಿಡಿಯುತಿರೆ
ಉರಿಯಿಂದ ಧರಣಿಯು ತರತರ ನಡುಗಲು
ಸುರರ ಮೊರೆಯ ಕೇಳಿ ವರಲಕುಮಿಯು ನರ
ಹರಿಯನು ಸ್ತುತಿಸಲು ಮರೆತು ಕೋಪವನು
ವರ ಭಕುತನಿಗೆ ಪ್ರಸನ್ನತೆಯಿತ್ತ ೩

೨೧೯

ಸುಮ್ಮನೆ ದೂರುವರೇ ಅಮ್ಮಯ್ಯ ಎನ್ನ
ಸುಮ್ಮನೆ ದೂರುವರೇ ಪ

ತಮ್ಮಯ ಸರಸಕೆ ಸಮ್ಮತಿ ಕೊಡದಿರೆ
ಕಣ್ಮಣಿಯರುಗಳೆಲ್ಲಾ ಅ.ಪ

ಕ್ಷೀರಚೋರನೆಂಬೋರೇ ಅಮ್ಮಯ್ಯ ಇವರ
ಕೋರಿಕೆ ನಡೆಸದಿರೆ
ಕ್ಷೀರ ಸಾಗರಶಾಯಿ ನಾರಾಯಣ ನಾನೆ
ಕ್ಷೀರಕೆ ಬಡತನವೇ ಅಮ್ಮಯ್ಯ ೧

ತುಂಟನೆಂಬೋರೆ ಎನ್ನ ಅಮ್ಮಯ್ಯ ಇವರ
ತಂಟೆ ಏತಕೆ ಎನಗೆ
ತುಂಟತನದಿ ಪಾಪ ಗಂಟು ಹೋಯಿತೆ ವೈ
ಕುಂಠಪತಿಯೇ ಸಾಕ್ಷಿ ಅಮ್ಮಯ್ಯ ೨

ಮಾಯಗಾರನೆಂಬೋರೆ ಅಮ್ಮಯ್ಯ ಎನ್ನ
ತೋಯಜಾಕ್ಷಿಯರೆಲ್ಲ
ಮಾಯಕೆ ಸಿಲುಕದೆ ಮಾಯೆಗೊಡೆಯನಾಗೆ
ಜಾಯಮಾನವಲ್ಲವೇ ಅಮ್ಮಯ್ಯ ೩

ಯಾರಿಂದೆನಗೇನೆ ಅಮ್ಮಯ್ಯ ಎನ್ನ
ಜಾರನೆಂಬೋರೆ ಎಲ್ಲಾ
ಯಾರು ಒಪ್ಪುವರೇ ಕುಮಾರನಲ್ಲವೆ ನಾನು
ಮಾರಜನಕ ನಾನೆ ಅಮ್ಮಯ್ಯ ೪

ಎನ್ನ ಮಾತನು ಕೇಳೆ ಅಮ್ಮಯ್ಯ ಈಗ
ಕನ್ನೆಯರಿಗೆ ಪೇಳೆ
ಇನ್ನಾದರು ಇವರು ಅನ್ಯಾಯವ ಬಿಟ್ಟು
ಎನ್ನನು ಪೊಗಳಿದರೆ ಅಮ್ಮಯ್ಯ ಪ್ರಸನ್ನನಾಗುವೆನೆಂದು ೫

೨೨೦

ಸೇರದಾದವು ಅಶನವಸನಗಳಾರೊಡನೆ ನಾ ಪೇಳಲಿ ಪ

ಸಾರಸಾಕ್ಷ ಮುರಾರಿ ಕೃಷ್ಣನ ಮೂರುತಿಯ ನಾ ಕಾಣದೆ ಅ.ಪ

ಹಿಂದೆ ವನದಲಿ ಸುಂದರಾಂಗ ಮುಕುಂದ ಕೃಷ್ಣನ ಪರಿಪರಿ
ಅಂದ ಲೀಲೆಗಳಿಂದ ಪೊಂದಿದ ನಂದಗಳ ನೆನೆ ನೆನೆದರೆ ೧

ಮಾರಜನಕನು ಜಾರನೆಂಬ ವಿಚಾರವನು ನಾನರಿಯದೆ
ಸೇರಿದೆನು ಮನಸಾರ ಮುದದಲಿ ಯಾರಿಗಳವೇ ಮರೆಯಲು ೨

ಮೋಸಗಾರನ ಆ ಸೊಬಗುಗಳಿಗಾಸೆ ಪೊಂದಿದ ಪಸುಳೆಯ
ಆಸೆಭಂಗದ ಕ್ಲೇಶವನು ಜಗದೀಶನೊಬ್ಬನೆ ಬಲ್ಲನು ೩

ತರುಲತೆಗಳು ಪರಿವ ಯಮುನಾ ಸರಿದೇನಾದರೂ ಬಲ್ಲವೆ
ಸರಸದಲಿ ತಿರುತಿರುಗುತಿಹ ಮುರಹರನ ಸುದ್ಧಿಯ ಕೇಳಲೆ ೪

ಘನ್ನ ಮಹಿಮೆ ಪ್ರಸನ್ನ ಕೃಷ್ಣನು ತನ್ನ ಸಂತಸದಿಂದಲಿ
ಎನ್ನ ಕರಗಳಿಗೊಮ್ಮೆ ಸಿಕ್ಕಲು ಇನ್ನು ಅವನನು ಬಿಡುವೆನೆ ೫

೨೨೧

ಹರಿಯೆ ಚಿತ್ರಲೀಲೆಗಳನು ಅರಿಯಲಳವೇ ಸುಲಭದಿ ಪ

ನಿರತ ಸೇವೆ ಮಾಡುತಿರುವ ಸಿರಿಯು ತಾನಚ್ಚರಿಯಲ್ಲಿರಲು ಅ.ಪ

ಪೊಡವಿಯಲಿ ದುರಿತಗಳನ್ನು ನಡೆನುಡಿಗಳಿಂದರಿಯದಿರುವ
ಹುಡುಗರಾಗಿ ನಲಿಯುವರನ್ನು ಸಿಡಿಲಿನಿಂದ ತನ್ನಡಿಗಳಿಗೆಳೆವ ೧

ಕ್ಲೇಶದಿಂದ ಗಳಿತವಾದ ಹೇಸಿಗೆಯ ದೇಹದಲ್ಲಿ
ಆಸೆ ತೊರೆದು ನರಳುವರಲಿ ಲೇಶ ಕರುಣ ತೋರದೆ ಇರುವ ೨

ಸತ್ಯ ಸಂಕಲ್ಪನೆಂದರಿತು ನಿತ್ಯನನ್ನು ನೆನೆದು ತಮ್ಮ
ಕೃತ್ಯಗಳನು ರಚಿಸಿ ಮುದದಿ ತೃಪ್ತನಾಗುವ ಭಕ್ತರ ಪ್ರಸನ್ನ ೩

೨೨೨

ಹಿಗ್ಗಿದಳು ನಂದನ ಸತಿ
ಮುಗ್ಧೆ ತನ್ನಯ ಸುತನ ಮುದ್ದು ಮುಖವ ನೋಡಿ ಅ.ಪ

ಪಾಲು ಬೆಣ್ಣೆ ಕಳ್ಳ ತಾಳು ಕಟ್ಟುವೆ ನಿನ್ನ
ಕಾಲುಗಳನೆಂದು ಕರಗಳಲಿ ಪಿಡಿದು
ನೀಲಮೇಘಶ್ಯಾಮ ಶ್ರೀಲಕುಮಿಯರಸನನು
ಬಾಲನೆಂದರಿತು ಆಲಿಂಗನದಿ ಮೈ ಮರೆತು ೧

ಅಂಬುಜೋದ್ಭವನಯ್ಯ ಅಂಬೆಗಾಲಿಡುವುದನು
ನಂಬಬಹುದೇ ಮೋಹಜಾಲವಿರಲು
ಸಂಭ್ರಮದಿ ಸುತನನ್ನು ಚುಂಬಿಸುತ ರಭಸದಲಿ
ಅಂಬುಜಾನನೆ ಮೋದ ಕಂಬನಿಯ ಸುರಿಸುತ್ತ ೨

ಓರೆಗಣ್ಣಿನ ನೋಟ ನಾರಿಯರ ಪೇಚಾಟ
ಮೂರು ಲೋಕಕೆ ಹರ್ಷಕರ ಮಂದಹಾಸ
ಸೇರಿಸಿದ ಮುಕ್ತಗಳ ಮೀರಿ ಪೊಳೆಯುವ ದಂತ
ಚಾರುಮುಖಿ ಸುತನ ಮನಸಾರ ದರುಶನದಿಂದ ೩

ಭೃಂಗಗಳ ಧಿಕ್ಕರಿಪ ಮಂಗುರುಳು ಮಸ್ತಕದಿ
ರಂಗಿನಾ ಕಸ್ತೂರಿತಿಲಕ ಪಣೆಯಲ್ಲಿ

ಶೃಂಗಾರ ಸಿಂಧು ಶ್ರೀರಂಗನ್ನ ನೋಡುತಲಿ
ಅಂಗನಾಮಣಿ ಅಂತರಂಗ ಪ್ರೇಮದ ಭರದಿ ೪

ತನ್ನ ಉದರದಿ ನಳಿನಜಾಂಡವನೆ ಪೊತ್ತಿರುವ
ಉನ್ನತೋನ್ನತ ಸುಗುಣ ಜ್ಞಾನಮಯನ
ತನ್ನ ಮಗನೆಂದರಿತು ಸ್ತನ್ಯಪಾನದಿ ಸುಪ್ರ
ಸನ್ನಮುಖಿ ಹರುಷ ಪುಳಕಿತಳಾಗಿ ಹೆಮ್ಮೆಯಲಿ ೫

೨೨೩

ಹೂ ಬೇಕೆ ಹೂವು ಪರಿಮಳದ ಹೂವು ಪ

ಪರಮ ಪುರುಷ ನಮ್ಮ ಕೃಷ್ಣನ ತೋಟದ ಅ.ಪ

ಮಲ್ಲಿಗೆ ಸಂಪಿಗೆ ಜಾಜಿ ಸೇವಂತಿಗೆ
ಮಲ್ಲೆ ಗುಲಾಬಿ ತಾವರೆ ಪಾರಿಜಾತ
ಎಲ್ಲ ವಿಧದ ಮನಕ್ಲೇಶವ ಕಳೆಯಲು
ಫುಲ್ಲಲೋಚನ ನಮ್ಮ ಕೃಷ್ಣನು ಧರಿಸಿದ ೧

ದಾರದಿ ಕಟ್ಟಿಲ್ಲ ಮಾರು ಹಾಕುವುದಿಲ್ಲ
ಕೇರಿ ಕೇರಿಗಳಲ್ಲಿ ಮಾರುವುದಲ್ಲ
ಭೂರಿಭಕುತಿ ಎಂಬ ಭಾರಿಯ ಬೆಲೆಗಿದ
ಮಾರೆಂದು ಪೇಳಿದ ಶೌರಿಯ ಸೊಬಗಿನ ೨

ರಂಗು ರಂಗುಗಳಿಂದ ಕಂಗೊಳಸುವ ಸ್ವಚ್ಛ
ಬಂಗಾರದ ಛವಿ ಹಂಗಿಸುವ
ಶೃಂಗಾರ ಸಿಂಧು ಪ್ರಸನ್ನ ಶ್ರೀ ಮಾಧವ
ನಂಘ್ರಿಯ ಸಂಗದಿ ಮಂಗಳಕರವಾದ ೩

೨೨೪

ಹೇ ಮುರಾರೆ ಹೇ ಮುಕುಂದ ಪ

ಪ್ರೇಮ ವೀಕ್ಷಣದಿಂದ ಪೊರೆಯೊ ಅ.ಪ

ಈ ಮಹಾ ಕುತಾಪಗಳಲಿ
ನಾಮ ಕೀರ್ತನೆಯೊಂದೆ ಎನಗೆ
ಕ್ಷೇಮಕರವೆಂದರಿತು ವದನದಿ
ರಾಮ ರಾಮನೆಂದು ಕೂಗುವೆ ೧

ನೋಡಿದೆನೋ ಈ ಭವದ ಭೋಗವ
ಬೇಡದಾಯಿತೊ ನಿನ್ನ ದಯದಿ
ಈಡನರಿಯೆನೊ ನಿನ್ನ ಗುಣಗಳ
ಪಾಡಿ ಹಿಗ್ಗುತ ಕುಣಿಯುವುದಕೆ ೨

ಆಸೆ ಎನ್ನನು ಮೋಸ ಮಾಡಿತೊ
ಕೋಶವಿದ್ದರು ಕ್ಲೇಶ ಬಿಡದೊ
ಈಶ ನಿನ್ನಯ ಭಜನೆಯೊಂದೆ
ಲೇಸೊ ಲೇಸೊ ಹೇ ಪ್ರಸನ್ನ ೩

೨೨೫

ಕ್ಷೀರಶರಧಿಶಯನ ನಾರಾಯಣ ಪ

ತೋರೊ ಎನ್ನಲಿ ಕರುಣ ನಾರಾಯಣ ಅ.ಪ

ಕ್ಷಿತಿಯೊಳೆನಗೆ ಸ್ಥಿತಿ ಗತಿಯು ಬೇರಿಲ್ಲವೊ
ಶ್ರಿತಜನ ಕಲ್ಪತರು ಶ್ರೀರಮಣ ೧

ಅರಿಷಡ್ವರ್ಗವ ಮುರಿದು ಎನಗೆ ನಿನ್ನ
ವರ ಸೇವೆಯ ನೀಡೊ ಶ್ರೀ ನರಹರಿ ೨

ಪಾಮರ ಭಕುತರ ಕ್ಷೇಮವಹಿಸಿ ಅವರ
ಕಾಮಿತಗಳ ನೀಡೊ ಕಾಮಧೇನು ೩

ಸಂತತ ಹೃದಯದಿ ನೆಲೆಸಿ ಎನಗೆ ಮನ
ಶಾಂತಿಯ ದಯಮಾಡೊ ಚಿಂತಾಮಣಿ ೪

ನಿನ್ನ ದಾಸರದಾಸನೆನ್ನಲಿ ದಯದಿ ಪ್ರ
ಸನ್ನ ನಾಗೊ ಶ್ರೀಶ ಲಕ್ಷ್ಮೀಶ ೫

ಲಕ್ಷ್ಮೀದೇವಿ

೨೨೬

ಅಂಬೋರುಹೇಕ್ಷಣೆ ಅಂಬಾಲತೇ ಜಗ
ದಂಬಾ ಪೊರೆಯೆ ಸತತ ಗಂಭೀರ ಗಜಗಮನೆ ಪ

ನಂಬಿದೆ ನಿನ್ನ ಪದಾಂಬುಜಯುಗಳವ
ಕಂಬು ಕಂಧರಿ ಕನಕಾಂಬರ ಧಾರಿಣಿ
ಬೆಂಬಲವೀಯೆ ವಿಳಂಬವ ಮಾಡದೆ ಅ.ಪ

'ಯಂಕಾಮಯೇ'ತ್ಯಾದಿ ಶೃತಿಗಳೆಲ್ಲಾ
ಪಂಕಜಭವಮುಖ ಸುಮನಸರು
ಕಿಂಕರರೆನ್ನುತ ಪೊಗಳುತಿರೆ
ಶಂಕೆಯುಂಟೆ ನಿನ್ನ ಮಹಿಮೆಗಳಲ್ಲಿ ಶ
ಶಾಂಕ ಸೋದರಿ ಆತಂಕವ ಬಿಡಿಸೆ ೧

ನೀರಜಾತಗಣ ಕೃತ ನಿಲಯೇ
ಮಾರಜನಕ ಹರಿ ಪ್ರಿಯ ಜಾಯೆ
ಕೋರುವೆ ನಿನ್ನಯ ಪರಮದಯೆ
ಸಾರಸಾಕ್ಷಿ ಸರಿಯಾರು ನಿನಗೆ ಕರು
ಣಾರಸಮಯೆ ಸುವಿಶಾರದೆ ಜನನಿ ೨

ಪನ್ನಗವೇಣಿ ಸಾಗರನ
ಕನ್ಯೆ ನಿಖಿಲ ಸುರನರರೊಳಗೆ
ಮಾನ್ಯೆ ನಿನ್ನ ಪೋಲುವರನ್ಯರುಂಟೆ
ನಿನ್ನ ದಾಸನಾದ ಎನ್ನ ಮನೋರಥ
ವನ್ನು ತಿಳಿಸೆ ಪ್ರಸನ್ನ ಶ್ರೀ ಹರಿಯಲಿ ೩

೨೨೭

ಕವಳತಾಯಿ ಕವಳ ಅಮ್ಮ ಪ

ಪಾಪಿ ಪರದೇಶಿಯ ಮರೆಯ ಬೇಡಿರಮ್ಮ ಅ.ಪ

ಸಂಜೆಯ ಕವಳಕ್ಕೆ ಸಾವಿರ ಆಪತ್ತು
ಅಂಜಿ ಓಡುವುದೆಂದು ಕೇಳಿಲ್ಲವೇನಮ್ಮ
ಭುಂಜಿಸಿ ನಿಮ್ಮಯ ಪತಿಯ ಪ್ರಸಾದದ
ಎಂಜಲು ಎನಗಿಷ್ಟು ಜೋಳಿಗೆಗಿಕ್ಕವ್ವ ೧

ನಮದೊಂದು ಸಂಸಾರ ಬಲು ದೊಡ್ಡದವ್ವ
ಶ್ರಮಿಸುವರದರೊಳಗೊಬ್ಬರಿಲ್ಲವ್ವ
ಕಮಲವ್ವ ನಿಮ್ಮಯ ಅಮೃತಹಸ್ತದ ಕವಳ
ಎಮಗೊಂದು ಕ್ಷಣದಲಿ ಅಮೃತವಾಗೋದವ್ವ ೨

ಮಿತಿಯಿಲ್ಲದೈಶ್ವರ್ಯ ನಿಮಗಿಹುದೆಂದು
ಕ್ಷಿತಿಯೊಳು ಜ್ಞಾನಿಗಳಾಡುತಲಿಹರು
ಅತುಲ ಮಹಿಮ ನಿಮ್ಮ ಪತಿಯ ಪ್ರಸಾದವ
ಪ್ರತಿದಿನವಿತ್ತು ಪ್ರಸನ್ನರಾಗಿರವ್ವ ೩

೨೨೮

ಬಾರಮ್ಮ ಬಾರೆ ಇಂದಿರೆ ಪ

ಹಾರೈಸುತಲಿಹೆ ನೀರಜ ನಿಲಯೆ ಅ.ಪ

ಬಾರೆನ್ನಯ ಭವನಕೆ ಭಾಗ್ಯದ ನಿಧಿ
ಪೂರಗೊಳಿಸೆ ಮನ ಕೋರಿಕೆಗಳನು ೧

ಕೊಳಲೂದುವ ಗೋವಳನಿಲ್ಲಿರುವನು
ತಿಳಿನಗುಮೊಗದಲಿ ಬೆಳಗೆಲೆ ಭವನವ ೨

ಚಿನ್ನದ ಹೊಗೆಯಾಡಿಸೆ ಈ ಮಂದಿರ
ನಿನ್ನದೇ ಭಕುತ ಪ್ರಸನ್ನನ ಪ್ರಿಯಳೆ ೩

೨೨೯

ವಾರಿಜಗಣ ನಿಲಯೇ ಕಮನೀಯೆ
ತಾಯೇ ಕಾಯೇ ನರಹರಿ ಜಾಯೇ ಪ

ಸಾರಸಭವಮುಖ ಸುರ ಮಹನೀಯೆ
ಚಾರುವದನೆ ಜಾಂಬೂನದ ಛಾಯೆ ಅ.ಪ

ನಿನ್ನ ಕಟಾಕ್ಷ ಮಹಾಸುರಧೇನು
ನಿನ್ನ ಮನವು ಚಿಂತಾಮಣಿಯು
ನಿನ್ನಯ ಕರಗಳು ಸುರತರುವೆನಗೆ
ನವ ನಿಧಿಗಳು ನೀನೆ ಇಂದಿರೆ ೧

ಹೃನ್ಮಂದಿರದಲಿ ಜ್ಞಾನವನು
ಮನ್ಮಂದಿರದಲಿ ಭಾಗ್ಯವನು
ಅಮ್ಮ ಬೆಳಸೆ ಕಮಲೆ ಸುವಿಮಲೆ
ಸಡಿಲದಿರೆ ದಯವ ಇಂದಿರೆ ೨

ಈಶನಂಘ್ರಿಯಲಿ ಭಕ್ತಿಯನು ಹರಿ
ದಾಸದಾಸ್ಯದಲಿ ಶಕ್ತಿಯನು
ಮೋಸಕೆ ಸಿಗದ ವಿರಕ್ತಿಯನು
ಕರುಣದಲಿ ನೀಡೆ ಪ್ರಸನ್ನೆ ೩

೨೩೦

ಶರಧಿಸುತೆ ಮಾತೆ ಶರಧಿಸುತೆ ಮಾತೆ ಪ

ಪೊರೆಯೇ ಜಗನ್ಮಾತೆ ಅ.ಪ

ಸರಸಿಜಭವ ಶಿವ ಗರುಡ ಶೇಷ ಮುಖ
ಸುಮನಸ ವಂದಿತ ಪದಯುಗಳೆ
ಮನಸಿಜ ಜನಕನ ಕೋಮಲತಮ ಹೃತ್ಕಮಲದೊಳು
ಸದಾ ನೆಲಸಿದ ಶುಭಗೆ ೧

ವಂದಿಪೆ ನಿನ್ನಯ ಚರಣ ಕಮಲ
ಎನಗೊಂದುಪಕಾರವ ದಯಮಾಡೆ
ಒಂದನು ಅರಿಯದ ಭಕುತರೊಳಗೆ ಇವ
ನೊಂದು ಎಂದು ಗೋವಿಂದನಿಗರುಹೆ ೨

ತುಂಗಮಹಿಮನನು ಎಡಬಿಡದೆಲೆ ಅವ
ನಿಂಗಿತವನು ನೀನರಿತಿರುವೆ
ಮಂಗಳದೇವತೆ ಅದನರುಹಿ ಕೃಪಾ
ಪಾಂಗವ ಬೀರೆ ಪ್ರಸನ್ನ ಸುವದನೇ ೩

ವಾಯುದೇವರು – ಹನುಮಂತ

೨೩೧

ಎಂಥ ವೈರಾಗ್ಯ ಹನುಮಂತ
ಎಂಥ ಸೌಭಾಗ್ಯ ಗುಣವಂತ ಪ

ಸಂತತ ರಾಘವನಂಘ್ರಿ ಕಮಲದಲಿ
ಅಂತರಂಗ ಭಕುತಿಯ ಬೇಡಿದೆಯೊ ಅ.ಪ

ಆವರಿಹರು ನಿನ್ಹೊರತು ರಾಘವರ
ಭಾವವರಿತು ಪ್ರತಿ ಕ್ಷಣಗಳಲಿ
ಸೇವೆ ಸಲಿಸಿ ದಯ ಪಡೆಯಲು ಭೋಗವ
ದಾವದನುಭವಿಸೆ ದುರ್ಲಭವು
ಜೀವೋತ್ತಮನದ ಬಯಸದೆ ಏಕೋ
ಭಾವದಿ ಪದಸೇವೆಯ ಕೇಳಿದ ವೀರ ೧

ಜ್ಞಾನಪರಾಕ್ರಮ ಧೈರ್ಯವೀರ್ಯಕಧಿ
ಷ್ಠಾನ ಪವನಸುತ ಜಗತ್ರಾಣ
ನೀನಲ್ಲದೆ ಖಗಮೃಗ ಸುರನರರುಗ
ಳೇನು ಚಲಿಸಬಲ್ಲರೊ ಹನುಮ
ಪ್ರಾಣಭಾವಿ ಚತುರಾನನ ಭುವಿಯೊಳ
ಗೇನು ರುಚಿಯೊ ಕಲ್ಯಾಣಚರಿತ ನಿನಗೆ ೨

ಕಪಿ ರೂಪದಿ ದಶಕಂಧರನ ಮಹಾ
ಅಪರಾಧಕ್ಕೆ ಶಿಕ್ಷೆಯನಿತ್ತೆ
ನೃಪರೂಪದಿ ದುರ್ಯೋಧನನಸುವನು
ಅಪಹರಿಸಿದೆಯೋ ಬಲ ಭೀಮ
ವಿಪುಲ ಪ್ರಮತಿ ವರವೈಷ್ಣವ ತತ್ವಗ
ಳುಪದೇಶಿಸಿದ ಪ್ರಸನ್ನ ಯತಿವರೇಣ್ಯ ೩

೨೩೨

ಜನುಮ ಜನುಮದಲಿ ಎನಗಿರಲಿ ಪ

ಹನುಮ ಭೀಮ ಮಧ್ವಮುನಿಗಳ ಸೇವೆಯು ಅ.ಪ

ಮಾತರಿಶ್ವ ನೀ ಪ್ರೀತನಾಗೆ ಅಜ
ತಾತನು ಸುಲಭದಿ ಒಲಿಯುವನು
ಕೋತಿಯ ರೂಪದಿ ಭೂತಲದಲಿ ಬಲು
ಖ್ಯಾತಿ ಪಡೆದ ರಾಮದೂತರ ಸೇವೆಯು ೧

ಹರನ ಭಕುತ ಜರಾಸಂಧನ ಕಾಯುವ
ಹರಿದು ಮುರಿದು ಬಲು ಸುಲಭದಲಿ
ಹರಿಗಪರೋಕ್ಷದಿ ಅರ್ಪಣೆ ಮಾಡಿದ
ಕುರುಕುಲಪತಿ ಬಲಭೀಮರ ಸೇವೆಯು ೨

ಶುದ್ಧ ದ್ವಿಜಕುಲದಿ ಉದ್ಭವಿಸುತ ಅನಿ
ರುದ್ಧನಿಗನುಮತವಾಗಿರುವ
ಸಿದ್ಧಾಂತದ ಪದ್ಧತಿಯನು ತೋರಿದ
ಮಧ್ವಮತದ ತತ್ವದಲಿ ಪ್ರಸನ್ನತೆ ೩

೨೩೩

ನೀನು ಸರ್ವಜ್ಞನಾಗಿರಲು ನಿನ್ನಲಿ ಜನರು
ಜಾಣತನ ತೋರಲಾಗುವುದೆ ಪವಮಾನ ಪ

ಪ್ರಾಣಪತೇ ನಿನ್ನೊಲುಮೆ ಪಡೆದು ಸುಜನರು ದಿವ್ಯ
ಸ್ಥಾನಗಳ ಪೊಂದಿ ಇಹಪರದಿ ಸುಖಿಸುವರು ಅ.ಪ

ಧರ್ಮಯೋನಿಯ ಶಾಸನಗಳ ಸಂರಕ್ಷಣೆಯ
ಕರ್ಮ ನಿನಗಲ್ಲದನ್ಯರಿಗೆ ತರವೆ
ಕಿರ್ಮ್ಮೀರ ಕೀಚಕ ಜರಾಸಂಧ ಮೊದಲಾದ
ಧರ್ಮಘಾತಕರ ಸದೆ ಬಡಿದ ಬಲಭೀಮ ೧

ಜ್ಯೇಷ್ಠನೆಂಬುವ ಮಮತೆ ತೊರೆದು ಧೈರ್ಯದಲಿ ಧೃತ
ರಾಷ್ಟ್ರನಿಗೆ ಕಿಲುಬು ಕಾಸನು ಕೊಡದೆಲೆ
ಶ್ರೇಷ್ಠ ಭಾಗವತ ಧರ್ಮಗಳ ಹಂಚುವ ಹರಿಗೆ
ಪ್ರೇಷ್ಟತಮ ನೀನಲ್ಲದನ್ಯರಾರಿಹರೊ ೨

ನಿನ್ನ ಮತವೇ ಸಿರಿಯರಮಣನಿಗೆ ಸಮ್ಮತವು
ನಿನ್ನ ದಯವೇ ಸಾಧು ಜನಕೆ ಅಭಯ
ನಿನ್ನ ಮಾರ್ಗವ ನಂಬಿ ಧನ್ಯರಾಗುವರಲಿ ಪ್ರ
ಸನ್ನನಾಗುವ ಹನುಮ ಭೀಮ ಮಧ್ವೇಶ ೩

೨೩೪

ಪವಮಾನ ಸುತರ ಪದಕಮಲಗಳ
ಸ್ತವನವು ಸಾಧನವು ಜವದಲಿ ಶ್ರೀ ಹರಿದಯ ಪಡೆವುದಕೆ ಪ

ನವ ನವ ರೂಪದಿ ಅವನಿತಲದೊಳಗೆ
ಭುವನಜನಾಭನ ವಿವರವನರುಹಿದ ಅ.ಪ

ಶ್ರೀ ರಾಘವನಾಜ್ಞೆಯ ಶಿರದಲಿ ವಹಿಸಿ
ವಾರಿಧಿಯನೆ ಲಂಘಿಸಿ ವಾರಿಜಲೋಚನೆ ಸೀತೆಯ ಕಂಡು
ತೋರುವ ಭಕುತಿಯನು ಶೂರ ದಾಶರಥಿಯಂಗುಳಿಯವ ಕೊಟ್ಟು
ಧೀರತನದಿ ಲಂಕೆಯ ಸೂರೆಯ ಮಾಡಿದ ೧

ಪಾಂಡುಸತಿ ಮನುವನು ಜಪಿಸಲು ಜನಿಸಿ ಭೂ
ಮಂಡಲದೊಳಗೆ ಪುಂಡತನದಲಿ ಮೆರೆಯುತಲಿದ್ದ
ಹಿಂಡುರಕ್ಕಸರ ಖಂಡಿಸಿ ಜಗದಲಿ
ಪಾಂಡು ತನುಜರೊಳು ಮಂಡನರೆನಿಸಿ ಪ್ರಚಂಡ ವಿಕ್ರಮರಾದ ೨

ಬಾದರಾಯಣರೊಳು ಶ್ರವಣವ ಮಾಡಿ
ಮೋದವ ಪೊಂದುತಲಿ ಸಾಧಿಸಿ ದ್ವೈತವ ಮೇದಿನಿಯಲಿ
ಸಾಧುಗಳಿಗೆ ಶ್ರೀಹರಿ ಪಾದಕಮಲದಲಿ
ಆದರ ನೀಡಿ ಸದಾ ಪ್ರಸನ್ನ ಪೂರ್ಣಬೋಧರೆಂದೆನಿಸಿದ ೩

೨೩೫

ಪ್ರಾಣನಾಥ ಪ್ರಾಣನಾಥ ತ್ರಿಭುವನಚೇಷ್ಟ ಪ್ರದಾತಾ ಪ

ಅಖಿಲನೇತಾ ಸುಗುಣಜಾತಾ ಶೂರ ಸೀತಾರಾಘವದೂತ ಅ.ಪ

ನೂರು ಯೋಜನ ಶರಧಿಯ ಹಾರಿ ಲಂಕಾಪುರವ
ಸೇರಿ ಹರುಷದಿ ಜನಕಕುಮಾರಿಗುಂಗುರವಿತ್ತ ೧

ದುಷ್ಟ ದಶಕಂಧರನನು ಮುಷ್ಟಿತಾಡನದಿಂದ
ಚೇಷ್ಟರಹಿತನ ಮಾಡಿ ದಿಟ್ಟತನದಲಿ ಮೆರೆದ ೨

ಗಂಧಮಾದನ ಗಿರಿಯನು ಒಂದು ಕರದಲಿ ಸುಖದಿ
ತಂದು ರಾಮರ ಪಾದ ದ್ವಂದ್ವಕೆರಗಿದ ಮುಖ್ಯ ೩

ಕ್ರೂರನಿಶೇಚರಪತಿ ಪರಿವಾರವನು ಸದೆ ಬಡಿದು
ಮೂರು ಜಗಗಳ ಮೀರಿದ ಕೀರುತಿಯ ಪೊಂದಿದ ೪

ಇನ್ನು ಎರಡವತಾರಗಳನ್ನು ಧರಿಸುತ ಜಗದಿ ಪ್ರ
ಸನ್ನ ಮಾಧವವ್ಯಾಸರನು, ಸೇವೆಯ ಮಾಡಿದ ೫

೨೩೬

ಯಾರಿರುವರೊ ಭವ ಪಾರಗಾಣಿಸಲು
ಭಾರತಿ ರಮಣ ಸಮೀರನಲ್ಲದೆ ಬೇರೆ ಪ

ವೀರ ಹನುಮ ರಘು ವೀರ ಭಕುತ ಬ್ರಹ್ಮ
ಚಾರಿಯಾಗಿ ಜೀವ ಸಾರವೆನಿಸಿದೆ ಅ.ಪ

ಶೇಷ ಗರುಡ ಶಿವ ಮುಖಸುರರೊಬ್ಬರೂ
ದೋಷದೂರಲ್ಲವೊ ಪವಮಾನ
ಈಶದಜ್ಞಾನ ಸಂಶಯ ಭ್ರಮೆ ಪೊಂದದೆ
ಶ್ರೀಶನ ಪರಮ ಸಂತೋಷಕೆ ಪಾತ್ರನು ೧

ವೀರರಧಿಕರೆಲ್ಲರು ನಿನ್ನೆದುರಲಿ
ಸಾರಮೇಯದಂತಾದರೊ ಭೀಮ
ನಾರಾಯಣನಿಗೊಬ್ಬನಿಗಲ್ಲದೆ
ಶಿರಬಾಗದೆ ಮರೆದೆಯೊ ಧೀರ ಕಂಠೀರವ ೨

ಶಾಂತನು ನೀ ಬಲುದಾಂತನು ನೀನೆ
ಸ್ವಾಂತದಿ ಹರಿಯು ಪ್ರಸನ್ನನು ಸತತವು
ಅಂತಿಮಭಾಷ್ಯಾದಿಗಳ ರಚಿಸಿ ವೇ
ದಾಂತ ಸಾಮ್ರಾಜ್ಯದಿ ಸಾರ್ವಭೌಮ ಯತಿ ೩

೨೩೭

ವಾಯು ಕುಮಾರ ಸುಜನೋದ್ಧಾರ
ಮಾ ರಮಣ ಪ್ರಿಯ ಭಕುತವರ ಪ

ಪಾರಾವಾರದಂತಿಹ ಈ ಘೋರ ಸಂಸಾರದ
ಪಾರವಗಾಣಲುಪಾಯವ ತೋರೊ ಅ.ಪ

ಇನಕುಲ ತಿಲಕನ ಅನವರತದಿ ದರು
ಶನದಲಿ ಹಿಗ್ಗುವ ಅನುಭವವು
ಸನಕ ಸನಂದನ ಮುನಿಜನಗಳಿಗುಂಟೆ
ವಿನಯದಿ ಬೇಡುವೆ ಅನುಗ್ರಹವ ೧

ಈ ಮಹಿಯೊಳು ಬಲ ಭೀಮನೆಂಬ ದಿವ್ಯ
ನಾಮದಿ ಪರಿಪರಿ ಸೇವಿಸುತ ಸತ್ಯ
ಭಾಮಾಕಾಂತನ ಪ್ರೇಮ ಪಾತ್ರನೆಂದು
ಕಾಮಿಸುವೆನು ನಿನ್ನ ವರ ದಯುವ ೨

ವರ ಯತಿ ವೇಷದಿ ಹರಿಮತವನು ಬಲು
ಹರಡುತ ಧರೆಯೊಳು ಸುಜನರಿಗೆ ನರ
ಹರಿ ಲೋಕಕೆ ಮಾರ್ಗವರುಹಿದ ಗುರುಗಣ
ಗುರು ಮಧ್ವರಾಯ ಪ್ರಸನ್ನನಾಗೊ ೩

೨೩೮

ಹನುಮನ ಮತದಲಿ ಅನುಮಾನ ಬೇಡವೊ
ಮನಮುಟ್ಟಿ ಭಜಿಸಲೊ ಎಲೆ ಮನವೇ ಪ

ಸನಕಾದಿ ವಂದಿತ ಮನಸಿಜ ಜನಕ
ವನಜನಯನ ಹರಿಗನುಮತವಾದಂತ ಅ.ಪ

ಹರಿಯೆ ಸರ್ವೋತ್ತಮ ವಿಧಿ ಭವಾದಿಗಳಲ್ಲಿ
ಅನುಚರರಿವನಿಗೆ ಪರತಂತ್ರರು
ವಿವಿಧ ತಾರತಮ್ಯ ನಿರತ ಪೊಂದಿರುವರು
ಸಕಲ ಜಗಂಗಳು ನಿಜವೆಂದು ಬೋಧಿಪ ೧

ಮುಕುತಿಯೆಂಬುದು ನಿಜಾನಂದದ ಅನುಭವ
ಭಕುತಿಯೇ ಪಡೆಯಲು ಸಾಧನವು
ಪ್ರಕೃತಿ ಸಂಯುತವಾದ ದೇಹವ ಕಳೆಯಲು
ಯುಕುತಿ ಬೇರಿಲ್ಲವೆಂದು ಭರದಿ ಸಾರುವಂಥ ೨

ನಯನಕೆ ಗೋಚರ ಒಣ ಊಹೆಯಿಂದಲಿ
ತಿಳಿಯಲು ಹರಿಯನು ಅಳವಲ್ಲವು
ನಿಗಮಗಳಿಂದಲೆ ಅರಿತ ಜ್ಞಾನಿಗೆ ಪ್ರ
ಸನ್ನನಾಗುವನೆಂದು ದೃಢದಿಂದರುಹುವ ೩

೨೩೯

ಹನುಮನ ಮನೆಯವರು ನಾವೆಲ್ಲರು
ಹನುಮನ ಮನೆಯವರು ಪ

ಅನುಮಾನಪಡದಲೆ ಸ್ಥಳವ ಕೊಡಿರಿ ಎಮಗೆ ಅ.ಪ

ಊರ್ಧ್ವ ಪುಂಡ್ರವ ನೋಡಿ ಶ್ರದ್ಧೆ ಭಕುತಿ ನೋಡಿ
ಹೃದ್ಗತವಾದೆಮ್ಮ ತತ್ವಗಳನೆ ನೋಡಿ
ಇದ್ದುದನಿಲ್ಲೆಂಬ ಅಬದ್ಧ ನುಡಿವರಲ್ಲಾ
ಮಧ್ವಮುನಿಯು ನಮ್ಮ ತಿದ್ದಿರುವುದ ನೋಡಿ ೧

ಸತ್ಯ ಮಿಥ್ಯಗಳಿಗೆ ಅಂತರ ಬಲ್ಲೆವು
ಉತ್ತಮ ನೀಚರೆಂಬುವ ಭೇದ ಬಲ್ಲೆವು
ಸುತ್ತಲು ಕಂಡು ಕಾಣದೆ ಇಹ ಎಲ್ಲಕೂ
ಉತ್ತಮನೊಬ್ಬನೇ ಹರಿಯೆಂದು ಬಲ್ಲೆವು ೨

ಹಲವು ಲೋಕಗಳುಂಟೆಂಬುದ ಬಲ್ಲೆವು
ಹಲವು ಯೋನಿಗಳಲ್ಲಿ ಜನ್ಮಗಳೊಲ್ಲೆವು
ಅಲವಭೋಧರು ನಮ್ಮ ಕಳುಹಿದರಿಲ್ಲಿಗೆ
ತಿಳಿಸಿ ಪ್ರಸನ್ನ ಶ್ರೀ ಹರಿಗೆ ವಿಚಾರವ ೩

೨೪೦

ಹನುಮಾನ್ ಕೀ ಜೈ ಹನುಮಾನ್ ಕೀ ಜೈ
ಹನುಮಾನ್ ಕೀ ಜೈ ಜೈ ಹನುಮಾನ್ ಪ

ಥೈ ಥೈ ಥೈ ಥೈ ಥೈಥಕ ಥೈಥಕ
ತಕಿಟ ತಕಿಟ ತಕ ಜೈ ಹನುಮಾನ್ ಅ.ಪ.

ಹರಿ ಸರ್ವೋತ್ತಮನೆಂಬುವ ತತ್ವಕೆ ಜಯ
ಭೇರಿಯ ಹೊಡೆದೆಯೊ ಹನುಮಾನ್
ಢಣ ಢಣ ಢಣ ಢಣ ಢಣ ಢಣ
ಢಣ ಜಯಭೇರಿಯ ನಾದವು ಕೇಳುತಿದೆ ೧

ವೈಷ್ಣವ ತತ್ವಗಳನು ಬೋಧಿಸಿ ಜಯ
ಭೇರಿಯ ಹೊಡೆದೆಯೊ ಬಲಭೀಮ
ಢಣ ಢಣ ಢಣ ಢಣ ಢಣ
ಢಣ ಜಯ ಭೇರಿಯ ನಾದವು ಕೇಳುತಿದೆ ೨

ಮೋಕ್ಷಕ್ಕೆ ಒಳ್ಳೆಯ ಮಾರ್ಗವ ತೋರುತ
ಜಯ ಭೇರಿಯ ಹೊಡೆದೆಯೊ ಮಧ್ವ
ಢಣ ಢಣ ಢಣ ಢಣ ಢಣ ಢಣ
ಢಣ ಜಯಭೇರಿಯ ನಾದವು ಕೇಳುತಿದೆ ೩

ಅಂದಿನ ನಾದವು ಇಂದು ನುಡಿಯುತಿದೆ
ಮಂದಿಗಳೆಲ್ಲರು ಕೇಳುವರು
ತಂದೆ ಪ್ರಸನ್ನನ ಮಂದಿರಲಿ ಇದು
ಎಂದೆಂದಿಗೂ ಶಾಶ್ವತವಿರಲಿ ೪

ಸರಸ್ವತಿ

೨೪೧

ನಲಿಯೆ ನೀ ಜಿಹ್ವೆಯಲಿ ಚತುರಾನನ ಪ್ರಿಯ ರಾಣಿ
ನಾನಾ ಧನಕನಕಾದಿ ವಿಭವಗಳು ಹಿರಿದುಕ್ಕುತಲಿರಲು ಪ

ನೀನೊಲಿಯದಿರಲು ಮಾನವನಿಗೆ ಸ
ನ್ಮಾನವೆಂತು ಬರುವುದು ಜಗದೊಳಗೆ ಅ.ಪ

ಪನ್ನಗವೇಣಿ ಮಧುರ ಸುವಾಣೀ ಕರ ಧೃತ ವೀಣಾಪಾಣಿ
ಉನ್ನತ ಮಹಿಮ ಪ್ರಸನ್ನ ಹರಿಗೆ
ಅಚ್ಛನ್ನ ಭಕುತ ಬೊಮ್ಮನ ಮೋಹದ ಸತಿ ೧

ರುದ್ರದೇವರು

೨೪೨

ಹರಿ ಭಕುತಿಯ ಪೊಂದಿಸೆಲೋ ಕರುಣದಿ ಗಿರಿಜಾರಮಣ ಪ

ನರಹರಿಯಲಿ ವರಭಕುತನೆಂದರಿಯರು ನಿನ್ನ ದುರುಳ ಜನರು ಅ.ಪ

ಗಂಗೆಯ ಶಿರದಲಿ ಧರಿಸಿ ಭುಜಂಗವ ಕೊರಳಲ್ಲಿ ಪೊಂದಿದ
ಮಂಗಳ ವರಶೈಲಜೆಯ ಅಪಾಂಗರಸ ಅನಂಗವೈರಿ ೧

ಶ್ರೀಹರಿಯಾಜ್ಞೆಯನು ವಹಿಸಿ ಮೋಹಶಾಸ್ತ್ರಗಳನು ರಚಿಸಿ
ಈ ಮಹಿಯೊಳು ದುರುಳರನ್ನು ಮೋಹಿಸಿದ ಮಹಾದೇವ ೨

ಪನ್ನಗಭೂಷಣ ಶಂಕರ ಷಣ್ಮುಗಪಿತ ಚಂದ್ರಮೌಳಿ
ಸನ್ನುತಿಸುವೆ ನಿನ್ನ ಮನವಿ ಎನ್ನಲಿ ದಯದಿಂ ಪ್ರಸನ್ನ ೩

೨೪೩

ಹರನಮಃ ಪಾರ್ವತೀ ಪತೆಯೇ ನಮೋ
ಹರನಮಃ ಪಾರ್ವತೀ ಪತೆಯೇ ಪ

ಹರಹರ ಶಂಕರ ಶಂಭೋ ಮಹಾದೇವ
ಹರನಮಃ ಪಾರ್ವತೀ ಪತೆಯೇ ಅ.ಪ

ಹರಿಯ ಪಾದೋದಕ ಶಿರದಲಿ ಧರಿಸಿದ
ಪರಮ ವೈಷ್ಣವ ನಿನ್ನ ಚರಣಗಳಿಗೆ ನಮೋ ೧

ಅತ್ರಿಯ ಪತ್ನಿಯ ಉದರದಿ ಜನಿಸಿದ
ದತ್ತನಾಮಕ ಹರಿ ಭ್ರಾತ ದೂರ್ವಾಸನೆ ೨

ಹರಿಯು ಪ್ರಸನ್ನನಾಗುವ ತೆರದಲಿ ಮನ
ಕರುಣಿಸೋ ಉರಗಭೂಷಣ ಗಿರಿಜಾಪತೆ ೩

ತುಳಸಿ

೨೪೪

ಸ್ವೀಕರಿಸೆನ್ನಯ ಪೂಜೆಯ ತುಳಸೀ
ಲೋಕೋತ್ತರನರಸೀ ಪ

ಈ ಕರಗಳು ಧನ್ಯಗಳಾಗಲಿ ಮನ
ವ್ಯಾಕುಲ ಪರಿಹರಿಸಮ್ಮ ಜನನಿ ಅ.ಪ

ಮಲ್ಲಿಗೆ ಸಂಪಿಗೆ ಜಾಜಿ ಸೇವಂತಿಗೆ
ಫುಲ್ಲ ಕುಸುಮವಿರಲು
ಒಲ್ಲನು ಹರಿ ನೀನಿಲ್ಲದ ಪೂಜೆಯ
ಬಲ್ಲರಿದನು ಜ್ಞಾನಿಗಳು ಮಾತೆ ೧

ವಂದಿಸಿ ನಿನ್ನಯ ಚರಣಗಳಿಗೆ ಫಲ
ಗಂಧ ಪುಷ್ಪಗಳನರ್ಪಿಸುವೆ
ಬೃಂದಾವನಲೋಲನ ವಲ್ಲಭೆ ಮೃದು
ಮಂದಹಾಸವನು ತೋರೆ ಮಾತೆ ೨

ನೀನಿದ್ದೆಡೆ ಹರಿ ತಾನಿರುವನು ಅನು
ಮಾನವಿಲ್ಲವೆನಗೆ
ದಾನ ಧರ್ಮಗಳ ಫಲಕೆ ಕಾರಣಳು
ನೀನಾಗಿರುವೆ ಪ್ರಸನ್ನವದನೆ ೩

ಗಂಗೆ-ಕಾವೇರಿ

೨೪೫

ಕಾವೇರಿ ಜಲ ಸೋಕಿದಾ ವಾತ ಸಂಗದಿ
ಆವ ದೇಶವು ಧನ್ಯವೊ ಪ

ಪಾವನಾತ್ಮಕ ಪ್ರಥಮ ಝಾವದಲಿ ಮಜ್ಜನವ
ಗೈವ ಸುಜನರೇ ಧನ್ಯರೋ ಅ.ಪ

ಆದಿ ಮಧ್ಯಾಂತರಂಗರ ಸೇವೆಯನು ಮಾಡಿ
ಸಾಧಿಸಿದೆ ಮಾಂಗಲ್ಯವ
ಹೋದ ದೇಶದಿ ಹೊನ್ನು ಮಳೆಗರೆವ ನಿನ್ನ ಪರ
ಮಾದರದಿ ಸೇವಿಸುವರು ೧

ಚೋಳ ಮಂಡಲಭಾಗ್ಯ ಪೇಳಸಾಧ್ಯವೆ ನಿನ್ನ
ಲಾಲನೆಯ ಪಡೆಯುತಿರಲು
ಕೇಳುವನು ನಿನ್ನಯ ಕೃಪಾಲವದಿ ತನು ಮನವ
ಕೀಳು ವಿಷಯಕೆ ಬಿಡದಿರು ೨

ಪುಣ್ಯನದಿಗಳಲಿ ಬಲು ಗಣ್ಯಸ್ಥಾನವ ಪಡೆದು
ಮಾನ್ಯಳಾಗಿರುವೆ ಮಾತೆ
ನಿನ್ನ ತೀರದಲಿ ನೆಲಸಿಹ ಜನಕೆ ಪರಗತಿ ಪ್ರ
ಸನ್ನ ಮುಖಿ ನಿಶ್ಚಯವಿದು ೩

೨೪೬

ಗಂಗೇ ಜನನೀ ಮಂಗಳರೂಪಿಣಿ
ತುಂಗ ಮಹಿಮನ ಪಾದಾಂಗುಳಿಜಾತೆ ಪ

ಸಂಗತಿಯರುಹಲು ಬಂದಿರುವೆವು ಕೃಪಾ
ಪಾಂಗವ ತೋರೆಲೆ ಇಂಗಿತವರಿತು ಅ.ಪ

ನಾಲ್ಕು ಮೊಗನು ಹರಿ ಕಾಲಿಗೆ ಕೆಡುಹಲು
ಶೂಲಧರನ ಶಿರ ಆಲಯ ಮಾಡಿದೆ
ಶೈಲದಂತಿಹ ಪಾಪ ಜಾಲಿಸಿ ಕಳೆಯುವೆ
ಪೇಳಲಳವೆ ನಿನ್ನ ಶೀಲವ ಸುಲಭದಿ ೧

ಚಾರು ನದಿಗಳು ಹೇರಳವಿದ್ದರು
ಭಾರತ ದೇಶದಿ ಭಾಗ್ಯದೇವತೆ ನೀ
ದೂರ ದೂರ ದೇಶಗಳಲಿ ನೆಲೆಸಿಹ
ಧೀರರು ನಿನ್ನಯ ಕೋರುತಲಿರುವರು ೨

ಅಂಗಳದಲಿ ಬಿದ್ದು ಹರಿವ ಜಲವು ನಿನ್ನ
ಸಂಗದಿ ಪರಮಮಂಗಲ್ಯವ ಪಡೆವುದು
ಶೃಂಗಾರದ ನಿಧಿ ರಂಗನ ಸೇವೆಗೆ
ಗಂಗೇ ಎನ್ನಂತರಂಗವ ಶೋಧಿಸೆ ೩

ಭೂಮಿಯ ಭೇದಿಸಿ ಸುಂದರ ರೂಪದಿ
ಸ್ವಾಮಿ ಶ್ರೀಮಧ್ವರ ಚರಣಕೆ ನಮಿಸಿ
ಆ ಮಹಾತ್ಮರ ದರುಶನದಿ ಪ್ರಸನ್ನಳೇ
ಕಾಮಿತ ಕರುಣಿಸೇ ತ್ರಿಕರಣ ಶುದ್ಧಿಯ ೪

ಗುರುಸ್ತುತಿ

೨೪೭

ಕೋರುವೆ ಗುರು ವಿದ್ಯಾ ವಾರಿಧಿತೀರ್ಥರ
ಭೂರಿ ದಯವ ಸತತ ಪ

ಧೀರವರೇಣ್ಯ ಸಮೀರ ಸಮಯಗಳ
ಸಾರವನರಿಯುವ ದಾರಿಯ ಕಾಣಲು ಅ.ಪ

ವ್ಯಾಸರಾಜಗುರು ದಾಸರೆಂದಿನಿಸಿ
ಶ್ರೀಶ ಶ್ರೀಕೃಷ್ಣನ ತೋಷಿಸಲು
ಸಾಸಿರ ವಿಧದಲಿ ಸಲಿಸಿ ಸೇವೆಗಳ
ಭಾಸುರ ಕೀರುತಿ ಪಡೆದ ಯತಿವರ ೧

ಅಂದದ ನವಮಣಿ ಮಂದಿರಗಳಲಿ
ನಂದಕುಮಾರನ ಕುಳ್ಳಿರಿಸಿ
ಚಂದದಿ ದಿನ ದಿನ ಪೂಜೆಯ ಗೈದು
ಆನಂದಸಾಗರದಿ ಮಿಂದ ಯತಿವರ ೨

ಘನ್ನ ಮಹಿಮೆ ಸುಖ ಚಿನ್ಮಯ ರೂಪ
ಪ್ರಸನ್ನ ಶ್ರೀಕೃಷ್ಣಗೆ ಹರುಷದಲಿ
ಚಿನ್ನಮಯದ ತೊಟ್ಟಿಲನ್ನು ಸೇವೆ ಮಾಡಿ
ಅನ್ಯರಿಗಲ್ಲದ ಪುಣ್ಯ ಪಡೆದವರ ೩

೨೪೮

ಶ್ರೀ ಜಗನ್ನಾಥತೀರ್ಥರ ದಿವ್ಯ ಮಹಿಮೆಯನು
ರಾಜಿಸುವ ಹೈಮಲಿಪಿಯಲ್ಲಿ ಬರೆಯಲಿ ಬೇಕು ಪ

ಈ ಜಗದಿ ಸುಜನ ಸುರಭೂಜರಾಗಿಹ ಮಹಾ
ರಾಜ ಶ್ರೀ ರಘುನಾಥತೀರ್ಥ ಕರ ಸಂಜಾತ ಅ.ಪ

ಉದ್ಭವಿಸಿದರು ಗಾಲವರು ಜಗದೊಳೆಂಬಂಶ
ವೇದ್ಯವಾಯಿತು ಆಪ್ತಜನವೃಂದಕೆ
ಮಧ್ವಮತ ತತ್ವಗಳನುದ್ಧಾರವನೆಗೈದ
ದಿಗ್ದಂತಿಗಳತಿ ಪ್ರಸಿದ್ಧ ಸ್ಥಾನವ ಪಡೆದ ೧

ಸಕಲ ಶಾಸ್ತ್ರಾರ್ಥ ನಿರ್ಣಯಗೈವ ಪರಸೂತ್ರ
ನಿಕರಗಳಿಗಲವಬೋಧರ ಭಾಷ್ಯವ
ಸುಖದಿಂದಲರಿಯಲುಪಕೃತಿಗೈದ ಯತಿಕುಲ
ತಿಲಕ ಭಾಷ್ಯಾದೀಪಿಕಾಚಾರ್ಯರೆಂದತಿ ಖ್ಯಾತ ೨

ಸರ್ವಗುಣ ಗುಣಪೂರ್ಣ ಸರ್ವತ್ರ ವ್ಯಾಪ್ತ ಹರಿ
ಸರ್ವಭಕ್ತ ಪ್ರಸನ್ನನೆಂದರುಹಲು
ಓರ್ವ ಆಮ್ರವೃಕ್ಷದಲಿ ಶ್ರೀ ನರಹರಿಯ
ಉರ್ವನುಗ್ರಹ ಪಡೆದ ಸರ್ವತಂತ್ರ ಸ್ವತಂತ್ರ ೩

೨೪೯

ಪ್ರಾರ್ಥಿಸುವೆ ರಘುನಾಥತೀರ್ಥರ
ಪ್ರಾರ್ಥಿಸುವೆ ಪುರುಷಾರ್ಥಪ್ರದರ ಪ

ಸಾರ್ಥಕವಾಗಲು ಪಾರ್ಥಿವ ದೇಹವು
ಪಾರ್ಥಸಖನೆ ಸರ್ವೋತ್ತಮನೆಂದು ಸಮರ್ಥಿಸಿ
ಜಗದಲಿ ಕೀರ್ತಿಗಳಿಸಿದವರ ಅ.ಪ

ನೇದೃಶಂ ಸ್ಥಲಿಮಲಂ ಶಮಲಘ್ನಂ
ನಾಸ್ಯತೀರ್ಥಂ ಸಲಿಲಸ್ಯಸಮಂ ವಾಃ
ನಾಸ್ತಿ ವಿಷ್ಣುಂ ಸದೃಶಂ ನನುದೈವಂ
ಸತ್ಯ ವಚನಗಳಿವೆಂದು ಸೂಚಿಸುತ
ಆಸ್ತಿಕ ಜನಮನ ರಂಜಕ ತ್ರಿಮಕುಟ
ಕ್ಷೇತ್ರನಿವಾಸ ಪವಿತ್ರತಮ ಚರಿತರ ೧

ವ್ಯಾಸರಾಜ ಗುರುವರ್ಯ ರಚಿತ ತಾ
ತ್ಪರ್ಯ ಚಂದ್ರಿಕಾ ಗ್ರಂಥವನು
ವಾಸುದೇವ ನರಹರ್ಯನುಗ್ರಹದಿ
ಉರ್ವರಿತವ ವಿರಚಿಸಿ ಮೆರೆದ
ಶೇಷಚಂದ್ರಿಕಾಚಾರ್ಯರೆಂಬೊ ಗುರು
ವ್ಯಾಸರಾಜರ ಪರಾವತಾರರ ೨

ರಾಗ ದ್ವೇಷಗಳ ತೊರೆಯುತ ತ
ನ್ನನು ರಾಗದಿಂದ ಭಜಿಸುವ ಜನಕೆ
ಭೂಗಕಲ್ಪ ತರುವಂತೆ ಅರಿಷ್ಟವ ನೀಗಿ
ಸಾಧು ಭೋಗಗಳೀವ
ಯೋಗಿಜನ ಮನೋನಯನ ಪ್ರಸನ್ನ ಶ್ರೀ
ರಾಘವೇಂದ್ರರಪರಾವತಾರರ ೩

೨೫೦

ವೇದಾಂತ ಸಾಮ್ರಾಜ್ಯ ರಾಜಾಧಿರಾಜ
ತೇಜೋಮಯರ ಪಾದಾಬ್ಜನೇ ಶರಣ ಪ

ರಾಜಾಧಿರಾಜ ಕರಾರ್ಚಿತ ಚರಣ
ಪ್ರಾಜ್ಯಪ್ರಜ್ಞರ ಶುದ್ಧಕುಲ ದಿವ್ಯಾಭರಣ ಅ.ಪ

ಭ್ರಾಂತಿಗೆ ನಿಧನ ಸುಖಶಾಂತಿಗೆ ಸದನವೇ
ದಾಂತಿಯ ಮಾನಸ ಕಾಂತಿಗೆ ಸಾಧನ ೧

ಇಂದಿರಾಪತಿಯ ಆನಂದಾದಿ ಸದ್ಗುಣ
ವೃಂದ ತೋರಿದ ಶೇಷಚಂದ್ರಿಕಾಚಾರ್ಯ ೨

ಹಿರಿದು ನಿಮ್ಮಯ ವ್ಯಾಪ್ತಿ ಕಿರಿದು ಎಮ್ಮಯ ಶಕ್ತಿ
ಪರಮ ಪ್ರಸನ್ನ ಶ್ರೀಗುರು ಸಾರ್ವಭಾಮ ೩

೨೫೧

ಇಂದು ಸಾರ್ಥಕವಾಯ್ತು ಹಿಂದೆ ಮಾಡಿದ ಪೂಜೆ ಪ

ಬಂದು ಗುರುವರ್ಯರ ಬೃಂದಾವನವ ನೋಡಿ ಅ.ಪ

ಮಂಗಳತರಂಗಿಣಿಯ ತಂಗಾಳಿ ಸೇವಿಸುತ
ತುಂಗ ಫಣಿಶಾಯಿಯ ಅಪಾಂಗಪಾತ್ರರ ಕಂಡು ೧

ಜ್ಞಾನ ವೈರಾಗ್ಯ ಭಕ್ತಿಗಳ ಮೂರ್ತಿಗಳಂತೆ
ನಾನಾಭರಣ ಸೇವೆ ಅರ್ಪಿಸಿದವರ ಕಂಡು ೨

ಸ್ವಾಂತವನು ಗೆಲಿದು ಪ್ರಸನ್ನ ಮಾನಸರಾಗಿ
ಶಾಂತಿಯನು ಪಡೆದ ಏಕಾಂತ ಭಕುತರ ನೋಡಿ ೩

೨೫೨

ಗುರುವರ್ಯರನು ಭಜಿಸೋ ರಾಘವೇಂದ್ರ
ಗುರುವರ್ಯರನು ಭಜಿಸೋ ಪ

ಧರೆತಲದಲಿ ಅವತರಿಸಿ ಸುಜನರನು
ಪರಿಪರಿ ವಿಧದಲಿ ಪೊರೆಯುತಲಿರುವ ಸದ್ ಅ.ಪ

ನಳಿನನಾಭ ಶ್ರೀರಾಮರ ರುಚಿರ ಪದಗಳ ಸಂತತದಿ ಭಜಿಸಿ
ಖಳರ ದುರ್ಮತಗಳನಳಿಸಿ ದಶಪ್ರಮತಿ
ಗಳ ದಿವ್ಯ ಶಾಸ್ತ್ರಾರ್ಥಗಳನು ಸುಲಭದಲಿ
ಇಳೆಯೊಳು ಸುಜನಕೆ ತಿಳಿಯುವ ತೆರದಲಿ
ಬೆಳಗುತಿರುವ ಪರಿಮಳ ಮುಖವರ ಗ್ರಂಥ
ಗಳನು ರಚಿಸುತ ಉಳಿಸಿ ಸುಮತಿಯನು
ಇಳೆಯೊಳು ವರಮಂತ್ರ ನಿಲಯದಿ ನೆಲೆಸಿದ ೧

ಮಂಗಳಕರಳೆಂದು ಚರಿತೆಯುಳ್ಳ ತುಂಗಾತೀರದಿ ನೆಲೆಸಿ
ಕಂಗೊಳಿಸುತ ಚರಣಂಗಳ ಭಜಿಪರ
ಸಂಘಕ್ಕೆ ತಮ್ಮ ಅಪಾಂಗ ವೀಕ್ಷಣದಿಂದ
ಮಂಗಳ ತತಿಗಳ ನೀಡಿ ಅವರ ಅಘ
ಭಂಗವಗೈಯುತ ಅನುದಿನದಲಿ ದ್ವಿಜ
ಪುಂಗವ ನಿಕರದಿ ಪೂಜೆಯಗೊಂಬ ಉ
ತ್ತುಂಗ ಚರಿತರಥಾಂಗಧರ ಪ್ರಿಯ ೨

ಮುನ್ನ ಪ್ರಹ್ಲಾದನೆನೆಸಿ ಶ್ರೀ ನರಹರಿಯನ್ನು ಸತತ ಭಜಿಸಿ
ಇನ್ನೊಂದು ಜನುಮದಿ ಮಾನ್ಯ ಶ್ರೀ ವ್ಯಾಸಮುನಿ
ಯೆನ್ನಿಸಿ ಖಲಮತವನ್ನು ಖಂಡಿಸುತಲಿ
ಚಿನ್ನ ಶ್ರೀಕೃಷ್ಣನ ಉನ್ನತ ಮಹಿಮೆಗ
ಳನ್ನು ಬೋಧಿಸುತ ತನ್ನ ಭಕುತಜನ
ರನ್ನು ಹರುಷದಲಿ ಧನ್ಯರೆನಿಸಿದ ಪ್ರ
ಸನ್ನ ಶ್ರೀರಾಮರ ಭಕುತ ಶಿರೋಮಣಿ ೩

೨೫೩

ಯತಿವರ ನಿಮ್ಮನು ಸ್ತುತಿಪ ಜನರು ದಿವ್ಯ
ಗತಿಯನು ಪೊಂದುವರು ರಾಘವೇಂದ್ರ ಪ

ಕ್ಷಿತಿಯೊಳಗೆ ದಶಪ್ರಮತಿಗಳ ಸುಖಕರ
ಮತದ ಪರಮ ಸಂಗತಿಗಳ ಹರಡಿದ ಅ.ಪ

ಜಯ ಮುನಿಗಳವರ ಗ್ರಂಥಗಳಿಗೆ
ಸುಖಮಯ ಟಿಪ್ಪಣಿಗಳನು ರಚಿಸಿ ಚಿನ್
ಮಯ ರಾಮರ ಸೇವೆಯ ಸಂತಸದಲಿ
ಗೈದು ಸುಮಂತ್ರಾಲಯದಲಿ ನೆಲೆಸಿದ ೧

ಮಂಗಳಕರವಾದ ತುಂಗಾನದಿಯ
ತರಂಗಗಳಲಿ ಮಿಂದು ನಿಮ್ಮನು
ಕಂಗಳಿಂ ನೋಡಿ ಗುಣಗಳ ಪಾಡಿ
ನಿಸ್ಸಂಗರಾದ ಸಾಧು ಸಂಘವ ಪೊರೆಯುವ ೨

ಪರಿಪರಿಯಲಿ ನಿಮ್ಮ ನಮಿಪ ಸೇವಕರಿಗೆ
ಸುರಧೇನುವಿನಂತೆ ಸಂತತ
ಹರುಷದಿಂದಲಿ ನಿಮ್ಮ ಭಜಿಪ ಸುಜನರಿಗೆ
ಸುರತರುವಂತೆ ಪ್ರಸನ್ನರಾಗುವಂಥ ೩

೨೫೪

ಅವನಿಯೊಳವತರಿಸಿದ ವ್ಯಾಸರಾಯ ಭೂಸುರಜನವರ್ಯ
ಸುವಿನೋದವ ಪಡೆದರು ಸುರನರಜನರು ಪ

ಪವನಸುತರ ಮತ ಭುವಿಯಲಿ ಸುಲಭದಿ
ವಿವರಿಸಿ ಜನರಿಗೆ ಪ್ರವಚನವೆಸಗಲು ಅ.ಪ

ಗುರು ಬ್ರಹ್ಮಣ್ಯರ ವರಪದ ಕಮಲಗಳ
ಪರತರ ಭಕುತಿಯಲಿ
ಪರಿಪರಿ ಸೇವಿಸಿ ಗುರುಕರುಣದಲಿ
ಹರುಷವ ಪೊಂದುತಲಿ
ವರವ ಪಡೆದ ಭೂಸುರ ರಾಮಾರ್ಯರ
ವರಸತಿಯುದರದಿ ವಹ್ನಿಪುರದೊಳವ
ತರಿಸುವ ಧರೆಯೊಳು ಸುಜನಗಣವನು
ದ್ಧರಿಸಲು ಮುದದಲಿ ಸಿರಿಪತಿಭಕುತನು ೧

ಅತಿಬಾಲ್ಯದಿ ಗುರ್ವಾಜ್ಞೆಯನನುಸರಿಸಿ
ಯತಿಯಾಶ್ರಮವಹಿಸಿ
ಕ್ಷಿತಿಯೊಳಪರೋಕ್ಷಜ್ಞಾನಿಗಳೆಂದು
ಪ್ರಥೆಯನು ಪೊಂದಿದ ಲಕ್ಷ್ಮೀನಾರಾಯಣ
ಯತಿಯಲಿ ಶಾಸ್ತ್ರಾಮೃತ ಪಾನ ಮಾಡುತ
ಅತಿ ಸುಲಭದ ಶ್ರುತಿಗಳ ಸಾರವ
ಕ್ಷಿತಿ ಸುರರೊಳಗತಿ ಹಿತದಲಿ ಅರುಹಲು ೨

ಗಜಗಹ್ವರ ದೇಶದ ನರಪತಿಗಳಿಗೆ
ನಿಜವರ ಕರುಣದಲಿ
ವಿಜಯಾಭ್ಯುದಯಗಳನು ಸತತ ಪೊಂದಿಸುತ
ರಜತಕನಕ ನವಮಣಿಗಣಯುತ ವಾ
ರಿಜವನು ಪೋಲುವ ಸಿಂಹಾಸನದಲಿ
ದ್ವಿಜಯವರ್ಗೈಯ್ಯುತ ಸುಜನ ಸಮೂಹಕೆ
ನಿಜಪದಯುಗಳಾಂಬುಜ ಸೇವೆ ನೀಡಲು ೩

ನಂದತೀರ್ಥರ ವರಶಾಸ್ತ್ರಗಳನ್ನು
ಚಂದದಿ ವಿವರಿಸಲು
ಚಂದ್ರಿಕಾ ನ್ಯಾಯಾಮೃತ ಮೊದಲಾದ

ಗ್ರಂಥಗಳನು ರಚಿಸಿ
ಮಂದಜನಕೆ ಮುಚುಕುಂದನ ಶುಭಗುಣ
ವೃಂದಗಳನು ಸುಖದಿಂದ ಬೋಧಿಸಲು
ಅಂದಪದಗಳನು ರಚಿಸುತ ಶುಭಗುಣ
ಸಾಂದ್ರನ ಭಜನಾನಂದ ಪೊಂದಿಸಲು ೭

ವಿಜಯೀಂದ್ರ ವಾದಿರಾಜ ಮೊದಲಾದ
ನಿಜವರ ಶಿಷ್ಯರುಗಳ
ವ್ರಜಕೆ ಶಾಸ್ತ್ರಾರ್ಥಗಳನು ಬೋಧಿಸುತ
ದ್ವಿಜಕುಲ ಸಂಭವರಾದ ಪುರಂದರ ಸುಜನ ಶಿರೋಮಣಿ
ಕನಕ ಪ್ರಮುಖ ಪೂಜಿತ ಪದಯುಗಳಾಂಬುಜ ಯತಿಶೇಖರ
ವಿಜಯಸಾರಥಿಯು ಪ್ರಸನ್ನನಾಗಲೆಂದು ೫

೨೫೫

ಏಸು ಸುಕೃತ ಫಲವೋ ದರುಶನ
ಏಸು ಪುಣ್ಯಕರವೋ ಪ

ಏಸು ಜನ್ಮಗಳ ಸುಕೃತ ಫಲವೋ ಶ್ರೀ
ವ್ಯಾಸರಾಜ ಗುರುವರ್ಯರ ದರುಶನ ಅ.ಪ

ವರ ಕರ್ಣಾಟಕ ಸಿಂಹಾಸನದಲಿ
ಮೆರೆಯುತಲಿರುವ ಯತೀಂದ್ರರ ದರುಶನ ೧

ಚಂದ್ರಿಕ ನ್ಯಾಯಾಮೃತ ತಾಂಡವದಲಿ
ನಂದಕುಮಾರನ ಕುಣಿಸುವ ದರುಶನ ೨

ಹಗಲು ದೀವಟಿಗೆ ಹಸುರು ಛತ್ರಿ ಮುಖ
ಬಗೆ ಬಗೆ ಬಿರುದಾವಳಿಗಳ ವೈಭವ ೩

ರಾಜನ ಕುಹಯೋಗವನೆ ನಿವಾರಿಸಿ
ರಾಜಾಧಿರಾಜ ಸಂಪೂಜ್ಯರ ದರುಶನ ೪

ರುಕುಮಿಣಿ ಭಾಮಾರಮಣನ ಪೂಜಿಸಿ
ಸುಕೃತ ಸ್ವರೂಪ ಪ್ರಸನ್ನರ ದರುಶನ ೫

೨೫೬

ಜಯ ಜಯ ವೈಷ್ಣವ ಪಯನಿಧಿ ಚಂದ್ರಗೆ
ಜಯ ಜಯ ವ್ಯಾಸಯತೀಂದ್ರರಿಗೆ ಪ

ಜಯ ಜಯ ವರ ಕರ್ಣಾಟಕ ಪತಿಗೆ
ಜಯ ಸಿಂಹಾಸನವೇರಿದಗೆ ಅ.ಪ

ನಾಕು ಶಾಸ್ತ್ರಗಳ ಪಾರಂಗತರಿಗೆ
ಕಾಕುಮತಗಳನು ತುಳಿದವಗೆ
ಆ ಕಮಲಾಪತಿ ಭಕುತವರೇಣ್ಯಗೆ
ಶ್ರೀಕರ ಚಂದ್ರಿಕಾಚಾರ್ಯರಿಗೆ ೧

ಹನುಮನ ಭಾಷ್ಯವ ಅಣಿಮಾಡಿದಗೆ
ಹನುಮಗೆ ಭವನಗಳನು ಕಟ್ಟಿದಗೆ
ಹನುಮನ ಯಂತ್ರದಿ ಬಿಗಿದಪ್ಪಿದಗೆ
ಮುನಿತ್ರಯದಲಿ ಸೇರಿದ ದೊರೆಗೆ ೨

ಮಾಯಾವಾದಗಳನು ಗೆಲಿದವಗೆ
ಸ್ವೀಯಮತವ ಸ್ಥಾಪಿಸಿದವಗೆ
ನ್ಯಾಯಾಮೃತಧಾರೆಯ ಅಭಿಷೇಕದಿ
ಆ ಯದುಪತಿಯನು ಕುಣಿಸಿದಗೆ ೩

ಚಕ್ರಧರನ ಸುಳುಗಳ ತಿಳಿದವಗೆ
ಮಿಕ್ಕಮತಗಳನು ಅಳಿದವಗೆ
ವಕ್ರಯುಕುತಿಗಳನು ತುಕ್ಕುಡಗೈಯ್ಯುವ
ತರ್ಕ ತಾಂಡವದಿ ನಲಿದವಗೆ ೪

ಕೃಷ್ಣದೇವರಾಯನ ಕುಲಪತಿಗೆ
ಕಷ್ಟದ ಕುಹಯೋಗವ ಕೊಂದವಗೆ
ಶಿಷ್ಟಜನಗಳಿಗೆ ಇಷ್ಟಾರ್ಥಗಳನು
ವೃಷ್ಟಿಯಗೈವ ಪ್ರಸನ್ನರಿಗೆ ೫

೨೫೭

ಸ್ಮರಿಸೈ ಸತತವು ಸಂಸ್ಮರಿಸೈ ಸತತವು ಪ

ಯತಿಗುಣ ಭೂಷಣ ವ್ಯಾಸ ಯತೀಂದ್ರರ ಅ.ಪ

ಗುರುಬ್ರಹ್ಮಣ್ಯರ ಕರಕಮಲದಿ ಪುಟ್ಟಿ
ಪರಮ ಕೀರುತಿಯಿಂದ ಮೆರೆದ ಯತೀಂದ್ರರ ೧

ಸುಖಬೋಧ ಸದಾಗಮಸಾರವ ನಿಜ
ಮುಖದಿಂದ ಭೂಸುರರೊಳಗರುಹಿದವರ ೨

ಚಂದ್ರಿಕಾ ನ್ಯಾಯಾಮೃತ ತರ್ಕತಾಂಡವ
ಚಂದದಿ ರಚಿಸಿ ಆನಂದಗೊಂಡವರ ೩

ವರಕರ್ಣಾಟಕ ಸಿಂಹಾಸನದಲಿ
ಮರಕತಮಣಿಯಭಿಷೇಕ ಪಡೆದವರ ೪

ಉನ್ನತ ಗುಣ ಸುಖ ಚಿನ್ಮಯ ರೂಪ ಪ್ರ
ಸನ್ನ ಶ್ರೀರಾಮನ ಭಕುತವರೇಣ್ಯರ ೫

೨೫೮

ಶ್ರೀ ಪಾದರಾಜ ಸಂದರ್ಶನದಿ ಸಕಲ ಸಂ
ತಾಪಗಳು ಕಳೆದುವಿಂದು ಪ

ತಾಪಸೋತ್ತಮರಿವರು ಇಹ ಪರಗಳಲ್ಲೆಮ್ಮ
ಕಾಪಾಡುತಿರುವರೆಂದು ಅ.ಪ

ಸ್ವರ್ಣವರ್ಣರ ಕುವರ ಜ್ಞಾನಭಕ್ತಿಗಳಿಂದ
ಪೂರ್ಣರಿದ್ದರು ಲೋಕದಿ
ಸ್ವರ್ಣಾಕ್ಷರಗಳಿಂದ ಬರೆಯುವಂತಹ ಶಾಸ್ತ್ರ
ನಿರ್ಣಯಗಳಿತ್ತರಿವರು ೧

ಮಂಗಳಾತ್ಮಕ ನಮ್ಮ ರಂಗವಿಠಲ ಕೃಪಾ
ಪಾಂಗ ಪಾತ್ರರು ಪೂಜ್ಯರು
ಕಂಗಳಿಗೆ ಹಬ್ಬವಿದು ಮಂಗಳಕೆ ಸಾಧನವು
ಹಿಂಗಿತೆಮ್ಮಯ ಕೊರತೆಯು ೨

ಜ್ಞಾನ ಭಂಡಾರವನು ಲೋಕಕೀಯಲು ಶುದ್ಧ
ಮಾನಸ ಪ್ರಸನ್ನರಿವರು
ಮೌನಿವರ ವ್ಯಾಸತೀರ್ಥರಲಿ ಪರಮಾದರದಿ
ಜ್ಞಾನಧಾರೆಯ ಕರೆದರು ೩

೨೫೯

ಪಾದ ಚಿಂತನವು ಕ್ಷಣದಲಿ
ಶೋಧಿಪುದು ಮತಿಯ ತಾರಕ ಪ

ಮೋದತೀರ್ಥರ ಭೇದಮತ ಅನು
ವಾದ ಮಾಡಿದ ಶ್ರೀಜಯತೀರ್ಥರ ಅ.ಪ

ಈ ಜಗದೊಳಗಿನ ರಾಜಕೀಯದ
ಸೋಜಿಗ ಜೀವನವನೆ ತೊರೆದು
ರಾಜೀವೋದ್ಭವನಯ್ಯನ ಚರಣಾಂ
ಬೋಜ ನಿರತ ಯತಿರಾಜರ ತಾರಕ ೧

ಕಾಕುಮತಗಳನೇಕಗಳನು ನಿ
ರಾಕರಿಪ ಗ್ರಂಥಗಳನು ರಚಿಸಿ
ಲೋಕೋತ್ತರನಿಗೆ ನ್ಯಾಯಸುಧೆಯಭಿ
ಷೇಕವ ಮಾಡಿದ ಟೀಕಾಚಾರ್ಯರ ೨

ಶಿಷ್ಟ ಭಕ್ತ ಪ್ರಸನ್ನ ವಿಧಿ ಫಾ
ಲಾಕ್ಷನುತ ಶ್ರೀಕೃಷ್ಣನ ಪೂಜಕ
ದುಷ್ಟ ಪಕ್ಷ ನಿರಾಸದಲಿ ಅತಿ
ದಕ್ಷ ದೀಕ್ಷ ಅಕ್ಷೋಭ್ಯರ ಕುವರರ ೩

೨೬೦

ಆನಂದತೀರ್ಥರ ಆರಾಧನೆಯಿದು
ಆನಂದಪೂರಿತ ಮಹೋತ್ಸವ ಪ

ನಾವಿಂದು ನಿರ್ಮಲ ಮಾನಸದಿಂದ
ಗೋವಿಂದ ಭಕುತರ ಪೂಜಿಸುವ ಅ.ಪ

ಜೀವನ ಚರಿತೆಯ ಕೇಳಿ ಮಹಾತ್ಮರ
ಜೀವನ ಮಾದರಿ ಎಮಗಿರಲಿ
ಜೀವನದಲಿ ಬೇಸರ ಪಡಬೇಡಿರಿ
ಜೀವೋತ್ತಮರೇ ರಕ್ಷಿಸಲಿ ೧

ಎಮ್ಮ ಮತಕೆ ಸಮಮತವಿಲ್ಲವು ಪರ
ಬೊಮ್ಮನ ಸಮ ದೇವತೆ ಇಲ್ಲ
ಎಮ್ಮ ನುಡಿಗೆ ಸಮ ಹಿತನುಡಿಯಿಲ್ಲವು
ಹಮ್ಮಿನಲೀಪರಿ ಬೋಧಿಸುವ ೨

ನಿನ್ನಯ ವಿಷಯವ ವರ್ಣಿಪುದೆಲ್ಲ ಪ್ರ
ಸನ್ನ ಹೃದಯದಲಿ ಧೈರ್ಯದಲಿ
ಇನ್ನು ವೀರ ವೈಷ್ಣವನಾಗುವೆ
ವೆನ್ನುವ ವಚನ ಕುಸುಮವೆರಚಿ ೩

೨೬೧

ಬರುತಲಿಹರು ನೋಡಿ ಗುರುವರೇಣ್ಯ
ಸುಖತೀರ್ಥ ಯತಿವರರು ಪ.

ಹರಿದು ಬರುವ ಸುರನದಿಯ ಪ್ರವಾಹದ
ತೆರದಲಿ ಪರಿಪರಿ ಪರಿವಾರ ಸಹಿತ ಅ.ಪ

ಕರದಲಿ ಪಿಡಿದಿಹ ದಂಡ ಕಮಂಡಲ
ಕೊರಳೊಳು ತುಳಸಿಯ ಚಿಗುರಿನ ಮಾಲೆಯು
ಅರಿವಾರಿಜ ಲಾಂಛನಗಳಿಂದೊಪ್ಪುವ
ವರ ದ್ವಾದಶ ನಾಮಗಳನು ಧರಿಸುತ ೧

ಯತಿಗಳು ಗೃಹಿಗಳು ಬ್ರಹ್ಮಚಾರಿಗಳು
ಶತಶತ ಸಂಖ್ಯೆಗಳಲಿ ಸೇರಿಹರು
ಅತಿ ಸಂಭ್ರಮದಲಿ ನೋಡಲು ಪುರುಷ
ರತುನವು ಮಾರ್ಗದ ಖತಿಪರಿಹರಿಸುತ ೨

ಅವನಿಸುರರು ಮುಂಬದಿಯಲಿ ತಮ್ಮಯ
ಕವಿತೆಗಳಲಿ ಗೋವಿಂದನ ಗುಣಗಳ
ನವ ನವ ಸ್ವರದಲಿ ಪಾಡುತ ಕುಣಿಯಲು
ಶ್ರವಣ ನಯನಕಾನಂದವ ಬೀರುತ ೩

ತ್ವರೆಯಲಿ ಸರಿದು ತಾ ಬರುತಿರೆ ಯುವ ಕೇ-
ಸರಿಯ ಧಿಕ್ಕರಿಸುವ ಸಂಭ್ರಮ ಗಮನ
ಚರಣಯುಗಳ ಕಾಂತಿಯ ಪಸರಿಸುತಲಿ
ಧರಣಿಯ ಪಾವನ ಮಾಡುವ ಬಗೆಯಲಿ ೪

ಏನಿರಬಹುದೆಂದು ನೋಡುವರಿಗೆ
ಕಾಣಿಸುವುದು ತೇಜದ ಪುಂಜ
ಭೂನಿಲಯವ ಬೆಳಗಲು ಅತಿ ನೂತನ
ಭಾನು ಉದಯಿಸಿದ ತೆರದಲಿ ಪೊಳೆಯುತ ೫

ಪದುಮರಾಗ ಕಾಂತಿಯ ಮೀರಿದ ನಖ
ಹೃದಯಂಗಮ ವರ ಕೂರ್ಮ ಪ್ರಪದಗಳು
ವಿಧಿಭವಮುಖ ಸುರಸೇವಿತ ಜಂಘವು
ಮದಗಜ ಕರವನು ಪೋಲುವ ತೊಡೆಗಳು ೬

ಪುಷ್ಟ ನಿತಂಬಗಳಲಿ ಪೊಳೆಯುತಲಿಹ
ರೇಷ್ಮೆಯ ವಸ್ತ್ರವ ಧರಿಸಿಹರು
ಕುಕ್ಷಿಲಲಾಟ ಶಿರೋಧರಗಳಲತಿ
ಶ್ರೇಷ್ಠದ ತ್ರಿವಳಿಗಳಿಂದ ರಾಜಿಸುತ ೭

ಕೆಚ್ಚಿನ ವಕ್ಷಸ್ಥಳವತಿ ಸುಂದರ
ಉಚ್ಚ ಪೀವರದ ಸ್ಕಂಧಯುಗಳವು

ಸ್ವಚ್ಛದ ಕೆಂಬಣ್ಣದ ಕರತಲದಲಿ
ಬಿಚ್ಚಿ ಹಾರುತಿಹ ಧ್ವಜಲಾಂಛನದಿ ೮

ಚಂದಿರ ಬಿಂಬವಿದೋ ಪ್ರೇಕ್ಷಕರಾ
ನಂದತರಂಗವ ಉಕ್ಕಿಸುತಿಹುದು
ಒಂದು ಕಳಂಕವು ಕಾಣದಿರುವ ಅತಿ
ಸುಂದರ ಪುರುಷವರೇಣ್ಯರು ಸೊಗಸಿಲಿ ೯

ಸುಂದರ ಮಂದಸ್ಮಿತದಿಂ ಶೋಭಿಪ
ಕುಂದ ಕುಸುಮ ತೆರದಲಿ ದಂತಗಳು
ಮಂದಿಗಳಿಗೆ ಬಲು ಹರುಷವಿತ್ತು ಅರ
ವಿಂದ ನಯನ ಆನಂದತೀರ್ಥ ಮುನಿ ೧೦

ಕಿವಿಯಲಿ ಪೊಳೆಯುವ ತುಳಸಿಯದಳಗಳು
ಅವಿರಳ ತೇಜದಿ ಹೊಳೆಯುವ ಕಪೋಲ
ಭುವನತ್ರಯಗಳಭೀಷ್ಟವ ನೀಡುವ
ಸುವಿಮಲ ಸುಂದರ ಭ್ರಕುಟಿ ವಿಲಾಸದಿ ೧೧

ಅಕಲಂಕ ಶರೀರರು ಬರುತಿಹುದನು
ಸಕಲ ಕಲಾಕುಶಲರು ನೋಡಿ
ಶಕುತಿಗೆ ಮೀರಿದ ಮಾದರಿಯೆಂದರು
ಪ್ರಕೃತಿ ಮಧುರ ಸರ್ವಾಂಗ ಸುಂದರರು ೧೨

ಕಾಂತಿ ಸುಧೆಯ ಪಾನವ ಮಾಡಿರಿ ಸುಖ
ಶಾಂತಿ ನಿಲಯರಾಶ್ರಯದಲಿ ಬಾಳಿರಿ
ಚಿಂತೆ ಸಂತಾಪಗಳೆಲ್ಲವ ತೊಳೆಯಿರಿ
ಸಂತತ ಹರಿದಾಸ್ಯದಲಿ ಪ್ರಸನ್ನರು ೧೩

೨೬೨

ಮಧ್ವರಾಯರ ಕರುಣೆ ಪಡೆಯಿರೊ ಪ

ಸಿದ್ಧವು ಇಹಪರದಿ ಸೌಖ್ಯವು ಅ.ಪ

ವೀರ ವೈಷ್ಣವ ಮತ ತೋರಿದವರ ನಂಬಿ
ವೀರ ವೈಷ್ಣವರಾಗಿ ಬಾಳಿರೊ ೧

ಸತ್ಯ ಧರ್ಮಗಳಿಗೆ ಮೂರ್ತಿಗಳಾದ ಜೀ
ವೋತ್ತಮರನು ನಂಬಿ ಬಾಳಿರೊ ೨

ಉನ್ನತ ಧ್ಯೇಯವ ಸ್ವರ್ಣದಕ್ಷರದಲ್ಲಿ
ಚೆನ್ನಾಗಿ ಬೋಧಿಸಿದ ಪ್ರಸನ್ನ ಶ್ರೀ ೩

೨೬೩

ಮಧ್ವರಾಯರ ಚರಿತೆ ಕೇಳಲು
ಶುದ್ಧವಾಯಿತು ಜನತೆ ಪ

ತಿದ್ದಿತೆಲ್ಲರ ನಡತೆ ಸುಲಭದಿ
ಲಬ್ಧವಾಯಿತು ಘನತೆ ಅ.ಪ

ಉತ್ತಮ ದಿವಿಜರ ಸತ್ಸಭೆಗಳಲಿ
ನೃತ್ಯ ಗೀತೆಗಳಿಂದ ನಿತ್ಯ ಪಾಡುವ ಕಥೆ
ಮರ್ತ್ಯಲೋಕದ ಮದ ಮತ್ಸರ ರೋಗಕೆ
ಪಥ್ಯಮಾಡುವವರಿಗೆ ಉತ್ತಮವೀ ಕಥೆ ೧

ಇಲ್ಲಿಯ ಜೀವನ ಅಲ್ಲಿಗೆ ಸಾಧನ
ಎಲ್ಲಿಯು ಭೇದವ ತೋರಿದರು
ಕ್ಷುಲ್ಲಕ ಮತಗಳ ಬೆಲ್ಲದ ವಚನವು
ಸಲ್ಲದಾಯಿತು ಬಲು ಬಲ್ಲ ಮಹಾತ್ಮ ಶ್ರೀ ೨

ಹರಿ ಗುರು ಕೃಪೆಯಿದು ಮರುದಂಶರ ಮೈ
ಮರೆಸುವ ಚರಿತೆಯು ಹರಿದುದು ಶ್ರವಣದೊಳ
ದುರಿತವು ತೊಲಗಿತು ಪರಮ ಪ್ರಸನ್ನನ
ಪರಮ ಪದದ ರುಚಿಯರಿತರು ಸುಜನರು ೩

೨೬೪

ಯತಿವರೇಣ್ಯರ ಮನುಜ ಸತತ ಭಜಿಸೆಲೊ ಪ

ಸತತ ವಿಮಲ ಚರಿತ ಸತ್ಯವತಿಯ ಸುತರ ಮನವರಿತ ಅ.ಪ

ಅಜಜನಕನ ಮಹಿಮೆ ಮರೆತು ಸುಜನರೆಲ್ಲ ಬಳಲುತಲಿರೆ
ಭುಜಗಶಯನನಾಜ್ಞೆಯಿಂದ ರಜತಪುರದೊಳವತರಿಸಿದ ೧

ಭೂಸುರವರ ಕುಲದಿ ಜನಿಸಿ ವಾಸುದೇವ ನಾಮದಿಂದ
ಶೈಶವವನು ಕಳೆದು ತುರಿಯ ಆಶ್ರಮವನು ಸ್ವೀಕರಿಸಿದ ೨

ಜೀರ್ಣವಾದ ನಿಗಮಾರ್ಥಗಳ ನಿರ್ಣಯಿಸಿದ ಜ್ಞಾನಾನಂದ
ಪೂರ್ಣವ್ಯಾಸರೊಳ್ ಶ್ರವಣಮಾಡಿ ಪೂರ್ಣಪ್ರಜ್ಞರಾಗಿ ಮೆರೆದ ೩

ಹರಿಯು ಜೀವರು ಸಮರು ಎಂದು
ನರಿಯುತಕುತಿಗಳಿಂದ ಬೋಧಿಪ
ದುರುಳವಾದಗಳನು ಮುರಿದು ಹರಿಸರ್ವೋತ್ತಮನೆಂದರುಹಿದ ೪

ಶುಕ್ತಿರಜತ ಜ್ಞಾನದಂತೆ ವಿಶ್ವವೆಲ್ಲ ಮಿಥ್ಯಾವೆಂಬೊ
ಯುಕ್ತಿಗಳನೆ ಖಂಡಿಸಿ ಜಗತ್ ಸತ್ಯವೆಂದು ದೃಢದಿ ತೋರಿದ ೫

ಬ್ರಹ್ಮನು ಗುಣಶೂನ್ಯನೆಂದು ದುರ್ಮತಗಳ ಹರಡುವವರ
ಹಮ್ಮು ಮುರಿದು ಜಗದಿ ಶಾಸ್ತ್ರ ಮರ್ಮಗಳನು ವಿವರಿಸಿದ ೬

ದೂಷ್ಯವಾದ ಇಪ್ಪತ್ತೊಂದು ಭಾಷ್ಯಗಳನು ಮುರಿದು ಶುದ್ಧ
ಭಾಷ್ಯಗಳನು ರಚಿಸಿ ತಮ್ಮ ಶಿಷ್ಯವರ್ಗಕೆ ಸಾರ ಪೇಳಿದ ೭

ಶ್ರವಣ ಮನನ ಧ್ಯಾನಗಳಿಂ ಸಿರಿರಮಣನ ಜ್ಞಾನ ಪೊಂದಿ
ವರ ಕರುಣವ ಪಡೆಯುವುದೇ ನಿರತ ಸುಖಕೆ ಪಥವೆಂದರುಹಿದ ೮

ಹನುಮ ಭೀಮ ಮಧ್ವ ರೂಪದಿ ರಾಮ ಕೃಷ್ಣ ವೇದವ್ಯಾಸರ
ನಿರತ ಸೇವೆ ಮಾಡಿ ಶ್ರೀಹರಿಯೊಲಿಮೆಯಿಂದ ಪ್ರಸನ್ನರಾದ ೯

೨೬೫

ಬಾದರಾಯಣ ಪಾದಕೆರಗಿದೆನೊ ಪ

ನೀದಯದಿ ಕಾಮಕ್ರೋಧಗಳನೆ ಬಿಡಿಸಿ
ಸಾಧು ಕರ್ಮದಲಿ ಆದರವೀಯೊ ಅ.ಪ

ಜ್ಞಾನಿ ಗೌತಮ ಮೌನಿ ಶಾಪದಿಂದ
ಜ್ಞಾನಿಗಳಿಗೆ ಅಜ್ಞಾನತೆ ಬರಲು

ದೈನ್ಯದಲಿ ಚತುರಾನನಾದಿಗಳು
ನೀನೆ ಗತಿಯೆನಲು ಮಾನಿಸಿದ ಸುಖಾತ್ಮ ೧

ತಾಪಸೋತ್ತಮ ಆ ಪರಾಶರರು
ದ್ವೀಪದಲ್ಲಿರಲು ನೀ ಪವಳಿಸಿದೆ
ಶಾಪದಿಂದ ಕ್ರಿಮಿರೂಪ ಪೊಂದಿದವಗೆ
ಭೂಪತನವನಿತ್ತ ದ್ವೈಪಾಯನಾಖ್ಯ ೨

ಶೃತಿಗಳರ್ಥ ಮಂದಮತಿಗಳರಿಯದಿರೆ
ಹಿತದಿ ಬ್ರಹ್ಮಸೂತ್ರತತಿಗಳನ್ನೆ ರಚಿಸಿ
ಅತುಲವಾದ ಭಾಗವತ ವರ ಮಹಾಭಾ-
ರತಗಳನ್ನು ರಚಿಸಿ ಅತಿ ಪ್ರಸನ್ನರಾದ ೩

ಆತ್ಮಶೋಧನೆ

೨೬೬

ಆದ ವಿಷಯಗಳು ಬಾಧಿಸದಂತೆನ್ನ
ಮಾಧವ ನೀ ಪೊರೆಯೋ ದಯಾನಿಧೇ ಪ

ಕ್ರೋಧವ ಬಹುತರ ಸಾಧಿಸಿ ಮನದಲಿ
ಖೇದವ ಪೊಂದಿದೆನೊ ರಮಾಧವ ಅ.ಪ

ಹೆಜ್ಜೆಯನರಿಯದೆ ಗೆಜ್ಜೆಕಟ್ಟಿಹೆನೆಂದು
ಗರ್ಜಿಸುತಿರುವರು ದುರ್ಜನರೆಲ್ಲರು
ಮರ್ಜಿಯನರಿಯುವ ಸಜ್ಜನರೆನ್ನನು
ವರ್ಜಿಸ ಬಿಡದಿರೊ ಮೂರ್ಜಗದೊಡೆಯನೆ ೧

ರೀತಿಯನರಿಯದೆ ಆತುರದಲಿ ಮನ
ಸೋತೆನೆನ್ನುತಿಹರೋ ದುರಾತ್ಮರು
ಖ್ಯಾತಿಗಾಗಿ ಧನ ಪ್ರೀತಿಗಾಗಿ ಸಭ್ಯ
ನೀತಿಯ ಮಾರ್ಗದಿಂದ ಚಲಿಸದೆ ಪೊರೆಯೊ ೨

ನಿನ್ನ ನಾನರಿತೆನೊ ಎನ್ನನರಿತು ನೀ ಪ್ರ
ಸನ್ನನಾಗಿ ನಿನ್ನ ಸೇವೆಯ ನೀಡಲು
ಅನ್ಯರಂತಿರಲಿ ನಿನ್ನ ಮನಕೆ ನಾ
ಅನ್ಯನಾಗದಂತೆ ಸತತವು ಕರುಣಿಸೊ ೩

೨೬೭

ಇಂದಿರೇಶ ನಿನ್ನ ಚರಣದ್ವಂದ್ವವನ್ನು ಬಿಡೆನೊ ಕರುಣಾ
ಸಿಂಧು ಎನ್ನ ಎಂದು ನೋಡುವಿಯೊ ಮೃದು ಮಂದಹಾಸದಿ ಪ

ನೊಂದಿರುವೆನೊ ಮನದಿ ಬಹಳ ಹಿಂದುಮುಂದು ತೋರದಿಹುದು
ಬಂಧು ಬಳಗವೆಲ್ಲ ನೀನೆ ಎಂದಿಹೆನೊ ಅರವಿಂದಲೋಚನ ಅ.ಪ

ಊರು ಊರು ಸುತ್ತಿ ದಣಿದು ಸಾರರಹಿತ ಶಾಸ್ತ್ರಗಳ ವಿ
ಚಾರದಲ್ಲಿ ಕಾಲ ಕಳೆದೆನೋ ಉದಾರಚರಿತ
ಭೂರಿ ಕರಣದಿಂದ ನಿನ್ನ ಚಾರುಚರಣ ಸೇವೆ ರುಚಿಯು
ತೋರಿ ಮನಕೆ ಸಂತಸದಿ ಮುರಾರಿ ಎನಗೆ ಗತಿಯೆನುತಲಿ ೧

ತಾಮಸ ವಿಷಯದಲಿ ಬಹಳ ಪ್ರೇಮದಿಂದ ವಿವಿಧ ದುರಿತ
ಸ್ತೋಮಗಳಲಿ ಮುಳುಗಿ ಬಳಲಿದೆನೊ ನಿಸ್ಸೀಮ ಮಹಿಮ
ನಾಮಸ್ಮರಣ ಮಾತ್ರದಿಂದ ಪಾಮರ ಜನರುಗಳ ಯೋಗ
ಕ್ಷೇಮ ವಹಿಸಿ ಪೊರೆಯುವಂಥ ಕಾಮಧೇನು ನೀನೆಂದರಿತು ೨

ಮಾತಿನಲ್ಲಿ ಮಲ್ಲರೆಂದು ಖ್ಯಾತಿ ಪಡೆದ ಜನಗಳಿರಲು
ಯಾತರವನು ಇವನು ಎನ್ನದಿರು ದೂತ ಪ್ರಸನ್ನನೇ
ಸೋತು ವಿವಿಧ ಕಾರ್ಯಗಳಲಿ ಆತುರದಲಿ ನಿನ್ನ ಪರಮ
ಪ್ರೀತಿಯ ಪಡೆಯುವುದೇ ದೊಡ್ಡ ನೀತಿಯೆಂದು ಅರಿತು ಸತತ ೩

೨೬೮

ಎಂದು ನೀ ನೀಡುವಿಯೊ ಮನಶಾಂತಿ ಗೋವಿಂದನೆ ಎನಗೆ
ಒಂದೂ ತೋರದೆ ಕವಿದಿಹುದೊ ಭ್ರಾಂತಿ ಪ

ಒಂದು ಘಳಿಗೆ ನಿನ್ನ ಪೊಗಳುವೆನೆಂದರೆ
ಬಂದೊದಗುವುದೊ ಕುಂದು ಸಹಸ್ರವು ಅ.ಪ

ಅನುದಿನ ಗಣನೆಗೆ ಬಾರದ ನುಡಿಗೆ ಕೊನೆಮೊದಲುಗಳಿಲ್ಲದೆ
ದಿನಗಳು ಕಳೆದುವು ದುರ್ವಿಷಯದಲಿ ಎಣೆಯಿಲ್ಲದೆ ಎನ್ನ
ಮನದಲಿ ಬೇಸರ ಜನಿಸಿ ಕೊರೆಯುತಿದೆ
ಅನವರತದಿ ನಿನ್ನ ಮನನದಿ ನಲಿಯಲು ೧

ಮರುಳು ಮೋಸಗಳಲಿ ಚತುರತೆಯುಳ್ಳ ದುರುಳರು ಸಂತತ ಮುಖ
ವರಳುವ ತೆರದಲಿ ಸಡಗರದಿಂದ ಒರಲುವ ವಚನಗಳ
ತಿರುಳುಗಳೆಲ್ಲವನರಿತು ಮನ
ತೆರಳದೆ ಸಹಿಸುತ ನರಳುತಿರುವೆನೊ ೨

ಬಗೆ ಬಗೆ ಮಾಡುತಲಿರುವ ದುರಾಶೆಯಗಲಿದೆ ಮನವನ್ನು
ಹಗರಣ ಮಾಡಿದೆನೋ ಜೀವನವ ನಗೆಗೀಡಾದೆನು ನಾ
ಹಗೆ ಷಡ್ವರ್ಗವನೊಗೆದು ತವಚರಣ
ಯುಗಳದಲಿ ಮನವು ಪ್ರಸನ್ನವಾಗುವಂತೆ ೩

೨೬೯

ಕಡಲಶಯನ ಹರೇ ಉಡುಪತಿ ಕುಲದೊರೆ ಪ

ಅಡಿಗೆರಗಿದೆ ನಿನ್ನ ನೀಡೆಲೊ ಕರಗಳ ಅ.ಪ

ನಡೆಯುವ ಪದಗಳು ಎಡವದಿರುವುದೇನೊ
ಕಡುಮಂದನಲಿ ದಯ ಸಡಿಲಿಸದಿರೊ ದೇವ ೧

ಕಂದನು ಪುಟ್ಟಲು ಅಂಧನಾಗಿರೆ ಅದನು
ಚೆಂದವಿಲ್ಲೆನುತ ಬೀಸುವಳೆ ಜನನಿ ೨

ಹೇಯ ಸಂಸಾರದಿ ಗಾಯವ ಪೊಂದಿ ನಾ
ನೋಯುತಿರುವೆನು ಉಪಾಯವ ಕಾಣದೆ ೩

ಲೋಪಗಳಿಗೆ ಬಲು ಕೋಪಿಸದೆ ಅಯ್ಯೋ
ಪಾಪವೆಂದೆನ್ನುತ ಕಾಪಾಡೆಲೋ ದೇವ ೪

ಎನ್ನೊಳು ದಯದಿ ಪ್ರಸನ್ನನಾಗುವೆಯೆಂದು
ಎನ್ನಮನದಿ ಸದಾ ಧ್ಯಾನಿಸುವೆನೋ ದೇವ ೫

೨೭೦

ಕರುಣಾ ಪೊಂದಿರೆ ಕೊರತೆಗಳುಂಟೆ ಶ್ರೀ ನರಹರಿಯ ಪ

ನರಿಗಳ ಕೂಗಿಗೆ ಹುಲಿಯಂಜುವುದೆ
ಬಿರುಗಾಳಿಗೆ ದೊಡ್ಡ ಗಿರಿ ನಡುಗುವುದೆ ಅ.ಪ

ನಾನು ತಾನೆಂದು ಕುಣಿಯುತಲಿದ್ದ ಮಾನವರನು ಜರಿದು
ನೀನೆ ಸೇವೆಯನು ಮಾಡೆಂದೆನುತ ತಾನೊಲಿಯುತಲಿ
ಹೀನ ಜನರು ಅಪಮಾನವ ಬಯಸಲು
ನಾನಿಹೆನೆನ್ನುವ ಜಾನಕಿನಾಥನ ೧

ಬಂಧುಗಳೆನ್ನ ನಿಂದಿಸುತಿಹರು ಒಂದನೂ ಕೊಡೆಯೆಂದು
ಹಿಂದು ಮುಂದೆನಗೆ ಕುಂದು ಕೋರುವರು ಒಂದನರಿಯರು
ಮುಂದೆ ಎನಗೆ ಬಲು ತೊಂದರೆಗಳಿರುವು
ವೆಂದು ಪೇಳುವರು ಮಂದರಧರನ ೨

ಧನಿಕನಲ್ಲೆಂದು ಅಲ್ಲಗೆಳೆಯುವರು ಧನವಿಲ್ಲದಿರಲು
ಘನತೆ ಎಂತೆಂದು ಜರಿಯುತಲಿಹರು ಮನವನರಿಯರು
ಧನ ಪಿಶಾಚಿಯನು ಮನದಿಂದ ತೊಲಗಿಸಿ
ಮನದಲಿ ನೆಲಸಿಹ ವನರುಹ ನಯನನ ೩

ನಂಬಿದರೆಮ್ಮ ಧನಕನಕಗಳ ತುಂಬುವೆವೆಂಬ
ಜಂಭದ ಮಾತ ನಂಬದೆ ಇರಲು ಹಂಬಲಿಸುವರು
ನಂಬುವ ಭಕುತರ ಹಿಂಬಾಲಿಸುತಲಿ
ಬೆಂಬಲಿವೀಯುತವ ಅಂಬುಜನಾಭನ ೪

ಚತುರನಲ್ಲೆಂದು ಅತಿದೂರುವರು ಹಿತರಂತೆ ನಟಿಸಿ
ಮಿತಿಮೀರಿ ಎನಗೆ ಬೋಧಿಸುತಿಹರು ಮನ್ಮತಿಯನರಿಯರು
ರತಿಪತಿಯೆನ್ನನು ಪ್ರಸನ್ನನಾಗಿ ದಿವ್ಯ
ಗತಿ ತೋರುತಲಿರೆ ಚತುರತೆಯೇತಕೆ ೫

೨೭೧

ಜೋಕೆ ಎನ್ನ ವಿಚಾರ ನಾಕು ಜನರಂತಲ್ಲ
ಸ್ವೀಕರಿಸಬೇಕು ಕ್ಷಣದಿ ಪ

ನಾಕಾರು ವಿಧಗಳಲಿ ನೀಪೇಳಿದುದನೆಲ್ಲ
ಏಕಮನದಲಿ ಮಾಡಿದೆ ಕೃಷ್ಣ ಅ.ಪ

ಬಾಲತನದಲಿ ಬಹಳ ಲೋಲನಾಗಿರು ಎಂದು
ಪೇಳಲಿಲ್ಲವೆ ಯೋಚಿಸು
ಕೀಳುಜೀವನದಲ್ಲಿ ಕಾಲವನು ಕಳೆ ಎಂದು
ಪೇಳಿದುದ ನೀ ಮರೆತೆಯಾ
ಶ್ರೀ ಲಕುಮಿಪತಿ ನಿನ್ನ ಕೀಲುಗೊಂಬೆಯ ತೆರದಿ
ಪೇಳಿದುದ ಮಾಡಿರುವೆನೊ ೧

ಶ್ರೀಪತಿಯೆ ನಿನ್ನ ಪ್ರೇರಣೆಯಲ್ಲವೆ ಸರ್ವ
ಪಾಪ ಪುಣ್ಯಕೆ ಕಾರಣ
ಈ ಪರಿಯ ನಿನ್ನ ಸಂಕಲ್ಪವನು ಮೀರಲು
ತಾಪಸೋತ್ತಮರಿಗಳವೆ
ಆಪತ್ತು ಸಂಪತ್ತು ನಿನ್ನಧೀನಗಳೆಂದು
ತಾಪತ್ರಯವ ಸಹಿಸಿದೆ ೨

ಇಂದಿರಾಪತಿ ನಿನ್ನ ಒಂದೊಂದು ದಿನದಲಾ
ನಂದ ಪೂಜೆಗೈಯಲು
ಹಿಂದಿನಾ ಲೆಕ್ಕವು ಸಂದಿಲ್ಲವೆಂದು ನೀ
ನಿಂದು ನುಡಿಯಲು ಸಾಧ್ಯವೆ
ಅಂದು ಮಾಡಿದರ್‍ಯಾರು ಇಂದು ಮಾಡುವರ್‍ಯಾರು
ಸಂದೇಹವಿಲ್ಲವೆನಗೆ ೩

ಇಂತಹುದು ಬೇಕೆಂಬ ಚಿಂತೆಯಿಲ್ಲದೆ ಬಹಳ
ಸಂತಸದಿ ಮುಳುಗಿರುವೆನೊ
ಕಂತುಜನಕ ಎನಗೆ ಭ್ರಾಂತಿ ನೀಡದೆ ಮನಕೆ
ಶಾಂತಿಯನು ದಯಮಾಡೆಲೊ
ಸಂತತ ನೀನು ಎನ್ನಂತರಂಗದಲಿರಲು
ಕಂತೆಯಂದದಿ ಕಾಂಬೆನೊ ಜಗವ ೪

ಧೋರಣೆಯ ನುಡಿಗಳಿಗೆ ಕಾರಣನು ನೀನಿರಲು
ಯಾರ ಭಯವೆನಗಿಲ್ಲವೊ
ನೀರಜಾಕ್ಷನೆ ನಿನ್ನ ಪ್ರೇರಣೆಯನೆಳ್ಳಷ್ಟು
ಮೀರಿ ನಡೆಯುವುದಿಲ್ಲವೊ
ಸಾರಗುಣ ಸಂಪನ್ನ ಧೀರಭಕ್ತ ಪ್ರಸನ್ನ
ಯಾರಿರುವರೊ ಜಗದಲಿ ನಿನ್ನೊರತು ೫

೨೭೨

ತೋರಿಸಯ್ಯ ಬೆಳಕು ದೇವ ತೋರಿಸಯ್ಯ ಬೆಳಕು
ದಾರಿ ತಪ್ಪಿ ದೂರ ಬಂದಿಹೆನು ಪ

ಘೋರ ತಿಮಿರ ಮಧ್ಯದಿ ನಿಂತಿಹೆನೊ ಅ.ಪ

ಚತುರನೆಂದು ತಿಳಿದು ಬಲುದಿನ
ಸ್ತುತಿಸಲಿಲ್ಲ ನಿನ್ನ
ಪತಿತನೆಂಬ ಭಯ ತೊರೆದು ಧೈರ್ಯದಲಿ
ಕ್ಷಿತಿ ಭೋಗಗಳಿಗೆ ಮತಿಗೊಟ್ಟೆನು ನಾ ೧

ಬೇಡುವುದಿಲ್ಲವೊ ನಾ ಎನ್ನ
ಕೂಡಿ ಪೋಗಲೆಂದು

ಹೂಡು ಎನ್ನಯ ಹೆಜ್ಜೆಯ ಸನ್ಮಾರ್ಗದಿ
ಕಾಡು ಮೇಡುಗಳ ದಾಟಿ ಬರುವೆನೊ ೨

ಕೂತಿರುವೆನು ನಾನು ತನುಮನ
ಸೋತಿರುವುದು ಬಹಳ
ಈ ತರಹದಿ ಬದುಕಿರುವುದು ನಿನ್ನಯ
ಪ್ರೀತಿಯಿಂದಲೆ ಜ್ಯೋತಿರ್ಮಯನೆ ೩

ಕತ್ತಲೆ ಕವಿದಿಹುದೊ ಕಣ್ಣಿಗೆ
ಎತ್ತಲು ಕಾಣದಿದೆ
ಚಿತ್ತವ ಬೆಳಗಿಸೊ ಮತ್ತೆ ನೋಡುವೆನು
ಉತ್ತಮ ದೃಶ್ಯವ ಭಕುತರ ಪ್ರಸನ್ನನೆ ೪

೨೭೩

ದೀನ ಪಾಲನೆ ಗಾನಲೋಲನೆ
ಮೌನಿ ಸುಜನ ಪ್ರಿಯನೇ ಪ

ಈ ನರಜನ್ಮದ ಕಾನನದಲಿ ಬಲು
ದೀನನಾಗಿ ಗುಣಗಾನ ಮಾಡುವೆನೊ ಅ.ಪ

ದುಷ್ಟಭೋಗಗಳನುಭವಿಸುತ ಸದಾ
ಭ್ರಷ್ಟನಾದೆ ನಾನು
ಅಷ್ಟಿಷ್ಟಲ್ಲದೆ ಮರುಗುತಿರುವೆ ಪರ
ಮೇಷ್ಠಿ ಜನಕ ಎನ್ನ ನಿಷ್ಠನ ಮಾಡೊ ೧

ಜಪವ ಮಾಡಲಿಲ್ಲ ತಪವ ಮಾಡಲಿಲ್ಲ
ಉಪವಾಸವ ಕಾಣೆ

ತಪಿಸುತಿರುವೆ ಎನ್ನ ಅಪರಾಧಗಳಿಗೆ
ಕುಪಿತನಾಗದಿರೊ ದ್ವಿಪ್ರವರ ವರದ ೨

ಧರ್ಮವ ಬಿಟ್ಟು ಸತ್ಕರ್ಮವ ತ್ಯಜಿಸುತ
ದುರ್ಮಾರ್ಗದಲಿ ಬಲು
ಹೆಮ್ಮೆ ಮಾಡಿದ ನನ್ನ ಹಮ್ಮು ಮುರಿದಿಹುದು
ಬೊಮ್ಮ ಜನಕ ಸುಪ್ರಸನ್ನನಾಗೆಲೊ ೩

೨೭೪

ದೇವಗಂಗೆಯು ಹರಿಯುತಿರಲು ತೀರದಲ್ಲಿ ನಾ
ಬಾವಿಯನು ತೋಡುತಲಿ ಬಲು ಬಳಲಿದೆ ಪ

ಗೋವು ಕರೆಯುವ ಕ್ಷೀರ ಕೊಡಕೊಡದಿ ತುಂಬಿರಲು
ಬೇವಿನೆಣ್ಣೆಯ ಬಯಸಿ ಬಳಲಿ ಬೆಂದೆ ಅ.ಪ

ಅರಸುತನದಲಿ ಆಳುತಿರುವ ಸ್ಥಾನವನು ನಾ
ಮರೆತು ಕಡು ಹೇಡಿಯಂದದಿ ನಡೆದೆನೊ
ದುರಿತರಾಶಿಗಳನ್ನು ತರಿವ ಮಂತ್ರಗಳರಿತು
ಕುರುಬ ಹೊದ್ದಿರುವ ಕಂಬಳಿ ಬಯಸಿದೆ ೧

ವೇದಾಂತ ಸಾಮ್ರಾಜ್ಯದಧಿಕಾರದಲಿ ಕುಳಿತು
ಕಾದ ಮರುಭೂಮಿ ರಾಜ್ಯವ ಬಯಸಿದೆ
ಆದರದಿ ಕರೆದು ಬಡಿಸುವರ ಭೋಜನ ತೊರೆದು
ಮೂದಲಿಸುವರನು ಬೇಡಿದೆನನ್ನವ ೨

ನೀಗಿ ಪುಣ್ಯವು ನಿನ್ನ ದಯವು ತಪ್ಪಿದ ಮೇಲೆ
ಕೈಗೊಂಬೆ ಕರಡಿಯಾಗುವುದು ಕ್ಷಣದಿ
ರಾಗಗಳ ಕಳೆದು ಮನವಚನ ಕಾಯಗಳನ್ನು
ಬೇಗ ನಿನ್ನಡಿಗಳಿಗೆ ಸೆಳೆಯಲೋ ಪ್ರಸನ್ನ ೩

೨೭೫

ನಂದ ಕುಮಾರ ಇಂದುಕುಲ ತಿಲಕ ಪ
ಎಂದಿಗು ನಿನ್ನಯ ಸುಂದರ ಚರಣವ

ವಂದಿಸಿ ನಲಿಯುವ ನಂದವೆನಗೆ ಕೊಡೊ ಅ.ಪ

ಧನಕನಕಗಳನು ದಿನ ದಿನ ಗಳಿಸುವ
ಅನುರಾಗಗಳನು ಕೊನೆಗಾಣಿಸೊ ದೇವ
ವನಜಸಂಭವಪಿತ ಕನಸಿನಲ್ಲಿಯೂ ನಿನ್ನ
ಮನನದಿ ಹಿಗ್ಗುವ ಮನವ ಎನಗೆ ಕೊಡೆಲೊ ೧

ಭಯವಿಲ್ಲದೆ ದೋಷಮಯದ ನೋಟಗಳನು
ಬಯಸುವ ಮತಿಯನು ಲಯಮಾಡೋ ದೇವ
ಜಯ ಮಾಧವ ಎನ್ನ ನಯನಗಳಿಗೆ ನಿನ್ನ
ಪ್ರಿಯ ರೂಪದ ಪರಿಚಯವ ಮಾಡಿಸೊ ಸದಾ ೨

ಕಾಲವ ಕಳೆಯಲು ಆಲಸವಿಲ್ಲದೆ
ಪೇಳಬಾರದ ನುಡಿ ಚಾಲನು ತೊಲಗಿಸೊ
ಬಾಲ ಗೋಪಾಲ ಎನ್ನ ನಾಲಿಗೆಯಲಿ ನಿನ್ನ
ಲೀಲೆಗಳನು ಸದಾ ಲಾಲಿಸಿ ಪೊಗಳಿಸೊ ೩

ಪರಿಪರಿ ಭೋಗಕೆ ಪರಿದಾಡುತ ಸದಾ
ಪರರ ಸೇವಿಸುತಿಹ ಕರಗಳ ನಿಲ್ಲಿಸೊ
ಮುರಳೀಧರ ಕೃಷ್ಣ ಕರುಣದಿಂದಲಿ ಎನ್ನ
ಕರಗಳಿಗೆ ನಿನ್ನ ವರಸೇವೆಯ ನೀಡೊ ೪

ಭುವಿಯಲಿ ದುರುಳರ ಸವಿನುಡಿಗಳಿಗತಿ
ಕಿವಿಗೊಟ್ಟು ಕೇಳುವ ಲವಲವಿಕೆಯ ಬಿಡಿಸೊ
ದಿವಿಜರೊಡೆಯ ಎನ್ನ ಕಿವಿಯೊಳಗೆ ನಿನ್ನ
ನವ ನವ ಚರಿತೆಯ ಸವಿರಸ ಸುರಿಸೆಲೊ ೫

ಮಾಧವನನು ಮರೆತು ಪಾದಗಳಿಂದಲಿ
ಮೇದಿನಿ ತಿರುಗುವ ಮೋದವೆನಗೆ ಬೇಡ
ಯಾದವಪತಿ ನಿನ್ನ ಪಾದದರುಶನದ ವಿ
ನೋದಕ್ಕೆ ಸುತ್ತಲು ಆದರ ಪೊಂದಿಸೊ ೬

ಭಿನ್ನ ಅಂಗಗಳಿಂದ ಎನ್ನ ಕರ್ಮಗಳನು
ನಿನ್ನ ಸೇವೆಯೆಂದು ಬಿನ್ನೈಸುವೆ ದೇವ
ಎನ್ನ ದುರಿತಗಳ ಭಿನ್ನ ಮಾಡುತಲಿ ಪ್ರ
ಸನ್ನನಾಗಿ ಎನಗೆ ಸನ್ಮತಿ ದಯಮಾಡೊ ೭

೨೭೬

ನಂಬಿದೆನೊ ನಿನ್ನ ಅಂಬುಜನಯನ ಕೃ
ಪಾಂಬುಧೆ ದೃಢದಲಿ ಪ

ಸಂಭ್ರಮದಲಿ ಕಿವಿ ತುಂಬುತಿರುವ ಆ
ಡಂಬರ ವಚನಕೆ ಮುಂಬರಗೊಳ್ಳುತ ಅ.ಪ

ನವ ಘನ ನಿಭಕಾಯ ನಿನ್ನಯ ಕರುಣಮಯ ಸಹಾಯ
ವಿಲ್ಲದೆ ಬಿಗಿಯುತಿರುವ ಮಾಯಾ
ಪಾಶವ ತೊರೆಯಲಳವೆ ಜೀಯಾ ನಿನ್ನಯ
ದಯವ ಪಡೆದ ಪರಿಯನರುಹುವ
ಯತಿವರೇಣ್ಯ ಗುರುಮಧ್ವರಾಯರ ಪರಮ ಸಮಯ
ಸಾರಗಳನು ಸಂತತ

ಶ್ರವಣ ಮನನ ಧ್ಯಾನಗಳಿಂದ ಪರಿಚಯ ಪಡೆದು ದು
ಷ್ಟ ವಿಷಯಗಳಲಿ ಮತಿಯನು
ಮುರಿಯುವಂತೆ ಕರುಣಿಸೋ ಸುಗುಣಾಲಯ ೧

ನೀರಜದಳ ನೇತ್ರ ವರ ಸುಖ ಚಿನ್ಮಯೈಕ ಗಾತ್ರ
ಶರಣ ಪರಮ ಸುಜನ ಮಿತ್ರ
ಸುರವರ ಸರಸಿಜಭವ ಪುತ್ರ ರುಚಿರರ
ಮುಕುಟಾಕ್ಷಪಾತ್ರ ನಿನ್ನಯ ವಿವಿಧ ಲೀಲೆಗಳು ಚಿತ್ರವಿಚಿತ್ರವು
ಅರಿತೆನೆಂದು ತಿಳಿದು ಮೆರೆಯುತಲಿರುವ
ನರರ ಮದವ ಮುರಿದು ದೈನ್ಯದಿಂದಲಿ
ಮರೆತೆನೆಂದು ದಿನದಿನದಲಿ ಭಜಿಪರ
ಪೊರೆವ ಪರಮ ಕರುಣಾರಸಮಯನೆ ೨

ದೀನಭಕುತರನ್ನು ಪೊರೆಯುವ
ದಾಸಿಯೆಂದು ನಿನ್ನ ಪೊಗಳುವ
ಮಾನತತಿಗಳನ್ನು ಸಂತತ
ಧ್ಯಾನ ಮಾಡಿ ಎನ್ನ ಕ್ಲೇಶವ ಮೌನದಿಂದ ಇನ್ನೂ ಸಹಿಸುತ
ಜಾನಕೀಶ ತವ ಪಾದಕಮಲದ
ರೇಣುವನ್ನು ಶಿರದಿ ಧರಿಸುತಲಿ ಅನು
ಮಾನವನ್ನು ತೊರೆದು ಮುದದಿ ಸುವಿಮಲ
ಜ್ಞಾನಮೂರ್ತೆ ಜ್ಞಾನಿವರ ಪ್ರಸನ್ನನೆ
ನೀನೆ ಎನ್ನ ರಕ್ಷಕನೆಂದರಿಯುತ ೩

೨೭೭

ಬದುಕಲು ಪ್ರಾರ್ಥಿಸಿರೊ ಬಹುದಿನ
ಬದುಕಲು ಪ್ರಾರ್ಥಿಸಿರೊ ಪ

ಬದುಕಿ ಬಾಳುವಂಥ ಹದವತಿ ಸುಲಭವು
ಬುಧಜನ ತೋರುವರದನು ಸಂತೋಷದಿ ಅ.ಪ

ನಾನಾ ಯೋನಿಗಳಲ್ಲಿ ಬಂದು ಈ
ಮನುಷ್ಯ ಜನ್ಮವು ಏನು ಪುಣ್ಯವೊ ೧

ಕಾಲವು ಕೆಟ್ಟಿತು ಬಾಳಲಾಗದೆಂದು
ಬಾಲಭಾಷೆಗಳ ಪೇಳದೆ ಧೈರ್ಯದಿ ೨

ರಾಜಶಾಸನವು ಈ ಜಗಕಲ್ಲವೆ
ಮೂರ್ಜಗದೊಡೆಯನ ಶಾಸನ ಮೀರದೆ ೩

ಕ್ಷೇತ್ರ ತೀರ್ಥಗಳು ವ್ಯರ್ಥಗಳಾದರೂ
ಕ್ಷೇತ್ರಜ್ಞನ ಕೃಪಾ ಮಾತ್ರವಿದ್ದರೆ ಸಾಕು ೪

ಜ್ಞಾನಿಗೆ ಹರಿ ಪ್ರಿಯ ಜ್ಞಾನಿ ಹರಿಗೆ ಪ್ರಿಯ
ಜ್ಞಾನವ ಪಡೆದು ಪ್ರಸನ್ನ ಮಾನಸರಾಗಿ ೫

೨೭೮

ಬಿಡಿಸೊ ಬಂಧನ ಕ್ಲೇಶವ ಬಿಗಿಯುತಲಿದೆ ಪ

ನಾನು ಬಿಟ್ಟರು ಎನ್ನ ಕಂಬಳಿ ಬಿಡದಿದೆ ಅ.ಪ

ಎಲ್ಲವ ಬಿಟ್ಟು ನಾ ಬಂದೆನೆಂದರಿತೆನೊ
ಎಲ್ಲವು ಎನ್ನನು ಬಿಡಲಿಲ್ಲವೊ
ಕಲ್ಲು ಎದೆಯ ಪೊತ್ತ ಮಲ್ಲನೆಂದರಿತೆನೊ
ಹುಲ್ಲೆಯ ಮರಿಯಂತೆ ನಡುಗುವಂತಾಯಿತೊ ೧

ಮಿಕ್ಕ ವಿಷಯಗಳ ಬೇಡ ಬೇಡೆನ್ನುತ
ಹೊಕ್ಕರು ಮೂಲೆ ಮೂಲೆಗಳನ್ನು

ದಿಕ್ಕು ದಿಕ್ಕುಗಳಿಂದ ಸೆಳೆಯುತಲಿರುವುದು
ಅಕ್ಕರೆ ತೊಲಗಿತು ಶುಷ್ಕವಾಯಿತು ಮನವು ೨

ಲೋಕ ರಕ್ಷಕನು ನೀನೆಂಬುದನರಿತರು
ವ್ಯಾಕುಲವೇತಕೆ ಪ್ರತಿ ಕ್ಷಣವು
ತಾ ಕಾಣದ ನರ ವರವ ಕೊಡಲುಬಹುದೆ
ಏಕಾಂತ ಭಕುತ ಪ್ರಸನ್ನನೆ ಕರುಣದಿ ೩

೨೭೯

ಮನವು ನೆಮ್ಮದಿಯಾಗಲಿ ಪ

ಅನುದಿನವು ನಿನ್ನ ಮನಸಾರೆ ಪೂಜಿಸುವಂತೆ ಅ.ಪ

ಬೆಟ್ಟ ಬಿಸಿಲಿನಲಿ ಬೇಯುವುದ ನೋಡುತ ಮನವು
ಕೆಟ್ಟು ಹೋಗದೆ ಸತತ ಶುದ್ಧವಿರಲಿ
ಹೊಟ್ಟೆ ಪಾಡಿಗೆ ಕೊರತೆ ಪಡುತಿರುವ ಜನರಲ್ಲಿ
ಸಿಟ್ಟುಬಾರದೆ ಮನಕೆ ತಾಳ್ಮೆಯಿರಲಿ ೧

ನೀರು ಕಡೆದರೆ ಬೆಣ್ಣೆ ಬಾರದೆನ್ನುವ ಕ್ಲೇಶ
ದೂರವಾಗಲಿ ತಿರುಗಿ ಬಾರದಿರಲಿ
ವೀರ ಹನುಮನು ತನ್ನ ಸಾರಸೇವೆಗೆ ಫಲವ
ಕೋರಿದನೆ ಧನಕನಕ ವೈಭವಗಳ ೨

ಗೋಪುರವ ತಾಂಗಿರುವೆನೆಂಬ ಗೊಂಬೆಯ ಹೆಮ್ಮೆ
ಈ ಪರಿಯೆ ಮನದ ಕ್ಲೇಶವ ತಂದಿತು
ಶ್ರೀ ಪತಿಯು ಮಾಡಿ ಮಾಡಿಸುವೆನೆಂಬುವಜ್ಞಾನ
ಲೋಪಪೊಂದದೆ ಮನ ಪ್ರಸನ್ನವಾಗಲಿ ದೇವ ೩

೨೮೦

ಮರೆವುದೆಂತು ನಿನ್ನ ಪರಮ ದಯವ ಕರುಣಾವಾರಿಧೇ ಪ

ಅರಿಯದ ಅಜ್ಞಾನಿ ಎನ್ನ ಹಿರಿಯನೆನಿಸಿ ಪೊರೆದ ಬಗೆಯ ಅ.ಪ

ಜ್ಞಾನಿಗೆ ಲಭ್ಯನೆಂದು ನಿನ್ನ ಮಾನತತಿಯು ಪೊಗಳುತಿರಲು
ಜ್ಞಾನವೀಯದಿರಲು ನಿನ್ನ ಜ್ಞಾನಿಜನಗಳೇನೆನುವರೋ ೧

ರಾಗ ದ್ವೇಷದಿಂದ ಶಿರವ ಬಾಗದಿದ್ದ ಎನ್ನ ದುರಿತ
ನೀಗಿ ದಿವ್ಯಯೋಗವೀಯಲು ತ್ಯಾಗ ನಿನ್ನದು ಯೋಗವೆನ್ನದು ೨

ಮಡುವಿನಲ್ಲಿ ಬಿದ್ದು ಸುಳಿಯ ಹೊಡೆತದಿಂದ ಮುಳುಗುತಿರಲು
ದಡಕೆ ತಂದು ರಕ್ಷಿಸಿದ ಎನ್ನೊಡೆಯ ವರ ಪ್ರಸನ್ನ ಮೂರುತೆ ೩

೨೮೧

ವಾಸುದೇವ ನಿನ್ನ ದಾಸನಾಗಲು ಬಲು
ಆಸೆಯ ಪೊಂದಿ ಸಂತೋಷದಲಿರುವೆನೊ ಪ

ಈ ಸಂಸಾರದ ಮೋಸಕೆ ಸಿಲುಕೆ ನಾ
ಶ್ರೀಶನ ಚರಣವ ಲೇಶ ಭಜಿಸಲಿಲ್ಲ
ಪಾಶಕೆ ಸಿಲುಕದ ಸುಜನರುಗಳ ಸಹ
ವಾಸವಿತ್ತು ಅವಕಾಶವ ನೀಡೊ ಅ.ಪ

ಸಾರುತಲಿರುವ ಸಮೀರ ಸಮಯಗಳ
ಸಾರವನರಿಯದೆ ದೂರಿದೆ ನಿನ್ನನು
ಯಾರ ಕರುಣವೊ ತೋರಿತು ಮನದಲಿ

ಘೋರತರದ ಅಪರಾಧಗಳೆಲ್ಲವು
ನೀರಜ ನಯನನೆ ಭೂರಿ ದಯದಿ ನಿನ್ನ
ಚಾರು ಚರಣದಲಿ ಸೇರಿಸೊ ಮನವ ೧

ಪರಿಪರಿ ವಿಧದ ಕುಶಾಸ್ತ್ರಗಳೋದಲು
ಬರಿಗಾಳಿಯ ಗುದ್ದಿ ಮುರಿದವು ಕರಗಳು
ಸಿರಿರಮಣನೆ ನಿನ್ನ ಪರಿಚಾರಕನೆಂಬೊ
ಅರಿವಿನಿಂದಲೆ ಪರತರ ಸುಖವೆಂದು
ಪರಿಪರಿಯರುಹುವ ಗುರು ಮಧ್ವರಾಯರ
ವರಶಾಸ್ತ್ರಗಳಿಗೆ ಸರಿಯುಂಟೆ ಜಗದೆ ೨

ಅನ್ಯಸೇವೆಗಳಲ್ಲಿ ಅನ್ಯಾಯದಿ ಕಾಲ
ಮುನ್ನ ಕಳೆದುದನು ಮನ್ನಿಸೆಲೋ ಹರಿ
ನಿನ್ನ ಸೇವೆಯ ಸುಖವನ್ನು ಅರಿತೆನೊ
ಎನ್ನ ಮನಕೆ ಬಲವನ್ನು ಕರುಣಿಸುತ
ಇನ್ನಾದರು ಚ್ಯುತಿಯನ್ನು ಪೊಂದಿಸದೆ
ನಿನ್ನ ದಾಸನಲಿ ಪ್ರಸನ್ನನಾಗೆಲೊ ೩

೨೮೨

ಸಂತೋಷವೆಂತು ನಾ ವರ್ಣಿಪೆನು ಎನ್ನಂತರಂಗವ
ಸಂತೋಷವೆಂತು ನಾ ವರ್ಣಿಪೆನು ಪ

ಕಂತೆ ಜೀವನವ ತೊರೆದು ಸಂತತ ನಿನ್ನ ಭಜಿಸುವ ಅ.ಪ

ಲೇಸು ಜೀವನದ ಆಸೆಗೆ ಬೆರಗಿ ಮೋಸದಿ ದಿನ ದಿನ
ಸಾಸಿರ ದುಷ್ಕೃತಿಗಳನು ರಚಿಸಿ
ಬೇಸರದಲಿ ಮುಳುಗಿರೆ ಶ್ರೀಶ ನೀ ಕರವ ನೀಡಿದೆ ೧

ನೂರಾರು ಮಿತ್ರ ಬಾಂಧವ ಜನರು ಯಾರೆನ್ನವುದಕೆ
ಕಾರಣರಾದರೋ ನಾನರಿಯೆ
ನೀರಜಾಕ್ಷನೆ ನಿನ್ನಯ ಸಾರಸೇವೆಯನು ಮಾಡಿದ ೨

ಅನ್ನವನರ್ಜಿಸುವ ಬಗೆ ಹೊರತು ಇನ್ನೊಂದನರಿಯದೆ
ಸಣ್ಣತನದಲಿ ದಿನ ಕಳೆಯುತಿರೆ
ಮಾನ್ಯ ಯೋಗವನರುಹಿ ಪ್ರಸನ್ನ ಶ್ರೀಹರಿಯ ನುತಿಸುವ ೩

೨೮೩

ಸಂಸಾರ ಸುಖವಿಲ್ಲ ನಾ ಹಿಂಸೆಯ ತಾಳಲಾರೆ ಪ

ಮಾತೆಯ ಮಾಂಸದ ಹೇಸಿಗೆ ಕೋಶದೊಳ್
ಮಾಸ ಒಂಭತ್ತನು ಕ್ಲೇಶದಿಂದ ತಳ್ಳಿದೆ
ಈಶ ಲಕ್ಷ್ಮೀಶನು ಕೋಪದಿಂದ ಬೀಸಲು
ಕೂಸಾಗಿ ಭೂಮಿಗೆ ವಾಸಕ್ಕೆ ಬಂದೆನು ೧

ನಡೆ ನುಡಿಯ ಕಲಿಯುತಲಿ ಹರುಷದಲಿ ಕುಣಿಯುತಲಿ
ಹುಡುಗತನ ಕಳೆಯುತಿರೆ ಹರುಷಗಳು ತೊಲಗಿದವು
ದುಡಿಕಿನಲಿ ಭ್ರಮಿಸಿದೆನು ಮಡದಿಯಳ ಸಡಗರಕೆ
ನಡುಗಿದೆನು ಬರುಬರುತ ಭವ ಕಡಲೊಳಗೆ ಮುಳುಗಿ ೨

ಕಡುಬಡತನ ಕೊರೆಯುತಲಿದೆ ಕಿರಿಕಿರಿಗಳು ಉರಿಸುತಲಿವೆ
ತನುಮನಗಳು ಜರಿಯುತಲಿವೆ ಅಣಕಿಸುವರು ನಿಜ ಜನಗಳು
ಬಿಡುಗಡೆ ಕೊಡೋ ಪರಮದಯದಿ
ಪರಮ ಪುರುಷ ಸಿರಿಯರಸನೆ
ಮರೆಯದಿರುವೆ ಉಪಕೃತಿಗಳ ದಡಕೆಳೆಯೊ ಪ್ರಸನ್ನ ಹರೇ ೩

೨೮೪

ಸಿರಿಯು ಬೇಡೆನಗೆ ಈ ಬರಿಯ ವೈಭವದ
ಪರಿಯು ಬೇಡವೆನಗೆ ಪ

ಪರಿಪರಿಯಲಿ ನಿನ್ನ ಚರಣ ಸೇವೆಯಲಿ
ಪರತರ ಸುಖಗಳ ಅರಿವು ಬೇಕಲ್ಲದೆ ಅ.ಪ

ಮರೆತೆನೊ ನಿನಗಾಗಿ ಚೆಲುವ ಸತಿಸುತರ
ತೊರೆದೆನೋ ಬಹು ವಿಧ ಪ್ರೇಮಪಾಶಗಳ
ಬೆರಗಾದೆನೋ ದೇವ ಮರುಕದಿಂದೆನಗೆ ನೀ
ವರ ಮಾರ್ಗವ ತೋರೋ ಮುರಳೀಧರನೆ ೧

ಮಂದಮತಿಗಳೆನ್ನ ನಿಂದಿಸುತಿರುವುದಾ
ನಂದವೇನೋ ನಿನಗೆ
ಸುಂದರ ಮೂರುತಿ ಕುಂದಿ ಕುಂದಿದ ಮನ
ಮಂದಿರದಲಿ ನಿಲ್ಲೋ ಇಂದಿರಾ ರಮಣನೆ ೨

ಎನ್ನ ಕುಂದುಗಳನ್ನು ಮನ್ನಣೆ ಮಾಡಿ ಸಂ
ಪನ್ನತೆ ಎನಗೀಯೋ
ಘನ್ನ ಮಹಿಮ ಸುಪ್ರಸನ್ನವಿಠ್ಠಲನೇ
ನಿನ್ನವನೆನಿಸೆಲೋ ಪನ್ನಗಶಯನನೇ ೩

ಲೋಕನೀತಿ

೨೮೫

ಅಧಿಕಾರಿಯಾಗಬೇಕು ಅದಕಾಗಿ ದುಡಿಯಬೇಕು ಪ

ಅಧಿಕಾರಿಯಾಗುವುದು ಸುಲಭವಲ್ಲ
ಎದೆಕಾಚಿ ಜಗದಿ ಹೆಮ್ಮೆಯ ತೋರುವ ಅ.ಪ

ಶಾಶ್ವತವಿರಬೇಕು ಅದನೀಶ್ವರ ಕೊಡಬೇಕು
ವಿಶ್ವವಿದ್ಯಾನಿಲಯವ ಸೇರುತಲಿ
ಶಶ್ವದಿ ಪರವಿದ್ಯಾಶಾಖೆಯಲಿ ೧

ಭೂಷಣವೆನಗೆಂದು ನೀ ಮೋಸ ಹೋಗಬೇಡ
ಸಾಸಿರ ಸಾಸಿರ ಸ್ಥಾನಗಳಿಗೆ ನೀ
ಆಸೆ ಪಡದೆ ಹರಿಶಾಸನ ಸಭೆಯ ೨

ಕರ್ಮ್ಮಿಯ ಪ್ರತಿಫಲಕೆ ನೀ ಸಮ್ಮತಿ ಕೊಡದಿರೆಲೊ
ಮರ್ಮವರಿತು ಪರಲೋಕವ ಪಡೆಯಲು
ಹಮ್ಮನು ಮುರಿಯುವ ಕಾರ್ಮಿಕ ಸಭೆಯ ೩

ಕಾಲವರಿತು ಸತತ ನೀ ಮೇಲಕೇಳಬೇಕು
ಬಾಲಗೋಪಾಲನು ನೆಲೆಸುವುದಕೆ ಹೃದ
ಯಾಲಯ ರಚನೆಯ ಚತುರ ಶಿಲ್ಪಿಯ ೪

ಶ್ರವಣ ಮಾಡಬೇಕು ಶಾಸ್ತ್ರವ ಮನನ ಮಾಡಬೇಕು
ಶ್ರವಣ ಮನನ ನಿಧಿ ಧ್ಯಾಸನದಿಂದ ಪ್ರ
ಸನ್ನ ಹರಿದಯದಿ ಸಿಗುವ ಮುಕುತಿಗೆ ೫

೨೮೬

ಅರುಣೋದಯಕೆ ಮುಂಚೆ ಬಲು ಕತ್ತಲಂತೆ ಪ

ಸಿರಿ ಬರುವುದಕೆ ಮುಂಚೆ ಮುಖ ಸುತ್ತು ಜನಕೆ ಅ.ಪ

ಹೊಟ್ಟೆ ಹಸಿದರೆ ಅನ್ನ ಬಹಳ ರುಚಿಯಂತೆ
ಕೆಟ್ಟು ಬದುಕುವ ಮನುಜ ಬಲು ಘಟ್ಟಿಯಂತೆ
ಸಿಟ್ಟು ಮಾಡುವ ಮನುಜ ಕೊನೆಗೆ ಕುರಿಯಂತೆ
ಬಿಟ್ಟಿ ಬಯಸುವ ನರನು ಬಲು ಮೋಸವಂತೆ ೧

ಸುಳ್ಳು ಹೇಳುವ ನರಗೆ ಪರದಾಟವಂತೆ
ಜಳ್ಳುರಾಶಿಯ ನೋಡೆ ದೊಡ್ಡಗಿರಿಯಂತೆ
ಕಳ್ಳ ಒಳಗಿರಲಲ್ಲಿ ಶಾಂತಿಯಿಲ್ಲಂತೆ
ಕುಳ್ಳ ಹೋರಾಡಿದರೆ ಜಯವಿಲ್ಲವಂತೆ ೨

ಭಾರಿ ಮಳೆ ಸುರಿಯಲಿರೆ ಬಹಳ ಬಿಸಿಲಂತೆ
ಊರು ಸೇರುವ ಮುನ್ನ ಬಹಳ ದಣಿಯಂತೆ
ಕೀರುತಿಯ ಪಡೆಯುವಗೆ ಬಹು ಶತ್ರುವಂತೆ
ಮೂರು ಜ್ಞಾನಿಗಳಿರಲು ಭಾರಿ ಸಭೆಯಂತೆ ೩

ಮುಳ್ಳಿರುವ ಗಿಡಗಳಲಿ ಬಹು ಪುಷ್ಪವಂತೆ
ಹಳ್ಳದಲಿ ಸಿಗುವ ಜಲ ಬಹಳ ರುಚಿಯಂತೆ
ಹಳ್ಳಿಗಾರನ ಸತ್ಯ ಬಹಳ ಒರಟಂತೆ
ಎಳ್ಳು ಕಾಳುಗಳು ಶನಿಯ ಓಡಿಸುವುದಂತೆ ೪

ಮುಟ್ಟಲಾಗದ ನಾಯಿ ದಾಸಾನುದಾಸ
ಶ್ರೇಷ್ಠರೆಂದರಿತಿರುವರೆಲ್ಲ ಬಲು ಮೋಸ

ಧಟ್ಟನೆ ಹೊಳೆಯುವಗೆ ಬಲು ಮನವಿಕಾಸ
ಬಿಟ್ಟಿರುವ ಮನುಜನಿಗೆ ಜಗದಿ ಸುಖವಾಸ ೫

ಮುದಿತನವು ಭೂಷಣವು ಸ್ಥಾನವಿರುವವರಿಗೆ
ಕುದಿಯುವುದೆ ಭೂಷಣವು ಕ್ಷೀರಜಲದಲ್ಲಿ
ಹೆದರುವುದೆ ಭೂಷಣವು ದುಷ್ಟಸಂಗದಲಿ
ಗದಗದವೆ ಭೂಷಣವು ಭಕ್ತಿರಸದಲ್ಲಿ ೬

ತನ್ನ ತಾ ಶೋಧಿಸಲು ಬಲು ದುಃಖವಂತೆ
ಅನ್ಯರನು ಶೋಧಿಸಲು ಸಂತೋಷವಂತೆ
ಕನ್ನಡಿಯ ನೋಡದಿರೆ ಬಲು ಚೆಲುವನಂತೆ
ಕನ್ನಡಿಯ ನೋಡಿದರೆ ತಾನಳುವನಂತೆ ೭

ಬಚ್ಚಲಿಲ್ಲದ ನಗರ ಸುಂದರಲ್ಲಂತೆ
ಬಚ್ಚಿಟ್ಟ ಧನವು ತಾ ಕದ್ದವನಿಗಂತೆ
ಸ್ವಚ್ಛ ಬಡತನದವಗೆ ಬಲು ಭಕುತಿಯಂತೆ
ಬಿಚ್ಚೋಲೆ ಗಿರಿಜೆಗತಿ ಪ್ರಿಯವಸ್ತುವಂತೆ ೮

ಗುಂಡು ಬ್ರಾಹ್ಮಣ ಬರಲು ಅಪಶಕುನವಂತೆ
ಹೆಂಡದಾ ಪೀಪಾಯಿ ಬಲು ಶಕುನವಂತೆ
ಮಂಡೆ ಬೋಳಿರುವವಳು ಬರಬಾರದಂತೆ
ತೊಂಡು ಸೂಳೆಯು ಬರಲು ಬಹಳ ಶಕುನವಂತೆ ೯

ಖ್ಯಾತಿ ಬಾರದು ನರಗೆ ಬದುಕಿರುವ ತನಕ
ಗೋತ ಹೊಡೆದವನು ಬಲು ಗುಣಶಾಲಿಯಂತೆ
ನೀತಿ ಹೇಳುವ ಸ್ಥಳದಲೊಬ್ಬರಿಲ್ಲಂತೆ
ಕೋತಿ ಕುಣಿಯುತಿರಲು ನೂರು ಜನರಂತೆ ೧೦

ಬಹು ಧನಿಕ ಬಲು ಬಲಗೆ ಮಕ್ಕಳಿಲ್ಲಂತೆ
ದಹಿಸುತಿಹ ದಾರಿದ್ರಗೆ ವರ್ಷಕೊಂದಂತೆ
ಕಹಿಯಾದ ಕಾಫಿಯದು ಅಮೃತ ಸಮವಂತೆ
ಸಿಹಿಯಾದ ಕ್ಷೀರ ಮಕ್ಕಳಿಗೆ ಬೇಡಂತೆ ೧೧

ಸಾಲಿಗ್ರಾಮ ತೊಳೆಯಲತಿ ಬೇಸರಂತೆ
ಸಾಲು ಎಮ್ಮೆಯ ತೊಳೆಯಲಿ ಉತ್ಸಾಹವಂತೆ
ಶೀಲವಾಡುವ ನುಡಿಗೆ ಸಂದೇಹವಂತೆ
ಗಾಳಿ ಸುದ್ದಿಗಳೆಲ್ಲ ಬಲು ಸತ್ಯವಂತೆ ೧೨

ಒಳಿತವನು ಜಗದಲ್ಲಿ ತಲೆ ಎತ್ತನಂತೆ
ಕಲಿಪುರುಷನಂಥವನು ಬಲು ಮೇಲೆಯಂತೆ
ಹುಲಿ ಚಿರತೆ ಕರಡಿಗಳ ಬಲಿಯ ಕೊಡರಂತೆ
ಗೆಳತಿ ಮಾರಿಗೆ ಕುರಿಯ ಬಲಿಯೆ ಬೇಕಂತೆ ೧೩

ಅತಿ ಚೆಲುವೆ ಸತಿಯಲ್ಲಿ ಹಿತವಿಲ್ಲವಂತೆ
ಗತಿಗೆಟ್ಟ ನಾರಿಯಲಿ ಅತಿ ಮೋಹವಂತೆ
ಇತರ ಜನರೇಳಿಗೆಗೆ ಹೊಟ್ಟೆಯುರಿಯಂತೆ
ಪ್ರತಿಕ್ಷಣವು ತನಗಾಗಿ ಹಂಬಲಕೆಯಂತೆ ೧೪

ಭೂಮಿ ಎಲ್ಲವು ಇನ್ನು ಉಳುವಾತಗಂತೆ
ಭೂಮಿಯೊಡೆಯಗೆ ದೊಡ್ಡನಾಮ ಬಿತ್ತಂತೆ
ರಾಮರಾಜ್ಯದಿ ಕಾರು ಓಡಿಸುವವಗಂತೆ
ಆ ಮದುವೆ ಕನ್ಯೆಯು ಪುರೋಹಿತಗಂತೆ ೧೫

ಬಕಳಿಸುವ ನಾಯಕರೆ ಸರಕಾರವಂತೆ
ಪ್ರಕೃತಿ ನಡೆನುಡಿ ನೀತಿಗೆ ಧಿಕ್ಕಾರವಂತೆ

ಸುಖದ ಅನುಭವ ಜನಕೆ ಕುದುರೆ ಕೊಂಬಂತೆ
ಮುಖವಿಲ್ಲ ಕಣ್ಣಿಲ್ಲ ಸುಖರಾಜ್ಯವಂತೆ ೧೬

ಚಂದ್ರಲೋಕಕೆ ಪಯಣ ಕಾದಿರುವುದಂತೆ
ಮುಂದಲ್ಲಿ ನೆಲಕೆ ಬಲು ಕಟ್ಟು ನಿಟ್ಟಂತೆ
ಮುಂದರಿದ ಜನಕಲ್ಲಿ ಸ್ಥಾನವಿಹುದಂತೆ
ಹಿಂದುಳಿದ ಗುಂಪಿಗವಕಾಶವಿಲ್ಲಂತೆ ೧೭

ಪುಷ್ಪಾಕ್ಷತೆಯ ಪೂಜೆ ಗೋಮಾತೆಗಂತೆ
ಶುಷ್ಕ ತೃಣವನಕೆಲ್ಲ ಮಳೆಗಳ ಕಂತೆ
ನಿಷ್ಫಲದ ಗಿಡಬಳ್ಳಿ ತೋಟದಲ್ಲಂತೆ
ಪುಷ್ಕಳದ ಫಲ ವೃಕ್ಷಗಳು ಸೌದೆಗಂತೆ ೧೮

ಬರಿಯ ಪಾತ್ರೆಗಳಲಿ ಬಹಳ ಸದ್ದಂತೆ
ಅರಿಯುವಜ್ಞಾನಿಗಳು ತಲೆಹರಟೆಯಂತೆ
ಅರಿತವನು ನುರಿತನಾದರು ಬೇಡವಂತೆ
ಬದಿಯ ಬಹು ದಡ್ಡನಿಗೆ ಮಾರ್ಯಾದೆಯಂತೆ ೧೯

ಜೈಲುವಾಸವೆ ಯೋಗ್ಯತೆಯ ಚಿನ್ಹೆಯಂತೆ
ರೈಲು ಉರುಳಿಸೆ ರಾಜ್ಯಕಧಿಕಾರಿಯಂತೆ
ಥೈಲಿಯಿದ್ದರೆ ಖೂನಿ ಮಾಡಬಹುದಂತೆ
ಶೈಲವೇರುವ ನರನು ಮೇಧಾವಿಯಂತೆ ೨೦

ನರಬಲಿಯ ಕೊಡುವವರು ಹಿರಿಯ ಜನರಂತೆ
ಹಿರಿಯ ಮಾರ್ಗದ ಜನರು ಧರೆ ಭಾರವಂತೆ
ಗುರುಗಳಿಗೆ ತಿರುಮಂತ್ರ ಹೇಳಬೇಕಂತೆ
ಸುರಿಸುವರು ಧನಧಾನ್ಯ ಸುರಿಮಳೆಗಳಂತೆ ೨೧

ಮಂತ್ರವಾದಿಯು ನೋಡಿ ಗ್ರಹಭಯವಿದೆಂದ
ಯಂತ್ರದಲಿ ನೋಡಿದವ ಹೃದಯರೋಗೆಂದ
ಚಿಂತಿಸುತ ಪಂಡಿತನು ಮೋಹಿನಿಯಿದೆಂದ
ಅಂತ್ಯದಲಿ ರೋಗಿ ತನಗೊಂದಿಲ್ಲವೆಂದ ೨೨

ಶಿಂಗಪ್ಪ ಕದ್ದು ತಾ ಜೈಲು ಸೇರಿದನು
ಕಾಂಗ್ರಪ್ಪ ಜೈಲಿನಿಂದ ಬಂದು ಕುಳತಿಹನು
ಹೇಂಗ್ರಪ್ಪ ಬದುಕುವುದು ಎಂದು ಫಲವೇನು
ನುಂಗ್ರಪ್ಪ ಸುಖ ದು:ಖಗಳನು ಸಹಿಸುತಲಿ ೨೩

ವೇದಾಂತಿಯಾಗೆನಲು ಹೊಟ್ಟೆಗಿಲ್ಲಂತೆ
ಕಾದಾಡಿ ಬದುಕಲನುಭವವಿಲ್ಲವಂತೆ
ಓದು ಬದುಕೆಂದರವಕಾಶವಿಲ್ಲಂತೆ
ಆದುದಾಯಿತು ಹರಿಗೆ ಶರಣು ಹೊಡಿ ತಮ್ಮ ೨೪

ಯಮನು ತಲ್ಲಣಿಸುವನು ಸ್ಥಳವಿಲ್ಲವಂತೆ
ಸುಮನಸರು ಆಳುತಿಹರು ಜನವಿಲ್ಲವಂತೆ
ಕಮಲೆರಮಣಗೆ ಬಂತು ಪೀಕ್ಲಾಟವಂತೆ
ಎಮಗೆಂಥ ಕಷ್ಟವು ಪ್ರಸನ್ನ ಹರಿಯಿರಲು ೨೫

೨೮೭

ಆಕಳ ಕಾಯುವ ಗೊಲ್ಲನ ಪರಿಯಲಿ
ತಾ ಕೋಲನು ಪಿಡಿಯನು ಹರಿಯು ಪ

ಸಾಕಲು ಬಯಸುವ ಜನರಿಗೆ ದೇವನು
ತಾ ಕರುಣಿಸುವನು ಸನ್ಮತಿಯ ಅ.ಪ

ಸಂಸಾರದ ಸಾಗರವನು ದಾಟಲು
ಹಿಂಸೆಗಳೆಲ್ಲವ ಸಹಿಸುವರ
ಸಂಶಯ ಭ್ರಾಂತಿಯ ತೊಲಗಿಸಿ ಪೊರೆಯಲು
ಕಂಸಾರಿಯು ತಾ ಕೊಡುವ ವಿವೇಕವ ೧

ನೀರಿನ ಮೇಲಿನ ಗುಳ್ಳೆಗಳಂದದಿ
ನೂರು ವಿಧದ ಭವ ಭೋಗಗಳು
ಯಾರಲಿ ಕರಣವ ತೋರ ಬಯಸುವನೊ
ದೂರ ಮಾಡುವನು ಧನಕನಕಗಳ ೨

ಶಾಂತಿಯೇ ಸೌಖ್ಯಕೆ ಕಾಣವೆಂಬುವ
ಅಂತರಂಗವನು ಗಮನಿಸಿರಿ
ಶಾಂತಿಗೆ ಸಾಧನ ಜ್ಞಾನವ ಪಡೆಯಲು
ಸಂತತ ಸನ್ಮತಿ ಕೊಡಲಿ ಪ್ರಸನ್ನನು ೩

೨೮೮

ಆಪ್ತರಾರೆಂಬುದನು ಆಲೋಚನೆಯ ಮಾಡೆ
ಆಪ್ತರೊಬ್ಬರ ಕಾಣೆ ನೀನಲ್ಲದೆ ಪ

ಆಪ್ತರನ್ಯರ ನಂಬಿ ತಪ್ತ ಜೀವನನಾದೆ
ತೃಪ್ತಿಯ ಬೇಡುವೆ ನಿತ್ಯತೃಪ್ತ ನಿನ್ನನು ದೇವ ಅ.ಪ

ಕೋಳಿಕೂಗದೆ ಬೆಳಕು ಬಾರದೆನ್ನುವ ನುಡಿಯ
ಕೇಳಿ ತಲೆದೂಗಿದೆನು ಮೂಢತನದಿ
ಪೇಳಿದುದು ಮಾಡಿದೆನು ತಾಳಿದೆನು ಮರ್ಮನುಡಿ
ಪೇಳಲೇನುಪಯೋಗ ಶ್ರೀಲಲಾಮ ಸುಧಾಮ ೧

ಒಟ್ಟಿ ಕಿಚ್ಚನು ಹುಲ್ಲುಮೆದೆಗೆ ಅರಳಾರಿಸುವ
ದಿಟ್ಟ ಜನರಾಪ್ತರಾಗುವರೆ ಜಗದಿ
ಇಷ್ಟರಂದದಿ ಹೊರಗೆ ಕೆಟ್ಟ ಯೋಚನೆಯೊಳಗೆ
ಸುಟ್ಟ ಬೆರಳಿಗೆ ಸುಣ್ಣವಿಡುವರೊಬ್ಬರ ಕಾಣೆ ೨

ಕೂತ ಕೊಂಬೆಯ ಬುಡವ ತಾ ತರಿವ ಮೇಧಾವಿ
ಮಾತು ಕೇಳುವ ಜನಗಳಾಪ್ತರಾಗುವರೆ
ಪ್ರೀತ ನೀನಾಗೊ ಅನಿಮಿತ್ತಬಾಂಧವ ನಿನ್ನ
ದೂತ ದೂತರ ದೂತನಾಗುವೆ ಪ್ರಸನ್ನ ೩

೨೮೯

ಎದ್ದರಾಳಲ್ಲೆಂದು ಬಿದ್ದಿರುವೆನೊ ನಾನು
ಮಧ್ವರಮಣನೆ ದಯದಿ ಉದ್ಧರಿಸೆಲೊ ಪ

ಏನು ಮಾಡಿದರೇನು ಮಾಡದಿದ್ದರೆ ಏನು
ಕಾಣಲಾರೆನೊ ನೀನೆ ತಿಳಿಸಿ ಪೊರೆಯೊ
ಕಾನನದಿ ತಿರುತಿರುಗಿ ತೊಳಲಿ ಬಳಲುತಲಿ ಬಲು
ದೀನನಾದೆನೊ ಶಕುತಿಯುಕುತಿ ಹೋಗಿ ೧

ನುಡಿದೆ ನಾ ನೂರೆಂಟು ಅಡಿಯಿಡಲು ಬಲು ಕುಂಟು
ಕಡೆಗಾಲದರಿವಾಗಿ ಬಳಲುತಿಹೆನೊ
ಸಡಲಿತೆನ್ನಯ ದೇಹ ಸಿಡಿಯಿತೆನ್ನಯ ಮೋಹ
ನಡೆಯಾಟವೆನಗಿನ್ನು ಸಾಧ್ಯವಿಲ್ಲವು ದೇವ ೨

ಕೊಟ್ಟರೆ ಹೊಗಳುವರು ಕೊಡದಿರಲು ಬೊಗಳುವರು
ಕೊಟ್ಟೆನ್ನ ಕರವೆರಡು ಬೆಂಡಾದವೊ
ಸುಟ್ಟಿತೆನ್ನಯ ಕೋಪ ನಿಷ್ಠುರದಿ ಬೇಸತ್ತು
ಇಷ್ಟು ಜೀವನ ಸಾಕೊ ಕೃಷ್ಣ ಮೂರುತಿಯೇ ೩

ಗುಣವಿಲ್ಲ ಧನವಿಲ್ಲ ತನುವಿಲ್ಲ ಮನವಿಲ್ಲ
ಹೊಣೆ ಹೊರೆವುದೆಂತೆಂದು ಕೈ ಬಿಡದಿರೊ
ತೃಣ ಗಿರಿಯನೊಡೆಯುವುದು ಒನಕೆ ತಾ ಚಿಗುರುವುದು
ವನಜನಾಭನೆ ನಿನ್ನ ಮನಕೆ ಬರಲು ೪

ನಾನೇನು ಬಲ್ಲೆ ನಿನಗೇನು ರುಚಿಯೆಂಬುದನು
ನಾನರಿತರೂ ನಿನಗೆ ಕೊಡಬಲ್ಲನೆ
ನಾನೇಕೆ ಜನಿಸಿದೆನೋ ನೀ ಬಲ್ಲೆ ನಾನರಿಯೆ
ಏನೆಂದು ಕೋರದಲೆ ಪೊರೆಯಬೇಕೊ ೫

ಸಾಯುವರ ನೋಡಿ ಮನ ನೋಯುವುದು ಮೂರುಕ್ಷಣ
ಮಾಯಾಪಾಶವು ಮುಸುರೆ ಮರೆವುದೆಲ್ಲ
ಪ್ರಾಯದವನಂತೆ ಬಲು ಹೇಯ ಕೃತ್ಯಗಳಾಸೆ
ನಾಯಿಬಾಲದ ಡೊಂಕು ತಿದ್ದಿ ಪೊರೆಯೊ ೬

ನಂಬಿದವರೆಲ್ಲ ಬಲು ಸಂಭ್ರಮದಲಿರುವರೊ
ಅಂಬಿಗನ ತೆರನಾದೆ ನದಿ ದಾಟಿಸಿ
ತುಂಬಿರುವ ಮನದಾಸೆ ಹಂಬಲಿಕೆ ನೀಡಿ ತಿರಿ
ದುಂಬುವನ ಕನಸಿನಂತಾದವೆನಗೆ ೭

ಹಿಂದೆ ನಾ ತರಲಿಲ್ಲ ಇಂದು ನಾನಿಟ್ಟಿಲ್ಲ
ಮುಂದೆ ಎನಗೇನು ಬೇಕೆಂದರಿಯೆನೊ
ಹಿಂದಾದುದಂತಿರಲಿ ಇಂದಿರುವದಿರಲಿ ಮನ
ಮಂದಿರದ ದಾನವರ್ಪಿಸುವೆ ನಿನಗೆ ೮

ಮನೆಗೆ ತಾ ಯಜಮಾನ ಕೆಣಕೆ ಬದುಕುವರುಂಟೆ
ಕುಣಿಯುತಿದ್ದರು ಜನರು ನುಡಿದ ತೆರದಿ
ತನುಸಡಲಿ ಬೀಳಲದ ಕೊನೆಗಾಲವೆಂದರಿತು
ಮನೆ ಹೊರಗೆ ಕಸದಂತೆ ಬಿಸುಡುವುದ ನೋಡಿ ೯

ತುಂಬು ಸಂಸಾರದಲಿ ಸಂಭ್ರಮವನೇಕಗಳು
ಸಂಭ್ರಮದಿ ನಿನ್ನ ಹಂಬಲವೇತಕೆ
ಕಂಬ ಸಡಲಿದ ಮನೆಯ ತೆರದಿ ದೇಹವು ಸಡಲೆ
ಡೊಂಬನಾಟವನಾಡಿ ಚಂಬು ಪಿಡಿದಂತೆ ೧೦

ಕೆಲಸವಿರುವಾಗ ಬಲು ಹೊಲಸು ನಿದ್ರೆಯ ಮಾಡಿ
ಹೊಲಸು ವಿಷಯದಿ ಬಹಳ ಎಚ್ಚೆತ್ತೆನೊ
ಕಲಿಯು ಕರೆದೌತಣವನಿತ್ತೆ ನಾ ಬಹುವಿಧದಿ
ಬಲಿಕೊಡುವ ಕುರಿಯಂತೆ ಬಳಲುತಿರುವೆನೊ ದೇವ ೧೧

ಮರೆವು ಜನತೆಗೆ ದೊಡ್ಡವರವೆಂದು ನೀ ಕೊಟ್ಟೆ
ಗಿರಿಯಂಥ ಕಷ್ಟಗಳ ಮರೆಯಲಾಯ್ತೊ
ಅರಿವು ಕೊಡದಂತೆ ನಾ ಮರೆತೆನೆಂಬಪರಾಧ
ಸರಿತೂಗುವುದೆ ಇದಕೆ ಗುರಿ ಯಾರೊ ದೇವ ೧೨

ಸಾಧು ಜನರಿರುವರೊ ಮೇಧಾವಿಗಳು ಇಹರೊ
ಮಾದರಿಯ ಜೀವನವ ತೋರ್ಪರಿಹರೊ
ಸಾಧುವಲ್ಲವೊ ನಾನು ಮೇಧಾವಿಯಲ್ಲ ಹೊಸ
ಮಾದರಿಯ ತಿರುಕನೆಂದರಿತು ಪೊರೆಯೊ ೧೩

ಅರೆಕ್ಷಣವು ನಿನ್ನನು ಸ್ಮರಿಸಲಾರದ ಜನರು
ಅರಮನೆಗಳಲ್ಲಿ ವಾಸಿಸುವುದೇಕೊ
ಕರಚರಣವಿಲ್ಲದ ಕಪೋತಿಕ ನಿನ್ನಯ ನಾಮ
ಕಿರಿಚುತಿರುವುದ ನೋಡಿ ಹರುಷವದೇಕೊ ೧೪

ಗಿಣಿಯಂತೆ ರಾಮ ರಾಮ ಎಂದರೇನು ಫಲ
ಫಣಿಯಂತೆ ಸಾಷ್ಟಾಂಗ ನಮಿಸಲೇನು

ಝಣಿಯಂತೆ ಧನಿಕನಲ್ಲಿ ಹಲ್ಲುಗಳ ಕಿರಿದರೇನು
ಮನವಿಟ್ಟು ಕೆಲಸ ಮಾಡುವುದರಿಯದೆ ೧೫

ಮನಕೆ ಬಂದುದನೆಲ್ಲ ಮಾಡುವವರಿರುವರೊ
ಮನಕೆ ಶಾಂತಿಯ ಮಾಡುವವರ ಕಾಣೆ
ಕನಕವೆರಿಚಿದರಿಲ್ಲ ವನವ ಸೇರಿದರಿಲ್ಲ
ಮನಮಂದಿರದಲಿ ನೀ ಇಣಿಕಿನೋಡುವ ತನಕ ೧೬

ಲಂಚಗಳ ಕೊಟ್ಟು ಫಲಗಳ ಬೇಡುವವನಲ್ಲ
ಸಂಚುಮಾಡಲು ಶಕುತಿ ಯುಕುತಿಯಿಲ್ಲ
ವಂಚಕರ ಬಹುಮತ ಪ್ರಪಂಚದಲಿ ನೀನೊಬ್ಬ
ಹೊಂಚು ಕಾಯುತಲಿರುವ ಎಂಬುದರಿತು ೧೭

ರೈಲು ಬಂಡಿಗಳಲಿ ಐಲುಪೈಲುಗಳನ್ನು
ಮೌಲ್ಯವಿಲ್ಲದೆ ಸಾಗಿಸುವುದನರಿತು
ಕಾಲು ಕಣ್ಣಿಲ್ಲದ ಕಪೋತಿಯೊ ನಾನೊಂದು
ಮೂಲೆಯಲಿ ಕುಳಿತು ಬರಲವಕಾಶವೀಯೊ ೧೮

ನಿನ್ನ ಗುಣಗಳನರಿಯೆ ನಿನ್ನ ವರ್ಣಿಸಲರಿಯೆ
ನಿನ್ನ ಸೇರಲು ಎನಗುಪಾಯವಿಲ್ಲ
ಕನ್ನ ಕತ್ತರಿಯ ಕಾಣಿಕೆಯೊಂದೆ ಸಾಧ್ಯವೊ
ಇನ್ನು ತಲೆ ಎತ್ತಿನೊ ಪ್ರಸನ್ನನಾಗುವ ತನಕ ೧೯

೨೯೦

ಎಲ್ಲ ಭಯ ಎಲ್ಲ ಭಯ ಕ್ಷುಲ್ಲಕ ಜನಗಳಿಗೆಲ್ಲ ಭಯ ಪ

ತಲ್ಲಣಿಸದೆ ಸಿರಿವಲ್ಲಭನಲಿ ಮನ ನಿಲ್ಲಿಸುವರಿಗೆಲ್ಲ ಜಯ ಅ.ಪ

ಇರಲು ಭಯ ಧನವಿರಲು ಭಯ
ಇಲ್ಲದಿದ್ದರೆ ತಿರಿದುಂಬೊ ಭಯ
ನೆರೆ ಹೊರೆ ಜನಗಳ ಸಿರಿಯನು ನೋಡಲು
ಉರಿಯುವ ಜನಗಳಿಗೆಲ್ಲಿ ಜಯ ೧

ಎಲ್ಲ ಜಯ ಎಲ್ಲ ಜಯ
ಬಲ್ಲ ಸುಜನಗಳಿಗೆಲ್ಲ ಜಯ
ಪೊಳ್ಳು ಜೀವನದ ಜಳ್ಳು ಸೌಖ್ಯಗಳ
ಒಲ್ಲೆನೆಂಬುವರಿಗೆಲ್ಲ ಜಯ ೨

ಇರುಳು ಭಯ ಹಗಲು ಭಯ
ಸರಳ ಜನರ ನೋಡುವುದೆ ಭಯ
ಮರಳು ಮೋಸವುಳ್ಳ ದುರುಳ ಜನಕೆ ತಮ್ಮ
ನೆರಳನು ಕಂಡರೆ ಅಧಿಕ ಭಯ ೩

ಜ್ಞಾನ ಜಯ ದಿವ್ಯ ಜ್ಞಾನ ಜಯ
ಜ್ಞಾನದಿಂದ ಹರಿಸ್ಥಾನ ಜಯ
ಹಾನಿಯ ನೀಡುವ ನಾನಾ ಭೋಗವ
ಮೌನದಿ ತ್ಯಜಿಪರಿಗೇನು ಭಯ ೪

ಒಂದು ಜಯ ನೂರು ಭಯ
ದ್ವಂದ್ವಗಳನು ಸಹಿಸದ ನರಗೆ
ತಂದೆ ಪ್ರಸನ್ನ ಶ್ರೀಕೃಷ್ಣನ ಚರಣ
ದ್ವಂದ್ವ ಸೇವಕರಿಗೆಂದೂ ಜಯ ೫

೨೯೧

ಎಲ್ಲರ ಮನೆ ದೋಸೆ ತೂತು ಪ

ಚಿಲ್ಲರೆಯಲ್ಲವಿದೀ ಮಾತು ಅ.ಪ

ಗಾಜಿನ ಮನೆಯಲಿ ವಾಸಿಸುವ ಪರ
ಗೇಹಕೆ ಕಲ್ಲುಗಳೆಸೆಯುಬಹುದೇ
ಮೂರ್ಜಗನಿಂದಕ ತನ್ನಯ ನಾಶಕೆ
ಬೀಜ ಬಿತ್ತಿ ಫಲ ಭೋಜನ ಮಾಡುವ ೧

ನೀರ ಕ್ಷೀರ ನ್ಯಾಯವ ಕೇಳದ ಜನ
ರ್‍ಯಾರಿರುವರು ಈ ಧರೆಯೊಳಗೆ
ಬಾರಿಬಾರಿಗದ ಮನಕೆ ತಾರದೆಲೆ
ದೂರಿನ ನುಡಿಯಲಿ ರುಚಿಯು ಉಚಿತವೆ ೨

ಗೂಳಿಯು ಹಳ್ಳಕೆ ಬಿದ್ದ ಕಾಲದಲಿ
ಆಳಗೊಂದು ಕಲ್ಲೆಸೆಯುವರು
ಬಾಳಿಬಾಳಿಸುವ ನರನ ಪ್ರಸನ್ನನು
ಕಾಲಕಾಲದಲಿ ಸಲಹದೇ ಇರುವನೆ ೩

೨೯೨

ಏನು ಮಾಡಿದರೇನು ಫಲವೊ ಪ

ನೀನು ಮಾನಸ ವೃತ್ತಿ ತಿದ್ದುವತನಕ ಅ.ಪ

ಪೂಜೆ ಮಾಡಿದರೇನು ತೇಜಸ್ವಿ ಇರಲೇನು
ರಾಜಧಿರಾಜ ಸಂಪೂಜ್ಯನೆನಿಸಲೇನು

ರಾಜತಾಸನದಲ್ಲಿ ಕುಳಿತರೂ ರಾಜಿಸದ ಮಾನಸದ ವೃತ್ತಿಯು
ಈ ಜಗದ ಜೀವನವು ಕುದುರೆಯ
ಜೂಜಿನಲಿ ಪಣ ಕಟ್ಟಿದಂತಿದೆ ೧

ಭಾರಿ ಪಲ್ಲಕ್ಕಿಯ ಏರಿದ ಅನುಭವ
ನೂರು ಜನರು ಸ್ತುತಿ ಕೇಳಿದ ಅನುಭವ
ಕೀರುತಿಯ ಪರಮಾವಧಿಯನು ಸೇರಿದೆನು ನಾನಿನ್ನ ಕರುಣದಿ
ಭಾರಿ ಗಾಳಿಗೆ ತೆರಗೆಲೆಯು ತಾ
ತೂರುವಂದದಿ ತೂರುತಿಹುದೊ ೨

ವರಗಳ ಕೊಟ್ಟಾಯ್ತು ಹಿರಿಯನೆಂದೆನಿಸ್ಯಾಯ್ತು
ಅರಿತು ಶಾಸ್ತ್ರಾರ್ಥವ ಗುರುತನ ಪಡೆದಾಯ್ತು
ಧರೆತಲದ ವೈಭವಗಳಲಿ ಅತಿ ಅರುಚಿ
ಮನದಲಿ ತೋರುತಿಹುದೋ
ಕರದಲಿರುವ ಪ್ರಸನ್ನನೇ ಹೃತ್ಸರಸಿಜದಿ ನೆಲಿಸೆಲೊ ನಿರಂತರ ೩

೨೯೩

ಕನಸಿನ ಜೀವನ ಕಳವಳವೇತಕೆ ಪ

ಕ್ಷಣಿಕದ ಭಾಗ್ಯಕೆ ಪರದಾಟವೇತಕೆ ಅ.ಪ

ಮರೆತು ದುರ್ದಿಶೆಯನು ಅರೆಗಣ್ಣಿನಲಿ
ದೊರೆಯು ನಾನೆ ಎಂದು ಹರುಷದ ಮಾನಸ
ತೆರೆಯಲಿ ಭಾಗ್ಯವ ಅನುಭವಿಸುತಲಿರೆ
ಹರಕು ಮನೆಯೇ ನಿನ್ನರಮನೆಯಾಗಿದೆ ೧

ಇಲ್ಲವೆಂದೇತಕೆ ಹಲ್ಲನು ಕಡಿಯುವಿ
ಬಲ್ಲ ಮಾನವನಿಗೆ ಹಲ್ಲೇ ಆಯುಧ
ಮುಳ್ಳಿನ ಹಾಸಿಗೆ ಮಲಗಲು ಸೌಖ್ಯವೆ
ತಳ್ಳಿ ನಿಲ್ಲುವಗೆ ಇಲ್ಲೇ ವೈಕುಂಠ ೨

ರಕ್ತದ ಕೋಡಿಯು ಹರಿಯುತಲಿರುವುದು
ಮೃತ್ಯದೇವತೆ ಸದಾ ಕುಣಿಯುತಲಿರುವಳು
ಮರ್ತ್ಯರ ಭಾಗ್ಯವು ಹತ್ತೇ ನಿಮಿಷವು
ಇದ್ದರೇನು ಸುಖ ಇಲ್ಲದೇನು ಭಯ ೩

ಮನದಲಿ ರಾಜ್ಯವ ಕಟ್ಟಬೇಕಣ್ಣ
ಅನುಭವದರಮನೆ ಶೃಂಗರಿಸಣ್ಣ
ಪ್ರಣತ ಪ್ರಸನ್ನನ ಆಲಯ ಮುಟ್ಟಲು
ಅಣುಬಾಂಬ್ಗಳಿಗೂ ಶಕುತಿಯಿಲ್ಲಣ್ಣ ೪

೨೯೪

ಕೆರೆಯನು ದಾಟಲು ಅರಿಯದ ಜನ ಭವ
ಶರಧಿಯ ದಾಟುವರೇ ಶ್ರೀ ನರಹರೆ ಪ

ಹರುಷದಿಂದ ನೀ ಕರವ ಪಿಡಿಯದಿರೆ
ತೊರೆಯ ಸೇರಲಳವೆ ಈ ಧರೆಯೊಳು ಅ.ಪ

ಹಲವು ಜನ್ಮಗಳಲಿ ಗಳಿಸಿದ ಅಘಗಳ
ಅಲೆಗಳೊಳಗೆ ಸಿಲುಕಿ ಸಂತತ
ಮುಳುಗಿ ಮುಳುಗುತ ಕಟುಜಲಗಳ ಕುಡಿಯುತ
ನಳಿನನಾಭ ನಿನ್ನೊಲುಮೆಯಿಂದಲ್ಲದೆ ೧

ಕಾಮ ಕ್ರೋಧ ಮದ ಲೋಭ ಮೋಹ
ಮತ್ಸರಗಳೆಂಬ ವಿವಿಧ ಜಲಚರ
ತಾಮಸ ನಕ್ರ ತಿಮಿಂಗಿಲವಿರಲಾಗಿ
ಕಾಮಜನಕ ನಿನ್ನ ಪ್ರೇಮವ ಪೊಂದದೆ ೨

ಚೂರ್ಣಗಳಾದುವು ವಿವಿಧ ನಾವೆಗಳೀ
ಅರ್ಣವದಲಿ ಸಿಲುಕಿ ಸುಲಭದಿ
ಪೂರ್ಣ ಪ್ರಮತಿಗಳ ಮತವನರಿತು ಇನ್ನ
ಪೂರ್ಣ ಪ್ರಸನ್ನತೆ ನಾವೆಯಿಂದಲ್ಲವೆ ೩

೨೯೫

ಜಲಜನಾಭನ ಪೂಜೆ ಅತಿ ಸುಲಭವು ಪ

ಚಲಿಸಿದ ಮನವನ್ನು ಪೊಂದಿರುವ ಸುಜನರಿಗೆ ಅ.ಪ

ತಾಳ ಕೇಳುವನಲ್ಲ ಮೇಳ ಕೇಳುವನಲ್ಲ
ಬಾಳೆ ಮಾವುಗಳ ವೈಭವವ ಕೇಳುವನಲ್ಲ
ಸೂಳೆಯಂದದಿ ಬಹಳ ನಟನೆಗಳು ಬೇಕಿಲ್ಲ
ಬಾಲಕೃಷ್ಣನಲಿ ದೃಢಭಕುತಿಯುಳ್ಳವಗೆ ೧

ನವರತ್ನ ಮಂಟಪದ ಝುವೆಯ ಬಯಸುವನಲ್ಲ
ಹವಳಗಳ ಸರದ ವೈಭವವು ಬೇಕಿಲ್ಲ
ಧವಳ ಮುಕ್ತಾಹಾರಗಳ ಬಯಸುವನಲ್ಲ
ಭುವನ ಭೂಷಣನೊಳತಿ ಭಕುತಿಯುಳ್ಳವಗೆ ೨

ಹೊನ್ನಿನಾಭರಣಗಳನ್ನು ಬಯಸನು ವಿವಿಧ
ಅನ್ನಗಳ ರುಚಿಗೆ ಲೋಭವ ಪೊಂದನು
ಅನ್ನಾದಿಮಯ ಹರಿಯು ತನ್ನಲ್ಲಿ ತುಳಸೀದಳ
ವನ್ನು ಭಕುತಿಯೊಳಿಡೆ ಪ್ರಸನ್ನನಾಗುವನು ೩

೨೯೬

ತಗಲಿ ತಗಲದೆ ಈ ಜಗದೊಳು ಜೀವಿಸೊ
ಕಮಲ ಪತ್ರದಲ್ಲಿಹ ಜಲದ ಕಣಗಳಂತೆ ಪ

ತಗಲುತ ನಿರತ ಸುಖವನೀವ ಕರ್ಮಕ್ಕೆ
ತಗಲದೆ ಭವದಲಿ ಬಿಗಿವ ವಿಷಯಗಳಿಗೆ ಅ.ಪ

ಪರಿಪರಿ ಕ್ಷಣಿಕ ಸುಖದ ಮೋಹದೊಳತಿ
ದುರಿತಗಳಿಗೆಳೆವ ದುರುಳರ ಅಗಲೆಲೋ
ಹರಿದಾಸರ ಸಹವಾಸಕ್ಕೆ ತಗಲುತ್ತ
ಹರಿಗುಣ ಪೊಗಳುವ ಪರಮ ಸುಖವ ಬಯಸೊ ೧

ಸತಿ ಸುತರೆಲ್ಲ ಶ್ರೀಪತಿಯ ಸೇವೆಯೊಳತಿ
ಹಿತ ತೋರಲು ಅವರೊಳಾಮತಿಯನು ತಗಲಿಸೊ
ಕ್ಷಿತಿಯೊಳವರು ನಿನ್ನ ಭೋಗವಸ್ತುಗಳೆಂದು
ಮಿತಿ ಮೀರಿರುವ ಮಮತೆಗೆ ತಗಲದಿರೊ ೨

ದುರ್ಮಾರ್ಗದೊಳು ದುಷ್ಟಕರ್ಮಗಳನೆ ಮಾಡಿ
ಹೆಮ್ಮೆಯಿಂದಲಿ ಪಾಪ ಫಲಗಳ ಬಯಸದೆ
ಧರ್ಮಾದಿ ಸುಖಗಳನನುಭವಿಸುವುದಕೆ
ಸಮ್ಮತಿ ಈ ಯುವ ನಮ್ಮ ಪ್ರಸನ್ನನು ೩

೨೯೭

ತ್ಯಜಿಸದಲೆ ಸಂಸಾರ ಭಜಿಸಬಹುದು ಪ

ಅಜಭವಾದಿಗಳೆಲ್ಲ ತ್ಯಜಿಸಿ ಭಜಿಸುವರೇ ಅ.ಪ

ಅರ್ಣವವ ಪೋಲುವ ಭವವನ್ನು ನೀಗಲು
ವರ್ಣಾಶ್ರಮಗಳ ಧರ್ಮಗಳನರಿತು
ಪೂರ್ಣ ಸುಖಜ್ಞಾನ ಪೊಂದಿದ ಹರಿಯ ಗುಣಗಳನು
ನಿರ್ಣಯದ ಭಕುತಿಯಲಿ ವರ್ಣಿಸುವ ನರನು ೧

ಜನ್ಮವನು ಕಳೆವುದಕೆ ತೀರ್ಮಾನ ಮಾಡಿ ದು
ಷ್ಕರ್ಮಗಳ ತ್ಯಜಿಸಿ ಸತ್ಕರ್ಮಗಳನು
ಮರ್ಮವರಿಯುತ ರಚಿಸಿ ಹೆಮ್ಮೆಯಿಂದಲಿ ತನ್ನ
ಧರ್ಮದಲಿ ಸತಿಸುತರ ಭೋಗ ಉಣುವವರು ೨

ಅನ್ಯಾಯಗಳ ಬಿಟ್ಟು ಮಾನ್ಯರೆಂದೆನಿಸುತಲಿ
ಘನ್ನ ಮಹಿಮನ ಸೇವೆಯೆಂದರಿಯುತ
ಕನ್ಯಾದಿ ದಾನಗಳ ಮಾಡುತಲಿ ಮುದದಿಂದ
ಚೆನ್ನಾಗಿ ಹರಿಯ ಪ್ರಸನ್ನತೆಯ ಪಡೆಯುವರು ೩

೨೯೮

ದಯಕಿಂತ ಗುಣವಿಲ್ಲ ನರಗೆ
ದಯಕೆ ನಿರ್ಬಂಧವಿಲ್ಲಣ್ಣ ಜಗದಿ ಪ

ಹೃದಯ ಮಂದಿರದಲಿ ನೆಲೆಸಿಹ ದಯೆಯು
ಮೃದು ಮಳೆಹನಿ ತೆರದಲಿ ಸುರಿಯುವುದು ಅ.ಪ

ಬಾರಿಯ ಸ್ಥಾನಕೆ ಈ ದಯೆ ಗುಣವು
ಭಾರಿಯ ಶಕುತಿಯ ನೀಡುವುದು
ಚಾರು ಕಿರೀಟವ ಮೀರಿದ ಕಾಂತಿಯ
ಬೀರುವುದೀ ದಯೆ ನರಪತಿಗೆ ೧

ರಾಜನ ದಂಡವ ನೋಡುತ ನೋಡುತ
ಈ ಜಗವೆಲ್ಲವು ನಡುಗುವುದು
ರಾಜನ ಕಾರ್ಯಗಳೆಲ್ಲಕೆ ದೈವಿಕ
ತೇಜವ ಕೊಡುವುದು ದಯೆ ಗುಣವು ೨

ನಶ್ವರವೆಲ್ಲವು ಪ್ರಾಕೃತವು
ಈಶ್ವರ ಧರ್ಮವೆ ಈ ದಯೆಯು
ಶಾಶ್ವತ ಧರ್ಮಗಳೆಲ್ಲವು ದಯದಿ
ಮಿಶ್ರಿತವಾದರೆ ಸುಖಮಯವು ೩

ಪರಮ ಪುರುಷ ದಯೆ ತೋರದಿರೆ
ವರಗತಿ ಪಡೆಯಲು ನರಗಳವೆ
ಕರುಣೆ ಪ್ರಸನ್ನನ ಮೊರೆ ಹೋಗದೆ ನೀ
ಅರಿಯಲು ಸಾಧ್ಯವೆ ಕರುಣೆಯ ಬೆಲೆಯ ೪

೨೯೯

ನಾರಿಯರಲಿ ಮಾದರಿಯೆಂದೆನಿಸಿರಮ್ಮ
ಮೂರುಕುಲಕೆ ಕೀರುತಿಯನು ತನ್ನಿರಮ್ಮ
ಸೇರಿದ ಪತಿಮಂದಿರವನುದ್ಧರಿಸಿರಮ್ಮ
ಬೇರೆ ಜನಕೆ ಸೋದರಿಯೆಂದರಿಯಿರಮ್ಮ
ಅಬಲೆಯರಿರಬಹುದು ದೇಹ ಶಕುತಿಯಲಿ

ಪ್ರಬಲಸ್ಥಾನ ನಿಮಗಿಹುದು ಸಮಾಜದಲ್ಲಿ
ಶುಭಪರಂಪರೆಗಳ ಪತಿಗೆ ಕೋರಿರಮ್ಮ
ಲಭಿಸುವುದತಿಸುಲಭದಿ ಪರಲೋಕವಮ್ಮ
ಗೃಹಿಣಿಯೇ ಗೃಹವೆಂಬ ಮಾತನರಿಯಿರಮ್ಮ
ಗಹನದ ಸಂಸಾರಪಥವ ಜರಿಯಬೇಡಿರಿ

ವಹಿಸಿರಿ ಗೃಹಕೃತ್ಯಗಳನು ಆದರದಲ್ಲಿ
ಸಹಿಸಿರಿ ಸುಖದು:ಖಗಳನು ಖೇದವಿಲ್ಲದೆ
ಶ್ರದ್ಧೆಯಿರಲಿ ಗೃಹಿಣಿಯ ಕಾರ್ಯದಲಿ ಸರ್ವದ
ಸ್ಪರ್ಧೆಯ ಮಾಡಬೇಡಿ ಪುರುಷಗುಚಿತ ಕಾರ್ಯದಿ
ತಿದ್ದಿರಮ್ಮ ವಿನಯದಿಂದ ಪತಿಯ ದೋಷವ
ಹದ್ದಿನಂತೆ ಕಾಯಿರಮ್ಮ ಪತಿಯ ಶ್ರೇಯವ
ದೈವದತ್ತವಿಹುದು ನಿಮ್ಮ ಮುಖದ ಕಾಂತಿಯು
ಸೇರಿಸಿ ಫಲವೇನು ವಿವಿಧ ಸುಣ್ಣಬಣ್ಣವ
ಹೂವುಗಳನು ಕಸಕಲದರ ಗಂಧವಿರುವುದೆ
ಯಾವ ಕೃತಕ ಬೇಕಿದೆ ಸ್ವಭಾವ ಶೋಭೆಗೆ

ಅನುಗಾಲವು ಊರಿಗೆ ಉಪಕಾರಿಯಾದರು
ಮನೆಗೆ ಮಾರಿಯಾಗಬೇಡಿರಮ್ಮ ಎಂದಿಗು
ವಿನಯವಿರಲಿ ನಡೆನುಡಿಯಲಿ ಸರ್ವ ಜನರಲು
ಪ್ರಣಯ ಸರಸ ಬೇಡಿರಮ್ಮ ಬಂಧು ಜನರಲಿ
ದುಡಿದು ದಣಿದು ಉಶ್ಶೆನುತಲಿ ಬರುವ ಪತಿಯಲಿ
ಕಿಡಿಕಿಡಿಯಾಗಲಿ ಬೇಡಿರಿ ತರಲು ಮರೆತರೆ
ಬಡತನವಿರಬಹುದು ಸದ್ಯ ನಿಮ್ಮ ಪಾಲಿಗೆ
ಅಡಿಗಡಿಗದನಾಡಬೇಡಿ ಒಡೆಯನೆದುರಲಿ
ನೆರೆಮನೆ ವೆಂಕಮ್ಮನೊಂದು ಸೀರೆ ಕೊಂಡರೆ
ಗುರು ಗುರುಗುಟ್ಟುತಲಿ ನೋಡಬೇಡಿ ಪತಿಯನು

ಮರುಕದಿ ಸಂತೈಸಲವನು ಮನವು ಕರಗದೆ
ಸೆರೆಸೆರೆ ಕಣ್ಣೀರುಗಳನು ಸುರಿಸಬೇಡಿರಿ
ತುಳಸಿಯ ಪೂಜೆಯನು ಮಾಡ ಮರೆಯಬೇಡಿರಿ
ಕೆಲಸಗಳನು ದಿಟ್ಟತನದಿ ಮಾಡಿ ಮುಗಿಸಿರಿ
ಕಲಿಯಿರಿ ಸಂಸಾರದಲಿ ನೆಪ್ಪು ನೇರವ
ಹಳಿಯಬೇಡಿರಮ್ಮ ನೀವು ನೆರೆ ಹೊರೆ ಜನರ
ಉಳಿಸಿ ಬಳಸಿರಮ್ಮ ತಂದ ಧಾನ್ಯವ
ತಿಳಿಸಬೇಡಿ ಮನೆಯ ಗೋಪ್ಯ ಪರರಿಗೆಂದಿಗು
ಕುಳಿತು ಕಾಲ ಕಳೆಯಬೇಡಿ ಕೆಲಸವಿದ್ದರೆ
ಪ್ರಳಯ ಮಾಡಬೇಡಿ ಸಣ್ಣ ಪುಟ್ಟ ಮಾತಿಗೆ

ಸೊಟ್ಟ ಬೈತಲೆಯನು ತಗೆಯಲಿಷ್ಟಪಡದಿರಿ
ಅಷ್ಟವಕ್ರದುಡುಪುಗಳನು ಧರಿಸಬೇಡಿರಿ
ರಟ್ಟು ಮಾಡಬೇಡಿರಮ್ಮ ರೂಪು ರಚನೆಯ
ಸಿಟ್ಟು ಮಾಡಬೇಡಿ ಮುದಿಯ ಬುದ್ಧಿವಾದಕೆ
ಶ್ರವಣ ಮಾಡಿರಮ್ಮ ಹರಿಯ ಕಥೆಗಳನುದಿನ
ಶ್ರವಣ ಮಾಡುವಾಗ ಹರಟೆ ನಿದ್ರೆ ಬೇಡವು
ಕಿವಿಯ ಕಚ್ಚಬೇಡಿರಮ್ಮ ಪರರ ವಾಕ್ಯಕೆ
ಲವಲವಿಕೆಯು ಬೇಡಿರಮ್ಮ ಚಾಡಿ ಚುದ್ರದಿ
ರೂಢಿಯಿಲ್ಲದಿರುವ ನಡತೆ ಬೇಡಿರೆಂದಿಗು
ಮೂಢರೆನಿಸಬೇಡಿ ಹಾಡುಹಸೆಯ ಕಲಿಯದೆ

ಪಾಡುಪಡುತ ಪತಿಗೆ ಹರುಷನೀಡಿ ಗೃಹದಲಿ
ಪ್ರೌಢವಿದ್ಯೆ ಕಲಿತು ದುಡಿಯಬೇಡಿ ಪರರಿಗೆ
ಬಣ್ಣವಿಲ್ಲದಿರುವುದು ಬಂಗಾರವಲ್ಲವು
ಕಣ್ಣಿಗೆ ಹಿತವಲ್ಲದು ಶೃಂಗಾರವಲ್ಲವು
ಉಣಲು ತಾ ದೊರೆಯದಿರಲು ಸಂಪತ್ತಲ್ಲವು
ಅನ್ನ ಮಾಡಲರಿಯದಿರಲು ಹೆಣ್ಣದಲ್ಲವು
ದುಂದುಗಾರಿಕೆಯನು ಕಲಿಯಬೇಡಿರೆಂದಿಗು

ಮುಂದೆ ಕಾಲಚಕ್ರಗತಿಯನು ಮನದಿ ಯೋಚಿಸಿ
ಬಂದ ಮಾತುಗಳನು ಬಾಯಿತಡೆದು ಆಡಿರಿ
ನಂದಗೋಕುಲವನೆ ಮಾಡಿ ಗೃಹವ ನಗುತಲಿ

ಬಳಕೆಯಲ್ಲದಿರುವ ಕಲೆಯ ಕಲಿಯಬೇಡಿರಿ
ಕಲಿಸಿರಮ್ಮ ಕೆಲಸಕಾರ್ಯ ಮಕ್ಕಳುಗಳಿಗೆ
ಗಳಿಸಿರಮ್ಮ ಪುಣ್ಯಕೀರ್ತಿ ತಿಳಿಯಮನದಲಿ
ಸುಲಭವು ಸಾಧನವು ನಿಮಗೆ ಪುಣ್ಯಲೋಕಕೆ
ಮನವತಿ ಚಂಚಲತೆಯನ್ನು ಹೊಂದಬಿಡದಿರಿ
ಅನುಮತಿ ಕೊಡಬೇಡಿ ದುಷ್ಟ ಜನರ ಬೋಧೆಗೆ
ಘನಮತಿಯನು ಪೊಂದಿ ಸತಿಯ ಮಾರ್ಗ ತೋರಿರಿ
ಗುಣವತಿಯೆಂದೆನಿಸಿರಮ್ಮ ಹಿರಿಯ ಜನರಲಿ
ದುಡುಕಿನ ಹೆಣ್ಣೆಂದು ಹೆಸರು ಪಡೆಯಬೇಡಿರಿ
ಸಿಡುಕಿನ ಮೋರೆಯನು ತೋರಬೇಡಿ ಜನರಿಗೆ

ಒಡಕಿನ ಬಾಯವಳು ಎಂದು ಎನಿಸಬೇಡಿರಿ
ಕೆಡುಕ ಕೋರಬೇಡಿ ಕೋಪದಿಂದ ಪರರಿಗೆ
ಧ್ವನಿಯು ಮಧುರವಿರಲಿ ನಿಮ್ಮ ಮಾತುಕಥೆಯಲಿ
ಕೆಣಕಬೇಡಿ ಮರೆತುಬಿಟ್ಟ ಜಗಳ ಕದನವ
ಇಣಕಿ ನೋಡಬೇಡಿ ಪರರ ನಡೆನುಡಿಗಳನು
ಸಾರಥಿಯೆಂದೆನಿಸಿರಿ ಸಂಸಾರ ರಥದಲಿ
ವೀರರಮಣಿಯೆಂಬ ದಿವ್ಯ ಕೀರುತಿ ಬರಲಿ
ನಾರಿಯರಲಿ ಮಾದರಿಯನು ಪಡೆದು ತೋರಿದ
ಭಾರತ ಭೂಮಾತೆಗೆ ಪ್ರತಿಬಿಂಬವೆನಿಸಿರಿ

ದೇಶಸೇವೆಯೆಂದು ರಾಜಕೀಯ ಬೇಡಿರಿ
ಮೋಸ ಹೋಗಬೇಡಿ ಆಸೆ ತೋರುವ ನುಡಿಗೆ
ದೇಶ ದೇಶ ತಿರುಗಿ ಕಾಯ ಕ್ಲೇಶ ಬೇಡಿರಿ

ಭಾಷಣ ಬಹಿರಂಗದಲ್ಲಿ ಭೂಷಣಲ್ಲವು
ಸಿರಿರಮಣಗೆ ತುಳಸಿಗಿಂತ ಪುಷ್ಪವಿಲ್ಲವು
ಹಿರಿಯತನಕೆ ಸತ್ಯಕ್ಕಿಂತ ಯುಕ್ತಿಯಿಲ್ಲವು
ಅರಸಿ ನೋಡೆ ತಾಯಿಗಿಂತ ನಂಟರಿಲ್ಲವು
ಕರಿಮಣಿ ಸಮ ನಾರಿಜನಕೆ ನಗಗಳಿಲ್ಲವು
ದಾಸರ ನುಡಿ ಧರ್ಮಗಳ ಪ್ರಕಾಶ ಮಾಡಿತು
ಸ್ತ್ರೀ ಸಮೂಹದಿಂದ ನಾಶವಾಗದುಳಿದವು

ಆ ಸುಧಾಮ ಸತಿಯರೆ ಈ ದೇಶದ ಸೊಬಗು
ಮಾಸದಂತೆ ರಕ್ಷಿಸಿ ಪ್ರಾಚೀನ ನಡತೆಯ
ನುಡಿಯಬೇಡಿರಮ್ಮ ಪರರ ವಂಚನೆನುಡಿಯ
ಕೊಡಲಿ ಹಾಕಬೇಡಿರಮ್ಮ ಕುಳಿತ ಕೊಂಬೆಗೆ
ಇಡಲಿಬೇಡಿ ಮತ್ಸರವನು ದೀರ್ಘ ಕಾಲದಿ
ಪುಡಿಯನಿಡಲಿಬೇಡಿರಮ್ಮ ಪುಣ್ಯ ಕಾರ್ಯಕೆ
ಸಣ್ಣನುಡಿಗಳೆಂದು ತಿಳಿಯಬೇಡಿರಿವುಗಳ
ಭಿನ್ನ ಭಿನ್ನ ದೇಶಕಾಲದನುಭವಗಳಿದು
ಬಣ್ಣವತಿಶಯೋಕ್ತಿಯಲ್ಲ ಅರಿತು ನೋಡಿರಿ
ಘನ್ನ ಸುಗುಣಭರಿತ ಶ್ರೀ ಪ್ರಸನ್ನ ಸಲಹುವ

೩೦೦

ನೆನೆ ಮನವೆ ಮಾಧವನ ಪ

ಮುನಿವರೇಣ್ಯರ ಮನದಿ ಅನುದಿನವು ನೆಲಸಿಹ
ವನರುಹ ಲೋಚನನ ಅ.ಪ

ಸತಿಸುತರ ಮೋಹವನು ಹಿತವೆಂದು ಅರಿಯುತಲಿ
ಮತಿಯ ಕೆಡದಂತೆ ನೀ ಅತಿಶಯದ ಭಕುತಿಯಲಿ ೧

ಮರುಳು ಮಾಡುವ ಭವದ ಪುರಳು ಸುಖಗಳಿಗೆ ನೀ
ಇರುಳು ಹಗಲಲ್ಲಿ ಉರಳಿ ಕೆಡದಿರುವಂತೆ ೨

ಮುನ್ನಗಳಿಸಿದ ಬಹಳ ಉನ್ನತದ ಅಘಗಳಿಗೆ
ಖಿನ್ನನಾಗುತ ಸುಪ್ರಸನ್ನ ಶ್ರೀ ನರಹರಿಯ ೩

೩೦೧

ಪರಸಿರಿಗೆ ಕರಗುತಿಹುದು ಸರಿಯೇ ಯೋಚಿಸು ಪ

ಹರಿಯು ಕರುಣದಿಂದ ಕೊಟ್ಟ ಸಿರಿಗೆ ತೃಪ್ತನಾಗದಂತೆ ಅ.ಪ

ಉರಗನ ನೆರಳಲ್ಲಿ ಕಪ್ಪೆಯು ಚಿರಕಾಲ ಜೀವಿಸುವುದೇ
ಧರೆತಲದಲಿ ನರರ ಸಿರಿಯು ಸ್ಥಿರವಲ್ಲವೆಂದರಿಯದಂತೆ ೧

ಹಲವು ಜನುಮಗಳ ಕರ್ಮದ ಫಲವನರಿತು ಮೋಸವಿಲ್ಲದೆ
ನಳಿನನಾಭ ನಾರಾಯಣನೊಲಿದು ಕೊಡುವನೆಂದರಿಯದೆ ೨

ಎನ್ನದೆಂದು ನಿನ್ನದೆಂದು ಖಿನ್ನನಾಗುವುದು ಸರಿಯೆ
ಸನ್ನುತ ಪ್ರಸನ್ನ ಹರಿಯು ತನ್ನ ಭಾಗ್ಯವನರಿತು ನೀಡಲು ೩

೩೦೨

ಪೇಳ ಸುಲಭವೆ ಜಗದಿ ಕಾಲಮಹಿಮೆಯ ನಮ್ಮ
ಮೂಲ ಪುರುಷನ ದಿವ್ಯ ಲೀಲೆಯಲ್ಲವೆ ಎಲ್ಲ ಅ.ಪ

ಮುಂದೆ ಸ್ತುತಿಪರು ಜನರು ಹಿಂದೆ ಜರಿವರು ಬಹಳ
ತಂದೆ ಬಡವನ ನೀನ್ಯಾರೆಂದು ಕೇಳ್ವರು ಮನದಿ ೧

ನೀಚಕೃತ್ಯವ ಮನದಿ ಯೋಚಿಸುತ್ತಲಿ ಸತತ
ನಾಚಿಕೆಯನು ಪೊಂದದೆಲೆ ಯಾಚಿಸುವರು ದ್ರವ್ಯವನು ೨

ಸತಿಯರೆಲ್ಲರು ಶುದ್ಧಮತಿಯ ತೊರೆಯುತ ತಮ್ಮ
ಪತಿಯ ಜರಿವರು ಮುದದಿ ಇತರರನ್ನು ಕೋರುವರು ೩

ದ್ಯೂತಗಳಲಿ ಕಾಲ ಕಳೆದು ಖ್ಯಾತಿ ಪಡೆವರು ಬಹಳ
ಸೋತು ತಮ್ಮ ದ್ರವ್ಯಗಳ ಪಾತಕಗಳ ಮಾಡುವರು ೪

ಸ್ನಾನ ಜಪತಪ ಪೂಜೆ ಏನನರಿಯರು ದುಷ್ಟ
ಪಾನಗಳನು ಸೇವಿಸುತ ಮಾನ ದೂರ ಮಾಡುವರು ೫

ಹರಿಯ ಮಹಿಮೆಗಳನ್ನು ಅರಿಯದಂತೆ ಸಂತತವು
ಧರೆಯ ದುಷ್ಟ ಭೋಗದಲಿ ಕುರಿಗಳಂತೆ ಬೀಳುವರು ೬

ಘನ್ನ ಧರ್ಮಗಳೆಲ್ಲ ಶೂನ್ಯವಾಗಿರೆ ಸುಪ್ರ
ಸನ್ನ ಹರಿಯ ಸೇವಕರು ಇನ್ನು ಇರುವುದಚ್ಚರಿಯು ೭

೩೦೩

ಬಡವನಿಗೆ ನಂಟರುಂಟೆ ಪೊಡವಿಯಲಿ
ಬಲಿದನಿಗೆ ತಂಟೆಯುಂಟೆ ಪ

ಬಡವನನು ಕಂಡರೆ ಮಡದಿಯರು ಜರಿವರು
ಬಲಿದನನು ಕಂಡರೆ ಹಲ್ಲುಗಳ ಕಿರಿವರು ಅ.ಪ

ಸಿರಿಯ ಪೊಂದಿದ ಮನುಜ ಜಗದಲಿ
ಸರಿಯೆಂದು ಎನಿಸುವನು

ಉರುತರ ಜ್ಞಾನವ ಪೊಂದಿದ ಬಡವನ
ಮರುಕವಿಲ್ಲದೆ ನರರು ಪರಿಪರಿ ಜರಿವರು ೧

ಕಾಸು ಪೊಂದಿದ ನರನ ಪರಿ
ಹಾಸವೆ ಬಲು ಸೊಗಸು
ಕಾಸಿನ ಮದದಿಂದ ಲೇಸವೂ ಇಲ್ಲದೆ
ಕ್ಲೇಶ ಪಡುವನ ಕಂಡು ಮೀಸೆಯ ತಿರುವುವರು ೨

ಕ್ರೂರನಾದರು ಧನಿಕ ಇವನನು
ಸೇರಲು ಬಯಸುವರು
ಭಾರಿ ನಡತೆ ಇದ್ದು ಸೇರದಿರಲು ಧನ
ಯಾರು ಕಂಡರು ಇವನ ಮೋರೆ ತಿರುಗುವರು ೩

ಧನವಿದ್ದರೆ ಜೋಕು ಜಗದೊಳು
ಘನತೆ ಏತಕೆ ಬೇಕು
ಕನಸಿನಲ್ಲಿಯು ಧನ ಕಾಣದ ಮನುಜನ
ಘನತೆಯು ಜನಗಳ ಮನಕೆಂತು ತೋರುವುದು ೪

ಕಾಸಿದ್ದವನೆ ಮದನ ಜಗದಲಿ
ಕಾಸಿಲ್ಲದವನು ದನ
ಕೋಶ ಪೊಂದಿದವನು ಕೀಶನಾದರು ಪ್ರೇಮ
ಪಾಶಕ್ಕೆ ಬೀಳಲು ಆಸೆಯಪಡುವರು ೫

ಹಣವಿದ್ದ ಪುರುಷನನ್ನು ಧರಣಿಯೊಳ್
ಕೆಣಕಿ ಬದುಕಬಹುದೆ
ಗುಣಶಾಲಿಯಾದರು ಋಣಗಾರ ನರನನು
ಕುಣಿಸುತ್ತ ಕ್ಲೇಶಕೆ ಹೊಣೆಯ ಮಾಡುವರು ೬

ಝಣಿಝಣಿಸುವ ಧನವ ಪೊಂದಿರೆ
ತೃಣವಂತೆ ಜಗವೆಲ್ಲ
ಪಣಿಯಲಿ ಬೊಮ್ಮನು ಹಣವ ಬರೆಯದಿರೆ
ಅಣಿಯಾದ ಜ್ಞಾನಿಯು ಹೆಣದಂತಾಗುವನು ೭

ಶುಂಠನಾದರು ಧನಿಕ ಇವನಿಗೆ
ಉಂಟೆ ಜಗದಿ ಎದುರು
ಗಂಟು ಇಲ್ಲದವನ ನೆಂಟರು ಜರಿವರು
ಕುಂಟು ಎತ್ತಿನಂತೆ ಒಂಟಿಯಾಗುವನು ೮

ಹೊನ್ನು ಜರಠ ನರಗೆ ಸುಲಭದಿ
ಹೆಣ್ಣು ಒದಗಿಸುವುದು
ಸೊನ್ನೆಯಾದರೆ ಧನ ಚೆನ್ನದಂತಿರುವಗೆ
ಇನ್ನಾರು ಕಾಣೆ ಪ್ರಸನ್ನ ಹರಿಯೇ ಗತಿ ೯

೩೦೪

ಬೆರಗದಿರು ಮನವೇ ನೀ ತತ್ವವನು ತಿಳಿಯದೆ
ಮರುಗಬೇಕಾಗುವುದು ಅವಿವೇಕಕೆ ಪ

ಸಿರಿಯರಸ ನರಹರಿಯ ಮರೆತು ಬಾಳುವ ನರನು
ನರಕಕ್ಕೆ ಗುರಿಯಾಗಿ ಸೊರಗುವನು ನಿಜದಿ ಅ.ಪ

ಸುಲಭವಲ್ಲವೊ ನಿನಗೆ ಮನುಜ ಜನ್ಮದ ಲಾಭ
ತನುಭೋಗವಲ್ಲವೊ ಅದರ ಫಲವು
ವನಜನಾಭನ ಮನದಿ ನೆನೆನೆನೆದು ದಿವ್ಯ ಸ
ನ್ಮಾನವ ಪಡೆಯುವತನಕ ಶುನಕಕ್ಕೆ ಸಮನೋ ೧

ಭವಮೋಹದಿಂದ ನೀ ಘನ ಪಾಪಗಳ ಮಾಡಿ
ಧನಿಕನೆಂದೆನಿಸಿದರೆ ಎಣಿಕೆ ಬಾರದೋ
ದಿನದಲ್ಲಿ ಧನದಿಂದ ಪಡುವ ಭೋಗಗಳು ಬಂ
ಧನದಲ್ಲಿ ಕೆಡಹುವುವು ನಿನ್ನನು ನಿಜದಿ ೨

ಪ್ರೇಮಪಾಶಕೆ ಸಿಲುಕಿ ವಾಮಲೋಚನೆಯರ
ಕಾಮಿತಕೆ ಬಿದ್ದು ನಿರ್ನಾಮವಾಗದಿರೊ
ಹೇಮದಾಸೆಗೆ ನಿನ್ನ ಕಾಮನೆಂದ್ಹೊಗಳುವರೋ
ರೋಮ ರೋಮದಿ ಸುಲಿದು ಕೊನೆಗೆ ಬಿಸುಡುವರೋ ೩

ಮುನ್ನ ಏಸೇಸು ಜನ್ಮಗಳ ಪೊಂದಿದೆಯೊ ನೀ
ನಿನ್ನವರು ಯಾರೆಂದು ಪೇಳಲಳವೇ
ಘನ್ನ ಮಹಿಮನಲಿ ಸಂಪನ್ನಮತಿಯನೆ ಪೊಂದು
ಪನ್ನಗಶಯನ ಪ್ರಸನ್ನನಾಗುವನು ೪

೩೦೫

ಭಕುತರಿಗಾಶೀರ್ವಾದಗಳು ಕುಶಲಕೆ ಬರೆಯುತಲಿರಿ ಎನಗೆ ಪ

ಸುಖಶಾಂತಿಗಳನು ಬಯಸುವರಿಗೆ ಕೆಲ
ಯುಕುತಿಗಳನು ಬರೆದಿಹೆನಿಲ್ಲ ಅ.ಪ

ಬೆರೆಯಬೇಡಿ ಈ ಜಗದ ರಗಳೆಯಲಿ
ಮರೆಯಬೇಡಿ ಎನ್ನನು ಕ್ಷಣವು
ಬೆರೆಯದೆ ಮರೆಯದೆ ಇರುವ ಧೀರರನು
ಪೊರೆಯುವುದೇ ಎನ್ನಯ ಗುರಿಯು ೧

ನಾಳೆಗೆ ಅಣಿಮಾಡಲು ಕೈಲಾಗದೆ
ಗೋಳೇತಕೆ ನಾನೊದಗಿಸುವೆ
ಕಾಲು ಕೈಗಳೊದ್ದಾಡುವತನಕ
ಮೇಲೆತ್ತುವುದಳವೇ ಎನಗೆ ೨

ಬಿಸಿಲು ಗಾಳಿ ಮಳೆಗಳು ಸಿದ್ಧೌಷಧ
ಹಸನ ಮುಖವೆ ನಿಮ್ಮಯ ಪಥ್ಯ
ರಸ ಕವಳವು ಬೇಕಾದರೆ ಕೊಳೆಯುವ
ರಸವನು ತಿನ್ನಲು ಬಯಸದಿರಿ ೩

ಕತ್ತಲಿನಲಿ ಓಡುತಲಿರುವಿರಿ
ಸತ್ತಿರುವುದೆ ನಿಮ್ಮಯ ಬಲವು
ಅತ್ತರೇನು ಫಲ ಎತ್ತಿನೋಡಿ ತಲೆ
ಹತ್ತಿರದಿ ನಾನಿಹೆ ಸತತ ೪

ಭಯವೇತಕೆ ದಾರಿದ್ರ್ಯದಲಿ
ಭಯವೇತಕೆ ಜನರನು ಬಿಡಲು
ಭಯವೇತಕೆ ಲೌಕಿಕವಿರದಿರಲು
ಅಭಯ ಪ್ರಸನ್ನನಿರೆ ಹೃದಯದಲಿ ೫

ಬೊಗಳುವರಿರುವರು ಹೊಗಳುವರಿರುವರು
ಹಗರಣವೇತಕೆ ಮಾನಸದಿ
ಒಗೆಯಿರಿ ಹಗೆತನ ನಗುತ ನಗುತಲಿರಿ
ಜಗವೆ ಹೊಸ ಮೊಗ ತೋರುವುದು ೬

೩೦೬

ಭಯವುಂಟೆ ಹರಿಯ ಭಕುತರಿಗೆ ಪ

ತತ್ವಗಳರಿಯುತ ಕೃತ್ಯವ ಮಾಡುವ
ಸಾತ್ವಿಕರಾಗಿರುವ ಸುಜನರಿಗೆ ೧

ಸ್ವಾರ್ಥತೆಯಲಿ ಕಾಲ ವ್ಯರ್ಥಮಾಡದೆ ಪುರು
ಪಾರ್ಥಪ್ರದನ ಪದನ ಭಜಿಪರಿಗೆ ೨

ಕಾಮ ಕ್ರೋಧಗಳ ಬಿಟ್ಟ ಮನದಿ ಶ್ರೀ
ರಾಮನ ಚರಣಗಳ ಭಜಿಪರಿಗೆ ೩

ಸಾಧು ಸಂಗದಲಿ ಮೋದವಗೊಳ್ಳುತ
ಮಾಧವನನು ಸತತ ನೆನೆವರಿಗೆ ೪

ಚಿನ್ಮಯ ರೂಪ ಪ್ರಸನ್ನ ಶ್ರೀಕೃಷ್ಣನ
ಉನ್ನತ ಮಹಿಮೆಗಳ ಸನ್ನುತಿಸಲು ೫

೩೦೭

ಭಿಕ್ಷೆಯ ಹಾಕಿರಿ ಜೋಳಿಗೆಗೆ
ಅಕ್ಷಯವಾಗುವುದು ನಿಮಗೆ ಪ

ಕುಕ್ಷಿಯೊಳೆಲ್ಲವ ಪೊಂದಿರುವಾತನ
ಕುಕ್ಷಿಗೆ ಹಿತಕರ ಭಿಕ್ಷೆಯೆಂದೆನ್ನುತ ಅ.ಪ

ಹೊಟ್ಟೆಗೆ ಇಲ್ಲದೆ ಬಂದಿಲ್ಲ ಕೊಟ್ಟರೆ
ಪುಟ್ಟದ ಕಟ್ಟನು ತರುವೆವು

ಅಷ್ಟು ಪಾಪಗಳ ಮಾಡಲು
ಕೃಷ್ಣ ದಯೆಯ ತಂಬಿಟ್ಟನು ಕೊಡುವೆವು ೧

ಶ್ರಾವಣ ಮಾಸದ ಶನಿವಾರ
ಯಾವನು ಕೊಡುವನೊ ಮನಸಾರ
ಜೀವನ ಕ್ಲೇಶದ ಪರಿಹಾರ
ಭಾವದಿ ಪೊಂದುವ ಸುಖಸಾರ ೨

ಮೋಸವಿಲ್ಲದವು ದಾಸ ಪ್ರಸನ್ನ
ತೋಷಣ ವೈಭವ ಶ್ರೀಶನೆ ಬಲ್ಲನು
ಸಾಸಿರ ಸಾಸಿರ ನಾಣ್ಯದ ಕಾರ್ಯವ
ವೀಸಕೆ ಮಾಡುವ ದಾಸರ ಗುಂಪಿದು ೩

೩೦೮

ಮನವ ಶೋಧಿಸದೆಲೆ ಡಂಭದಿ ದಿನದಿನದಲಿ ಕರ್ಮಮಾಡೆ
ತನುವಿಗೆ ಬಲು ಕ್ಲೇಶವಲ್ಲದೆ ಅನುಕೂಲವೇನು ಪ

ಕಾಮಕ್ರೋಧ ಲೋಭಮೋಹ ಮದ ಮತ್ಸರಗಳನು ಬಿಡದೆ
ನಾಮಗಳನು ಬಳೆದು ಮರೆದರೆ ಶ್ರೀ ರಾಮನರಿಯನೆ ೧

ಈಶ ಸೇವೆಗೆಂದು ಬಹಳ ಮೋಸದಿಂದ ಧನವ ಗಳಿಸಿ
ಈಶನನ್ನು ಮರೆವ ನರನನು ಜಗದೀಶನರಿಯನೆ ೨

ಪರಸತಿಯರ ಸರಸಗಳಿಗೆ ಜರಿದು ಮನವ ಮರುಳು ಮಾಡೆ
ಸರಳತನದಿ ದಾನ ಮಾಡಲು ನರಹರಿಯು ಅರಿಯನೆ ೩

ದೃಢಭಕುತಿಯ ಪೊಂದದಂತೆ ಒಡಲು ಪೊರೆಯೆ ಸಡಗರದಲಿ
ಮಡಿ ಮಡಿಯೆಂದು ನುಡಿವ ಮೂಢನ ಪೊಡವೀಶನರಿಯನೆ ೪

ಪನ್ನಗಾರಿವಾಹನ ಪ್ರಸನ್ನವದನ ಕೃಷ್ಣಮೂರ್ತಿಯ
ಉನ್ನತ ಮಹಿಮೆಗಳನರಿತಗೆ ಇನ್ನೇನು ಬೇಕು ೫

೩೦೯

ಮನೆ ಮನೆಯು ಹರಿಯ ಆಲಯವಾಗಬೇಕು ಪ

ಜನಗಳು ಸದಾಚಾರ ಶೀಲರಾಗಬೇಕು ಅ.ಪ

ಭೂತ ಸರ್ಗದಲಿ ಹೊಸ ನೀತಿಗಳ ಕಲ್ಪನೆಯು
ಘಾತಕವು ಲೋಕಹಿತಕೆಂದರಿಯದೆ
ಜಾತಿ ಬೇಡೆನ್ನುವರ ರೀತಿನೀತಿಗಳು ಆ
ಪಾತರ ರಮಣೀಯವೆಂಬುದ ತೋರಬೇಕು ೧

ಅಸ್ತವಾಗಲಿ ಜಾತಿ ಮತ ಭೇದವೆಲ್ಲವು
ಪ್ರಸ್ತಾಪ ಬಿಡಿರಿ ಹರಿ ಗುರು ಹಿರಿಯರ
ಸ್ವಸ್ಥವಾಗುವುದೆಂದು ಭಾರತವು ಎನ್ನುವರು
ಮಸ್ತಕದಿ ಕರವಿಟ್ಟು ಕುಳಿತುಕೊಳ್ಳುವ ತೆರದಿ ೨

ಬಹುಮತವು ಎಮ್ಮದೆಂಬುವ ಮದವು ಬೆಳೆಯುತಿರೆ
ಸಹನವೇ ಸಾಧುಜನಗಳಿಗೆ ಶರಣ
ಇಹಪರಗಳಲ್ಲಿಯೂ ಪ್ರಸನ್ನ ಹರಿ ಸಲಹುವನು
ಕುಹಕ ಮಾರ್ಗವು ಬೇಧ ಸಹಜ ಧರ್ಮಗಳಿಂದ ೩

೩೧೦

ಮಾಡು ಮನವನು ಬರಮಾಡು ಹರಿಯನು
ಸ್ಥಿರ ಮಾಡು ಮನವನು ಪ

ಜೋಡಿಸಿ ಕರಗಳ ಕರೆದರೆ
ಓಡುತ ಓಡುತಲಿವ ಬರುವನು ಅ.ಪ

ನಾಳೆ ನಾಳೆ ಎನ್ನಬೇಡ
ಕಾಲ ನಿನ್ನಧೀನವಲ್ಲ
ಕೇಳಿದರಾಕ್ಷಣ ಕರುಣಾಶೀಲನು
ಆಲಯಕಿವ ಬರುವನು ೧

ಕಾಮಧೇನು ಕಲ್ಪವೃಕ್ಷ
ಈ ಮಹಾಮಹಿಮಗೆ ಸಮವೇ
ಪ್ರೇಮದಿ ಪೂಜಿಸಿದಾತಗೆ
ಕ್ಷೇಮವ ಭಾಮೆಯ ಪ್ರಿಯ ಕೊಡುವನು ೨

ಮನಗೆ ಬಂದರೀತನೊಮ್ಮೆ
ಜನಕೆ ಬಂದುದೆಂಥ ಹೆಮ್ಮೆ
ಪ್ರಣಯ ಸುಧೆಯ ಸವಿರಸವನು
ಮನೆಯಲಿ ತುಂಬುವನು ಪ್ರಸನ್ನನು ೩

೩೧೧

ಯಾರಿಗೆ ಯಾರಿಹರೋ ಜಗದಲಿ
ನಾರಾಯಣ ನೀನಲ್ಲದೆ ಬಾಂಧವ ಪ

ಜನನಿ ಜನಕ ಸತಿಸುತ ಸಹಜರುಗಳು
ಮನೆ ಮಠ ಧನಕನಕಾಧಿಗಳೆಲ್ಲವು

ಕನಸಿನ ರಥ ತುರಗಾದಿಗಳಲ್ಲವೆ
ಅನಿಮಿತ್ತ ಬಾಂಧವ ನೀನಲ್ಲದೆ ಹೊಣೆ ೧

ದೇಹಬಿಟ್ಟು ಪರದೇಹವ ಸೇರಲು
ಬಾಹರೇ ಲೋಕದ ಬಂಧುಗಳು
ದೇಹ ದೇಹದಲೂ ಕ್ಷಣವಗಲದೆ ಎಂದು
ಸಾಹಚರ್ಯ ಜಗಮೋಹನಗಲ್ಲದೆ ೨

ಸಂತೆಗೆ ಸೇರುವ ಗಂಟುಕಳ್ಳರುಗಳ
ತಂಟೆಯು ಬೇಡೆಂದು ಲೌಕಿಕಕೆ
ಅಂಟದಿದ್ದರೆ ದೊಡ್ಡ ಗಂಟನು ಹೊರಿಸುವ
ನಂಟನು ಭಕ್ತ ಪ್ರಸನ್ನ ತಾನಲ್ಲದೆ ೩

೩೧೨

ಯೋಗಿ ವಲ್ಲಭನ ಅನುರಾಗವನು ಪಡೆದವಗೆ
ಲಾಗವೆಲ್ಲವು ದೊಡ್ಡ ಯೋಗವಾಗುವುದು ಪ

ಹೋಗಿ ಗಂಗೆಯ ತೀರದಲಿ ಬಾವಿ ತೋಡಿದರೂ
ಬೇಗ ಸಿಗುವುದು ದಿವ್ಯ ಬಲಮುರಿಯ ಶಂಖವು ಅ.ಪ

ಮಾಧವನ ಪರಮ ಕರುಣವ ಪಡೆದ ಮನುಜನಿಗೆ
ಹೋದ ಕಡೆಗಳಲಿ ದೊರೆಕುವುದಾದರೆ
ಮೂದಲಿಸುವರ ಮನವು ಕಾದ ಬೆಣ್ಣೆಯು ಕರಗಿ
ಹೋದ ತೆರದಲಿ ಕ್ಷಣದಿ ಸಾಧುವಾಗುವುದು ೧

ವೇದಾಂತ ರಾಜ್ಯದಲಿ ಜ್ಞಾನಭಕುತಿಗಳಿಂದ
ವೇದಾಂತ ವೇದ್ಯನನು ಮೋದ ಪಡಿಸುವನು

ಕಾದ ಮರುಭೂಮಿಯಲಿ ಸಕಲ ಸಂಪತ್ತುಗಳ
ಸಾಧಿಸುವ ಬೇಧಿಸುವ ವಿಘ್ನರಾಶಿಗಳನ್ನು ೨

ಕುರುಡ ನೋಡುವನೆಲ್ಲ ಕಿವುಡ ಕೇಳುವನೆಲ್ಲ
ಗುರುವರ ಪ್ರಸನ್ನ ನೀ ಮರುಕ ತೋರಿದರೆ
ಕರಡಿ ಕೈ ಗೊಂಬೆಯಾಗುವುದು ಕೈಗೊಂಬೆಯು
ತ್ವರಿತದಲಿ ಕಲ್ಪತರುವಾಗಿ ಕೊಡುವುದು ಫಲವ ೩

೩೧೩

ಲೋಭಿಯು ಬೇಡಲು ಲಾಭವೇನಿರುವುದು
ನಾಭಿಯು ಒಣಗುವುದು । ಬೇರೊಂದಿಲ್ಲ
ನಾಭಿಯು ಒಣಗುವುದು ಪ

ಲೋಭಿಗೆ ಧನದಿಂದ ಶೋಭೆಯುಂಟೆ ಮನ
ಕ್ಷೋಭೆಯಲ್ಲದೆ ಸತತ । ತನ್ನಯ ಮನಕ್ಷೋಭೆಯಲ್ಲದೆ ಸತತ ಅ.ಪ

ನೂರು ಛಿದ್ರಗಳಲ್ಲಿ ತೋರುತಿದ್ದರು ದೇಹ
ಕೋರನು ನವವಸನ । ಏನೆಂದು ಕೋರನು ನವವಸನ
ಮೂರು ಕಾಸಿಗೆರಡು ಮಾರುತಿದ್ದರು ಅದ
ದೂರದಿ ತ್ಯಜಿಸುವನು । ನೂತನವಸ್ತ್ರ ದೂರದಿ ತ್ಯಜಿಸುವನು ೧

ಬಂಧು ಜನರು ತನ್ನ ಮಂದಿರಕ್ಕಿಳಿಯಲು
ನೊಂದುಕೊಳ್ಳುವ ಮನದಿ । ತತ್ತಳಿಸುತ ನೊಂದುಕೊಳ್ಳುವ ಮನದಿ
ತೊಂದರೆಗಳ ಪೊಂದಿಹೆನೆನ್ನುತ
ಮುಂದಕೆ ಸಾಗಿಸುವ । ಬಂದವರನು ಮುಂದಕೆ ಸಾಗಿಸುವ ೨

ಮುಗ್ಗಿದ ಧವಸವು ಅಗ್ಗದಿ ಮಾರಲು
ಹಿಗ್ಗುತ ಕೊಳ್ಳುವನು । ಸೊಗಸಿನಲಿ ಹಿಗ್ಗುವನು
ಒಗ್ಗಿಹುದೆನ್ನುತ ನುಗ್ಗಿಸಿ ಉದರದಿ
ಸಗ್ಗದೆ ನಡೆಯುವನು । ಪರನುಡಿಗೆ ಸಗ್ಗದೆ ನಡೆಯುವನು ೩

ಹಣದಲಿ ಲೋಭಕೆ ಕೊನೆ ಮೊದಲಿಲ್ಲದೆ
ಒಣಗಿಸುವನು ತನುವ । ಕಾರ್ಪಣ್ಯದಿ ಒಣಗಿಸುವನು ತನುವ
ಗೆಣೆಯನಿವನು ನಾಲ್ಕಾಣೆಯ ಕಂಡರೆ
ಕುಣಿಯುವನು ಮನದಲ್ಲಿ । ಎಣೆಯಿಲ್ಲದೆ ಕುಣಿಯುವ ಮನದಲ್ಲಿ ೪

ಕಿಕ್ಕಿರಿದರು ಧನ ಕಕ್ಕುಲತೆಯೊಳ್ ತನ್ನ
ಮಕ್ಕಳ ಸಲಹುವನು । ರಕ್ಕಸನಿವ ಮಕ್ಕಳ ಸಲಹುವನು
ಮಿಕ್ಕ ಧನವ ಬಲು ಅಕ್ಕರೆಯಿಂದ ಎವೆ
ಯಿಕ್ಕದೆ ನೋಡುವನು । ನೇತ್ರದಿ ಎವೆಯುಕ್ಕದೆ ನೋಡುವನು ೫

ನುಡಿದರೆ ಸವಿಮಾತ ಒಡವೆ ವಸನಗಳಿ
ಗ್ಹಿಡಿವಳೆಂದರಿಯುತಲಿ । ಸಡಗರದಿ ಹಿಡಿವಳೆಂದರಿಯುತಲಿ
ಕರವ ಪಿಡಿವ ತನ್ನ ಮಡದಿಯ ಕಂಡರೆ
ಸಿಡಿಮಿಡಿಗುಟ್ಟುವನು । ನಿರ್ಘೃಣನಿವ ಸಿಡಿಸಿಡಿ ಗುಟ್ಟುವನು ೬

ರಾಯರೆ ನಿಮ್ಮ ಸಹಾಯ ಹೊರತು
ಬೇರುಪಾಯ ಕಾಣೆನೆನಲು । ಈ ಧರೆಯೊಳು ಉಪಾಯ
ಕಾಣೆನೆನಲು
ಕಾಯುವ ಧಣಿ ನಾರಾಯಣನೆನುತಲಿ
ಬಾಯಲಿ ನುಡಿಯುವನು । ವೈರಾಗ್ಯವ ಬಾಯಲಿ
ನುಡಿಯುವನು ೭

ಈ ಧನವೆ ದೊಡ್ಡ ಸಾಧನವೆನ್ನುವ
ಮೇಧಾವಿಯು ಇವನು । ಓದಲರಿಯದ ಮೇಧಾವಿಯು ಇವನು
ಮಾಧವ ಕೃಷ್ಣನ ಪಾದ ಕಮಲದಲಿ
ಆದರವರಿಯನಿವ । ಎಂದೆಂದಿಗು ಆದರವರಿಯನಿವ ೮

ಘನತೆಯು ಬೇಡವು ಜನತೆಯು ಬೇಡವು
ಧನವಿದ್ದರೆ ಸಾಕು । ಈ ನರನಿಗೆ ಧನವಿದ್ದರೆ ಸಾಕು
ಮನುಜ ಮುಟ್ಟದ ಗುಬ್ಬಿಯನನುಕರಿಸುತ ಜೀ
ವನವನು ಕಳೆಯುವನು । ಕ್ಲೇಶದಿ ಜೀವನವನು ಕಳೆಯುವನು ೯

ಗಳಿಸಿದವನ ಧನ ಬಳಸಿದವನಿಗೆಂಬ
ಇಳೆಯ ಅನುಭವಗಳ ತಿಳಿದು । ಮತ್ತೆ ಅನುಭವಗಳ ತಿಳಿದು
ಉಳಿಸಲು ಧನವನ್ನ ಕೊಳೆಯ ಜೀವನದಲಿ
ಮುಳುಗಿ ಮುಳುಗುತಿರುವ । ಕ್ಲೇಶಗಳಲಿ ಮುಳುಗು ಮುಳುಗುತ್ತಿರುವ ೧೦

ಭುಜಗಶಯನ ಹರಿ ಸುಜನರು ತನ್ನನು
ಅಜನೆಂದು ಕರೆಯುತಿರೆ । ಸೃಷ್ಟೀಶನ ಅಜನೆಂದು ಕರೆಯುತಿರೆ
ತ್ಯಜಿಸದೆ ಹೆಸರನು ಅಜಗಳ ಸ್ತನದಂತೆ
ಸೃಜಿಸಿದನೀ ಜನರ । ಪ್ರಸನ್ನ ಹರಿ ಸೃಜಿಸಿದನೀ ಜನರ ೧೧

೩೧೪

ಸತತ ನಿನ್ನ ಭಜನೆಯಲ್ಲಿ ಹಿತವ ಪೊಂದಿಸೊ ದೇವ ಪ

ಅತುಲ ಮಹಿಮೆಗಳಲ್ಲಿ ಎನ್ನ ಮತಿಯ ಸೇರಿಸೊ ಶ್ರೀಪತೆ ಅ.ಪ

ಕೂಳಿಗಾಗಿ ಬಹುತರದಲಿ ಕಾಲ ಕಳೆಯಿತೊ ದೇವ
ನಾಳೆ ನಾಳೆಯೆಂದು ನಿನ್ನ ಪೊಗಳಲಿಲ್ಲವೊ ದೇವ ೧

ಯೋಚಿಸದಲೆ ನಿನ್ನ ದೈನ್ಯದಿ ನೀಚ ಜನರಲಿ ನಾನು
ಚಾಚಿ ಕರವ ಯಾಚಿಸುತ್ತ ಶೋಚನೀಯನಾದೆನೊ ೨

ಸ್ಥೈರ್ಯದಿಂದ ಮನವು ನಿನ್ನೊಳು ಸೇರದಿರುವುದೋ ದೇವ
ಕಾರಣವನು ತೋರಿ ಸಲಹೊ ಮಾರ ಜನಕನೆ ೩

ಕಾಮಕ್ರೋಧದಿಂದ ವಿಷಯ ಪ್ರೇಮಗಳಲಿ ನಾ ನಿನ್ನ
ನಾಮ ಮರೆತು ಬಳಲಿದೆನೊ ಕಾಮಿತಪ್ರದ ೪

ಸಣ್ಣ ಜನರ ನಡೆನುಡಿಗಳಿಂ ಖಿನ್ನನಾದೆನೊ ದೇವ
ಎನ್ನಮೇಲೆ ಕರುಣದಿಂದ ಪ್ರಸನ್ನನಾಗೆಲೊ ದೇವ ೫

೩೧೫

ಸುಮ್ಮನೇಕೆ ಪರದಾಡುವೆಯೊ ಪರ
ಬೊಮ್ಮನ ಚರಣಕೆ ಶರಣು ಹೊಡಿ
ನಮ್ಮನು ಸೃಜಿಸುವ ಪೊರೆಯುವ ಕೊನೆಯಲಿ
ನಮ್ಮನೇ ನುಂಗುವ ಗುಮ್ಮನಿವ
ನಮ್ಮ ಶರೀರದೊಳಿರುವ ಯಂತ್ರಗಳು
ನಮ್ಮಧೀನವೆ ಯೋಚಿಸೆಲೊ
ಕೆಮ್ಮು ನೆಗಡಿಗಳು ವಾತ ಪಿತ್ಥಗಳು
ನಮ್ಮಾಕಾಂಕ್ಷೆಯೆ ಯೋಚಿಸೆಲೊ ೧

ಮೂರಂತಸ್ಥಿನ ನೂರು ಸದನಗಳು
ನೂರು ರೂಪಗಳು ನಿನಗಳವೆ
ಚಾರು ಮನೋಹರ ಸತಿಯಳಿರಲು ಮನ
ಕೋರಿಕೆಯವಳಲಿ ಶಾಶ್ವತವೆ

ನೂರು ಎಕರೆ ಹೊಲ ಗದ್ದೆ ತೋಟಗಳು
ಮೂರು ಲಕ್ಷಗಳು ಬೆಲೆಯಿರಲು
ಮೂರು ಚಟಾಕಿನ ಅನ್ನ ಹೊರತು ಅದ
ಮೀರಿ ನುಂಗುವುದು ನಿನಗಳವೇ ೨

ಶೂರನು ನಾ ಬಲುಧೀರನು ನಾ ಅಧಿ
ಕಾರಿಯು ನಾ ಈ ಜಗದೊಳಗೆ
ಕೋರಿದ ಜನರನು ಸದೆಬಡಿಯುವೆ ಎನ
ಗಾರು ಸಮರು ಈ ಧರೆಯೊಳಗೆ
ಕೋರುವ ಸುಖಗಳನನುಭವಿಸುವ ಮಮ
ಕಾರದ ಗತಿಯನು ಯೋಚಿಸೆಲೊ
ಹೇರಳ ಗಜತುರಗಾದಿ ವಾಹನಗ
ಳೇರಿದ ನೀ ಹೆಗಲೇರಿ ಹೋಗುವಿಯೊ ೩

ಸಾಸಿರ ಸಾಸಿರ ಬಡ್ಡಿ ಬಾಚಿಗಳ
ಬೇಸರವಿಲ್ಲದೆ ಗಳಿಸಿದೆಯೊ
ಕಾಸಿನ ಲೋಭಕೆ ಮೂಸಲು ಬಾರದ
ಕಾಸಕ್ಕಿ ಅನ್ನವ ನುಂಗಿದೆಯೊ
ಲೇಶವು ಗಮನಕೆ ತರಲಿಲ್ಲ
ಈ ಸವಿನುಡಿ ಬಲು ಹಳೆಯದೆಂದು
ಆಕ್ರೋಶವ ಮಾಡದೆ ಯೋಚಿಸೆಲೊ ೪

ಮಾಯವು ತಾ ಈ ಜಗತ್ತಿನ ಜೀವನ
ಹಾಯವೆಂದು ರುಚಿ ತೋರುವುದು
ಕಾಯವು ಶಾಶ್ವತವೆಂಬ ಭ್ರಾಂತಿಯಲಿ
ಹೇಯ ವಿಷಯಗಳನುಣಿಸುವುದು
ಪ್ರಾಯಶರೆಲ್ಲರು ಬಲ್ಲರಿದನು ಬರಿ
ಬಾಯಲಿ ನುಡಿಯುವರೊ ಸತತ
ಕಾಯವಚನಮನದಿಂದ ಪ್ರಸನ್ನನ
ಮಾಯವನರಿತಾಚರಿಪರು ವಿರಳ ೫

೩೧೬

ಸುಲಿದ ಬಾಳೆ ಹಣ್ಣು ಸುಟ್ಟು ತಿನ್ನಬೇಡಿರೊ
ಹಳೆಯ ಜನರ ಅನುಭವಗಳ ಹಳಿಯಬೇಡಿರೊ
ಬಿಳಿಯ ವಸ್ತುವೆಲ್ಲ ಕ್ಷೀರವಲ್ಲ ಕಾಣಿರೊ
ಥಳಥಳಿಸುವುದೆಲ್ಲ ರಜತವಲ್ಲ ಕಾಣಿರೊ
ಸಿರಿಯು ಬಂದ ಕಾಲದಲ್ಲಿ ಮೆರೆಯಬೇಡವೋ
ಶಿರವು ಗಟ್ಟಿಯೆಂದು ಕಂಬ ಗುದ್ದಬೇಡವೊ
ಮನಕೆ ತುಷ್ಟಿಕೊಡದ ಕಾರ್ಯಗಣನೆ ಬೇಡವೊ
ಅನುವಿನಲ್ಲಿ ಪಿಡಿದ ಕಾರ್ಯ ಕೊನೆಯಗಾಣಿಸೊ
ಹಾವು ಕೊಂದು ಹದ್ದುಗಳಿಗೆ ಹಾಕಬೇಡವೊ
ಗೋವು ಕೊಂದು ಪಾದರಕ್ಷೆ ದಾನಬೇಡವೊ

ಅರಿಯದ ಜನರಲ್ಲಿ ಅಂತರಂಗಬೇಡವೊ
ಪರರ ಗೋಪ್ಯ ತಿಳಿದರೆ ಬಹಿರಂಗಬೇಡವೊ
ನಗುವ ಜನರ ಮುಂದೆ ಜಂಭ ಕೊಚ್ಚಬೇಡವೊ
ರಗಳೆ ರಂಪದಿಂದ ಪರರ ಒಲಿಸಬೇಡವೊ
ಗೆದ್ದರಾ ಎತ್ತು ಬಾಲವನ್ನು ಹಿಡಿಯಬೇಡವೊ
ಒದ್ದರೆ ಅದು ಹಲ್ಲುಗಳನು ಕಿರಿಯಬೇಡವೊ
ಮೂರ್ಖ ಜನಗಳಲ್ಲಿ ವಾದ ಮಾಡಬೇಡವೊ
ಮಕ್ಕಳೆದುರಿನಲ್ಲಿ ಗ್ರಾಮ್ಯವಚನ ಬೇಡವೊ
ಬಳಿಕ ಮಾತನಾಡುವನು ಗೆಳೆಯನಲ್ಲಯ್ಯ
ಕುಳಿತು ತಿನ್ನುವವನು ಸಾಹುಕಾರನಲ್ಲಯ್ಯ

ಗಂಟು ಜಗಳ ಕದನಗಳಲಿ ತಂಟೆಬೇಡಯ್ಯ
ನಂಟರಿಷ್ಟರಲ್ಲಿ ಭಂಟನಾಗಬೇಡಯ್ಯ
ನಾಕು ಜನರ ಮಾತ ಮೀರಿ ನಡೆಯಬೇಡಯ್ಯ
ಪೋಕರಿ ಜನಗಳಲಿ ಮೂಕ ಬದಿರನಂತಿರೊ

ಕಾಲದಲ್ಲಿ ಕೆಲಸಮಾಡಿ ಮುಗಿಸೆಲೊ
ನಾಳೆ ನಾಳೆಯೆಂಬ ಕೆಲಸ ಹಾಳು ಕಾಣಿರೊ
ಬಿಂಕದಿಂದ ಹರಿಗುರುಗಳ ಮರೆಯಬೇಡಯ್ಯ
ಸಂಕಟ ಬಂದಾಗ ವೆಂಕಟೇಶ ಬರುವನೆ
ಸಾಲ ಸೋಲ ಮಾಡಿ ದಾನ ಧರ್ಮ ಬೇಡಯ್ಯ
ಕೇಳದಿರಲು ನೀತಿ ಹೇಳ ಹೋಗಬೇಡಯ್ಯ

ಪರರು ನೋಯುವಂಥ ಮಾತನಾಡಬೇಡಯ್ಯ
ಉರಿವ ಒಲೆಗೆ ಉಪ್ಪುಕಾಳನೆರಚಬೇಡಯ್ಯ
ನೆರೆಯು ಬಾಳುತಿರಲು ನೋಡಿ ಕರಗಬೇಡಯ್ಯ
ಬರಿದೆ ಅಯ್ಯೊ ಪಾಪವೆನಲು ಮರುಕವಲ್ಲವೊ
ದುರುಳ ಜನಗಳಲ್ಲಿ ಸರಳನಾಗಬೇಡಯ್ಯ
ಹರಿಯ ಭಜನೆಯಲ್ಲಿ ಮನದಿ ನಾಚಬೇಡವೊ
ತಿರುಕನಂತೆ ಜ್ಞಾನದ ಭಿಕ್ಷೆಯನು ಬೇಡೆಲೊ
ತುರುಕನಂತೆ ಕಾಮದ ತಲೆ ಬಡಿದು ಜೀವಿಸೊ
ಸಜ್ಜನಗಳು ಸಮ್ಮತಿಸುವ ಮಾರ್ಗದಲಿ ನಡಿ
ದುರ್ಜನಗಳು ಪೇಳಿ ತೋರಿದೆಲ್ಲವನು ಬಿಡಿ

ಫಲದ ಚಿಂತೆಯಿಲ್ಲದಂತೆ ಧರ್ಮಗಳಿಸಿರೊ
ಫಲವು ಹರಿಯಧೀನ ಕೆಲಸ ಮಾತ್ರ ನಿನ್ನದೊ
ಧ್ಯಾನ ಮಾಡದಿರಲೊ ಮನದಿ ದುಷ್ಟ ವಿಷಯದ
ಧ್ಯಾನದಿಂದ ವಿಷಯದಲ್ಲಿ ಸಂಗ ಬರುವುದೊ
ಸಂಗದಿಂದ ದುಷ್ಟಭೋಗ ಕಾಮ ಬರುವುದೊ
ಭಂಗವಾದ ಕಾಮದಿಂದ ಕೋಪ ಬರುವುದೊ
ಕೋಪದಿಂದ ಮನದಲಿ ವ್ಯಾಮೋಹ ಬರುವುದೊ
ಈ ಪರಿಮೋಹದಲಿ ಸ್ಮರಣೆ ನಾಶಪಡುವುದು
ಸ್ಮೃತಿಯು ತಪ್ಪಿದವನ ಬುದ್ಧಿಮೃತಿಯು ಪೊಂದಲು
ಕ್ಷಿತಿಯೊಳವಗೆ ಸರ್ವನಾಶವೆಂದು ನುಡಿಯಿದೆ

ಜ್ಞಾನಕೆ ಸಮ ಸಂಪತ್ತಿಲ್ಲ ಜನಕೆ ಲೋಕದಿ
ಮೌನಕೆ ಸಮ ಗುಹ್ಯಕೆ ಪಾಲಕರಿಲ್ಲವೊ
ಜ್ಞಾನ ಸರ್ವಕರ್ಮಗಳನು ದಹಿಸಿಬಿಡುವುದೊ
ಜ್ಞಾನದಿಂದ ಪರಮಶಾಂತಿ ಪಡೆಯುಬಹುದೆಲೊ
ಚಿರತನ ವರ್ಣಾಶ್ರಮಗಳ ಧರ್ಮ ಬಿಡದಿರೊ
ಪರರ ನೋಡಿ ವೇಷಗಳನು ಧರಿಸಬೇಡವೊ
ಮಿತಿಯ ಮೀರಿ ಭೋಜನವನು ಮಾಡಬೇಡವೊ
ಅತಿಯ ನಿದ್ರೆಯಲ್ಲಿ ಕಾಲ ಕಳೆಯಬೇಡವೊ
ಲೋಕವ ಭಯಪಡಿಸಬೇಡ ನಡೆನುಡಿಗಳಲಿ
ಲೋಕಕೆ ಭಯಪಡಲಿಬೇಡ ಧರ್ಮ ಪಥದಲಿ

ಶತುಮಿತ್ರರಲ್ಲಿ ಒಂದೆ ಭಾವ ಪಡೆಯೆಲೊ
ಸ್ತೋತ್ರ ನಿಂದೆಗಳಿಗೆ ಹಿಗ್ಗಿ ಕುಂದಬೇಡವೊ
ಭಕ್ತಜನರ ನಡೆನುಡಿಗಳ ನಿಂದಿಸದಿರೆಲೊ
ಯುಕ್ತರವರು ಹಿರಿಯ ದಯಕೆ ಪಾತ್ರರಿವರೊ
ಜಗವು ಸತ್ಯ ಬಗೆ ಬಗೆಯಲಿ ಸೊಗಸ ನೋಡೆಲೊ
ಜಗಕೆ ಕರ್ತನೋರ್ವಗೆ ಕೈ ಮುಗಿದು ಬೇಡೆಲೊ
ದೇಶಕಾಲ ಪಾತ್ರವರಿತು ದಾನ ಮಾಡೆಲೊ
ಆಸೆ ಮೋಸಗಳಿಗೆ ಮನವ ಲೇಸು ಕೊಡದಿರೊ
ಪರರ ಮನವು ಕೆದರದಂತೆ ನಿಜಹಿತ ನುಡಿಯು
ಗುರುತರ ವಾಚನಿಕ ತಪವ ಮರೆಯಬೇಡವೊ

ಸರ್ವಕರ್ಮ ಫಲಗಳನ್ನು ಬಿಡುವನೆ ಯತಿಯು
ಗರ್ವಮತ್ಸರಾದಿಗಳನು ಬಿಡುವುದೆ ಮತಿಯು
ಶರಣು ಹೊಡೆಯೊ ಕರುಣಮಯನ ಚರಣಯುಗಳದಿ
ಕರಗತವಾಗುವುದು ನಿನಗೆ ಇಹಪರ ಸುಖವು
ಮಮತೆ ಬಿಟ್ಟು ಜಗದಿ ತಗಲಿ ತಗಲದೆ ಇರೆಲೊ
ಕಮಲಪತ್ರಗಳಲಿ ಜಲದ ಕಣಗಳ ತೆರದಿ

ಶುದ್ಧ ಧರ್ಮಲೇಶವು ತಲೆ ಕಾಯಬಲ್ಲದೊ
ಪದ್ಮನಾಭ ಜನರ ಚಿತ್ತಶುದ್ಧಿ ನೋಡುವ
ನಾನೆ ಬ್ರಹ್ಮನೆಂಬ ವಾದ ಬಾಳಬಲ್ಲದೆ
ತಾನೆ ಬೀಳಲಿರುವ ಮರಕೆ ಕೊಡಲಿ ಏತಕೆ

ಜ್ಞಾನತೀರ್ಥಗಳಲಿ ಮುಳುಗಿ ಸ್ನಾನ ಮಾಡೆಲೊ
ಜ್ಞಾನಕೆ ಜ್ಯೋತಿಗಳ ಬೆಳಕು ಕಾಣುತಿರುವುದೊ
ದಾರುಣ ಸಂಸಾರ ಜಲದಿ ಪಾರುಗಾಣಲು
ಧೀರನಾಗಿ ಈಜುವವಗೆ ತಾರಣ ಸುಲಭ
ತಲೆಯ ಮೇಲೆ ಕೈಯನಿಟ್ಟು ಕೂಡ ಬೇಡವೊ
ಬೆಳಸಿದಂತೆ ತರುಲತೆಗಳು ಫಲಕೊಡುವುದೊ
ಮುಂದೆ ಇಟ್ಟ ಹೆಜ್ಜೆಗಳನು ಹಿಂದೆಗೆಯದಿರೊ
ಮಂದಿಗಳಿಗೆ ಫಲದಲಿ ಸಂದೇಹ ಬೇಡವೊ
ಹುಳಿಯ ರಕ್ತವಿರುವತನಕ ತಲೆಯು ಬಾಗದು
ಹಳೆಯದಾಗಿ ಬಗ್ಗಿದಾಗ ಕಾಲ ಸಾಲದೊ

ಪರರ ನುಡಿಗಳನ್ನು ಕದ್ದು ಕೇಳಬೇಡವೊ
ಅರಿತು ನಿನ್ನ ಹರಿಯು ಗುದ್ದಿ ಬುದ್ಧಿ ಕಲಿಸುವ
ಚಾಡಿಯಾಡ ಬೇಡ ಚಾಡಿ ಕೇಳಬೇಡವೊ
ಸೇಡನು ತೀರಿಸುವ ಹೇಡಿಯಾಗಬೇಡವೊ
ನಿನ್ನ ಮಾನದಂತೆ ಪರರ ಮಾನವೆಂದರಿಯೆಲೊ
ಅನ್ನ ಹಾಕುವವರ ಹರಿಸಿ ಧನ್ನವೆನಿಸೆಲೊ
ಕುಲವ ಶೋಧಿಸುತಲಿ ಕನ್ಯೆದಾನ ಮಾಡೆಲೊ
ತಲೆಯ ಕ್ರಾಪು ಯೋಗ್ಯತೆಗೆ ಪ್ರಮಾಣವಲ್ಲವೊ
ಒಲಿದು ಬಂದ ಕುಲದ ಕನ್ಯೆ ಕರವ ಪಿಡಿಯೆಲೊ
ಥಳಕು ಬೆಳಕು ನೋಡಿ ಬಲೆಗೆ ಬೀಳ ಬೇಡವೊ

ಗಾಳಿಯು ಬಂದಾಗ ಬೇಗ ತೂರಿ ಕೊಳ್ಳಲೊ
ಕಾಲದ ಸ್ಥಿತಿಯರಿತು ತಗ್ಗಿ ಬಗ್ಗಿ ನಡೆಯೆಲೊ
ಮೇಲಿನ ದರ್ಜೆಯಲಿ ನಡೆದು ಕೇಳಬೇಡವೊ
ನಾಲಗೆ ಚೆನ್ನಿರುವ ನರಗೆ ಜಗಳವಿಲ್ಲವೊ
ಇರುಳು ಕಂಡ ಬಾವಿಗೆ ನೀ ಉರುಳಬೇಡವೊ
ಶಕ್ತಿ ಇರುವ ಕಾಲದಲ್ಲಿ ಉತ್ತಮನೆನಿಸೊ
ಶಕ್ತಿಯಲ್ಲಿದಾಗ ಇದ್ದು ಸತ್ತ ಪ್ರಾಯವೊ
ಸ್ವೊತ್ತಮ ಜನರಲ್ಲಿ ನಿಯತ ಭಕ್ತಿ ಮಾಡೆಲೊ
ಭಕ್ತಿಯಿಲ್ಲದವಗೆ ಮುಕ್ತಿಯಿಲ್ಲ ಕಾಣಿರೊ ೧೧

ಪಾಪಿಯಾಗಬೇಡ ಇತರ ಜನರ ವಂಚಿಸಿ
ಕೋಪ ಮಾಡಬೇಡ ಕೊಟ್ಟ ಋಣವ ಕೇಳಲು
ಕೂಪ ಕೂರ್ಮದಂತೆ ಜಗವ ನೋಡಬೇಡವೊ
ರೂಪುರಂಗುಗಳಿಗೆ ಮನವ ಸೋಲಬೇಡವೊ
ಹಡೆದ ಮಕ್ಕಳುಗಳ ಕಾಲದಲ್ಲಿ ತಿದ್ದೆಲೊ
ಗಿಡದಲಿ ಬಗ್ಗಿಸದ ಮರವು ಬಗ್ಗಲಾರದೊ
ಕೊಡಲಿಯನ್ನು ಸೇರಿ ಮರದ ಕಾವಿನಂದದಿ
ನಡತೆ ಕಲಿಸದಿದ್ದರವರು ಬುಡಕೆ ತರುವರೊ
ಗಳಿಸಿದವನ ಧನವು ಬಳಸಿದವನಿಗೆಂದರಿಯೆಲೊ
ಬಳಸಲು ನೀತಿಯಲಿ ಧನವ ಗಳಿಸಿ ಸುಖಿಸೆಲೊ ೧೨

ಕಳಿಯಬೇಡಿ ಕಾಲವನ್ನು ಕುಳಿತೆಡೆಗಳಲಿ
ತಿಳಿದು ಮರ್ಮ ಕಲಿ ಪುರುಷನ ನೆಲಕೆ ತುಳಿಯಿರಿ
ಹೇಯ ಜನಕೆ ಗುಹ್ಯ ತತ್ವ ಪೇಳಬೇಡವೊ
ನಾಯಿಗಳಿಗೆ ಹವ್ಯದಾನ ಮಾಡಬೇಡವೊ
ಕಾಯುವ ಗುರುಚರಣವೆ ಬಲುಶ್ರೇಯವೆನ್ನದೆ
ಕಾಯ ಸುಟ್ಟರೇನು ಫಲವು ಕರ್ಮ ಸುಡುವುದೆ
ಉಣಲು ಬದುಕಬೇಡ ಜಗದಿ ಬದುಕಲು ಉಣೆಲೊ

ಜನನ ಮರಣ ನಿಯತ ಕಾಲಗಳಲಿ ಬರುವವೊ
ಕೊನೆ ಮೊದಲುಗಳಿಲ್ಲವು ಈ ಜಗಪ್ರವಾಹಕೆ
ತನಗೆ ತಾನೆ ಬೀಳದು ಜಗದಾಖ್ಯ ವೃಕ್ಷವು

ತಾಳಿದವನು ಬಾಳುವನೆಂದರಿತು ನಡೆಯೆಲೊ
ಗಾಳಿಗುದ್ದಿ ಕರಗಳನ್ನು ನೋಯಿಸದಿರೆಲೊ
ಬಾಲನೆಂದು ಅರಿತು ಸತತ ಜ್ಞಾನವ ಗಳಿಸೆಲೊ
ನಾಳೆಯ ದಿನ ನಂಬದಂತೆ ಧರ್ಮಗಳಿಸೆಲೊ
ಹರಿಯುಕೊಟ್ಟ ಕಾಲದಲ್ಲಿ ಪರರ ರಕ್ಷಿಸೊ
ಹರಿಯು ಕೊಡದ ಕಾಲದಲ್ಲಿ ಹರುಷ ಬಿಡದಿರೊ
ದೂಷಕರನು ಎಂದಿಗು ನೀ ದ್ವೇಷಿಸದಿರೆಲೊ
ಹೇಸಿಗೆಯನು ನಾಲಿಗೆಯಲಿ ತೆಗೆದುಬಿಡುವರೊ
ಹಳ್ಳಕೆ ಬಿದ್ದವನಮೇಲೆ ಕಲ್ಲೆಸೆಯದಿರೊ
ಟೊಳ್ಳು ಹರಟೆಗಾರನೆದರು ನಿಲ್ಲ ಬೇಡವೊ

ಒಳ್ಳೆಯ ಫಲಕೊಡುವ ಕಾರ್ಯಗಳು ಚಿಂತಿಸೊ
ಜಳ್ಳು ಹುಲ್ಲಿಗಾಗಿ ಬೆವರು ಸುರಿಸಬೇಡವೊ
ಬಿಂದು ಬಿಂದು ಸೇರಿ ಸಿಂಧುವಾಯಿತೊ
ಹಿಂದಿನ ಮೊಳೆಯಿಂದ ದೊಡ್ಡ ವೃಕ್ಷವಾಯಿತೊ
ಒಂದನು ಇನ್ನೊಂದು ಸೇರಿ ಕೋಟಿಯಾಯಿತೊ
ಮಂದಿಗಳಿದನರಿತು ಪುಣ್ಯರಾಶಿ ಗಳಿಸಿರೊ
ನೆರಳು ನೀರು ಕೊಟ್ಟ ಜನರ ಮರೆಯ ಬೇಡವೊ
ಸರಿಯುತಿರುವ ಮಾರಿ ಮಸಣಿ ಕರೆಯಬೇಡವೊ
ಅರಿಯದ ಅಜ್ಞಾನಿಯೊಡನೆ ಸರಸಬೇಡವೊ
ತರುಗು ತಿನ್ನುವವನ ಕೇಳಬೇಡ ಹಪ್ಪಳ

ದೇಹಿಯೆಂದು ಬಂದವನಿಗೆ ನಾಸ್ತಿಯೆನದಿರೊ
ಸಾಹಸವನು ಮಾಡದಿರೊ ಪ್ರಬಲ ಜನರಲಿ
ಮೋಹಕೆ ತುತ್ತಾಗದಿರೆಲೊ ಪರಸತಿಯರಲಿ
ದೇಹಕೆ ಬಲ ಶುದ್ಧಿ ಕೊಡುವ ನಿಯಮ ಬಿಡದಿರೊ
ಭಾಗ್ಯಹೀನ ಬಡವನೆಂದು ಜರಿಯಬೇಡವೊ
ಯೋಗ್ಯತೆಯನು ತಿಳಿಯಲು ಬಲು ಸುಲಭವಲ್ಲವೊ
ಶ್ಲಾಘ್ಯವಾದ ಮೂಲಿಕೆಗಳನರಿಯೆ ಸುಲಭವೆ
ಯೋಗ್ಯತೆಯನುಸರಿಸಿ ಬರುವ ಭಾಗ್ಯ ಬೇರಿದೆ
ಖ್ಯಾತಿಗಾಗಿ ಆತ್ಮಸ್ತುತಿಯ ಮಾಡಬೇಡವೊ
ಕೋತಿಯಂತೆ ಕುಣಿಯಬೇಡ ಸರಿಸಮರೊಳಗೆ ೧೬೦

ಮೂತಿ ತಿರುಗಬೇಡ ಪರರ ಹಿತನುಡಿಗಳಿಗೆ
ಸೋತ ಹಾಸ್ಯ ಮಾಡಬೇಡ ರಸಿಕ ಜನರಲಿ
ಹಿರಿಯರು ಸಂದೇಹಪಡುವ ಮಾರ್ಗ ತ್ಯಜಿಸೆಲೊ
ಬರಿಯ ಮಾತನಾಡಿ ಬೆನ್ನು ತಟ್ಟ ಬೇಡವೊ
ಪರರ ಹಳ್ಳಕ್ಕಿಳಿಸಿ ಆಳ ನೋಡಬೇಡವೊ
ಕರಕೆ ಸಿಕ್ಕಿದಾಗ ಹಲ್ಲು ಕಿರಿಯಬೇಡವೊ
ಮೆದೆಗೆ ಬೆಂಕಿಯಿಕ್ಕಿ ಅರಳು ಹುಡುಕಬೇಡವೊ
ಎದೆಯು ಒಡೆಯುವಂತೆ ಸುದ್ದಿ ಪೇಳಬೇಡವೊ
ಬೀದಿಯಲಿರುವ ಜನಗಳ ಬೇಸರಿಸಬೇಡವೊ
ಬೆದೆಯಲಿರುವ ದುರುಳನನ್ನು ಕೆಣಕಬೇಡವೊ ೧೭೦

ಊರು ಕುರಿಯ ಕಾದು ಗೌಡನೆನಿಸಬೇಡವೊ
ಭಾರಿಯ ಜಲ ಪ್ರವಾಹ ತಡೆಯ ಹೋಗಬೇಡವೊ
ದೂರು ತರುವ ಜನರ ಕ್ಷಣದಿ ನಂಬಬೇಡವೊ
ನಾರಿಯ ಸಾಹಸವ ನಂಬಿ ದುಡುಕಬೇಡವೊ
ಎರಡು ಕರವು ಸೇರದೆ ಚಪ್ಪಾಳೆಯಾಗದು
ಕುರುಡನು ತೋರಿಸುವುದೆಲ್ಲ ಮಾರ್ಗವಾಗದು

ಕರಡಿಯು ಮೈಯಪರಚಲದು ಸೌಖ್ಯವಾಗದು
ಗುರುಗಳ ಬಿಟ್ಟೋದಲು ಉಪದೇಶವಾಗದು
ಹರಿಯಭಕುತಿ ಹರಿಯದಿರಲು ಗಾನವಾಗದು
ಬರಿಯ ಸ್ವರಗಳುರುಳಿಸೆ ಕೀರ್ತನೆಯದಾಗದು

ಕರದಿ ತಟ್ಟೆ ಹೊಳೆಯುಂತಿರೆ ಪುರಾಣವಾಗದು
ಕಿರಿಯ ಜನರ ಗುಣಗಾನವು ಭಜನೆಯಾಗದು
ಅಕ್ಕಿಗಾಗಿ ಅಲೆವರೆಲ್ಲ ದಾಸರಾಗರು
ಬೆಕ್ಕಿನಂತೆ ಕಣ್ಣು ಮುಚ್ಚಿ ಯತಿಗಳಾಗರು
ಚಿಕ್ಕ ಜಿರಳೆ ಮೀಸೆಯಿರಲು ರಾಯರಾಗದು
ಚಿಕ್ಕ ಕೊಳೆಯ ಚೌಕ ಧರಿಸೆ ಮಡಿಯದಾಗದು
ಕದ್ದು ಅವಿತುಕೊಂಬರೆಲ್ಲ ಗರತಿಯಾಗರು
ಮದ್ದು ಮಾಟ ಮಾಡುವವರು ಸುದತಿಯಾಗರು
ಶುದ್ಧ ಧೈರ್ಯ ನಡತೆಯಿಂದ ನಿಂದ್ಯರಾಗರು
ಬುದ್ಧಿ ಬದುಕು ಹೇಳುವವರು ದ್ವೇಷಿಯಾಗರು

ರೀತಿ ನೀತಿಗಳನು ಪರಗೆ ಹೇಳಲು ಸುಲಭ
ಮಾತನಾಡಿದಂತೆ ಮಾಡಿ ತೋರುವರಿಹರೇ
ತಾತನ ಕಾಲದಲ್ಲಿ ನುಡಿದ ಮಾತಿದಲ್ಲವು
ಹೋತನ ಗಳಸ್ತನವಿದಲ್ಲ ಕೂತು ಕೇಳರಿ
ಗಾದೆಗಳನು ವೇದವೆಂದು ಪೇಳಲುಚಿತವು
ಮಾದರಿ ಅಣುಶಕ್ತಿಯಿಂದೆ ಗಾದೆ ಗಾದೆಗು
ಪರಮ ಭಾಗವತರ ಚರಿತೆಯೋದಿ ನೋಡಿರಿ
ಅರಿಯಬಹುದು ನುಡಿದ ನೀತಿಸಾರವೆಲ್ಲವ
ನಾಡುನುಡಿಗಳೆಂದು ಮರೆಯಬೇಡವೆಂದಿಗು
ಪಾಡಿದರೆ ಪ್ರಸನ್ನ ಹರಿಯು ನೀಡುವ ಫಲವ

೩೧೭

ಸೋಜಿಗದಲಿ ಜೀವಿಸುವರು ಸುಜನರು ಪ

ಈ ಜಗದಲಿ ದುಷ್ಟ ಗೋಜಿಗೆ ಸಿಲುಕದೆ ಅ.ಪ

ಪರರ ವಿಭವಗಳಿಗೆ ಕರಗಲರಿಯರಿವರು
ಕೊರೆಯುವ ಬಡತನಕುರಿಯಲರಿಯರು
ಹರಿ ಕರುಣದಿ ತಮಗೆ ಸಿರಿಯು ಬಂದೊದಗಲು
ಪರಿಪರಿ ವಿಧದಲಿ ಮೆರೆಯದೆ ದೈನ್ಯದಿ ೧

ಕೆಡುಕುತನಗಳನು ಅರಿಯರು ಈ ಜನ
ಬಡವರ ಸೌಖ್ಯಕೆ ದುಡಿವರು ಮುದದಲಿ
ಕಡುದುರುಳರು ನಿಂದೆ ನುಡಿಗಳಾಡುವರೆಂದು
ದುಡುಕದೆ ಅವರಲಿ ಕ್ಷಮೆಯ ತೋರುತ ಸದಾ ೨

ಪರರಿಗುಪಕೃತಿಯಲರಿಯರು ಮಿತಿಯನು
ಪರರಿಗುಪಕೃತಿಗೆ ಜರಿಯರು ಮತಿಯನು
ಶರಣ ಪ್ರಸನ್ನನ ಕರುಣವ ಪೊಂದಲು
ವರನೀತಿಗಳಲಿ ನಿರತರಾಗುತ ಸದಾ ೩

೩೧೮

ಹರಿಲೀಲೆ ಹರಿಲೀಲೆ ಪ

ಜಗದೊಳು ಸುಜನರು ಬಳಲುತಲಿರುವುದು ಅ.ಪ

ಉಚ್ಚಕುಲದಿ ಪುಟ್ಟಿ ಸ್ವಚ್ಛ ಜ್ಞಾನದಿಂದ
ಅಚ್ಯುತನಂಘ್ರಿಯ ಪೂಜಿಸುತಿರಲು

ತುಚ್ಛ ಜನರುಗಳು ಸ್ವೇಚ್ಛೆಯಿಂದಲಿ
ಹುಚ್ಚು ಹರಟೆಗಳ ಹರಟುವುದೆಲ್ಲವು ೧

ಪಂಡಿತರೆಲ್ಲ ಅಖಂಡ ಕಲೆಗಳಿಗೆ
ಮಂಡನರೆನಿಸಿ ಭೂಮಂಡಲದಿ
ಭಂಡಿ ಭಂಡಿ ಧನರಾಶಿಗಳಿರಲಾಗಿ
ಪಿಂಡಕ್ಕಿಲ್ಲದೆ ತಿರುಗುತಲಿರುವುದು ೨

ಮನವ ತೊರೆಯುತ ಕಾಮಿನಿಯರುಗಳು
ಗಾನವ ಮಾಡಲು ಆನಂದಿಪರು
ಜ್ಞಾನಿ ದಾಸರುಗಳು ಭಕುತಿಯಿಂದ ಹರಿ
ಗಾನವ ಮಾಡಲು ಮಾನಸದಿರುವುದು ೩

ಪನ್ನಗಶಯನನು ತನ್ನ ಭಕುತರಿಗೆ
ಹೆಣ್ಣು ಹೊನ್ನು ಮಣ್ಣಿನ ಆಸೆ
ಯನ್ನು ಬಿಡಿಸಿ ಅವರನ್ನು ಉದ್ಧರಿಸಿ ಪ್ರ
ಸನ್ನನಾಗುವೆ ನಾನೆನ್ನುತ ಪೇಳ್ವುದು ೪

೩೧೯

ಹುಚ್ಚು ಹೊಳೆಯ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಿದ್ದ ಎನ್ನ
ಅಚ್ಚಳಿಯದೆ ದಡಕೆ ತಂದಿತಚ್ಯುತನ ದಯ ೧

ಬಿಚ್ಚಿ ತೋರಲಾಗದೆನ್ನ ಅಚ್ಚರಿಯನು ದೇವ ನಿನ್ನ
ಮೆಚ್ಚುಗೆಯನು ಪಡೆವೆನೆಂದು ಸತ್ಯ ಮಾಡುವೆ ೨

ಅಷ್ಟದಾರಿದ್ರ್ಯ ಬರಲಿ ಕಷ್ಟ ರಾಶಿ ರಾಶಿ ಬರಲಿ
ಶ್ರೇಷ್ಟದ ಮಾನಸದ ಭಾಗ್ಯವಿತ್ತು ಪೊರೆಯಲೊ ೩

ವಿಷವ ಬಡಿಸುವರಿಗೆ ದಿವ್ಯ ರಸ ಕುಡಿಸುವಂತೆ ದೇವ
ಹಸನ ಬುದ್ಧಿಯಿತ್ತು ಪೊರೆಯೊ ಹೃಷಿಕೇಶನೆ ೪

ತ್ರಾಣವ ಕೊಡೊ ಮನಕೆ ದೇವ ಪ್ರಾಣಗಳನ್ನು ಚರಣದಲ್ಲಿ
ಕಾಣಿಕೆಯರ್ಪಿಸುವೆ ರಮಾಪ್ರಾಣನಾಥನೆ ೫

ಮದಕೆ ಕಿಚ್ಚನೊಟ್ಟಿ ಕ್ಷಣದಿ ಎದೆಗೆ ಕೆಚ್ಚನಿತ್ತು ಮುದದಿ
ಬದುಕಿನಲೇ ಮುಕುತಿ ಸೌಖ್ಯವಿತ್ತು ಪೊರೆಯೆಲೊ ೬

ಎನ್ನ ಚಿತ್ತ ರಾಜ್ಯದಲ್ಲಿ ಉನ್ನತ ಪೀಠದಲಿ ಕುಳಿತು
ನಿನ್ನ ವಿಭವ ತೋರುತಲಿ ಪ್ರಸನ್ನನಾಗೆಲೊ ೭

೩೨೦

ಹೊಟ್ಟೆಗೆ ಹಿಟ್ಟಿಲ್ಲ ನಿನ್ನಯ
ಜುಟ್ಟಿಗೆ ಮಲ್ಲಿಗೆಯು ಪ

ಉಟ್ಟಿರುವುದು ಶತಛಿದ್ರದ ವಸ್ತ್ರವು
ತೊಟ್ಟಿರುವುದು ಜರತಾರಿಯ ಅಂಗಿಯು ಅ.ಪ

ಮಾತೆಯ ಗರ್ಭದಲಿ ವಿಧ ವಿಧ
ಯಾತನೆಯನನುಭವಿಸಿ
ಭೂತಲದಲಿ ಮದಮತ್ಸರ ಲೋಭಕೆ
ಸೋತು ಮನವ ನಿರ್ಭೀತಿಯಿಂದಿರುವೆಯೊ ೧

ದಿನಗಳು ಕಳೆಯುತಿರೆ ಲೋಕದ
ಪ್ರಣಯವು ಹೆಚ್ಚುತಿದೆ
ತನಯ ತರುಣಿ ಮನೆ ಕನಕಗಳೆಲ್ಲವು
ಕನಸಿನ ತೆರದಲಿ ಕ್ಷಣಿಕವೆಂದರಿಯದೆ ೨

ಇದು ನನ್ನದೆಂಬ ಅನುಭವ
ಮಂಗನ ಹಿಗ್ಗಟೆಯು
ಇಂದಿರೆಯರಸನ ಪರಮ ಪ್ರಸನ್ನತೆ
ಪೊಂದಿದ ಪುರುಷನೆ ಜೀವನ್ಮುಕ್ತನು ೩

ತತ್ವಚಿಂತನೆ

೩೨೧

ಅರಿಯಲಳವೇ ಜ್ಞಾನಿಯ ಹೊರಗಿನ ಬಡರೂಪದಿ ಪ

ಧರೆಯು ಉದರದಿ ನೆಲಸಿಹ ಪರಿಪರಿ ವಿಧ
ಸಿರಿಯನು ಅರಿವುದು ಬಲುಸುಲಭವೆ ಅ.ಪ

ಹುಚ್ಚರಂದಿ ಕಾಂಬೋರು ಜನ ಮೆಚ್ಚಿಗೆಯನು ಬಯಸರು
ಅಚ್ಚರಿಯಲಿ ನಡೆವರು ಎಚ್ಚರಿಕೆಯ ಪೊಂದದಂತೆ ೧

ಒಡವೆ ವಸನಗಳೆಲ್ಲವ ಸಡಗರವನು ಅರಿಯರು
ಕಡು ಬಡತನ ಕ್ಲೇಶಕೆ ನಡುಗಲರಿಯರು ಸುಲಭದಿ ೨

ಮೇದಿನಿಯಲಿ ದಿನಗಳ ಮೋದದಿಂದಲಿ ಕಳೆವರು
ಮಾಧವನಲಿ ಭಕುತರು ಬೂದಿ ಮುಚ್ಚಿದ ಕೆಂಡದಂತೆ ೩

ಮರುಳು ಮೋಸವನರಿಯರು ಸರಳಮನದಲಿ ಇರುವರು
ಕೆರಳಿದ ಸುಮದಂದದಿ ತಿರುಳುಗಳನು ಸುಲಭದಿ ೪

ಭಕ್ತ ಪ್ರಸನ್ನನೊಳು ಆಸಕ್ತ ಸನ್ಮನ ಯುಕ್ತರು
ಯುಕ್ತಿ ಚತುರತೆಯರಿಯರು ಹುತ್ತದೊಳಿಹ ಸರ್ಪದಂತೆ ೫

೩೨೨

ಆಟವಾಡಬೇಕು ಒಳ್ಳೆ ಊಟಮಾಡಬೇಕು ಪ

ಆಟ ಬಲ್ಲ ಮಾನವನಿಗೆ ರೋಗದ
ಕಾಟವಿರದೆ ತಾ ಊಟ ಮಾಡುವನು ಅ.ಪ

ಪಂಡಿತರಾಗಿ ಅಖಂಡ ಕಲೆಗಳನು
ಚಂಡಿನಂತೆ ಕರತಲದಲಿ ಪಿಡಿಯುತ ೧

ಕಣ್ಣುಮುಚ್ಚಿ ಇಂದ್ರಿಯಗಳ ನಿಲ್ಲಿಸಿ
ಹೃನ್ಮಂದಿರದಲಿ ಹರಿಯನು ಹಿಡಿಯುವ ೨

ಈಶ ಜೀವ ಜಡರೆಂಬೊ ಮೂವರಲಿ
ಈಶನೇ ಹಾಸೆಂದರಿಯುತ ಮೂರೆಲೆ ೩

ಹಿಂದಿನ ದಿನ ಹರಿದಿನ ಮರುದಿನಗಳು
ಇಂದಿರೆಯರಸನ ಕೂಡಿ ಏಕಾದಶಿ ೪

ಸಿಕ್ಕಿದ ಸ್ಥಾನವು ದಕ್ಕದೆಂಬುದಕೆ
ಭಕ್ತ ಪ್ರಸನ್ನ ತೋರಿದ ಕೊಕ್ಕಿನ ೫

೩೨೩

ಆರಾಧನೆ ಪರಮಾನಂದ ಪ

ತಾರಾನಾಥ ಕುಲೋದ್ಭವ ಕೃಷ್ಣನ ಅ.ಪ

ಘೋರವು ಈ ಸಂಸಾರವೆನ್ನುವುದು
ದೂರಿನ ನುಡಿಯಿದು ಬಾಳುವಗೆ

ನೂರು ವರುಷಗಳ ಮೀರಿ ಜೀವಿಸಲು
ಕೋರಿಕೆ ಬರುವುದು ಧೀರ ಜನರಿಗೆ ೧

ನಿರ್ಮಲ ದೇಹವು ನಿರ್ಮಲ ಹೃದಯವು
ನಿರ್ಮಲ ನಡೆನುಡಿ ಕರ್ಮಗಳು
ಮರ್ಮಜ್ಞರ ಮಾರ್ಗಗಳಲಿ ಸ್ವೋಚಿತ
ಧರ್ಮಗಳಲಿ ವಿಶ್ವಾಸವಿರುವವರಿಗೆ ೨

ಅನ್ನವಿರುವವರಿಗೆ ತಿನ್ನಲಾಗದು
ತಿನ್ನಬಲ್ಲವರಿಗೆ ಅನ್ನವು ಸಿಗದು
ಘನ್ನ ಮಹಿಮನ ಪ್ರಸನ್ನತೆಯಿಂದಲಿ
ಅನ್ನ ಪಡೆದು ತಿನ್ನಲು ಬಲ್ಲವರಿಗೆ ೩

೩೨೪

ಇಂದಿರಾ ರಮಣ ಗೋವಿಂದನಾ
ಜ್ಞೆಯ ಪಡೆದು ಬಂದಿರುವ ದಾಸರಿವರು ಪ

ಇಂದು ಧರ್ಮದಿ ಹರಿಯ ಬಾಂಧವರ ಗೃಹ ಸ್ವರ್ಣ
ಮಂದಿರವಾಗುವುದೆಂದು ಸಂದೇಶ ಕಳಿಸಿರುವ ಅ.ಪ

ಸತ್ವ ರಜ ತಮ ಭೇದವಿಹುದು ದಾನಗಳಲ್ಲಿ
ಕರ್ತವ್ಯವೆಂದರಿತು ಭಕ್ತಿಯಿಂದ
ಉತ್ತಮೋತ್ತಮ ದೇಶ ಪಾತ್ರ ಕಾಲಗಳರಿತು
ಪ್ರತ್ಯುಪಕೃತಿಯ ಗಣಿಸದಿತ್ತ ದಾನವೇ ಶ್ರೇಷ್ಠ ೧

ಶ್ರಾವಣದ ಶನಿವಾರ ಶ್ರೀ ವ್ಯಾಸರಾಜರ
ದೇವ ಮಾಧವ ದೇಶಕಾಲ ಪಾತ್ರ

ಈ ವಿಧದ ಯೋಗವಿನ್ಯಾವ ಜನಗಳಿಗುಂಟು
ನೀವು ನೀಡುವ ದಾನ ಕಾವುದಾಪತ್ತಿನಲಿ ೨

ಒಂದು ಹಿಡಿಯವಲಕ್ಕಿ ತಂದಿತಾ ಬ್ರಾಹ್ಮಣಗೆ
ಎಂದೂ ಕೇಳದ ಸಕಲ ಸೌಭಾಗ್ಯವ
ಇಂದು ನೀಡಿರಿ ಮಿತ್ರ ಬಾಂಧವರೆ ದೇವಕಿಯ
ಕಂದನ ಪ್ರಸನ್ನತೆಯ ಬಂದು ಪಡೆಯಲಿಬಹುದು ೩

೩೨೫

ಏನಿದ್ದರೇನು ಈ ಮಾನವನಿಗೆ ಜಗದಲ್ಲಿ
ದಾನವಾಂತಕನ ಗುಣಜ್ಞಾನವನು ಪೊಂದದಲೆ ಪ

ಕಾನನದಿ ಬೆಳಗುತಿಹ ಬೆಳದಿಂಗಳಂದದಲಿ
ಜ್ಞಾನ ಹೀನನಿಗೆ ಈ ಮಾನವನ ಜನುಮ ಅ.ಪ

ದಾನ ಮಾಡಿದರೇನು ಧರ್ಮ ಮಾಡಿದರೇನು
ಸ್ನಾನ ಮಾಡಿದರೇನು ನದಿನದದಲಿ
ಜ್ಞಾನವಿಲ್ಲದ ಕರ್ಮಗಳ ರಚಿಸಲೇನುಂಟು
ವಾನರಗೆ ಕರದೊಳಿಹ ಮಣಿಗಳಿಂದೇನು ಫಲ ೧

ಯಾತ್ರೆ ಮಾಡಿದರೇನು ಕಾಶಿ ರಾಮೇಶ್ವರದ
ಕ್ಷೇತ್ರಗಳ ವಾಸದಿಂದೇನು ಫಲವು
ಚಿತ್ರ ಚರಿತನಲಿ ದೃಢಭಕುತಿಯನು ಪೊಂದದಿರೆ
ನೇತ್ರರಹಿತನಿಗುಂಟೆ ಚಿತ್ರಗಳ ಫಲವು ೨

ಹೊನ್ನಿನ ಮದದಿಂದ ಹೆಮ್ಮೆಗೋಸುಗ ಬಹಳ
ಅನ್ನಛತ್ರಗಳ ರಚಿಸಿದರೇನು ಫಲವು
ತನ್ನವರ ದೃಢಭಕುತಿಯನ್ನರಿವ ಸತತ ಪ್ರ
ಸನ್ನ ಹರಿದಾಸರಿಗೆ ಇನ್ನೇನು ಬೇಕು ೩

೩೨೬

ಏಳಲಾರದ ಘಟವೇ ನೀ ಬೆಟ್ಟ ಹತ್ತೋದು ದಿಟವೇ ಪ

ನಾಳಿನ ಬಾಳನು ಪೇಳಲಾಗದ ನೀ
ಮೇಲೆಯೋ ಜಂಭದ ಕೋಳಿಯೊ ಯೋಚಿಸು ೧

ನುಡಿದುದು ನಡೆಯದು ಪಿಡಿಯದು ನಿಲ್ಲದು
ತಡೆಯಲು ಸಾಧ್ಯವೆ ಕಡಲನು ಕರದಲಿ ೨

ತ್ರಾಣವಿದ್ದರೆ ಸದಾ ಕಾಣರೆ ಸುಖವನು
ಪ್ರಾಣ ಪ್ರಸನ್ನನು ಒಲಿಯುವ ತನಕ ೩

೩೨೭

ಕೊಟ್ಟ ಭಾಗ್ಯವೆ ಸಾಕೋ ಶ್ರೀ ಪ

ಕೃಷ್ಣನ ದಯಬೇಕೋ ದೇವ ಅ.ಪ

ಸಾಸಿರ ಬಂದರೆ ಶಾಂತಿಯೆಂದರಿತೆನೊ
ಸಾಸಿರ ಬಂದಿತು ಶಾಂತಿ ಕಾಣಲಿಲ್ಲ
ಸಾಸಿರ ಸಾಸಿರವೆಸು ಬಂದವೋ
ಕ್ಲೇಶವು ಏರಿತು ಮೋಸಹೋದೆನೊ ೧

ಗಾಳಿಯ ಗುದ್ದಿ ಕೈ ಕೀಲು ಮರಿಯಿತೊ
ಕೇಳುವುದಿಲ್ಲವೊ ನಾಳಿನ ಕೂಳನು
ಕಾಲಕಾಲಕೆ ಹುಲಿ ಹಾಲನು ತರುತಿಹ
ಬಾಲಗೋಪಾಲನ ಕೇಳಿ ಮೋಸಹೋದೆ ೨

ಬೇಡವೆನ್ನುವರಿಗೆ ನೀಡುವ ದೊರೆ ನೀ
ರೂಢಿಯ ಬಲ್ಲೆನೋ ಕಾಡುವುದಿಲ್ಲವೊ
ನೀಡಿದ ಭಾಗ್ಯವು ಕೇಡುತರದೆ ಕಾ
ಪಾಡಬೇಕೆಲೊ ಪ್ರೌಢ ಪ್ರಸನ್ನನೆ ೩

೩೨೮

ದಿನಗಳ ಕಳೆವುದೆ ಸಾಧನವು
ಶ್ರವಣ ಮನನ ನಿಧಿಧ್ಯಾಸನಗಳಲಿ ಪ

ಉದಯದಿ ಸ್ನಾನ ನದಿನದಗಳಲಿ
ಸದಮಲ ಹರಿಯ ಪಾದೋದಕ ಪಾನ
ಹೃದಯದಿ ಕೃಷ್ಣನ ಮೂರ್ತಿಯ ಧ್ಯಾನ
ವಿಧಿಯಲಿ ಜಪತಪ ಪ್ರವಚನಗಳಲಿ ೧

ಪ್ರೇಷ್ಟತಮರ ತಂತ್ರಸಾರದ ಕ್ರಮದಲಿ
ಅಷ್ಟಮಹಾ ಮಂತ್ರಗಳನು ಜಪಿಸಿ
ವೃಷ್ಣಿವರೇಣ್ಯನ ವೈಭವದಿಂದಲಿ
ತುಷ್ಟಿಗೊಳಿಸಿ ಬಲು ಶಿಷ್ಟರ ಸಂಘದಿ ೨

ತ್ರಿಭುವನ ಗುರುಗಳ ಶುಭಕರ ಶಾಸ್ತ್ರವ
ಪ್ರವಚನಗೈಯುತ ಪ್ರತಿಕ್ಷಣಗಳಲಿ
ವಿಬುಧ ಪ್ರಸನ್ನನ ಗುಣಗಳ ಸಜ್ಜನ
ಸಭೆಯಲಿ ಪಾಡುತ ನಿರ್ಭಯರಾಗಿ ೩

೩೨೯

ದೇಹವ ದಂಡಿಸಲೇಕೆ ಮನುಜ ಪ

ಶ್ರೀ ಹರಿನಾಮವ ಸ್ನೇಹದಿ ಭಜಿಸೆಲೊ ಅ.ಪ

ಭಕುತಿಯೆ ಸಾಧನ ಹರಿಯ ಪ್ರಸಾದಕೆ
ಮುಕುತಿಗೆ ಹರಿಯ ಪ್ರಸಾದವೆ ಸಾಧನ
ರುಕುಮಿಣೀರಮಣನು ಪೂರ್ಣ ಸ್ವರಮಣನು
ಭಕುತಿಗೆ ಸಜ್ಜನ ಸಂಘವೆ ಸಾಧನ ೧

ವಾದ ವಿವಾದವು ಆಗಿ ಮುಗಿಯಿತೊ
ಮೋದತೀರ್ಥರ ಮತ ಸಾಧನ ಕೈಪಿಡಿ
ಓದಿ ನೀ ಸುಲಭದಿ ತತ್ವಗಳರಿಯುತ
ಮಾಧವನಂಘ್ರಿಯ ಹರುಷದಿ ಭಜಿಸೆಲೊ ೨

ಹೃದಯವು ನಿರ್ಮಲವಾಗುವ ತನಕ
ಮದ ಮತ್ಸರಗಳ ಸದೆ ಬಡಿಯುತಲಿ
ಎದೆಯಗೆಡದೆ ಸದಾ ಹರಿಯ ಭಜಿಸೆಲೊ
ಸದಮಲಗುಣನು ಪ್ರಸನ್ನನಾಗುವನು ೩

೩೩೦

ನಾಟಕವಿದು ಹಳೆ ನಾಟಕ
ನೋಟಕೆ ಇದು ಬಲು ನೂತನ ಪ

ನಾಟಕ ಮಂದಿರ ಜಗವೆಲ್ಲ ಕಂಡಿರ
ನೋಟವು ಯಾರದೊ ಆಟವು ಯಾರದೊ ಅ.ಪ

ಇರುಳೊಳು ರಾಜಾಧಿರಾಜನಿವ
ಹಗಲಲಿ ಭಿಕ್ಷಕೆ ಹಾಜರಿವ
ಮುಗಿವುದು ಎನ್ನಯ ಪಾತ್ರವೆನ್ನುವುದೆ
ಹಗಲಿನತನಕವು ಕಾಣನಿವ ೧

ಯುದ್ಧವು ದಿನವೊ ಈ ನಾಟಕದಿ
ಗೆದ್ದವರೊಬ್ಬರ ತೋರಿಸಿ
ಯುದ್ಧದಗೋಚಿಗೆ ಹೋಗದೆ ಶಾಂತಿಯೊ
ಳಿದ್ದ ಜನರೆ ಗೆದ್ದವರಿಲ್ಲಿ ೨

ಕಲಿಪುರುಷನ ದೊಡ್ಡ ಸಭೆಯಲ್ಲಿ
ಕುಳಿತು ಮಾತಾಡುವರಾರು ಜನ
ಕಳುಹಿಸಲೊಬ್ಬನು ಇಳೆಯೊಳಗೊಬ್ಬರ
ಉಳಿಸದೆ ಗೆಲುವೆನು ನೋಡು ಪ್ರಭು ೩

ಶೌರ್ಯ ಸಾಹಸ ಕಾಪಟ್ಯಗಳಾ
ಶ್ಚರ್ಯವು ಒಂದೊಂದು ದೃಶ್ಯದಲೂ
ಯಾರ್ಯರೆಂಬುದ ಕಾಣದೆ ವೇಷದ
ಮರ್ಯಾದೆಯು ವರ್ಣಿಪುದೆಂತು ೪

ಕುಣಿವರು ಒಂದೆಡೆ ದಣಿವರು ಒಂದೆಡೆ
ಕೊನೆ ಮೊದಲಿಲ್ಲವೀ ನಾಟಕಕೆ
ಪ್ರಣಯಹನನ ದೃಶ್ಯಗಳನು ಒಂದೇ
ಕ್ಷಣದಲಿ ತೋರುವ ಅಸದೃಶ್ಯದ ೫

ಹೊಸ ಹೊಸ ದೃಶ್ಯವು ಹೊಸ ಹೊಸ ಪಾತ್ರವು
ಮಸಿಯಲ್ಲವು ಈ ನಾಟಕವು
ಶಶಿಕುಲದರಸ ಪ್ರಸನ್ನನಾಗಿ ತಾ
ಮುಸಿ ಮುಸಿ ನಗುತಲಿ ನೋಡುತಿಹ ೬

೩೩೧

ಪರಲೋಕವಿಲ್ಲೆಂಬೊ ಪರಮ ಪಾಪಿಗಳಿಗೆ
ನರಲೋಕವೇ ನರಕವಣ್ಣ ಪ

ಪರಲೋಕವಿಹುದೆಂದು ಗುರುಕರುಣವನು ಪಡೆದ
ಕುರುಬನದ ಅರಿತನಣ್ಣ ಅ.ಪ

ಈಶ ಜಡ ಜೀವರೆಂಬುವ ಭಿನ್ನ ತತ್ವಗಳು
ಈಶನೊಬ್ಬನೆ ಕರ್ತನಣ್ಣ
ಸಾಸಿರದಿ ಆಸೆ ಭಂಗಗಳ ಪೊಂದುತಲಿರಲು
ಮೀಸೆಯನೇತಕೆ ತಿರುವಬೇಕಣ್ಣ ೧

ಹರಿಯು ಪರನಲ್ಲದಿದ್ದರೆ ಸರ್ವಭುವನಗಳು
ಹರಿಯಧೀನದಲಿರುವುದೇಕೆ
ಹರಿಯಧೀನಲಿಲ್ಲದಿದ್ದರೀ ಜಗದೊಳಗೆ
ಕೊರತೆಯೇತಕೆ ಮಂದಿಗಳಿಗೆ ೨

ದೇವದತ್ತನು ಧನಿಕ ಪ್ರೇತದತ್ತನು ಬಡವ
ಯಾವ ಕಾರಣ ವಿಷಮಗತಿಗೆ
ಸಾವು ನೋವುಗಳ ಪ್ರತಿಕ್ಷಣಗಳಲಿ ನೋಡಿ ದೊರೆ
ಭಾವವಿರುವುದು ನ್ಯಾಯವೇ ೩

ಈಶನಿಲ್ಲೆಂಬುವರು ಹೇಸಲಾರರು ಪಾಪ
ರಾಶಿ ರಾಶಿಯ ಗಳಿಸಲು
ಆಶೆಬಡುಕರ ಜಗವ ನಾಶಮಾಡಲು ರಾಜ
ಶಾಸನಕೆ ಬುಡವೆಲ್ಲಿಯಣ್ಣ ೪

ಇದನು ಪಡೆದೆನು ಇಂದು ಇದನು ಪಡೆಯುವೆ ಮುಂದೆ
ಅಧಿಕ ಧನವನು ಗಳಿಸುವೆ
ಸದೆ ಬಡಿಯುವೆನು ಪರರನೆಂಬ ನುಡಿ ತಮಗುಣದ
ಬೆದೆಯಲಿರುವನು ನುಡಿವನು ೫

ಎಲ್ಲಿಂದ ಬಂದೆ ಹೋಗುವುದೆಲ್ಲಿಗೆಂಬುದನು
ಬಲ್ಲವಗೆ ಮುಕುತಿ ಇಲ್ಲೇ
ಒಳ್ಳೆ ಮನವನು ಪಡೆದು ಬಲ್ಲವರ ಸೇವೆಯಿಂ
ದೆಲ್ಲವನು ತಿಳಿಯಲಳವಣ್ಣ ೬

ಕಾಯವಾಚಾಮನಸದಿ ತಪವಗೈಯುತ ಶುದ್ಧ
ಭಾವವನು ಗಳಿಸಿರಣ್ಣ
ದೇವಗುರು ಪ್ರಾಜ್ಞ ಪೂಜನ ಲಾಭವಿದು ವಿನಯ
ಭಾವಕೆ ಪ್ರಸನ್ನರಿವರು ೭

೩೩೨

ಬೀಸಿದ ಗುಂಡಗೆ ಬುಕ್ಕಿದ್ದೇ ಲಾಭ ಬೇಸರವಿಲ್ಲದೆ ಪ

ವಾಸುಕಿಶಯನನ ಲೇಶವು ಭಜಿಸದೆ ಅ.ಪ

ಹಗಲು ಇರುಳು ವಿಷಯಗಳಲಿ ಮುಳುಗಿ
ಪೊಗಳದಿರಲು ಹರಿ ನಾಮವನು
ಜಗದೊಳೆನಗೆ ಸಮರಾರೆಂದೆನುತಲಿ
ಬೊಗಳಿ ನರಕಕ್ಕುರುಳುವೆನೆಂದರಿಯದೆ ೧

ಮೋಸದಿಂದ ಧನರಾಶಿಗಳಿಸಿ ಅತಿ
ಹೇಸಿಗೆ ಭೋಗಗಳಾಶಿಸುವ

ಈಶನಂತೆ ಬಲು ಮೆರೆಯುತ ಮದದಲಿ
ಶ್ರೀಶ ಸಹಾಯವ ಬಯಸದ ತನಕ ೨

ಗಂಗಾ ಶುಚಿಜಲ ದೊರಕುತಿರೆ ಹಲ
ವಂಗವ ನೀರನು ಬಯಸುವರೇ
ಮಂಗಳ ಕರ್ಮಗಳಾಚರಿಸದೆ ನೀ
ಮಂಗನಂದದಲಿ ಕುಣಿಯುವ ತನಕ ೩

ಕಂಗಳಿಲ್ಲದ ಕುರುಡನಿಗೆ ಬೆಳ
ದಿಂಗಳ ಸೌಖ್ಯವು ತೋರುವುದೆ
ರಂಗನ ಮಹಿಮೆಯನರಿಯದ ಮೂಢನು
ತಂಗಳು ಭೋಗವ ಬಯಸುವ ತನಕ ೪

ಕನ್ನಡಿಯೊಳಗಿನ ಗಂಟಿನಂತಿರುವುದು
ನಿನ್ನ ನಶ್ವರದ ಭೋಗಗಳು
ಇನ್ನಾದರು ನಿನ್ನ ಮೂಢತನವ ಬಿಟ್ಟು
ಸಂತತ ಭಜಿಸೋ ಪ್ರಸನ್ನ ಶ್ರೀಹರಿಯ ೫

೩೩೩

ಬೇಸಾಯ ಮಾಡಬೇಕು ಬೇಸಾಯ ಮಾಡಬೇಕು ಪ

ಹೃದಯವೆಂಬ ಕ್ಷೇತ್ರದಲಿ ಬೇಸಾಯ ಮಾಡಬೇಕು ಅ.ಪ

ಮಧ್ವಾಚಾರ್ಯರವರ ಗ್ರಂಥಗಳೆಂಬ ಸರೋವರ ತುಂಬಿಹುದು
ಬುದ್ಧಿ ಜಲವ ವರಗುರುಗಳೆಂಬ ತೂಬಿನಲಿ ತರಲಿಬೇಕು
ಶುದ್ಧ ಧರ್ಮದಾಚರಣೆಗಳೆಂಬ ನೇಗಿಲ ಪಿಡಿಬೇಕು
ಮುದ್ದೆಯಾದ ನೆಲ ಮೃದುವಾಗುವ ಪರಿ ನೆಲವನುಳಲಿಬೇಕು ೧

ತತ್ವಜಲವು ಹರಿದೋಡದ ಪರಿಯಲಿ ತೆವರಿ ಹಾಕಬೇಕು
ಸುತ್ತಲು ದುರ್ಜನ ನರಿಗಳ ತಡಿಯಲು ಬೇಲಿ ಹಾಕಬೇಕು
ಉತ್ತಮ ರೀತಿಯ ಭಕುತಿ ಪೈರುಗಳ ನಾಟಿ ಮಾಡಬೇಕು
ಮತ್ತೆ ಪೈರುಗಳು ಒಣಗದಂತೆ ಜಲವನು ಹಾಯಿಸುತಿರಬೇಕು ೨

ಬೆಳೆಯುವ ವಿಷಯದ ಅನುಭವದಾಸೆಯ ಕಳೆಯು ಕೀಳಬೇಕು
ಕೊಳೆವೆಯ ರೋಗಕೆ ಸಜ್ಜನ ಸಂಘದ ಔಷಧಿ ಕೊಡಬೇಕು
ಕಲಿಪುರುಷನ ತಲೆಯೆಂಬ ಗೊಬ್ಬರವ ತುಳಿಯುತಲಿರಬೇಕು
ಕುಳಿತೆಡೆಯಲಿ ವರಭಕುತ ಪ್ರಸನ್ನನು ಕೊಡುವ ಮುಕುತಿ ದವಸ ೩

೩೩೪

ಭಂಡನೆಂದು ಎನ್ನ ನೀ ತಿಳಿಯೋ ಅಖಿಲಾಂಡನಾಯಕ ಪ

ತಂಡ ತಂಡದಿ ಒದಗಿ ಬರುತಿಹ ಗಂಡ ಸಂತತಿ ನಾ
ಕಂಡು ಬೆದರುವ ಷಂಡನಲ್ಲವೊ
ಪುಂಡರೀಕ ಲೋಚನನೇ ದೊಡ್ಡ ೧

ಮಂದ ಮಾನವರಿಂದ ನುಡಿಸುವ ನಿಂದೆ ವಚನಗಳಿಂದ ಮನ
ನೊಂದರೂ ಗೋವಿಂದ ನಿನ್ನನು
ಬಂಧುವೆಂದು ನಂದದಿ ಪೊಗಳುವ ೨

ದ್ವೇಷಿ ಜನಗಳೂ ರೋಷದಿಂದಲಿ ಶೋಷಿಸಿದರೂ ನೀ ಕಮ
ಲೇಶ ಎನ್ನನು ಪೋಷಿಸುವನೆಂದು
ಘೋಷಿಸುವೆನೋ ಶೇಷಶಯನನೇ ೩

ಹೀನ ಮಾನವರಿಂದ ನೀ ಅವಮಾನ ನೀಡಿದರೂ ವರ
ಜಾನಕೀಶನೆ ನೀನು ಎನ್ನಯ
ಮಾನರಕ್ಷಕನೆಂದು ಅರಿಯುವ ೪

ಸಣ್ಣ ಮಾನವರಿಂದ ಎನ್ನಯ ಸಕಲ ವೈಭವವು ದೊಡ್ಡ
ಸೊನ್ನೆಯಾದರು ನಿನ್ನ ಪಾದಗ
ಳನ್ನು ಬಿಡೆನೊ ಪ್ರಸನ್ನ ಮೂರುತಿ ೫

೩೩೫

ಭಿಕ್ಷಾಂ ದೇಹಿಮೇ ಸ್ವಾಮಿನ್
ಕುಕ್ಷಿಯು ತುಂಬುವ ತೆರದಲಿ ಭಕ್ತಿಯ ಪ

ಭಿಕ್ಷೆಯ ಬೇಡಲು ಶಿಕ್ಷಿತನಲ್ಲವೊ
ಕುಕ್ಷಿಯು ಬರಿದಾಗಿಹುದು ಭಕ್ತಿಯ ಅ.ಪ

ಆರುಮಂದಿ ಶತ್ರುಗಳಿರುವರು ಬಲು
ಕ್ರೂರರಿವರು ಎನ್ನನು ಬಿಡರೊ
ದೂರ ಕಳುಹಲಾಹಾರವು ಸಾಲದು
ಚೂರು ಮಾಡುವೆನು ಕರುಣದಿ ಶಮ ದಮ ೧

ನಮ್ಮವರಿರುವರು ಹತ್ತುಮಂದಿಗಳು
ಸುಮ್ಮನಿರರು ಒಂದರಘಳಿಗೆ
ಸಮ್ಮತಿಗೊಡದಿರೆ ಬಳಲಿಸುವರು ಇವ
ರ್ಹಮ್ಮನು ಮುರಿಯುವೆ ವಿಷಯ ವಿರಕ್ತಿಯ ೨

ಕತ್ತಲೆಯಲಿ ಬಂದಿರುವೆನು ಹೊಟ್ಟೆಯು
ಹತ್ತಿ ಹೋಯಿತೊ ಹಸಿವಿನಲಿ
ಎತ್ತ ಸುತ್ತಿದರೂ ತುತ್ತನು ಕಾಣೆನೊ
ಭಕ್ತ ಪ್ರಸನ್ನ ದಯಾಜಲನಿಧೇ ಜ್ಞಾನ ೩

೩೩೬

ಭೋಗ ಬೇರಿಹುದಣ್ಣ ಭವ
ಭೋಗಗಳೆಲ್ಲವು ರೋಗಗಳಣ್ಣ
ಭೋಗವ ಪೊಂದುವ ಯೋಗವ ಮರೆಸುವ
ರೋಗಗಳಿಗೆ ಗುರಿಯಾಗದಿರಣ್ಣ ೧

ಬಗೆ ಬಗೆ ಭಕ್ಷಗಳ ಭೋಗವು
ಸೊಗಸೆಂದರಿಯದಿರು
ಹಗರಣದಲಿ ತನು ದುಗುಡಕೆ ಸಿಲುಕಲು
ಸೊಗಸುಗಳೆಲ್ಲವು ಹಗೆಯಾಗುವುವು ೨

ಅಂಗನೆಯರ ಸರಸ ಎಳೆಯ ಭು
ಜಂಗನ ಸಹವಾಸ
ಅಂಗಗಳಲಿ ಬಲ ಸಡಲಲು ನಿನ್ನಯ
ಹಂಗಿಲ್ಲದೆ ಮಾನಭಂಗ ಮಾಡುವರು ೩

ಉಡಿಗೆ ತೊಡುಗೆ ಯೋಗ ಜಗದಲಿ
ಹುಡುಗುತನದ ಭೋಗ
ಗಿಡಗ ಗಿಳಿಮರಿಯನೊಯ್ಯುವ ತೆರದಲಿ
ಪಿಡಿಯಲು ದೂತರು ತಡೆ ಮಾಡುವರೇ ೪

ಪ್ರಕೃತಿಯೊಳ್ ಸಿಲುಕಿರಲು ಭೋಗಕೆ
ಶಕುತಿ ಸಾಲದಣ್ಣ
ಭಕುತ ಪ್ರಸನ್ನನು ಭಕುತಿಯೆಂಬೊ ನಿನ್ನ
ಯುಕುತಿಗೆ ನೀಡುವ ಮುಕುತಿಯೆಂಬ ದಿವ್ಯ ೫

೩೩೭

ಸತತ ಹರಿಯ ನಾಮವನ್ನು ಯತುನದಿಂದ ನುಡಿವ ನರನು ಪ

ಅತಿತ್ವರೆಯಲಿ ಸರ್ವಕಾರ್ಯ ಸಿದ್ಧಿಪೊಂದುವ ಅ.ಪ

ದುರ್ಗಮಾರ್ಗ ಪಿಡಿದು ಕುರುಕ್ಷೇತ್ರ ಪಯಣವೇಕೆ ಜಿಹ್ವ
ಯಗ್ರದಲ್ಲಿ ಹರಿಯನಾಮವಿರುವ ನರನಿಗೆ ೧

ಮೂರು ಲೋಕಗಳಲಿ ಇರುವ ಹೇರು ಪುಣ್ಯಲಾಭ ಒಂದು
ಸಾರಿ ಹರಿಯನಾಮದಿಂದ ಸಾಧ್ಯವಿರುವುದು ೨

ಉಚ್ಚರಿಸಲು ಹರಿ ಎಂದೆರಡು ಅಕ್ಷರಗಳ ನರನು ಕ್ಷಣದಿ
ಮೋಕ್ಷ ಪಾಥೇಯವನ್ನು ಸಿದ್ಧಗೊಳಿಸುವ ೩

ಹರಿಯನಾಮ ಒಂದೇ ಎನಗೆ ಸರ್ವವಿಧದ ಜೀವನವು
ಹರಿಯನಾಮ ಹೊರತು ಕಲಿಯೊಳರಿಯೆ ಗತಿಯನು ೪

ಹರಿಯೇ ಗಂಗಾ ಹರಿಯೇ ಗಯಾ ಹರಿಯೇ ಕಾಶಿ ಸೇತು ಪುಷ್ಕರ
ಹರಿಯ ನಾಮ ಜಿಹ್ವೆಯಲ್ಲಿ ಇರುವ ನರನಿಗೆ ೫

ನೂಕಿ ಕಾಮಕ್ರೋಧಗಳನು ಏಕವಾರ ಹರಿಯೆಂದೆನಲು
ನಾಕುವೇದಗಳನು ಓದಲೇಕೆ ಮನುಜನು ೬

ಅಶ್ವಮೇಧ ಪುರುಷಮೇಧ ಯಜ್ಞಫಲವು ಲಬ್ಧವಿಹುದು
ವಿಶ್ವಾಸದಿ ಹರಿಯನಾಮ ನುಡಿದ ನರನಿಗೆ ೭

ಕೋಟಿ ಶತ ಗೋದಾನ ಕನ್ಯಾಭೂಮಿ ದಶಶತಕಗಳ ದಾನ
ಸಾಟಿ ಹರಿಯನಾಮ ನುಡಿಯು ಭಕ್ತಜನರಿಗೆ ೮

ಸಪ್ತ ಕೋಟಿ ಮಹಾಮಂತ್ರ ಚಿತ್ತ ವಿಭ್ರಮ ಕಾರಕಗಳು
ಯುಕ್ತಿಯೊಂದೇ ಹರಿಯನಾಮದಕ್ಷರದ್ವಯ ೯

ಮುನ್ನ ವರ ಪ್ರಹ್ಲಾದ ನುಡಿದ ಘನ್ನನಾಮ ಪಠನದಿಂದ ಪ್ರ
ಸನ್ನ ಹರಿಯು ತನ್ನ ಪದವನೀವ ಮುದದಲಿ ೧೦

೩೩೮

ಸಾರ್ಥಕವು ವರ ವೈಷ್ಣವ ಜನುಮವು ಸಾರ್ಥಕವು ಪ

ಸಾರ್ಥಕವಿದು ಪುರುಷಾರ್ಥಕೆ ಸಾಧನ ಅ.ಪ

ಸ್ವಾಮಿದಾಸ ಭಾವವನು ನಿರಂತರ
ನಿಯಮದಿಂದ ಬೋಧಿಸುತಿರುವ
ಕಾಮಕ್ರೋಧಗಳ ಜರಿದು ಶ್ರೀ ಹರಿಯಲಿ
ಪ್ರೇಮವೇ ಪರಮ ಸಾಧನವೆಂದರಿತರೆ ೧

ದಾನ ಸ್ನಾನ ಜಪ ಸಂಧ್ಯಾಕ್ರಿಯಗಳು
ಜ್ಞಾನಕೆ ಸಾಧನವೆಂಬುದರಿಯುತ
ಕಾಣಲು ಹರಿಯನು ಹೃದಯಾಂಬರದಲಿ
ನಾನಾ ಜನುಮದ ಕರ್ಮ ಸವೆಯುತಿರೆ ೨

ವಿಶ್ವ ಜನನ ಸ್ಥಿತಿ ಪ್ರಳಯಗಳಿಗೆ ಸದಾ
ಈಶ್ವರ ತಾನು ಪ್ರಸನ್ನನಾಗಲು
ಶಾಶ್ವತವಾದ ಸ್ವರೂಪಾನಂದವ
ಸ್ವಪ್ನಯೋಗ್ಯ ರೀತಿಯಲಿ ಪಡೆಯುವುದೇ ೩

೩೩೯

ಸ್ವಾಂತವ ತೊಳೆಯುತಲಿರಬೇಕು
ಶಾಂತಿನಿಕೇತನವಾಗುವ ತನಕ ಪ

ಶಾಂತ ಮೂರುತಿ ಶ್ರೀಶಾಂತನು ತನ್ನ ಏ
ಕಾಂತ ಮಂದಿರವೆಂದೊಪ್ಪುವ ತನಕ ಅ.ಪ

ಕಾಮ ಕ್ರೋಧವೆಂಬೊ ಕಸಗಳನು
ನೇಮದಿಂದ ಗುಡಿಸುತಲಿರಬೇಕು
ಪ್ರೇಮಜಲದ ಸೇಚನೆ ಮಾಡಿ ಹರಿ
ನಾಮಸ್ಮರಣೆ ಧೂಪವ ಕೊಡಬೇಕು ೧

ಕಲಿಪುರುಷನ ಓಡಿಸಬೇಕು
ತಿಳಿಯ ವೈರಾಗ್ಯ ಭಕ್ತಿಗಳೆಂಬ
ತಳಿರು ತೋರಣವ ಕಟ್ಟಲಿಬೇಕು
ನಳಿನನಾಭನ ಮನ ಸೆಳೆಯುವ ತೆರದಿ ೨

ಕಾಣಲು ಪರಮತತ್ವದ ದಿವ್ಯ
ಜ್ಞಾನದ ಜ್ಯೋತಿಯ ಮುಡಿಸಲಿ ಬೇಕು
ಜ್ಞಾನ ಸುಖಾದಿ ಸದ್ಗುಣ ನಿಧಿಯು
ತಾನೆ ಪ್ರಸನ್ನನಾಗುತ ನೆಲೆಸುವ ಪರಿ ೩

೩೪೦

ಹಗಲು ಸಮಯದಲಿ ಇರುಳು ನೋಡಿದ ಬಾವಿ
ಗುರುಳಬಹುದೇ ನರರು ಈ ಜಗದೊಳು ಪ

ಮರುಳು ಮಾಡುವ ಭವದುರುಳು ಬಂಧನದೊಳು
ಸಿಗಲು ಬಯಸಬಹುದೇ ಅವಿವೇಕದಿ ಅ.ಪ

ಅಡಿ ಐದು ಉದ್ದದ ಒಡಕು ಒಂಭತ್ತಿನ
ಕಡು ದುಃಖ ದೇಹಕೆ ಸಿಡಿವುದು ತರವೆ
ಪೊಡವೀಶನಾದರೂ ಮಡಿಯಲು ನಿನ್ನಯ
ಸಡಗರವೆಲ್ಲವು ಹಿಡಿಯೊಳಗಲ್ಲವೇ ೧

ಅನುದಿನದಲಿ ನೀನು ಹಣ ಹಣವೆನ್ನುತ
ಕುಣಿಯುವುದನು ನೋಡಿ ಅಣಕಿಸುವರು ನಿನ್ನ
ತನುಮನ ಕ್ಲೇಶವನನುಭವಿಸುತ ಸದಾ
ಹಣವಗಳಿಸಲದನುಣುವರು ಬೇರಿಹರು ೨

ಗೃಹಿಣಿ ಗೃಹಿಗಳೆಲ್ಲ ಕುಹಕವೆಂದರಿಯದೆ
ಗೃಹವು ಎನ್ನದು ಎಂದು ಗೃಹಿಣಿ ಎನ್ನವಳೆಂದು
ಬಹುವಿಧ ವೈಭವವೆನಗಿಹುದೆನ್ನುವ
ಮಹದಾಗ್ರವನ್ನು ಸಹಿಸುವನೇ ಹರಿ ೩

ಕಂತೆ ಕಂತೆಯ ಸಿರಿ ಸಂತತ ಗಳಿಸಲು
ಅಂತಕ ತನುವನು ಸೆಳೆಯಲು ಗಳಿಸಿದ
ಕಂತೆಗಳೆಲ್ಲವೂ ಎಂತು ನಿಲ್ಲಿಸುವುವು
ಚಿಂತಿಸಿ ಮನದೊಳು ಹರಿಯನು ನಿಲಿಸೊ ೪

ಊಹಿಸುತೆಲ್ಲವ ಈ ಮಹಿಯೊಳಗಿನ
ಮೋಹವ ಜರಿಯುತ ಪಾಹಿ ಎಂದು
ಆ ಮಹಾಮಹಿಮ ಪ್ರಸನ್ನ ಹರಿಯ ದಿವ್ಯ
ಸ್ನೇಹಸುಜಲದ ಪ್ರವಾಹದೊಳಗೆ ನಲಿಯೊ ೫

ಕಥನಾತ್ಮಕ ಹಾಡುಗಳು

೩೪೧

ಎಂಥ ಹಾಸ್ಯಕೆ ಸಿಲುಕಿದೆನು ಶ್ರೀ
ಕಾಂತ ಮಾಡಿದ ಮೋಸಕೆ ಪ

ಸಂತತವು ನೀ ಭಾಮೆ ಎನ್ನ ಏ
ಕಾಂತ ಪ್ರಿಯಳೆಂದುದು ಪುಸಿ ಅ.ಪ

ಮೋಸಗಾರನ ಆ ಸೊಬಗುಗಳಿ
ಗಾಸೆ ಪೊಂದಿದ ಪಸುಳೆಯ
ಆಸೆ ಭಂಗದ ಕ್ಲೇಶವನು ಜಗ
ದೀಶನೊಬ್ಬನೆ ಬಲ್ಲನು
ಭಾಮೆ ಬಿಡೆಲೆ ನಿನ್ನ ಈ ಮನಕ್ಲೇಶವ
ಪ್ರೇಮವ ತೋರೆಲೆ ಕಾಮಿನಿ ಮಣಿಯೆ ೧

ಬಲ್ಲೆನೊ ಕೃಷ್ಣ ಈ ಚೆಲ್ಲಾಟವನು
ವಲ್ಲಭೆ ರುಕ್ಮಿಣಿಯಲ್ಲಿ ಸಲ್ಲಿಸೆಲೋ
ತೋರಲು ಪ್ರೇಮವ ನೀನಲ್ಲದೆ ಇ
ನ್ನ್ಯಾರಿರುವರೆ ಈ ಮೂರು ಜಗಗಳಲಿ ೨

ರೈವತಗಿರಿಯಲಿ ಯಾವಳ ಕೂಡಿ ನೀ
ಠೀವಿ ತೋರಿದೆಯೊ ಸೇವಿಸು ಆಕೆಯ
ಅರಿತೆನು ನಿನ್ನಯ ಕೊರತೆಗಳೆಲ್ಲವ
ಅರುಹುವೆ ಕ್ಷಣದಲಿ ಸರಸಿಜಲೋಚನೆ ೩

ಧನ್ಯಳಾದೆ ಕೃಷ್ಣ ಎನ್ನಯ
ಮಾನ್ಯವಚನ ಕೇಳಿ ಮುರಳೀಧರ
ಎನ್ನ ಮೂಢ ನುಡಿಯ ಕ್ಷಮಿಸಿ ಪ್ರ
ಸನ್ನನಾಗು ಯಾದವ ಕುಲಭೂಷಣ
ಪಾರಿಜಾತ ಕುಸುಮ ಗೃಹದಲಿ
ಸೂರೆಗೈವ ಮುದದಿ ನಿನ್ನಯ
ಭೂರಿ ಕರುಣದಿಂದ ಜಗದಲಿ
ಧೀರ ಸತಿಯು ನಾನಾಗುವೆ ಮಾಧವ ೪

(ಕೃಷ್ಣ ಪಾರಿಜಾತದಲ್ಲಿ ಬರುವ ಭಾಮೆಯ
ಕೋಪ, ಕೃಷ್ಣ ಸತ್ಯ ಭಾಮೆಯರ ಸಂವಾದ)

೩೪೨

ನಿಲ್ಲು ನಿಲ್ಲು ಕೃಷ್ಣ ನಿನ್ನ ಸೊಲ್ಲ ಮುರಿಯ ಬಂದೆವು
ಸೊಲ್ಲ ಮುರಿಯ ಬಂದೆವು ಈ ಕಳ್ಳತನವ ಸಹಿಸೆವು ೧

ದಿಕ್ಕು ರಕ್ಷಿಪರಿಗೆ ದಿಕ್ಕು ಕಾಣದಂತೆ ಇರುವುದು
ಸೊಕ್ಕು ಮುರಿದು ನಿಮ್ಮ ಕಾರ್ಯ ಧಿಕ್ಕರಿಸುವೆ ಕ್ಷಣದಲಿ ೨

ಈಡುಮಾಡಲೇಕೆ ಇಂಥ ಕೇಡಿಗೆ ಈ ಅಬಲೆಯ
ನೋಡಿ ಎಮ್ಮ ಅವಿತುಕೊಂಡ ಹೇಡಿ ಇವನ ಬಿಡುವೆನೆ ೩

ಎಂಟು ಜನ ದಿಕ್ಪಾಲಕರು ಸೊಂಟ ಮುರಿವ ರಾಣಿಯ
ರೆಂಟು ಜನರ ಪಡೆದ ಶೌರಿ ತಂಟೆಗಾರು ಬರುವರು ೪

(ಸತ್ಯಭಾಮೆ ಮತ್ತು ದೇವೇಂದ್ರನ ವನಪಾಲಕರ ಸಂವಾದ)

೩೪೩

ನಿಲ್ಲಿಸೋ ತಲಹರಟೆಯ ಕಳ್ಳ ಕೃಷ್ಣ ಪ

ಕೊಲ್ಲುವೆ ನಿನ್ನನು ವಲ್ಲಭೆಯೊಡನೆ ಅ.ಪ

ಕಾಮಿನಿಯರ ಸಂಘದಲಿ ಕಾಲ ಕಳೆದ ನೀ
ಭೂಮಿ ಸುತನ ಕೆಣಕುತಿಹುದು ಕ್ಷೇಮವಲ್ಲವೊ
ಸೋಮಕುಲಕೆ ಕ್ಷಯ ಕೋರದಿರೊ ೧

ಗಾಳಿಗುದ್ದಲೇನುಫಲವು ಕಾಲ ಕಳೆಯಿತೊ
ಖೂಳ ನಿನ್ನ ಕಳಿಸುವೆ ಯಮನಾಲಯಕೆ ನಾ
ದಿಟ್ಟ ನರಕ ನೀನು ಕೆಟ್ಟೆಯೆಲ್ಲೊ
ಅಷ್ಟಮಹಿಷೀಪತಿ ಕೃಷ್ಣನ ಕೆಣಕಿ ೨

ಮೂರು ಜಗವ ಸೂರೆಗೈವ ಸಾರ್ವಭೌಮ ನಾ
ಜಾರ ಚೋರ ನೀನು ಬಂದ ದಾರಿಯ ಪಿಡಿಯೊ ೩

ಜಾರಚೋರನಾದರೆ ಹದಿನಾರು ಸಾವಿರ
ನೂರು ನಾರಿಯರಿಗೆ ಅರಸನಾಗದಿರುವೆನೆ ೪

(ಕೃಷ್ಣ ಮತ್ತು ನರಕಾಸುರರ ಸಂವಾದ)

೩೪೪

ನೋಡಿದೆನೊ ದೇವ ಪಾರಿಜಾತವ ಪ

ಆಡಿದನುಡಿಯನು ಉಳಿಸಿಕೊ ಮಾಧವ ಅ.ಪ

ಕೋರಿದ ಫಲಗಳ ಸೂರೆಯ ಮಾಡುವ ದಿವ್ಯ
ಪಾರಿಜಾತದ ಸೊಬಗಾರು ವರ್ಣಿಪರೊ ೧

ದ್ವಾರಾವತಿಗೊಯ್ದು ಸೇರಿಸಿ ಗೃಹವನು
ನಾರಿ ರುಕ್ಮಿಣಿಗಿದ ತೋರುವೆನೀಕ್ಷಣ ೨

(ಪಾರಿಜಾತ ವೃಕ್ಷ ನೋಡಿದ ಸತ್ಯಭಾಮೆಯ ಸಂತೋಷ)

೩೪೫

ಬಾರೆಲೆ ಭಾಮೆ ನೀ ಶೌರಿಯ ರಮಣಿ ಪ

ತೋರುವೆ ನಿನಗಮರಾವತಿ ಸೊಬಗ ಅ.ಪ

ಇಳೆಯೊಳು ವಾಸದ ಬೇಸರವ
ಕಳೆವುದು ಸುಲಭವು ಈ ಸ್ಥಳದಿ
ಗೆಳತಿ ಎನ್ನೊಡನಿರು ಕೆಲವು ದಿನ ೧

ಪೋಗಿ ಬರುವೆನೆ ಶಚಿದೇವಿ
ಬೇಗ ಬರುವೆನೆಂದಾಡಿರುವೆ
ದ್ವಾರಾವತಿಯ ವೈಭವ ನೋಡಿ
ಯಾರಿರುವರೆ ಇಲ್ಲಿ ಒಂದು ಕ್ಷಣ
ಕೋರದಿರೆನ್ನಯ ವಾಸವನು ೨

ಅಮರಾವತಿಯ ವೈಭವಗಳನು
ಸುಮನಸರಲ್ಲದೆ ಅರಿಯುವರೆ
ಕ್ಷಮಿಸು ಎನ್ನಯ ನುಡಿ ಪುಸಿಯಲ್ಲ ೩

ಭಾಗಿಗಳಿರುವರೆ ಭುವಿಯಲ್ಲಿ
ಭೋಗಗಳೆಣಿಕೆಗೆ ಬಾರದಲೆ
ಹೇಗೆ ಬಿಟ್ಟಿರುವುದು ನೀ ಪೇಳೆ ೪

(ಶಚಿದೇವಿ ಮತ್ತು ಸತ್ಯಭಾಮೆಯರ ಸಂವಾದ)

೩೪೬

ರಮಿಸುವ ನಂದನವನದಲಿ ಸುಖದಿ ಪ

ಸುಮನಸ ಸೇವಿತ ವಿಮಲ ವನದಲಿ ಅ.ಪ

ಮಂದ ಮಾರುತ ಸುಮಗಂಧ ಬೀರುತಲಿರೆ
ಸುಂದರವದನ ಗೋವಿಂದ ಸೊಗಸಿನಲಿ ೧

ವನರುಹ ನೇತ್ರಳೆ ಪರಮ ಪವಿತ್ರಳೆ
ಮನದಣಿಯುವ ಪರಿ ವನವಿಹಾರದಲಿ ೨

ಹೇಮವಸನನೆ ಕೋಮಲರೂಪನೆ
ಭಾಮೆಯಮೇಲೆ ಸುಪ್ರೇಮವ ಬೀರೆಲೊ ೩

ಭಾಸುರಾಂಗಿ ಪರಿಹಾಸ ಮಾಡದಿರು
ಬೇಸರವಾಗಿದೆ ರಾಸಕ್ರೀಡದಿ ೪

ಸಂಗೀತ ಪ್ರಿಯ ರಂಗನ ಒಡಗೂಡಿ
ಶೃಂಗಾರದಲಿ ಅನಂತ ಕೇಳಿಯಲಿ ೫

(ಇಂದ್ರನ ನಂದನವನದಲ್ಲಿ ಕೃಷ್ಣ ಸತ್ಯಭಾಮೆಯರ
ಸರಸ ಸಂಭಾಷಣೆ)

೩೪೭

ರಾರಾಜಿಸುತಿರು ದ್ವಾರಾವತಿಯಲಿ
ಪಾರಿಜಾತ ನಿನಗಾರತಿ ಬೆಳಗುವೆ ಪ

ನಾರದ ಶ್ರೀಹರಿಯಾರಾಧನೆಗೆಂದು
ತೋರಿದ ಭುವಿಯಲಿ ಸೇರಿದೆ ಎನ್ನನು ಅ.ಪ

ಮಂದರಗಿರಿಯನು ತಂದು ಮಥಿಸೆ ಕ್ಷೀರ
ಸಿಂಧುವಿನಲಿ ನೀನಂದು ಜನಿಸಿದೆ
ಇಂದ್ರನ ಸೊಬಗಿನ ನಂದನವನವ ಬಿಟ್ಟು
ಇಂದಿರಾರಮಣನ ಮಂದಿರದಲಿ ನೀ ೧

ಆಡಿದ ನುಡಿಯನು ಮಾಡಿದ ಕೃಷ್ಣನು
ಈಡ ನಾನರಿಯೆನು ನಾಥನ ಕರುಣಕೆ
ಬೇಡಿದ ವರಗಳ ನೀಡು ನೀ ಜನರಿಗೆ
ನೋಡುವೆ ಆಡುವೆ ಪಾಡುವೆ ಕುಣಿಯುವೆ ೨

(ಸತ್ಯಭಾಮೆಯಿಂದ ಪಾರಿಜಾತ ಪ್ರಶಂಸೆ)

೩೪೮

ವರ್ಣಿಸಲಳವೇ ಪ್ರಿಯವನದ ಸೊಬಗ ಪ

ಧನ್ಯನು ಶಚಿಪತಿ ಧನ್ಯಳು ಶಚಿಯು ಅ.ಪ

ಚಂದ್ರನು ತನ್ನಯ ಸುಂದರ ಬಿಂಬದಿ
ನಂದನ ವನದಲಾನಂದಪಡುತಿಹನು ೧

ಮಂದಮಾರುತ ಸುಮಗಂಧವ ಬೀರುತ
ಮಂದದಿಂದಲಿ ಸುಧೆ ಬಿಂದುಗಳೆಸವುದು ೨

ಮಣಿಮಯ ತರುಗಳು ಎಣಿಕೆಗೆ ಬಾರವು
ಕುಣಿಯುತಲಿದೆ ಎನ್ನ ಮನದಭಿಲಾಷೆಯು * ೩

(ನಂದನವನವನ್ನು ಕಂಡಾಗ ಸತ್ಯಭಾಮೆಯ ಸಂತೋಷ)

ಸಂಪ್ರದಾಯದ ಹಾಡುಗಳು

೩೪೯

ಒಪ್ಪಿಸುವೆವು ಮಗಳ ಸಂತೋಷದಿ ಪ

ತಪ್ಪಿ ನಡೆವುದಿಲ್ಲ ಸ್ವಪ್ನದಲೂ ನಿಮ್ಮ
ಅಪ್ಪಣೆ ಮೀರಳು ಸುಗುಣಶಾಲಿನಿಯು ಅ.ಪ

ಹರಿಗುರುಗಳ ಸೇವೆಯ ಬಲದಿಂದಲೆ
ಅರಗಿಣಿ ಜನಿಸಿದಳುದರದಲಿ

*(೩೪೧ ರಿಂದ ೩೪೮ ರ ವರೆಗಿನ ಹಾಡುಗಳಿಗೆ ಅಂಕಿತ ಇಲ್ಲ)

ಕರಗತವಾಗಲು ದೊರೆಯಿತು ಭಾಗ್ಯವೆಂ
ದರಿತೆವು ಕ್ಲೇಶವ ಮರೆತೆವು ಸುಲಭದಿ ೧

ಓದು ಬರಹಗಳ ಕಲಿತಳು ಬಾಲ್ಯದಿ
ಮಾದರಿ ಮಗಳೆಂದೆನಿಸಿದಳು
ಸಾಧು ಸ್ವಭಾವವು ಸ್ವಾದು ನುಡಿಯು ಸದಾ
ಸೋದರಿ ಭಾವದಿ ನೋಡಿದರೆಲ್ಲರು ೨

ಒಲೆಯ ಸಾರಿಸುವಳು ನೆಲವ ಗುಡಿಸುವಳು
ಕೆಲಸಗಳೆಲ್ಲವನರಿತಿಹಳು
ತಿಳಿಗನ್ನಡದಲಿ ದಾಸರ ಪದಗಳ
ಬಲುಮಧುರ ಧ್ವನಿಯಿಂದ ಪಾಡುವಳು ೩

ರೀತಿ ನೀತಿಗಳನರಿತಿರುವಳು ಬಲು
ಕೂತು ಕಾಲ ಕಳೆಯುವಳಲ್ಲ
ಮಾತಿಗೆ ಮರುಳಾಗುವ ಹೆಣ್ಣಲ್ಲವು
ಖ್ಯಾತಿಯ ತರುವಳು ನಿಮ್ಮ ಸಂಸಾರಕೆ ೪

ಒಡವೆ ವಸನಗಳ ಸಡಗರ ಬಯಸಳು
ಬಡಜನರನು ಕಂಡರೆ ಮರುಕ
ಒಡೆಯನ ಪ್ರೀತಿಯೆ ಒಡವೆ ವಸನಗಳೆಂ
ದಡಿಗಡಿಗೆಮ್ಮಲಿ ನುಡಿಯುತಲಿದ್ದಳು ೫

ಇಂಥದು ಬೇಕೆಂಬ ಚಿಂತೆಯನರಿಯಳು
ಸಂತತ ನಗುಮೊಗದರಗಿಣಿಯು
ಅಂತರಂಗ ಬಹಿರಂಗಗಳಲಿ ಬಲು
ಶಾಂತಿಯ ಜೀವನವನು ಬಯಸುವಳು ೬

ದಿಟದಲಿ ಪ್ರೇಮವು ಸಟೆಯಲಿ ದ್ವೇಷವು
ಹಟಮಾರಿಗಳನು ಗಮನಿಸಳು
ಕಟುವಚನಗಳನು ಆಡಳು ಎಂದಿಗು
ಎಟುಕದ ಕಾರ್ಯಕೆ ಯತ್ನವ ಮಾಡಳು ೭

ಮಿತಭಾಷಿಣಿಯಾದರು ಕಾರ್ಯದಲತಿ
ಚತುರಳು ಗೃಹಿಣಿಯ ಧರ್ಮದಲಿ
ಮಿತಿ ಮೀರಳು ನಿಮ್ಮ ಹಿತ ಬಯಸುವಳತಿ
ಮತಿವಂತಳು ಇದು ಸ್ತುತಿ ನುಡಿಯಲ್ಲವು ೮

ಎಮ್ಮಯ ಮಗಳನು ನಿಮ್ಮನೆಗೊಪ್ಪಿಸಿ
ಸಮ್ಮತಿ ಕೊಡಿರೆಂದು ಬೇಡುವೆವು
ಬ್ರಾಹ್ಮಣ ಗೋಷ್ಠಿಯೆ ಸಾಕ್ಷಿ ಇದಕೆ ಇನ್ನು
ನಿಮ್ಮ ನಮ್ಮ ಕುಲ ಉದ್ಧೃತವಾಗಲಿ ೯

ತಾಯಿ ಕರುವ ಕಾಣದೆ ಪರಿದಾಟವು
ತಾಯಿಯರೆಲ್ಲರ ಅನುಭವವು
ಬಾಯಿಬರದು ವರ್ಣಿಸಲೀ ಅನುಭವ
ನ್ಯಾಯವೊ ಮಾಯವೊ ಶ್ರೀಹರಿ ಬಲ್ಲನು ೧೦

ಕೊಟ್ಟ ಹೆಣ್ಣು ಕುಲ ಸೇರಿತು ಎನ್ನುವ
ಶಿಷ್ಟ ವಚನಗಳ ಅರಿತಿಹೆವು
ಶ್ರೇಷ್ಠ ಪ್ರಸನ್ನನ ಮೋಹ ಜಾಲದಿಂದ
ಇಷ್ಟು ವಚನಗಳು ಕ್ಷಮಿಸುವುದೆಮ್ಮನು ೧೧

೩೫೦

ಗಂಧವನರ್ಪಿಸುವೆ ರಮಣನಿಗೆ ಪ

ಇಂದಿರೆಯರಸನ ಗುಣಗಳ ಗಾನದಿ
ಸುಮಧುರವಾದ ಕಂಬುಕಂಧರಕೇ ದಿವ್ಯ ೧

ಸರಸಿಜನಾಭನ ಪೊಗಳುವ ಗ್ರಂಥವ
ನರಿಯಲು ಪಿಡಿದ ಶ್ರೀಕರ ಕರಯುಗಳಕೆ ೨

ಶೀತಲಕರಕುಲಜಾತನ ಸಂಗದಿ
ಪೂತ ಗಂಧವ ಮಮ ಪ್ರೀತಿ ಪ್ರಸನ್ನಗೆ ೩

೩೫೧

ಚಿಗುರೆಲೆಯಿದೆಂದು ನಾ ತಂದೆ ನಿನ್ನಯ ಮುಖದ
ಚಿಗುರು ನೋಡಲು ಕೊಡಲು ನಾಚುತಲಿಹೆ
ಕಮನೀಯ ನಿನ್ನ ಮುಖಕಮಲ ಸೊಬಗನು ನೋಡಿ
ಸಂಪಿಗೆಯ ಪುಷ್ಪವನರ್ಪಿಸೆ ನಿನ್ನ ನಾಸಿಕಾ
ಚಂಪಕವ ನೋಡಿ ಬಲು ನಾಚುತಲಿಹೆ
ಅಂದ ರದನದ ಪಂಕ್ತಿ ಸೊಗಸ ನೋಡುತ ಮನವು
ಕುಂದ ಪುಷ್ಪವ ಕೊಡಲು ನಾಚುತಲಿದೆ
ಸುಂದರವು ಸ್ಫಟಿಕ ಕುಸುಮಗಳೆಂದರಿತೆ ನಿನ್ನ
ಮಂದಹಾಸವ ನೋಡಿ ನಾಚುತಲಿಹೆ
ವರ್ಣದಲಿ ಶ್ರೇಷ್ಠದ ಗುಲಾಬಿ ತಂದಿಹೆ ನಿನ್ನ
ಅರುಣ ತುಟಿಗಳ ನೋಡಿ ನಾಚುತಲಿಹೆ
ಜಾತಿಜಾತಿಯ ಪುಷ್ಪ ಸೋತಿರುವುದು
ಕಾತರಾಗಿವೆ ಮನವು ಮೆಚ್ಚಿಸಲಿಕೆ
ಪ್ರೀತಿ ಸುಧೆಯೊಂದನರ್ಪಿಸುವೆ ಪ್ರಸನ್ನ

೩೫೨

ಜಂಭದಾ ನುಡಿಯಲ್ಲ ತುಂಬಿ ಬರುತಿಹ ಮನದ
ಸಂಭ್ರಮದ ವಚನವಿದು ಮೋಹನಾಂಗ
ಕಂಬಕಂಬಕೆ ಕರವ ಮುಗಿದು ಪ್ರಾರ್ಥನೆ ಮಾಡಿ
ಲಂಬಜಠರನ ಸೇರುವರು ಕೆಲವರು
ಧನವಿರಲು ಗುಣವಿಲ್ಲವೆಂಬ ನುಡಿಯನು ಮರೆತು
ಧನಲೋಭದಿಂದಲತಿ ಮನವ ಸೋತು
ಪ್ರಣಯರಸವರಿಯದಂತಹ ಕೋಡಗನ ಕೂಡಿ
ಮನನೋಯುವರು ಕೆಲರು ಮೌಢ್ಯದಿಂದ
ರಂಭೆ ನಾನಲ್ಲ ಕನಕಾಂಬರವ ಕೊಡಲಿಲ್ಲ
ಗಂಭೀರ ಸುಂದರನ ಸೇರಿದೆನು ನಾ
ಶರಧಿತನಯಳ ಪೂಜೆ ಮಾಡಿ ವರಪಡೆದು ನಾ
ಸುರಿಸುವೆನು ಕನಕ ವರ್ಷವ ಗೃಹದಲಿ
ರೂಪಲಾವಣ್ಯವತಿ ಕಾಂತಿ ಶಾಂತಿ
ನೀ ಪಿಡಿದೆ ನಿನ್ನ ಕರ ನಾ ಪಿಡೆದೆನು
ಶ್ರೀ ಪತಿಯು ಈ ಪರಿ ಪ್ರಸನ್ನನಿಹನು

೩೫೩

ಜಗಜಗಿಸುವ ಈ ಸೊಗಸಿನ ಪೀಠಕೆ
ನಗುನಗುತ ಬಾರೊ ದೇವ ಪ

ಗಗನರಾಯನಿಗೆ ಮಗಳೆಂದೆನಿಸಿದ
ಜಗಕೆ ಜನನಿ ಕೈಮುಗಿದು ಪ್ರಾರ್ಥಿಸುವಳು ಅ.ಪ

ಅಂಗನೆಯರು ಶ್ರವಣಂಗಳ ತುಂಬುವ
ಸಂಗೀತದ ಸಾರಂಗಳರ್ಪಿಸುವರೊ ೧

ನಾದಸ್ವರದ ಸೊಗಸಾದ ಧ್ವನಿಗಳಲಿ
ನಾದ ಬ್ರಹ್ಮನು ತಾ ಕಾದು ನೋಡುತಲಿಹ ೨

ಪರಿಮಳ ಪುಷ್ಪದ ಸುರಿಮಳೆ ನೋಟವು
ಸ್ಮರಣೆಗೆ ತರುವುದು ಸಿರಿಯ ವಿವಾಹವ ೩

ಭೂಸುರರೆಲ್ಲರು ಆಶೀರ್ವಚನವ
ಶ್ರೀಶ ನಿನ್ನಯ ಸಂತೋಷಕೆ ನುಡಿವರು ೪

ಸುಖ ಸಂತೋಷವು ಮುಖ ಮುಖದಲಿಹುದು
ತವ ಸುಖಾಗಮನದಿಂ ಲಕುಮೀ ಪ್ರಸನ್ನನೇ ೫

೩೫೪

ಜನುಮ ಜನುಮದ ಪುಣ್ಯರಾಶಿನಾಮಕ ಗಿರಿಯ
ಶೇಷಗಿರಿಯನು ಸೇರಿ ರಾಜಿಸುವುದು
ಈ ಪರಿಯ ವೈಭವವು ಗೋಪಾಲಕೃಷ್ಣನ ಕೃ
ಪಾಪಾಂಗ ವೀಕ್ಷಣದ ಪರಮಫಲವು
ರೂಪದಲಿ ಮನುಮಥ ರಮಾಪತಿಯ ಕರುಣವಿದು
ಕೋಪವಿಲ್ಲದ ಮಂದಹಾಸ ವದನ
ತಾ ಪಿಡಿದ ಕಾರ್ಯದಲಿ ಜಯಲಕುಮಿಯನು ಪಿಡಿದು
ರೂಪುಗೊಂಡಿಹ ದಿವ್ಯ ಕುಶಲಮತಿಯು
ತಾಪಸರ ಉಪದೇಶದಿಂದಲೀ ಪರಿ ದೋಷ
ಲೇಪವಿಲ್ಲದ ರೀತಿ ನೀತಿ ನಿಲಯ
ಎನ್ನ ಮನದಭಿಲಾಷೆ ಪೂರ್ಣವಾಯ್ತು
ನಿನ್ನ ಕರವನು ಪಿಡಿದು ಧನ್ಯಳಾದೆ
ಕನ್ಯೆ ವಚನಕೆ ಸಿರಿ ಪ್ರಸನ್ನನೇ ಸಾಕ್ಷಿ

೩೫೫

ಶುದ್ಧ ಕುಲದಲಿ ಜನಿಸಿದ ನಿನ್ನ ಕರಪಿಡಿದು
ಶುದ್ಧ ದಾಂಪತ್ಯ ಜೀವನದ ಸೊಬಗು
ಹೃದ್ಗತಾಯಿತು ಹೆಮ್ಮೆಯಿಂದ ನಾ ನುಡಿಯುವುದು
ಪದ್ಮನಾಭನ ಪರಮಕರುಣವಿಹುದು
ನೀ ನುಡಿದ ಎನ್ನ ಗುಣಗಾನ ಕೇಳಿದೆ ನಿನ್ನ
ಸಾನುರಾಗದ ಮನವನರಿತೆನಿಂದು
ಏನಿರಲಿ ಗುಣದೋಷ ಗುಣ ಮಾತ್ರವನು ಗ್ರಹಿಸಿ
ನೀನು ಸಂತಸದಲಿಹುದೆನಗೆ ಶುಭವು
ಕಾಮಜನಕನ ರಮಣಿ ಭಾಮೆ ಕನಸಿನಲಿ ನುಡಿದ
ಆ ಮಹಾ ನುಡಿಯು ಪುಸಿಯಾಗದೆಂದು
ಪ್ರೇಮಸುಧೆ ರಸಪೂರ್ಣವಾದ ಪುಷ್ಪಾದಿಗಳು
ನಾ ಮುದದಿ ಸವಿದು ಸಂತೋಷಪಡುವೆ
ಮೆಚ್ಚಿದೆನು ನಾನಿನ್ನ ವಿನಯಾದಿ ಗುಣಕೆ
ಹೆಚ್ಚು ನುಡಿಯುವುದೇಕೆ ಇದನು ಬಲ್ಲೆ
ಅಚ್ಯುತನು ಪ್ರಸನ್ನನಾಗುವನು ಎಮಗೆ

೩೫೬

ಶ್ರೀನಿವಾಸನೆ ನಿನ್ನ ಧ್ಯಾನದಲಿ ನಾನಿದ್ದೆ
ಏನು ಸುಕೃತವೊ ನಿನ್ನ ಕರವ ಪಿಡಿದೆ ಪ

ಭಾನುಶತತೇಜ ನಿನ್ನಾನನಾಬ್ಜದ ಮಧುವ
ಪಾನ ಮಾಡುತ ತೃಪ್ತಿ ಕಾಣದಿರುವೆ ಅ.ಪ

ಕಾಮನಂತಹ ರೂಪ ಸೋಮನಂತಹ ಕಾಂತಿ
ರಾಮನಂತಹ ಸತ್ಯ ಧರ್ಮ ನಡತೆ

ಈ ಮಹಾ ಸುಗುಣಶಾಲಿಯು ನೀನು ನಿನ್ನಯ
ಪ್ರೇಮವನು ಕಾಮಿಸುವ ಹಸುಳೆ ನಾನು ೧

ಗಂಧ ಫಲಪುಷ್ಪ ತಾಂಬೂಲಗಳನು
ಅಂದದ ಹೇಮದ ತಬಕದಲ್ಲಿ
ತಂದು ಕೊಡುವೆನು ಪ್ರೇಮ ಕಾಣಿಕೆಯನು
ಮಂದಹಾಸದಿ ನಿನ್ನ ಪಾಂಗದಿಂದ ನೋಡೋ ೨

ಒಂದು ದಿನ ಕನಸಿನಲಿ ಕಂಡೆನಚ್ಚರಿ ದೃಶ್ಯ
ಮುಂದೆ ನಿಂತಳು ಯುವತಿ ನಸುನಗುತಲಿ
ಗಂಧ ತಾಂಬೂಲ ಫಲಪುಷ್ಪ ಪರಿಮಳದ್ರವ್ಯ
ತಂದಿಹಳು ಚಿನ್ಮಯದ ತವಕದಲ್ಲಿ
ಕಂದನಿದ ನಿನಗಾಗಿ ತಂದಿರುವೆನೆಂದು ಮೃದು
ಮಂದಹಾಸದಿ ತಲೆಯ ಸವರಿ ನುಡಿಯೆ
ಸುಂದರಿಯೆ ನೀನಾರು ಬಂಧುವರ್ಗಗಳಲ್ಲಿ
ಹಿಂದೆ ನಾ ನೋಡಿಲ್ಲವೆಂದು ನುಡಿಯೆ
ನಂದಗೋಕುಲದಲ್ಲಿ ನಂದನಕುಮಾರನಿಗೆ
ಅಂದ ರಾಣಿಯು ನಾನು ಸತ್ಯಭಾಮೆ
ಇಂದ್ರದೇವನ ದಿವ್ಯ ನಂದನವನದಿಂದ
ತಂದಿರುವೆ ನಿನ್ನ ವರಕುಲವನರಿತು
ಸುಂದರಾಂಗನ ಸೇರಿ ಸುಖಪಡುವ ಸೌಭಾಗ್ಯ
ಮುಂದಿಹುದು ನಿನಗೆ ಬಲು ತ್ವರಿತದಲ್ಲಿ
ಅಂದು ನೀ ಈ ಸ್ವರ್ಣಮಯ ತವಕದಲ್ಲಿರುವ
ಗಂಧ ಪುಷ್ಪಾದಿಗಳ ಫಲವನರಿವೆ
ಚಂದದಲಿ ದಾಂಪತ್ಯ ಸುಖಶಾಂತಿ ಪಡೆಯುವೆ
ಕಂದ ನೀ ಸ್ವೀಕರಿಸು ಪೋಗಿ ಬರುವೆ
ಎಂದು ನುಡಿಯಲು ತರುಣಿ ಎಚ್ಚರಿತೆನು
ಬಂದುದಾಕ್ಷಣ ನಿನ್ನ ಶುಭ ಸುದ್ದಿಯು
ತಂದಿರುವೆ ತಬಕವ ಪ್ರಸನ್ನ ವದನ

೩೫೭

ಸೂರ್ಯಚಂದ್ರರು ಸಾಕ್ಷಿ ಆರ್ಯ ವಿಪ್ರರು
ಭಾರ್ಯೆಯರು ಸಾಕ್ಷಿ ನಾ ನುಡಿದ ನುಡಿಗೆ ಪ

ಕಾಯವಚನಗಳಲ್ಲಿ ಭೇದವಿಲ್ಲದೆ ನಡೆವ
ಧೈರ್ಯವಿಹುದೆನಗೆ ಮನಸ್ಥೈರ್ಯವಿಹುದು ೧

ಸಂಗೀತ ಚಾತುರ್ಯ ಶೃಂಗಾರಭಾವಗಳು
ಅಂಗವಲ್ಲವು ಶಾಂತ ದಾಂಪತ್ಯಕೆ ೨

ಬಂಗಾರದಾಭರಣವೇಕೆ ತನ್ನಯ ಪತಿಗೆ
ಮಂಗಳಗಳನ್ನು ಬಯಸುವ ನಾರಿಗೆ ೩

ಕಾಯ ವಾಙ್ಮಾನಸದಿ ಕರಪಿಡಿದ ನಿನ್ನ ಮನ
ನೋಯದಂದದಿ ನಡೆವೆ ಸಂತತವು ನಾ ೪

ಶ್ರೇಯವಿದು ಪರಸ್ಪರ ಸಹಾಯ ದಾಂಪತ್ಯದಲಿ
ಹಾಯವಾಗಿರಲಿ ಎಮ್ಮಯ ಜೀವನ ೫

ಸತ್ಯಧರ್ಮಗಳು ಸಾಧನವಾಗಲಿ
ನಿತ್ಯ ಸುಖಸಂತೋಷ ಫಲವಾಗಲಿ
ತೃಪ್ತಿಯಾಗಲಿ ನಮ್ಮ ಭಕ್ತ ಪ್ರಸನ್ನ ೬

೩೫೮

ಹಳೇ ನಿರಾಜಿ ಕಂಬಿ ಚೆಲುವಿನ
ಚೆಲುವೆಗೆ ಕೊಡುವೆನು ನಂಬಿ ಪ

ಮಣಕು ಕೊಳಕು ದುರ್ಗಂಧಗಳಿದ್ದರು
ಹೊಣೆಯಾಗುವೆ ನಾನು

ಮಿಣುಕದೆ ಬಗೆಯಿರಿ ತೊರೆದಭಿಮಾನವ
ಉಣಲು ಕೊಡುವೆ ಪರಮಾನ್ನಕೆ ಪಾತ್ರೆಯ ೧

ಚೆಂದಿ ಚೆಂದಿ ಬೆಲೆ ಏನಿದಕೆನ್ನುತಲಿ
ಚಿಂತಿಸದಲೇ ಬಿಸುಡಿ
ಹಿಂದಿನ ಜನುಮದ ಸುಕೃತದ ತೂಕಕೆ
ತಂದು ಕೊಡುವೆ ಹರಿಚಂದನ ಪಾತ್ರೆಯ ೨

ಕೊಳ್ಳುವರಿಲ್ಲದೆ ಕೊಳೆಯಂತಲಿರುವುದು
ಒಳ್ಳೆಯ ಸಮಯವಿದು
ಜಳ್ಳನು ಒಗೆಯಿರಿ ಕೊಳ್ಳಿ ಪ್ರಸನ್ನನು
ಚೆಲ್ಲಿದ ಫಲಗಳ ಮೆಲ್ಲುವ ಪಾತ್ರೆಯ ೩

೩೫೯

ಹಾರ ಹಾಕುವೆ ರಮಣ ಹಾರ ಹಾಕುವೆ ಪ

ಚಾರು ಮಲ್ಲೆ ಮಲ್ಲಿಗೆ ಕಲ್ಹಾರ ಜಾಜಿ ಪಾರಿಜಾತ ಅ.ಪ

ಸ್ವಾಮಿ ನೀ ಹದಿನಾಲ್ಕು ಲೋಕಕೆ ಕಾಮಿತಾರ್ಥಗಳನೆ ಕೊಡುವ
ಕಾಮಧೇನು ನೀನೆಂದರಿತು ಪ್ರೇಮಬಂಧನದಿ ಸೆಳೆಯಲು ೧

ಜಾರಚೋರ ನೀನು ಎಂಬ ದೂರು ಮನಕೆ ತಾರದಂತೆ
ಸೇರಿರುವೆನು ಎನ್ನ ಪುಷ್ಪಹಾರದಂತೆ ಧರಿಸಿ ಪೊರೆಯೊ ೨

ನಿನ್ನ ಹೃದಯದೇಶವೆನಗೆ ಮಾನ್ಯ ಸ್ಥಾನವೆಂದು ಅರಿತು
ನಿನ್ನ ಗೃಹವ ರಂಜಿಸುವೆ ಪ್ರಸನ್ನನಾಗಿ ಸ್ವೀಕರಿಸೆಲೊ ೩

ವಿಶೇಷ ಸಂದರ್ಭದ ರಚನೆಗಳು

೩೬೦

ನವವರುಷದ ನವದಿನದಿ ಮಾ
ಧವ ಕೃಷ್ಣನ ಸಂದರುಶನ ಸುಖಕರವು ಪ

ಜವದಲಿ ಯಾದವರೊಡೆಯನು
ಅವಲೋಕಿಸಿ ಸುವಿನೋದಗಳನು ನೀಡುವ ಅ.ಪ

ಪ್ರಮಾಥಿ ಸಂವತ್ಸರದ
ಸಮಾಗಮದಲಿ ಭಕುತರ
ಸಮೂಹಗಳನು ದುರಿತದ
ಪ್ರಮಾದಗಳಿಂದ ಪೊರೆಯುವ ರಮಾಪತಿ ೧

ನಾಡುಗಳಿಗೆ ಮಳೆ ಬೆಳೆಗಳ
ನೀಡುವನು ಸಮೃದ್ಧಿಯಲಿ
ಬೇಡುವ ಭಕುತರ ಕೋರಿಕೆ ಈಡೇರಿಸಿ
ಕಾಪಾಡುವ ಭಕುತ ಪ್ರಸನ್ನನು ೨

(ಪ್ರಮಾಥಿ ಸಂವತ್ಸರದ ಆಗಮನದ ಸಂದರ್ಭ)

೩೬೧

ಭಾಗವತರ ಕಥೆಯೇ ಕಥೆಯು ಮಿಕ್ಕ ಪ

ಕಾಗಿ ಗುಬ್ಬಿಯ ಕಥೆಗಳು ಬರಿ ವ್ಯಥೆಯು ಅ.ಪ

ರೀತಿ ನೀತಿಗಳಿಲ್ಲ ಮಾತು ಮಧುರವಿಲ್ಲ
ಪ್ರೀತಿ ಲಕ್ಷಣ ಬಲು ಭೀತಿಕರ
ಸೋತ ಹಾಸ್ಯವು ಸಪ್ಪೆ ಮಾತಿನ ಸುರಿಮಳೆ
ನೂತನ ಕಥೆಗಳು ಪ್ರೇಮದಂತಿರುವುದು ೧

ಪೋಕರಿ ಜನಗಳ ವೈಖರಿಗಳನು ಅ
ನೇಕರು ಬರೆದು ಕವಿಗಳಾದರು
ಲೋಕದ ನಡೆನುಡಿ ತಿದ್ದಲಾರದ ಕಥೆ
ಮೇಕೆಯು ಕತ್ತಿನಲ್ಲಿರುವ ಸ್ತನದ ಪರಿ ೨

ಕಂಡುಕೇಳದ ನಡೆ ನುಡಿಯುಳ್ಳ ನಾಯಕ
ಹಿಂಡಿದ ಕುಸುಮ ಪೋಲುವ ನಾಯಕಿ
ಭಂಡತನಗಳೇ ಪ್ರಚಂಡದ ಶೌರ್ಯವು
ರಂಡೆಯ ಕೊರಳಿನ ಕರಿಮಣಿಯಂತಿದೆ ೩

ವ್ಯಂಗ್ಯವೇ ಕವಿತೆ ಲಕುಮಿ ಮೃದು ಹೃದಯವು
ಶೃಂಗಾರಗಳೇ ಸುಂದರ ರೂಪ
ರಂಗನು ಕೊಡುವ ಹಾಸ್ಯಗಳು ಮನೋಹರ
ಇಂಗದ ಸವಿಯಧರಾಮೃತ ಧಾರೆಯು ೪

ಚಂದ್ರ ಸೂರ್ಯರು ಸಪ್ತಸಿಂಧು ಭೂಧರ ಸರಿ
ದ್ವಂದನಭೋರು ದಿಕ್ಕುಗಳೆಲ್ಲಾ
ಕಂದುಕ ಕರತಲದಲಿ ಹೊಳೆಯುತಲಿರು
ವಂದದಿ ನಮ್ಮ ಕವೀಂದ್ರರಿಗೆ ೫

ಕಲ್ಲು ಕರಗಿ ಒಣಹುಲ್ಲು ಚಿಗುರುವುದು
ನಿಲ್ಲಲಾಗದೆ ಕುಣಿವುವು ಮುದದಿ

ಹುಲ್ಲೆ ಹುಲಿಯ ಪ್ರೇಮವ ಪಡೆವುದು ಕವಿ
ಮಲ್ಲರು ಬರೆವ ಶ್ರೀನಲ್ಲನ ಕಥೆ ಕೇಳಿ ೬

ನಾನು ನನ್ನದು ಎಂಬ ಅಭಿಮಾನವ ಬಿಟ್ಟು
ಮಾನಸ ಕಲ್ಮಷಗಳ ತೊರೆದು
ಧ್ಯಾನದಿ ಬಿಂಬ ಮೂರುತಿ ದರುಶನ ಮಾಡಿ
ಆನಂದಪಡುವ ಬಗೆಯ ತೋರುವ ಕಥೆ ೭

ಸಕಲ ಪದ್ಯಗಳಲ್ಲಿ ಪ್ರಕೃತಿಯ ಸೌಂದರ್ಯ
ಭಕುತಿ ಪ್ರವಾಹವ ಹರಿಸುವುದು
ಶುಕರ ನುಡಿಗೆ ನವಶಕುತಿಯ ಕೊಡುವುದು
ರುಕುಮಿಣಿರಮಣನ ವಿಜಯದ ಕಥೆಯಿದು ೮

ನಾಡಿನ ನುಡಿಗಳ ಜೋಡಿಸಿ ಕುಶಲರು
ಪ್ರೌಢವಚನಗಳ ಮಾಡುವರು
ನೋಡಿ ನೋಡಿರುವ ಸಾಮಾನ್ಯ ವಸ್ತುವು ತಲೆ
ಯಾಡುವ ತೆರದಿ ವಿಚಿತ್ರವಾಗುವ ಕಥೆ ೯

ತಲೆಯ ನೋಯಿಸುವಂಥ ಶಾಸ್ತ್ರದ ವಿಷಯವ
ಸುಲಿದ ಬಾಳೆ ಹಣ್ಣಿನಂದದಲಿ
ಸುಲಭದಿ ಸವಿಯನುಭವಿಸಲು ಸಾಧನ
ಲಲಿತ ಕವಿತೆಯಿದು ಕಲೆಯ ಅವಧಿಯಿದು ೧೦

ಅನ್ಯ ಕಥೆಗಳೆಲ್ಲಾ ಸಣ್ಣ ಜನರಿಗೆ
ಮಾನ್ಯವಿರಲಿ ಇದ್ದರೇನಾಯ್ತು
ಪುಣ್ಯ ಸುಖವಹ ಇಹಪರದಲಿ ಕೊಡುವ ಪ್ರ
ಸನ್ನ ಶ್ರೀರುಕುಮಿಣೀ ರಮಣನ ಕುಣಿಸುವ ೧೧

(ಭಾಗವತ ಸಪ್ತಾಹದ ಮಂಗಳದಲ್ಲಿ ಹಾಡಲು ಬರೆದದ್ದು)

೩೬೨

ತಾನಾ ತಾನಾ ತನ್ನ ನನಾ ಪ

ತಾನಾ ತಾನಾ ತನ್ನ ನನಾ ಅ.ಪ

ಕ್ಷೀರಸಾಗರಶಯನ ದೇವನೆ
ಕ್ಷೀರದಲಿ ನೀ ಮುಳುಗಲು
ಧಾರಣಿಯಲಿ ಕ್ಷೀರವೆಲ್ಲವು
ನೀರು ನೀರಾಗಾಯಿತು ೧

ಪಾಪ ಮಂದರಗಿರಿಯ ಕೂರ್ಮದ
ರೂಪಿನಿಂದಲಿ ಎತ್ತಲು
ಈ ಪರಿಯ ನೋಡುತಲಿ ಜನಗಳು
ಕೂಪಕೂರ್ಮದಂತಾದರು ೨

ಹಂದಿರೂಪವ ತೋರಿ ನೀ ಜನ
ಕಂದು ರಕ್ಷಕನಾದರೆ
ಹಂದಿಯಂತಹ ಜನರು ಲೋಕದಿ
ಇಂದು ಭಕ್ಷಕರಾದರು ೩

ನರಸಿಂಹನ ರೂಪಿನಿಂದಲಿ
ಕರುಳ ಕಿತ್ತುದನರಿತರು
ಪರಿಪರಿಯಲಿ ಜನರು ಬಡವರ
ಕರುಳ ಕೀಳುತಲಿರುವರು ೪

ಪುಟ್ಟ ವಟು ವೇಷದಲಿ ಬಲಿಯ ಶಿರ
ಮೆಟ್ಟಿ ದಾನವ ಬೇಡಲು
ದಿಟ್ಟ ಪ್ರಮುಖರ ಕಾಟ ಜನರಿಗೆ
ಹಿಟ್ಟು ಕಾಣದಂತಾಗಿದೆ ೫

(ಕಾಲಸ್ಥಿತಿಯ ಹಿನ್ನೆಲೆಯಲ್ಲಿ ಒಂದು ಅಪೂರ್ಣ ನಿಂದಾಸ್ತುತಿ)

ಶ್ರೀ ಪ್ರದ್ಯುಮ್ನತೀರ್ಥರ ಕೃತಿಗಳು

ಗಣೇಶಸ್ತುತಿ

೩೬೩

ಕರುಣಿಸೋ ಗೌರೀಕರಜ ಪ

ಕರುಣಾಳು ಕ್ಷಿಪ್ರ ಮನದ
ತರುಣಾರ್ಕ ವಸನ ಕಾಯ ಬೇಗದಿ ಅ.ಪ

ಅರಿಪಾಣಿ ಕಾಯ ಜಾತ
ಅರಿವರ್ಗಗಳಿಗೆ ವಿಘ್ನವ
ತ್ವರದಲ್ಲಿ ಇತ್ತು ಶುಭಕೆ ಮಾರ್ಗವ ೧

ನರಭಾವದಿಂದ ನಿನ್ನ
ಮರೆತರೆ ನೀನು ಎನ್ನನು
ಜರಿದರೆ ಪೊರೆವೊರ್‍ಯಾರೊ ನಿರುತದಿ ೨

ಮರುದಂಶ ಮಧ್ವಮುನಿಯ
ವರಶಾಸ್ತ್ರ ಪೇಳ್ವ ಬುದ್ಧಿಯ
ವರವಿತ್ತು ಬಂದ ವಿಘ್ನವ ಕಳೆಯುತ ೩

ವರಪಾಶಪಾಣಿ ಎನ್ನ
ದುರಿತಾಶಪಾಶ ಭೇದಿಸಿ
ಹರಿ ಭಕ್ತಿ ಪಾಶದಿಂದ ಬಿಗಿಯುತ ೪

ಕರಿವಕ್ತ್ರಶಂಕೆ ಎಂಬ
ಕರಿಯನ್ನು ಅಂಕುಶದಲಿ
ಮುರಿಬಿಂಕ ಶಂಕಿಸದೆ ವಿದ್ಯವ ೫

ಮುರವೈರಿ ವಾಯು ಶಂಭೂ
ಸಿರಿ ವಾಣಿ ಚಂಡಿಕಾದ್ಯರು
ನಿರುತದಿ ಇದ್ದು ವರವ ಬೀರ್ವರು ೬

ನರವಾಹ ವಾಯುಜರಿಗೆ
ಸರಿ ಎಂಬೋ ಜ್ಞಾನದಿ
ಶ್ರೀ ನರಹರಿ ಪಾದ ತೋರಿ ಬೇಗನೆ ೭

ಭಗವಂತನ ಸಂಕೀರ್ತನೆ

೩೬೪

ಏನಿದು ರೂಪ ಶ್ರೀ ನರಹರೆ ಪ

ಏನಿದು ರೂಪವೋ ಮನಸಿಜನಯ್ಯನೇ
ನೆನಿಸಿದವರ ಹೃದ್ವನಜದೊಳ್ ಮೆರೆವುದೂ ಅ.ಪ

ಮಾರನ ಪಿತನೆಂದು ಕರೆಸಿ ಕೊಂಬುವನಿಗೆ
ಮೋರೆಯೊಳ್ ಮೂರು ಕಣ್ಣುಗಳ ಧರಿಸಿರುವುದು ೧

ಪರಮ ಶಾಂತನೆಂದು ಮೆರೆಯುವೀ ಶ್ರುತಿಯೊಳು
ಕ್ರೂರ ರೂಪದಿಂದ ನರರಿಗೆ ತೋರ್ಪುದು ೨

ವರ ವೈಜಯಂತಿಯ ಕೊರಳೊಳ್ ಧರಿಸುವಗೆ
ಕರುಳ ಹಾರವ ಧರಿಸಿ ವರ ಶಬ್ದ ಮಾಳ್ಪುದು ೩

ನಾನೇ ದೇವರು ಮತ್ತು ಅನ್ಯರಿಲ್ಲೆಂಬುವ
ಕನಕ ಕಶ್ಯಪ ಮುಖ್ಯ ದನುಜರ ಸೀಳ್ವುದು ೪

ತರಳ ಕರದಾಕ್ಷಣದಿ ವರ ವೈಕುಂಠವ ಬಿಟ್ಟು
ನರಹರಿ ಎನಿಸಿ ನೀ ಭರದಿ ಬಂದಿರುವುದು ೫

೩೬೫

ಜಲಜಾಕ್ಷ ಯಾಚಿಸುವೆ ಚಲುವ ಚರಣ ತೋರೋ
ಸುಲಭದಿ ಹಯವದನ ಪ

[ಶಶಿಯೊಲಿರುವದರಿಧರ] ಅಕ್ಷ ಸುಬೋಧ
ಪುಸ್ತಕಧರ ವಸುಮತಿ ರಮಣನೆ ನಿನ್ನ
ಸಾಸಿರ ನಾಮದಲಿ
ಸೋಸಿಲಿ ನಾ ಪ್ರಾರ್ಥಿಸುವೆ ೧

ವರವಾದಿ ಜಯದ ವಿಮುಕ್ತಿ ಪ್ರದಾತ
ಕಾಂತಿ ಸುಬುದ್ಧಿ ಸ್ಥಿರವನೆ ಅನುದಿನ ನಿನ್ನ
ಆರೆರಡು ಅ
ಕ್ಷರದ ಮಂತ್ರವನೂ ಪ್ರೇಮದಿ ನಾ ೨

ಮುಖದೊಳ್ ಸಕಲಾಗಮ ವಿದ್ಯಾ
ಸುಘೋಷ ಮಾಡಿ ಆ ಕಮಲಜ ಭವಮುಖರಿಂದ
ಅಮೃತದಲಿ
[ಸ್ತುತಿಸಿಹ ಅಭಿಷಿಕ್ತನೆ] ನೀನೆನಿಸಿ ನರಹರೆ ೩

೩೬೬

ನಿನಗೆ ನಾ ಬ್ಯಾಡಾದನೆ ಘನಕೃಷ್ಣ
ಮಾನಿನಿಯ ಕಿಂತ ಕೊನೆಯೆ ಪ

ಎನ್ನ ಕಣ್ಣಿಗೆ ತೋರದೆ
ಬೆನ್ನಲ್ಲಿ ಮಾನಿನಿಗೆ ನೀ ತೋರಿದ್ಯಾ
ಮನ್ನಿಸುವ ನಿತ್ಯದಲಿ
ಮುನ್ನ ನಿನಗೆ ನಾ ದ್ವೇಷಿಯಲ್ಲವೋ ೧

ಒಳಗೆ ನೀನಿರುವಿ ಎಂದೂ
ತಿಳಿದು ಬಲು ತೊಳಲಿ ಶರಣು ಬಂದರೆ
ಪೊಳೆಯದಲೆ ಮನಸಿನೊಳಗೆ
ಕೊಳಲು ಕರೆ ಬಾಲೇಗೆ ನೀ ತೋರಿದ್ಯಾ ೨

ಸುಳ್ಳು ಇದು ಎಂದ್ಹೇಳಲು
ಸಲ್ಲದೆಲೊ ಕಳ್ಳ ನೀನೆಂದು ಬಂದೆ
ಪುಲ್ಲನಾಭನೆ ತೋರೆಲೊ
ಮಲ್ಲನೆ ಗಲ್ಲ ಪಿಡಿದು ಮುದ್ದಿಪೆ ೩

ನೀರದಸಮ ಕಾಂತಿಯ
ನಾರಿಮಣಿ ಬೀರಿದಳೊ ಶ್ರೀಕೃಷ್ಣನೆ
ಕರುಣಸಾಗರನೆಂಬೊದು
ಮರೆತು ನೀ ದೂರ್ಹೋಗಿ ನಿಲ್ವರೇನೊ ೪

ಮೂರು ವಯಸೆಂದ್ಹೇಳರೊ
ಚಾರುತರಾಭರಣ ಇಟ್ಟಿಹನೆಂಬುರೊ
ಈ ರೀತಿ ಅಬಲೆಯರು
ನಿರುತದಲಿ ಧರೆಯೊಳಗೆ ಪೇಳ್ವುದರಿಯಾ ೫

ಎಂದಿಗಾದರು ನಿನ್ನನು
ಪೊಂದದೆಲೆ ಇಂದಿರಾಧವ ಬಿಡುವನೆ
ತಂದೆ ಶ್ರೀ ಮಧ್ವರಾಯ
ಛಂದದಲಿ ಮುಂದೆ ತಂದೆಳೆವ ನಿನ್ನ ೬

ನೀ ಬಿಟ್ಟರೇ ಕೆಡುವೆನೆ
ಶ್ರೀ ಭೀಮನೊಬ್ಬ ಬಲ ಸಾಕೆಲೊ
ಅಪಾರ ದೈವ ನಿನ್ನ
ಕೊಬ್ಬುತ ತಬ್ಬಿ ನಾ ನಿನ್ನೊಲಿಸುವೆ ೭

ಮಾನದಿಂದಲಿ ತೋರೆಲೊ
ನಿನಗಿದು ಘನತೆಯಲ್ಲವೊ ಜೀಯನೆ
ಎನ್ನ ಪಿತ ಹನುಮರಾಯ ನಿನ್ನಲ್ಲಿ
ಮುನ್ನ ಮಾಡ್ದುಪಕೃತಿ ಮರೆತೆಯಾ ೮

ಇನಿತು ವಂಚಿಸಿ ಪೋದರೆ
ನಾ ನಿನ್ನ ಹೀನ ಗುಣದವನೆನ್ನುವೆ
ಮನ್ನಿಸಿ ಸಲಹೋ ಬ್ಯಾಗ
ಶ್ರೀ ನರಹರಿಯೆ ನಾ ಭಿನ್ನೈಸುವೆ ೯

೩೬೭

ಪಾಲಿಸೆಮ್ಮನು ತ್ರಿಜಗ ಪಾಲಿಸುವನೆ ಎಲ್ಲ ಸುಖವನಿತ್ತು ಉದಧಿ
ಆಲಯ ಶರಣ್ಯ ವಿಟ್ಠಲ ಪ

ಹೃದಯಕಮಲ ಮಧ್ಯದಲಿ ಮುದದಿ ಖಗವನೇರಿ ಚರಿಪ
ಯದುಕುಲಾಬ್ಧಿ ಜಾತ ಚಂದ್ರ ವಿಧಿಶಿವಾದಿ ಉಡುಗಣಾರ್ಚಿತ ೧

ದಿಟ್ಟಭಕ್ತ ಕೊಟ್ಟ ಇಟ್ಟಗೀ ಮೆಟ್ಟಿನಿಂತಿ ಸಿಟ್ಟು ಇಲ್ಲದೆ
ಹೊಟ್ಟೆ ಮನೆಯ ಮಾಡಿಕೊಟ್ಟಿ ಕೆಟ್ಟಮಾತು ನುಡಿದ ಚೈದ್ಯಗೆ ೨

ಕರಗಳನ್ನೆ ಕಟಿಯಲಿಟ್ಟು ಶರಣುಬಂದ ಭಕ್ತಗೆ ಭವ
ಪರಿಮಿತಿಯ ತೋರಿ ನಿರುತ ಪೊರೆಯುವಂಥ ಕರುಣನಿಧಿಯೇ ೩

ಪುಂಡರೀಕ ವರದನೆಂದು ಹಿಂಡುಭಕ್ತರು ಪೊಗಳುತಿಹರೊ
ಅಂಡಜಧ್ವಜ ನಿನ್ನಪಾದ ಪುಂಡರೀಕ ತೋರಿಸಿನ್ನು ೪

ಶ್ರೀ ನರಹರಿಯೆ ನಿನ್ನ ಗಾನ ಮಾಡಲೆಷ್ಟು ಸಾಮ
ಗಾನಕೆ ನಿಲುಕದ ಮಹಿಮ ಜ್ಞಾನ ಭಕ್ತಿ ಇತ್ತು ಬೇಗ ೫

೩೬೮

ಪಾಲಿಸೆನ್ನ ವೇಲಾಪುರ ಚೆನ್ನ ಪ

ಪಾಲಿಸು ಕರುಣಾ ನಿಲಯನೆಂದು ನಾ
ಕೇಳಿ ಬಂದೆ ಬಹು ಸುಂದರಕಾಯ ಅ.ಪ

ಪರಮ ಶಂಖ ಅರಿ ಮುದದಿ ಗದಾಧರ
ಪದಪದುಮದಿ ಮನ ಒದಗಿಸಿ ಬೇಗ ೧

ಪೀತಾಂಬರ ಶ್ರೀವತ್ಸ ಕೌಸ್ತುಭದಿ
ಅತಿಶೋಭಿಪನೀ ಸ್ತುತಿಗೊಲಿಯುತಲಿ ೨

ಚನ್ನಕೇಶವ ಬಿನ್ನೈಸುವೆನೋ
ಬೆನ್ನ ಬಿಡದಲಿ ಮನ್ನಿಸಿ ತ್ವರದಿ ೩

ಕಂದನ ಕುಂದುಗಳೊಂದೆಣಿಸಲೆ
ಬಂದು ಚಿಂತನಕೆ ಇಂದಿರೆರಮಣ ೪

ಮೀನಕೇತುಪಿತ ಶ್ರೀ ನರಹರಿಯೆ
ಜ್ಞಾನ ಭಕುತಿಯಿತ್ತು ಮೌನದಿಂದ ನೀ ೫

೩೬೯

ಪಿಡಿದೆತ್ತೊ ಕೈಯ್ಯಾ ಕೃಷ್ಣಯ್ಯ ಪ

ಪಿಡಿದೆತ್ತೊ ಕೈಯ್ಯಾ ಪಾಲ್ಗಡಲೊಡೆಯನೆ ಭವ
ಕಡಲಿನೊಳಗೆ ಬಿದ್ದು ಬಾಯ್ಬಿಡುವೆ ಬೇಗದಿ ಬಂದು ಅ.ಪ

ತಾವರೆನಾಭಾ ಕಾವದು । ಎನ್ನ ಜೀವನಲಾಭಾ
ಶ್ರೀವ್ಯಾಸಮುನಿಗೊಲಿದವ । ನೆಂದರಿತು ಬಂದೆ
ಶ್ರೀವೇಣುಗೋಪಾಲಕೃಷ್ಣ । ಗೋವಳರೊಡೆಯ
ಭಾವ ಭಕುತಿಗಳೊಂದನರಿಯೆನು
ಹೇವವಿಲ್ಲದೆ ದಿನವ ಕಳೆದೆನು
ಸಾವಧಾನವ ಮಾಡಲಾಗದು
ಶ್ರೀವರನೇ ನವವಿಧ ಭಕುತಿ ನೀಡುತ ೧

ಅನುಮಾನವ್ಯಾಕೆ । ನೀನೆ ಗತಿ ಎನುವೆನು ಬಲ್ಲಿ
ಅನುದಿನ ಸೇವಿಪೆ ಅನಘನೆ । ಎನ್ನಘ ಗಣನೆ ಮಾಡದೆ ಮುನ್ನ
ಅನುವಾಗಿ ಪಾಲಿಸೊ
ಮಾನವೇದ್ಯನೆ ಮನದಿ ನಿರ
ತನುದಿನದಿ ನಿನ್ನಯ ಧ್ಯಾನವಿತ್ತು
ಮನೋವಿಷಾದವನಳಿಯೆ ನಿನ್ನನು
ಮರೆಯೆನುಪಕೃತಿ ಸತತ ಸ್ಮರಿಸುವೆ ೨

ಶ್ರೀ ನರಹರಿಯೆ ಭಕುತಜನ । ವನಜದಿನಮಣಿಯೆ
ಸಾನುರಾಗದಿ ಕೇಳ್ವೆ । ಹನುಮನ ಮತದಲ್ಲಿ
ಅನುಚಾದ ಜ್ಞಾನವ । ಕನಸಿನಲಿ ಮನಸಿನಲಿ
ಜನನಿ ಜನಕ ತನುಜೆ ವನಿತೆಯಾ
ತನುವಿನಲಿ ನೆಲೆಸಿರುವ ಭ್ರಾಂತಿಯ
ಹೀನಗೈಸಿ ಮನೋಭಿಲಾಷೆಯ
ಕೊನೆಗಾಣ್ಬುವ ಭಾರ ನಿನ್ನದು ೩

೩೭೦

ಪೊರೆಯಬೇಕೋ ಎನ್ನ ಶ್ರೀ ನರ
ಹರಿಯೆ ಕೇಳೋ ಮುನ್ನಾ ಪ

ನೀ ಪೊರೆಯದಿರಲು ಈ ಪೊಡವಿಯೊಳಗೆ
ಕಾಪಾಡುವರನು ಕಾಣೆ ನಿನ್ನಾಣೆ ಮನ್ನಣೆಯಲಿ ಅ.ಪ

ನೀರ ಪೊಕ್ಕರು ಬಿಡೆನೋ ಬೆನ್ನಲಿ
ಭಾರ ಪೊತ್ತರು ಬಿಡೆನೋ
ಕೋರೆಯ ಬೆಳೆಸಿ ನೀ ಘೋರ ರೂಪನಾಗಿ
ತಿರುಕನೆಂದು ಪೇಳಲು ಬಿಡೆನೋ ೧

ಕೊಡಲಿ ಪಿಡಿಯೆ ಬಿಡೆನೋ ನೀ ಘನ
ಅಡವಿ ಸೇರಲು ಬಿಡೆನೋ
ತುಡುಗನಂದದಿ ಪಾಲ್ಗಡಿಗೆ ಒಡೆದು ಸಲೆ
ಉಡುಗಿ ಜರಿದು ತುರುಗೇರಲು ಬಿಡೆನೋ ೨

ಪಾಪಿ ಎಂದು ಎನ್ನ ಜರಿಯದೆ
ಕಾಪಾಡೆಲೊ ಘನ್ನ
ಶ್ರೀ ನರಹರಿಯ ನಾಮಕೆ ಪೋಪದ
ಪಾಪಗಳುಂಟೆ ಜಾಲವ ಮಾಡದೆ ೩

೩೭೧

ಮರೆತು ಇರುವರೆ ಸರ್ವಜ್ಞನೆನಿಸಿ ಪ

ಮರೆತು ಇರುವರೇನೋ ಕರುಣಾ
ವಾರಿಧಿ ನರಹರಿಯೆ ಬಾಲನ

ದುರುಳತನಗಳೆಣಿಸಿದೊಡೆ ನೀ
ಕರೆದು ಮುಂದಕೆ ಪೊರೆವರ್‍ಯಾರು ೧

ಕಲ್ಲು ಕೊಟ್ಟ ಬಿಲ್ಲಿಲಿಟ್ಟ
ಕ್ಷುಲ್ಲಕ ಮಾತಾಡಿ ಬಿಟ್ಟ
ಕಳ್ಳ ಸುಳ್ಳ ಜಾರನೆಂದ
ಗೊಲ್ಲತಿಯರನೆಲ್ಲ ಪೊರೆದಿ ೨

ತರಳ ನಿನ್ನ ಪೂಜಿಸಲಾರದೆ
ಕರವ ಶಿರದಿ ಇರಿಸೆ ಕೂತು
ಕರದಿ ಗುಂಜವಿರಿಸಿ ಸಿರಿಯ
ಮರೆತು ಇರುವವರಂತೆ ೩

ವರ ಸುಮೌನೀಗಣಕೆ ಬಲ ನಾ
ನರಿಯಿರೆಂದು ಬೀರಿ ಚರಣ
ಚರಣದರ ಮನೆಯೊಳಿರಿಸಿ ಪೊರೆವಿ
ತರಳನ ನೀ ಜರಿವರೇನೊ ೪

ಧರಣಿಯೊಳಗೆ ಇರುವ ಕ್ಷೇತ್ರದಿ
ವರ ಸುಕ್ಷೇತ್ರವಿದೆಂದು
ಅರುಹಿ ಬರುವ ಸಜ್ಜನರನು ಪೊರೆವಿ
ಭಾರ ನಾನೊಬ್ಬನೇ ಪೇಳೋ ೫

ಶ್ರೀ ನರಹರಿಯೆ ಇನಿತು
ಜ್ಞಾನ ಶೂನ್ಯನ ಮಾಡಿ
ನಿನ್ನ ಕಾಣಿಸುವರೊಡನೆ
ಕಾಣುವ ಬಗೆಗಾಣೆನೋ ಮಾಧವ ೬

೩೭೨

ಮುದ್ದು ಸುರಿಯುತಾನೆ ನೋಡಿ ಕೃಷ್ಣ ಪ

ಮುದ್ದು ಸುರಿಯುತಾನೆ ಸಿದ್ಧ ಜನರ ವಂದ್ಯ
ಮಧ್ವವಲ್ಲಭ ಕೃಷ್ಣ ಹೃದ್ವನಜದಲಿ ಬಲ್ ಅ.ಪ

ತ್ರಿವಂಗಿ ಭಾವದಿ ಶ್ರೀ ವೇಣುಪಿಡಿದು ತಾ
ಸಾವೇರಿ ಮೊದಲಾದ ರಾಗವ ಪಾಡುತ ೧

ಬಲದ ಪಾದದಿ ಚೆಲುವ ಎಡದ ಪಾದವನಿಟ್ಟು
ನಳಿನಮುಖಿ ರುಕ್ಮಿಣಿ ಬಲ ಸತ್ಯಭಾಮೇರಿಂದ ೨

ಧ್ವಜ ವಜ್ರಾಂಕುಶ ಚಕ್ರ ಕಂಜಚಿನ್ಹೆಗಳಿಂದ ತೇಜ
ಮುಕುಟ ಶಿರಶ್ಚಕ್ರ ಶೋಭಿತಮುಖ ೩

ಶ್ರೀ ಪಾದರಾಯರಿಗೆ ಸ್ವಪ್ನಲಬ್ಧನಾಗಿ
ಶ್ರೀ ಪದ್ಮಭವಂದ್ಯ ಪ್ರತ್ಯಕ್ಷ ವ್ಯಾಸಮುನಿಗೆ ೪

ಶ್ರೀ ನರಹರಿಯು ತಾ ನೆನೆಯುವರಿಗೆ
ಭವ ಕಾನನದ ಭಯದ ಮನ ಶಂಕಿಸದಿರೆಂದು ೫

೩೭೩

ಮುರಳಿ ಧ್ವನಿಯ ಮಾಡೋ ಮುರಾರೇ ಪ

ಮುರುಳಿ ಧ್ವನಿಯ ಕೇಳಿ ಪರಮ ಭಕುತರೆಲ್ಲ
ಹರುಷದಿಂದಲಿ ಭವ ಶರಧಿ ದಾಟುವರೈ ಅ.ಪ

ವಾಮ ಭುಜದಿ ದಿವ್ಯ ವಾಮ ಕಪೋಲಿಟ್ಟು
ಕಾಮಜನಕ ಗುಣಧಾಮ ಶ್ರೀ ಕೃಷ್ಣಾ ೧

ಶ್ರೀ ವರ ನಿನ್ನಯ ಭ್ರೂ ವಿಲಾಸದಿಂದ
ಆವು ಮೆಚ್ಚುವಂತೆ ಸಾವಧಾನದಿಂದ ೨

ಶ್ಯಾಮಸುಂದರ ಬಲು ಕೋಮಲ ಬೆರಳಲ್ಲಿ
ಪ್ರೇಮದಿಂದೊಪ್ಪುತ ಶ್ರೀ ಮನೋರಮನೆ ೩

ಕೆಳ ಕೆಂದುಟಿಯಲ್ಲಿ ಕೊಳಲ ನಿಲ್ಲಿಸಿ ಬೇಗ
ನಳಿನಮುಖಿಯರನ್ನು ಒಲಿಸುತಲೊಮ್ಮೆ ೪

ವನಜಸಂಭವಪಿತ ಶೀ ನರಹರಿಯೆ
ಕನಸಿನಂದದಿ ಜಗವರಿತು ನೆನೆಯುವಂತೆ ೫

೩೭೪

ರಾಮಚಂದ್ರ ಪ್ರೇಮದಿ ಬಾ ಜನಕ ಪ

ಕೋಮಲಾಂಗನೆ
ಕಾಮಿತದಾತನೆ ಕರುಣಾವಾರಿಧಿ ರಾಮ ೧

ಸಾರಸಾಕ್ಷನೆ
ತೋರಿಸು ಚರಣವ ಪೂರೈಸೆನ್ನ ಮನ ಸುರಾಮ ೨

ಶ್ರೀನಿವಾಸನೆ
ಶ್ರೀ ನರಹರೆ ಭವ ಕಾನನಾನಲಹನುಪಮ ೩

೩೭೫

ಸರಸಿಜನೇತ್ರ ನಿನ್ನಲೀಗ ಸ್ಮರಿಸುವೆ ಬೇಗದಿ ಬಾ ಪ

ಸಿರಿ ಪಂಕಜಪೀಠರ ಸ್ತೋತ್ರವನು ಸರಸಾಗಿ ನೀ
ಪರಿಗ್ರಹಿಸಿ ಇರುತಿರ್ಪ ಹರೇ ೧

ಮುರಲೀಧರ ಶ್ರೀ ಅರಿಪಂಕಜವ
ಕರದೊಳಗೆ ತಿರುಗಿಸುತ ವರಗಾನಿಸುವಾ ೨

ಮರುಟ್ರೀಕರು ಈ ತರುವಾಗಿಹರು
ಚರಣವ ಚರಣವ ಶ್ರೀ ನರಹರಿಯ ನೆರೆ ಚೀಪುತಲಿ * ೩

೩೭೬

ಸತ್ಯನಾರಾಯಣನ ಪಾದ ಭಕ್ತಿಯಿಂದ ಭಜಿಸು ಮನವೆ
ಅರ್ಥಿಯಿಂದ ಪೂಜಿಪರಿಗೆ ವಿತ್ತಾದಿಗಳಿತ್ತು ಕಾಯ್ವ ಪ

ಹಿಂದೆ ನಾರದರಿಂದಿರೇಶಗೆ ವಂದಿಸಿ ಬೆಸಗೊಳಲು
ಛಂದದಿಂದಲಿ ಸಿಂಧುಶಯನ ಬಂಧಮೋಚಕವೆಂದು ಪೇಳಿದ ೧

ತಿಳಿದು ನಾರದರಿಳೆಯೊಳರುಹೇ ಕಲಿತು ಜನಗಳಲ್ಲಾರಂಭಾ
ಫಲ ಗೋಧುಮಚೂರ್ಣ ಶರ್ಕರ
ಪಾಲು ಘೃತಾದಿಗಳಿಂದ ಪೂಜಿತ ೨

ದ್ವಿಜವಣಿಕ್ ಭೂಭುಜರು ನಿಜಭಕುತಿಯಿಂದ ಯ್ಯಜಿಸೆ
ಕುಜನಮರ್ಧನ ಶ್ರೀ ನರಹರಿ
ಸೋಜಿಗವನ್ನೇ ತೋರಿದುದರಿಯ ೩

---

* ಈ ನುಡಿ ಸ್ಪಷ್ಟವಾಗಿಲ್ಲ.

ಮಹಾಲಕ್ಷ್ಮಿ

೩೭೭

ಅಮ್ಮಾ ಲಕುಮಿದೇವಿ ನಿಮ್ಮರಸನ ತೋರೆ
ಸುಮ್ಮನೆ ಬಿಡುವದು ಸಮ್ಮತವೇ ನಿನಗೆ ಪ

ಹೆತ್ತ ಬಾಲರು ಮಂದಮತಿಗಳಾದರೆ ತಾಯಿ
ಸತ್ತು ಹೋಗಲಿ ಎಂದು ಎತ್ತದೆ ಬಿಡುವೊಳೆ ೧

ನಿಮ್ಮ ಮಾತಿಗೆ ಹರಿ ಸಮ್ಮತನಾಗುವ
ಕುಮತಿಗಳೆಣಿಸದೆ ರಾಮ ಮೂರುತಿ ತೋರೆ ೨

ಸಿಂಧುತನಯೆ ಎನ್ನ ಬಂಧ ಬಿಡಿಸಿ ಬೇಗ
ನಂದ ಕಂದನ ಪಾದ ಪೊಂದಿರುವಂತೆ ಮಾಡೆ ೩

ತತ್ವೇಶರೆಲ್ಲರೂ ನಿತ್ಯಾಧೀನರು ನಿಮಗೆ
ಭೃತ್ಯಗೆ ನಿಜ ಹರಿ ಭಕ್ತಿ ಕೊಡುವಂತೆ ಪೇಳೆ ೪

ಎನ್ನಲಿರುವ ಹೀನರೋಡಿಸಿ ಬೇಗ
ಪನ್ನಗಾಚಲವಾಸ ಶ್ರೀ ನರಹರಿ ತೋರೆ ೫

ವಾಯುದೇವರು

೩೭೮

ನಿನ್ನ ನಂಬಿ ಬಂದೆ ಪಂಚಮುಖಿ ಪ್ರಾಣ
ಅನ್ಯ ಹಂಬಲ ಬಿಡಿಸಿ ಬಿಂಬ ಮೂರುತಿ ತೋರೋ ಪ

ಹಿಂದೆ ತ್ರೇತಾಯುಗದಿ ರಾಮನಾಜ್ಞೆಯ ಹೊಂದಿ
ಸಿಂಧು ದಾಟಿ ಸೀತೆಗೆರಗಿ ನಿಂದು

ಸುಂದರ ರಾಮ ಮುದ್ರಿಕೆಯಿತ್ತು ಲೀಲೆಯಲಿ
ಕೊಂದ ರಕ್ಕಸ ಪುರವನನಲಗೆ ಇತ್ತೆ ೧

ಬಂಡಿ ಅನ್ನವನುಂಡು ಭಂಡ ಬಕನಾ ಕೊಂದು
ಹಿಂಡು ನೃಪರಾ ಜರಿದು ಕೊಂಡು ದ್ರೌಪದಿಯಾ
ಮಂದಮತಿಗಳನಳಿದು ತಂದಿ ಸೌಂಗಂಧಿಕವ
ಪುಂಡ ಕೀಚಕರಳಿದ ಪಾಂಡವಪ್ರಿಯದೂತ ೨

ಮೋದತೀರ್ಥರೆನಿಸಿ ವಾದಿಗಳ ನಿಗ್ರಹಿಸಿ
ಬೋಧಿಸಿ ಸುಜನರಿಗೆ ಮಾಧವನ ಗುಣವ
ಸಾಧು ವಂದಿತ ಬಾದರಾಯಣರು ಇರುತಿರುವ
ಬದರಿಯಲ್ಲಿರುವಿ ಶ್ರೀ ನರಹರಿಯ ತೋರೋ ೩

ಸರಸ್ವತಿ–ಭಾರತಿ

೩೭೯

ದೇವಿ ಸರಸ್ವತಿ ನಿತ್ಯ ಕಾವುದೆಮ್ಮನು ಪ

ದೇವಿ ಸರಸ್ವತಿ ನಿತ್ಯ ಸೇವಿಪ ಮನುಜರಘ
ಪಾವಿತರನ್ನ ಮಾಡುವಿ ನೋವ ಕೊಡದಲೆ ಕಾಯೇ ಅ.ಪ

ಪದ್ಮನಾಭನ ನಾಭಿ ಪದ್ಮಜನ ಸಹ ಹೃ
ತ್ಪದ್ಮದೊಳಗೆ ನೆಲಸಿ ಛದ್ಮವ ಕಳೆಯೆ ನಿರುತ ೧

ಮಾರಮಣನ ದಿವ್ಯ ಚರಣ ಸರೋಜವ
ತೋರಿ ಕರುಣವ ಮಾಡೆ ವಾರಿಜಾಸನನ ರಾಣಿ ೨

ಲಕುಮೀ ನಾರಾಯಣನ ಸುಕುಮಾರ ಚತುರ್ಮುಖ
ನ್ನಾಕಿಗಾಗಿ ಬ್ರಾಹ್ಮೀ ಎನಿಸಿ ಸಾಕುವಿ ಲೋಕವ ಕಾಯೆ ೩

ಮಾಯಪತಿ ವಾಸುದೇವ ಕಾಯಜ ಕಾಲ ಪುರುಷರ್ಗೆ
ಗಾಯಿತ್ರಿ ಸಾವಿತ್ರಿಯಾಗಿ ತೋಯಜಾಸನ ವಿಹಾರಿ ೪

ಶಂಕರ ಸನ್ನುತ ಜಯಾ ಸಂಕರುಷಣನ್ನ ಪಾದ
ಕಿಂಕರನ್ನ ಮಾಡಿ ಎನ್ನ ಸಂಕಟ ಪರಿಹಾರ ಮಾಡೆ ೫

ಕೃತಿಪತಿ ಪ್ರದ್ಯುಮ್ನನ ಸುತೆ ನುತಿಪೆನು ಸದಾ
ಖ್ಯಾತಿಯನ್ನಿತ್ತನ್ಯಥಾ ಖ್ಯಾತಿಯ ಕಳೆಯೆ ಮಾತೆ ೬

ಶಾಂತಿಪತಿ ಅನಿರುದ್ಧನಾಂತುದಿಸಿ ವಿರಂಚಿ
ಕಾಂತೆ ದುರಿತ ತರಿದು ಶಾಂತ ಮನಸನು ಕೊಡೆ ೭

ವಾಣಿ ವೀಣಾಪಾಣಿಯೇ ಕಾಣಿಸನುದಿನವೆನಗೆ
ಫಣಿ ಮೃಡ ಇಂದ್ರಮುಖ ಗಣರಾರಾಧಿತಳೇ ತಾಯೆ ೮

ಹೀನಗುಣವೆಣಿಸದೆ ಜ್ಞಾನ ಭಕ್ತಿ ವೈರಾಗ್ಯವ
ಸಾನುರಾಗದಲಿ ಇತ್ತು ಶ್ರೀ ನರಹರಿಯ ತೋರೆ ೯

೩೮೦

ನಿರುತದಿ ಭಜಿಪೆನಾ ಭರತನ ರಾಣಿಯೇ ಭಾರತಿಯೇ ಪ

ಗುರುವರಂತರ್ಗತ ಹರಿಭಕ್ತಿ ಪಾಲಿಸೇ ಭಾರತಿಯೇ ಅ.ಪ

ಕಾವೋದು ಬಾಲನ ಸೇವೆ ನೀಕರಿಸದೆ ಭಾರತಿಯೇ
ಶಿವಮುಖ ಸುರ ಸಂಸ್ತವಕೆ ಸುಪ್ರೀತಳೆ ಭಾರತಿಯೇ ೧

ಕಾಳೀದ್ರೌಪದಿ ಶಿವಕನ್ಯಳೆಂದೆನಿಸಿ ಭಾರತಿಯೇ
ನಳನಂದಿನಿ ಮನ ಕೊಳೆಯ ತೊಳೆಯಬೇಕೇ ಭಾರತಿಯೇ ೨

ವಂದಿಪೆ ನಿನಗಿಂದ್ರೇಶನಳೆಂದೆನಿಸಿದಿ ಭಾರತಿಯೇ
ಕಂದನ ಕುಂದುಗಳೊಂದೆಣಿಸದೆ ಕಾಯೇ ಭಾರತಿಯೇ ೩

ಕಾಲಾಭಿಮಾನಿಯೆ ಶೈಲಜೆ ಶ್ಯಾಮಲ ಭಾರತಿಯೇ
ಪೋಲೋಮಿ ಉಷರಿಂದ ವಾಲಗ ಕೈಕೊಂಬೆ ಭಾರತಿಯೇ ೪

ಹರಿಯ ಹಿರಿಯ ಸೊಸಿ ಪರಮ ಪದಕೆ ಬರುವಿ ಭಾರತಿಯೇ
ಕರುಣಾದಿ ಭಾರತಾದ್ಯರ್ಥವರುಹೆ ನಿತ್ಯಾ ಭಾರತಿಯೇ ೫

ಸನಕಾದಿ ಯೋಗಿ ವಿನುತ ಚರಣಳೆ ಎನ್ನ ಭಾರತಿಯೇ
ಹೀನ ಬುದ್ಧಿಯ ಕಳಿ ಜ್ಞಾನಮಾರ್ಗವ ತೋರೆ ಭಾರತಿಯೇ ೬

ಮಾನಾಭಿಮಾನ ನಿನ್ನಾಧೀನ ಎನಗೆ ನೀ ಭಾರತಿಯೇ
ಶ್ರೀ ನರಹರಿ ಪಾದ ಮನದಿ ತೋರಿಸೇ ನಿತ್ಯಾ ಭಾರತಿಯೇ ೭

ರುದ್ರ

೩೮೧

ಬೇಡಿಕೊಂಬೆ ಮೃಡಹರ ಭವ ಶಂಭೋ ಪ

ಬೇಡಿಕೊಂಬೆ ನಿನ್ನಡಿಗಳಿಗೆರಗಿ ನಾ
ಕಡಲ ಕುವರಿಯ ಒಡೆಯನಲಿ ಮನ ಅ.ಪ

ಮನಕಾರಣವಲ್ಲವೊ ಅನಲಾಕ್ಷನೇ
ಹೀನ ಸುಕರ್ಮಕೆ ಪ್ರೇರಣೆ ಹೊರತು ೧

ಮೃತ್ಯುಂಜಯ ಮುಪ್ಪುರಹರ ದೇವನೆ
ಅತ್ಯಪರಾಧಗಳೆತ್ತೆಣಿಸದಿರೈ ೨

ಶ್ರೀ ನರಹರಿಯಾಸುತನ ಕುವರನೇ
ಅನುದಿನದಲಿ ಮನ ದೋಷಗಳಳಿಯೈ ೩

ಪಾರ್ವತಿ

೩೮೨

ಬೀರೆ ಸನ್ಮತಿಯ
ಪಾರ್ವತಿ ಬೀರೆ ಸನ್ಮತಿಯ ಪ

ಪೋರನಲ್ಲಪಾರ ದೊಷ
ದೂರಗೈಯುತ ಮಾರನೈಯ್ಯನ
ಚಾರು ಮೂರುತಿ ತೋರಿ ನಿರುತ
ಸಾರಸಾಕ್ಷಿ ಗಾರು ಮಾಡದೆ ೧

ಕ್ಷೋಣಿಯಲ್ಲಿ ಪ್ರಾಣಮತವ
ಜ್ಞಾನದಿಂದಲಿ ಗಾನಮಾಡುವ
ದಾನವಿತ್ತು ಸಾನುರಾಗದಿ
ದಾನವಾಂತಕ ಕಾಣುವಂತೆ ೨

ಕಾಮಹರನ ವಾಮಭಾಗದಿ
ಪ್ರೇಮದೀರುವ ಭಾಮಾಮಣಿಯೆ
ಕಾಮಮಾರ್ಗಣ ಧಾಮಕೆಡೆಹಿ
ಶ್ರೀ ನರಹರಿ ನಾಮಸುಖವ ೩

ಗುರುಸ್ತುತಿ

೩೮೩

ಪ್ರೇಮದಿಂದೊಂದಿಸುವೆ ಗುರುವೃಂದಕೇ
ಕಾಮಧೇನುವಿನಂತೆ ಕೊಡಲೆಮಗಭೀಷ್ಟವನು ಪ

ಸತಿಯ ಬೇಡುವನಲ್ಲ ಸುತರ ಬೇಡುವನಲ್ಲ
ಅತಿಶಯದ ಭಾಗ್ಯವನು ಕೇಳ್ವನಲ್ಲ
ರತಿಪತಿ ಆಟವನು ಖಂಡಿಸಿ ಬೇಗದಲಿ
ಮತಿ ತಪ್ಪಲೆನಗೆ ದುರ್ವಿಷಯದೊಳೆಗೆಂದು ೧

ಶಕ್ತಿ ಬೇಡುವನಲ್ಲ ಯುಕ್ತಿ ಬೇಡುವನಲ್ಲ
ಭುಕ್ತಿ ಎನಗಿಲ್ಲೆಂದು ಕೇಳ್ವನಲ್ಲ
ಮುಕ್ತಿದಾಯಕ ನಮ್ಮ ವಿಟ್ಠಲನ ಚರಣದಲಿ
ಭಕ್ತಿ ದೃಢವಾಗೆನಗಿತ್ತು ರಕ್ಷಿಸಲೆಂದು ೨

ಮಾನ ಬೇಡುವನಲ್ಲ ದಾನ ಬೇಡುವನಲ್ಲ
ಹೀನತನ ಬ್ಯಾಡೆಂದು ಕೇಳ್ವನಲ್ಲ
ಮಾನನಿಧೀಶ ನಮ್ಮ ಶ್ರೀ ನರಹರಿಯ ಚರಣವನು
ಕಾಣಿಸುವ ಜ್ಞಾನವನು ದಾನಮಾಡಲಿ ಎಂದು ೩

೩೮೪

ನಿರುತದಿಂದಿಳೆಯೊಳು ಅರಸಿ ನೋಡಲು ಕಾಣೆ
ಗುರು ಸತ್ಯಜ್ಞಾನರಿಗೆ ಪ

ಸರಿ ಇಲ್ಲಿವರ ಚರಣಕಮಲವ ನಿತ್ಯ
ಆರಾಧಿಪರ ದುರಿತ ಹರಿಪರ ಅ.ಪ

ಸತ್ಯ ಜ್ಞಾನ ಗುರೋ ನೀ ಗತಿ ಎಂದವರ
ನಿತ್ಯದಿ ಬಿಡದೆ ಕಾಯ್ವ
ಅತ್ಯಾದರದಿ ಮಧ್ವಮತ ಸ್ಥಾಪಕರಾಗಿ
ಮಿಥ್ಯಾ ಜ್ಞಾನಗಳಳಿದ । ಮೆರೆದ ೧

ಸತ್ಯಧೀರರಿಂದ ಯತ್ಯಾಶ್ರಮ ಪಡೆದು
ರತ್ಯಾದಿ ವಿಷಯವ ಬಿಟ್ಟು
ಯತ್ಯಾಶ್ರಮೋಕ್ತ ಕೋಪತ್ಯಾಗಾದಿಗಳನು
ವ್ಯತ್ಯಾಸಿಲ್ಲದೆ ನಡೆಸಿ । ಶೋಭಿಸಿ ೨

ಗುರು ಆರಾಧನಿ ದಿನ ತೀರ್ಥವ ಕೊಡುತಿರೆ
ವರ ಸುವಾಸಿನಿ ಒಬ್ಬಳೂ
ಕರವ ನೀಡಲು ಬಂದು ಅರಿತು ವಿಧವತ್ವ
ನೆರಪೇಳ್ದರಪರೋಕ್ಷದಿ । ಭೂತಳದಿ ೩

ಮರುದಿನ ಆರೋಗಣೆಯ ಸಮಯದಿ ಮಳೆ
ಭರದಿಂದ ಸುರಿಯುತ್ತಿರೆ
ಮೊರೆಯಿಡೆ ಎಡಬಲದವರು ಅದನು ಕೇಳೆ
ದೂರಸ್ಥಳಿಹಳೆಂದ್ಹೇಳಿರು । ಪಂಕ್ತಿಯಲಿ ೪

ಈ ರೀತಿಯಿಂದಲಿ ತೋರಿಸಿ ಮಹಿಮೆಯ
ಇರಿಸೆ ಮಂತ್ರಿಸಿ ಫಲವ
ಭರದಿ ಸುರಿವ ಮಳೆ ತ್ವರಿತದಿ ನಿಲ್ಲಲು
ಅರಿತು ವಿಚಾರಿಸಲು । ನಿಜವಿರಲು ೫

ನಿವೃತ್ತಿ ಸಂಗಮದಿ ಅವನಿಜೆ ಪತಿ ಪೂಜೆ
ಸಾವಧಾನದಿ ಮಾಡಲು
ಇವರ ಮನೋಧಾರಡ್ಯ ಜವದಿ ಜಯಾಮುನಿ
ಅವನಿಗರುಹಬೇಕೆಂದು । ತಾ ಬಂದು ೬

ಬರುತಿರೆ ಉರಗಾಕಾರದಿಂದಲಿ ಬಂದು
ಅರಿಯದ ಜನರು ಕೂಗೆ
ಮಾರಮಣನ ಧ್ಯಾನ ಜರಿಯದೆ ಅವರಿಗೆ
ತೋರಿದರಭಯವನು । ವಿಚಿತ್ರವನು ೭

ಭೂವೈಕುಂಠದಿ ವಿಶ್ವರೂಪದರ್ಶನಕ್ಹೋಗೆ
ಮಾರ್ಗವ ಕೊಡದಿರಲು
ಭಾವದಿ ಧ್ಯಾನಿಸೆ ಶ್ರೀ ವಲ್ಲಭನಾಮ
ಧರಿಸದೀರಾಧರಿಸೇ । ಧರಿಸಿ ೮

ಈ ವಿಧ ಮಹಿಮೆಯ ತೋರಿಸಿ ಜಗದೊಳು
ಗೋದಾತೀರದಿ ಶೋಭಿಪ
ಅವನಿಪ ಮಹೇಂದ್ರ ಭುವನ ಶ್ರೀ ನರ
ಹರಿ ನಿನ್ನ ಮಾಘಸಿತದಿ । ಸ್ಮರಿಸಿದ ೯

೩೮೫

ಮಂಗಳಂ ಜಯ ಜಯ ಮಂಗಳಂ ಪ

ಪರಮಾಸನದಲಿ ಕುಳಿತವಗೆ
ಪರತತ್ವವ ತಾ ತಿಳಿದವಗೆ
ಕರುಣದಿಂದ ದುರಿತಾವಳಿಗಳನು
ಸ್ಮರಿಸಿದ ಮಾತ್ರದಿ ಪರಿಹರಿಸುವಗೆ ೧

ಮೊಡವಿಯಲಿ ಶೋಭಿಸುವವಗೆ
ಕಡಲಶಯನನ ಭಕ್ತನಿಗೆ
ಅಡಿಗಳ ಬಿಡದೆ ಭಜಿಪ ಸುಜನರಿಗೆಲ್ಲ
ಕಡುತರ ಜ್ಞಾನವ ನೀಡುವಗೆ ೨

ಸತ್ಯಧೀರರ ಕುವರನಿಗೆ
ಸತ್ಯಜ್ಞಾನನೆಂದೆನಿಸುವಗೆ
ಅತ್ಯಾದರದಿಂದ ರಾಮನ ಧ್ಯಾನಿಸಿ
ಪ್ರತ್ಯಕ್ಷವ ಕರೆಸಿರುವವಗೆ ೨

ಕಾಮಕ್ರೋಧವ ಬಿಟ್ಟವಗೆ
ಪ್ರೇಮ ಆಶೆಗಳ ಸುಟ್ಟವಗೆ
ಧೂಮಕೇತು ಸಖ ಸೂನುವಾಹನನ
ನೇಮದಿಂದ ಆರಾಧಿಪಗೆ ೪

ದಂಡ ಕಮಂಡಲ ಪಿಡಿದವಗೆ
ಪಂಡಿತರಿಂದತಿ ಪೂಜಿತಗೆ
ಕೊಂಡಾಡಿದರ್ಯಮ ದಂಡನೆ ತಪ್ಪಿಸಿ
ಶೊಂಡನಾದ ನರಹರಿ ತೋರ್ಪಗೆ ೫

೩೮೬

ಸ್ಮರಿಸು ಸ್ಮರಿಸು ಮನವೇ ಗುರುರಾಯರ ಪ

ಸ್ಮರಿಸು ಸ್ಮರಿಸು ಬಿಡದೆ ಸ್ಮರಿಸು ನೀ ಗುರು ಸತ್ಯ
ಜ್ಞಾನತೀರ್ಥರ ಪದವ ಸಾರುವೆ
ಬೇಡಿದ್ದು ಕೊಡುವೆನೆಂಬುವರನು ಅ.ಪ

ಸಂಶಯ ಪಡಬ್ಯಾಡವೋ ಇದಕೆ ನಾ ನಿ
ಸ್ಸಂಶಯದಿಂದ ಪೇಳುವೆ
ಸಂಶಯಾತಕೆ ಋಷಿ ವಂಶೀಕ ರಾವಣನ
ಧ್ವಂಸ ಮಾಡಿದ ರಾಮನ ಸಂಸೇವಿಪರ ನೀ ೧

ಶಾಪಾನುಗ್ರಹ ಶಕ್ತರೂ ಇವರು
ಕಾಮಕ್ರೋಧವ ಬಿಟ್ಟವರೂ
ತಾಪತ್ರಯಗಳಳಿದು ಪಾಪಗಳೋಡಿಸಿ
ಕಾಪಾಡುವೆನೆಂದು ಜಗದಿ ಮೆರೆದವರ ೨

ಗುರುಕರುಣಾಬಲದಿ ಶ್ರೀಹರಿನಪರೋಕ್ಷಿಗೈಸಿದ
ಧೀರರ ದುರ್ವಾದಿಗಳ ಮುರಿದು ಗುರು ಮಧ್ವರಾಯರ
ಪರಮ ಪ್ರೀತಿಯ ಪಡೆದ ನರಹರಿ ಪ್ರಿಯರ ೩

೩೮೭

ಲಕ್ಷ್ಮೀಪ್ರಿಯರ ಚರಣ ಭಜನೆ
ನಿರುತದಿಂದ ಮಾಡುವ ಪ

ಲಕ್ಷ್ಮೀಪತಿಯ ಕರುಣ ಪಡೆದು
ಹರುಷದಿ ನಾವ್ ಬದುಕುವ ಅ.ಪ

ಸದ್ವೈಷ್ಣವ ಕುಮುದಕಾಭಿ
ವೃದ್ಧಿ ತರುವ ಗೋಸುಗ
ಮಧ್ವ ಮತಾಬ್ಧಿಯಲ್ಲಿ
ಉದ್ಭವಿಸಿದ ಚಂದ್ರರ ೧

ವ್ಯಾಸಮುನಿಗೆ ಒಲಿದ ಕೃಷ್ಣನ
ಸೋಸಿನಿಂದ ಪೂಜಿಸಿ
ವ್ಯಾಸಸೂತ್ರ ಭಾಷ್ಯ ಉಪ
ನ್ಯಾಸ ಮಾಡಿ ಮರೆವರ ೨

ದೀನ ಜನರ ವೃಂದಕೆ ಸುರ
ಧೇನು ಎನಿಪ
ಮುನಿವರ ಶ್ರೀ ನರಹರಿಗೆ ತಾವು
ಅನುಗರಾಗಿ ಇರುವರ ೩

೩೮೮

ಸತ್ಯಧರ್ಮ ಸದ್ಗುರುವರ ರಕ್ಷಿಸು ಪ

ಭೃತ್ಯ ನೀನಾಗೆಂದು ಕೃತ್ಯ ವಿಪರ್ಯಯ
ವೆತ್ತಣಿಸದೆ ಕೃತಕೃತ್ಯನ ಮಾಡಿಂದು ಅ.ಪ

ಸತ್ಯವರರ ವರ ಕುವರನೆ ನೀನತ್ಯುತ್ತಮ ಸುಖ ಚಿನ್ನ
ಯತ್ಯಾಶ್ರಮ ಸದ್ಧರ್ಮಾಚರಣದಿ ನಿತ್ಯಾರ್ಜಿತ ರಾಮ
ಭೃತ್ಯಜನಕೆ ಸದ್ಬುದ್ಧಿ ಬೋಧಿಸಿ ಕೃತಕೃತ್ಯರ ಮಾಡುತಲಿ
ಕೃತ್ಯದಿಂದ ಗುರುವಿದತ್ತ ಸುನಾಮ ಯಥಾರ್ಥಪಡಿಸಿ
ಕ್ಷಿತಿಗುತ್ತಮನೆಸಿದ ೧

ಭದ್ರಾತೀರನೆ ಇತ್ತು ಸುಭದ್ರಗಳ್ ನಿದ್ರಾರಹಿತರಿಗೆ
ಆದ್ರಾಂತಃಕರುಣನೆ ಸೌಹಾರ್ದದಿ ಭದ್ರಾರಮಣನಲಿ
ಕಾರ್ದ್ರವೇಯ ಭೂಷಣನಂದದಿ ನೀ ಭದ್ರಾದೇವಿಯನು
ಛಿದ್ರರಹಿತ ಶಿಲೆ ಮಧ್ಯದಿ ಪಡೆದು ಸುಭದ್ರಾಪತಿ ಸಖ
ಮುದ್ರಾಧರನೆ ೨

ಶ್ರೀ ನರಹರಿ ಪದ ನೀನನುದಿನದಲಿ ಧ್ಯಾನಮಾಡುತ ಬಾಹ್ಯ
ಜ್ಞಾನವಿಲ್ಲದೆ ಅನುಮಾನ ವಿಪರ್ಯಯ ಹೀನಗೈಸಿ ಸಾಕ್ಷಿ
ಮಾನದಿಂದ ಕೋಟ್ಯಾರ್ಭುದ ರವಿಪ್ರಭೆ ಕಾಣುತ
ಪ್ರತಿಮುಖವೋಲ್
ಏನು ಇದಕೆ ಅನುಮಾನವಿಲ್ಲ ಹಂ ಮನಿಯವನೆನ್ನುವೆ ನೀ
ಸರಿಲಿಂಗರೂಪಧರ ೩

೩೮೯

ವಾದೀಂದ್ರ ಗುರುರಾಜ ನಿನ್ನ
ಪಾದವ ತೋರಿಸಯ್ಯಾ
ವಾದೀಂದ್ರ ಗುರು ನಿನ್ನ ಪಾದವ ನಂಬಿದೆ
ಮೋದವ ಕೊಡುವುದು ಮದಗಳೋಡಿಸಿ ಪ

ಉಪೇಂದ್ರ ಕರಕಮಲಜಾತ ಪಾಪಗಳೋಡಿಸಯ್ಯ
ಪಾಪರಾಶಿಯ ಸುಟ್ಟು ದ್ರೌಪದೀವರದನ
ಕೃಪೆಯಾಗುವಂತೆ ಮಾಡೋ ಶ್ರೀಪತಿ ಪ್ರಿಯನೆ ೧

ಮೂಲರಾಮರ ಪಾದಪದುಮದಿ ಅಳಿಯಂತಿಪ್ಪ ಧೀರ
ಶೀಲಾದಿ ಗುಣವಿತ್ತು ಶ್ರೀ ಲೋಲನಂಘ್ರಿಯ
ಮಲಿನ ಮನವ ಕಳದು ಪೊಳೆಯುವಂತೆ ಮಾಡೋ ೨

ತುಂಗಾ ತೀರದೊಳಿದ್ದು ನಿತ್ಯ ಭಂಗಗಳೋಡಿಸುವಿ
ಶೃಂಗಾರ ತುಳಸಿಯ ಮಂಗಳ್ಹಾರವ ಧರಿಸಿ
ತುಂಗಮಹಿಮ ನರಸಿಂಗ ಮೂರುತಿ ತೋರೊ ೩

೩೯೦

ಕರುಣಿಸೊ ಶ್ರೀ ಗುರುರಾಜ
ಬರದ್ಯಾಕೆ ಎನ್ನೊಳು ದಯ ಪ

ದಯಮಾಡೊ ಶ್ರೀ ಗುರುರಾಜ
ಹಯವದನನಿಗತಿ ಪ್ರಿಯ ಅ.ಪ

ಒಲಿಸಾದೆ ವಿದ್ಯೆಗಳನ್ನು ಬಾಲತನದಿ ಬಹುಕಾಲ ಕಳೆದೆ
ಕುಲೀಲೆಗಳಲ್ಲಿ ಛಲವ್ಯಾಕೆ ಎನ್ನೊಳು ಬಲ್ಲಿ ೧

ಜ್ಞಾನರಹಿತ ಪ್ರಾಯದಿ ಮಾನಾಪೇಕ್ಷೆಯನೆ ಮಾಡಿ
ಮೌನಿ ವೇಷವನೆ ಧರಿಸಿ ಹೀನಾಚರಣೆಯಲ್ಲಿರುವೆ ೨

ಪತಿತಾಗ್ರಣಿಯು ನಾ ಬಲ್ಲಿ ಪತಿತಪಾವನ ನೀ ಬಲ್ಲೆ
ಗತಿಪದ ಮತಿಯನಿತ್ತು ರತಿಪತಿಪಿತನ ತೋರಿ ೩

ಬಲ್ಲವರನು ರಕ್ಷಿಪುದು ಅಲ್ಲ ಬಿರುದು ಘನವಾದ್ದು
ಅಲ್ಪನ ಪೊರೆಯಲು ನಿನಗೆ ಒಳ್ಳೆ ಕೀರುತಿ ಬರುವುದು ೪

ಸರ್ವಜ್ಞ ನಿನಗೆ ನಾನೆಂತೋ ಉರ್ವೀಭಾರನು ನಾ ಪೇಳ್ವೆ
ಪರ್ವ ಪಂಚಕಗಳ ಕಳೆ ಶ್ರೀ ನರಹರಿಯನೆ ಪೊಂದಿಸಿ ೫

೩೯೧

ಗುರುರಾಜರ ನಂಬಿರೋ ಸಾರುವೆ ನಾ
ಸಾರುವೆ ನಾ ಸಾರುವೆ ನಾ ಪ

ಗುರು ವಾದಿರಾಜರ ಚರಣ ಸ್ಮರಣೆಯಿಂದ
ದುರಿತ ರಾಶಿಗಳೆಲ್ಲ ಪರಿಹಾರವಾಗುವುದು ಅ.ಪ

ಕರುಣಾಸಾಗರರಿವರು ಸ್ಮರಿಪರಘ ಸ್ಮರಿಸದೆ ಪರತತ್ವವರಿದು
ಬಾರಿ ಬಾರಿಗೊದಗಿದಪಾರ ಸಂಶಯ
ದೂರಗೈಸಿ ಮುರಾರಿ ಚರಣವ ತೋರ್ಪ
ಸುರರಿಗೆ ಮರುತರೆನಿಪರು ಬರುವ ಕಲ್ಪಕೆ ೧

ಗುರು ವಾದಿರಾಜರೆಂಬ ಸುರತರು
ಇರುವುದು ಸೋದಾಪುರದಿ
ಅರಿತು ನಿರುತದಿ ಪರಮ ಭಕುತಿಯಲಿ

ಸೇರಿ ಸೇವೆಯ ಮಾಳ್ಪ ಸುಜನಕೆ
ಬೀರುವರು ಪುರುಷಾರ್ಥಗಳನು
ಪಾರುಗಾಣರು ಸುರರು ಮಹಿಮೆಯ ೨

ಉಪಚಾರವಲ್ಲವಿದು ಶ್ರೀಪತಿಯಾಣೆ
ಗುಪಿತದಿಂದಿವರ ಮಂತ್ರ
ಜಪಿಸಿ ಭೂತರಾಜರೆಂಬೊರು
ತಾಪಹಾರಕರಾಗಿ ಸುಜನಕೆ
ತಪವ ಮಾಳ್ವರು ರುದ್ರ ಪದವಿಗೆ
ಶ್ರೀ ನರಹರಿ ಪಾದ ಇವರಲಿ ೩

೩೯೨

ಅಂಜಿಸೋದ್ಯಾತಕಯ್ಯಾ ಬ್ರಹ್ಮಣ್ಯ ಗುರು ಪ

ಅಂಜಿಸೊದ್ಯಾಕಘ ಭಂಜಕನೆನಿಸಿ ನೀ
ಕಂಜನಾಭನ ಭಕ್ತಿ ಪಂಜರದೊಳಿಡದೇ ಅ.ಪ

ಹೊಂದದೀ ನರಜನ್ಮವ ಇಂದಿರೇಶನು ಎಲ್ಲ
ಹೊಂದೀ ಹೊದರಿಯದ ಮಂದಮತಿಯನು ೧

ಬಿಂಬ ಮೂಡಲು ಪ್ರತಿಬಿಂಬ ಮಾಡುವುದೆಂದು
ಶಂಬರಾರಿಯ ಪಿತನ ನಂಬದ ಢಂಬಿಯೊಳಂ
ಜಿಸೋದ್ಯಾತಕಯ್ಯಾ ೨

ಶ್ರೀ ನರಹರಿಪಾದ ಧ್ಯಾನವ ಮಾಡದೆ
ಬುದ್ಧಿ ಹೀನನಾದವಗೆ ಸುಜ್ಞಾನ ಕೊಡದೆ ಸುಮ್ಮನಂ
ಜಿಸೋದ್ಯಾತಕಯ್ಯಾ ೩

೩೯೩

ಕರವ ಪಿಡಿಯೋ-ಬ್ರಹ್ಮಣ್ಯಾ ಗುರುವೇ
ಕರವ ಪಿಡಿಯೋ ಮುನ್ನ ದುರಿತ ನೋಡದಲೆನ್ನ
ಪರಮ ನಿರ್ಮಲ ಜ್ಞಾನ ತ್ವರಿತದಿಂದಿತ್ತೆನ್ನ ಪ

ದೂರದೂರದಲಿದ್ದ ನರರು ನಿಮ್ಮಯ ಚರಣ
ಸೇರಿ ಸೇವೆಯ ಮಾಡೆ ಕರುಣದಿ ಕಾಯ್ವೆ ನೀ ೧

ದಿಟ್ಟತನದಿ ಭಕ್ತಿ ಇಟ್ಟು ಸೇವಿಸಲಾಗ
ಕುಷ್ಟಾದಿ ರೋಗಗಳಟ್ಟುವೀ ಬೇಗನೆ ೨

ಪರಿ ಪರಿ ಭವದೊಳು ತಿರುಗಿಸದೆ ಎನ್ನ
ನರಹರಿ ಚರಣದ ಸ್ಮರಣೆಯನ್ನೆ ಇತ್ತು ೩

೩೯೪

ತಪ್ಪೇನು ಮಾಡಿದೆನೋ ಬ್ರಹ್ಮಣ್ಯ ಗುರು ಪ

ಅಪ್ಪಾ ನಿನ್ನಯ ಮನಕೊಪ್ಪದೇ ಇಪ್ಪಂಥ ಅ.ಪ

ತಂದೆ ತಾಯಿಯು ನೀನೇ ಬಂಧು ಬಳಗ ನೀನೆ
ಸಂದೇಹವಿಲ್ಲವೋ ಕಂದನೆಂದೆನ್ನದಂಥ ೧

ಒಂದೂ ತಿಳಿಯದಂಥ ಮಂದಮತಿಯು ನಾನು
ಛಂದದಿಂದಲಿ ಬುದ್ಧಿ ಮುಂದೆ ಹೇಳಾದಂಥ ೨

ಸಂದೇಹ ಕಳೆದಿನ್ನ ಬಂಧವಾಗಹ ಅಘ
ವೃಂದ ಕ್ಷಮಿಸಿ ಬೇಗ ಮುಂದೆ ಕರೆಯದಂಥ ೩

ದುರುಳರೆಲ್ಲರು ಸೇರಿ ಮರುಳುಗೊಳಿಸಿ ಎನ್ನ
ಕರುಣಸಾಗರ ನಿನ್ನ ಕರುಣ ಪಡೆಯದಂಥ ೪

ಶಾಂತ ಶ್ರೀ ನರಹರಿ ಪಂಥಾದಿಚರಿಸದೇ
ಭ್ರಾಂತನಾದೆ ಭವ ಕಾಂತಾರ ದಾಟಿಸದಂಥ ೫

೩೯೫

ಪಾಲಿಸು ಗುರುವರ್ಯ ಜಯಾರ್ಯ ಪ

ಶ್ರಿಮದಾನಂದತೀರ್ಥರ ಕಂದ
ಶ್ರೀಮದಕ್ಷೋಭ್ಯರ ಕಂದ ಯತೀಂದ್ರ ೧

ಪೂರ್ಣಬೋಧ ತೀರ್ಥಾರ್ಣ ವಿಹಾರಿ
ಸ್ವರ್ಣ ಪಾತ್ರ ಸುಧಾಕಾರಿ ಉದಾರಿ ೨

ಶ್ರೀ ನರಹರಿ ಧ್ಯಾನವಿಚಾರಿ
ಮೌನಿ ಗುಣಗಣಧಾರಿ ಉದ್ಧಾರಿ ೩

೩೯೬

ಬಾದರಾಯಣ ಮದದಿ ಮರೆತೆನೊ
ಸದಯದಿಂ ಮುದ ಪಾಲಿಸೊ ಪ

ಬೋಧ ಮೂರುತೆ ಭಕ್ತರಾ ನುಡಿ
ಸಾದರದಿ ನೀನಾಲಿಸೋ ಅ.ಪ

ವೇದಭಾಗವ ಮಾಡಿ ವೇದವ್ಯಾಸನೆಂದೆನಿಸಿದಿ
ಸದಮಲಾಭಾವದಲಿ ನಿನ್ನಯ ಪಾದಕಮಲವ ತೋರಿದಿ ೧

ಮೋದ ಚಿನ್ಮಯ ಗಾತ್ರ ಎನ್ನಯ ಖೇದ ಭಾವವನೋಡಿಸೊ
ಮೋದತೀರ್ಥ ಹೃದಾಬ್ಜ ಮಂದಿರ ಸಾಧು ಸಂಗವ ಮಾಡಿಸೋ ೨

ತರ್ಕಮುಧ್ರಾಧರನೆ ಎನ್ನ ಕುತರ್ಕ ಬುದ್ಧಿಯನೋಡಿಸೋ
ಅರ್ಕಸನ್ನಿಭ ಬ್ರಹ್ಮ ಸುತರ್ಕ ಮಾರ್ಗವ ಬೋಧಿಸೋ ೩

ಅಭಯಪ್ರದಕರ ಎನ್ನಭವ ಭಯ ತ್ರಿಭುವನೇಶ್ವರ ಓಡಿಸೀ
ಇಭವರದ ಮದ್ವೇಶ ಸಂತತ ಸಭೆಯ ಸಹನೀ ತೋರೆಲೊ ೪

ಯೋಗ ಪೀಠನೆ ನೀಗಿಸೆನ್ನಯ ಭೋಗಬುದ್ಧಿಯ ಸರ್ವದಾ
ಯೋಗಿಕುಲವರ ಬಾಗಿ ನಮಿಸುವೆ ಯೋಗಮಾರ್ಗವ ತೋರಿಸೊ ೫

ಮಾ ಕಮಲಜ ಭವೇಂದ್ರವಂದಿತ ಮಾಕಳತ್ರ ನಮೋಸ್ತುತೇ
ಯಾಕೆ ಎನ್ನಲಿ ನಿರ್ದಯವು ನೀ ಸಾಕಲಾರದ ಪಾಪಿಯೇ ೬

ಸನ್ನುತಿಸಿ ನಾ ನಿನ್ನ ಬೇಡುವೆ ಸನ್ನುತಾಂಘ್ರಿಯ ಸೇವೆಯಾ
ಸನ್ಮುನೀವರ ಶ್ರೀ ನರಹರೆ ದಾಸದಾಸರ ದಾಸ್ಯವಾ ೭

ಆತ್ಮಶೋಧನೆ

೩೯೭

ಎಲ್ಲರಲ್ಲಿಹ ಲಕ್ಷ್ಮೀನಲ್ಲ ಪೊರೆಯೊ
ನಿಲ್ಲದಿಹ ಮನವ ನಿನ್ನಲ್ಲೆ ಇರಿಸೋ ಪ

ಇಲ್ಲಿ ಯಾರಿಲ್ಲೆಂದು ಮೆಲ್ಲನೆ ಪರಸತಿಯ
ಕಳ್ಳತನದಲಿ ಕೂಡಿ ಸುಳ್ಳು ಹೇಳಿ

ಎಲ್ಲ ಕಡಿ ದಿಗ್ದೇವ ತತ್ವೇಶರಲ್ಲಿರುವ
ಪುಲ್ಲನಾಭನೆ ನಿನ್ನ ವ್ಯಾಪಾರವರಿಯೆ ೧

ಅರುಣನುದಯದಲೆದ್ದು ಪರರ ವಂಚನೆಗಾಗಿ
ಹರಿವೊ ಜಲದಲಿ ಮುಳುಗಿ ಬೆರಳೆಣಿಸಿ
ಅರಿಯದೆ ದ್ರವರೂಪ ಮನರೂಪ ಮೊದಲಾದ್ದು
ಅರಿಷಟ್ಕರಿಂದ ಪರರೊಡವಿಯನು ಬಯಸುವೆನು ೨

ಅಂಗಡಿಯ ತೆರದಿ ನಾನ್ಹಿಂಡುಗೊಂಬೆಗಳ್ಹೂಡಿ
ಅಂಗ ಚಲಿಸದೆ ಮೂಗು ಹಿಂಡುತಲೆ ಕುಳಿತು
ಅಂಗಜ ಜನಕ ಶ್ರೀ ನರಹರಿಯ ಧ್ಯಾನಿಸದೆ
ಭಂಗಕೆ ಗುರಿಮಾಳ್ಪ ಮಣ್ಣು ಚಿಂತೆಪೆನೊ ೩

೩೯೮

ಏನುಗತಿ ಏನುಗತಿ ಇನಕುಲೇಶ
ಹೀನ ವಿಷಯದಿ ಮನ ಶ್ವಾನನಂತಿಟ್ಟ ಎನಗೇನು ಪ

ಮೂರು ಗುಣಗಳಿಂದ ಮೂರು ತಾಪಗಳಿಂದ
ಮೂರು ಈರೆರಡೊಂದು ಮದಗಳಿಂದ
ಮೂರು ಐದಾರಿಂದ ಮರೆತು ತನು ಮೂಲಗಳ
ಸ್ಮರಿಸದೇ ನರಹರಿಯ ನರಕಕ್ಕೆ ಗುರಿಯಾದ ಎನಗೆ ೧

ಅತಿಥಿಗಳಿಗನ್ನ ಬಲು ಹಿತದಿ ಕೊಡದೆಲೆ ಪರ
ಸತಿಯ ಸಂಗದಿ ನೆಲಸಿ ಹಿತವ ಮರೆದು
ರತಿಪತಿಪಿತ ನಿನ್ನ ಸ್ತುತಿಸದೆ ಮತಿಗೆಟ್ಟು
ಕ್ಷಿತಿಯೊಳಗೆ ನಾನೊಬ್ಬ ಯತಿಯಂತೆ ಚರಿಪ ೨

ಇನ್ನಾದರೆನ್ನ ಪಾವನ್ನ ಮಾಡಲು ನಿನ್ನ
ಘನ್ನ ಉಪಕೃತಿ ಮರಿಯೆ ಶ್ರೀ ನರಹರಿಯೆ
ನಿನ್ನ ಪೊರತನ್ಯರನು ಮನ್ನಿಸುವರ ಕಾಣೆ
ಬೆನ್ನ ಬಿದ್ದೆನೊ ದಯವನ್ನು ಮಾಡೆಲೋ ಬೇಗ ೩

೩೯೯

ಏನು ಮಾಡಲೀ ಮನ ಮಾತು ಕೇಳದೇನು ಮಾಡಲಿ
ಶ್ರೀ ನರಹರಿಯ ನೆನೆಯದೆ ಕಂಡ ಹೀನ ವಿಷಯದಲ್ಲಿ
ಶ್ವಾನನಂತೆ ಪೋಪರೇನು ಪ

ಸಾಧು ಸಜ್ಜನರ ಬೋಧನೆಯ ಜರಿಸಿ
ಮಾಧವನೆ ನಿನ್ನ ಪಾದಕೊಯಿರಿ ಮಾಳ್ಪೊದೇನು ೧

ಕಾಯ ಬಾಂಧವರ ಮಾಯಪಾಶಕ್ಕಾಕೆ
ತೋಯಜಾಕ್ಷ ಎನ್ನ ಬಾಯ ಬಿಡಿಸೊರ್‍ಯ್ಯ ೨

ಸೊಕ್ಕಿನಿಂದ ಗಜ ಸಿಕ್ಕಿಬಿದ್ದು ನೈಜ
ದಿಕ್ಕುಕಾಣದಂತೆ ಸಿಕ್ಕೆ ವಿಷಯದಲ್ಲಿ ೩

ತಂದು ತಂದು ಗೋವಿಂದ ನಿನ್ನಲಿಡೆ
ಸಂದುಗೊಂಡು ಬಿಡಿಸಿಕೊಂಡು ಪೋಪುದ್ಯೆಯ್ಯ ೪

ದೇಹಗೇಹದಲ್ಲಿ ಸ್ನೇಹ ಇಡಿಸಿ ಕೆಡಿಸಿ
ಶ್ರೀ ಹಯವದನ ಮೋಹಪಾಶಕ್ಕಾಕೋದೇನು ೫

ಸಾಕು ಜನ್ಮ ಮುಂದೆ ವಾಕು ಕೇಳೋ ತಂದೆ
ಬೇಕು ಪಾದ ಒಂದೇ ಸಾಕಬೇಕೊ ಇಂದೆ ೬

ಹೀನಬುದ್ಧಿಬಿಡಿಸಿ ಜ್ಞಾನ ನಿನ್ನಲಿರಿಸಿ
ಗಾನಲೋಲ ಕಾಯೋ ಶ್ರೀ ನರಹರಿಯೆ ೭

೪೦೦

ನರಹರಿಯೆ ಪಾಲಿಸೊ ಮುನ್ನ
ತರಳ ಪ್ರಹ್ಲಾದನಂತೆನ್ನ ದುರಾಸೆ ಬಿಡಿಸಿ ನಿನ್ನ
ಚರಣದಲ್ಲಿ ಮನ ನಿರುತದಿ ನಿಲ್ಲಿಸಿ ಕರುಣವ ತೋರೋ ಪ

ತರಳತ್ವದಿ ಬಹು ದುರುಳತನದಿ ದಿನ
ತೆರಳಿತು ಅರಿಯದೆ ದೇಹಂಭಾವದಲ್ಲಿ ೧

ಗುರುಕುಲವಾಸದಿ ಸರಿಯಾಗಿರದೆ
ಬರಿದೆ ಕಾಲ ಚರಿಸಿತು ಕ್ರೀಡೆಯಲಿ ೨

ಬರಲು ಯೌವ್ವನವು ಪರಸತಿಯಲಿ ಮನ
ನಿರುತದಿಂದಿರಸಿ ನಾ ಗರುವದಿ ಮೆರೆದೆ ೩

ಅನುದಿನದಲಿ ನವನವ ವಿಷಯದಿ
ಮನ ಕುಣಿ ಕುಣಿದು ಓಡುವುದಯ್ಯ ಹರಿಯೆ ೪

ಶ್ರೀ ನರಹರಿಯೆ ಇನಿತು ಘಾಸಿಸುವುದು
ಘನತೆಯೆ ನಿನಗಿದು ವನಜ ಕುವರನಯ್ಯ ೫

೪೦೧

ನಾನೇನು ಮಾಡಲಯ್ಯ ಎನ್ನಯ ಮನ ನಿನ್ನ
ಧ್ಯಾನಿಸಲೊಲ್ಲದೂ . ಪ

ಶ್ರೀನಿವಾಸನ ದಯ ಕಾಣುವೋಧ್ಯಾಂಗಿನ್ನು
ನೀನೆ ದಯಮಾಡೋ ಗುರು ರಾಘವೇಂದ್ರ ಅ.ಪ

ಕೀರ್ತಿಸದೆ ನಿನ್ನ ವ್ಯರ್ಥ ಚಿಂತೆಯ ಮಾಡಿ
ಪಾರ್ಥಸಾರಥಿ ಮಾರ್ಗಕ್ಹೊರ್ತಾದೆ
ನಾ ಮರ್ತೆ ನಿಜಸೌಖ್ಯವನು ಬೆರ್ತೆ ಅನ್ಯರ ಸತಿಯ
ಸಾರ್ಥಕಾಗದೇ ಪೋಯಿತೆನ್ನ ಆಯು ೧

ಮಾಂಸದಾಸೆಗೆ ಮೀನು ಹಿಂಸೆಪಡುತಿರುವಂತೆ
ಸಂಸಾರದಲಿ ಸಿಕ್ಕೆ ಕಂಸಾರಿ ಪ್ರಿಯ
ಹಂಸರೊಂದಿತ ಎನ್ನ ಸಂಶಯವ ಪರಿಹರಿಸಿ
ಸಂಶಾಂತ ಮತಿ ನೀಡೋ ಸಂಶಯ ದೂರನೇ ೨

ಎಷ್ಟು ಪೇಳಲಿ ಎನ್ನ ದುಷ್ಟ ಕರ್ಮಗಳನ್ನು
ಜೇಷ್ಟ ದೂತನೆ ಎನ್ನ ಕಷ್ಟ ಬಿಡಿಸೋ
ವೃಷ್ಣಿಸಖಪ್ರಿಯ ಮನ ತೃಷ್ಣಗಳನೆ ಕಳೆದು
ಶ್ರೇಷ್ಠಾ ನರಹರಿ ಚರಣಾಭೀಷ್ಟವ ನೀಡೋ ೩

೪೦೨

ಭ್ರಷ್ಟನೆಂದಿಸಿದೆಯಾ ಕೃಷ್ಣನೇ ಎನ್ನ ಪ

ಭ್ರಷ್ಟನೆಂದಿನಿಸಿದ್ಯಾ ಸೃಷ್ಟಿಗೀಶನೆ ಪರ
ಮೇಷ್ಠಿ ಜನಕ ದಿವ್ಯ ದೃಷ್ಟಿ ಕೊಡದಲೆನ್ನ ಅ.ಪ

ನರರ ಸಂದಣಿಯಲಿ ವಿರತಿ ಮಾತಾಡಿಸಿ
ಮಾರನಾಟದಿ ಮನವೆರಗುವಂದದಿ ಮಾಡಿ ೧

ಕಾಷಾಯ ದಂಡಿ ವೇಷವ ಧರಿಸಿ ಮುನ್ನ
ಮೋಸಪಡಿಸಿ ಸ್ತ್ರೀಯರಾಸೆ ಬಿಡಿಸಿದೆನ್ನ ೨

ಸೀಲರಂದಲಿ ಜಪಮಾಲೆ ಕೈಯಲಿ ಪಿಡಿಸಿ
ಕಾಳಿಮರ್ಧನ ದೇವ ಮಲಿನ ಮನವನಿತ್ತು ೩

ಕರವಶವನೆ ಮಾಡಿ ಸರಸದಿಂದ ಕಲೆಹಾಕಿ
ಮರೆಸಿ ನಿನ್ನನೆ ಕೃಷ್ಣ ನಿರಯಭಾಗಿಯ ಮಾಡಿ ೪

ಕರುಣವಾರಿಧಿ ಎನ್ನ ಮರುಳುಗೊಳಿಸಿ ವಿಷಯ
ಶರಪಂಜರದಿ ಬಿಗಿದು ಚರಣ ತೋರಿಸದೆಲೆ ೫

ಮದ ಮತ್ಸರ ಕಾಮ ಕ್ರೋಧ ಲೋಭ ಮೋಹ
ಒದಗಿಸೆನ್ನಲಿ ದೂರನಾದಿಯ ಹೇ ಮಾಧವ ೬

ಪತಿತಾಗ್ರಣಿಯು ನಾನು ಪತಿತ ಪಾವನ ನೀನು
ಸತತ ನಿನ್ನಯ ಸಂಸ್ಮೃತಿಯ ನೀಡದಲೆನ್ನ ೭

ದ್ವಿಜ ಅಜಮಿಳ ನಿಜನಾಮದಿಂದಲಿ
ಸುಜನನೆಂದೆನಿಸಿದ್ದು ನಿಜತೋರದಲೆನ್ನ ೮

ಹೀನರೊಳೆನ್ನೆಂಥ ಹೀನ ಜನರ ಕಾಣೆ
ಸಾನುರಾಗದಿ ಕಾಯೊ ಶ್ರೀ ನರಹರಿಯೆ ೯

೪೦೩

ಹೀಂಗಾಯಿತ್ಹೀಂಗಾಯಿತೆ ಎನ್ನಯ ಬಾಳು ಪ

ಗಂಗಾಜನಕ ಪಾಂಡುರಂಗ ಮೂರುತಿಯನು
ಹಿಂಗದೆ ಭಜಿಸದೆ ಅಂಗಜನ್ವಶನಾದೆ ೧

ಕಂತು ಜನಕ ಲಕ್ಷ್ಮೀಕಾಂತ ಮೂರುತಿಯನ್ನು
ಚಿಂತಿಸದೆ ವಿಷಯ ಚಿಂತನೆಯಲ್ಲಿರುವೆ ೨

ಡಂಭಕತನದಿ ಬಲು ಹಿಂಡು ಜನರ ಮುಂದೆ
ಸಂಭಾವಿತನಂದದಿ ಶುಂಭ ನಾ ಮೆರೆದೆನೊ ೩

ಅಂಗನೆಯರ ಅಂಗಸಂಗ ಬಯಸಿ ಅಂತ
ರಂಗದಿ ಕುಳಿತು ಬಹು ಸಂಗತಿ ಕಲ್ಪಿಸಿದೆ ೪

ನಾನು ಪೇಳುವುದೇ ಸನ್ಮಾನ್ಯವೆಂದುಸುರಿ ನಾ
ಮಾನಿನಿಯರ ಕೂಡಿ ಶ್ವಾನನಂದದಿ ಬಾಳ್ವೆ ೫

ಬಿಡಿಸೋ ಬಿಡಿಸೋ ಹರಿ ಕೇಡು ಬುದ್ಧಿಗಳನ್ನು
ಈಡು ನಿನಗಿಲ್ಲೆಂಬೊ ದೃಢಮನಸನೆ ಕೊಡೊ ೬

ಘನತೆ ನಿನಗಲ್ಲವೊ ದೀನರ ಬಳಲಿಪುದು
ಮಾನದಿಂದಲಿ ಕಾಯೊ ಶ್ರೀ ನರಹರಿಯೇ ೭

೪೦೪

ಹುಚ್ಚು ಹಿಡಿದಿದೆ ಎನಗೆ ಹುಚ್ಚು ಹಿಡಿದಿದೆ ಪ

ತುಚ್ಛ ವಿಷಯವೆಂಬುವಂಥ ಅಚ್ಚಮದ್ದು ನೆತ್ತಿಗೇರಿ ಅ.ಪ

ಹಿರಿಯರರಿಯೆ ಕಿರಿಯರರಿಯೆ ಹರಿಯ ಸ್ಮರಣೆ ಮಾಡಲರಿಯೆ
ನಾರಿಯರ ಪರಿಚಯದಿ ಆರು ಪುರುಷರೊಡನೆ ಇರುವೆ ೧

ಇದ್ದರಿದ್ದೆ ಎದ್ದರೆದ್ದೆ ಇದ್ದ ಸುದ್ದಿ ಪೇಳಲರಿಯೆ
ಕದ್ದ ಕಳ್ಳನಂತೆ ಇದ್ದು ಬುದ್ಧಿ ಹೊದ್ದಿಕಿ ಬಿಟ್ಟಿರುವೆ ೨

ಹೀನಗುಣಗಳೇನು ಪೇಳಲಿ ಶ್ರೀ ನರಹರಿಯೆ ನೀನೆ ಬಲ್ಲಿ
ಮಾನವಂತರು ಜ್ಞಾನವಿತ್ತು ಅಜ್ಞಾನ ವಿಷಯ ಹಾನಿ ಮಾಡಿರಿ ೩

೪೦೫

ಹ್ಯಾಂಗಾದರು ಎನ್ನ ನೀ ರಕ್ಷಿಸ ಬೇಕೋ
ಸಾಗರಶಯನ ಕೃಷ್ಣಾ ಪ

ಭಾಗವತರ ಸಂಗ ಬೇಗದಿಂದಲಿ ಇತ್ತು
ಹೋಗಲಾಡಿಸು ಭವವ ಶ್ರೀ ಕೃಷ್ಣ ಅ.ಪ

ಬಾಲೇರ ಸಲುವಾಗಿ ಕೀಳು ಜನರಲ್ಲಿ
ಶೀಲ ಜರಿದು ಯಾಚಿಸಿ
ಕಾಳಿ ಮರ್ಧನ ನಿನ್ನ ಒಲುಮೆಯ ಪಡೆಯದೆ
ಕಾಲ ಬಲಿಗೆ ಸಿಕ್ಕೆನೊ ಶ್ರೀ ಕೃಷ್ಣ ೧

ಅಂಗಜನಾಟಕೆ ಹಗಲಿರುಳೆನ್ನದೆ ಪರ
ಅಂಗನೆರ ಕೂಡಿ
ಮಂಗಳಮಹಿಮ ತುರಂಗ ವದನ ದೇವ
ಭಂಗಕ್ಕೆ ಗುರಿಯಾದೆನೊ ಶ್ರೀ ಕೃಷ್ಣ ೨

ದುರುಳರ ಸಂಗವನೆಲ್ಲ ಜರಿದು ಶ್ರೀ ನರಹರೆ
ಕಾರುಣ್ಯದಲಿ ಭಕ್ತನ
ಅರಿಷಟ್ಕರನೆ ಕೊಂದು ಕರಿವರದನೆ ಘೋರ
ನರಕಕ್ಕೆ ಭಯ ತಪ್ಪಿಸೋ ಶ್ರೀಕೃಷ್ಣ ೩

ತತ್ವಚಿಂತನೆ

೪೦೬

ಮತವೆಂದರೆ ಮಧ್ವ ಮತವೇ ಮತವು
ಶ್ರುತಿ ಸ್ಮೃತಿ ತತಿಗೆ ಸಮ್ಮತವಾದುದರಿಂದ ಪ

ಮಧುವೆಂದರಾನಂದ ಒದಗಿ ಬರುವುದು ಸತ್ಯ
ಮಧುವೈರಿ ಒಲಿದು ಪಾದವ ತೋರುವ
ಸದಮಲ ಭಾವದಲಿ ಮೇದಿನಿಯೊಳಗಿನ್ನು
ಮದಮತ್ಸರಿಲ್ಲದೆಲೆ ಮುದದಿಯೋಚಿಸಲಾಗಿ ೧

ವ ವರ್ಣವೆಂದರೆ ಶ್ರೀ ವರನ ಜ್ಞಾನವು
ಪವನಪಿತ ತಾ ಒಲಿದು ಈವನದನು
ಹೇವವಿಲ್ಲದೆ ಶುದ್ಧ ಭಾವದಿಂದಾಚರಿಸೆ
ಭವ ದೂರಗೈಸಿ ಪಾವನಮಾಳ್ಪೊದದರಿಂದ ೨

ಮತವೆಂದರೆ ನಮ್ಮ ರತಿ ಪತಿ ಪಿತಭಾವ
ಸತತ ಸಮ್ಮತಿಯಿತ್ತು ಖತಿಯಳಿವದ್ಯೆ
ಕ್ಷಿತಿಯೊಳಗೆ ಪಿತ ಶ್ರೀ ನರಹರಿಯ ಪದಪದುಮ
ಅತಿ ತೀವ್ರದಲಿ ತೋರಿ ಖ್ಯಾತಿ ತಂದೀವುದಕೆ ೩

ಅನುಬಂಧಗಳು

ಅನುಬಂಧ-೧

ಕಠಿಣಪದಗಳ ಅರ್ಥ

ಅಂಡಜ - ಗರುಡ

ಅಂಡಜಧ್ವಜ - ಗರುಡಧ್ವಜನಾದ ಶ್ರೀಹರಿ

ಅಂಬುದ - ಸಮುದ್ರ, ಮೋಡ

ಅಂಬುದಶ್ಯಾಮ - ಮೇಘಶ್ಯಾಮ - ನಾದ ಶ್ರೀಹರಿ

ಅಂಬುಜಮಿತ್ರ - ಸೂರ್ಯ

ಅಂಬುಜ ಮಿತ್ರನ ತನಯ - ಸುಗ್ರೀವ

ಅಕಣಾಷ್ಮ - ವಜ್ರಶರೀರ

ಅಕ್ಕೋಜ - ಅಕ್ಕಜ - ಆಶ್ಚರ್ಯ

ಅಕ್ಷೀಣ - ಶಕ್ತನಾದ

ಅಗದ - ಔಷಧ

ಅಗದಂಕರ - ಔಷಧ ನೀಡುವ ವೈದ್ಯ

ಅಘ - ಪಾಪ

ಅಜ - ಬ್ರಹ್ಮ

ಅಜತಾತ - ಶ್ರೀ ಹರಿ

ಅಣುಗ - ಮಗ

ಅನಂಗ - ಮನ್ಮಥ

ಅನಂಗಕೇಳಿ - ಕಾಮಕೇಳಿ

ಅನಂಗ ಜನಕ - ಶ್ರೀಹರಿ

ಅನಘ - ಪಾಪಲೇಪವಿಲ್ಲದ ಶ್ರೀಹರಿ

ಅನಶನರು - ಊಟ ಮಾಡದವರು

ಅನುಗ - ಅಣುಗ, ಮಗ

ಅನುಮೇಯಿಸು - ಊಹಿಸು

ಅನುಸ್ಮೃತಿ - ಮತ್ತೆ ಮತ್ತೆ ಕಾಡುವ ನೆನಪು

ಅನಿಮಿಷರು - ರೆಪ್ಪೆಯಿಲ್ಲದವರು, ದೇವತೆಗಳು

ಅಪಾಂಗ - ಕರುಣಾದೃಷ್ಟಿ

ಅಮಿತ ಪ್ರಮತಿ - ಮಧ್ವಾಚಾರ್ಯ

ಅಮ್ಮ - ತಂದೆ

ಅಮ್ಮೆ - ಅಮ್ಮಿ, ಮೊಲೆವಾಲು

ಅಯನ - ಪ್ರದೇಶ

ಅರಿ - ಚಕ್ರ

ಅರಿದರೀಧರ - ಶಂಖ ಚಕ್ರಧಾರಿ

ಅಲಿವರು - ಅಲೆಯುವವರು

ಅವನಿಜೆ - ಸೀತೆ

ಅವನಿಜೆಪತಿ – ಶ್ರೀರಾಮ
ಅವನಿಪ – ರಾಜ
ಅವನಿಪಮಹೇಂದ್ರ – ರಾಜಮಹೇಂದ್ರಿ
ಅವಸರ – ಸಂದರ್ಭ
ಅಸುಳೆ – ಮುಗ್ಧ
ಆನಕ – ತಮಟೆ
ಆನಕದುಂದುಬಿ – ವಸುದೇವ
ಆನಕದುಂದುಬಿ ಕುವರ – ಶ್ರೀ ಕೃಷ್ಣ
ಆಪುತ – ಆಪ್ತ
ಆರ್ತಿ – ರೋಗ, ವ್ಯಥೆ
ಆಲ್ಪರಿ – ಅಂಗಲಾಚು, ಗೋಳಾಡು
ಆಳುತನ – ಸೇವಕತನ
ಇಭ – ಆನೆ
ಇಭಕರ – ಆನೆ ಸೊಂಡಿಲು
ಇಭಕರ ಸದ್ರೋರು – ಆನೆಯ ಸೊಂಡಿಲಂತಹ ತೊಡೆ
ಇಭರಿಪು – ಸಿಂಹ
ಇಭರಿಪು ಸಮಕಟಿ – ಸಿಂಹದ ನಡುವಿನಂತಹ ಸೊಂಟ
ಇಷ್ಟಕಭಾವ – ಪ್ರೀತಿಪಾತ್ರವಾದ
ಇಳಾ – ಭೂಮಿ
ಇಳಾಸುತೆ – ಸೀತಾದೇವಿ
ಉಡುಗಣ – ನಕ್ಷತ್ರ ಸಮೂಹ
ಉತ್ತಾರ – ಸಂದಾಯ
ಉದಧಿ – ಸಾಗರ
ಉಪಕ್ರಮ – ಸತ್ವಪರೀಕ್ಷೆ
ಉಮ್ಮೆಯರಸ – ರುದ್ರ
ಉರುವಿಪತಿ – ರಾಜ
ಊಳಿಗತನ – ಸೇವೆ
ಎದೆಹಾರು – ಚಿತ್ತ ಚಾಂಚಲ್ಯ
ಎಳೆಗಂದಿ – ಹೊಸದಾಗಿ ಕರು ಹಾಕಿರುವ ಹಸು
ಏಣ – ಜಿಂಕೆ
ಏಸು – ಎಷ್ಟು
ಕಂಜೋದ್ಭವ – ಬ್ರಹ್ಮ
ಕಂಜೋದ್ಭವನಮ್ಮ – ಲಕ್ಷ್ಮೀದೇವಿ
ಕಂತುಜನಕ – ಮನ್ಮಥನ ತಂದೆಯಾದ ಶ್ರೀಹರಿ
ಕಂಬುಕಂಠ – ಶಂಖದಂತಹ ಕೊರಳುಳ್ಳವನು
ಕಕವಿಕ – ಕಕ್ಕಾಬಿಕ್ಕಿ, ಭ್ರಾಂತಿ
ಕಕ್ಷ – ಪಕ್ಷ
ಕಣ್ಣಿ – ಹಗ್ಗ
ಕನಕ ಕಶ್ಯಪ – ಹಿರಣ್ಯಕಶಿಪು
ಕಮಲ ಸುಹೃತ್ ತನಯ – ಸೂರ್ಯ ಪುತ್ರನಾದ ಸುಗ್ರೀವ
ಕರ – ಕಿರಣ, ರಶ್ಮಿ
ಕರಣೆ – ಗೆಡ್ಡೆ

ಕರ್ಣಧಾರ	–	ಅಂಬಿಗ
ಕಲಭಾಷಣ	–	ಪ್ರಿಯವಾದ ಮಾತುಗಳು
ಕಶ	–	ಚಾವಟಿ
ಕಾಂತಾರ	–	ಅಡವಿ
ಕಾಕು ಮೋಕರು	–	ಕೆಟ್ಟಜನರು
ಕಾಮಿನೀಚೋರ	–	ರಾವಣ
ಕಾಯಜ	–	ಮನ್ಮಥ
ಕಾಯಜನಯ್ಯ	–	ಮನ್ಮಥಪಿತನಾದ ಶ್ರೀಹರಿ
ಕಾರುಣಿಕ	–	ಕರುಣಿ
ಕಾದ್ರ್ರವೇಯ	–	ಕದ್ರುವಿನ ಮಗನಾದ ಸರ್ಪ, ಶೇಷ
ಕಾದ್ರ್ರವೇಯ ಭೂಷಣ	–	ಶಿವ
ಕಿಟಿ	–	ವರಾಹ
ಕಿಸರು	–	ಕೋಪ, ಕೆಂಪುಬಣ್ಣ
ಕೀಶ	–	ಕೋತಿ
ಕುಂಡಲಿ	–	ಸರ್ಪ
ಕುಂದ	–	ಮಲ್ಲಿಗೆ
ಕುಂದರದನ	–	ಮಲ್ಲಿಗೆಯಂತಹ ದಂತಪಂಕ್ತಿ–ಯುಳ್ಳನನು
ಕುಂಭಿಣಿ	–	ಭೂಮಿ
ಕುಮತಿ	–	ಅಜ್ಞಾನಿ
ಕುರುವಿಂದ	–	ಮಾಣಿಕ್ಯ, ಕೆಂಪು ಹವಳ
ಕುರುವಿಂದಾದರ	–	ಹವಳದಂಥ ತುಟಿಯುಳ್ಳವನು
ಕುಲಪ	–	ಮನೆಯ ಯಜಮಾನ
ಕುವನ	–	ಕಗ್ಗಾಡು
ಕುಶಲಗತಿ	–	ಕ್ಷೇಮಕರವಾದ ನಡೆ
ಕೂಕ	–	ಕುಹಕ
ಕೂಕಜನ	–	ಕುಹುಕಜನ
ಕೂರ್ಮಪ್ರಪದ	–	ಆಮೆಯ ಚಿಪ್ಪಿನಾಕಾರದ ಮುಂಗಾಲು
ಕೃತಿ	–	ಲಕ್ಷ್ಮೀದೇವಿ
ಕೃತಿರಮಣ	–	ಶ್ರೀಹರಿ
ಕೃಪೀಟಯೋನಿ	–	ಪ್ರಳಯಾಗ್ನಿ
ಕೇಳಿ	–	ಕ್ರೀಡೆ
ಕೊಳವೆ ರೋಗ	–	ಭತ್ತದ ಪೈರು ಕೊಳೆಯುವಂತೆ ಬರುವ ರೋಗ
ಕೋಲ	–	ಕ್ರೋಡ, ಕಾಡಹಂದಿ, ವರಾಹ
ಕ್ಲಾಪ್ತ	–	ಕ್ಲುಪ್ತ, ನಿಗದಿಪಡಿಸಿದ
ಕ್ಷಿಪ್ರಮನದ	–	ತ್ವರಿತವಾದ ಮನಸ್ಸನ್ನು ನೀಡುವವನು – ಗಣಪತಿ
ಕ್ಷೋಣಿ	–	ಭೂಮಿ

ಖಂಡಾರ್ಥ - ಟಿಪ್ಪಣಿ
ಖಗಪ - ಗರುಡ
ಖಗರ್ತ - ಶ್ರೀ ಹರಿಯ ಪರವಾದ ಅರ್ಥ
ಖರಿ - ಖರೆ, ಸತ್ಯ
ಖೂನ - ಗುರುತು
ಗಂಡ - ವಿಪತ್ತು
ಗಗನರಾಯ - ಆಕಾಶರಾಯ
ಗಜಗಹ್ವರ - ಆನೆಗೊಂದಿ
ಗತಆಗತ - ಹಿಂದಿನದು ಮುಂದಿನದು
ಗಾತ್ರ - ಶರೀರ, ಅವಯವ
ಗಾರು - ಹಿಂಸೆ
ಗೋಧುಮಚೂರ್ಣ - ಗೋಧಿಹಿಟ್ಟು
ಗೋಷ್ಠ - ಕೊಟ್ಟಿಗೆ
ಗ್ರೀವ - ಗಂಟಲು
ಘಟಿಕ - ಸಮರ್ಥ
ಘೋರಿಸು - ತೊಂದರೆ ಕೊಡು, ಹಿಂಸಿಸು
ಚಟಾಕು - ಒಂದು ಅಳತೆ, ಸೇರಿನ ಹದಿನಾರನೇ ಒಂದು ಭಾಗ
ಚರಿಯ - ಚರ್ಯೆ, ನಡತೆ
ಚಾಟು ವಚನ - ಪ್ರಿಯವಾದ ಮಾತುಗಳು
ಚಿಣ್ಣ - ಬಾಲಕ

ಚಿನ್ನವತ್ಸ - ಎಳೆಗರು
ಚಿನ್ನವಾರ - ಅಕ್ಕಸಾಲಿ
ಚೂತಪಲ್ಲವ - ಮಾವಿನ ಚಿಗುರು
ಛದ್ಮ - ಅಜ್ಞಾನ
ಛವಿ - ಕಿರಣ, ಕಾಂತಿ
ಜಂಘೆ - ತೊಡೆಯ ಕೆಳಭಾಗ
ಜಗದುದರ - ಜಗತ್ತನ್ನೆಲ್ಲಾ ತನ್ನ ಹೊಟ್ಟೆಯಲ್ಲಿ ಇಟ್ಟುಕೊಂಡವನು
ಜರಿ - ಜರೆ, ಮುಪ್ಪು
ಜಲಮೂಲ - ಮೋಡ
ಜಾಂಬೂನದ - ಚಿನ್ನ, ಹೇಮ
ಜಾಂಬೂನದ ಛಾಯೆ - ಹೇಮವರ್ಣೆ
ಜಾಡಿ - ಕಂಬಳಿ
ಜಾಡಿಮಯ್ಯ - ಕಂಬಳಿಯನ್ನು ಹೊದ್ದವನು
ಜಾಳುಮಾತು - ಹರಕು ಮಾತು
ಜ್ಯೇಷ್ಠ - ಆದಿಪುರುಷನಾದ ಶ್ರೀಹರಿ
ಜ್ಯೇಷ್ಠಧೂತ - ಶ್ರೀಹರಿಯ ಪ್ರತಿನಿಧಿ
ಡಿಂಗರಿಗ - ಭಕ್ತ, ಸೇವಕ
ತಡೆ - ಅಡ್ಡಿ
ತರಣಿ - ಸೂರ್ಯ
ತಮ್ಮಂದಿ - ತಮ್ಮ ಮಂದಿ

ತಾಪಲೋಪ	–	ಸಿಟ್ಟು ಕಷ್ಟ ಕೋಪಗಳಿಂದ ದೂರವಾದವನು
ತಾರಕ	–	ಅಂಬಿಗ, ದಾಟಿಸುವವ
ತಾರಕೆ	–	ನಕ್ಷತ್ರ
ತಾರಾರಮಣ	–	ಚಂದ್ರ
ತಾವರಿಸು	–	ತವಿಸು, ಪರಿಹರಿಸು
ತುಡುಗ	–	ತುಂಟ
ತುತಿ	–	ಸ್ತುತಿ
ತೆವರಿ	–	ಗದ್ದೆಯ ಬದು
ತೊಂಡ	–	ಸೇವಕ
ತೋಷಣ	–	ಸಂತೋಷ ಪಡಿಸುವ
ತ್ರಿವಳಿ	–	ಹೊಟ್ಟೆಯ ಮೇಲಿನ ಮೂರುಗೆರೆಗಳು
ಥಂಬಿಸು	–	ಸ್ಥಂಬಿಸು, ನಿಲ್ಲಿಸು
ದಂದುಗ	–	ಕಷ್ಟ
ದಟಿತ	–	ದಪ್ಪನಾದ
ದನುಜ ಡಿಂಬ	–	ದೈತ್ಯ ಬಾಲಕನಾದ ಪ್ರಹ್ಲಾದ
ದಮ	–	ಇಂದ್ರಿಯ ನಿಗ್ರಹ
ದರಿ	–	ಆಳ, ರಸಾತಳ
ದಲ್ಲಣ	–	ಭಯ ಪಡಿಸುವವನು
ದಾಂತ	–	ಮನೋನಿಗ್ರಹ ವುಳ್ಳವನು
ದಾವ	–	ಕಾಡುಗಿಚ್ಚು
ದಾವು	–	ಹಗ್ಗ
ದಿಂಡೇರು	–	ದೈತ್ಯರು
ದಿನಕರನ್ವಯ	–	ಸೂರ್ಯವಂಶ
ದುಂದುಬಿ	–	ನಗಾರಿ
ದುಮ್ಮು	–	ಧೂಳು
ದುರ್ಗ	–	ಕೋಟೆ
ದುರ್ಗಮ	–	ಪ್ರವೇಶಿಸಲಾಗದ
ದ್ವಿಪ	–	ಆನೆ
ದ್ವಿಪವರ	–	ಗಜರಾಜ
ಧರಣೀಧರ	–	ಪರ್ವತ
ಧವ	–	ಒಡೆಯ, ಪತಿ
ಧಾತ	–	ಬ್ರಹ್ಮ
ಧಾತಪಿತ	–	ಶ್ರೀಹರಿ
ಧಾರ್ತರಾಷ್ಟ	–	ಧೃತ ರಾಷ್ಟ್ರನ ಮಗ
ಧಾವತಿ	–	ಆಯಾಸ
ಧೀ	–	ಜ್ಞಾನಿ, ಪಂಡಿತ
ಧೀಸುದಿ	–	ಜ್ಞಾನಿ ಮತ್ತು ಪಂಡಿತ
ಧೂಮಕೇತು	–	ಅಗ್ನಿ
ಧೂಮಕೇತು ಸಖ	–	ಕಶ್ಯಪಋಷಿ
ಧೂಮಕೇತು ಸಖ ಸೂನು	–	ಗರುಡ

ಧೂಮಕೇತು ಸಖ
ಸೂನ ವಾಹನ – ಶ್ರೀಹರಿ
ನಂದತೀರ್ಥ – ಆನಂದ ತೀರ್ಥ
ನಂದಮುನಿ – ಆನಂದಮುನಿ ಹೆಸರಿನ ಮಧ್ವಾಚಾರ್ಯ
ನಂದಿಸು – ಆನಂದಪಡು
ನರವಾಹ – ಕುಬೇರ
ನಾಗ – ಸರ್ಪ, ಆನೆ
ನಿಂದ್ರಿಸು – ನಿಂದಿಸು, ತೆಗಳು, ನಿಲ್ಲಿಸು
ನಿರ್ಘೃಣ – ಕೀಳು ಮನುಷ್ಯ
ನಿರಯ – ತಮಸ್ಸು, ಅಜ್ಞಾನ
ನಿರಯಭಾಗಿ – ಅಜ್ಞಾನಿ
ನಿಶಿಚರೇಶ – ನಿಶಾಚರೇಶ, ರಾಕ್ಷಸರಾಜ
ನೀರದ – ಮೋಡ
ನೀರದ ನೀಲ – ನೀಲಮೇಘ ಶ್ಯಾಮನಾದ ಶ್ರೀ ಕೃಷ್ಣ
ನುಡತೆ – ಮಾತಿನ ರೀತಿ
ಪಂಕ – ಕೆಸರು
ಪಂಚಬಾಣ – ಮನ್ಮಥ
ಪಂಚಬಾಣಪಿತ – ಶ್ರೀಹರಿ
ಪಂಚಸೂನ ಶರ– ಮನ್ಮಥ
ಪಂಚಸೂನ
ಶರನ ಪಿತ – ಶ್ರೀಹರಿ
ಪಂಥ – ಪಂತ – ಪಂದ್ಯ

ಪಂಥ – ಪಥ, ದಾರಿ
ಪಟುತನ – ಸಾಮರ್ಥ್ಯ
ಪತಿತ – ಪಾಪಿ
ಪರ – ಶ್ರೇಷ್ಠ
ಪರಗತಿ – ಮೋಕ್ಷ
ಪರಮ ಹಂಸ – ಯತಿ
ಪರಮೇಷ್ಠಿ – ಬ್ರಹ್ಮ
ಪರಮೇಷ್ಠಿ
ಜನಕ – ಶ್ರೀಹರಿ
ಪರಿಪಂಥಿ – ಶತ್ರು
ಪರಿಯಂಕ – ಹಾಸಿಗೆ
ಪರಿಹಾಸ – ವಿನೋದ
ಪಸರಿಸು – ವಿಸ್ತರಿಸು
ಪಸಿ – ಹಸಿ
ಪಾಕಶಾಸನ – ಇಂದ್ರ
ಪಾಕಶಾಸನನುಜ– ಉಪೇಂದ್ರ, ವಾಮನ
ಪಾಣಿ – ಹಸ್ತ
ಪಾತರ – ಪಾತ್ರ (ನಟನೆ)
ಪಾರುಗಾಣಿಸು – ದಡಸೇರಿಸು
ಪಿರಿಯಾರು – ಹಿರಿಯರು
ಪೂತ – ಪವಿತ್ರ
ಪೂರತಿ – ಪೂರ್ತಿ
ಪೂರ್ಣಮತಿ – ಮಧ್ವಾಚಾರ್ಯ
ಪೋತ – ಬಾಲಕ
ಪ್ರತ್ಯುಪಕೃತಿ – ಪ್ರತ್ಯುಪಕಾರ
ಪ್ರವಣ – ಆಸಕ್ತಿಯುಳ್ಳವನು, ನಿಷ್ಠಾವಂತ

ಪ್ರಸದ – ಕಾಲಿನ ಮುಂಭಾಗ
ಪ್ರವರ – ಶ್ರೇಷ್ಠ
ಬಟ್ಟು – ಬೊಟ್ಟು, ಮೂಗುತಿ
ಬಣವಿ – ಬಣವೆ , ಹುಲ್ಲಿನ ರಾಶಿ
ಬನ್ನ – ಬವಣೆ, ಕಷ್ಟ
ಬಿನುಗು – ಕ್ಷುದ್ರವಾದ , ವ್ಯರ್ಥ
ಬೆಂಬಿದ್ದಲ್ಲಿ – ಹಿಂಬಾಲಿಸಿದಾಗ
ಬೋಳೆ – ವ್ಯರ್ಥ
ಬ್ರಕುಟಿ – ಹುಬ್ಬು
ಭಾರ – ದುಃಖ
ಭಾವಜ – ಮನ್ಮಥ
ಭಿಡೆ – ದಾಕ್ಷಿಣ್ಯ
ಭೀಕರಿಸು – ಹೆದರಿಸು
ಭುಜಂಗ – ಸರ್ಪ
ಭುಜಂಗಮವರ – ಕಾಳಿಂಗ ಸರ್ಪ
ಭುಜಪುಂಗ – ನಾಗರಾಜ
ಭುಜಪುಂಗರಿಪು – ಗರುಡ
ಭುಜಪುಂಗರಿಪು ಧ್ವಜ – ಗರುಡ ಧ್ವಜನಾದ ಶ್ರೀಹರಿ
ಭೂತಸರ್ಗ ಮಂಗಳ – ಈಗಿನ ಪರಿಸ್ಥಿತಿ
ತರಂಗಿಣಿ – ತುಂಗಾನದಿ
ಮಂದಮತಿ – ಅಜ್ಞಾನಿ
ಮಡ್ಡತನ – ಅಜ್ಞಾನ
ಮದಡ – ದಡ್ಡ
ಮನ್ನಕೆ – ಮನಸಿಗೆ
ಮನ್ನವಿಟ್ಟು – ಮನವಿಟ್ಟು
ಮನ್ನೆವಾಕು – ಮನ್ನಣೆಯ ಮಾತು
ಮರುದಂಶ – ವಾಯುವಿನ ಅವತಾರ
ಮರುಳು – ಹುಚ್ಚು
ಮಶ್ರುಣ – ಗಂಧ
ಮಹೇಂದ್ರ ಸುತ – ವಾಲಿ
ಮಾಕಳತ್ರ – ಲಕ್ಷ್ಮೀಪತಿ
ಮಾತುರ – ಮಾತ್ರ
ಮಾರಿ – ಅಳಿವು, ನಾಶ, ಮೃತ್ಯು
ಮಿಥ್ಯಾಜ್ಞಾನ – ಅಜ್ಞಾನ
ಮೀನಕೇತು – ಮನ್ಮಥ
ಮೀನಕೇತುಪಿತ – ಶ್ರೀಹರಿ
ಮೀನಾಕಾರ – ಮತ್ಸ್ಯಾವತಾರಿ
ಮುಪ್ಪುರಿ – ಮೂರು ಹುರಿ
ಮೇಟಿ – ವ್ಯವಸಾಯ
ಮೇಟಿಪೊಲ – ವ್ಯವಸಾಯಕ್ಕೆ ಯೋಗ್ಯವಾದ ಭೂಮಿ
ಮೋದತೀರ್ಥ – ಆನಂದತೀರ್ಥ
ಯಜ್ಞಸೇನೆ – ದ್ರೌಪದಿ
ಯವ – ಗೋಧಿ
ಯುಕುತಿ – ಯುಕ್ತಿ, ತರ್ಕಬದ್ಧವಾದ ವಾದಸರಣಿ

ಯುಕುತ - ಯುಕ್ತ
ರಂಭಾಫಲ - ಬಾಳೆಹಣ್ಣು
ರಜನೀಕಾಂತ - ಚಂದ್ರ
ರತಿಪತಿ - ಮನ್ಮಥ
ರತಿಪತಿಪಿತ - ಶ್ರೀಹರಿ
ರಥಾಂಗ - ಚಕ್ರ
ರಥಾಂಗಧರ - ಚಕ್ರಧಾರಿಯಾದ ಶ್ರೀಕೃಷ್ಣ
ಲವ - ನಿಮಿಷ, ಕ್ಷಣ
ಲಶುನ - ಹಸಿ ಶುಂಠಿ
ಲಾಗ - ಸೋಲು
ಲೋಕರು - ಲೋಕದ ಜನರು
ಲೋಕ ಹರಟೆ - ವ್ಯರ್ಥ ಮಾತುಗಳು
ವನಜಸಂಭವ - ಬ್ರಹ್ಮ
ವನಜಸಂಭವಪಿತ - ಶ್ರೀಹರಿ
ವಹ್ನಿಪುರ - ಬನ್ನೂರು
ವಾಯುಜ - ವಾಯುವಿನ ಅಂಶದಲ್ಲಿ ಜನಿಸಿದ ವಿಷ್ವಕ್ಸೇನ
ವಾರುತಿ - ವಾರ್ತೆ
ವಾರಿದ - ಮೋಡ
ವಾರ್ತಿ - ವಾರ್ತೆ
ವಾಸ - ವಸನ, ವಸ್ತ್ರ
ವಾಸರ - ಜಿಗುಪ್ಸೆ
ವಾಳುಕ - ಮರಳು
ವಿಕಳ - ನಾಶ
ವಿದಿತ - ತಿಳಿಯುವುದು
ವಿದಿತ ವೇದ್ಯ - ಚೆನ್ನಾಗಿ ತಿಳಿಯುವುದು
ವಿಪರ್ಯ - ತಪ್ಪುತಿಳುವಳಿಕೆ, ಅಜ್ಞಾನ
ವಿಪರ್ಯಯ - ಬದಲಾವಣೆ
ವಿಪುಲ ಪ್ರಮತಿ - ಪೂರ್ಣ ಜ್ಞಾನಿಗಳಾದ ಮಧ್ವಾಚಾರ್ಯರು
ವಿಮತರು - ವಿರೋಧ ಅಭಿಪ್ರಾಯದವರು
ವಿಮಲಾತಮ - ವಿಮಲಾತ್ಮ, ಶುದ್ಧಮನಸ್ಸು
ವಿರತಿ - ವೈರಾಗ್ಯ
ವಿವೃತಿ - ವಿಶೇಷ ವ್ಯಾಖ್ಯಾನ
ವಿಹತಿಗಳು - ವಿಹಿತ ಕರ್ಮಗಳು
ವೀಸ - ಒಂದು ಅಳತೆ, ಒಂದು ನಾಣ್ಯ, ಒಂದಾಣೆ
ವೃಷ್ಣಿವರ್ಣ - ಮೇಘವರ್ಣನಾದ ಶ್ರೀಹರಿ
ವೃಷ್ಣಿ - ಯಾದವರು, ಮೇಘ
ವೃಷ್ಣಿಸಖ - ಶ್ರೀಕೃಷ್ಣ

ವೃಷ್ಣಿಸಖಪ್ರಿಯ	–	ಶ್ರೀ ಕೃಷ್ಣನಿಗೆ ಪ್ರಿಯನಾದ
ವೆತ್ತಣಿಸು	–	ವ್ಯತ್ಯಾಸಮಾಡು
ವ್ಯಕುತ	–	ವ್ಯಕ್ತ
ವ್ಯಗ್ಗಳ	–	ಶ್ರೇಷ್ಠ
ಶಂಶನ	–	ಶುಭಾಶಂಸ, ಆಶೀರ್ವಾದ
ಶಕತಾಳು	–	ಶಕ್ತ ಆಳು, ಸಮರ್ಥ
ಶಣಿಸು	–	ಸೆಣಸು
ಶಮ	–	ಸಹನೆ
ಶರಧಿಕುಮಾರಿ	–	ಲಕ್ಷ್ಮೀದೇವಿ
ಶರ್ಕರ	–	ಸಕ್ಕರೆ
ಶಶಾಂಕ ಸೋದರಿ	–	ಚಂದ್ರನ ಸಹೋದರಿಯಾದ ಲಕ್ಷ್ಮೀದೇವಿ
ಶಶಿರಶ್ಮಿಮಂಡಲ	–	ಚಂದ್ರಮಂಡಲ
ಶೀತಲಕರ	–	ಚಂದ್ರ
ಶೀತಲಕರ ಕುಲಜಾತ	–	ಚಂದ್ರ ವಂಶದಲ್ಲಿ ಜನಿಸಿದ ಶ್ರೀಕೃಷ್ಣ
ಶೀತಲ ಕಿರಣ	–	ಚಂದ್ರ
ಶೀತಲ ಕಿರಣ ಭೂಷಣ ಧನು	–	ಶಿವ ಧನುಸ್ಸು
ಶುಕಭಾಷಣ	–	ಗಿಳಿಮಾತು
ಶೆಳವು	–	ಸೆಳವು, ಆಕರ್ಷಣೆ. ಸೆಳೆತ
ಶೊಂಡ	–	ಶೂರ
ಶ್ರದ್ಧಾ	–	ಭಾರತೀದೇವಿ
ಶ್ರದ್ಧಾರಮಣ	–	ಭಾರತೀ ರಮಣ, ವಾಯುದೇವರು
ಶ್ರಿಷ್ಠಿ	–	ಸೃಷ್ಠಿ
ಸಂತಿ	–	ಸಂತೆ
ಸಂದಣಿ	–	ಗುಂಪು
ಸಂಸೃತಿ	–	ಸಂಸಾರ
ಸಗ್ಗ	–	ಹಿಮ್ಮೆಟ್ಟು
ಸತ್ಯವತಿ ಸುತ	–	ವೇದವ್ಯಾಸ
ಸತ್ಯಶಾಸನ	–	ವೇದಗಳ ಮೂಲಕ ತಿಳಿಯಬಹುದಾದ ಶ್ರೀಹರಿ
ಸದಯ	–	ದಯಾಶೀಲನಾದವನು
ಸದ್ವೃತ್ತ	–	ಸದಾಚಾರ
ಸಮೀಚೀನ	–	ಸಮೃದ್ಧವಾದ
ಸರಿತ್	–	ಜಲಪ್ರವಾಹ
ಸವಿಧಾವಿ	–	ತುರುಕೆ ಸೊಪ್ಪು
ಸಹಸ್ರವದನ	–	ಆದಿಶೇಷ
ಸಾರಮೇಯ	–	ನಾಯಿಮರಿ
ಸಾರಿದವರು	–	ಆಶ್ರಯಕ್ಕೆ ಬಂದವರು
ಸಾರೆಗರಿ	–	ಸಮೀಪಕ್ಕೆ ಕರೆ
ಸೀಲ	–	ಶೀಲ
ಸುಕ್ಷೀಣ	–	ದುರ್ಬಲ

ಸುಪ್ವಾಣಿಸು - ಹಾಸಿಗೆಯಲ್ಲಿ ಮಲಗಿಸು
ಸುಮ್ಮನಸರು - ದೇವತೆಗಳು
ಸುರನದಿ - ಗಂಗಾನದಿ
ಸುರರಾಳಿದ - ದೇವತೆಗಳನ್ನು ಆಳುವವನು
ಸೂನ - ಪುಷ್ಪ
ಸೂನು - ಮಗ
ಸೂಲಿ - ಶೂಲೆ, ನೋವು
ಸೃತಿ - ಸಂಸಾರ
ಸೋಮಕುಲ - ಚಂದ್ರವಂಶ
ಸ್ಕಂದ - ಹೆಗಲು
ಸ್ಥವಿರ - ಮುದುಕ
ಸ್ಮೃತಿ - ಸ್ಮರಣೆ
ಸ್ವಾಂತ - ಮನಸ್ಸು
ಹಂಸರು - ಜ್ಞಾನಿಗಳು
ಹಂಸರೊಂದಿತ - ಜ್ಞಾನಿಗಳಿಂದ ವಂದಿತನಾದ ಶ್ರೀಹರಿ
ಹದನ - ತೀಕ್ಷ್ಣತೆ
ಹನನ - ನಾಶ
ಹರಣ - ಪ್ರಾಣ
ಹರಣದೊಡೆಯ- ಪ್ರಾಣಪತಿ, ಜೀವ ನಿಯಾಮಕ
ಹರುಕುದುರಿತ - ಚಿಲ್ಲರೆ ಪಾಪಗಳು
ಹವಿರುದಕ - ಅನ್ನ, ನೀರು
ಹಾಟಕ - ಚಿನ್ನ
ಹಾಟಕನಯನ - ಹಿರಣ್ಯಾಕ್ಷ
ಹುತವಹ - ಅಗ್ನಿ
ಹುತವಹ ಮಂಡಲ - ಅಗ್ನಿಮಂಡಲ
ಹೇಮಕಶಿಪು - ಹಿರಣ್ಯಕಶಿಪು
ಹೇಮಕಶಿಪು
ಹೇಯತಿ - ತ್ಯಾಜ್ಯ

ಅನುಬಂಧ-೨

ಟಿಪ್ಪಣಿಗಳು

ಕೀರ್ತನೆ-೭

ನುಡಿ-೨: ಪೂರ್ಣಕಾಮ : 'ಕ' ಎಂದರೆ ಸುಖ ' ಆಮ' ಎಂದರೆ ಪರಿಮಾಣರಹಿತ. ಪರಿಮಾಣರಹಿತವಾದ ಪೂರ್ಣಸುಖವನ್ನು ಅನುಭವಿಸುವ ಶ್ರೀಹರಿಗೆ ಪೂರ್ಣಕಾಮ ಎಂದು ಹೆಸರು. ಜೀವಿಗಳು ಅಲ್ಪಸುಖಿಗಳು. ಅವರ ಸುಖಕ್ಕೆ ಮಿತಿಯಿದೆ. ಆದರೆ ದುಃಖದೂರನಾಗಿ ಪೂರ್ಣಸುಖವನ್ನೂ ಪೂರ್ಣ ಆನಂದವನ್ನೂ ಅನುಭವಿಸುತ್ತಿರುವವನು ಶ್ರೀಹರಿ ಒಬ್ಬನೆ.

ಕೀರ್ತನೆ-೯

ಮಳೆಯಿಲ್ಲದೆ ತೀವ್ರ ಬರಗಾಲಕ್ಕೆ ತುತ್ತಾದ ಸಂದರ್ಭ ಚಿತ್ರಣ ಇಲ್ಲಿದೆ. ಬೆಳೆಯಿಲ್ಲದೆ ಹಣ ಸಂಪಾದನೆಯಾಗದೆ ಭವಿಷ್ಯದಲ್ಲಿ ನಂಬಿಕೆ ಕಳೆದುಕೊಂಡ ಜನ ದೇಶಾಂತರ ಹೋದರು. ಮಕ್ಕಳನ್ನು ಮಾರಾಟಮಾಡಿ ಹಣ ಸಂಪಾದನೆ ಮಾಡುವ ದುಃಸ್ಥಿತಿ ಉಂಟಾಯಿತು. ಈ ಕ್ಲೇಶ ಪರಿಹರಿಸಿ ರಕ್ಷಿಸಬೇಕೆಂದು ಶ್ರೀಹರಿಯನ್ನು ಪ್ರಾರ್ಥಿಸುತ್ತಾರೆ.

ನುಡಿ-೧: ***ಬೆಳಸಿಗೊಬ್ಬನ ಕೇಳೆ...............*** : ಆಯಾ ಸಂವತ್ಸರದ ಫಲದೇವತೆಗಳೆನಿಸಿಕೊಂಡ ನವಗ್ರಹಗಳು ಮಳೆ, ಬೆಳೆ, ದವಸ, ಪಶು, ಸಸ್ಯ ಮೊದಲಾದವುಗಳಿಗೆ ಅಧಿಪತಿಗಳಾಗಿ ನವನಾಯಕರೆನಿಸಿ ಕೊಂಡು ರಾಜ್ಯಭಾರವನ್ನು ನಿರ್ವಹಿಸುತ್ತಾರೆ. ಬೆಳಸಿಗೆ ಒಬ್ಬ (ಸಸ್ಯಾಧಿಪತಿ), ಮಳೆಗೆ ಮತ್ತೊಬ್ಬ (ಮೇಘಾಧಿಪತಿ), ಅಳತೆಗೆ ಇನ್ನೊಬ್ಬ (ಧನಾಧಿಪತಿ), ಒಳಿತಿಗೆ ಇನ್ನೊಬ್ಬ (ರಾಜ್ಯಾಧಿಪತಿ), ಈ ನವನಾಯಕರು ನೀಡುವ ಅಂಶಫಲಗಳಿಗಾಗಿ ಅವರನ್ನು ಪ್ರಾರ್ಥಿಸುವ ಅಗತ್ಯವಿಲ್ಲವೆಂದು, ಪೂರ್ಣಫಲಪ್ರದನಾದ ಶ್ರೀಹರಿಯನ್ನು ದಾಸರು ಪ್ರಾರ್ಥಿಸಿದ್ದಾರೆ.

ಕೀರ್ತನೆ-೧೧

ತನ್ನ ಮನೆಗೆ ಆಗಮಿಸಿದ ಬಾಲಗೋಪಾಲ ಒಳಗೆ ಬರದೆ ಬಾಗಿಲ್ಲಲ್ಲೇ ನಿಂತ ಭ್ರಮೆಯುಂಟಾಗಿ, ಕೃಷ್ಣ ಬಾಗಿಲ್ಲಲ್ಲೇ ಏಕೆ ನಿಂತ ಎಂಬ ಪ್ರಶ್ನೆ ಭಕ್ತನನ್ನು ಕಾಡುತ್ತದೆ. ಈ ಪ್ರಶ್ನೆಗೆ ಹಲವು ಉತ್ತರಗಳನ್ನು ಕಲ್ಪಿಸಿಕೊಳ್ಳುತ್ತಾನೆ.

ಕೀರ್ತನೆ-೧೫

ಕೃಷ್ಣನನ್ನು ಕಂಡ ಕೂಡಲೆ ಎಲ್ಲ ಹಳೆಯ ನೆನಪುಗಳು ಮರೆಯಾಗಿ ಕೃಷ್ಣನಿಗಾಗಿ ಹಂಬಲಿಸುವ ಮುಗ್ಧ ಗೋಪಿಯೊಬ್ಬಳ ಸ್ಥಿತಿಯನ್ನು ಇಲ್ಲಿ ಚಿತ್ರಿಸಲಾಗಿದೆ.

ನುಡಿ-೧: ಎನ್ನ ನಾಯಕೀಯ ಸ್ವಾಮಿ : ನನ್ನ ಒಡತಿಯಾದಂತಹ ಲಕ್ಷ್ಮೀದೇವಿಯ ಪತಿಯಾದ ಶ್ರೀಹರಿ.

ನುಡಿ-೩: ಗತ ಅಗತೆವೊಂದು ಮತಿಯಲಿ ಅರಿಯಳೋ : ಕೃಷ್ಣನನ್ನು ಜ್ಞಾಪಿಸಿಕೊಂಡ ಕೂಡಲೆ ಈ ಗೋಪಿಗೆ ತಂದೆ ತಾಯಿಗಳು ಬಾಲ್ಯದ ನೆನಪುಗಳು, ಪತಿಯ ಪ್ರೀತಿ, ಹಣ ಎಲ್ಲವೂ ಮರೆಯಾಗುತ್ತದೆ.

ನುಡಿ-೪: ನವಗಂಧಗಳು : ದೇಹಕ್ಕೆ ಲೇಪಿಸಿಕೊಳ್ಳುವ ಒಂಭತ್ತು ಸುಗಂಧದ್ರವ್ಯಗಳು. ಚಂದನ, ಮಲಯಜ, ದೇವದಾರು, ಕುಂಕುಮ, ಶಂಖಪಿಷ್ಠ, ತಿಲಪಿಷ್ಠ, ಕಸ್ತೂರಿ, ಕೇತಕೀರಜ, ಕುಂಕುಮಕೇಸರಿ.

ಕೀರ್ತನೆ - ೧೭

ಕೌತುಕ ನೋಡಬೇಕೆಂಬುವುದೆ .... : ಜ್ಞಾನ, ಮುಕ್ತಿ ಮತ್ತು ಸಕಲ ಸಂಪತ್ತನ್ನು ಕೊಡಬಲ್ಲ ಆಶ್ಚರ್ಯಕರವಾದ ಶಕ್ತಿ ಶ್ರೀಹರಿ ಒಬ್ಬನೆ. ಅಗ್ನಿಮಂಡಲದಲ್ಲಿ ಪರಶುರಾಮ ರೂಪದಿಂದಲೂ, ಚಂದ್ರಮಂಡಲದಲ್ಲಿ ವಾಮನ ರೂಪದಿಂದಲೂ, ಸೂರ್ಯಮಂಡಲದಲ್ಲಿ ನಾರಾಯಣ ರೂಪದಿಂದಲೂ ನೆಲೆಸಿರುವ ಶ್ರೀಹರಿ ಭೂತಳದಲ್ಲಿ ಕಾಣಲಾಗದ ಅಪರೂಪದ ಶಕ್ತಿ. ಇವನ ಅನುಗ್ರಹ ಅತಿ ಸುಲಭವೆಂದು ದಾಸರು ಭಾವಿಸುತ್ತಾರೆ.

ಅದ್ವಯ : ತನಗೆ ಸಮರಾದವರೂ, ಉತ್ತಮ ರಾದವರೂ ಇಲ್ಲದ ಶ್ರೀಹರಿ.

ಕೀರ್ತನೆ-೧೮

ಕೃಷ್ಣನ ಕೊಳಲಗಾನದ ಅಲೌಕಿಕ ಆಕರ್ಷಣೆಯನ್ನು ನಿರೂಪಿಸುವ ಕೃತಿ ಇದು. ಆ ವೇಣುಗಾನಕ್ಕೆ ಬ್ರಹ್ಮಾಂಡವೇ ತಲೆದೂಗುತ್ತದೆ. ಗಿಡಮರ ಬಳ್ಳಿಗಳ ರೂಪದಲ್ಲಿ ಭೂಮಿ

ಪುಳಕಗೊಳ್ಳುತ್ತದೆ. ಮನ್ಮಥ, ಶಿವ, ಬ್ರಹ್ಮ, ಮೊದಲಾದ ದೇವತೆಗಳು ಭೂಮಿಗೆ ಬಂದು ಈ ಗಾನವನ್ನು ಕೇಳಿ ನಲಿಯುತ್ತಾರೆ.

ನುಡಿ–೩: ಮುಕುತರು ತೋರುವರಿಲ್ಲಿ ಆನಂದ: ಕೃಷ್ಣನ ವೇಣುಗಾನವನ್ನು ಕೇಳಿದವರು, ಅವರವರ ಸಂಸ್ಕಾರಕ್ಕೆ ತಕ್ಕಂತೆ ಮುಕ್ತಿಯನ್ನು ಪಡೆಯುತ್ತಾರೆ. ದೂರದ ಭಕ್ತರು, ಊರಿನ ಜನ, ಗೋಪಾಲಕರು ಮತ್ತು ಗೋಪಿಕಾ ಸ್ತ್ರೀಯರು ಕ್ರಮವಾಗಿ ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಮತ್ತು ಸಾಯುಜ್ಯ ಪದವಿಯನ್ನು ಹೊಂದುತ್ತಾರೆ. ಯಾವಾಗಲೂ ಇಷ್ಟದೇವರ ಎದುರಿಗೇ ಇರುವುದು ಸಾಲೋಕ್ಯ, ದೇವರ ಹತ್ತಿರದಲ್ಲೇ ಇರುವುದು ಸಾಮೀಪ್ಯ, ಇಷ್ಟದೇವರಿಗೆ ಸಮನಾದ ರೂಪ ಪಡೆಯುವುದು ಸಾರೂಪ್ಯ, ಪರಮಾತ್ಮನಲ್ಲಿ ಐಕ್ಯಹೊಂದುವುದು ಸಾಯುಜ್ಯ.

ಕೀರ್ತನೆ–೨೦

ಈ ಸುಳಾದಿಯಲ್ಲಿ ಕಲಿಕಾಲದಿಂದ ಕೆಟ್ಟಿರುವ ಜೀವರ ಪರಿಸ್ಥಿತಿಯನ್ನು ನಿರೂಪಿಸಿದ್ದಾರೆ. ಕಲಿಯ ಪ್ರಭಾವದಿಂದ ದೇಶದಲ್ಲಿ ದುಷ್ಟರು ಹೆಚ್ಚಿದ್ದಾರೆ. ಪುಣ್ಯಸ್ಥಳಗಳು ನಾಶವಾಗುತ್ತಿವೆ. ಜ್ಞಾನಿಗಳು ಹತರಾಗುತ್ತಿದ್ದಾರೆ. ವರ್ಣಾಶ್ರಮ ಧರ್ಮಗಳು ಹಾಳಾಗುತ್ತಿವೆ. ವಿಪತ್ತನ್ನು ಪರಿಹರಿಸಬಲ್ಲ ರಕ್ಷಕರನ್ನು ಕಾಣದೆ ಸಜ್ಜನರು ಅಲೆದಾಡುತ್ತಿದ್ದಾರೆ. ಇಂಥ ಸಮಯದಲ್ಲಿ ಭಾಗವತ ಧರ್ಮವನ್ನು ಉಳಿಸಿ ಜನರನ್ನು ರಕ್ಷಿಸಬೇಕೆಂದು ದಾಸರು ಶ್ರೀ ಹರಿಯನ್ನು ಪ್ರಾರ್ಥಿಸುತ್ತಾರೆ.

ನುಡಿ–೪: ಶಿಶುವನ್ನ ಸ್ಥವಿರನ್ನ............. ನೀ ಪೊರೆದೆ:

ಶ್ರೀ ಹರಿಯಿಂದ ರಕ್ಷಣೆ ಪಡೆದವರು ಒಬ್ಬಿಬ್ಬರಲ್ಲ. ಅನಂತ ಜೀವರಾಶಿಯನ್ನು ಕಾಪಾಡುವವನು ಅವನು. ಶಿಶುವಾದ ಪ್ರಹ್ಲಾದನನ್ನು, ಮುದುಕನಾದ ಭೀಷ್ಮನನ್ನು, ತಮ್ಮನ್ನು, ಗೋಬ್ರಾಹ್ಮಣರನ್ನು ಕಾಪಾಡಿದ ಶ್ರೀಹರಿ ಈಗೇಕೆ ಕಿವುಡಾಗಿದ್ದಾನೆ. ಭಕ್ತಪಾಲಕನೆಂಬ ಅವನ ಬಿರುದು ಸುಳ್ಳಾದರೆ ಏನುಗತಿ ಎಂಬ ಆತಂಕ ದಾಸರಿಗೆ.

ಕೀರ್ತನೆ–೨೧

ಚಿಣ್ಣವತ್ಸನು ......ಕಣ್ಣು ತಪ್ಪಿಸು :

ಗೋಪಾಲನಾದವನು ಎಳೆಗರುಗಳನ್ನು ವಿಶೇಷ ಆಸಕ್ತಿಯಿಂದ ಮೇಯಿಸುವಂತೆ ತಮ್ಮನ್ನು ರಕ್ಷಿಸಬೇಕೆಂದು ದಾಸರ ಪ್ರಾರ್ಥನೆ. ಹಗ್ಗ ಮೂಗುದಾರವಿಲ್ಲದ ಎತ್ತರದ ಗೂಳಿಗಳು

ಸಿಕ್ಕಿದವರ ಬಣವೆಗೆ ನುಗ್ಗಿ ಮನ ಬಂದಂತೆ ಮೇಯುತ್ತವೆ. ಆದರೆ ತಾನಿನ್ನು ಚಿಣ್ಣವತ್ಸ (ಎಳೆಗರು) ಎನ್ನುತ್ತಾರೆ. ಜೊತೆಗೆ ಮಮಕಾರವೆಂಬ ಮೂರೆಳೆಯ ಹಗ್ಗ ಕೊರಳಿಗೆ ಉರುಳಾಗಿ ಬಿದ್ದಿದೆ. ಈ ಮಮಕಾರ ಬಂಧನವನ್ನು ಬಿಡಿಸಬೇಕೆಂದು ಕೋರುತ್ತಾರೆ.

ಕೀರ್ತನೆ-೨೨

ಇದೊಂದು ನಿಂದಾಸ್ತುತಿ. ಜ್ಞಾನ, ಆನಂದ, ಶಕ್ತಿ, ಇವುಗಳಲ್ಲಿ ಭಕ್ತ ದೇವರಿಗಿಂತ ಕಡಿಮೆಯಿಲ್ಲ. ದೇವರು ಸತ್ಯವನ್ನು ಮಾತ್ರ ಬಲ್ಲ. ಭಕ್ತ ಸತ್ಯ ಮಿಥ್ಯೆಗಳೆರಡರನ್ನೂ ಬಲ್ಲ. ಸೃಷ್ಟಿ, ಸ್ಥಿತಿ, ಲಯಮಾಡುವ ಶಕ್ತಿ ದೇವರ ಬಲವಾದರೆ, ಭಕ್ತಿಯೇ ಭಕ್ತನ ಬಲ. ಸ್ವಾಮಿಯಾಗಿ ಸುಖಿಸುವ ಸೌಖ್ಯ ದೇವರದು. ದಾಸನಾಗಿ ಸುಖಿಸುವ ಸೌಖ್ಯ ಭಕ್ತನದು ಇದರ ಜೊತೆಗೆ ಜ್ಞಾನ, ಭಕ್ತಿ, ವೈರಾಗ್ಯ ಸುಖಗಳನ್ನು ಹರಿಯೇ ಕರುಣಿಸಿದ್ದಾನೆ. ತಾನು ತೋರಿದ ಕರುಣೆಗೆ ತಾನೇ ವಿವಶನಾಗಿರುವ ದೇವರು ಭಕ್ತ ಏನೆಂದರೂ ಕೋಪಿಸಿಕೊಳ್ಳುವುದಿಲ್ಲ ಹೀಗೆ ಭಕ್ತ ದೇವರಲ್ಲಿ ತೋರುವ ಸಖ್ಯಭಾವದ ನಿರೂಪಣೆ ಇಲ್ಲಿದೆ.

ಕೀರ್ತನೆ-೨೭

ನುಡಿ-೫ ಧಾರುಣಿಯಲಿ ನಿನ್ನ .... ಗೋಪ್ಯಗಳು :

ಭೂಮಿಯಲ್ಲಿ ಶ್ರೀಹರಿಯ ಮಹಿಮೆಗಳ ವಿಶೇಷಗಳನ್ನು ಅವುಗಳ ಅರ್ಥವನ್ನು ಅರಿಯಲು ಒಂದು ಪ್ರತ್ಯೇಕ ಅರ್ಥಕೋಶವೇ ಬೇಕು. ಅವನ ಹಿರಿಮೆಗಳನ್ನು ಕುರಿತ ಒಂದೊಂದು ವಿಶೇಷಣದ ಅರ್ಥವನ್ನು ತಿಳಿದು ಚಿಂತಿಸಿದಾಗ ಅವನ ಮಹಿಮಾ ರಹಸ್ಯಗಳಲಿ ಕೆಲವು ಮಾತ್ರ ಅರ್ಥವಾಗುತ್ತದೆ.

ಕೀರ್ತನೆ-೨೮

ನುಡಿ-೧: **ನಾರಿಯ ಮೊರೆ ಕೇಳಿ** – ದ್ರೌಪದಿಗೆ ಅಕ್ಷಯವಸ್ತ್ರ ನೀಡಿದ ಸಂದರ್ಭ.

ವನವ ಸೇರಿದ ಕುವರ – ಬಾಲಕನಾದ ಧ್ರುವರಾಯ.

ನುಡಿ-೨: **ಕಾಡಾನೆ ವ್ರಜದೊಳು** – ಗಜೇಂದ್ರ ಮೋಕ್ಷದ ಸಂದರ್ಭ

ನುಡಿ-೩: **ಭೂಸುರವರನೊಬ್ಬ** – ಅಜಾಮಿಳನ ಪ್ರಸಂಗ.

ಕೀರ್ತನೆ-೨೯

ನುಡಿ-೪: ನಖಮುಖಶಿಖಿ ತನ್ನ ನೆನೆಯೆ :

ನಖ ಶಿಖಾಂತ ಹರಿಯ ಸರ್ವಾಂಗಗಳನ್ನು ಧ್ಯಾನಿಸುವುದು

ಮಖಭುಜ: ಮಖ ಎಂದರೆ ಯಜ್ಞ.ದಕ್ಷನ ಯಜ್ಞವನ್ನು ನಾಶ ಮಾಡಿದ ಶಿವ ಮಖಭುಜ ಎನಿಸಿಕೊಂಡ. **ವಿಖಸನಾರ್ಚಿತ ಪಾದ** : ಬ್ರಹ್ಮನಿಂದ ಅರ್ಚಿತವಾದ ಶ್ರೀಹರಿಯ ಪಾದ

ನುಡಿ-೫: ಅರಿದರಿಧರ : ಅರಿ ಎಂದರೆ ಚಕ್ರ,. ದರಿ ಎಂದರೆ ಶಂಖ ಎಂದು ಅರ್ಥ. ಶಂಖಚಕ್ರಧಾರಿಯಾದ ಶ್ರೀಹರಿಯನ್ನು ಅರಿಧರಿಧರ ಎಂದು ಮಧ್ವಾಚಾರ್ಯರು ಯಮಕಭಾರತದಲ್ಲಿ ಸ್ತುತಿಸಿದ್ದಾರೆ.

ಕೀರ್ತನೆ-೩೦

ನುಡಿ-೧: ಹತ್ತು ಜನುಮವ ಕೊಟ್ಟು – ಹರಿಗಿಂತ ಹರಿಯ ಕರುಣೆಯೇ ದೊಡ್ಡದು. ಅವನ ಕರುಣಕ್ಕೆ ಶರಣಾಗುವುದೆಂದರೆ ಅವನಿಗೆ ಶರಣಾಗುವುದಕ್ಕಿಂತ ಶ್ರೇಷ್ಠ. ನಿತ್ಯಮುಕ್ತನೂ, ಪೂರ್ಣಕಾಮನೂ ಆದ ಶ್ರೀಹರಿ ತನ್ನ ಭಕ್ತರ ಸಲುವಾಗಿಯೇ ಹತ್ತವತಾರವನ್ನೆತ್ತಿದ.

***ನುಡಿ-೨:* ವತ್ಸದ ದಾವು ಬಂಧದಿ ಬಿಗಿಸಿತು .....**

ಯಾವ ಅಳತೆಗೂ ಸಿಗದ ಅಪ್ರಮೇಯ ಶ್ರೀಹರಿ. ಇಂಥವನು ಗೋಪಿಯ ಕೈಲಿ ಕರುವನ್ನು ಕಟ್ಟುವ ಸಣ್ಣ ಹಗ್ಗದಿಂದ ಬಂಧನಕ್ಕೆ ಒಳಗಾದ.

ನುಡಿ-೨: ತಾಪಲೋಪ: ಸಿಟ್ಟು ಕೋಪ ಕಷ್ಟಗಳ ತಾಪದಿಂದ ದೂರನಾದ ಶ್ರೀಹರಿ.

ಲೇಪ ಲೋಪ : ಯಾವುದೇ ದೇಶ ಕಾಲ ಗುಣಕರ್ಮಗಳಿಗೆ ಅಂಟಿಕೊಳ್ಳದವನು ಶ್ರೀಹರಿ.

ಕೀರ್ತನೆ-೩೪

ಪಂಚೇಂದ್ರಿಯಗಳಿಂದ ಲೌಕಿಕ ಸುಖಗಳನ್ನು ಬಯುಸದೆ ಆಧ್ಯಾತ್ಮಿಕ ಸುಖ ಪಡೆಯುವುದರಿಂದ ಮಾತ್ರ ದೇವರು ಕೊಟ್ಟ ಇಂದ್ರಿಯಗಳು ಸಾರ್ಥಕವಾಗುತ್ತದೆ ಎಂಬುದು ದಾಸರ ಭಾವನೆ. ಭಾರತದ ಕಥೆಯನ್ನು ಕೇಳುವ ಕಿವಿ, ಹರಿಯ ರೂಪವನ್ನು ನೋಡುವ

ಕಣ್ಣು, ಕೃಷ್ಣಾರ್ಪಣವಾದ ಕ್ಷೀರವನ್ನು ಸವಿಯುವ ನಾಲಗೆ, ಲಕ್ಷ್ಮೀದೇವಿಯ ಪಾದಸ್ಪರ್ಶ ಮಾಡುವ ತ್ವಚೆ, ಹರಿ ನಿರ್ಮಾಲ್ಯವನ್ನು ಆಘ್ರಾಣಿಸುವ ನಾಸಿಕ ಇವೇ ಸಾರ್ಥಕವಾದವು ಎಂದು ದಾಸರು ಭಾವಿಸುತ್ತಾರೆ. ಪಂಚೇಂದ್ರಿಯಗಳ ಅನುಭವಗಳನ್ನು ಭಗವದರ್ಪಣ ಮಾಡಿರುವ ರೀತಿಯನ್ನು ಆಲಂಕಾರಿಕವಾಗಿ ನಿರೂಪಿಸಿದ್ದಾರೆ.

ನುಡಿ–೧: ಮನೋಕುವರಿಯ ಭೃತ್ಯತನ ಕೊಡು :

ಮನೋಕುವರಿ ಎಂದರೆ ಮನುವಿನ ಕುವರಿ. ಸ್ವಾಯಂಭು ಮನುವಿನ ಪುತ್ರಿಯಾದ ದೇವಹೂತಿ. ಕರ್ದಮ ಮತ್ತು ದೇವಹೂತಿಯರ ಮಗ ಕಪಿಲ. ಈ ಕಪಿಲ ವಿಷ್ಣುವಿನ ಅವತಾರ. ತನ್ನ ಜನನಿಯಾವ ದೇವಹೂತಿಗೆ ಕಪಿಲ ಸಾಂಖ್ಯತತ್ವಗಳನ್ನು ಬೋಧಿಸಿದ. ದೇವಹೂತಿ ಕೇಳಿದ ಸಾಂಖ್ಯ ಶಾಸ್ತ್ರವನ್ನು ತಾವೂ ಕೇಳುವಂತೆ ಮಾಡಬೇಕೆಂದು ದಾಸರ ಪ್ರಾರ್ಥನೆ.

ವಿಷ್ಣುರಾತೋದ್ಭವನ ಬಳಿಯಯಲೊಮ್ಮೆ ನಿಲಿಸಯ್ಯ :

ವಿಷ್ಣುರಾತ ಎಂದರೆ ಪರೀಕ್ಷಿತ ಮಹಾರಾಜ. ಪರೀಕ್ಷಿತನ ಮಗ ಜನಮೇಜಯ. ಜನಮೇಜಯನ ಸಾಮೀಪ್ಯದಲ್ಲೇ ಇದ್ದರೆ ವೈಶಂಪಾಯನರು ಹೇಳುವ ಮಹಾಭಾರತವನ್ನು ಕೇಳಬಹುದು. ದೇವರು ಕಿವಿಗಳನ್ನು ಕೊಟ್ಟಿರುವುದಕ್ಕೆ ಮಹಾಭಾರತವನ್ನು ಕೇಳಿದರೆ ಸಾರ್ಥಕವಾಗುವುದು. ಅದನ್ನು ಕೇಳುವಂತೆ ಅನುಗ್ರಹಿಸು ಎಂದು ದಾಸರ ಪ್ರಾರ್ಥನೆ.

ನುಡಿ–೨: ನಯನವು ಕೊಟ್ಟುದಕೆ : ರಣರಂಗದಲ್ಲಿ ಅರ್ಜುನನ ಬಳಿ ನಿಂತರೆ ಕೃಷ್ಣನ ವಿಶ್ವರೂಪದರ್ಶನ ಮಾಡಬಹುದು. ಹೀಗೆಯೆ ಸೂತರು ಪುರಾಣ ಹೇಳುವ ಸ್ಥಳ, ಭೀಷ್ಮಕ ರಾಜನ ಆಸ್ಥಾನ, ದುರ್ಯೋಧನನ ರಾಜಸಭೆ, ಇಂಥ ಕಡೆ ನಿಂತು ಕೃಷ್ಣದರ್ಶನ ಮಾಡಿ ಕಣ್ಣುಗಳನ್ನು ಸಾರ್ಥಕಪಡಿಸಿಕೊಳ್ಳಬೇಕೆಂದು ದಾಸರ ಅಪೇಕ್ಷೆ.

ನುಡಿ–೩: ರಸನವು ಎನಗಿನ್ನು ಕೃಪೆ ಮಾಡಿದುದಕೆ .... : ಕೃಷ್ಣನು ಕದ್ದು ಸವಿದ ಹಾಲನ್ನು ಗೋಪಬಾಲಕರು ಸವಿದರು. ತಾವು ಒಬ್ಬ ಗೋಪಾಬಾಲಕನಾಗಿ ಹುಟ್ಟಿದರೆ ಕೃಷ್ಣ ಸವಿದುಬಿಟ್ಟ ಕ್ಷೀರಪಾನದ ರುಚಿಯಿಂದ ನಾಲಗೆಯನ್ನು ಸಾರ್ಥಕ ಮಾಡಿಕೊಳ್ಳಬಹುದು ಎಂದು ದಾಸರ ಅಪೇಕ್ಷೆ.

ನುಡಿ–೪: ವಾಳುಕ ಭಾವವನು ಕೊಡುಹರಿಯೆ : ವಾಳುಕ ಎಂದರೆ ಮರಳು ಎಂದು ಅರ್ಥ. ತಮ್ಮನ್ನು ನದೀತೀರದ ಮರಳಾಗಿ ಹುಟ್ಟಿಸು ಎಂದು ದಾಸರು ಪ್ರಾರ್ಥಿಸುತ್ತಾರೆ.

ಜನಕಸುತೆಯಾದ ಸೀತೆ, ಸರಯೂ ನದಿಯ ತೀರದಲ್ಲೂ, ಭೀಷ್ಮಕನ ಮಗಳಾದ ರುಕ್ಮಿಣಿ ಯಮುನಾ ತೀರದಲ್ಲೂ ಓಡಾಡುತ್ತಾರೆ. ಈ ನದಿಗಳ ತೀರದಲ್ಲಿ ಮರಳಾಗಿ ಹುಟ್ಟಿದರೆ ಸೀತೆಯಾಗಿ ರುಕ್ಮಿಣಿಯಾಗಿ ಅವತರಿಸಿದ ಲಕ್ಷ್ಮೀದೇವಿಯ ಪಾದಸ್ಪರ್ಶ ಮಾಡಬಹುದು. ದೇವರು ಕೊಟ್ಟ ತ್ವಚೇಂದ್ರಿಯವನ್ನು ಸಾರ್ಥಕ ಪಡಿಸಿಕೊಳ್ಳಬಹುದು ಎಂದು ದಾಸರು ಭಾವಿಸುತ್ತಾರೆ.

ನುಡಿ–೫: ವಾಸನಾಲೋಲುಪ ಮಧುಕರ ಭಾವ ನೀಡೋ : ಗೋಪಿಯ ರೊಡನೆ ವಿಹರಿಸುವಾಗ ಕೃಷ್ಣನ ಕೊರಳ ಹಾರದ ಹೂಗಳು ಜಾರಿ ಬಿದ್ದರೆ, ಅವುಗಳ ವಾಸನೆಯನ್ನು ಅನುಭವಿಸುವ ಜೇನುಹುಳವಾಗಿ ಜನ್ಮ ನೀಡುವಂತೆ ಪ್ರಾರ್ಥಿಸುತ್ತಾರೆ. ಹರಿ ಕೊಟ್ಟ ನಾಸಿಕವನ್ನು ಹೀಗೆ ಸಾರ್ಥಕಪಡಿಸಿಕೊಳ್ಳಬಹುದು.

ಕೀರ್ತನೆ–೩೯

ನುಡಿ–೧: ಭಕುತಿಗೆ ಅನ್ಯಥಾವಾಗದಂತೆ ಬಯಸಿಕೊಳಲಿ ಮನ: ಭಕ್ತನಾದವನು ಲೌಕಿಕ ಹಂಬಲಗಳಿಗೆ ಒಳಗಾಗುವುದು ಸರಿಯಲ್ಲ. ಆದರೆ ಲೋಕ ವ್ಯವಹಾರದಲ್ಲಿ ಮನಸ್ಸು ಹಲವು ಬಯಕೆಗಳನ್ನು ಹೊಂದಿರುತ್ತದೆ. ಈ ಬಯಕೆಗಳು ಭಕ್ತಿಗೆ ವಿರುದ್ಧವಾಗದಂತೆ ಇದ್ದರೆ ಸಹನೀಯವೇ ಆಗಿರುತ್ತದೆ.

ನುಡಿ–೩: ಆವಾವ ಬಗೆಯಲ್ಲಿ ಸಾಧನ ಮಾಡಿಸೋ : ಶ್ರೀ ಹರಿಯು ಜೀವರ ಯೋಗ್ಯತೆಯನ್ನು ಬಲ್ಲವನಾದ್ದರಿಂದ ಯಾವ ಜೀವರಿಗೆ ಯಾವ ಆಶ್ರಮದಲ್ಲಿ ಎಷ್ಟು ಸಾಧನೆ ಮಾಡಿಸಬೇಕೆಂಬುದನ್ನು ತಾನೇ ನಿರ್ಧರಿಸುತ್ತಾನೆ. ಈ ವಿಷಯದಲ್ಲಿ ಭಕ್ತನ ವಿಜ್ಞಾಪನೆ ವ್ಯರ್ಥ. ಚತುರಾಶ್ರಮಗಳ ಸಾಧನೆ ನಮ್ಮ ಇಚ್ಛೆಯಂತೆ ನಡೆಯುವುದಿಲ್ಲ. ಅದನ್ನು ಹರಿ ಚಿತ್ತಕ್ಕೇ ಬಿಡಬೇಕೆಂದು ದಾಸರ ಅಭಿಪ್ರಾಯ.

ಕೀರ್ತನೆ–೪೩

ನುಡಿ–೨: ಸಾಮಭಿ ಸೇವಿತ : ಸಾಮ ವೇದದ ಋಕ್ಕುಗಳ ಗಾನದಿಂದ ಸೇವಿತನಾದ ಶ್ರೀಹರಿ (ಸಾಮಗಾನಪ್ರಿಯ)

ಶಮಲಾತಿದೂರ: ಶಮಲ ಎಂದರೆ ದೋಷ ಎಂದು ಅರ್ಥ. ಜನನ ಮರಣಾದಿ ದೋಷದೂರನಾದ ಶ್ರೀಹರಿ.

ನುಡಿ–೩: ಮುನಿಕುಲವಗೆಡಿಸಿ ಸತ್ಕುಲನೆನಿಸಿದೆ : ಬೇಡನಾಗಿದ್ದ ವಾಲ್ಮೀಕಿ ರಾಮ ನಾಮ ಸ್ಮರಣೆಯಿಂದ ಋಷಿಯಾದ ಸಂದರ್ಭ.

ಕೀರ್ತನೆ–೪೪

ಮನಸ್ಸು ಕೋಡಗದಂತೆ ಚಂಚಲ, ಅದನ್ನು ಅಡವಿಯಲ್ಲಿ ಸಂಚರಿಸಲು ಬಿಡಬಾರದು ಶ್ರೀಹರಿಯ ಗುಣವೆಂಬ ಕಲ್ಪವೃಕ್ಷವನ್ನು ಆಶ್ರಯಿಸುವಂತೆ ಮಾಡಬೇಕು. ಕಣ್ಣುಗಳೆಂಬ ಮೀನುಗಳು ವಿಷಯ ಪಂಕದಲ್ಲಿ ಬಿದ್ದಿವೆ. ಅವನ್ನು ಹೊರತೆಗೆದು ಹರಿಪಾದವೆಂಬ ಲಾವಣ್ಯ ಸಮುದ್ರದಲ್ಲಿ ಬಿಡಬೇಕು. ನಮ್ಮ ವದನವೆಂಬ ಕರಡಿಗೆಯನ್ನು ಶುದ್ಧಗೊಳಿಸಿ ಅದರದಲ್ಲಿ ಕೃಷ್ಣಸ್ತುತಿ ಎಂಬ ಚೂರ್ಣವನ್ನು ತುಂಬಬೇಕು. ಹೀಗೆ ಮನಸ್ಸು ಹರಿಯ ಗುಣಗಳ ಚಿಂತನೆಯಲ್ಲಿ, ಕಣ್ಣುಗಳು ಹರಿಪಾದ ದರ್ಶನದಲ್ಲಿ, ಬಾಯಿ ಹರಿನಾಮ ಧ್ಯಾನದಲ್ಲಿ ನಿರತವಾಗುವಂತೆ ಮಾಡಬೇಕೆಂದು ದಾಸರ ಬಿನ್ನಹ.

ನುಡಿ–೩: ಕರೆ ಕೋಡೇರು : ಕೆರೆಯ ಪಕ್ಕದ ಎತ್ತರವಾದ ಬೆಟ್ಟಗಳನ್ನು ಹತ್ತುವುದು ಅಂದರೆ ಉನ್ನತ ಸ್ಥಾನಗಳನ್ನು ಸಂಪಾದಿಸುವುದು. ಹರಿನಾಮಾಮೃತವನ್ನು ಸೂರೆ ಮಾಡಿರುವ ಬ್ರಹ್ಮ ರುದ್ರಾದಿಗಳು, ಹರಿನಾಮದ ಹಿರಿಮೆಯಿಂದ ಜಗತ್ತಿನ ಸೃಷ್ಟಿ ಮತ್ತು ಲಯಗಳನ್ನು ನಿರ್ವಹಿಸುವ ಉನ್ನತ ಸ್ಥಾನಗಳನ್ನು ಪಡೆದಿದ್ದಾರೆ.

ಇಮ್ಮನುಜ ತುತಿ : ಇಮ್ಮನುಜ ಸ್ತುತಿ, ಬಲರಾಮನ ಪ್ರಿಯ ಅನುಜನಾದ ಶ್ರೀಕೃಷ್ಣ ಇಮ್ಮನುಜ. ಇಮ್ಮನುಜ ತುತಿ ಎಂದರೆ ಶ್ರೀ ಕೃಷ್ಣ ಸ್ತುತಿ.

ಕೀರ್ತನೆ–೪೭

ಹರಿ ನಿನ್ನ ಮೂರುತಿ ಕಾಮಧೇನು .... ಚಿಗಿದಾಡುತಲಿದೆ : ಶ್ರೀ ಹರಿಯ ಬಿಂಬ ಮೂರ್ತಿ ಹೃದಯವೆಂಬ ಕೊಟ್ಟಿಗೆಯಲ್ಲಿ ಕಟ್ಟಿರುವ ಕಾಮಧೇನುವಿನಂತೆ ಈ ಬಿಂಬಮೂರ್ತಿ ಕಾಣದೇ ಹೋದಾಗ ಮನಸ್ಸು ಹಸುವನ್ನು ಕಾಣದ ಕರುವಿನಂತೆ ಪರಿತಪಿಸುತ್ತದೆ.

ಕೀರ್ತನೆ–೪೯

ನುಡಿ–೩: ಊಟಿ ನೀರನು ಮಾಡೆ............. ಜನೋಲ್ಲೋಕದಿ ಜನರು : ಹಿರಣ್ಯಾಕ್ಷನನ್ನು ಕೊಂದ ವರಾಹ ಸಂತೋಷದಿಂದ ಸಮುದ್ರದ ನೀರನ್ನು ಬಾಯಲ್ಲಿ

ತುಂಬಿಕೊಂಡು ಮೇಲಕ್ಕೆ ಉಗುಳಿದ. ಅದು ನೀರಿನ ಊಟೆಯಂತೆ ಮೇಲಕ್ಕೆ ಚಿಮ್ಮಿತು. ಅಂತರಿಕ್ಷ, ಸ್ವರ್ಗ, ಮಹಲ್ಲೋಕಗಳನ್ನು ಮೀರಿ ಜನೋಲ್ಲೋಕದ ಮನೆಗಳನ್ನು ತೋಯಿಸಿತು. ನೀರಿನ ಹನಿಗಳು ಈಟಿಯ ಮೊನೆಗಳಂತೆ ಕಂಡವು. ಜನೋಲ್ಲೋಕದ ಪ್ರಜೆಗಳು ಹೆದರಿಕೆಯಿಂದ ಗುಂಪುಗೂಡಿದರು.

ಲಯದ ಕೃಪಿಯಿತಯೋನಿ : ಪ್ರಳಯಕಾಲದಲ್ಲಿ ಜಗತ್ತನ್ನು ಸುಡುವ ಬಡಬಾಗ್ನಿ

ಮೂಟೆ ಕಟ್ಟಿಕೊಂಡು ಮರೆಹೊಕ್ಕ ಕಿಟಗೆ: ವರಾಹನು ತನ್ನ ಬಾಲದಿಂದ ಸಮುದ್ರದ ನೀರಿನ ಮೇಲೆ ಬಡಿದಾಗ ಎದ್ದ ಅಲೆಗಳಿಂದ ಸಮುದ್ರ ಅಲ್ಲೋಲ ಕಲ್ಲೋಲವಾಯಿತು. ಪ್ರಳಯಕಾಲದ ಬಡಬಾಗ್ನಿಯೇ ಬಂತೆಂದು ಹೆದರಿದ ಸಮುದ್ರರಾಜ ಗಂಟು ಮೂಟೆ ಕಟ್ಟಿಕೊಂಡು ಓಡಿ ಬಂದು ವರಾಹನಿಗೆ ಶರಣಾದ.

ಕೀರ್ತನೆ–೫೫

ಪಲ್ಲವಿ: ದಶಮತಿ ಗುರುಗಳು : ದಶ ಎಂಬುದು ಹತ್ತರ ಸಂಖ್ಯೆಯನ್ನು ಸೂಚಿಸುವ ಪದ. ಇದನ್ನು ಅನಂತ ಸಂಖ್ಯಾವಾಚಕ ಶಬ್ದವೆಂದು ಪರಿಗಣಿಸಲಾಗಿದೆ. ಈ ಅರ್ಥವನ್ನು ಇನ್ನೂ ವ್ಯಾಪಕಗೊಳಿಸಿ ಸರ್ವ, ಪೂರ್ಣ ಎಂಬ ಅರ್ಥಗಳಲ್ಲೂ ಬಳಸಿದ್ದಾರೆ. ಈ ಅರ್ಥದಲ್ಲಿ ದಶ ಎಂದರೆ ಪೂರ್ಣ. ಮತಿ ಎಂದರೆ ಜ್ಞಾನ. ದಶಮತಿಗುರುಗಳು ಎಂದರೆ ಪೂರ್ಣಪ್ರಜ್ಞರಾದ ಮಧ್ವಾಚಾರ್ಯರು.

ನುಡಿ–೧: ತುರು ಮಾಮರ ಮಣಿಯ ನೆನೆಯೆ : ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿ ಇವು ನೆನೆದವರ ಇಷ್ಟಾರ್ಥಗಳನ್ನು ಪೊರೈಸುವಂತೆ ಮಧ್ವಾಚಾರ್ಯರು ಜ್ಞಾನಾಪೇಕ್ಷಿಗಳ ಇಷ್ಟವನ್ನು ಪೂರೈಸುತ್ತಾರೆ.

ಕೀರ್ತನೆ–೫೬

ನುಡಿ–೧ : ಸುಖರೂಪ ಪುರುಷನಿಗೆ ....ಪುತ್ರನಾಗಿ :

ಸುಖರೂಪ ಪುರುಷ ಎಂದರೆ ಶ್ರೀಹರಿ. ವಾಯುದೇವರು ಹರಿಯ ಪ್ರಾಣದಿಂದ ಸೃಷ್ಟಿಯಾದವರೆಂದು ಪುರುಷಸೂಕ್ತ ತಿಳಿಸುತ್ತದೆ. (ಪ್ರಾಣಾದ್ವಾಯು ರಜಾಯತ)

ನುಡಿ–೨: ಕಮಠ ರೂಪದಿ ಲೋಕಕಾಧಾರ ಸಮನುಃ ವಾಯುದೇವರ ಅನಂತ ರೂಪಗಳಲ್ಲಿ ಕೂರ್ಮರೂಪವೂ ಒಂದು. ಕೂರ್ಮರೂಪದಿಂದ ಹದಿನಾಲ್ಕು ಲೋಕಗಳನ್ನು ಹೊತ್ತು ಶ್ರೀ ಹರಿಯ ಅನುಗ್ರಹವನ್ನು ಪಡೆದವರು.

ಭಾವಿ ಬ್ರಹ್ಮನು ಕೂರ್ಮರೂಪದ
ಲೀ ವಿರಿಂಚಾಂಡವನು ಬೆನ್ನಲಿ
ತಾ ವಹಿಸಿ ಲೋಕಗಳ ಪೊರೆವನು ದ್ವಿತೀಯ ರೂಪದಲಿ ।

ಎಂದು ಜಗನ್ನಾಥದಾಸರು ಹೇಳಿದ್ದಾರೆ. ವಜ್ರದೇಹಿಯಾಗಿದ್ದು, ಕೂರ್ಮರೂಪವನ್ನು ಧರಿಸಿ ಭೂಮಿಯನ್ನು ಉದ್ಧರಿಸಿದ್ದರಿಂದ ಶ್ರೀ ಹರಿಗೆ ಸಮ. ಶ್ರೀ ಹರಿಯ ರೂಪಗುಣ ಕ್ರಿಯೆಗಳಿಗೂ ಸಾಮ್ಯವಿರುವುದರಿಂದ ವಾಯುದೇವರನ್ನು ಶ್ರೀ ಹರಿಯ ಪ್ರಥಮಾಂಗ ಅಥವಾ ಪ್ರತಿಬಿಂಬ ಎನ್ನುತ್ತಾರೆ.

ನುಡಿ-೩: ಶ್ವಾಸ ಮಂತ್ರದಿ ಸೇವನ ಲೇಸಾಗಿ ಮಾಡುವ ಜೀವರೊಳು : ವಾಯುದೇವರು ಪ್ರತಿಜೀವಿಯಲ್ಲೂ ನೆಲೆಸಿದ್ದಾರೆ. ದಿನಕ್ಕೆ ೨೧,೬೦೦ ಹಂಸ ಮಂತ್ರಾತ್ಮಕವಾದ ಶ್ವಾಸ ಜಪಗಳನ್ನು ಮಾಡಿಸುತ್ತಾರೆ. ಜೀವರು ಉಸಿರಾಡುವುದೆಲ್ಲ ಮುಖ್ಯಪ್ರಾಣನ ಹಂಸಮಂತ್ರ ಜಪವೇ ಆಗಿದೆ.

ಕೀರ್ತನೆ-೫೭

ನುಡಿ-೧: ಪ್ರತಿ ಸಂಚರಕಾಲದಿ ಅವಿಲೀನ ಮತಿಯುಳ್ಳ ದೇವ : ವಾಯುದೇವರು ಶ್ರೀ ಹರಿಯ ಸೇವಾರ್ಥ ಹನುಮ, ಭೀಮ, ಮಧ್ವರೆಂಬ ಮೂರು ಅವತಾರಗಳಲ್ಲಿಯೂ ಪರಮಾತ್ಮನ ವಿಷಯದಲ್ಲಿ ಪೂರ್ಣಜ್ಞಾನಿಯಂತೆ ವರ್ತಿಸಿದ್ದಾರೆ. ಅವತಾರ ಕಾಲದಲ್ಲೂ ಅಜ್ಞಾನಾದಿಗಳ ಸೋಂಕು ವಾಯುದೇವರಿಗೆ ಇರುವುದಿಲ್ಲ ಎಂಬುದು ದಾಸರ ಅಭಿಪ್ರಾಯ.

ಸುತಜಯಾದೇವಿಗೀತ : ಸೃಷ್ಟಿಯ ಆದಿಯಲ್ಲಿ ಸಂಕರ್ಷಣ ನಾಮಕ ಪರಮಾತ್ಮ ಮತ್ತು ಜಯಾನಾಮಕ ಲಕ್ಷ್ಮೀಯಿಂದ ಜನಿಸಿದವರು.

ತನ್ನ ಸರಿ ಚತುರಾಸ್ಯ : ಬ್ರಹ್ಮ ಮತ್ತು ವಾಯುದೇವರು ಇಬ್ಬರ ಸಾಧನೆಯು ಇನ್ನೂರು ಬ್ರಹ್ಮಕಲ್ಪಗಳು. ಇಬ್ಬರೂ ಮಾವ್ವತ್ತೆರಡು ದೇಹಲಕ್ಷಣಗಳಿಂದ ಕೂಡಿದ್ದಾರೆ. ಇಬ್ಬರೂ ಶ್ರೀ ಹರಿಯ ಉಪಾಸಕರು. ಜ್ಞಾನ, ಭಕ್ತಿ, ಗುಣಗಳಲ್ಲಿ ಸಮಾನರು. ಆದರೆ ಬ್ರಹ್ಮದೇವರು ವಾಯುವಿಗಿಂತ ಹಿರಿಯರಾದ ಕಾರಣ ಬ್ರಹ್ಮದೇವರನ್ನು ಪೂರ್ವಮಾರುತ ಎಂದು ವಿಜಯದಾಸರು ಕರೆಯುತ್ತಾರೆ.

ನುಡಿ - ೨ : ಸೂತ್ರನಾಮ : ಸರ್ವಜೀವಿಗಳಲ್ಲೂ ವ್ಯಾಪಿಸಿಕೊಂಡು ಜೀವಿಗಳ ಪ್ರಾಣಾಧಾರಕನಾದುದರಿಂದ ಜಗತ್ತಿನ ಚೇತನ ಶಕ್ತಿಯ ಸೂತ್ರಧಾರನಾದ್ದರಿಂದ ವಾಯುದೇವರಿಗೆ ಸೂತ್ರನಾಮಕ ಎಂದು ಹೆಸರು.

ಕೀರ್ತನೆ-೫೮

ನುಡಿ-೧: ಮೂರನೆಯ ತತ್ವದ ಒಡೆಯ : ಅವ್ಯಕ್ತತ್ವ, ಮಹತ್ತತ್ವ ಮತ್ತು ಅಹಂಕಾರ ತತ್ವ, ಇವುಗಳಲ್ಲಿ ಅಹಂಕಾರ ತತ್ವವೇ ಶರೀರವಾಗುಳ್ಳ ಮನೋಭಿಮಾನಿ ದೇವತೆ ರುದ್ರ, ಈ ಅಹಂಕಾರ ತತ್ವದಲ್ಲಿಂಯೂ ವೈಕಾರಿಕಾ, ತೈಜಸ, ತಾಮಸ ಎಂದು ಮೂರು ಬಗೆ, ಇದರಲ್ಲಿ ಮೂರನೆಯದಾದ ತಾಮಸಾಹಂಕಾರಕ್ಕೆ ಒಡೆಯ ರುದ್ರ.

ನುಡಿ-೩: ಲೇಸು ಲೋಭಿಸುವಿ ಯೋಗ್ಯರನು ನೋಡಿ : ರುದ್ರನು ತನಗೆ ಶರಣಾಗತರಾದ ಸಾತ್ವಿಕ ಜೀವರಿಗೆ ಮುಕ್ತಿಯನ್ನು ಪಡೆಯಲು ಅಗತ್ಯವಾದ ಮನಶುದ್ಧಿಯನ್ನು ನೀಡುತ್ತಾನೆ. ವಿಷಯ ಭೋಗ ವಿರಕ್ತಿಯನು ಉಂಟುಮಡಿ ದುಶ್ಶಾಸ್ತ್ರ ಮೋಹ ಬಿಡಿಸುತ್ತಾನೆ.

ಕೀರ್ತನೆ-೬೦

ನುಡಿ-೧: ಪೋರತನದವನು ಎರಡು ತೆರೆಗಳಲಿ ದೂರಾಗಿ............ಪಿಡಿದ ಬಳಿಕ : ಪೋರತನ ಎಂದರೆ ಬಾಲ್ಯ, ಬಾಲ್ಯ ಮತ್ತು ಯೌವ್ವನ ಎರಡು ತೆರೆಗಳು, ಈ ಎರೆಡೂ ಅವಸ್ಥೆಗಳನ್ನು ಕಳೆದುಕೊಂಡು ವೃದ್ಧರಾದ ವ್ಯಾಸತತ್ವಜ್ಞರ ಮೊರೆ ಕೇವಲ ಆರ್ತನಾದವಲ್ಲ ಎಂದು ರಾಘವೇಂದ್ರ ಗುರುಗಳು ಕರುಣೆ ತೋರಿ ದರ್ಶನ ನೀಡಿದರು.

ನುಡಿ-೨: ಜಗದೊಳಗೆ ಪದಾರ್ಥಗಳನು.................. ಚಿಂತೆಯುಂಟೆ : ರೋಗಕ್ಕೆ ಹೆದರಿ ಕೇವಲ ಪಥ್ಯದ ಪದಾರ್ಥಗಳನ್ನು ಮಾತ್ರ ಸ್ವೀಕರಿಸುತ್ತಿದ್ದವನ ಬಳಿಗೆ ವೈದ್ಯನೇ ಬಂದು ರಸಭರಿತವಾದ ಪದಾರ್ಥಗಳನ್ನು ತಿನ್ನಿಸಿದ ಮೇಲೆ ರೋಗದ ಬಗ್ಗೆ ಏಕೆ ಚಿಂತಿಸಬೇಕು ? ಹೀಗೆಯೇ ಭವರೋಗದ ಹೆದರಿಕೆಯಿಂದ ಬಳಲುತ್ತಿದ್ದವರಿಗೆ ರಾಘವೇಂದ್ರ ಗುರುಗಳು ತಾವಾಗಿಯೇ ಅನುಗ್ರಹಿಸಿದ ಮೇಲೆ ಬೇರೆ ಚಿಂತೆಗಳು ಏಕೆ?

ಅಗದಂಕರ : ಅಗದ ಎಂದರೆ ಔಷಧ ಅಗದಂಕರ ಎಂದರೆ ರೋಗಗಳಿಗೆ ಔಷಧ ನೀಡುವ ವೈದ್ಯ.

ಕೀರ್ತನೆ-೬೧

ನುಡಿ-೫: ನಿನ್ನಯ ಗುಣಸ್ಫೂರ್ತಿ ಉಳ್ಳನಕ ....ನಿಶ್ಚಯಿಸಿದೆ : ರಾಘವೇಂದ್ರ ಗುರುಗಳ ಸ್ಫೂರ್ತಿ ಮತ್ತು ಕರುಣೆ ಎಲ್ಲಿಯವರೆಗೆ ಇರುತ್ತದೋ ಅಲ್ಲಿಯವರೆಗೂ ತಾವು ಪಾಪದ ಕೆಲಸಗಳನ್ನು ಮಾಡಬಹುದಾದ ಯೋಚನೆಯೇ ಬರುವುದಿಲ್ಲ ಎಂಬ ದೃಢನಂಬಿಕೆ ದಾಸರದು.

ಕೀರ್ತನೆ-೬೨

ನುಡಿ-೧:ಯುಕತಿ (ಯುಕ್ತಿ) ಬಾಣ ತೆಗೆಯಲವು ಕುಂದಿಲ್ಲ: ಜಯತೀರ್ಥರು ಮಧ್ವಾಚಾರ್ಯರ ಸಿದ್ಧಾಂತವನ್ನು ಅತ್ಯಂತ ಯುಕ್ತವಾದ ಮತ್ತು ತರ್ಕಬದ್ಧವಾದ ವಾದಸರಣಿಯಿಂದ ಸಮರ್ಥಿಸುತ್ತಾರೆ. ಅವರ ಒಂದೊಂದು ಮಾತುಗಳೂ ಆನಂದತೀರ್ಥರ ಭಾವವನ್ನು ಪಾಂಡಿತ್ಯಪೂರ್ಣವಾಗಿ ನಿರೂಪಿಸುತ್ತವೆ. ಅವರ ವಾದ ಮಂಡನೆ ನಷ್ಟವಾಗದ ಬಾಣಗಳಂತೆ.

ಧೀಷುಧಿ: 'ಧೀ' ಎಂದರೆ ಜ್ಞಾನಿ, ಪಂಡಿತ ಎಂದು ಅರ್ಥ, 'ಸುಧಿ' ಎಂದರೆ ಶ್ರೇಷ್ಠವಾದ ಜ್ಞಾನಿ ಮತ್ತು ಪಂಡಿತ. ಧೀಷುಧಿ ಎನ್ನುವುದು ಇಲ್ಲಿ ಕೇವಲ ದ್ವಿರುಕ್ತಿ ಅಲ್ಲ ಜಯತೀರ್ಥರು ಜ್ಞಾನಿಗಳ, ಪಂಡಿತರ ಸಮೂಹದಲ್ಲಿ ಶ್ರೇಷ್ಠರಾದವರು ಎಂದು ಅರ್ಥ.

ನುಡಿ-೩: ಪ್ರತಿವಾದಿ ಹೃದಯ ಗಿರಿಗಳಿಗೆ ಕುಲಿಶ : ಜಯತೀರ್ಥರ ಮಾತುಗಳು ಮತ್ತು ವಾದಸರಣಿ ಪ್ರತಿವಾದಿ ಹೃದಯವೆಂಬ ಬೆಟ್ಟಗಳಿಗೆ ವಜ್ರಾಯುಧಗಳಂತೆ ಇವೆ.

ಕೀರ್ತನೆ-೬೩

ನುಡಿ-೧: ಸುಧಾ ನಿರ್ಮಾಣ ಮಾಡಿದ ಆರ್ಯ : ಶ್ರೀಮನ್ನ್ಯಾಯಸುಧಾ ಗ್ರಂಥವನ್ನು ರಚಿಸಿ ಟೀಕಾಚಾರ್ಯರೆಂದು ಪ್ರಸಿದ್ಧರಾದ ಜಯತೀರ್ಥ ಯತಿಗಳು.

ಕೀರ್ತನೆ-೬೪

ನುಡಿ-೫: ಋಷುಗಣರು : ಶಾಸ್ತ್ರ ಜ್ಞಾನವಿಲ್ಲದೆ ಕೇವಲ ತಿಥಿ, ವಾರ, ನಕ್ಷತ್ರಗಳನ್ನು ಎಣಿಸಿ ಜ್ಯೋತಿಷ್ಯ ಹೇಳುವವರು.

ಕೀರ್ತನೆ - ೬೭

ನುಡಿ-೧: ತೋರಿ ನೀ ತೋರಿಸು : ಇಲ್ಲಿ 'ತೋರು'ಎಂಬ ಪದವನ್ನು ಎರಡು ಬಾರಿ ಬಳಸಲಾಗಿದೆ. ಕೃಪೆ ತೋರು, ನಿನ್ನ ಬಿಂಬ ರೂಪವನ್ನು ತೋರಿಸು ಎಂಬ ಅರ್ಥಗಳಲ್ಲಿ ಬಳಸಲಾಗಿದೆ. ಕೃಪೆ ತೋರುವುದು ಲೌಕಿಕ ಸುಖಕ್ಕಾಗಿ, ಬಿಂಬರೂಪ, ತೋರುವುದು ಲೌಕಿಕ ಸುಖವನ್ನು ಮೀರಿದ ದೈವೀಕ ಅನುಭವಕ್ಕಾಗಿ.

ನುಡಿ-೩: ಕಾಂತಾ ಮನಸಿನ ಬಯಕಿದೆ : ನನ್ನ ಪತ್ನಿಯ ಮನಸ್ಸಿನ ಬಯಕೆಯೂ ಇದೇ ಆಗಿದೆ.

ನುಡಿ-೪: ಒಲಿಸಿವನಿತೆ..............ತಿಳಿದಾತ ನೀನಲ್ಲ : ಹೆಂಡತಿ ಎಲ್ಲ ವಿಷಯಗಳಲ್ಲೂ ಗಂಡನ ಸುಖಕ್ಕಾಗಿ ಸಹಕರಿಸಿ ಒಲುಮೆಯನ್ನು ಸಂಪಾದಿಸಿದ್ದಾಳೆ. ಅವಳ ಜೊತೆ ಛಲ ಸಾಧಿಸಬಾರದು ಇದು ದೋಷ ಎಂಬುದನ್ನು ನೀನೂ ಬಲ್ಲೆ. ಆದ್ದರಿಂದ ನನನ್ನು ಸಂಸಾರಿ ಎಂದು ತಿರಸ್ಕರಿಸದೆ ನನ್ನ ಹೃದಯದಲ್ಲಿ ಪ್ರಕಟವಾಗು ಎಂದು ದಾಸರು ಪ್ರಾರ್ಥಿಸುತ್ತಾರೆ.

ನುಡಿ-೫: ಮುನಿಗಳು ಬಹು ವ್ಯಾಪ್ತಿ .... ಅನುಭವ ಕೊಡು : ಭಗವಂತನ ವ್ಯಾಪಕತ್ವವನ್ನು ಕುರಿತು ಜ್ಞಾನಿಗಳು ಹೇಳುವ ಮಾತುಗಳು ನನಗೆ ಅರ್ಥವಾಗುವುದಿಲ್ಲ .ಅವನ ವ್ಯಾಪ್ತಿಯನ್ನು ಅರಿಯಲು ಮನಸ್ಸಿಗೂ ಶಕ್ತಿಯಿಲ್ಲ. ಕ್ಷುದ್ರ ವಿಷಯಗಳ ಬಗ್ಗೆ ಚಿಂತಿಸುತ್ತಾ ಮನಸ್ಸನ್ನು ಆಯಾಸಗೊಳಿಸುತ್ತಿದ್ದೇನೆ. ಆದ್ದರಿಂದ ನಿನ್ನ ಪೂರ್ಣ ಮಹಿಮೆಯ ಅನುಭವ ದೊರೆಯುವಂತೆ ಮಾಡು.

ಕೀರ್ತನೆ-೬೯

ಬೆಳಗು - ಕಾಡುಕತ್ತಲೆ : ಬೆಳಕು, ಜ್ಞಾನದ, ಅಪರೋಕ್ಷ ಜ್ಞಾನದ ಸಂಕೇತ. ಕಾಡು ಕತ್ತಲೆ ಅಜ್ಞಾನ ಅಥವಾ ಅನ್ಯಥಾ ಜ್ಞಾನದ ಸಂಕೇತ.

ಕೀರ್ತನೆ-೭೫

ನುಡಿ-೪: ಕರ್ದಮ ಸೌಬರಿ ಕಶ್ಯಪ ಮೊದಲಾದ ದುರ್ದಮ ಮುನಿಗಳು: 'ದಮ' ಎಂದರೆ ಇಂದ್ರಿಯ ನಿಗ್ರಹ, ದುರ್ದಮ ಮುನಿಗಳು ಎಂದರೆ ಇಂದ್ರಿಯ ನಿಗ್ರಹಮಾಡಲಾಗದ ಮುನಿಗಳು. ಇವರೆಲ್ಲ ಕಾಮವರ್ಜಿತರೇನಲ್ಲ. ಬ್ರಹ್ಮನ ಮಾನಸ ಪುತ್ರನಾದ ಕರ್ದಮ ಋಷಿಗೆ ಹರಿ ಪ್ರತ್ಯಕ್ಷನಾಗಿ ವರವನ್ನು ಕೇಳೆಂದು ಹೇಳಿದಾಗ ಅವನು ಬೇಡಿದ್ದು ಪತ್ನಿಯನ್ನು. ಸ್ವಾಯಂಬು ಮನುವಿನ ಮಗಳಾದ ದೇವಹೂತಿಯನ್ನು ಮದುವೆಯಾಗಿ ಒಂಭತ್ತು ಪುತ್ರಿಯರನ್ನು ಒಬ್ಬ ಪುತ್ರನನ್ನು ಪಡೆದ. ಸೌಬರಿ ಎಂಬ ಋಷಿ ಮಾಂಧಾತ ರಾಜನ ಐವತ್ತು ಮಂದಿ ಪುತ್ರಿಯರನ್ನು ಮದುವೆಯಾದ. ಕಶ್ಯಪ ಮುನಿ ಹದಿಮೂರು ಮಂದಿ ದಕ್ಷ ಪುತ್ರಿಯರನ್ನು ಮದುವೆಯಾಗಿದ್ದ. ಇಂತಹ ದುರ್ದಮ ಮುನಿಗಳಿಗೇ ಪ್ರತ್ಯಕ್ಷನಾದ ಶ್ರೀ ಹರಿ ತನ್ನ ವಿಷಯದಲ್ಲಿ ಏಕೆ ನಿರ್ದಯನಾದ ಎಂಬುದು ಭಕ್ತನ ಪ್ರಶ್ನೆ.

ಕೀರ್ತನೆ - ೭೭

ನುಡಿ-೧: ಅವಸರಕ್ಕೊದಗಿ ಪಿಡಿದು ದಡ ಏರಿಸಿ : ತಾವು ಭವಸಾಗರದಲ್ಲಿ ಮುಳುಗಿ ಹೋಗುತ್ತಿರುವ ಕಷ್ಟದ ಸಂದರ್ಭದಲ್ಲಿ ಒದಗಿ ಬಂದು ಶ್ರೀ ಹರಿ ಕರುಣೆಯನ್ನು ತೋರಿದ್ದಾನೆ. ತಮ್ಮನ್ನು ಯತಿಯನ್ನಾಗಿ ಮಾಡಿದ್ದಾನೆ ಎಂದು ದಾಸರು ಭಾವಿಸಿದ್ದಾರೆ.

ನುಡಿ-೨: ಭಾರ ತಾಳದು ಎಂದು............ ತನುವಿಗೆ ಲಘುಮಾಡಿದೆ: ಯತಿಯಾದವನು ಜುಟ್ಟು ಜನಿವಾರಗಳನ್ನು ವಿಸರ್ಜಿಸಬೇಕು. ಸಾಧನ ಶರೀರಕ್ಕೆ ಶಿಖೆ ಮತ್ತು ಯಜ್ಞೋಪವೀತಗಳು ಭಾರವಾಗಬಹುದೆಂದು ಭಗವಂತ ಅವನ್ನು ನಿವಾರಿಸಿ ದೇಹವನ್ನು ಹಗುರವಾಗಿ ಮಾಡಿದ್ದಾನೆ.

ನುಡಿ-೩:ಲಕ್ಷ್ಯವಿಲ್ಲದೆ ಅನ್ನ ಮೊದಲಾಗಿ ಕೊಡುವರಿಗೆ : ವ್ಯಾಸ ತತ್ವಜ್ಞರು ಗೃಹಸ್ಥರಾಗಿದ್ದಾಗ ಅನ್ನದಾನ, ವಸ್ತ್ರದಾನ, ವಿದ್ಯಾದಿದಾನಗಳನ್ನು ಲಕ್ಷ್ಯವಿಲ್ಲದೆ ಮಾಡಿ ತಮ್ಮ ಸಾಧನೆಯ ಬಗ್ಗೆ ಅಭಿಮಾನಪಡುತ್ತಿದ್ದರು. ಸಾಧನೆಗೆ ಅಭಿಮಾನ, ಅಹಂಭಾವಗಳು ತೊಡಕಾಗಬಹುದೆಂದು ಭಾವಿಸಿ, ಶ್ರೀಹರಿ ತಮ್ಮನ್ನು ಭಿಕ್ಷುಕನನ್ನಾಗಿ ಮಾಡಿದ ಎಂದು ಭಾವಿಸುತ್ತಾರೆ.

ಕೀರ್ತನೆ : ೮೩

ನುಡಿ-೧ : ಸಾರಹೃದಯ : 'ಹೃ' ಎಂದರೆ ಯಜ್ಞಭಾಗನ್ನು ಸ್ವೀಕರಿಸುವವನು. 'ದ' ಎಂದರೆ ಜ್ಞಾನವನ್ನು ದಯಪಾಲಿಸುವವನು 'ಯ' ಎಂದರೆ ಅಪೇಕ್ಷಿತ ಫಲಗಳನ್ನು ಹೊಂದುವಂತೆ ಮಾಡುವವನು. ಆದ್ದರಿಂದ ಶ್ರೀ ಹರಿ ಹೃದಯನಾಮಕ ಎನಿಸಿಕೊಳ್ಳುತ್ತಾನೆ. ಹೀಗೆ ಶ್ರೇಷ್ಠನೂ, ಹೃದಯ ನಾಮಕನೂ ಆದ ಶ್ರೀ ಹರಿ ಸಾರಹೃದಯ.

ಕಾರಣ ಕಾರಣಕ ಅನಿಮಿತ್ತ ಬಂಧು : ಸಕಲ ಇಂದ್ರಿಯಗಳ ಕ್ರಿಯೆಗಳನ್ನು ಮಾಡಿಸುವುದರಿಂದ ಶ್ರೀಹರಿ ಕಾರಣ ಎನಿಸಿಕೊಳ್ಳುತ್ತಾನೆ. ಅವತಾರ ಪುರುಷನಾದ್ದರಿಂದ ಅವನು ಕಾರಣಕ. ಯಾವುದೇ ಸಂಬಂಧ ಪ್ರತಿಫಲಾಪೇಕ್ಷೆ ಮತ್ತು ಕಾರಣಗಳಿಲ್ಲದೆ ಸುಜೀವಿಗಳಿಗೆ ಉಪಕಾರ ಮಾಡುವುದರಿಂದ ಅನಿಮಿತ್ತಬಂಧು.

ನುಡಿ-೪: ಪೂರ್ಣಮತ್ಯಾಗಮ: ಪೂರ್ಣಪ್ರಜ್ಞರಾದ ಮಧ್ವಾಚಾರ್ಯರು ಪ್ರತಿಪಾದಿಸಿದ ತತ್ವಸಿದ್ಧಾಂತಗಳು.

ನುಡಿ-೬:ಮೃಕಂಡುಸುತ : ಮೃಕಂಡು ಮುನಿಯ ಮಗ ಮಾರ್ಕಂಡೇಯ. ಅಲ್ಪಾಯುಷಿಯಾದ ಈತ ಶಿವನನ್ನು ಕುರಿತು ತಪಸ್ಸು ಆಚರಿಸಿ ಹದಿನಾಲ್ಕು ಕಲ್ಪಗಳವರೆಗೆ ಧೀರ್ಘಾಯುಷ್ಯವನ್ನು ಪಡೆದ.

ಗುರುಸುತ ಯಮಪುರಕೆ ಹೋದನ್ನ ತರಲಿಲ್ಲೆ. : ಸಾಂದೀಪಿನಿ ಎಂಬ ಗುರುವಿನ ಬಳಿ ಬಲರಾಮ ಕೃಷ್ಣರು ವ್ಯಾಸಂಗ ಮಾಡುತ್ತಿದ್ದರು. ಈ ಗುರುಗಳ ಮಗನನ್ನು ಪಂಚಜನ

ಎಂಬ ರಾಕ್ಷಸ ಅಪಹರಿಸಿ ಸಮುದ್ರದಲ್ಲಿ ಅಡಗಿಸಿದ. ತಮ್ಮ ಗುರುಗಳಿಗೆ ಗುರುದಕ್ಷಿಣೆಯಾಗಿ ಸತ್ತ ಮಗನನ್ನು ತಂದು ಕೊಡುವ ಪ್ರತಿಜ್ಞೆ ಮಾಡಿದ ಶ್ರೀ ಕೃಷ್ಣ ಸಮುದ್ರವನ್ನು ಪ್ರವೇಶಿಸಿ ಅಸುರರನ್ನು ಸಂಹರಿಸಿದ. ಅಸುರನ ದೇಹದಲ್ಲಿ ಗುರುಪುತ್ರನನ್ನು ಕಾಣದೆ ಯಮಲೋಕಕ್ಕೆ ಹೋಗಿ ತನ್ನ ಗುರುಪುತ್ರನನ್ನು ಕರೆತಂದು ಸಾಂದೀಪಿನಿಗೆ ಒಪ್ಪಿಸಿದ.

ಪೊರೆಯಲಿಲ್ಲೆ ಪರೀಕ್ಷಿತುವಿನ : ಅಭಿಮನ್ಯು ಮತ್ತು ಉತ್ತರೆಯರ ಮಗ ಪರೀಕ್ಷಿತ. ಈತ ಉತ್ತರೆಯ ಗರ್ಭದಲ್ಲಿರುವಾಗಲೇ ಅಶ್ವತ್ಥಾಮ ತನ್ನ ಬ್ರಹ್ಮಾಸ್ತ್ರದಿಂದ ಕೊಲ್ಲಲು ಪ್ರಯತ್ನಿಸಿದ. ಆದರೆ ಕೃಷ್ಣನ ಮಹಿಮೆಯಿಂದ ಪರೀಕ್ಷಿತ ಬದುಕಿ ಉಳಿದ.

ಕೀರ್ತನೆ:೮೪

ದಾಶರಾಯನ ಮಗಳಿಗೆ ಮಗನಾಗಿ :

ದಾಶರಾಯ ಬೆಸ್ತರ ಅರಸು. ಈತ ಸತ್ಯವತಿಯ ಸಾಕುತಂದೆ. ಪರಾಶರ ಮುನಿ ಮತ್ತು ಸತ್ಯವತಿಯರ ಮಗನೇ ವ್ಯಾಸಮುನಿ. ವೇದವ್ಯಾಸರೂಪಿಯಾದ ಶ್ರೀಹರಿ. ಕುಲದಲ್ಲಿ ಮತ್ತು ವೃತ್ತಿಯಲ್ಲಿ ಇವನು ಅಂಬಿಗನೇ. ಮುಕ್ತಿಯೋಗ್ಯರಾದ ಜೀವಿಗಳಿಂದ ಪುಣ್ಯವೆಂಬ ಗುತ್ತಿಗೆ ಹಣವನ್ನು ಪಡೆದು ಭವಸಾಗರವನ್ನು ದಾಟಿಸುವ ಅಂಬಿಗ ಅವನು.

ಕೀರ್ತನೆ–೮೬

ನುಡಿ–೧: ಯತಿ ಮಾಡಿ ಕೂಡಿಸಿದಿ : ವ್ಯಾಸತತ್ವಜ್ಞರು ಸನ್ಯಾಸಾಶ್ರಮ ಸ್ವೀಕರಿಸಿದ್ದು ೭೮ನೆಯ ವಯಸ್ಸಿನಲ್ಲಿ ಸನ್ಯಾಸ ಧರ್ಮವನ್ನು ಅನುಷ್ಠಾನ ಮಾಡುವುದಕ್ಕೆ ಅವರಿಗೆ ದೇಹದಲ್ಲಿ ಶಕ್ತಿಯರಲಿಲ್ಲ. ದೇಶ ಪರ್ಯಟನೆ, ತೀರ್ಥಯಾತ್ರೆ, ವಿದ್ಯಾದಾನ, ಪೂಜೆ ಇವುಗಳನ್ನು ಮಾಡಲಾಗದೆ ಸುಮ್ಮನೆ ಕೂತಿರಬೇಕಾದ ಸ್ಥಿತಿ ಒದಗಿ ಬಂದಿತ್ತು.

ನುಡಿ–೨: ಮುದುಕಿಯ ಕೈಯಲ್ಲಿ ಪುಲಿವಶವಾದಂತೆ...............

ವ್ಯಾಸತತ್ವಜ್ಞರು ತಮ್ಮ ಗುರುಗಳಾದ ಭುವನೇಂದ್ರತೀರ್ಥರಿಂದ ಪಡೆದ ನರಸಿಂಹದೇವರ ಪ್ರತಿಮೆಗೆ ಯೋಗ್ಯವಾದ ರೀತಿಯಲ್ಲಿ ಪೂಜೆ ಮಾಡುವ ಸಾಮರ್ಥ್ಯವಿರಲಿಲ್ಲ. ಬಲಿಷ್ಠವಾದ ಹುಲಿಯೊಂದು ಕೈಲಾಗದ ಮುದುಕಿಯ ವಶವಾದಂತೆ ನರಸಿಂಹ ಈ ದಡ್ಡನ ಕೈಗೆ ಸಿಕ್ಕಿಬಿದ್ದನಲ್ಲ ಎಂಬ ಸಖ್ಯಭಾವದ ನಿರೂಪಣೆ ಇಲ್ಲಿದೆ.

ನುಡಿ–೩: ದಾನಾಶ್ರಮ ಯಜನವು ಮೊದಲಿಲ್ಲ : ಯತ್ಯಾಶ್ರಮದಲ್ಲಿ ದಾನವೆಂದರೆ ವಿದ್ಯಾದಾನ. ಯಜ್ಞವೆಂದರೆ ಶ್ರೀಹರಿಯ ಪೂಜೆ ಎಂಬ ಯಜ್ಞ. ಇವೆರೆಡನ್ನೂ ಮಾಡಲಾಗದ ಅಸಹಾಯಕ ಸ್ಥಿತಿ ವ್ಯಾಸತತ್ವಜ್ಞರದು.

ಕೀರ್ತನೆ–೮೮

ನುಡಿ–೧: ನಾಳೆ ನೋಡಿದಂಥ ದಾಸರು ದೊರೆಯರು:ಮುಂದಿನದನ್ನು ಈಗಲೇ ಕಾಣಬಲ್ಲ ಕಾಲಜ್ಞಾನಿಗಳಾದ ಭಕ್ತರು ಸಿಗುತ್ತಿಲ್ಲ.

ನುಡಿ–೩:ಅಲವಬೋಧರ ಮತ: 'ಲವ' ಎಂದರೆ ಅಲ್ಪ. 'ಅಲವ' ಎಂದರೆ ಪೂರ್ಣ 'ಅಲವಬೋಧ' ಎಂದರೆ ಪೂರ್ಣಬೋಧರೆಂದು, ಪೂಣಪ್ರಜ್ಞರೆಂದು ಭಾವಿಸಲಾದ ಮಧ್ವಾಚಾರ್ಯರು. ಅವರ ಸಿದ್ಧಾಂತವೇ ಅಲವಬೋಧಮತ.

ಕೀರ್ತನೆ–೯೦

ನುಡಿ–೧: ಗುರುವಾದಿ ವಾಯು ವಿರಂಚಿಗೆ : ಶ್ರವಣದ ಮೂಲಕ ಜ್ಞಾನವನ್ನು ಮುಕ್ತಿಯನ್ನು ಪಡೆಯಬಹುದು ಎಂದು ಹೇಳಿದ ವೇದವ್ಯಾಸರು ವಾಯು ಬ್ರಹ್ಮರಿಗೆ ಗುರುವಾಗಿ ಶಾಸ್ತ್ರ ಶ್ರವಣ ಮಾಡಿಸಿದರು.

ಕೀರ್ತನೆ–೯೧

ಪಲ್ಲವಿ: ಅಚ್ಯುತ : 'ಚ್ಯುತಿ' ಎಂದರೆ ನಾಶ. ಅನಿತ್ಯತೆ, ದೇಹನಾಶ, ದು:ಖಪ್ರಾಪ್ತಿ ಅಪೂರ್ಣತೆ, ಈ ನಾಲ್ಕು ಬಗೆಯ ನಾಶಗಳಿಗೆ ಎಲ್ಲ ಜೀವಿಗಳು ಒಳಪಡುತ್ತಾರೆ. ಆದರೆ ಶ್ರೀಹರಿ ಈ ಯಾವುದೇ ರೀತಿಯ ಚ್ಯುತಿಗೆ ಒಳಪಡುವುದಿಲ್ಲವಾದ್ದರಿಂದ ಅವನು ಅಚ್ಯುತ.

ಕೀರ್ತನೆ–೯೨

ನುಡಿ–೨: ದಶಮತಿಯರಾಗಮ : ದಶಮತಿ ಎಂದರೆ ಮಧ್ವಾಚಾರ್ಯರು. ಇವರು ಪ್ರತಿಪಾದಿಸಿದ ಸಿದ್ಧಾಂತವೇ ದಶಮತಿಯರಾಗಮ (ನೋಡಿ ಟಿಪ್ಪಣಿ ಕೀ. ೫೫)

ನುಡಿ–೩: ಮಡಿಯ ಹೊರಳುವೆ : ಮಡೆ ಹೊರಳುವುದು ಎಂದರೆ ಉರುಳುಸೇವೆ ಮಾಡುವುದು. ಅಪೇಕ್ಷಿತ ಫಲಪ್ರಾಪ್ತಿಯಗಾಗಿ ಹರಕೆ ಹೊತ್ತವರು ಎಂಜಲೆಲೆಗಳ ಮೇಲೆ ಹೊರಳಿ ಮಾಡುವ ದೇವರ ಸೇವೆ.

ಕೀರ್ತನೆ–೯೫

ನುಡಿ–೨: ನಾಕರಾಜನ ಸುತನು ಕಾಕರೂಪದಿ ಬಂದು : ಶ್ರೀರಾಮನ ಅರಣ್ಯವಾಸಕಾಲದಲ್ಲಿ ಸೀತೆಯ ಸೌಂದರ್ಯದಿಂದ ಮೋಹಗೊಂಡ ಕಾಕಾಸುರನೆಂಬುವನು ಕಾಗೆಯ ರೂಪದಿಂದ ಬಂದು ಅವಳನ್ನು ಕಾಡತೊಡಗಿದ. ಶ್ರೀರಾಮ ಕಾಕಾಸುರನ ಮೇಲೆ ಒಂದು ತೃಣವನ್ನು ಪ್ರಯೋಗಿಸಿದ. ತೃಣರೂಪದ ಅಸ್ತ್ರ ಅವನನ್ನು ಹಿಂಬಾಲಿಸಿತು. ಮೂರು ಲೋಕಗಳನ್ನು ಸುತ್ತಿದರೂ ಅವನನ್ನು ಬಿಡಲಿಲ್ಲ. ಕೊನೆಗೆ ರಾಮನಿಗೆ ಶರಣಾಗಿ ಕ್ಷಮೆ ಬೇಡಿದ. ರಾಮ ಅವನನ್ನು ಕ್ಷಮಿಸಿದರೂ ತನ್ನ ಅಸ್ತ್ರ ವ್ಯರ್ಥವಾಗಬಾರದೆಂದು ಕಾಕಾಸುರನ ಕಣ್ಣನ್ನು ತೆಗೆದ. ಕಾಕಾಸುರ ತನ್ನ ಕಣ್ಣನ್ನು ಕೊಟ್ಟು ತನ್ನ ಪ್ರಾಣ ಉಳಿಸಿಕೊಂಡ.

ಕೀರ್ತನೆ–೯೮

ಇದು ಒಂದು ದಶಾವತಾರ ಸ್ತುತಿ :

ವಾರಿಧಿಯೊಳು ಹೊಕ್ಕು ವಿಹರಿಸುವ – ಮತ್ಸ್ಯ
ಧರೆಯನು ಹೊರುವ – ಕೂರ್ಮ
ಕುಂಭಿಣಿಯನು ಅತಿ ಸಂಭ್ರಮದಲಿ ತಂದ – ವರಾಹ
ಸ್ಥಂಭವ ಬೇಧಿಸಿ ಸಂಭವಿಸಿದ – ನರಸಿಂಹ
ಮೂರು ಹೆಜ್ಜೆ ಭೂಮಿಯ ಬೇಡಿದ – ವಾಮನ
ಏಳು ಮೂರು ಬಾರಿ ನೃಪತಿಗಳ ಬೇಧಿಸಿದೆ – ಪರಶುರಾಮ
ವಾನರರನು ಸೇರಿ ಜಾನಕಿಯನೆ ತಂದ – ಶ್ರೀರಾಮ
ಪೂತನಿ ಪ್ರಾಣಹಾರ ಮಾಡಿದ – ಶ್ರೀ ಕೃಷ್ಣ
ಬತ್ತಲೆ ನಿಂತ – ಬುದ್ಧ
ಹಸ್ತಿಯನೇರಿದ – ಕಲ್ಕಿ

ಕೀರ್ತನೆ–೧೦೦

ನುಡಿ–೧: ನಾಗೇಂದ್ರಶಯನ : ಶೇಷಶಯನನಾದ ಶ್ರೀಹರಿ
ನಾಗೇಂದ್ರಮರ್ದನ : ಕಾಳಿಂಗಮರ್ದನನಾದ ಶ್ರೀಕೃಷ್ಣ

ನಾಗೇಂದ್ರಗೊಲಿದವ : ಗಜರಾಜ ವರದನಾದ ಶ್ರೀಹರಿ

ಕೀರ್ತನೆ-೧೦೧

ಅನುಪಲ್ಲವಿ: ಆರುನಾಲ್ಕು ಮತ್ತಾರು ಸಾವಿರ ನಾರೆಯರ ಅರಸು: ಹದಿನಾರು ಸಾವಿರ ಗೋಪಿಯರಿಗೆ ಅರಸನಾದ ಶ್ರೀಕೃಷ್ಣ.

ಕೀರ್ತನೆ-೧೦೪

ನುಡಿ-೩: ಚಂಡಮುನಿಯ ಬೇಡಿಕೊಂಡ : ದೂರ್ವಾಸ ಆತಿಥ್ಯದ ಪ್ರಸಂಗದಲ್ಲಿ ಶ್ರೀ ಕೃಷ್ಣ ಪಾಂಡವರನ್ನು ರಕ್ಷಿಸಿದ ಸಂದರ್ಭ.

ಕೀರ್ತನೆ-೧೧೬

ನುಡಿ-೧-೨: ವ್ಯಾಸರಾಜರು ದ್ವೈತಮತದ ಪ್ರಮೇಯಗಳನ್ನು ಸಂಕ್ಷಿಪ್ತವಾಗಿ ಸಂಸ್ಕೃತ ವೃತ್ತವೊಂದರಲ್ಲಿ ವಿವರಿಸಿದ್ದಾರೆ. ಇದು ದ್ವೈತಮತದ 'ಪ್ರಮೇಯ ನವರತ್ನ' ಎಂದೇ ಪ್ರಸಿದ್ಧವಾಗಿದೆ. ಇದರ ಕನ್ನಡಾನುವಾದವೇ ಈ ಕೃತಿ. ವ್ಯಾಸರಾಜರು ನಿರೂಪಿಸಿರುವ ಮಧ್ವ ಸಿದ್ಧಾಂತದ ಒಂಭತ್ತು ತತ್ವಗಳು ಹೀಗಿದೆ:

೧. ಶ್ರೀ ಹರಿಯೇ ಸರ್ವೋತ್ತಮನಾದ ಪರದೈವ

೨. ಚರಾಚರವಾದ ಈ ಪ್ರಪಂಚವೆಲ್ಲವೂ ಸತ್ಯ

೩. ಜೀವ ಪರಮಾತ್ಮರಲ್ಲಿ ಭೇದ, ಜೀವ ಜೀವರಲ್ಲಿ ಭೇದ, ಜಡಜಡರಲ್ಲಿ ಭೇದ, ಜಡ -ಈಶ್ವರ ಭೇದ, ಜಡ-ಜೀವರಲ್ಲಿ ಭೇದ. ಹೀಗೆ ಜಗತ್ತಿನ ವಸ್ತುಗಳಲ್ಲಿ ಭಿನ್ನ ಭಿನ್ನ ಸ್ವಭಾವಗಳಿವೆ.

೪. ಎಲ್ಲ ಜೀವಿಗಳು ಹರಿಯ ಅನುಚರರು, ದಾಸರು.

೫. ಜೀವ - ಜೀವರಲ್ಲಿ ಮತ್ತು ದೇವತೆಗಳಲ್ಲಿ ತಾರತಮ್ಯವಿದೆ.

೬. ಪಾರಮಾರ್ಥಿಕ ಸುಖಾನುಭವವೇ ಮುಕ್ತಿ. ದೇಹದಿಂದ ಅನುಭವಿಸುವ ಸುಖಕ್ಕಿಂತ ಮುಕ್ತ ಜೀವರು ಅನುಭವಿಸುವ ಸುಖ ಶ್ರೇಷ್ಠವಾದುದು.

೭. ನಿರ್ಮಲವಾದ ಭಕ್ತಿಯೇ ಮುಕ್ತಿಗೆ ಕಾರಣ (ನವವಿಧ ಭಕ್ತಿ).

೮. ಪ್ರತ್ಯಕ್ಷ, ಅನುಮಾನ, ಆಗಮ ಈ ಮೂರೂ ಪ್ರಮಾಣಗಳು.

೯. ಸಕಲ ವೇದಶಾಸ್ತ್ರಗಳಲ್ಲಿಯೂ ಹರಿಯ ಮಹಿಮೆಯೇ ಪ್ರತಿ-ಪಾದಿತವಾಗಿದೆ.

ನುಡಿ೪-೫: ದೇವತಾಕಕ್ಷೆಯ ಮೂವತ್ತೆರಡು ವರ್ಗಗಳಲ್ಲಿ ೧೨ ಕಕ್ಷೆಗಳನ್ನು ಇಲ್ಲಿ ನಿರೂಪಿಸಿದ್ದಾರೆ. ಇದನ್ನು ಕಕ್ಷತಾರತಮ್ಯ ಎನ್ನುತ್ತಾರೆ. ಇಲ್ಲಿ ನಿರೂಪಿಸಿರುವುದು ಅವರೋಹಣ ತಾರತಮ್ಯ :

೧) ಶ್ರೀ ಮನ್ನಾರಾಯಣ

೨) ಲಕ್ಷ್ಮೀದೇವಿ

೩) ಬ್ರಹ್ಮ – ವಾಯುದೇವರು

೪) ಸರಸ್ವತಿ – ಭಾರತಿ ದೇವಿಯರು

೫) ಗರುಡ – ಶೇಷ – ರುದ್ರರು

೬) ಹರಿಯ ಮಡದಿಯರಾದ ಜಾಂಬವತಿ, ಕಾಳಂದಿ, ನೀಲಾ, ಭದ್ರಾ, ಮಿತ್ರಾವಿಂದ ಮತ್ತು ಲಕ್ಷಣಾ.

೭) ವಾರುಣಿ, ಸೌಪರ್ಣಿ, ಪಾರ್ವತಿ

೮) ಇಂದ್ರ – ಕಾಮ

೯) ಅಹಂಕಾರಿಕ ಪ್ರಾಣ

೧೦) ರತಿದೇವಿ, ಬೃಹಸ್ಪತಿ, ಶಚಿದೇವಿ, ಸ್ವಾಯಂಭುವಮನು, ದಕ್ಷ ಪ್ರಜಾಪತಿ

೧೧) ಪ್ರವಾಹವಾಯು

೧೨) ಸೂರ್ಯ, ಚಂದ್ರ, ಯಮ

ಕೀರ್ತನೆ–೧೧೭

ನುಡಿ–೨: ಯಂಕಾಮಯೇ ಎಂಬ ಶ್ರುತಿ : ಇದು ಅಂಬ್ರಣಿಸೂಕ್ತ ಅಥವಾ ದೇವಿ ಸೂಕ್ತದಲ್ಲಿ ಬರುವ ಮಾತು:

ಯಂಕಾಮಮಯೇ ತಂತ್ರ ಮುಗ್ರಂ ।

ಕೃಣೋಮಿ ತಂ ಬ್ರಹ್ಮಣಾಂ ತಮೃಷಿಂ ತಂಸುಮೇಧಾಂ ॥

ಲಕ್ಷ್ಮೀದೇವಿಯು ತನ್ನ ಇಚ್ಛೆಯಂತೆ ಜೀವಿಗಳಿಗೆ ಅವರ ಯೋಗ್ಯತಾನುಸಾರ ಬ್ರಹ್ಮ ಪದವಿಯನ್ನೋ ರುದ್ರ ಪದವಿಯನ್ನೋ ಕೊಡುತ್ತಾಳೆ. ಮೇಧಾವಿಯನ್ನಾಗಿಯೋ, ಋಷಿ

ಯನ್ನಾಗಿಯೋ, ಜ್ಞಾನಿಯನ್ನಾಗಿಯೋ ಮಾಡುತ್ತಾಳೆ. ಆದ್ದರಿಂದ ಬ್ರಹ್ಮಾದಿ ದೇವತೆಗಳೆಲ್ಲ ಲಕ್ಷ್ಮಿಯ ಕಿಂಕರರೆನಿಸಿಕೊಳ್ಳುತ್ತಾರೆ.

ನುಡಿ–೩: ನಿರವದ್ಯನಿರನಿಷ್ಠ : ಅಸ್ವಾತಂತ್ರ್ಯನೂ, ಅಜ್ಞಾನ, ದು:ಖ ಮೊದಲಾದ ದೋಷಗಳಿಂದ ದೂರನಾದವನೂ ಅದ್ದರಿಂದ ಶ್ರೀಹರಿ ನಿರವದ್ಯ ದೋಷರಹಿತನೂ, ಅಪ್ರಿಯರಹಿತನೂ ಆದ್ದರಿಂದ ಅವನು ನಿರನಿಷ್ಠ.

ನುಡಿ–೪ :ಗುಣಶ್ರುತ : ಸತ್ಯ, ಜ್ಞಾನ, ಆನಂದಾದಿ ಗುಣಗಳಿಂದ ಪ್ರಸಿದ್ಧನಾದ ಶ್ರೀಹರಿ.

ಕೀರ್ತನೆ–೧೧೮

ನುಡಿ–೩: ಶರಭಂಗಮುನಿಗೆ ಪರಮಪದವನಿತ್ತ : ಶರಭಂಗ ಗೌತಮ ವಂಶದ ಒಬ್ಬ ಋಷಿ. ದಂಡಕಾರಣ್ಯದಲ್ಲಿ ತಪಸ್ಸುಮಾಡುತ್ತಿದ್ದ. ಅರಣ್ಯವಾಸಕ್ಕೆ ಬಂದ ಸೀತಾರಾಮ ಲಕ್ಷಣರನ್ನು ಸತ್ಕರಿಸಿದ. ದೇಹತ್ಯಾಗ ಮಾಡಿ ಮೋಕ್ಷವನ್ನು ಪಡೆದ.

ಕೀರ್ತನೆ–೧೨೩

ನುಡಿ–೨:ಅಂಬಿಗರವಳನು ಸಂಭ್ರಮದಲಿ ನಿನ್ನ ಜನನಿ ಎನಿಸಿದೆ
(ನೋಡಿ ಟಿಪ್ಪಣಿ ೮೪)

ಕೀರ್ತನೆ–೧೩೭

ನುಡಿ–೧:ತುಚ್ಛನೆಂಬೋ ಶಬ್ದ ವಾಚ್ಯನಾಗಿರುವನು: ತು:+ಉಚ್ಛ = ತುಚ್ಛ, 'ತು:' ಎಂದರೆ ವಿಶೇಷವಾಗಿ ಉಚ್ಛ ಎಂದರೆ ಶ್ರೇಷ್ಠನಾಗಿರುವವನು, ಸರ್ವೋತ್ತಮನಾದ ಶ್ರೀಹರಿ. ಆದ್ದರಿಂದಲೇ ಅವನು ತುಚ್ಛ ಶಬ್ದ ವಾಚ್ಯನಾಗಿದ್ದಾನೆ.

ಕೀರ್ತನೆ–೧೪೭

ನುಡಿ–೧: ಉತ್ತಮತೀರ್ಥರ ಚಿತ್ತದ ಮೂರುತಿ : ಶ್ರೇಷ್ಠ ಯತಿಗಳಾದ ಆನಂದತೀರ್ಥರಿಂದ ಪೂಜೆಗೊಂಡ ಉಡುಪಿಯ ಶ್ರೀಕೃಷ್ಣ.

ಕೀರ್ತನೆ–೧೫೪

ಅ.ಪಲ್ಲವಿ : ವಾತಕುಮಾರರ ನೀತಿಗಳು : ವಾಯುದೇವರ ಅವತಾರವಾದ ಶ್ರೀ ಮಧ್ವಾಚಾರ್ಯರು ಬೋಧಿಸಿದ ತತ್ವಗಳು(ನೋಡಿ ಟಿಪ್ಪಣಿ ಕೀ ೧೧೬)

ಕೀರ್ತನೆ–೧೬೨

ನುಡಿ–೩: ಭಿನ್ನ ಸಮೀಚೀನ ಸುಖ : ಸಮೀಚೀನ ಸುಖ ಎಂದರೆ ಸಮೃದ್ಧವಾದ ಸುಖ. ಲೌಕಿಕ ಸುಖಕ್ಕಿಂತ ವಿಭಿನ್ನವಾದ. ಸಮೃದ್ಧವಾದ, ಮೋಕ್ಷಸುಖವೇ ಭಿನ್ನ ಸಮೀಚೀನ ಸುಖ.

ಕೀರ್ತನೆ–೧೬೩

ಶ್ರೀನಿವಾಸ ಕಲ್ಯಾಣದ ಕಥೆಯ ಘಟನೆಗಳನ್ನು ಉಲ್ಲೇಖಿಸಲಾಗಿದೆ.

ನುಡಿ–೫: ಬಡಕನೆದೆಗೊದೆಯಲು ಅವನಡಿಗಳಿಗೆ ಶರಣೆಂದ : ತಪಸ್ಸನ್ನು ಮಾಡಿ ಕೃಷವಾದ ದೇಹವನ್ನು ಹೊಂದಿದ್ದ ಭೃಗು ಋಷಿಗಳನ್ನು 'ಬಡಕ' ಎಂದು ಕರೆಯಲಾಗಿದೆ. ಭೃಗುಮುನಿ ತನ್ನ ಕಾಲಿಂದ ವಿಷ್ಣುವನ್ನು ಒದ್ದಾಗ ಅವನು ಕೋಪಗೊಳ್ಳದೆ ಋಷಿಯ ಪಾದಗಳಿಗೆ ನಮಸ್ಕಾರ ಮಾಡಿದ. ಲಕ್ಷ್ಮಿಯ ಕೋಪಕ್ಕೂ ಶ್ರೀನಿವಾಸನ ಅವತಾರಕ್ಕೂ ಈ ಘಟನೆಯೇ ಕಾರಣವಾಯಿತು.

ಕೀರ್ತನೆ:೧೬೫

ಪಲ್ಲವಿ: ರವಧಿ : ಅಸ್ವಾತಂತ್ರ್ಯ, ಅಜ್ಞಾನಾದಿ ದೋಷಗಳ ಮಿತಿಗೆ ಒಳಗಾಗದ ಶ್ರೀಹರಿ.

ನುಡಿ–೧: ಶುಕಭಾಷಣ : ಸ್ವತಂತ್ರವಾಗಿ ಚಿಂತನೆ ಮಾಡದೆ, ಬೇರೆಯವರು ಹೇಳಿಕೊಟ್ಟ ಮಾತುಗಳನ್ನು ಪುನರುಕ್ತಿ ಮಾಡುವ ಗಿಳಿಪಾಠ.

ಕೀರ್ತನೆ–೧೭೫

ನುಡಿ–೧: ವ್ಯಾಸರಾಜ ಯತಿರಾಜ ರಚಿತ ದ್ವಿಷಡಬ್ದದ ಪೂಜೆ: ದ್ವಿಷಡಬ್ದ ಎಂದರೆ ೧೨ ವರ್ಷ. (ದ್ವಿ + ಷಟ್+ ಅಬ್ದ) ಚಂದ್ರಗಿರಿಯ ರಾಜನಾದ ಸಾಳುವ ನರಸಿಂಹನ ಆಳ್ವಿಕೆಯ ಕಾಲದಲ್ಲಿ ತಿರುಪತಿಯ ದೇವಾಲಯದ ಪೂಜೆ ಮತ್ತು ಆಡಳಿತ ವ್ಯವಸ್ಥೆಗಳಲ್ಲಿ ತೀವ್ರ ಬಿಕ್ಕಟ್ಟು ತೋರಿತು. ಇವುಗಳನ್ನು ಸುಧಾರಣೆ ಮಾಡಲು ಸಾಳುವ ನರಸಿಂಹ ಶ್ರೀಪಾದರಾಜರನ್ನು ಪ್ರಾರ್ಥಿಸಿದ. ಶ್ರೀಪಾದರಾಜರ ಸೂಚನೆಯಂತೆ ವ್ಯಾಸರಾಜರು ೧೨ ವರ್ಷಕಾಲ ತಿರುಪತಿಯಲ್ಲಿ ನೆಲೆಸಿ ಶ್ರೀನಿವಾಸನ ಸೇವೆ ಸಲ್ಲಿಸಿದರು. ಪೂಜಾವಿಧಾನ ಮತ್ತು ಆಡಳಿತದಲ್ಲಿ ಹಲವಾರು ಸುಧಾರಣೆಗಳನ್ನು ತಂದರು.

ಕೀರ್ತನೆ-೧೭೭

ನುಡಿ-೧: ಆನಕ ದುಂದುಭಿ : ಇದು ವಸುದೇವನ ನಾಮಾಂತರ. ಈತನ ಜನನ ಕಾಲದಲ್ಲಿ ದೇವತೆಗಳು 'ಆನಕ' (ತಮಟೆ) ವನ್ನು 'ದುಂಧುಭಿ' (ನಗಾರಿ) ಗಳನ್ನು ಬಾರಿಸಿದರು. ಇಂಥ ದಿವ್ಯವಾದ್ಯಗಳೊಂದಿಗೆ ಜನಿಸಿದ್ದರಿಂದ ವಸುದೇವನಿಗೆ ಆನಕದುಂದುಭಿ ಎಂದು ಹೆಸರು. ಇವನ ಮಗ ಶ್ರೀಕೃಷ್ಣ ಆನಕದುಂದುಭಿಕುವರ ಎನಿಸಿಕೊಂಡ.

ಕೀರ್ತನೆ-೧೮೦

ನುಡಿ-೧ ಪೂರ್ಣ, ಸದಾ ಅಗಣಿತೇಷ್ಟ ಗುಣಾನುಭವೈಕ ಶರೀರ : ಪೂರ್ಣನೂ, ಶಾಶ್ವತನೂ, ಅಗಣಿತ ಮಹಿಮನೂ, ಗುಣ ಸ್ವರೂಪಿಯೂ ಆದ ಶ್ರೀ ಹರಿ.

ಕೀರ್ತನೆ-೧೮೬

ನುಡಿ-೧: ಅಷ್ಟ ವಿಭವಪೂರ್ಣ : ಹಸ್ತಿ, ಅಶ್ವ, ಛತ್ರ, ಚಾಮರ, ಆಂದೋಲ, ಸೈನ್ಯ, ಕೋಶ, ರಾಜ್ಯ ಇವು ಅಷ್ಟ ವೈಭವಗಳು. ಈ ಅಷ್ಟ ವೈಭವಗಳನ್ನು ಪೂರ್ಣ ಪ್ರಮಾಣದಲ್ಲಿ ಹೊಂದಿರುವ ಪೂರ್ಣನಾದ ಶ್ರೀಹರಿ.

ಕೀರ್ತನೆ-೧೯೭

ನುಡಿ-೩: ಸಾಲೋಕ್ಯ, ಸಾರೋಪ್ಯ, ಸಾಯುಜ್ಯ

(ನೋಡಿ ಟಿಪ್ಪಣಿ ಕೀ. ೧೮)

ಕೀರ್ತನೆ-೧೯೮

ನುಡಿ-೧ : ಕೊಳಲೂದಲು................ತಳಸೇರಿಸುವ : ಕೃಷ್ಣನ ಕೊಳಲ ನಾದ ಎಷ್ಟು ಇನಿತಾದುದ್ದೋ ಅಷ್ಟೇ ಸೂಕ್ಷ್ಮ. ಚಂದ್ರಕಿರಣಕ್ಕೆ ಬಾಡುವ ಚಿಗುರಿನಂತೆ ಅದು ನವಿರಾದದ್ದು, ಇದನ್ನು ಅರಿತ ಮೇಘರಾಜ ಚಂದ್ರನ ಕಿರಣಗಳನ್ನು ಮೋಡಗಳಿಂದ ಮರೆಮಾಡಿದ.

ಕೀರ್ತನೆ-೨೦೯

ನುಡಿ-೩: ಸಕಲ ಸಾರಭೋಕ್ತ : 'ಸಾರ' ಎಂದರೆ ಶ್ರೇಷ್ಠ ಎಂದು ಅರ್ಥ. ಸಕಲ ವಿಷಯಗಳಲ್ಲೂ ಶ್ರೇಷ್ಠವಾದುದನ್ನು ಮಾತ್ರ ಸ್ವೀಕರಿಸುವುದರಿಂದ ಶ್ರೀಹರಿ ಸಕಲ ಸಾರಭೋಕ್ತ.

ಕೀರ್ತನೆ-೨೧೦

ನುಡಿ-೩: ತ್ರಿವಿಧ ಪೂಜೆ:

ಅ) ಸಾಲಿಗ್ರಾಮ, ಪ್ರತಿಮಾ, ಬಿಂಬೋಪಾಸನೆ

ಆ) ವಿಗ್ರಹ, ಪ್ರತಿಮಾ, ಮಾನಸ ಪೂಜೆ.

ಕೀರ್ತನೆ-೨೧೨

ಪಲ್ಲವಿ : ಭೈಷ್ಮೀ ಸತ್ಯಾ ಸಮೇತ : ಭೀಷ್ಮಕ ರಾಜನ ಮಗಳಾದ ರುಕ್ಮಿಣಿ ಮತ್ತು ಸತ್ಯಭಾಮಾ ಸಮೇತನಾದ ಶ್ರೀ ಕೃಷ್ಣ.

ಕೀರ್ತನೆ-೨೧೫

ನುಡಿ-೨: ಭುಜಪುಂಗರಿಪು ಧ್ವಜ : ಸರ್ಪಗಳಲ್ಲಿ ಶ್ರೇಷ್ಠವಾದ್ದು ನಾಗ. ನಾಗನ ಶತ್ರುವಾದ ಗರುಡನನ್ನು ಧ್ವಜದಲ್ಲಿ ಉಳ್ಳ ಗರುಡಧ್ವಜನಾದ ಶ್ರೀಹರಿ.

ಕೀರ್ತನೆ-೨೨೬

ನುಡಿ-೧:ಯಂಕಾಮಯೇತ್ಯಾದಿ ಶ್ರುತಿಗಳೆಲ್ಲ

(ನೋಡಿ ಟಿಪ್ಪಣಿ ಕೀ. ೧೧೭)

ಕೀರ್ತನೆ-೨೨೭

ನುಡಿ-೧: ನಿಮ್ಮಯ ಪತಿಯ ಪ್ರಸಾದದ ಎಂಜಲು : ಶ್ರೀಹರಿಗೆ ನಿವೇದಿಸಿದ ಪ್ರಸಾದವನ್ನು ಲಕ್ಷ್ಮೀದೇವಿ ಸ್ವೀಕರಿಸುತ್ತಾಳೆ. ಅವಳು ಉಂಡು ಉಳಿದ ಎಂಜಲು ಪ್ರಸಾದವನ್ನು (ಶೇಷ ಪ್ರಸಾದ) ತಮಗೆ ನೀಡಬೇಕೆಂದು ದಾಸರು ಬೇಡುತ್ತಾರೆ. ಶ್ರೀಹರಿಯ ಪ್ರಸಾದ, ಅನುಗ್ರಹ ಇವು ನೇರವಾಗಿ ದೊರೆಯುವುದಿಲ್ಲ ಹರಿಯ ನೇರವಾದ ಅನುಗ್ರಹಕ್ಕೆ ಪಾತ್ರವಾದವಳು ಲಕ್ಷ್ಮೀದೇವಿ ಒಬ್ಬಳೇ. ಲಕ್ಷ್ಮಿಯ ಮೂಲಕ ಸುಜೀವಿಗಳಿಗೆ ಹರಿಪ್ರಸಾದ ಲಭ್ಯವಾಗುತ್ತದೆ ಎಂಬುದು ಈ ಮಾತಿನ ಅರ್ಥ.

ಕೀರ್ತನೆ-೨೨೯

ನುಡಿ-೧: ಮಾತರಿಶ್ವ ನೀ ಪ್ರೀತನಾಗೆ : ವಾಯು ದೇವರನ್ನು, ವಾಯುದೇವರ ಅವತಾರ ರೂಪಗಳನ್ನು ಮಾಥರಿಶ್ವ ಎನ್ನುತ್ತಾರೆ. ಜೀವರ ದೇಹಗಳಲ್ಲಿ ನೆಲೆಸಿ, ದೇಹ ಇಂದ್ರಿಯಗಳಿಗೆ ಪ್ರೇರಕನಾದ್ದರಿಂದ ವಾಯುದೇವರಿಗೆ ಮಾತರಿಶ್ವ ಎಂದು ಹೆಸರು. 'ಮಾತರ' ಎಂಬ ಪದಕ್ಕೆ 'ಜ್ಞಾನ' ಎಂಬ ಅರ್ಥವೂ ಇದೆ. ಜ್ಞಾನಿಯಾದ ವಾಯುದೇವರನ್ನು 'ಮಾತರಿಶ್ವ' ಎನ್ನುತ್ತಾರೆ. 'ಮಾತರಿ' ಎಂದರೆ ವೇದಗಳೆಂದು ಅರ್ಥ. ವೇದಗಳ ವಿಚಾರವಾಗಿ ಪೂರ್ಣಜ್ಞಾನವುಳ್ಳ ವಾಯುದೇವರೆ ಮಾತರಿಶ್ವ ಇಂತಹ ವಾಯುದೇವರನ್ನು ಪ್ರೀತಿಪಡಿಸಿದರೆ ಹರಿಯ ಒಲುಮೆಯನ್ನು ಸುಲಭವಾಗಿ ಪಡೆಯುಬಹುದು. ಎಂದು ದಾಸರು ಭಾವಿಸುತ್ತಾರೆ.

ನುಡಿ-೨: ಜರಾಸಂಧನ ಕಾಯುವ........ ಹರಿಗಪರೋಕ್ಷದಿ ಅರ್ಪಣೆ ಮಾಡಿದ : ಪ್ರತ್ಯಕ್ಷಕ್ಕೆ ವಿರುದ್ಧವಾದ್ದು ಪರೋಕ್ಷ. ಪರೋಕ್ಷಕ್ಕೆ ವಿರುದ್ಧವಾದ್ದು ಅಪರೋಕ್ಷ ಅಪರೋಕ್ಷ ಎಂದರೆ ಪ್ರತ್ಯಕ್ಷ ಎಂದೇ ಅರ್ಥ. ಭೀಮಸೇನ ಕೃಷ್ಣನ ಸಮಕ್ಷಮದಲ್ಲೇ ಜರಾಸಂಧನ ಶರೀರವನ್ನು ಹರಿದು ಮುರಿದು ತನ್ನ ಶಕ್ತಿ ಸಾಮರ್ಥ್ಯಗಳನ್ನು ಅರ್ಪಣೆ ಮಾಡಿದ.

ನುಡಿ-೩: ಅನಿರುದ್ಧನಿಗನುಮತವಾಗಿರುವ ಸಿದ್ಧಾಂತ: ವಿಷ್ಣುತತ್ವವನ್ನು ಪ್ರತಿಪಾದಿಸುವ ವೈಷ್ಣವ ಸಿದ್ಧಾಂತ.

ಕೀರ್ತನೆ-೨೩೯

ನುಡಿ-೩ : ಅಂತಿಮ ಭಾಷ್ಯಾದಿಗಳ ರಚಿಸಿ............

ಮಧ್ವಾಚಾರ್ಯರಿಗಿಂತ ಹಿಂದೆ ೨೧ ಜನ ವೇದ ಉಪನಿಷತ್ತುಗಳಿಗೆ ಭಾಷ್ಯಗಳನ್ನು ರಚಿಸಿದ್ದರು. ಅವುಗಳನ್ನು ಅಧ್ಯಯನ ಮಾಡಿ ದೋಷಗಳನ್ನು ಸರಿಪಡಿಸಿ ಮಧ್ವಾಚಾರ್ಯರು ನೂತನ ಭಾಷ್ಯಗಳನ್ನು ಬರೆದರು. ಭಾಷ್ಯಕಾರದಲ್ಲಿ ಮಧ್ವರ ಭಾಷ್ಯಗಳೇ ಕೊನೆಯವು. ಇವನ್ನು ವಿಮರ್ಶಿಸಿ ದೋಷಗಳನ್ನು ಗುರುತಿಸಿ ನೂತನ ಭಾಷ್ಯಗಳನ್ನು ಯಾರೂ ರಚಿಸಿಲ್ಲವಾದ ಕಾರಣ ಮಧ್ವರ ಭಾಷ್ಯಗಳೇ ಅಂತಿಮ ಭಾಷ್ಯಗಳೆಂದು ಭಾವಿಸುತ್ತಾರೆ.

ಕೀರ್ತನೆ-೨೪೩

ನುಡಿ-೧: ಹರಿಪಾದೋದಕ ಶಿರದಲಿ ಧರಿಸಿದ ....ಪರಮ ವೈಷ್ಣವ : ವಾಮನಾವತಾರದ ಶ್ರೀಹರಿ ತ್ರಿವಿಕ್ರಮನಾಗಿ ಭೂಮಿ ಆಕಾಶಗಳನ್ನು ಅಳೆದಾಗ ಸ್ವರ್ಗದ

ದೇವತೆಗಳು ಆತನ ಪಾದಕ್ಕೆ ಅಭಿಷೇಕ ಮಾಡಿದರು. ಆ ಪಾದೋದಕವೇ ಗಂಗೆಯಾಯಿತು. ಈ ಗಂಗೆಯನ್ನು ಶಿರಸ್ಸಿನಲ್ಲಿ ಧರಿಸಿರುವುದರಿಂದ ಗಂಗಾಧರನಾದ ಶಿವ ಪರಮ ವೈಷ್ಣವ.

ಕೀರ್ತನೆ–೨೪೬

ಪಲ್ಲವಿ : ತುಂಗಮಹಿಮನ ಪಾದಾಂಗುಳಿಜಾತೆ : ಶ್ರೀಹರಿಯ ಪಾದೋದ್ಭವೆಯಾದ ಗಂಗೆ (ನೋಡಿ ಟಿಪ್ಪಣಿ ಕೀ. ೨೪೩)

ಕೀರ್ತನೆ–೨೪೮

ಪಲ್ಲವಿ ಮತ್ತು ನುಡಿ–೨ : ಜಗನ್ನಾಥತೀರ್ಥರು : (೧೭೭೦) ಇವರು ವ್ಯಾಸರಾಜ ಮಠದ ಯತಿಗಳು. ರಘುನಾಥತೀರ್ಥರ ಶಿಷ್ಯರು. ಭಾಷ್ಯದೀಪಿಕಾ, ಸೂತ್ರದೀಪಿಕಾ, ಎಂಬ ವ್ಯಾಖ್ಯಾನ ಕೃತಿಗಳನ್ನು ಸಂಸ್ಕೃತದಲ್ಲಿ ಬರೆದು ಭಾಷ್ಯದೀಪಿಕಾಚಾರ್ಯ ಎಂದು ವಿದ್ವತ್ ವಲಯದಲ್ಲಿ ಪ್ರಸಿದ್ಧರಾದರು.

ನುಡಿ–೩: ಆಮ್ರ ವೃಕ್ಷದಲಿ ಶ್ರೀ ನರಿಹರಿಯ ಅನುಗ್ರಹ ಪಡೆದ : ಜಗನ್ನಾಥತೀರ್ಥರು ನರಸಿಂಹದೇವರ ಉಪಾಸಕರು. ಇವರು ಒಮ್ಮೆ ಸಂಚಾರದಲ್ಲಿದ್ದಾಗ ಅನೇಕ ಪುಂಡರು ಗುಂಪಾಗಿ ಅನಿರೀಕ್ಷಿತವಾಗಿ ಇವರ ಮೇಲೆ ಧಾಳಿ ಮಾಡಿದರು ಶ್ರೀಗಳು ನರಸಿಂಹನನ್ನು ಸ್ಮರಿಸಲು ಹತ್ತಿರದ ಮಾವಿನಮರದಿಂದ ಉಗ್ರರೂಪವೊಂದು ಪ್ರಕಟವಾಗಿ ಪುಂಡರನ್ನು ಹೊಡೆದೋಡಿಸಿಂತಂತೆ :

'ಆಮ್ರಸ್ಥಂಭಾತ್ ಸಮಾಗತ್ಯತಾಮ್ರ ತುಂಡಾನ್ ನಿಹತ್ಯಯಃ ।

ನಮ್ರಂ ನೌಮಿ ಜಗನ್ನಾಥಂ ಕ್ರಮೋ ಪಾತ್ತಂ ನೃಕೇಸರಿಃ ॥

ಎಂದು ತಮ್ಮನ್ನು ಗಂಡಾಂತರದಿಂದ ಪಾರುಮಾಡಿದ ನರಸಿಂಹದೇವರನ್ನು ಜಗನ್ನಾಥತೀರ್ಥರು ಸ್ಮರಿಸಿದ್ದಾರೆ.

ಕೀರ್ತನೆ–೨೪೯

ನುಡಿ–೧ : ನೇದೃಶಂ ಸ್ಥಲಮಲಂ ....

ಈ ಸ್ಥಳಕ್ಕೆ ಸದೃಶವಾದ ಸ್ಥಳ ಮತ್ತೊಂದಿಲ್ಲ. ಈ ತೀರ್ಥಕ್ಕೆ ಸಮನಾದ ತೀರ್ಥ ಮತ್ತೊಂದಿಲ್ಲ. ವಿಷ್ಣುವಿಗೆ ಸಮನಾದ ಬೇರೆ ದೇವರಿಲ್ಲ ಎಂದು ತಿರಮಕೂಡಲು ಕ್ಷೇತ್ರವನ್ನು, ಕಾವೇರಿ ನದಿಯನ್ನು, ಶ್ರೀಹರಿಯನ್ನು ರಘುನಾಥತೀರ್ಥರು ಹೊಗಳುತ್ತಾರೆ.

ನುಡಿ-೨ : ಶೇಷಚಂದ್ರಿಕಾಚಾರ್ಯರೆಂಬೊ ಗುರು..................

ವೇದವ್ಯಾಸರ ಬ್ರಹ್ಮಸೂತ್ರಕ್ಕೆ ಮಧ್ವಾಚಾರ್ಯರು ಭಾಷ್ಯವನ್ನು ಬರೆದರು. ಇದಕ್ಕೆ ಜಯತೀರ್ಥರು ತತ್ವಪ್ರಕಾಶಿಕಾ ಟೀಕೆಯನ್ನು ಬರೆದರು. ಈ ಟೀಕೆಗೆ ವ್ಯಾಸರಾಜರು ಚಂದ್ರಿಕಾ ಎಂಬ ಟಿಪ್ಪಣಿ ಬರೆದರು. ಈ ಚಂದ್ರಿಕಾಗ್ರಂಥ ತತ್ವಪ್ರಕಾಶಿಕೆಯ ಎರಡು ಅಧ್ಯಾಯಗಳ ಟಿಪ್ಪಣಿ ಮಾತ್ರ. ಉಳಿದ ಮೂರು ನಾಲ್ಕು ಅಧ್ಯಾಯಗಳಿಗೆ ಅವರು ಟಿಪ್ಪಣಿ ಬರೆಯಲಿಲ್ಲ. ವ್ಯಾಸರಾಜರ ಅನಂತರ ಅವರ ಶಿಷ್ಯ ಪರಂಪರೆಯಲ್ಲಿ ಹತ್ತನೆಯವರಾಗಿ ಬಂದ ರಘುನಾಥತೀರ್ಥರು (೧೭೫೫) ಚಂದ್ರಿಕೆಯ ಉಳಿದ ಭಾಗಗಳಿಗೆ ಟಿಪ್ಪಣಿ ಬರೆದರು. ವ್ಯಾಸರಾಜರು ಚಂದ್ರಿಕಾಚಾರ್ಯರಾದರೆ, ರಘುನಾಥತೀರ್ಥರು ಶೇಷಚಂದ್ರಿಕಾಚಾರ್ಯರೆನಿಸಿಕೊಂಡರು.

ಕೀರ್ತನೆ-೨೫೫

ನುಡಿ-೨: ಚಂದ್ರಿಕಾ ನ್ಯಾಯಾಮೃತ ತಾಂಡವದಲಿ: ಚಂದ್ರಿಕಾ, ನ್ಯಾಯಾಮೃತ, ತರ್ಕತಾಂಡವ ಇವು ವ್ಯಾಸರಾಜರ ಸಂಸ್ಕೃತ ಗ್ರಂಥಗಳು

ನುಡಿ-೪: ರಾಜನ ಕುಹುಯೋಗವ ನಿವಾರಿಸಿ :

ಜ್ಯೋತಿಷ್ಯ ಶಾಸ್ತ್ರದಲ್ಲಿ ಕುಹೂಯೋಗವನ್ನು ಒಂದು ಕೆಟ್ಟ ಘಳಿಗೆ ಎನ್ನುತ್ತಾರೆ. ರಾಹು, ಸೂರ್ಯ, ಶನಿ, ಅಂಗಾರಕ ಗ್ರಹಗಳು ಶೂನ್ಯ ಚಂದ್ರ ತಿಥಿಯಾದ ಅಮಾವಾಸ್ಯೆಯಲ್ಲಿ ಮಕರ ರಾಶಿಯಲ್ಲಿ ಸಂಧಿಸುವುದೇ ಕುಹುಯೋಗ. ಈ ರಾಶಿ ನಕ್ಷತ್ರದಲ್ಲಿ ಜನಿಸಿದವರಿಗೆ ಗಂಡಾಂತರ ತರುವ ಕೆಟ್ಟ ಘಳಿಗೆ ಇದು. ಇಂಥ ಕುಹುಯೋಗ ೮-೫-೧೫೨೧ ರಲ್ಲಿ ಕೃಷ್ಣದೇವರಾಯನಿಗೆ ಪ್ರಾಪ್ತವಾಯಿತು. ಈ ಸಂದರ್ಭದಲ್ಲಿ ವ್ಯಾಸರಾಜರು ರಾಜನಿಂದ ಅಧಿಕಾರ ಸ್ವೀಕರಿಸಿ ತಾವೇ ರಾಜರಾದರು. ಕುಹುಯೋಗದ ಘಳಿಗೆಯಲ್ಲಿ ಸಿಂಹಾಸನದಿಂದ ಕೆಳಗಿಳಿದು ತಾವು ಹೊದ್ದಿದ್ದ ಕಾವಿಯ ವಸ್ತ್ರವನ್ನು ಸಿಂಹಾಸನದ ಮೇಲೆ ಎಸೆದರು. ಆ ವಸ್ತ್ರ ಸುಟ್ಟು ಹೋಯಿತು. ರಾಜನಿಗೆ ಒದಗಬೇಕಾಗಿದ್ದ ದುರವಸ್ಥೆಯನ್ನು ಕಾವಿಯ ವಸ್ತ್ರ ಅನುಭವಿಸಿತು. ರಾಜನ ಗಂಡಾಂತರ ದೂರವಾಯಿತು.

ಕೀರ್ತನೆ-೨೫೬

ನುಡಿ-೨: ಹನುಮನ ಭವನಗಳನ್ನು ಕಟ್ಟಿದವಗೆ : ವ್ಯಾಸರಾಜರು ೭೩೨ ಮಾರುತಿಯ ಗುಡಿಗಳನ್ನು ಕಟ್ಟಿಸಿದರೆಂದು ಪ್ರತೀತಿ. ಹಂಪೆಯ ಚಕ್ರತೀರ್ಥದಲ್ಲಿ ಯಂತ್ರೋದ್ಧಾರ ಪ್ರಾಣದೇವರನ್ನು ಸ್ಥಾಪಿಸಿದರು.

ನುಡಿ–೫: ಕುಹುಯೋಗವ ಕೊಂದವ : (ನೋಡಿ ಟಿಪ್ಪಣಿ ಕೀ . ೨೫೫)

ಕೀರ್ತನೆ–೨೯೫

ನುಡಿ–೩: ಅನ್ನಾದಿಮಯ ಹರಿಯು........ ಅನ್ನದಲ್ಲಿ ಸನ್ನಿಹಿತವಾಗಿರುವುದರಿಂದಲೂ ಸರ್ವಜೀವರಿಗೆ ಜೀವನಾಧಾರವಾಗಿರುವುದರಿಂದಲೂ, ಶ್ರೀಹರಿಗೆ 'ಅನ್ನ' ಎಂದು ಹೆಸರು. ಅನ್ನ ಶಬ್ದವಾಚ್ಯನಾದ ಶ್ರೀ ಹರಿಯು ನಾವು ನೇವೇದ್ಯದ ರೂಪದಲ್ಲಿ ಅರ್ಪಿಸುವ ಅನ್ನದ ಪ್ರಲೋಬನೆಗೆ ಎಂದೂ ಒಳಗಾಗುವುದಿಲ್ಲ.

ಕೀರ್ತನೆ–೩೦೭

ನುಡಿ–೧ : ಪುಟ್ಟದಕಟ್ಟು : ಪುನರ್ಜನ್ಮವಿಲ್ಲದ ಕಟ್ಟುಪಾಡು.

ಕೀರ್ತನೆ–೩೧೨

ನುಡಿ–೩: ಬಲಮುರಿ ಶಂಖ : ಬಲಗಡೆಗೆ ತಿರುವಿರುವ ಶಂಖ. ಇಂಥ ಅಪರೂಪದ ಶಂಖವನ್ನು ಲಕ್ಷ್ಮಿಯ ಸಾನಿಧ್ಯವಿದೆಯೆಂದು ಭಾವಿಸಿ ಪೂಜಿಸುತ್ತಾರೆ. ಎಡತಿರುವು ಇರುವ ಶಂಖ ಅಭಿಷೇಕ ಮಾಡುವ ಪೂಜಾಸಾಧನವಾದರೆ, ಬಲಮುರಿ ಶಂಖ ಪೂಜಾರ್ಹವಾದ ವಸ್ತು, ಈ ಶಂಖ ಇರುವ ಮನೆಗಳಲ್ಲಿ ಸೌಭಾಗ್ಯ ನೆಲೆಸುವುದೆಂಬ ನಂಬಿಕೆಯಿರುವುದರಿಂದ ಇದು ಪೂಜ್ಯವೂ ಬೆಲೆಯುಳ್ಳದ್ದೂ ಆಗಿದೆ.

ಕೀರ್ತನೆ–೩೨೨

ಚೆಂಡಾಟ, ಕಣ್ಣುಮುಚ್ಚಾಲೆ, ಇಸ್ಪೀಟು, ಕ್ರಿಕೆಟು ಕೊಕ್ಕೋ ಮುಂತಾದ ಆಟಗಳಿಗೆ ಆಧ್ಯಾತ್ಮಿಕ ಅರ್ಥಗಳನ್ನು ನೀಡಿದ್ದಾರೆ. ಜ್ಞಾನಿಗಳಾದವರು ಪಂಡಿತರಾಗಿ ವಿದ್ಯೆಯನ್ನು ಕರತಲದಲ್ಲಿ ಹಿಡಿವ ಚೆಂಡಿನಾಟ ಆಡಬೇಕು. ಬಾಹ್ಯ ವಿಚಾರಗಳಿಗೆ ಕಣ್ಣುಮುಚ್ಚಿ ಅಂತರ್ಮುಖಿಯಾಗಿ ಹೃದಯದಲ್ಲಿ ಶ್ರೀ ಹರಿಯನ್ನು ಹಿಡಿಯುವ ಕಣ್ಣು ಮುಚ್ಚಾಲೆ ಆಡಬೇಕು. ಈಶ, ಜೀವ, ಜಡ ಇವರಲ್ಲಿ ಈಶನೇ ಶ್ರೇಷ್ಠನೆಂದು ಆಶ್ರಯಿಸುವ ಮೂರೆಲೆ ಆಟವಾಡಬೇಕು. ದಶಮಿ, ಏಕಾದಶಿ, ದ್ವಾದಶಿ, ಈ ಮೂರು ದಿನಗಳಲ್ಲೂ ಹರಿಯನ್ನೇ ಸ್ಮರಿಸುವ ಮೂರು ದಿನದ ಆಟ ಆಡಬೇಕು (ಕ್ರಿಕೆಟ್). ಜೀವನದಲ್ಲಿ ಯಾರಿಗೂ ಯಾವ ಸ್ಥಾನವೂ ಶಾಶ್ವತವಲ್ಲ, ಒಬ್ಬರಿಗೊಬ್ಬರು ಕೊಕ್ ಕೊಡುತ್ತಾರೆ ಎಂಬುದನ್ನು ಕೊಕ್ಕೊ ಆಟ ಸೂಚಿಸುತ್ತದೆ.

ಕೀರ್ತನೆ-೩೨೮

ನುಡಿ-೨: ತಂತ್ರಸಾರ :ಇದು ಮಧ್ವಾಚಾರ್ಯರು ಬರೆದಿರುವ ಒಂದುಗ್ರಂಥ. ಇದರಲ್ಲಿ ದೇವಪೂಜಾ ಪದ್ಧತಿಯನ್ನು ಪೂಜಾತಂತ್ರಗಳನ್ನು ನಿರೂಪಿಸಿಲಾಗಿದೆ.

ಅಷ್ಟಮಹಾಮಂತ್ರಗಳು :

೧. ಪ್ರಣವ ಮಂತ್ರ (ಓಂಕಾರ ಮಂತ್ರ)

೨. ನಾರಾಯಣ ಅಷ್ಟಾಕ್ಷರ ಮಂತ್ರ (ಓಂ ನಮೋ ನಾರಾಯಣಾಯ)

೩. ವ್ಯಾಹೃತಿ ಮಂತ್ರ (ಓಂ ಭೂ: ಭುವ: ಭೂ ರ್ಭವಸುವ:)

೪. ವಾಸುದೇವ ದ್ವಾದಶಾಕ್ಷರ ಮಂತ್ರ (ಓಂ ನಮೋ ಭಗವತೇ ವಾಸುದೇವಾಯ)

೫. ಗಾಯತ್ರೀ ಮಂತ್ರ (ಓಂ ತತ್ಸವಿರ್ತುವರೇಣ್ಯಂ.................)

೬. ಮಾತೃಕಾಮಾಲ ಮಂತ್ರ ('ಅ' ಕಾರದಿಂದ 'ಕ್ಷ' ಕಾರದವರೆಗೆ ಹರಿಯನ್ನು ಸ್ತುತಿಸುವ ೫೧ ಮಂತ್ರಗಳ ಮಾಲೆ)

೭. ಪುರುಷಸೂಕ್ತ (ಸಹಸ್ರ ಶ್ರೀರುಷಪುರುಷ:..................)

೮. ವಿಷ್ಣು ಪಡಕ್ಷರ ಮಂತ್ರ (ಓಂ ವಿಷ್ಣುವೇ ನಮ:)

ಕೀರ್ತನೆ-೩೨೯

ನುಡಿ-೧: ಸ್ವರಮಣ : ತನಗಿಂತಲೂ ಮಿಗಿಲಾದ ಒಡೆಯರಿಲ್ಲದೆ ತನಗೆ ತಾನೇ ಒಡೆಯನಾಗಿರುವ ಶ್ರೀಹರಿ.

ಕೀರ್ತನೆ-೩೩೧

ಅ. ಪಲ್ಲವಿ : ಗುರು ಕರುಣವನು ಪಡೆದ ಕುರುಬ : ವ್ಯಾಸರಾಜರ ಕರುಣೆಯನ್ನು ಸಂಪಾದಿಸಿದ ಕನಕದಾಸರು.

ಕೀರ್ತನೆ-೩೩೫

ನುಡಿ-೨: ನಮ್ಮವರಿರುವರು ಹತ್ತು ಮಂದಿಗಳು

ನಮ್ಮ ಮನಸ್ಸಿನಲ್ಲಿಯೇ ಜನಿಸುವ ದಶಭಾವಗಳು: ಸಂಶಯ, ಭಯ, ಕಾಮ, ಸಂಕಲ್ಪ, ಶ್ರದ್ಧೆ, ಅಶ್ರದ್ಧೆ, ಧೈರ್ಯ, ಅಧೈರ್ಯ, ಬುದ್ಧಿ, ನಾಚಿಕೆ.

ಕೀರ್ತನೆ-೩೪೦

ನುಡಿ-೧: ಒಡಕು ಒಂಬತ್ತಿನ ದೇಹ : ನವ ದ್ವಾರಗಳಿಂದ ಕೂಡಿದ ಒಡಕು ದೇಹ.

ಕೀರ್ತನೆ-೩೪೧

ನುಡಿ-೩: ರೈವತಗಿರಿ : ದ್ವಾರಕೆಯ ಸಮೀಪದ ಒಂದು ಪರ್ವತ. ದ್ವಾರಕೆಯ ರಾಜರು ವಿಹಾರಾರ್ಥವಾಗಿ ಬರುತ್ತಿದ್ದ ಸ್ಥಳ. ಸುಭದ್ರಾ ವಿವಾಹಕ್ಕೆ ಮುನ್ನ, ಅರ್ಜುನ ಕಪಟ ಸನ್ಯಾಸವನ್ನು ಧರಿಸಿ ತಪಸ್ಸು ಮಾಡಿದ್ದು ಇಲ್ಲಿಯೇ.

ಕೀರ್ತನೆ:೩೪೩

ನುಡಿ-೧ : ಭೂಮಿಸುತ : ವರಹಾವತಾರಿಯಾದ ವಿಷ್ಣು ಮತ್ತು ಭೂದೇವಿಯರ ಮಗನಾದ ನರಕಾಸುರ.

ನುಡಿ-೩: ಅಷ್ಟ ಮಹೀಪತಿ : ರುಕ್ಮಿಣಿ, ಜಾಂಬವತಿ, ಸತ್ಯಭಾಮೆ, ಭದ್ರೆ, ಮಿತ್ರವಿಂದೆ, ಸತ್ಯೆ, ಕಾಳಿಂದಿ, ಲಕ್ಷಣೆ, ಇವರಿಗೆ ಪತಿಯಾದ ಶ್ರೀಕೃಷ್ಣ.

ಕೀರ್ತನೆ-೩೬೩

ನುಡಿ-೧: ಅರಿಪಾಣಿಕಾಯಜಾತ: ಅರಿಪಾಣಿ ಎಂದರೆ ಚಕ್ರಧಾರಿಯಾದ ಶೀ ಕೃಷ್ಣ. ದ್ವಾಪರಯುಗದಲ್ಲಿ ಗಣಪತಿಯು ಶ್ರೀಕೃಷ್ಣ ಮತ್ತು ರುಕ್ಮಿಣಿಯ ಮಗನಾಗಿ ಚಾರುದೇಷ್ಣ ಎಂಬ ಹೆಸರಿನಿಂದ ಜನಿಸಿದ. ರುದ್ರನ ವರವನ್ನು ಪಡೆದು ಅನೇಕ ರಾಕ್ಷರನ್ನು ಸಂಹಾರಮಾಡಿ ಭೂಭಾರವನ್ನು ಕಡಿಮೆ ಮಾಡಿದ. (ಹರಿಕಥಾಮೃತಸಾರ : ಗಣಪತಿ ಸ್ತೋತ್ರ ಸಂಧಿ)

ನುಡಿ-೭ : ನರವಾಹವಾಯುಜರಿಗೆ ಸರಿಯೆಂಬ ಜ್ಞಾನ:

ನರವಾಹ ಎಂದರೆ ಕುಬೇರ. ವಾಯುಜ ಎಂದರೆ ವಿಶ್ವಕ್ಸೇನ.

ಕುಬೇರ, ವಿಶ್ವಕ್ಸೇನ ಮತ್ತು ಅಶ್ವಿನೀ ದೇವತೆಗಳು ಗಣಪತಿಗೆ ಸಮಾನರು. (**ಹರಿಕಥಾಮೃತಸಾರ** : ಗಣಪತಿ ಸ್ತೋತ್ರ ಸಂಧಿ)

ಕೀರ್ತನೆ-೩೬೫

ಪಲ್ಲವಿ : ಹಯವದನ : ಶ್ರೀ ಹರಿಯ ಅವತಾರಗಳಲ್ಲಿ ಹಯಗ್ರೀವ ಅವತಾರವೂ ಒಂದು. ಬ್ರಹ್ಮನಿಂದ ವೇದಗಳನ್ನು ಅಪಹರಿಸಿ ಮಧುಕೈಟಭರೆಂಬ ರಾಕ್ಷಸರು ಪಾತಾಳವನ್ನು

ಸೇರಿದರು. ವೇದಗಳನ್ನು ರಕ್ಷಿಸಲು ಬ್ರಹ್ಮ ಹರಿಯನ್ನು ಸ್ತುತಿಸಿದಾಗ ಶ್ರೀಹರಿ ತನ್ನ ಯೋಗಬಲದಿಂದ ಒಂದು ಅಲೌಕಿಕ ಶರೀರವನ್ನು ಧರಿಸಿದ. ಶುಭ್ರವರ್ಣದ ಕುದುರೆಯ ಮುಖ ಧರಿಸಿದ ಆ ತೇಜೋಮೂರ್ತಿ ಮಧುಕೈಟಭರನ್ನು ನಿಗ್ರಹಿಸಿ ವೇದಗಳನ್ನು ಬ್ರಹ್ಮನಿಗೆ ಹಿಂತಿರುಗಿಸಿದ. ಮಧುಕೈಟಭರು ತಮೋಗುಣ, ರಜೋಗುಣ ಸ್ವಭಾವದವರು. ತಮೋಗುಣ ರಜೋಗುಣಗಳನ್ನು ನಿಗ್ರಹಿಸುವ ಸಾತ್ವಿಕ ಶಕ್ತಿ ಹಯಗ್ರೀವ ಅವತಾರದ ತತ್ವ. ಚಂದ್ರನಂತೆ ಬಿಳುಪಾದ ಶಂಖ, ಮಣಿಮಾಲೆ, ಪುಸ್ತಕಗಳನ್ನು ಧರಿಸಿದ ಚತುರ್ಭುಜನಾದ ಹಯವದನನ್ನು ಹಯಗ್ರೀವ ಉಪಾಸಕರಾದ ವಾದಿರಾಜರು ಅನೇಕ ಕೃತಿಗಳಲ್ಲಿ ಸ್ತುತಿಸಿದ್ದಾರೆ.

ನುಡಿ–೨: ಆರೆರೆಡು ಅಕ್ಷರದ ಮಂತ್ರ : 'ಹಾಂ ಹಯಗ್ರೀವಾಯನಮ:' ಇದು ಹಯಗ್ರೀವ ಅಷ್ಟಾಕ್ಷರೀ ಮಂತ್ರ. ಇದರ ಉಪಾಸಕರಿಗೆ ವಿದ್ಯಾಪ್ರಾವೀಣ್ಯತೆ, ವಾದಿನಿಗ್ರಹ ಶಕ್ತಿ, ಸ್ಥೈರ್ಯ ಹಾಗೂ ಚಿರಂತನ ಕೀರ್ತಿಗಳು ದೊರೆಯುತ್ತದೆ.

ನುಡಿ–೩ : ಮುಖದೊಳ್ ಸಕಲಾಗಮವಿದ್ಯಾ ಸುಘೋಷಮಾಗಿ : ಬ್ರಹ್ಮದೇವನ ಯಜ್ಞಕುಂಡದಿಂದ ಹಯಗ್ರೀವ ಉದ್ಭವಿಸಿದ. ಇವನ ಮೂಗಿನ ಹೊಳ್ಳೆಗಳಿಂದ ಹೊರಟ ಶ್ವಾಸೋಚ್ಛಾಸವೇ ವೇದಗಳಾದವು. ಆದ್ದರಿಂದ ಹಯಗ್ರೀವ ವೇದಸ್ವರೂಪನೆನಿಸಿಕೊಂಡ.

ಕೀರ್ತನೆ–೩೬೭

ನುಡಿ–೨ : ಕೆಟ್ಟ ಮಾತು ನುಡಿದ ಚೈದ್ಯಗೆ : ಚೇದಿ ದೇಶದ ಅರಸನಾದ ಶಿಶುಪಾಲನೇ ಚೈದ್ಯ. ಶ್ರೀ ಕೃಷ್ಣನಿಗೆ ಅಗ್ರಪೂಜೆಯನ್ನು ಮಾಡಿದ ಸಂದರ್ಭದಲ್ಲಿ ಕೃಷ್ಣನ ಬಗ್ಗೆ ಇವನು ಕೆಟ್ಟ ಮಾತುಗಳನ್ನಾಡಿದ. ಅವನಾಡಿದ ನೂರು ಕೆಟ್ಟ ಮಾತುಗಳನ್ನು ಕೃಷ್ಣ ಸಹಿಸಿಕೊಂಡೇ ಇದ್ದ. ನೂರರ ಮಿತಿ ಮೀರಿದ ಮೇಲೆ ಶಿಶುಪಾಲನನ್ನು ಸಂಹರಿಸಿದ.

ಕೀರ್ತನೆ–೩೭೨

ಈ ಕೀರ್ತನೆಯಲ್ಲಿ ವ್ಯಾಸರಾಜರು ಪೂಜಿಸಿದ ವೇಣುಗೋಪಾಲಸ್ವಾಮಿಯ ವರ್ಣನೆ ಇದೆ. ಶ್ರೀ ಪಾದರಾಜರಿಗೆ ಸ್ವಪ್ನ ಸೂಚನೆಯಂತೆ ಈ ಮೂರ್ತಿ ಲಭ್ಯವಾಯಿತೆಂದು. ಇದನ್ನು ತಮ್ಮ ಶಿಷ್ಯರಾದ ವ್ಯಾಸರಾಜರಿಗೆ ನೀಡಿದರೆಂದು, ಈ ಮೂರ್ತಿಯಲ್ಲಿ ವ್ಯಾಸರಾಜರು ಶ್ರೀ ಕೃಷ್ಣನ ಪ್ರತ್ಯಕ್ಷ ದರ್ಶನ ಪಡೆದರೆಂದು ನಂಬಿಕೆಯಿದೆ.

ಕೀರ್ತನೆ–೩೭೭

ನುಡಿ–೪: ತತ್ವೇಶರೆಲ್ಲರೂ ನಿತ್ಯಾಧೀನರು ನಿಮಗೆ : ಜೀವಿಗಳ ಮನೋವೃತ್ತಿಗಳನ್ನು ಅನುಸರಿಸಿ ಜ್ಞಾನಮಾರ್ಗದಲ್ಲಿ ನಡೆಯುವಂತೆ ಮಾಡುವವರೇ ತತ್ವಾಭಿಮಾನಿ ದೇವತೆಗಳು. ಅನಿರುದ್ಧ, ಪ್ರದ್ಯುಮ್ನ, ವಾಸುದೇವ ಮತ್ತು ಸಂಕರ್ಷಣ ಇವರು ಕ್ರಮವಾಗಿ ಅಹಂಕಾರ, ಬುದ್ಧಿ, ಚಿತ್ತ ಮತ್ತು ಮನಸ್ಸುಗಳಲ್ಲಿ ನೆಲಸಿ, ಜೀವಿಗಳಿಗೆ ಪ್ರೇರಣೆ ನೀಡುತ್ತಾರೆ. ವಿದ್ಯೆ ಮತ್ತು ವೃತ್ತಿಯಲ್ಲಿ, ಅಹಂ ಮಮತಾದಿಗಳನ್ನು ದೂರಮಾಡಿ, ಸದ್ವಿದ್ಯಾ ಪ್ರೇರಕನಾದವನು ಅನಿರುದ್ಧ. ಜ್ಞಾನ ವಿಷಯಗಳಲ್ಲಿ ನಿಶ್ಚಯವಾದ ಬುದ್ಧಿಯನ್ನು ಪ್ರೇರಿಸುವವನು ಪ್ರದ್ಯುಮ್ನ. ನಿಶ್ಚಯಜ್ಞಾನ ವಿಕಲ್ಪವಾಗದಂತೆ ಸಿದ್ಧಿಯನ್ನು ಕರುಣಿಸುವವನು ಸಂಕರ್ಷಣ. ಧ್ಯಾನ ಉಪಾಸನಾದಿಗಳನ್ನು ಮನಸ್ಸಿನ ಮೂಲಕ ನಡೆಸುವವನು ವಾಸುದೇವ. ಈ ಎಲ್ಲ ತತ್ವೇಶರು ಲಕ್ಷ್ಮೀದೇವಿಗೆ ಅಧೀನರು.

ಕೀರ್ತನೆ–೩೭೮

ಪಲ್ಲವಿ : ಪಂಚಮುಖಿ ಪ್ರಾಣ : 'ವಾನರ ನಾರಸಿಂಗಖಗರಾಟ್ ಕ್ರೋಢಾಶ್ವವಕ್ತ್ರಾನ್ವಿತಂ' ಎಂಬಂತೆ ಐದು ಮುಖ, ಹತ್ತು ತೋಳು. ಇದು ಪಂಚಮುಖಿ ಆಂಜನೇಯನ ಸ್ವರೂಪ. ಕಪಿ, ಗರುಡ, ವರಾಹ ಮತ್ತು ನೃಸಿಂಹ ಮುಖಗಳು ನಾಲ್ಕು ದಿಕ್ಕಿಗೂ, ಅಶ್ವಮುಖವು ಊರ್ಧ್ವ ದಿಕ್ಕಿಗೂ ಇರುತ್ತದೆ.

ಕೀರ್ತನೆ–೩೭೯

ನುಡಿ–೪: ವೇದಾಭಿಮಾನಿಯಾದ ಸರಸ್ವತಿಗೆ ಬ್ರಹ್ಮಾಣಿ, ಗಾಯತ್ರಿ, ಸಾವಿತ್ರಿ ಎಂಬ ಹೆಸರುಗಳೂ ಇವೆ.

ನುಡಿ–೯: ಕೃತಿಪತಿ ಪ್ರದ್ಯುಮ್ನನ ಸುತೆ : ಕೃತಿ ನಾಮಕ ಲಕ್ಷ್ಮೀದೇವಿ ಮತ್ತು ಪ್ರದ್ಯುಮ್ನ ನಾಮಕ ನಾರಾಯಣನ ಪುತ್ರಿಯಾಗಿ ಜನಿಸಿದವಳು.

ಕೀರ್ತನೆ–೩೮೦

ಪಲ್ಲವಿ : ಭಾರತಿ : ಇವಳು ಕೃತಿ ಮತ್ತು ಪ್ರದ್ಯುಮ್ನರ ಪುತ್ರಿ. ಸರಸ್ವತಿಗಿಂತ ಕಿರಿಯಳು.

ನುಡಿ–೨: ಕಾಳಿ ದ್ರೌಪದಿ ....

ಶಿವಕನ್ಯೆ, ಇಂದ್ರಸೇನ (ನಳಚಕ್ರವರ್ತಿಯ ಮಗಳು) ದ್ರೌಪದಿ, ಕಾಳಿ, ಇವು ಭಾರತೀದೇವಿಯ ಅವತಾರ ರೂಪಗಳು.

ಕೀರ್ತನೆ-೩೮೪, ೩೮೫, ೩೮೬

ಉತ್ತರಾಧಿಮಠದ ಪೀಠಾಧಿಪತಿಗಳಾಗಿದ್ದ ಸತ್ಯಜ್ಞಾನಯತಿಗಳ (೧೯೧೩) ಮಹಿಮೆಗಳ ವರ್ಣನೆ ಇಲ್ಲಿದೆ.

ಅವನಿಪ ಮಹೇಂದ್ರ (ಕೀರ್ತನೆ-೩೮೪) ಸತ್ಯಜ್ಞಾನತೀರ್ಥರು ಆಂಧ್ರಪ್ರದೇಶದ ರಾಜಮಹೇಂದ್ರಿಯಲ್ಲಿ ಬೃಂದಾವನಸ್ಥರಾದರು.

ಕೀರ್ತನೆ-೩೮೭

ತಮಗೆ ಸಂನ್ಯಾಸದೀಕ್ಷೆ ನೀಡಿದ ಕುಂದಾಪುರ ವ್ಯಾಸರಾಯ ಮಠದ ಲಕ್ಷ್ಮೀಪ್ರಿಯತೀರ್ಥರ ಹಿರಿಮೆಗಳನ್ನು ಪ್ರದ್ಯುಮ್ನತೀರ್ಥರು ಇಲ್ಲಿ ನಿರೂಪಿಸಿದ್ದಾರೆ.

ಕೀರ್ತನೆ-೩೮೮

ಇದು ಉತ್ತರಾಧಿಮಠದ ಸತ್ಯಧರ್ಮಯತಿಗಳ (೧೮೩೦) ಸ್ತುತಿ.

ನುಡಿ-೨: ಭದ್ರಾತೀರನೆ.. .... ತುಂಗಭದ್ರಾ ತೀರದ ಹೊಳೆ ಹೊನ್ನೂರಿನಲ್ಲಿ ಇವರು ಬೃಂದಾವನಸ್ಥರಾದರು.

ನುಡಿ-೩: ನೀ ಸರಿಲಿಂಗರೂಪಧರ : ಸತ್ಯಧರ್ಮರ ಬೃಂದಾವನದ ಮುಂಭಾಗದಲ್ಲಿ ಉದ್ಭವ ಲಿಂಗಗಳಿರುವುದರಿಂದ ಇವರು ರುದ್ರನಿಗೆ ಸಮಾನರೆಂದು, ರುದ್ರಾಂಶರೆಂದು ಭಾವಿಸುತ್ತಾರೆ.

ಕೀರ್ತನೆ-೩೯೧

ನುಡಿ-೩ : ಭೂತರಾಜರೆಂಬೋರು ತಾಪಹಾರಕರಾಗಿ

ಭೂತರಾಜರೆಂಬ ಶಕ್ತಿದೇವತೆಯ ಮೂಲಕ ವಾದಿರಾಜರು ತಮ್ಮನ್ನು ಆಶ್ರಯಿಸಿದ ಭಕ್ತರ ತೊಂದರೆಗಳನ್ನು ದೂರ ಮಾಡುತ್ತಾರೆಂಬ ನಂಬಿಕೆಯಿದೆ.

ಕೀರ್ತನೆ-೩೯೨, ೩೯೩, ೩೯೪

ವ್ಯಾಸರಾಜರ ಗುರುಗಳಾದ ಬ್ರಹ್ಮಣ್ಯತೀರ್ಥರ (೧೪೭೭) ಹಿರಿಮೆಗಳನ್ನು ಈ ಮೂರು ಸ್ತುತಿಗಳಲ್ಲೂ ನಿರೂಪಿಸಲಾಗಿದೆ.

ಕೀರ್ತನೆ-೩೯೭

ನುಡಿ-೧ : **ತತ್ವೇಶರು** : (ನೋಡಿ ಟಿಪ್ಪಣಿ ೩.೭೭)

ಕೀರ್ತನೆ-೩೯೮

ನುಡಿ-೧: **ಮೂರು ಗುಣ** : ಸತ್ವ, ರಜ, ತಮ

ಮೂರು ತಾಪ : ಜನನ, ಅಜ್ಞಾನ, ಮರಣ

ಮೂರು ಈರೆರೆಡೊಂದು ಮದ : ಅಷ್ಟಮದ (ಕುಲ, ಶೀಲ, ರೂಪ, ಯೌವ್ವನ, ಧನ, ವಿದ್ಯೆ, ಅಹಂಕಾರ ಮತ್ತು ಅನ್ನಮದಗಳು)

ಮೂರು ಐದರಿಂದ ಮರೆತು : ಕಾಮ, ಕ್ರೋಧ, ಮೋಹ, ಮದ, ಹರ್ಷ, ಮಾನ, ಮತಿ, ವಿಷಾದ ಈ ಅಷ್ಟ ವಿಧ ಮನೋವಿಕಾರಗಳಿಂದ ದೈಹಿಕ ಪ್ರಜ್ಞೆ ಇಲ್ಲದೆ ಇರುವುದು.

ಅನುಬಂಧ–೩

ಅಂಕಿತನಾಮ ಸೂಚಿ

ಅನುಬಂಧ–೪

ಕೀರ್ತನೆಗಳ ಆಕಾರಾದಿ ಸೂಚಿ

ಕ್ರಮ ಸಂಖ್ಯೆ	ಕೀರ್ತನೆಯ ಮೊದಲಸಾಲು	ಕೀರ್ತನೆ ಸಂಖ್ಯೆ
೧.	ಅಕ್ಕಾ ಎನ್ನಯ ಸ್ಥಿತಿ ಕೇಳೆ (ಸುಳಾದಿ)	೬
೨.	ಅನೇಕ ಶಕುತಿಯುಳ್ಳವನೆಂದು (ಸುಳಾದಿ)	೭
೩.	ಅಳಬ್ಯಾಡವೊ ರಂಗಮ್ಮ	೮
೪.	ಅಂಜಿಸುವುದ್ಯಾಕಮ್ಮ	೫೧
೫.	ಅನಂತಾನಂತ ಪಾಪ ಮಾಡುತಿರುವೆ ನಾನು	೬೫
೬.	ಅಪರಾಧ ಎನ್ನದಯ್ಯ	೬೬
೭.	ಅನುದಿನ ನೆನೆಯಲೊ	೧೧೮
೮.	ಅಂಬೋರುಹೇಕ್ಷಣೆ ಅಂಬಾಲಕೇ	೨೨೬
೯.	ಅವನಿಯೊಳವತರಿಸಿದ ವ್ಯಾಸರಾಯ	೨೫೪
೧೦.	ಅಧಿಕಾರಿಯಾಗಬೇಕು	೨೮೫
೧೧.	ಅರುಣೋದಯಕೆ ಮುಂಚೆ	೨೮೬
೧೨.	ಅರಿಯಲಳವೆ ಜ್ಞಾನಿಯ	೩೨೧
೧೩.	ಅಮ್ಮಾ ಲಕುಮಿದೇವಿ	೩೭೭
೧೪.	ಅಂಜಿಸೋದ್ಯಾತಕಯ್ಯ	೩೯೩
೧೫.	ಆರಿಗ್ಯಾತಕೆ ಮೊರೆಯಿಡಲಿ	೯
೧೬.	ಆನಂದತೀರ್ಥರ ಮತ	೫೪
೧೭.	ಆರಿಗೆ ಉಸುರಲಿ (ಸುಳಾದಿ)	೬೭
೧೮.	ಆರಗೊಡವೆ ನಿನಗ್ಯಾಕೆಲವೊ	೮೭
೧೯.	ಆಲವವೆ ನಮಗೆ ಸಫಲವು	೮೮
೨೦.	ಆಟವನಾಡುವ ಬಾರೊ	೧೧೯

ಕ್ರಮ ಸಂಖ್ಯೆ	ಕೀರ್ತನೆಯ ಮೊದಲಸಾಲು	ಕೀರ್ತನೆ ಸಂಖ್ಯೆ
೩೯೮.	ಹಾರ ಹಾಕುವೆ ರಮಣ	೩೫೯
೩೯೯.	ಹಿಗ್ಗಿದಳು ನಂದನ ಸತಿ	೨೨೨
೪೦೦.	ಹೀಂಗಾಯಿತ್ತಿಂಗಾಯಿತೆನ್ನಯ ಬಾಳು	೪೦೩
೪೦೧.	ಹುಚ್ಚುಗೊಳಿಸುವರೆ ಮರುಳ	೯೧
೪೦೨.	ಹುಚ್ಚು ಹೊಳೆಯ ಪ್ರವಾಹದಲ್ಲಿ	೩೧೯
೪೦೩.	ಹುಚ್ಚು ಹಿಡಿದಿದೆ ಎನಗೆ	೪೦೪
೪೦೪.	ಹೂ ಬೇಕೆ ಹೂವು ಪರಿಮಳದ	೨೨೩
೪೦೫.	ಹೇಳುತಿ ಕೇಳುತಿ ಏನಿಲ್ಲವೊ	೫೦
೪೦೬.	ಹೇ ಮುರಾರೆ ಹೇ ಮುಕುಂದ	೨೨೪
೪೦೭.	ಹೊಟ್ಟೆಗೆ ಹಿಟ್ಟಿಲ್ಲ	೩೨೦
೪೦೮.	ಹ್ಯಾಂಗಾದರೂ ಎನ್ನ ನೀನೆ ರಕ್ಷಿಸಬೇಕೋ	೪೦೫
೪೦೯.	ಕ್ಷೀರಶರಧಿ ನಾರಾಯಣನ	೨೨೫

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ
ಹರಿದಾಸ ಸಾಹಿತ್ಯ ಒಂದು ಪ್ರಮುಖ ಮಜಲು.
ಹರಿದಾಸರು ರಚಿಸಿರುವ ವಿಪುಲ ಕೀರ್ತನೆಗಳು
ಕರ್ನಾಟಕ ಸಾಂಸ್ಕೃತಿಕ ತವನಿಧಿಗಳಾಗಿವೆ.
ದಾಸ ಸಾಹಿತ್ಯದಲ್ಲಿ ಕಂಡುಬರುವ
ಭಾಷಿಕ ಹಾಗೂ ಸಾಹಿತ್ಯಕ ಸೊಬಗು,
ಆಧ್ಯಾತ್ಮಿಕ ಬೆಡಗು, ಸಂಗೀತದ ಮೆರುಗು ಅನನ್ಯ.
ದಾಸ ಸಾಹಿತ್ಯವು ಜ್ಞಾನ, ಮನೋಲ್ಲಾಸ
ಮತ್ತು ಜೀವ ಸಂಸ್ಕಾರಗಳ ತ್ರಿವೇಣಿ ಸಂಗಮ.
ಇಂಥ ದಾಸ ಸಾಹಿತ್ಯವನ್ನು
ಸಮಗ್ರವಾಗಿ ಸಂಗ್ರಹಿಸಿ, ಸಂಪಾದಿಸಿ,
ಬಹುಮಾಧ್ಯಮದಲ್ಲಿ ಹಾಗೂ ಸುಲಭ ಬೆಲೆಯಲ್ಲಿ
ಕನ್ನಡ ಜನತೆಗೆ ನೀಡುವ ಮಹತ್ವದ ಆಶಯವೇ
ಸಮಗ್ರ ದಾಸ ಸಾಹಿತ್ಯ ಯೋಜನೆ

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು